ಚಿಕ್ಕೋಡಿ ಕುಟುಂಬ : ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ ಹಂಪಿ ಭಾಷಾ ನಿಕಾಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಅಕ್ಕಿ ಉಮಾ ಕೊಟ್ರಪ್ಪ

(ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ,
ಬ.ವೀ.ವಿ.ಸಂಘ, ಬಾಗಲಕೋಟ)

ಮಾರ್ಗದರ್ಶಕರು

ಡಾ.ಎಸ್.ಕೆ.ಕೊಪ್ಪಾ

(ಜಿ.ಆರ್.ಜಿ. ಕಲಾ ಹಾಗೂ ವಾಯ್.ಎ.ಪಿ. ವಾಣಿಜ್ಯ
ಮಹಾವಿದ್ಯಾಲಯ, ಇಂಡಿ)

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾ ನಿಕಾಯ

ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,
ವಿಜಾಪುರ-೫೮೬೧೦೩

೨೦೧೧

ಚಿಕ್ಕೋಡಿ ಕುಟುಂಬ : ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ ಹಂಪಿ ಭಾಷಾ ನಿಕಾಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಅಕ್ಕಿ ಉಮಾ ಕೊಟ್ರಪ್ಪ

(ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ,
ಬ.ವೀ.ವಿ.ಸಂಘ, ಬಾಗಲಕೋಟ)

ಮಾರ್ಗದರ್ಶಕರು

ಡಾ.ಎಸ್.ಕೆ.ಕೊಪ್ಪಾ

(ಜಿ.ಆರ್.ಜಿ. ಕಲಾ ಹಾಗೂ ವಾಯ್.ಎ.ಪಿ. ವಾಣಿಜ್ಯ
ಮಹಾವಿದ್ಯಾಲಯ, ಇಂಡಿ)

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾ ನಿಕಾಯ

ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,
ವಿಜಾಪುರ-೫೮೬೧೦೩

೨೦೧೧

ದೃಢೀಕರಣ ಪತ್ರ

ಚಿಕ್ಕೋಡಿ ಕುಟುಂಬ: ಒಂದು ಅಧ್ಯಯನ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಅಕ್ಕಿ ಉಮಾ ಕೊಟ್ರಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ಇಂಡಿ
ದಿನಾಂಕ: ಜೂನ್ ೨೦೧೧

ಡಾ.ಎಸ್.ಕೆ.ಕೊಪ್ಪಾ
ಮಾರ್ಗದರ್ಶಕರು

ಪ್ರಮಾಣ ಪತ್ರ

ಚಿಕ್ಕೋಡಿ ಕುಟುಂಬ: ಒಂದು ಅಧ್ಯಯನ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ.ಎಸ್.ಕೆ.ಕೊಪ್ಪಾ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಭಾಷಾ ನಿಕಾಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ:ಬಾಗಲಕೋಟ
ದಿನಾಂಕ: ಜೂನ ೨೦೧೧

ಅಕ್ಕಿ ಉಮಾ ಕೊಟ್ರಪ್ಪ
ಸಂಶೋಧಕರು

ಅರಿಕೆ

ನಾನು ಎಂ.ಎ. ಮಾಡುತ್ತಿರುವ ಸಂದರ್ಭದಲ್ಲಿ ಗುರುಗಳಾದ ಡಾ.ಎಂ.ಎಂ. ಕಲಬುರ್ಗಿಯವರ ಪಾಠ ಕೇಳುವುದೇ ಒಂದು ಭಾಗ್ಯವೆನಿಸುತ್ತಿತ್ತು. ಅವರ ಆಳವಾದ ಅಧ್ಯಯನ ಸಂಶೋಧನೆಗಳಿಂದ ಇಂಥ ಅಧ್ಯಾಪನ ಸಾಧ್ಯವೆಂಬುದನ್ನು ಮನಗಂಡೆ. ಆಗ ಪಿಎಚ್.ಡಿ ಮಾಡುವ ಹಂಬಲ ನನ್ನದಾಗಿತ್ತು. ಆದರೆ ಮದುವೆಯಾಗಿ ಸಂಸಾರದ ಜಂಜಾಟಗಳಿಂದ ಸಂಶೋಧನೆಯ ಆಸೆ ಕೈಗೂಡಲು ಸಾಧ್ಯವಾಗಿರಲಿಲ್ಲ. ಆ ಬಯಕೆ ಮತ್ತೆ ಚಿಗುರೊಡೆದದ್ದು ೨೦೦೬ರಲ್ಲಿ.

ನನ್ನ ಸ್ನೇಹಿತವರ್ಗದವರೊಂದಿಗೆ ಸಂಶೋಧನೆಯ ವಿಷಯವಾಗಿ ಚರ್ಚಿಸಿದೆ. ಹೊಸಗನ್ನಡದ ಯಾವುದಾದರೂ ಒಂದು ಪ್ರಕಾರದಲ್ಲಿ ಪಿಎಚ್.ಡಿ ಮಾಡಬೇಕೆಂದಿದ್ದೆ. ನಾನು ಪಿಎಚ್.ಡಿ. ವಿಷಯದ ಆಯ್ಕೆಯ ಗೊಂದಲದಲ್ಲಿರುವಾಗ ನೆರವಿಗೆ ಬಂದವರು ನನ್ನ ವಿದ್ಯಾಗುರುಗಳಾದ ಡಾ.ಎಂ.ಎಂ.ಕಲಬುರ್ಗಿಯವರು. ಅವರಿಗೆ ಚಿಕ್ಕೋಡಿ ಕುಟುಂಬದ ಮೇಲೆ ಒಂದು ಸಂಶೋಧನೆಯಾಗಬೇಕು ಎಂಬ ಮಹದಾಸೆಯಿತ್ತು. ಅದನ್ನವರು ನನಗೆ ಸೂಚಿಸಿದರು. ನಾನು ಮಾರ್ಗದರ್ಶಕರೊಂದಿಗೆ ಚರ್ಚಿಸಿ 'ಚಿಕ್ಕೋಡಿ ಕುಟುಂಬ: ಒಂದು ಅಧ್ಯಯನ' ಎಂಬ ವಿಷಯವನ್ನು ಸಂಶೋಧನೆಗೆ ಆರಿಸಿಕೊಂಡೆ.

ಕನ್ನಡ ನಾಡು-ನುಡಿ-ಸಂಸ್ಕೃತಿಗೆ ಚಿಕ್ಕೋಡಿ ಕುಟುಂಬದ ಶ್ರೀ ತಮ್ಮಣ್ಣಪ್ಪ, ಶ್ರೀ ಪಂಡಿತಪ್ಪ ಮತ್ತು ಶ್ರೀ ರಾಮಪ್ಪನವರ ಕೊಡುಗೆ ಸ್ಮರಣೀಯವಾಗಿದೆ. ಸಮಾಜದ ಶ್ರೇಯೋಭಿವೃದ್ಧಿಯನ್ನೇ ಬಯಸಿದ ಈ ಗಣ್ಯರು ಕಟ್ಟಿದ ಸಂಘ-ಸಂಸ್ಥೆಗಳು, ಕೈಗೊಂಡ ಕಾರ್ಯಗಳೂ ಹಲವಾರು. ಇಂತಹ ಪ್ರಾತಃಸ್ಮರಣೀಯರನ್ನು ಗೌರವಿಸುವುದು, ಸ್ಮರಿಸಿಕೊಳ್ಳುವುದು, ಮುಂದಿನ ಜನಾಂಗಕ್ಕೆ ಪರಿಚಯಿಸುವುದು ನನ್ನ ಆದ್ಯ ಕರ್ತವ್ಯವೆನಿಸಿತು.

ನನಗೆ ಸಂಶೋಧನೆ ಮಾಡಲು ವಿಜಾಪುರದ ಬಿ.ಎಲ್.ಡಿ.ಇ. ಸಂಸ್ಥೆಯ 'ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದಲ್ಲಿ ಅವಕಾಶ ಸಿಕ್ಕಿರುವುದು ನನ್ನ ಯೋಗಾಯೋಗವೆನ್ನಬೇಕು. ಹಳಕಟ್ಟಿಯವರನ್ನು ರೂಪಿಸಿದವರೇ ಚಿಕ್ಕೋಡಿ ಕುಟುಂಬದ ತಮ್ಮಣ್ಣಪ್ಪನವರು. ಹೀಗಾಗಿ ನಾನು ಮಾಡುತ್ತಿರುವ ಕೆಲಸಕ್ಕೆ ಸಾರ್ಥಕತೆಯ ಭಾವವಿದೆ. ಚಿಕ್ಕೋಡಿ ಕುಟುಂಬದ ಬಗೆಗೆ ವಿಷಯ ಸಂಗ್ರಹಣೆಗೆ ತೊಡಗಿದಾಗ ಅನೇಕ ಅಡ್ಡಿ-ಆತಂಕಗಳು ಎದುರಾದವು. ಗುರುಗಳಾದ ಡಾ.ಕಲಬುರ್ಗಿಯವರು ಮಾರ್ಗದರ್ಶಕರಾದ ಡಾ.ಎಸ್.ಕೆ.ಕೊಪ್ಪಾ ಅವರು ನನಗೆ ಧೈರ್ಯ ತುಂಬಿ ಹುರಿದುಂಬಿಸಿದರು. ಅವರಿಗೆ ನನ್ನ ಅನಂತ ನಮನಗಳು.

ಒಣಧೈರ್ಯದಿಂದ ಈ ವಿಷಯವನ್ನು ತೆಗೆದುಕೊಂಡಾಗ ಹೆಜ್ಜೆಹೆಜ್ಜೆಗೂ ನನ್ನನ್ನು ಪ್ರೋತ್ಸಾಹಿಸುತ್ತ ಸಲಹೆಗಳನ್ನು ನೀಡುತ್ತ, ಸ್ವಲ್ಪವೂ ಬೇಸರಿಸದೆ, ಹಸ್ತಪ್ರತಿಯನ್ನು ತಿದ್ದಿದವರು ನನ್ನ ಮಾರ್ಗದರ್ಶಕರಾದ ಡಾ.ಎಸ್.ಕೆ.ಕೊಪ್ಪಾ ಅವರು. ದೂರದ ಊರಿನಲ್ಲಿದ್ದರೂ ಸಾಕಷ್ಟು ಕೆಲಸಗಳಿದ್ದರೂ

ಬಿಡುವು ಮಾಡಿಕೊಂಡು ದಣಿಯವರಿಯದೆ ನನ್ನಿಂದ ಬರವಣಿಗೆಯ ಕೆಲಸವನ್ನು ಮಾಡಿಸಿದರು. ಅವರಿಗೆ ನಾನು ತುಂಬಾ ಕೃತಜ್ಞಳಾಗಿದ್ದೇನೆ.

ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಅಧ್ಯಯನ ಮಂಡಲಿಯ ಅಧ್ಯಕ್ಷರು ಪ್ರೊ.ಎ.ಎಸ್.ಹಿಪ್ಪರಗಿಯವರು. ಹಿರಿಯ ವಿದ್ವಾಂಸರಾದ ಅವರ ಕಳಕಳಿ ಮೆಚ್ಚುವಂಥದ್ದು. ಅವರಿಗೂ ನಿರ್ದೇಶಕರಾದ ಡಾ.ಕೃಷ್ಣ ಕೋಲಾರ ಕುಲಕರ್ಣಿಯವರಿಗೂ ನನ್ನ ನಮನಗಳು. ಹಳಕಟ್ಟಿ ಸಂಶೋಧನ ಕೇಂದ್ರದ ಅಧ್ಯಕ್ಷರು ಶರಣಜೀವಿ ಶಿವಯೋಗಿ ತಂಬಾಕೆ ಅವರು. ಕಾಯದರ್ಶಿಗಳು ಸಹೃದಯರಾದ ಡಾ.ಎಂ.ಎಸ್.ಮದಭಾವಿಯವರು. ಅವರ ಸಕಾಲಿಕ ಎಚ್ಚರಿಕೆ, ಒತ್ತಾಸೆಯಿಂದ ಅಧ್ಯಯನ ಚುರುಕುಗೊಳ್ಳಲು ಸಾಧ್ಯವಾಗಿದೆ. ಅವರಿಗೂ, ಸಂಶೋಧನ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿರುವ ಕೇಂದ್ರದ ಮಾರ್ಗದರ್ಶಕರಾದ ಡಾ.ಶ್ರೀರಾಮ ಇಟ್ಟಣ್ಣನವರ, ಡಾ.ಎಂ.ಎಂ.ಪಡಶೆಟ್ಟಿ, ಡಾ.ಸಂಗಮೇಶ ಬಿರಾದಾರ ಅವರುಗಳಿಗೆಲ್ಲ ನನ್ನ ಕೃತಜ್ಞತೆಗಳು ಸಲ್ಲಬೇಕು. ಅಲ್ಲದೆ ವಿಶ್ವವಿದ್ಯಾಲಯದ ಪ್ರತಿನಿಧಿಗಳಾದ ಡಾ.ಎಫ್.ಟಿ.ಹಳ್ಳಿಕೇರಿಯವರನ್ನು ಸ್ಮರಿಸದೇ ಇರಲಾರೆ.

ಹಳಕಟ್ಟಿ ಸಂಶೋಧನ ಕೇಂದ್ರ ನಾಡಿನ ಒಂದು ಉತ್ತಮ ಸಂಶೋದನ ಕೇಂದ್ರ. ಅಲ್ಲಿ ಅಪಾರ ಗ್ರಂಥರಾಶಿಯ ಭಂಡಾರ ಇದೆ. ರಜೆ ಇದ್ದಾಗಲೂ ಅಲ್ಲಿ ನಮಗೆ ಓದಲು ಅನುವು ಮಾಡಿಕೊಟ್ಟಿದ್ದಾರೆ. ಈ ಕೇಂದ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಶ್ರೀಮತಿ ಲಕ್ಷ್ಮೀ ಕುಲಕರ್ಣಿ, ಶ್ರೀ ದೊಡ್ಡಮನಿಯವರನ್ನು ನಾನು ಮರೆಯುವಂತಿಲ್ಲ.

ನನ್ನ ಸಂಶೋಧನೆಗೆ ಸಾಕಷ್ಟು ಮಾಹಿತಿಗಳನ್ನು ಒದಗಿಸಿದ್ದು ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಠದ ಲಿಂಗಾಯತ ಸಂಶೋಧನ ಗ್ರಂಥಾಲಯ. ಪೂಜ್ಯರಾದ ಶ್ರೀ ಸಿದ್ಧರಾಮ ಸ್ವಾಮಿಜಿಯವರು ನನ್ನ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅವರಿಗೆ ನನ್ನ ಅನಂತ ಪ್ರಣಾಮಗಳು. ಈ ಸಂದರ್ಭದಲ್ಲಿ ಲಿಂಗಾಯತ ಸಂಶೋಧನ ಗ್ರಂಥಾಲಯದಲ್ಲಿರುವ ಶ್ರೀ ಶ್ರೀಕಾಂತ ಹೊಸಮನಿ ಮತ್ತು ಶ್ರೀ ಪ್ರಕಾಶ ಗಿರಿಮಲ್ಲಣ್ಣನವರನ್ನು ನೆನೆಯದೆ ಇರಲಾರೆ.

ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ಮುಂಬಯಿಯ ಲೆಜೆಸ್ಲೇಟರರಾಗಿ ಮಾಡಿದ ಠರಾವುಗಳು ಅಲ್ಲಿಯ ವಿಧಾನಮಂಡಲದಲ್ಲಿದ್ದವು. ಈ ಬಗ್ಗೆ ಮಾಹಿತಿ ಒದಗಿಸಿದ ನಾಡೋಜ ಡಾ.ಪಾಟೀಲ ಪುಟ್ಟಪ್ಪನವರಿಗೆ, ಅವುಗಳನ್ನು ಸಕಾಲಕ್ಕೆ ಒದಗಿಸಿಕೊಟ್ಟ ಅಲ್ಲಿಯ ಗ್ರಂಥಪಾಲಕರಾದ ಶ್ರೀ ಬಿ.ಜಿ.ವಾಗ್ಮರೆ ಮತ್ತು ಈ ಕಾರ್ಯದಲ್ಲಿ ನೆರವಾದ ಶ್ರೀಮತಿ ಕಲ್ಪನಾ ಅವರಿಗೆ ನಾನು ಅತ್ಯಂತ ಋಣಿಯಾಗಿದ್ದೇನೆ. ಬಿ.ಎಂ.ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯದ ಶ್ರೀ ಬೆಳವಡಿಯವರಿಗೆ ಕೃತಜ್ಞಳಾಗಿದ್ದೇನೆ.

ಬಾಗಲಕೋಟೆಯ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷರಾದ ಶ್ರೀ ವೀರಣ್ಣ ಚರಂತಿಮಠ ಮತ್ತು ಆಡಳಿತ ಮಂಡಳಿಯ ಇನ್ನುಳಿದ ಸದಸ್ಯರು, ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಕಾಯಾಧ್ಯಕ್ಷರಾದ ಶ್ರೀ ಅಶೋಕ ಸಜ್ಜನ. ಅಲ್ಲದೆ ಭಾಷಾವಿಭಾಗದ ಪ್ರಾಧ್ಯಾಪಕರಿಗಳಿಗೆಲ್ಲ ನಾನು ಋಣಿಯಾಗಿದ್ದೇನೆ. ಅನುವಾದವನ್ನು ಮಾಡಿಕೊಟ್ಟ

ಸಹೋದರ ಪಿ.ಶ್ರೀನಿವಾಸ ಮತ್ತು ಹಸ್ತಪ್ರತಿಯನ್ನು ತಿದ್ದಲು ನೆರವಾದ ಡಾ.ವೀರಭದ್ರೆಗೌಡ ಅವರಿಗೂ ನನ್ನ ನಮನಗಳು.

ಗುಳೇದಗುಡ್ಡದ ಬರಗುಂಡಿ ಸಹೋದರರು, ಬೆಳಗಾವಿಯ ಕಾರವೇಕರ, ರಬಕವಿಯ ನಾಶಿ, ವಿಜಾಪುರದ ಅರಕೇರಿ, ಇಲಕಲ್ಲದ ಅಕ್ಕಿ ಬಂಧುಗಳು ಸದಾ ನನ್ನ ಸಂಶೋಧನ ಕಾರ್ಯಕ್ಕೆ ಪ್ರೋತ್ಸಾಹ ನೀಡಿದ್ದಾರೆ. ನನ್ನ ಸಂಶೋಧನಕಾರ್ಯದಲ್ಲಿ ಬೆನ್ನೆಲುಬಾಗಿ ನಿಂತ ನನ್ನ ಅತ್ತೆ–ಮಾವ, ಓರಗಿತ್ತಿ–ಮೈದುನರನ್ನು ಜ್ಞಾಪಿಸಿಕೊಳ್ಳಲೇಬೇಕು. ಜೊತೆಗೆ ಯಜಮಾನರಾದ ಶ್ರೀ ಪ್ರಭುದೇವ ಮಣ್ಣೂರ ಮತ್ತು ಮುದ್ದು ಮಕ್ಕಳಾದ ರಕ್ಷಿತ್ ಮತ್ತು ಪ್ರಣೀತರನ್ನು ನೆನೆಯದೇ ಇರಲಾರೆ. ಇದನ್ನು ಅಂದವಾಗಿ ವಿನ್ಯಾಸಗೊಳಿಸಿ ಬೈಂಡ್ ಮಾಡಿದ ಧಾರವಾಡದ ಮಹಾಂತೇಶ ಬುಕ್ ಬೈಂಡಿಂಗ್‌ದ ಶ್ರೀ ಪಾಟೀಲ ಅವರಿಗೆ ನನ್ನ ನೆನಕೆಗಳು.

ಸ್ಥಳ: ಬಾಗಲಕೋಟ   ಅಕ್ಕಿ ಉಮಾ ಕೊಟ್ರಪ್ಪ

ದಿನಾಂಕ: ಜೂನ ೨೦೧೧



ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ

೧೮೬೨-೧೯೩೩



ಶ್ರೀ ಪಂಡಿತಪ್ಪ ಚಿಕ್ಕೋಡಿ

೧೮೮೪-೧೯೬೧



ಶ್ರೀ ರಾಮಪ್ಪ ಚಿಕ್ಕೋಡಿ

ಮರಣ: ೧೯೫೪

ಪರಿವಿಡಿ

ಅಧ್ಯಾಯ ಐದು :
ನಾಡು-ನುಡಿಗೆ ಚಿಕ್ಕೋಡಿ ಕುಟುಂಬದ ಕೊಡುಗೆ :

ಅಧ್ಯಾಯ ೬.

ಅನುಬಂಧ:

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

೧.೧. ಪೀಠಿಕೆ
೧.೨. ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ
೧.೩. ಅಧ್ಯಯನದ ಆಕರಗಳು
೧.೪. ಅಧ್ಯಯನದ ಉದ್ದೇಶ

೧.೧. ಪೀಠಿಕೆ:

ಪ್ರಾಚೀನತಮ ಪರಂಪರೆಯನ್ನು ಹೊಂದಿದ ಕನ್ನಡನಾಡು ಮಧ್ಯಕಾಲದಲ್ಲಿ ಅನ್ಯಭಾಷೆ-ಸಂಸ್ಕೃತಿಯ ಪ್ರಭಾವಕ್ಕೊಳಗಾಯಿತು. ಕ್ರಿ.ಶ.೧೬-೧೭ನೆಯ ಶತಮಾನ ಮೊದಲುಗೊಂಡು ಮರಾಠರು, ಪೇಶ್ವೆಯವರು ಕರ್ನಾಟಕದ ಆಡಳಿತವನ್ನು ಕೈಗೆತ್ತಿಕೊಂಡು ತಮ್ಮ ಪ್ರಭಾವವನ್ನು ದಟ್ಟವಾಗಿ ಬೀರಿದರು. ಅವರ ಕಾಲದ ಸಂಸ್ಥಾನಿಕರ ಆಡಳಿತ ಕರ್ನಾಟಕಕ್ಕೆ ಎಂತಹ ಅಪಾಯಕಾರಿ ಸ್ಥಿತಿ ತಂದಿತೆಂದರೆ, ಮಾತೃಭಾಷೆ ಕನ್ನಡದ ಬದಲು ಉತ್ತರ ಕರ್ನಾಟಕದಲ್ಲಿ ಮರಾಠಿ ನೆಲೆ ನಿಂತಿತು. ಇದೇ ರೀತಿ ಮದರಾಸು ಪ್ರಾಂತ್ಯದಲ್ಲಿ ತಮಿಳು, ಹೈದರಾಬಾದ ಪ್ರಾಂತ್ಯದಲ್ಲಿ ತೆಲುಗು, ಉರ್ದು ಆಕ್ರಮಿಸಿಕೊಂಡವು. ಹೀಗೆ ಅನ್ಯಭಾಷೆಯ ಜೊತೆಗೆ ಅನ್ಯಸಂಸ್ಕೃತಿಗಳಿಂದ ಕನ್ನಡನಾಡು ತತ್ತರಿಸಿಹೋಗಿತ್ತು. ಉತ್ತರ ಕರ್ನಾಟಕವಂತೂ ಪೇಶ್ವೆಗಳ ಆಡಳಿತಭಾಷೆಯಾದ ಮರಾಠಿಯ ಕಾರಣದಿಂದ 'ದಕ್ಷಿಣಮಹಾರಾಷ್ಟ್ರ'ವಾಗಿ ಪರಿವರ್ತನೆ ಆಗುವಷ್ಟರ ಮಟ್ಟಿಗೆ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಲಾರಂಭಿಸಿತ್ತು. ಅನ್ಯಭಾಷೆ, ಅನ್ಯಸಂಸ್ಕೃತಿಗಳ ಪ್ರಭಾವ ಮತ್ತು ಅವುಗಳ ಮೋಹದಿಂದ ಕನ್ನಡಿಗರು ಮರಾಠಿಯನ್ನು ಒಪ್ಪಿಕೊಂಡುಬಿಟ್ಟಿದ್ದರು. ದಿನನಿತ್ಯದ ಭಾಷೆ, ಶಿಕ್ಷಣ, ಕಲೆ, ವ್ಯಾಪಾರ-ವಹಿವಾಟುಗಳಲ್ಲಿ ಅನ್ಯಭಾಷೆ-ಅನ್ಯಸಂಸ್ಕೃತಿ ವಿಸ್ತರಿಸಿಕೊಂಡು ದೈತ್ಯಾಕಾರವಾಗಿ ಬೆಳೆಯಲಾರಂಭಿಸಿದಾಗ ಕನ್ನಡಿಗರು ತಮ್ಮ ನೆಲದಲ್ಲಿಯೇ ಪರದೇಸಿಗಳಂತೆ ಬಾಳಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಜೊತೆಗೆ ಸಮಾಜದಲ್ಲಿ ಅಜ್ಞಾನ, ಅನಕ್ಷರತೆ, ಮೂಢನಂಬಿಕೆಗಳು ತುಂಬಿಕೊಂಡು ಅಂಧಕಾರ ಕವಿದಿತ್ತು. ಇಂತಹ ಸಂದರ್ಭದಲ್ಲಿ ಶರಣ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಸಮಾಜಕ್ಕಾಗಿಯೇ ದುಡಿದು, ಕಾಯಕ-ದಾಸೋಹದ ಜೊತೆಗೆ ಜ್ಞಾನದಾಸೋಹವನ್ನು ನೀಡಿ ಕನ್ನಡ ನಾಡು-ನುಡಿ-ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಸದಾ ಪ್ರಯತ್ನಿಸಿದ ಮನೆತನಗಳಲ್ಲಿ ವಿಜಾಪುರ ಜಿಲ್ಲೆಯ ಬನಹಟ್ಟಿ ನಗರದ ಚಿಕ್ಕೋಡಿ ಕುಟುಂಬವೂ ಒಂದು. ಈ ಮನೆತನದ ತಮ್ಮಣ್ಣಪ್ಪನವರು ಸಮಾಜಮುಖಿಯಾಗುವುದರ ಜೊತೆಗೆ ತಮ್ಮ ಕುಟುಂಬದವರಾದ ಪಂಡಿತಪ್ಪ ಚಿಕ್ಕೋಡಿ, ರಾಮಪ್ಪ ಚಿಕ್ಕೋಡಿ ಮತ್ತು ಅಳಿಯ ಡಾ.ಫ.ಗು.ಹಳಕಟ್ಟಿಯವರಿಗೆ ಪ್ರೇರಕ ಶಕ್ತಿಯಾದರು.

೧.೨. ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ:

ತಮ್ಮಣ್ಣಪ್ಪನಂಥವರು ಕನ್ನಡ ಕೆಲಸಕ್ಕಾಗಿ ಟೊಂಕಕಟ್ಟಿ ನಿಲ್ಲದೇ ಇದ್ದರೆ ಉತ್ತರ ಕರ್ನಾಟಕವು ಸಂಪೂರ್ಣ ಮರಾಠಿಮಯವಾಗುತ್ತಿತ್ತು. ಅದರಲ್ಲೂ ಜಮಖಂಡಿ, ಮುಧೋಳ, ಸಾಂಗಲಿ ಸಂಸ್ಥಾನಗಳಲ್ಲಿ ಕನ್ನಡದ ಅಸ್ತಿತ್ವವೇ ಇಲ್ಲದಂತಾಗುತ್ತಿತ್ತು ಇವರ ಸೋದರ ಸಂಬಂಧಿ ಪಂಡಿತಪ್ಪನವರಂತಹ ಮೇಧಾವಿ, ಸಮಾಜೋಭಿವೃದ್ಧಿಯ ಕಡೆಗೆ ಗಮನ ನೀಡಿರದಿದ್ದರೆ ಕೆ.ಎಲ್.ಇ. ಸಂಸ್ಥೆಯಂತಹ ಮಹಾಶಿಕ್ಷಣಸಂಸ್ಥೆ ಕನ್ನಡಿಗರ ಪಾಲಿಗೆ ಕನಸಿನ ಮಾತಾಗಿರುತ್ತಿತ್ತು. ಸೀರೆಗೆ ಹಾಕುವ ಚಿಣ್ಣಿ ಮತ್ತು ಶಟಲ್ ಮಗ್ಗಗಳಿಂದ ದೇಶಿಮಟ್ಟದಲ್ಲಿರುವ ಸೀರೆಯ ವ್ಯಾಪಾರವನ್ನು ದೇಶಮಟ್ಟದ ತನಕ ವಿಸ್ತರಿಸಿದ ಕೀರ್ತಿ ರಾಮಪ್ಪನವರದು. ಆಧುನೀಕರಣದ ಸಂದರ್ಭದಲ್ಲಿಯೂ ಕೂಡ ಇಂದಿನ

ಯುವತಿಯರು ಸಾಂಪ್ರದಾಯಿಕ ರಬಕವಿ–ಬನಹಟ್ಟಿ ಸೀರೆಗಳನ್ನು ಇಷ್ಟಪಡುತ್ತಾರೆ. ಈ ಸೀರೆಗಳು ದೂರದರ್ಶನದ ಜನಪ್ರಿಯ ಧಾರವಾಹಿಗಳಲ್ಲಿ ಎಲ್ಲರ ಗಮನ ಸೆಳೆಯುತ್ತಿವೆ. ಈ ಸೀರೆಗಳ ಪ್ರಸಿದ್ಧಿಯ ಸಂಪೂರ್ಣ ಹೊಣೆಯನ್ನು ಹೊತ್ತವರು ರಾಮಪ್ಪನವರು. ಹೀಗೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಯೋನ್ಮುಖವಾದ ಮನೆತನ ಚಿಕ್ಕೋಡಿಯವರದು. ಕೊಲ್ಲಾಪುರ ಸಂಸ್ಥಾನದ 'ಮಿಣಚಿ' ಗ್ರಾಮದಲ್ಲಿ ಹುಟ್ಟಿ, ಮರಾಠಿ ಶಿಕ್ಷಣ ಪಡೆದು, ಕನ್ನಡಾಭಿಮಾನದ ಹಂಬಲದಿಂದ ಚಿಕ್ಕೋಡಿಗೆ, ಚಿಕ್ಕೋಡಿಯಿಂದ ರಬಕವಿಗೆ ಬಂದು ನೆಲೆಸಿದ ಚಿಕ್ಕೋಡಿ ಕುಟುಂಬದವರು (ಪಾಟೀಲ ಗೌಡರು) ತಮ್ಮ ವಂಶವಾಹಿನಿಯನ್ನು ರಬಕವಿ–ಬನಹಟ್ಟಿಯಲ್ಲಿ ಬೆಳೆಸಿದರು. ಉತ್ತರ ಕರ್ನಾಟಕದಲ್ಲಿ ಮರಾಠಿ ದಬ್ಬಾಳಿಕೆಯನ್ನು ಕಂಡು ತಮ್ಮಣ್ಣಪ್ಪನವರು ತತ್ತರಿಸಿ ಹೋದರು. ಕನ್ನಡದ ದುಃಸ್ಥಿತಿಯನ್ನು ಕಂಡು ಅದರ ಉಳಿವಿಗಾಗಿ ಟೊಂಕಕಟ್ಟಿ ನಿಂತರು. ಕೇವಲ ಮುಲ್ಕಿ ಪರೀಕ್ಷೆಯನ್ನು ಪಾಸು ಮಾಡಿದ ತಮ್ಮಣ್ಣಪ್ಪನವರು ಬಹಳ ಬುದ್ಧಿವಂತರು, ಜ್ಞಾನದಾಹಿಗಳು, ಸಮಾಜೋಭಿವೃದ್ಧಿಗಾಗಿ ಹಂಬಲಿಸಿದವರು. ಕನ್ನಡ ನಾಡು–ನುಡಿ–ಸಂಸ್ಕೃತಿಯ ಏಳ್ಗೆಗಾಗಿ ನಾಡಿನ ಹಲವಾರು ಗಣ್ಯರೊಡನೆ ಕೂಡಿ ಸಂಘಸಂಸ್ಥೆಗಳನ್ನು ಹುಟ್ಟುಹಾಕಿದರಲ್ಲದೆ, ಸಕ್ರಿಯವಾಗಿ ಪಾಲ್ಗೊಂಡು, ಹತ್ತು ಹಲವಾರು ಯೋಜನೆಗಳನ್ನು ಹಾಕಿಕೊಂಡು, ಅವುಗಳನ್ನು ಕಾರ್ಯರೂಪಕ್ಕೆ ತರಲು ತಮ್ಮ ಇಡೀ ಬದುಕನ್ನು ಸವೆಸಿದರು. 'ಗಡಿನಾಡಿನ ಕನ್ನಡದ ಹುಲಿ', ಎಂದು ಕೀರ್ತಿ ಗಳಿಸಿದರು.

ತಮ್ಮಣ್ಣಪ್ಪನವರ ಪ್ರೀತಿಯ ಮಗನಾಗಿ(ಅಣ್ಣ ರಾಯಪ್ಪನ ಮಗ) ಅವರ ಪ್ರೇರಣೆ, ಮಾರ್ಗದರ್ಶನ ಪಡೆದುಕೊಂಡು ಬೆಳೆದುಬಂದವರು ಶ್ರೀ ಪಂಡಿತಪ್ಪ ರಾಯಪ್ಪ ಚಿಕ್ಕೋಡಿಯವರು. ಸಂಬಂಧದಲ್ಲಿ ಚಿಕ್ಕಪ್ಪನಾಗಿದ್ದರೂ ತಮ್ಮಣ್ಣಪ್ಪನವರು ಪಂಡಿತಪ್ಪನವರನ್ನು ತಮ್ಮ ಸ್ವಂತ ಮಗನಂತೆಯೇ ನೋಡಿದರಲ್ಲದೆ, ಸಮಾಜಮುಖಿಯಾಗಿ ಬೆಳೆಸಿದರು. ಪಂಡಿತಪ್ಪನವರು ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯ ಸಂಸ್ಥಾಪಕರಲ್ಲಿ ಒಬ್ಬರು. ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರು, ಮುಂಬಯಿಯ ಲೆಜಿಸ್ಲೇಟಿವ್ ಕೌನ್ಸಿಲ್‌ರು ಮತ್ತು ನೂರಾರು ಸಂಘ–ಸಂಸ್ಥೆಗಳಲ್ಲಿ ಸಾವಿರಾರು ಕೆಲಸಗಳನ್ನು ಮಾಡಿದವರು. ಪಂಡಿತಪ್ಪನವರು ಮಾಡಿದ ಕೆಲಸಗಳನ್ನು ನೋಡಿದರೆ ಅವರಿಗೆ ದಿನದ ಇಪ್ಪತ್ನಾಲ್ಕು ಗಂಟೆಗಳು ಸಾಲುತ್ತಿರಲಿಲ್ಲವೇನೊ ಎನ್ನಿಸುತ್ತದೆ. ಅಂತಹ ಧೀಮಂತ ವ್ಯಕ್ತಿತ್ವವನ್ನು ಪಡೆದುಕೊಂಡು ತಮ್ಮ ಚಿಕ್ಕಪ್ಪನ ಮನದಾಶೆಯನ್ನು ಈಡೇರಿಸಿದವರು ಅವರು.

ಚಿಕ್ಕೋಡಿ ಕುಟುಂಬದ ಇನ್ನೋರ್ವ ಸದಸ್ಯರು ಶ್ರೀ ರಾಮಪ್ಪ ಲಕ್ಷ್ಮಣಪ್ಪ ಚಿಕ್ಕೋಡಿಯವರು. ಇವರು ಜಿನರಾಜ ಹೆಗಡೆಯವರ ನೇತೃತ್ವದಲ್ಲಿ ಅಖಿಲ ಕರ್ನಾಟಕ ಏಕೀಕರಣ ಸಮಿತಿಯಲ್ಲಿ ಉತ್ತರ ಕರ್ನಾಟಕದಿಂದ ನೇಮಕಗೊಂಡ ಸದಸ್ಯರು. ಇವರು ಕಲಿತ ಶಿಕ್ಷಣ ಕಡಿಮೆ. ಜೀವನಾನುಭವದಿಂದ ಪಡೆದ ಜ್ಞಾನ ಅಪಾರ. ಒಬ್ಬ ಮೇಧಾವಿ ಇಂಜನಿಯರನಂತೆ ದುಡಿದು, ನೇಯ್ಗೆ ಸೀರೆಗಳಿಗೆ ಮಾನ್ಯತೆ ಒದಗುವಂತೆ ಮಾಡಿದ ಕೀರ್ತಿ ಚಿಕ್ಕೋಡಿ ರಾಮಪ್ಪನವರದು. 'ಬಡವರ ಬಂಧು', 'ನೇಕಾರರ ದೇವರು' ಎಂದು ಹೆಸರಾದ ಇವರು ತಾವು ದುಡಿದು ಗಳಿಸಿದ ಸಂಪತ್ತನ್ನು ಸಮಾಜಕ್ಕೆ ಧಾರೆಯೆರೆದರು. ಎಲೆ

ಮರೆಯ ಕಾಯಿಯಂತೆ ನಿಸ್ವಾರ್ಥಸೇವೆಯನ್ನು ಸಲ್ಲಿಸಿದ ರಾಮಪ್ಪ ಚಿಕ್ಕೋಡಿಯವರು ಸತ್ಯಶುದ್ಧ ಕಾಯಕಯೋಗಿ ಮತ್ತು ದಾಸೋಹಿಗಳು. ಈ ಮೂವರ ಜೀವನ, ಸಾಧನೆ, ಕೊಡುಗೆ ಇವು ಒಂದೊಂದು ಪ್ರತ್ಯೇಕ ಪಿಎಚ್.ಡಿ.ಪ್ರಬಂಧಕ್ಕೆ ಆಹಾರವಾಗುವಷ್ಟು ವಿಷಯ ಸಾಮಗ್ರಿಯನ್ನೊಳಗೊಂಡಿವೆ. ಆದರೆ ಈ ಕುಟುಂಬದ ಸದಸ್ಯರನ್ನು ಕುರಿತು ಇದುವರೆಗೆ ನಡೆದ ಕೆಲಸ ತೀರ ಸ್ವಲ್ಪ ಮಾತ್ರ.

ಶತಮಾನೋತ್ಸವದ ಸಂಭ್ರಮದಲ್ಲಿರುವ ವಿಜಾಪುರದ ಬಿ.ಎಲ್.ಡಿ.ಇ ಸಂಸ್ಥೆ, ಶತಮಾನೋತ್ಸವದೆಡೆಗೆ ಸಾಗುತ್ತಿರುವ ಬೆಳಗಾವಿಯ ಕೆ.ಎಲ್.ಇ ಸಂಸ್ಥೆ, ಅಮೃತಮಹೋತ್ಸವದ ಸಂದರ್ಭದಲ್ಲಿರುವ ಬನಹಟ್ಟಿಯ 'ಜನತಾ ಶಿಕ್ಷಣ' ಸಂಘ ಮತ್ತು ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿರುವ ಕರ್ನಾಟಕ, ಈ ಎಲ್ಲ ಸಡಗರ-ಸಂಭ್ರಮಗಳ ಹಿಂದೆ ಚಿಕ್ಕೋಡಿ ಕುಟುಂಬದವರ ನಿಸ್ವಾರ್ಥ ಸೇವೆ, ಪರಿಶ್ರಮ ಇರುವುದನ್ನು ಕನ್ನಡಿಗರು ಮರೆಯುವಂತಿಲ್ಲ. ಒಟ್ಟಾರೆ, ನಾಡು-ನುಡಿ, ಶಿಕ್ಷಣ, ಸಾಹಿತ್ಯ, ಪತ್ರಿಕೋದ್ಯಮ, ಸಮಾಜಸೇವೆ, ರಾಜಕೀಯ ಕ್ಷೇತ್ರಗಳ ಗಣನೀಯ ಕೆಲಸ ಮಾಡಿದ ಚಿಕ್ಕೋಡಿ ಕುಟುಂಬದ ಜೀವನ-ಸಾಧನೆ, ಕೊಡುಗೆಯನ್ನು ಗುರುತಿಸುವುದು ನಮ್ಮ ಅಧ್ಯಯನದ ಸ್ವರೂಪ, ಉದ್ದೇಶ ವ್ಯಾಪ್ತಿಗೆ ಸೇರುತ್ತದೆ.

೧.೪.ಅಧ್ಯಯನದ ಆಕರಗಳು:

ಈ ವಿಷಯವನ್ನು ನಮ್ಮ ಸಂಶೋಧನೆಗೆ ಆರಿಸಿಕೊಂಡಾಗ ಮುಖ್ಯವಾಗಿ ಕಾಡಿದ ಸಮಸ್ಯೆ ಆಕರಗಳದ್ದು. ಅವುಗಳನ್ನು ಮೌಖಿಕ ಮತ್ತು ಲಿಖಿತ ಎಂದು ವಿಂಗಡಿಸಿಕೊಳ್ಳಬಹುದು. ಮೌಖಿಕ ಮಾಹಿತಿ ದೊರಕಿಸಿಕೊಳ್ಳಬೇಕಾದರೆ ತಮ್ಮಣ್ಣಪ್ಪನರು ತೀರಿಹೋಗಿ ಎಪ್ಪತ್ತೇಳು ವರ್ಷ ಮುಗಿಯುತ್ತ ಬಂತು. ಅವರನ್ನು ಕಂಡ ೩-೪ ಜನ ತಮ್ಮಣ್ಣಪ್ಪನವರ ನಿಧನಕಾಲಕ್ಕೆ ೧೦-೧೧ ವರ್ಷ ವಯಸ್ಸಿನವರು. ಇವರು ತಮ್ಮ ತಂದೆ, ತಾಯಿ, ಬಂಧು-ಬಳಗದಿಂದ ಕೇಳಿಕೊಂಡ ಘಟನಾವಳಿಗಳನ್ನು ನನ್ನ ಮುಂದೆ ಬಿಚ್ಚಿಟ್ಟಿದ್ದಾರೆ. ಆದರೆ ಒಂದು ಸಂತೋಷದ ವಿಷಯವೆಂದರೆ ಅವರಿಗೆ ಸಂಬಂಧಿಸಿದ ಘಟನೆ ಯಾರಿಗೆ ಕೇಳಿದರೂ ಅದು ಒಂದೇ ಆಗಿರುವುದು. ಆ ಭಾವುಕತೆಯಲ್ಲೂ ಸತ್ಯ ಅಡಗಿರುವುದು ಕಂಡುಬಂದಿತು. ಕುಟುಂಬದ ಜನ ಮತ್ತು ಊರಿನ ಹಿರಿಯರನ್ನು ಸಂದರ್ಶಿಸಿ, ಅವುಗಳಲ್ಲಿರುವ ಸತ್ಯಾಸತ್ಯಗಳನ್ನು ಪರಿಶೀಲಿಸಿ, ಪರೀಕ್ಷಿಸಿ ಅವುಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಇನ್ನು ಲಿಖಿತ ಮಾಹಿತಿಗಳಲ್ಲಿ ತಮ್ಮಣ್ಣಪ್ಪನವರು ಮಂಡಿಸಿದ ಪ್ರಬಂಧಗಳನ್ನು, ಅವರ ಕುರಿತಾಗಿ ಅಲ್ಲಲ್ಲಿ ಬಂದಿರುವ ಬಿಡಿ ಲೇಖನಗಳನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ. ತಮ್ಮಣ್ಣಪ್ಪನವರು ಸ್ವತಃ ಕವಿಗಳು ಮತ್ತು ನಾಟಕಕಾರರು ಆಗಿದ್ದರು. ಅವರು ಬರೆದ ಆರು ನಾಟಕಗಳಲ್ಲಿ 'ಉಷಾ ಪರಿಣಯ' ಮಾತ್ರ ಲಭ್ಯವಾಗಿದೆ. ಉಳಿದ ಐದು ಅಪ್ರಕಟಿತ ನಾಟಕಗಳು ಮತ್ತು ಹಲವು ಕವನಗಳು ದೊರೆತಿಲ್ಲ. ತಮ್ಮಣ್ಣಪ್ಪನವರ ಅಗಾಧ ವ್ಯಕ್ತಿತ್ವವನ್ನು ನಾಡಿಗೆ ಪರಿಚಯಿಸುವ ನಿಟ್ಟಿನಲ್ಲಿ, ಪ್ರಸಿದ್ಧ ಸಾಹಿತಿ ಅ.ನ.ಕೃ ಹೇಳಿದ 'ಕನ್ನಡನಾಡಿನ ತುತ್ತತುದಿಯಲ್ಲಿರುವ ಉತ್ತರ ಕರ್ನಾಟಕ ಸಂಸ್ಥಾನಗಳಲ್ಲಿ ಕನ್ನಡವನ್ನು, ಕನ್ನಡ ನಾಟಕಕಲೆಯನ್ನು ಉಳಿಸಿದ ಕೀರ್ತಿ ಕೈವಾ.ಚಿಕ್ಕೋಡಿ ತಮ್ಮಣ್ಣಪ್ಪನವರಿಗೆ ಸೇರಬೇಕು'[೧] ಎಂಬ ಮಾತು ಗಮನಾರ್ಹವಾಗಿದೆ. ಈ ಮೂರು

ಜನ ವಾಸವಾಗಿದ್ದ ಮನೆಗಳು ಹಿಂದಿನ ಹಾಗೆ ಇಂದು ಉಳಿದು ಬಂದಿಲ್ಲ. ಈ ಮಹನೀಯರು ಬಳಸಿದ ಸಾಮಾನುಗಳನ್ನು ಅವರ ಮನೆತನದವರು ಕಾಯ್ದಿಟ್ಟಿಲ್ಲ. ಅವರು ಬರೆದ ಕವಿತೆ, ನಾಟಕ, ಭಾಷಣ, ಲೇಖನ ಇವಾವವೂ ಇಂದು ಉಳಿದು ಬಂದಿಲ್ಲ.

ಪಂಡಿತಪ್ಪನವರ ಸಮಕಾಲೀನರು ಬದುಕಿದ್ದವರು ಅತ್ಯಂತ ವಿರಳ ಜನ. ಬನಹಟ್ಟಿ, ಬೆಳಗಾವಿಯಲ್ಲಿ ಅವರನ್ನು ಕಂಡ ಜನರನ್ನು ಸಂದರ್ಶಿಸಿದೆ. ಪಂಡಿಂತಪ್ಪನವರು ನೂರಾರು ಸಮಿತಿಗಳಲ್ಲಿ ಕೆಲಸ ಮಾಡಿದ್ದಾರೆ. ಆದರೆ ಆ ಸಮಿತಿಗಳು ಇಂದು ಅಸ್ತಿತ್ವದಲ್ಲಿ ಇಲ್ಲ. ಹೀಗಾಗಿ ಪ್ರಕಟಿತ ದಾಖಲೆಗಳನ್ನು ಅವಲಂಬಿಸುವುದು ಅನಿವಾರ್ಯವಾಯಿತು. ರಾಮಪ್ಪನವರಿಗೆ ಗಂಡು ಸಂತಾನವಿರದ ಕಾರಣ ಅವರ ವಂಶವಾಹಿನಿ ಮುಂದುವರೆದಿಲ್ಲ. ಹೀಗಾಗಿ ಅವರ ಕುರಿತು ಯಾವ ದಾಖಲೆಗಳೂ ಇಂದು ದೊರಕುತ್ತಿಲ್ಲ.

ಕನ್ನಡ ನಾಡು-ನುಡಿ-ಸಂಸ್ಕೃತಿಗೆ ದುಡಿದು ಅಪಾರ ಕೊಡುಗೆಯನ್ನು ನೀಡಿದ ಈ ಕುಟುಂಬದ ಕುರಿತು ಅಧ್ಯಯನ ನಡೆದದ್ದು ಇಲ್ಲವೇ ಇಲ್ಲವೆನ್ನುವಷ್ಟು ವಿರಳ. ಈ ಕುಟುಂಬದ ಮಹನೀಯರನ್ನು ಕುರಿತು ಕೇವಲ ಮೂರು ಚಿಕ್ಕ ಹೊತ್ತಿಗೆಗಳು ಮತ್ತು ಅಲ್ಲಲ್ಲಿ ಬಿಡಿ ಲೇಖನಗಳು ಮಾತ್ರ ಪ್ರಕಟಗೊಂಡಿವೆ.

'ಚಿಕ್ಕೋಡಿ ತಮ್ಮಣ್ಣಪ್ಪನವರು' ಇದು ತಮ್ಮಣ್ಣಪ್ಪನವರನ್ನು ಕುರಿತು ಹೊರಬಂದಿರುವ ಮೊದಲ ಪುಸ್ತಕ. ಇದನ್ನು ಬೆಂಗಳೂರಿನ ಐ.ಬಿ.ಎಚ್ ಪ್ರಕಾಶನ ಪ್ರಕಟಪಡಿಸಿದೆ. ಕನ್ನಡನಾಡು ಮತ್ತು ಕನ್ನಡಿಗರ ಪರಂಪರೆಯಡಿಯಲ್ಲಿ ಹೊರಬಂದ ಈ ಕೃತಿಯನ್ನು ದು.ನಿಂ.ಬೆಳಗಲಿಯವರು ರಚಿಸಿದ್ದಾರೆ. ಬನಹಟ್ಟಿಯ ಬೆಳಗಲಿಯವರು ತಮ್ಮಣ್ಣಪ್ಪನವರನ್ನು ಬಾಲ್ಯದಲ್ಲಿ ಹತ್ತಿರದಿಂದ ಕಂಡವರು. ಹೀಗಾಗಿ ಅವರ ಉನ್ನತ ವ್ಯಕ್ತಿತ್ವವನ್ನು ಅತ್ಯಂತ ಸರಳ ಮತ್ತು ಹೃದಯಸ್ಪರ್ಶಿಯಾಗಿ ಹೇಳಿದ್ದಾರೆ. ಕೇವಲ ೪೪ ಪುಟಗಳ ಅತ್ಯಂತ ಚಿಕ್ಕ ಹೊತ್ತಿಗೆ. ಸಣ್ಣಸಣ್ಣ ಟಿಪ್ಪಣಿಗಳಲ್ಲಿ ತಮ್ಮಣ್ಣಪ್ಪನವರ ಗುಣಸ್ವಭಾವಗಳ ಜೊತೆಗೆ ಅವರ ಜೀವನದ ವಿವರಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಚಿತ್ರಿಸಿದ್ದಾರೆ.

'ತಮ್ಮಣ್ಣಪ್ಪನವರು ಚಿಕ್ಕೋಡಿ' ಇದು ಎರಡನೆಯ ಪುಸ್ತಕ. ಡಾ.ಜೆ.ಎಸ್.ಕುಳ್ಳಿಯವರು ಗದುಗಿನ ತೋಂಟದಾರ್ಯ ಮಠದ ವೀರಶೈವ ಪುಣ್ಯಪುರುಷರ ಮಾಲಿಕೆಗೆ ಬರೆದು ಕೊಟ್ಟ ಪುಸ್ತಕ. ೧೯೮೦ರಲ್ಲಿ ಪ್ರಕಟಗೊಂಡ ಈ ಪುಸ್ತಕದಲ್ಲಿ ತಮ್ಮಣ್ಣಪ್ಪನವರ ಜನನ-ಬಾಲ್ಯ, ಶಿಕ್ಷಣ, ವೃತ್ತಿ, ಮದುವೆ ಮುಂತಾದ ವೈಯಕ್ತಿಕ ವಿಷಯಗಳೊಂದಿಗೆ ತಮ್ಮಣ್ಣಪ್ಪನವರು ಮಾಡಿದ ಭಾಷಣಗಳು, ಅವರ ಪ್ರಬಂಧಗಳು ಸಾಹಿತ್ಯಸಮ್ಮೇಲನಗಳಲ್ಲಿ ತಮ್ಮಣ್ಣಪ್ಪನವರು ಮಂಡಿಸಿದ ಠರಾವುಗಳನ್ನು ಸಂಗ್ರಹಿಸಿ ಕೊಡಲಾಗಿದೆ

ತಮ್ಮಣ್ಣಪ್ಪನವರ ವ್ಯಕ್ತಿತ್ವಕ್ಕೆ ಸಂಬಂಧಿಸಿ ಹರಿಜನರ ಹಿತೈಷಿ, ಬಡವರ ಬಂಧು, ಸಾಮಾಜಿಕ ಜಾಗೃತಿ, ವಿದ್ಯಾಪಕ್ಷಪಾತಿ ಮುಂತಾದ ವಿಚಾರಗಳನ್ನು ಅವರು ಇಲ್ಲಿ ಹೇಳಿದ್ದಾರೆ. ಜೊತೆಗೆ ಕರ್ನಾಟಕ ವಿದ್ಯಾವರ್ಧಕ ಸಂಘದೊಂದಿಗೆ ತಮ್ಮಣ್ಣಪ್ಪನವರ ಸಂಬಂಧ 'ವಚನಪಿತಾಮಹನನ್ನು ರೂಪಿಸಿದ ಶಿಲ್ಪಿ' ಮೊದಲಾದ ಮಹತ್ವದ ವಿಷಯಗಳು ಇಲ್ಲಿ ಚರ್ಚಿತವಾಗಿವೆ. ಇದು ೯೬ ಪುಟಗಳ ಚಿಕ್ಕ ಹೊತ್ತಿಗೆಯಾದರೂ ನನ್ನ ಪ್ರಬಂಧದ ನೀಲನಕ್ಷೆಗೆ ಸಹಾಯಕವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೂ ಸಂಶೋಧಕರೂ ಆದ ಕುಳ್ಳಿಯವರು ತಮ್ಮಣ್ಣಪ್ಪನವರ ಜೀವನ-ಸಾಧನೆಯನ್ನು ಕುರಿತು ಇನ್ನೂ ಆಳವಾದ ಅಧ್ಯಯನ ಮಾಡಬಹುದಿತ್ತು. ತಮ್ಮಣ್ಣಪ್ಪನವರ ಸಮಕಾಲೀನರು ಆಗ ಜೀವಂತವಾಗಿದ್ದರು. ಬಹುಶಃ ಅವರ ಸಾಹಿತ್ಯ ಸಂಪೂರ್ಣವಾಗಿ ಹಾಳಾಗಿರಲಿಲ್ಲ. ಆದರೆ ಭಾಷಾವಿಜ್ಞಾನದತ್ತ ಹೊರಳಿದ ಕುಳ್ಳಿಯವರು ಆ ಪ್ರಯತ್ನ ಮಾಡಲಿಲ್ಲ. ಹೀಗಾಗಿ ಎಷ್ಟೋ ಸತ್ಯಗಳು ಕಾಲಗರ್ಭದಲ್ಲಿ ಹೂತು ಹೋದವು.

ತಮ್ಮಣ್ಣಪ್ಪನವರನ್ನು ಕುರಿತು ದು.ನಿಂ.ಬೆಳಗಲಿಯವರು ಬರೆದ ಲೇಖನ **'ಗಡಿನಾಡಿನಲ್ಲಿ ಕನ್ನಡದ ಕಿಡಿ ಹೊತ್ತಿಸಿದ ನಾಡು, ನುಡಿಯ ಸೇವಕ ಚಿಕ್ಕೋಡಿ ತಮ್ಮಣ್ಣಪ್ಪ'** ಜಯಕರ್ನಾಟಕ ಪತ್ರಿಕೆ(ಏಪ್ರಿಲ್ ೧೯೬೦) ಯಲ್ಲಿ ಪ್ರಕಟಗೊಂಡಿದೆ. ಇದೇ ಲೇಖನ ನಂತರ ಸುಧಾ ಪತ್ರಿಕೆ(ಡಿಸೆಂಬರ್ ೫, ೧೯೭೧)ಯಲ್ಲಿ ಪ್ರಕಟಗೊಂಡಿದೆ. ಇದರಲ್ಲಿ ತಮ್ಮಣ್ಣಪ್ಪನವರ ಜೀವನ ಮತ್ತು ಸಾಧನೆಗಳ ಸಂಕ್ಷಿಪ್ತ ಚಿತ್ರಣವಿದೆ. ಇನ್ನೊಂದು ಲೇಖನ **'ಗಡಿನಾಡಿನ ಕನ್ನಡದ ಹುಲಿ; ಒಂದು ಪ್ರಸಂಗ'** ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಮಾಸಪತ್ರಿಕೆ(೧೯೮೭ ಫೆಬ್ರುವರಿ, ಸಂ.೧. ಸಂ.೧.)ಯಲ್ಲಿ ಪ್ರಕಟಗೊಂಡಿದೆ. ಇದು ಮತ್ತೆ ಜಮಖಂಡಿಯ ಕುರುಕ್ಷೇತ್ರ ವಾರಪತ್ರಿಕೆಯಲ್ಲಿ ಮರುಪ್ರಕಟಗೊಂಡಿದೆ. ದಕ್ಷಿಣ ಸಂಸ್ಥಾನಗಳ ಪ್ರಜಾಪರಿಷತ್ತಿನ ೭ನೆಯ ಅಧಿವೇಶನ ಮುಂಬಯಿಯ 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸಾಯಟಿ'ಯ ಹಾಲಿನಲ್ಲಿ ೧೭-೧೨-೧೯೨೭ರಲ್ಲಿ ಸೇರಿತ್ತು. ತಮ್ಮಣ್ಣಪ್ಪನವರು ಅಲ್ಲಿ ದೇಶಿಯ ಸಂಸ್ಥಾನಗಳಲ್ಲಿ ಮಾತೃಭಾಷೆ ಕನ್ನಡದ ಶಿಕ್ಷಣ ಅವಶ್ಯವಿದೆಯೆಂಬುದನ್ನು ಮನವರಿಕೆ ಮಾಡಿಕೊಟ್ಟು ಠರಾವನ್ನು ಮಂಡಿಸಿದರು. ಈ ಮಹತ್ವದ ವಿಚಾರವನ್ನು ಬೆಳಗಲಿಯವರು ಪ್ರಕಟಪಡಿಸಿದ್ದಾರೆ.

೧೯೯೩ರಲ್ಲಿ ಬನಹಟ್ಟಿಯ ಸ್ನೇಹಸಂಪದ ಪ್ರಕಾಶನದವರು ದು.ನಿಂ.ಬೆಳಗಲಿ ಕೃತ **'ಬೆಳಕು ಬಿತ್ತಿದವರು'** ಎಂಬ ಕೃತಿಯನ್ನು ಪ್ರಕಟಪಡಿಸಿದ್ದಾರೆ. ಕನ್ನಡನಾಡಿನ ಪುಣ್ಯಪುರುಷರಲ್ಲಿ ಆರು ಜನರ ಕುರಿತಾದ ಲೇಖನಗಳು ಅಲ್ಲಿವೆ. ಅವರಲ್ಲಿ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ, ಶ್ರೀ ಪಂಡಿತಪ್ಪ ಚಿಕ್ಕೋಡಿ ಮತ್ತು ಡಾ.ಫ.ಗು.ಹಳಕಟ್ಟಿಯವರ ಕುರಿತ ಲೇಖನಗಳೂ ಇವೆ. ಅಲ್ಲದೆ ಬನಹಟ್ಟಿಯ ಜನತಾ ಶಿಕ್ಷಣ ಸಂಘದವರು ತಮ್ಮಣ್ಣಪ್ಪನವರ ಪುಣ್ಯತಿಥಿಯ ಸುವರ್ಣಮಹೋತ್ಸವದ ಸ್ಮರಣಸಂಚಿಕೆಯನ್ನು ಹೊರತಂದರು. ಅದರಲ್ಲಿಯೂ ಶ್ರೀ ತಮ್ಮಣ್ಣಪ್ಪ, ಶ್ರೀ ಪಂಡಿತಪ್ಪ ಮತ್ತು ಡಾ.ಹಳಕಟ್ಟಿಯವರ ಕುರಿತು ಲೇಖನಗಳಿವೆ. ಇವು ಬೆಳಗಲಿಯವರು ತಮ್ಮ ಮೊದಲಿನ ಪುಸ್ತಕವನ್ನಾಧರಿಸಿ ಬರೆದ ಲೇಖನಗಳಾಗಿವೆ. ಯಾವುದೇ ಹೊಸ ವಿಚಾರಗಳು ಇಲ್ಲಿಲ್ಲ. ಈಚೆಗೆ ಮಹಾಲಿಂಗಪುರದ ಶರಣಚೇತನ ಪತ್ರಿಕೆಯಲ್ಲಿ (ಜುಲೈ ೨೦೦೨ ಸಂ.೧, ಸಂ.೩, ಮತ್ತು ಜುಲೈ ೨೦೦೩ ಸಂ.೨, ಸಂ.೩)ರಲ್ಲಿ ಪ್ರಕಟಿಸಿದ ಮತ್ತು ಡಾ.ಮಾಟೋಳಿಯವರು **'ರವಿಕೀರ್ತಿ'**(ಚಾಲುಕ್ಯ ಉತ್ಸವ ೨೦೦೭) ಸಂಪುಟದಲ್ಲಿ ಪ್ರಕಟಿಸಿದ ಲೇಖನಗಳೂ ಡಾ.ಜಯವಂತ ಕುಳ್ಳಿ ಮತ್ತು ದು.ನಿಂ.ಬೆಳಗಲಿಯವರ ಪುಸ್ತಕಗಳನ್ನು ಆಧರಿಸಿ ಬರೆದವುಗಳಾಗಿವೆ.

೧೯೮೦ರಲ್ಲಿ ಗದುಗಿನ ತೋಂಟದಾರ್ಯ ಮಠದಿಂದ ಶ್ರೀ ದು.ನಿಂ.ಬೆಳಗಲಿಯವರು **'ಚಿಕ್ಕೋಡಿ ಪಂಡಿತಪ್ಪನವರು'** ಪುಸ್ತಕವನ್ನು ಪ್ರಕಟಪಡಿಸಿದರು. ಚಿಕ್ಕೋಡಿ ಪಂಡಿತಪ್ಪನವರು ಜನತಾಶಿಕ್ಷಣ ಸಂಘದ ಕೆಲಸದ ನಿಮಿತ್ಯ ಹಗಲೆಲ್ಲ ಬೆಳಗಾವಿಯಿಂದ ಬನಹಟ್ಟಿಗೆ ಬರುತ್ತಿದ್ದರು. ಬನಹಟ್ಟಿಯ ಜನತೆಗೆ ಪಂಡಿತಪ್ಪನವರ ಕುಟುಂಬವು ತುಂಬಾ ಆತ್ಮೀಯವಾಗಿತ್ತು. ಪಂಡಿತಪ್ಪನವರನ್ನು ಅತ್ಯಂತ ಹತ್ತಿರದಿಂದ ಕಂಡ ಬೆಳಗಲಿಯವರು ಅವರ ಅಗಾಧ ವ್ಯಕ್ತಿತ್ವವನ್ನು ಕನ್ನಡನಾಡಿಗೆ ಪರಿಚಯಿಸಲು ಇಲ್ಲಿ ಪ್ರಯತ್ನಿಸಿದ್ದಾರೆ.

ಚಿಕ್ಕೋಡಿ ಕುಟುಂಬದ ಪಂಡಿತಪ್ಪನವರ ಹಿನ್ನೆಲೆ, ಮುನ್ನೆಲೆ, ಸಮಾಜ ಸೇವೆಗಳಿಗೆ ಸೆಲೆ ಎಂದು ಸಣ್ಣಸಣ್ಣ ಟಿಪ್ಪಣಿಗಳ ಹಾಗೆ ವಿಷಯಗಳನ್ನು ಹೇಳುತ್ತಾ ಹೋಗಿದ್ದಾರೆ. ಪಂಡಿತಪ್ಪನವರು ರೂಪಿಸಿದ ಸಮಿತಿಗಳು, ಅವುಗಳಲ್ಲಿ ಅವರ ಸೇವೆ ಇವುಗಳ ಕುರಿತ ಸಂಕ್ಷಿಪ್ತ ವಿವರಣೆ ಇದೆ. ತಮ್ಮಣ್ಣಪ್ಪನವರು ತಮ್ಮ ಕೊನೆ ಗಳಿಗೆಯಲ್ಲಿ ಪಂಡಿತಪ್ಪನವರಿಗೆ ಬರೆದ ಪತ್ರ, ಕವಿ ಈಶ್ವರ ಸಣಕಲ್ಲ ಅವರಿಗೆ ಪಂಡಿತಪ್ಪನವರು ಬರೆದ ಪತ್ರ, ಬ್ರಾಹ್ಮಣೇತರ ಯುವಪರಿಷತ್ತಿಗೆ ಪಂಡಿತಪ್ಪನವರು ಬರೆದ ಪತ್ರ, ೨೬-೯-೧೯೩೬ರಲ್ಲಿ ಸಾಂಗಲಿ ಸಂಸ್ಥಾನದ ಪ್ರಥಮ ವೀರಶೈವಮಹಾಸಭೆಯ ಭಾಷಣ ಮೊದಲಾದವು ಈ ಕೃತಿಯಲ್ಲಿಯ ಮಹತ್ವದ ಅಂಶಗಳು. ಆದರೆ ಪಂಡಿತಪ್ಪನವರು ನೂರಾರು ಸಮಿತಿಗಳಲ್ಲಿ ಮಾಡಿದ ಸೇವೆಯ ವಿವರಗಳು ಈ ಕೃತಿಯ ಹೊರಗುಳಿದಿವೆ.

ಬೆಳಗಾವಿಯ ಶ್ರೀ ನಾಗನೂರು ರುದ್ರಾಕ್ಷಿಮಠದ ಮೂಲಕ **'ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸಂಸ್ಥೆ'**, ಬೆಳಗಾವಿಯ ಕರ್ನಾಟಕ ಲಿಂಗಾಯತ ಶಿಕ್ಷಣಸಂಸ್ಥೆಯ ಪ್ರಸರಾಂಗದ ಮೂಲಕ (೨೦೦೨), **'ಕೆ.ಎಲ್.ಇ. ಸೊಸೈಟಿ ಸಂ.೧'**, **'ಯುಗಪುರುಷರು'**(೨೦೦೪) ಪುಸ್ತಕಳು ಪ್ರಕಟವಾದವು. ಈ ಮೂರು ಪುಸ್ತಕಗಳಲ್ಲಿ ಪಂಡಿತಪ್ಪನವರ ಬಹುಮುಖ ವ್ಯಕ್ತಿತ್ವವನ್ನು ಅತ್ಯಂತ ಸಂಕ್ಷಿಪ್ತವಾಗಿ ವಿವರಿಸುತ್ತವೆ. ಕೆ.ಎಲ್.ಇ. ಸಂಸ್ಥೆಯ ಸ್ಥಾಪನೆಯಲ್ಲಿ ಪಂಡಿತಪ್ಪನವರ ಪಾತ್ರ ಮತ್ತು ಅವರು ನೂರಾರು ಸಮಿತಿಗಳಲ್ಲಿ ಮಾಡಿದ ಸೇವೆಗಳಲ್ಲಿ ಕೆಲವೊಂದನ್ನು ಇಲ್ಲಿ ಹೆಸರಿಸಲಾಗಿದೆ. ಆದರೆ ಈ ಲೇಖನಗಳಿಗೆ ಪಂಡಿತಪ್ಪನವರ ವ್ಯಕ್ತಿತ್ವವನ್ನು ಹಿಡಿದಿಡಲು ಸಾಧ್ಯವಾಗಿಲ್ಲ.

ಶ್ರೀ ರಾಮಪ್ಪ ಚಿಕ್ಕೋಡಿಯವರ ಕುರಿತಾಗಿ ಕೇವಲ ಒಂದೇ ಒಂದು ಲೇಖನ ಪ್ರಕಟಗೊಂಡಿದೆ. ಅದು ರಬಕವಿಯ ಪ್ರಶಾಂತ ಪ್ರಕಾಶನ ಪ್ರಕಟಿಸಿದ **'ರಬಕವಿಯ ಮರೆಯಲಾಗದ ಮಹಾನುಭಾವರು'** ಎಂಬ ಚಿಕ್ಕ ಕೃತಿಯಲ್ಲಿ ಪ್ರಕಟಗೊಂಡಿದೆ. ಅದನ್ನು ಶ್ರೀ ಮ.ಪ.ಮದರಖಂಡಿಯವರು ರಾಮಪ್ಪನವರ ಕುಟುಂಬವರ್ಗದರಿಂದ ಮಾಹಿತಿ ಪಡೆದುಕೊಂಡು ಬರೆದಿದ್ದಾರೆ. ಈಗಲೂ ರಾಮಪ್ಪನವರನ್ನು ನೋಡಿದವರು ಅವರ ಕುರಿತಾಗಿ ಸಾಕಷ್ಟು ಮೌಖಿಕ ಮಾಹಿತಿಗಳನ್ನು ಒದಗಿಸುತ್ತಾರೆ. ಇದುವರೆಗೆ ದೊರಕಿರುವ ಈ ಎಲ್ಲ ಮಾಹಿತಿಗಳನ್ನಾಧರಿಸಿ ಪ್ರಸ್ತುತ ಪ್ರಬಂಧವನ್ನು ಆರು ಅಧ್ಯಾಯಗಳಲ್ಲಿ ವಿಸ್ತರಿಸಲಾಗಿದೆ.

ಕೊನೆಟಿಪ್ಪಣಿ:

೧. ಕನ್ನಡ ರಂಗಭೂಮಿಯ ಆಗುಹೋಗುಗಳು; ಸಂಸ್ಕೃತಿಯ ವಿಶ್ವರೂಪ; ಅ.ನ.ಕೃ., ಪುಟ-೭೧

ಅಧ್ಯಾಯ : ಎರಡು
ಸಮಕಾಲೀನ ಪರಿಸರ

೧.೧. ರಾಷ್ಟ್ರೀಯ ನೆಲೆ
೧.೨. ರಾಜಕೀಯ ಪರಿಸರ
೧.೩. ಸಾಮಾಜಿಕ–ಧಾರ್ಮಿಕ ಪರಿಸರ
೧.೪. ಆರ್ಥಿಕ ಪರಿಸರ
೧.೫. ಶೈಕ್ಷಣಿಕ ಪರಿಸರ
೧.೬. ಭಾಷಿಕ ಪರಿಸರ
೧.೭. ಸಾಂಸ್ಕೃತಿಕ ಪರಿಸರ

ಅಧ್ಯಾಯ ಎರಡು

ಸಮಕಾಲೀನ ಪರಿಸರ

ದೇಶ, ಕಾಲ, ಸಮಾಜ ಇತ್ಯಾದಿಗಳು ವ್ಯಕ್ತಿಯ ಜೀವನದಲ್ಲಿ ಬದಲಾವಣೆಗೆ ಕಾರಣವಾಗುತ್ತವೆ. ಕಾಲ, ದೇಶಗಳಿಗೆ ಬದ್ಧವಾದ ವ್ಯಕ್ತಿ ಸಮುದಾಯದ ಭಾಗವಾಗಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾನೆ. ಇಂಥ ಒಳ್ಳೆಯ ವ್ಯಕ್ತಿಗಳಿಂದ ಕುಟುಂಬ, ಸಮಾಜ, ನಾಡು ನುಡಿಗಳು ಸಂಪನ್ನವಾಗುತ್ತವೆ. ಹೀಗೆ ಸಂಪನ್ನವಾಗಲು ಕಾರಣವಾಗುವ ಸರ್ವ ಅಂಶಗಳ ಮೊತ್ತವನ್ನು 'ಸಮಕಾಲೀನ ಪರಿಸರ'ವೆಂದು ಗ್ರಹಿಸಬಹುದಾಗಿದೆ. ಮಾನವ ಪರಿಸರದ ಕೂಸು. ಹಾಗಾಗಿ ಆತನ ವ್ಯಕ್ತಿತ್ವದ ಮೇಲೆ ಸಮಕಾಲೀನ ರಾಜಕೀಯ, ಸಾಮಾಜಿಕ, ಧಾರ್ಮಿಕ ಮುಂತಾದ ವಿಚಾರಗಳು ಪ್ರಭಾವ ಬೀರುತ್ತವೆ. ಪ್ರಸ್ತುತ ಚಿಕ್ಕೋಡಿ ಕುಟುಂಬಕ್ಕೆ ಹಿನ್ನೆಲೆಯಾಗಿರುವ ಪರಿಸರವನ್ನು ರಾಷ್ಟ್ರೀಯ, ಸಾಮಾಜಿಕ-ಧಾರ್ಮಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ, ಭಾಷಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ಗುರುತಿಸಬಹುದು.

೨.೧. ರಾಷ್ಟ್ರೀಯ ನೆಲೆ:

ಆಧುನಿಕ ಭಾರತದಲ್ಲಿ ಡಚ್ಚರು, ಫ್ರೆಂಚರು, ಪೋರ್ತುಗೀಜರು ಮತ್ತು ಆಂಗ್ಲರು ವ್ಯಾಪಾರಕ್ಕಾಗಿ ಬಂದು ತಮ್ಮ ವಸಹಾತುಗಳನ್ನು ಸ್ಥಾಪಿಸಿದರು. ವ್ಯಾಪಾರಕ್ಕಾಗಿ ಬಂದ ಅವರು ಕ್ರಮೇಣ ಇಲ್ಲಿ ತಮ್ಮ ಆಡಳಿತವನ್ನು ವಿಸ್ತರಿಸಿದರು. ಇಲ್ಲಿನ ಜನರ ಒಳಜಗಳ, ಅಜ್ಞಾನಗಳು ಅವರಿಗೆ ಸಹಾಯಕವಾದವು. ಬ್ರಿಟಿಷ್ ಆಡಳಿತ ಮತ್ತು ದೌರ್ಜನ್ಯವನ್ನು ಭಾರತದ ಜನ ಅನಿವಾರ್ಯವೆಂಬಂತೆ ಒಪ್ಪಿಕೊಂಡಿತು. ಆದರೆ ಸ್ವಲ್ಪ ನಿಧಾನವಾಗಿ ಅವರು ಆರಂಭಿಸಿದ ಆಧುನಿಕ ಶಿಕ್ಷಣದ ಸೌಲಭ್ಯ ಮತ್ತು ಹೊಸ ವಿಚಾರಗಳಿಂದ ಇಲ್ಲಿನ ಜನರು ಜಾಗೃತರಾದರು. ಒಂದು ಕಡೆ ಬುದ್ಧಿಜೀವಿಗಳು ಗತವೈಭವದ ಸಾಧನೆಗಳನ್ನು ಸಂರಕ್ಷಿಸಿದರೆ, ಇನ್ನೊಂದು ಕಡೆ ವಿದ್ಯಾವಂತರು ತಮ್ಮ ದೇಶದ ವರ್ತಮಾನದ ಅವನತಿಯ ಬಗ್ಗೆ ಚಿಂತಿಸತೊಡಗಿದರು. ಪ್ರತಿಯೊಂದು ಸಂಸ್ಥಾನದಲ್ಲಿಯ ಪ್ರಜೆಗಳು ತಮ್ಮ ಸುತ್ತಮುತ್ತಲಿನ ವಿಚಾರವನ್ನು ಬೆಳೆಯುತ್ತಿರುವ ಇಂಗ್ಲೆಂಡ್ ಮತ್ತು ಪಾಶ್ಚಾತ್ಯ ದೇಶಗಳ ಜೊತೆ ತುಲನೆ ಮಾಡತೊಡಗಿದರು.[೧] ಇದರಿಂದ ದೇಶದಲ್ಲಿ 'ರಾಷ್ಟ್ರೀಯ ಕಾಂಗ್ರೆಸ್ಸಿ'ನ (೧೮೮೫) ಸ್ಥಾಪನೆಯಾಯಿತು. ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗುವ ಪೂರ್ವದಲ್ಲಿ ಅನೇಕ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳು ಭಾರತ ಸ್ವಾತಂತ್ರ್ಯಕ್ಕಾಗಿ ಸತತ ಹೋರಾಟ ನಡೆಸಿದ್ದವು.

ಕ್ರಿ.ಶ.೧೮೮೫ರಲ್ಲಿ ಸ್ಥಾಪನೆಗೊಂಡ ರಾಷ್ಟ್ರೀಯ ಕಾಂಗ್ರೆಸ್ ಕೆಲವು ಉದ್ದೇಶಗಳನ್ನು ಹೊಂದಿತ್ತು. ಅವು: ರಾಷ್ಟ್ರೀಯವಾದಿ ಹಾಗೂ ರಾಜಕೀಯ ಚಿಂತಕರಲ್ಲಿ ಸ್ನೇಹಯುತ ಸಂಬಂಧ ನೆಲೆಗೊಳಿಸುವುದು; ಜಾತಿ, ಮತ, ಪ್ರಾಂತೀಯ ಭೇದವಿಲ್ಲದೆ ದೇಶಪ್ರೇಮಿಗಳಲ್ಲಿ ರಾಷ್ಟ್ರಪ್ರಜ್ಞೆಯ ಐಕ್ಯತೆ ಹಾಗೂ ರಾಷ್ಟ್ರೀಯತೆಯನ್ನು ಬೆಳೆಸುವುದು; ದೇಶದ ಸಮಸ್ಯೆಗಳನ್ನು ಸರಕಾರದ ಮುಂದೆ ತರುವುದು ಹಾಗೂ ನಿವಾರಿಸುವುದಾಗಿತ್ತು. ಜೊತೆಗೆ ಕಾಂಗ್ರೆಸ್ಸಿನ ಉದ್ದೇಶವು ಸಾರ್ವಜನಿಕರಲ್ಲಿ ರಾಷ್ಟ್ರೀಯತ್ವವನ್ನು ಬೆಳೆಸುವುದು, ರಾಷ್ಟ್ರೀಯ ಚಳುವಳಿಯಲ್ಲಿ ಹೆಚ್ಚೆಚ್ಚು ಜನರು ತೊಡಗುವಂತೆ ಮಾಡುವುದು, ಜನರಿಗೆ

ರಾಜಕೀಯ ಶಿಕ್ಷಣವನ್ನು ನೀಡುವುದು ಮತ್ತು ಚಳುವಳಿಯ ಬಗ್ಗೆ ಮನವರಿಕೆ ಮಾಡಿ ಕೊಡುವುದಾಗಿತ್ತು.[೨]

ಭಾರತದಲ್ಲಿ ಸಂಘಟನೆಯನ್ನುಂಟು ಮಾಡಲು ದೇಶದಾದ್ಯಂತ ನಡೆಯುವ ಸಭೆ-ಸಮಾರಂಭಗಳು, ರಾಜಕೀಯ ಭಾಷಣಗಳು, ಸತ್ಯಾಗ್ರಹಗಳು, ಚಳುವಳಿಗಳು ಭಾರತೀಯರನ್ನು ಜಾಗೃತಗೊಳ್ಳುವಂತೆ ಮಾಡಿದವು. ಇಲ್ಲಿನ ಮುಖಂಡರು ಮಹಾ ಅಧಿವೇಶನಗಳನ್ನು ಜರುಗಿಸಿದರು. ಕಾಂಗ್ರೆಸ್ಸಿನ ಮೊದಲನೆಯ ಮಹಾಧಿವೇಶನವು ಕ್ರಿ.ಶ.೧೮೮೫ ಡಿಸೆಂಬರ್ ೨೮ರಂದು ಮುಂಬಯಿಯಲ್ಲಿ ಜರುಗಿತು. ಅಧ್ಯಕ್ಷ ಸ್ಥಾನವನ್ನು ವಹಿಸಿದ ಕಲ್ಕತ್ತೆಯ ಪ್ರಖ್ಯಾತ ಬ್ಯಾರಿಸ್ಟರ್ ಡಬ್ಲ್ಯೂ.ಸಿ.ಬ್ಯಾನರ್ಜಿಯವರು ತಮ್ಮ ಭಾಷಣದಲ್ಲಿ "ಆಂಗ್ಲ ಸಾಮ್ರಾಜ್ಯದ ಹೆಮ್ಮೆಯ ಪೌರರನ್ನಾಗಿ ಭಾರತೀಯರನ್ನು ಪರಿವರ್ತಿಸುವುದು, ಸರಕಾರದ ದೋಷಗಳನ್ನು ಅದರ ಗಮನಕ್ಕೆ ತಂದು, ಪ್ರಜೆಗಳ ಕಲ್ಯಾಣಕ್ಕಾಗಿ ಸರಕಾರಕ್ಕೆ ಸಲಹೆ-ಸೂಚನೆಗಳನ್ನು ನೀಡುವುದು ಮತ್ತು ಭಾರತೀಯರ ನೈತಿಕ ಮಟ್ಟವನ್ನು ಸುಧಾರಿಸುವುದು, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು ಕಾಂಗ್ರೆಸ್ಸಿನ ಗುರಿ" ಎಂದು ಉದ್ಘೋಷಿಸಿದರು. ಈ ಹಿನ್ನೆಲೆಯಲ್ಲಿ ಪ್ರತಿವರ್ಷ ದೇಶದ ನಾನಾ ಕಡೆ ಕಾಂಗ್ರೆಸ್ ಅಧಿವೇಶನಗಳು ಜರುಗುತ್ತಿದ್ದವು. ಇದಕ್ಕೆ ದಾದಾಭಾಯಿ ನವರೋಜಿ, ಫಿರೋಜಶಹಾ ಮೆಹತಾ, ರಾನಡೆ ಮುಂತಾದ ಗಣ್ಯವ್ಯಕ್ತಿಗಳು ಪ್ರೇರಕರಾಗಿದ್ದರು. ಭಾರತದಾದ್ಯಂತ ಸ್ಥಳೀಯರಲ್ಲಿ ರಾಷ್ಟ್ರೀಯತೆಯ ಜಾಗೃತಿಯನ್ನುಂಟು ಮಾಡಿದ ಕಾಂಗ್ರೆಸ್ ಕೆಲವೇ ವರ್ಷಗಳಲ್ಲಿ ಅಭಿವೃದ್ಧಿಗೊಂಡು ಬೃಹತ್ ಸಂಘಟನಾಶಕ್ತಿಯಾಗಿ ಬೆಳೆಯಿತು.[೩] ರಾಷ್ಟ್ರೀಯ ಕಾಂಗ್ರೆಸ್ಸಿನ ಜೊತೆ ನಿಕಟ ಸಂಪರ್ಕವನ್ನು ಹೊಂದಿದ ಎ.ಒ. ಹ್ಯೂಮ್ ಅವರು ಕ್ರಿ.ಶ.೧೮೯೩ರಲ್ಲಿ ಉತ್ತರ ಕರ್ನಾಟಕಕ್ಕೆ ಭೇಟಿಕೊಟ್ಟರು.[೪] ಅವರ ಸಂದರ್ಶನದಿಂದ ಸಾಮಾಜಿಕ ಚಟುವಟಿಕೆಗಳಿಗೆ ಉತ್ತಮ ಚಾಲನೆ ಸಿಕ್ಕಿತು. ಅದೇ ಪ್ರೇರಣೆ ಇಲ್ಲಿಯ ಕೆಲವು ಸಂಸ್ಥಾನಗಳ ಮೇಲೆ ಆಗಿರುವುಂತೆ ಜಮಖಂಡಿ ಸಂಸ್ಥಾನದ ಮೇಲೆಯೂ ಬೀರಿರಬೇಕು.

ಇದೇ ರೀತಿ ಸ್ವಾಮಿ ವಿವೇಕಾನಂದರ ಭಾಷಣ ಮತ್ತು ಲೇಖನಗಳು ಜನರ ಮನಸ್ಸಿನ ಮೇಲೆ ಪರಿಣಾಮ ಬೀರಿ ಜನರಿಗೆ ನೈತಿಕ ಬೆಂಬಲವೂ ದೊರೆಯಿತು. ವಿವೇಕಾನಂದರ ಬೆಳಗಾವಿಯ ಸಂದರ್ಶನವು ಜಮಖಂಡಿ ಸಂಸ್ಥಾನದ ಜನರ ಮೇಲೆ ಪ್ರಭಾವ ಬೀರಿತು. ೧೯೦೬ನೆಯ ವರ್ಷ ಭಾರತದ ರಾಷ್ಟ್ರೀಯ ಚಳುವಳಿಯ ಮತ್ತು ರಾಷ್ಟ್ರೀಯ ಕಾಂಗ್ರೆಸ್ಸಿನ ಇತಿಹಾಸದಲ್ಲಿ ನಿರ್ಣಾಯಕ ವರ್ಷವಾಗಿದ್ದಿತು. ೧೮೮೫ರಿಂದ ೧೯೦೫ರವರೆಗೆ ವಿಸ್ತರಿಸಿದ್ದ ಮಂದಗಾಮಿ ರಾಷ್ಟ್ರೀಯತೆಯ ಯುಗವು ಮುಕ್ತಾಯವಾಗಿ ೧೯೦೬ರಲ್ಲಿ ತೀವ್ರಗಾಮಿ ರಾಷ್ಟ್ರೀಯತೆಯ ಯುಗವು ಪ್ರಾರಂಭವಾಯಿತು. ಹೊಸ ಗುರಿ ಮತ್ತು ಹೊಸ ಆಶೋತ್ತರಗಳು ರಾಷ್ಟ್ರೀಯ ಚಳುವಳಿಗೆ ಹೊಸ ರೂಪ ಮತ್ತು ಹೊಸ ಚೈತನ್ಯ ನೀಡಿದವು.

ತ್ರಿಮೂರ್ತಿಗಳಾದ 'ಲಾಲ, ಬಾಲ, ಪಾಲ'ರು ಉತ್ತರ ಕರ್ನಾಟಕ ಚಳುವಳಿಗೆ ಪ್ರೇರಕರು. 'ಪಂಜಾಬಿನ ಸಿಂಹ' ಎಂದೇ ಹೆಸರಾದ ಲಾಲಾಲಜಪತರಾಯರು ಒಬ್ಬ ಅಪ್ರತಿಮ ದೇಶಭಕ್ತ, ಸ್ವಾತಂತ್ರ್ಯ

ಹೋರಾಟಗಾರ ಹಾಗೂ ನಿಸ್ವಾರ್ಥ ಜನಸೇವಕರು. ಕಾನೂನು ಪದವಿ ಪಡೆದ ಇವರು ಆರ್ಯಸಮಾಜದ ಕಾರ್ಯಕರ್ತರಾಗಿ ಲಾಹೋರಿನಲ್ಲಿ ಡಿಎವಿ ಕಾಲೇಜನ್ನು ಸ್ಥಾಪಿಸುವ ಮೂಲಕ ರಾಷ್ಟ್ರಭಕ್ತಿ ಮೂಡಿಸಿದರು. ಲಾಲರು ಉತ್ತಮ ಲೇಖಕರೂ ಆಗಿದ್ದು, 'ದಿ ಆರ್ಯ ಸಮಾಜ', 'ನನ್ನ ಗಡಿಪಾರಿನ ಕತೆ', 'ಇಂಗ್ಲಿಷ್ ಡೆಪ್ತ ಟು ಇಂಡಿಯಾ', 'ಅನ್‌ಹ್ಯಾಪಿ ಇಂಡಿಯಾ' ಕೃತಿಗಳನ್ನು ರಚಿಸಿದರು.[೫]

'ಲೋಕಮಾನ್ಯ' ಎಂದೇ ಜನಪ್ರಿಯರಾದ ಬಾಲಗಂಗಾಧರ ತಿಲಕರು ತೀವ್ರಗಾಮಿ ಪಂಥದ ಅತ್ಯುತ್ತಮ ನಾಯಕರು. ತಿಲಕರು ಅಪ್ರತಿಮ ದೇಶಭಕ್ತರು, ಸುಧಾರಕರು ಮತ್ತು ಸ್ವಾತಂತ್ರ್ಯ ಹೋರಾಟಗಾರರು ಆಗಿದ್ದು, ನವಭಾರತದ ನಿರ್ಮಾಪಕರಲ್ಲಿ ಒಬ್ಬರಾಗಿದ್ದಾರೆ. ಪುಣೆಯ 'ಡೆಕ್ಕನ್ ಎಜುಕೇಶನ್ ಸೊಸಾಯಟಿ'ಯ ಸ್ಥಾಪಕರು. 'ಕೇಸರಿ' ಮತ್ತು 'ಮರಾಠ' ಪತ್ರಿಕೆಗಳನ್ನು ಆರಂಭಿಸಿ ಜನತೆಯಲ್ಲಿ ರಾಷ್ಟ್ರಭಕ್ತಿ ತುಂಬಿದ್ದಲ್ಲದೆ, ರಾಜಕೀಯ ಶಿಕ್ಷಣ ನೀಡಿದರು. 'ಬ್ರಿಟಿಷ್ ಭಾರತದ ಅಶಾಂತಿಯ ಜನಕ', 'ಮಹಾರಾಷ್ಟ್ರದ ಅನಭಿಷಿಕ್ತ ದೊರೆ' ಎಂದು ನಾಮವೆತ್ತ ತಿಲಕರು 'ಸ್ವರಾಜ್ಯವೇ ನನ್ನ ಆಜನ್ಮಸಿದ್ಧ ಹಕ್ಕು. ಅದನ್ನು ನಾನು ಪಡೆದೇ ತೀರುತ್ತೇನೆ.' ಎಂದು ಉದ್ಘೋಷಿಸಿದರು. ಬಂಗಾಳದ ವಿಭಜನೆಯನ್ನು ವಿರೋಧಿಸಿ ಸ್ವದೇಶಿ ಚಳುವಳಿಯ ಹರಿಕಾರರಾದ ತಿಲಕರು ನಿರ್ಭಯವಾಗಿ ವಿದೇಶಿ ವಸ್ತುಗಳನ್ನು ಸುಡುವಂತೆ ಕರೆನೀಡಿ ಸರಕಾರದ ಕೆಂಗಣ್ಣಿಗೆ ಗುರಿಯಾದರು. ತಿಲಕರು ಅನಿಬೆಸೆಂಟ್‌ರ ಜೊತೆ ಸೇರಿ 'ಹೋಂರೂಲ್ ಚಳುವಳಿ'ಯನ್ನು ಪ್ರಾರಂಭಿಸಿದರು. ಸರಕಾರದ ದಬ್ಬಾಳಿಕೆಯನ್ನು ತೀವ್ರವಾಗಿ ಖಂಡಿಸಿದ ತಿಲಕರು ತಮ್ಮ ಭಾಷಣ ಮತ್ತು ಲೇಖನಗಳ ಮೂಲಕ ಭಾರತೀಯರಲ್ಲಿ ಹೊಸ ಜಾಗೃತಿ ಮೂಡಿಸಿದರು.[೬] ಉತ್ತರ ಕರ್ನಾಟಕದ ಅದರಲ್ಲಿಯೂ ಬನಹಟ್ಟಿ-ರಬಕವಿ, ಬೆಳಗಾವಿಗಳಂಥ ಗಡಿಪ್ರದೇಶದ ನಗರಗಳ ಮೇಲೆ ಇವರು ದಟ್ಟ ಪ್ರಭಾವ ಬೀರಿದರು.

'ಬಂಗಾಳದ ರಾಷ್ಟ್ರೀಯತೆಯ ಪ್ರವಾದಿ' ಎಂದೇ ಕರೆಯಲಾಗಿರುವ ಬಿಪಿನ್ ಚಂದ್ರಪಾಲರು ಪ್ರಸಿದ್ಧ ಪತ್ರಕರ್ತ, ದೇಶಭಕ್ತ ಹಾಗೂ ವಾಗ್ಮಿಯೂ ಆಗಿದ್ದರು. ಅಲಹಾಬಾದಿನ 'ಇಂಡಿಪೆಂಡೆಂಟ್' ಲಾಹೋರಿನ 'ದಿ ಟ್ರಿಬ್ಯೂನ್' ಪತ್ರಿಕೆಗಳ ಸಂಪಾದಕರಾಗಿದ್ದರು. ಬ್ರಹ್ಮ ಸಮಾಜದ ಕಾರ್ಯಕರ್ತರಾಗಿ ಸೇವೆ ಮಾಡಿ ವಿಧವಾವಿವಾಹದ ಹೋರಾಟಗಾರರಾಗಿ, ಸ್ವತಃ ವಿಧವೆಯನ್ನು ವಿವಾಹವಾದರು. ಸ್ವರಾಜ್ಯವಾದಿಗಳಾದ ಇವರು ಬಂಗಾಳ ವಿಭಜನೆಯನ್ನು ವಿರೋಧಿಸಿ, ತಿಲಕರ ಜೊತೆ ಸೇರಿ ಸ್ವದೇಶಿ ಚಳುವಳಿಯಲ್ಲಿ ಭಾಗಿಯಾದರು. ರಾಷ್ಟ್ರೀಯ ಶಿಕ್ಷಣತತ್ವಗಳ ಪರ ಪ್ರಚಾರ ಮಾಡಿದರು.[೭]

ಈ ಮೂವರ ಪರಿಣಾಮಕಾರಿ ಭಾಷಣಗಳು ಮತ್ತು ಮರಾಠಿಯ 'ಕೇಸರಿ' ಪತ್ರಿಕೆಯ ಲೇಖನಗಳು ಜನರ ಮೇಲೆ ಪರಿಣಾಮಕಾರಿ ಪ್ರಭಾವ ಬೀರಿದವು. ತ್ಯಾಗ ಮತ್ತು ಪ್ರತಿಭಟನೆಗಳು ಸ್ವರಾಜ್ಯವನ್ನು ಪಡೆಯಲು ಭಾರತೀಯರ ಮೂಲಹಕ್ಕುಗಳಾದವು. ಸ್ವದೇಶಿ ಮತ್ತು ಸ್ವರಾಜ್ಯ ಚಳುವಳಿಯು ವಿಜಾಪುರ ಮತ್ತು ಸ್ಥಳೀಯ ಸಂಸ್ಥಾನಗಳಲ್ಲಿ ಪಸರಿಸಿತು. ಇದನ್ನು ಕಾರಣ ಮಾಡಿಕೊಂಡು ಜಮಖಂಡಿಯ ಯುವಕರು ಉತ್ಸಾಹದಿಂದ ಹೆಚ್ಚಿನ ಶಿಕ್ಷಣ ಪಡೆಯಲು ಪುಣೆ ಮತ್ತು ಮುಂಬಯಿಗೆ ಹೋಗಲು ಬಯಸಿದರು.

ತೃತೀಯ ಹಂತವನ್ನು 'ಗಾಂಧಿಯುಗ'ವೆಂದು ಬಣ್ಣಿಸಲಾಗುತ್ತದೆ. ಏಕೆಂದರೆ ಗಾಂಧಿಯವರು ಕಾಂಗ್ರೆಸ್‌ನ್ನು ಪ್ರವೇಶಿಸಿದ ಮೇಲೆ ರಾಜಕೀಯ ಸ್ವಾತಂತ್ರ್ಯಕ್ಕೆ ಒಂದು ಹೊಸ ರೂಪ ಬಂದಿತು. ಜಗತ್ತಿಗೆ ಗಾಂಧಿಯವರು ಕೊಟ್ಟ ಎಲ್ಲಕ್ಕೂ ಹೆಚ್ಚಿನ ಮೌಲಿಕ ಕಾಣಿಕೆಯೆಂದರೆ 'ಸತ್ಯಾಗ್ರಹ'. ಶಾಂತಿಯುತ ಸತ್ಯಾಗ್ರಹದಿಂದಲೇ ದೇಶಾದ್ಯಂತ ಕಾಂಗ್ರೆಸ್ ಬಹುದೊಡ್ಡ ಸಂಸ್ಥೆಯಾಗಿ ಬೆಳೆಯಿತು. ಕ್ರಿ.ಶ.೧೯೨೧ರಿಂದ ಅಸಹಕಾರ ಚಳುವಳಿಯಿಂದ ಪ್ರಾರಂಭಗೊಂಡು ಬಾರ್ಡೋಲಿ ಚಳುವಳಿ, ಸ್ವರಾಜ್ಯ ಪಕ್ಷ ಸ್ಥಾಪನೆ, ಸೈಮನ್ ಕಮೀಷನ್, ದಂಡಿಯಾತ್ರೆ, ದುಂಡುಮೇಜಿನ ಸಭೆ, ಕಾಂಗ್ರೆಸ್ ಮಂತ್ರಿ ಮಂಡಲಗಳು, ಕ್ವಿಟ್ ಇಂಡಿಯಾ ಚಳುವಳಿ ಮತ್ತು ಒಟ್ಟು ಸ್ವಾತಂತ್ರ್ಯ ಸಂಗ್ರಾಮ ಹಂತವನ್ನು ಒಳಗೊಂಡ ಈ ಗಾಂಧಿಯುಗವು ಆಧುನಿಕ ಭಾರತದ ಇತಿಹಾಸದಲ್ಲಿ ಮಹತ್ವದ ಘಟ್ಟವೇ ಆಗಿದೆ.

ಇದೇ ಅವಧಿಯಲ್ಲಿ ಹೊಸದಾಗಿ ಸ್ಥಾಪಿತವಾದ 'ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿ'ಯ ಕೇಂದ್ರ ಕಾರ್ಯಸ್ಥಾನವು ಗದಗ ಎಂದು ಒಪ್ಪಿತವಾಯಿತು. ಕನ್ನಡ ಮಾತನಾಡುವಲ್ಲೆಲ್ಲ, ಕರ್ನಾಟಕ ಪ್ರಾಂತ್ಯಕ್ಕೆ ದೊರೆತ ರಾಜಕೀಯ ಪ್ರತಿನಿಧಿತ್ವದಿಂದಾಗಿ ಹೊಸ ಉತ್ಸಾಹ ಮೂಡಿತು. ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕರ್ನಾಟಕ ಸಾಹಿತ್ಯ ಪರಿಷತ್ತುಗಳ ಕಾರ್ಯವೈಖರಿಯು ಹುಮ್ಮಸ್ಸಿನಿಂದ ಹೆಚ್ಚಾಯಿತು. ಶಿಕ್ಷಣ ಸಂಸ್ಥೆಗಳು ಬೆಳೆಯಲಾರಂಭಿಸಿದವು. ಕನ್ನಡಿಗರು ಒಂದಾಗಿ ತಮ್ಮತಮ್ಮಲ್ಲಿ ಸಭೆ–ಸಮಾರಂಭಗಳನ್ನು ಏರ್ಪಡಿಸುವುದರೊಂದಿಗೆ ರಾಜಕೀಯ – ರಾಜಕೀಯೇತರ ಸಭೆಗಳು ಸೌಹಾರ್ದಯುತವಾಗಿ ಹೆಚ್ಚುಹೆಚ್ಚಾಗಿ ನಡೆಯಲಾರಂಭಿಸಿದವು. ಭಗಿನಿ ಮಂಡಲ ಸಮ್ಮೇಲನ, ಖಾದಿ ಸಮ್ಮೇಳನ, ಸಾಹಿತ್ಯ ಸಮ್ಮೇಳನ, ಕರ್ನಾಟಕ ಸೇವಾದಳ ಸಮ್ಮೇಳನ, ಪತ್ರಕರ್ತರ ಸಮ್ಮೇಳನ, ಆಯುರ್ವೇದ ಸಮ್ಮೇಳನ ಹೀಗೆ ಕರ್ನಾಟಕದ ಜನತೆಯನ್ನು ಒಂದೆಡೆ ಸೇರುವಂತೆ ಮಾಡಲು ಅನೇಕ ರೀತಿಯ ಸಮ್ಮೇಳನಗಳು ನಡೆಯುವಂತಾದವು. ಕನ್ನಡಿಗರು ತಮ್ಮ ಭಾವನಾತ್ಮಕ ಸಂಬಂಧಗಳನ್ನು ಗಟ್ಟಿಗೊಳಿಸಿಕೊಂಡು ರಾಜಕೀಯ ಮತ್ತು ಆಡಳಿತಾತ್ಮಕವಾಗಿ ಒಂದಾಗಲು ಬಯಸುತ್ತಿದ್ದರು. ಕನ್ನಡ ಗ್ರಂಥಗಳು ಮತ್ತು ಪತ್ರಿಕೆಗಳ ಪ್ರಕಟನೆಗೆ ಪ್ರೋತ್ಸಾಹ ದೊರೆತ ಕಾರಣ, ಹಲವಾರು ಗ್ರಂಥಗಳು ಪ್ರಕಟಗೊಂಡವು. ಅನೇಕ ಪತ್ರಿಕೆಗಳು ಜನ್ಮ ತಾಳಿದವು. ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲದೆ ಬಳ್ಳಾರಿ, ವಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲೂ ಕನ್ನಡ ಪರವಾದ ಮನೋಭೂಮಿಕೆ ಸಿದ್ಧವಾಗತೊಡಗಿತು.[೮]

ಈ ಕಾಲಘಟ್ಟದಲ್ಲಿ ಅನೇಕ ಶ್ರೀಮಂತ ಹಾಗೂ ದೇಶಪ್ರೇಮವುಳ್ಳ ಕುಟುಂಬಗಳು ದೇಶಸೇವೆಗೆ ತಮ್ಮನ್ನು ಅರ್ಪಿಸಿಕೊಂಡವು. ಆ ನಿಟ್ಟಿನಲ್ಲಿ ಚಿಕ್ಕೋಡಿ ಕುಟುಂಬವೂ ಒಂದಾಗಿದೆ. ಚಿಕ್ಕೋಡಿ ಕುಟುಂಬದ ಮಹನೀಯರು ಸಂಸ್ಥಾನಿಕರ ಅಭಿಮಾನಿಗಳಾಗಿ ಜೊತೆಗೆ ಬ್ರಿಟಿಷ್ ಆಡಳಿತದ ಜೊತೆಗೆ ಹೊಂದಾಣಿಕೆ ಮಾಡಿಕೊಂಡು, ಜೊತೆಜೊತೆಯಾಗಿಯೇ ಸ್ವಾತಂತ್ರ್ಯ ಸಂಗ್ರಾಮ ಮತ್ತು ಕರ್ನಾಟಕ ಏಕೀಕರಣಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಜೊತೆಗೆ ಯುವಜನಾಂಗಕ್ಕೆ ಪ್ರೇರಕಶಕ್ತಿಯಾದರು. ಇಲ್ಲಿ ರಾಷ್ಟ್ರೀಯ

ಪ್ರೇರಣೆ-ಪರಿಸರ ಒಂದು ಮುಖ್ಯ ಕಾರಣವಾದಂತೆ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಇತ್ಯಾದಿ ಸಂಗತಿಗಳೂ ಅಷ್ಟೇ ಪ್ರಮುಖವಾಗಿ ತೋರುತ್ತವೆ.

೨.೨. ರಾಜಕೀಯ ಪರಿಸರ:

೧೮೫೭-೫೮ರಲ್ಲಿ ನಡೆದ ಭಾರತೀಯರ ಮೊಟ್ಟಮೊದಲ ಸಂಗ್ರಾಮದಲ್ಲಿ ವಿಜಯಿಗಳಾದ ಬ್ರಿಟಿಷರು ಪ್ರತಿಯೊಂದು ಬಗೆಯಲ್ಲಿಯೂ ಭಾರತದ ಸಂಪೂರ್ಣ ಒಡೆಯರಾದರು. ಆಡಳಿತ ವಿಭಾಗಗಳನ್ನು ಮಾಡಿ ರಾಜ್ಯಭಾರ ನಡೆಸಿದರು. ಪ್ರಜೆಗಳ ದೃಷ್ಟಿಯಿಂದ, ಅನುಕೂಲತೆಯ ದೃಷ್ಟಿಯಿಂದ, ತರ್ಕದ ಅಥವಾ ಕಾರ್ಯಕ್ಷಮತೆಯ ದೃಷ್ಟಿಯಿಂದ, ಅಥವಾ ಯಾವುದೇ ತರ್ಕದ ದೃಷ್ಟಿಯಿಂದ, ಆಡಳಿತದ ಆ ವಿಭಾಗಗಳು ಸಮಂಜಸವಾದವುಗಳಾಗಿರಲಿಲ್ಲ. ಕೈಗೆ ಬಂದ ಹಾಗೆಲ್ಲ ದೇಶದ ಭಾಗಗಳನ್ನು ಗುಂಪುಗುಂಪು ಮಾಡುತ್ತಾ ಅವರು ಮುಂದೆ ಸಾಗಿದರು. ಕನ್ನಡ ನಾಡಿನ ಆಡಳಿತದ ವಿಷಯಕ್ಕೆ ಬಂದಾಗಲೂ ಕೂಡ ಅದೇ ಸ್ಥಿತಿಯನ್ನು ಕಾಣುತ್ತೇವೆ. ಹಿಂದೆ ಕಾವೇರಿಯಿಂದ ಗೋದಾವರಿಯ ವರೆಗೆ ಹಬ್ಬಿ ಒಂದೆನಿಸಿಕೊಂಡಿದ್ದ ಕನ್ನಡನಾಡು, ಮುಸಲ್ಮಾನ, ಮರಾಠಾ-ಪೇಶ್ವೆ ಆಡಳಿತದಲ್ಲಿ ಹಲವು ಸಂಸ್ಥಾನಗಳಾಗಿ ಬಳಿಕ ಬ್ರಿಟಿಷ್ ಆಡಳಿತದಲ್ಲಿ ೨೦ ಘಟಕಗಳಾಗಿ ಹಂಚಿಹೋಯಿತು. ಮೈಸೂರು ಸಂಸ್ಥಾನವನ್ನು ಹೊರತುಪಡಿಸಿ ಉಳಿದ ಹತ್ತೊಂಬತ್ತು ಘಟಕಗಳು ಈ ಕೆಳಗಿನಂತಿದ್ದವು.

೧. ಮದರಾಸ್ ಪ್ರಾಂತ್ಯ-ದಕ್ಷಿಣ ಕನ್ನಡ, ಬಳ್ಳಾರಿ ಮತ್ತು ನೀಲಗಿರಿ ಜಿಲ್ಲೆಗಳು ಕೊಳ್ಳೇಗಾಲ, ಹೊಸೂರು ಮತ್ತು ಮಡಕಶಿರಾ ತಾಲ್ಲೂಕುಗಳು

೨. ಮುಂಬಯಿ ಪ್ರಾಂತ್ಯ-ಉತ್ತರ ಕನ್ನಡ, ಬೆಳಗಾವಿ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳು ಮತ್ತು ಸೊಲ್ಲಾಪುರ ಮಂಗಳವೇಢೆ ಪ್ರಾಂತ್ಯಗಳು

೩. ಹೈದರಾಬಾದ ಸಂಸ್ಥಾನ-ಗುಲ್ಬರ್ಗ, ಬೀದರ್ ಮತ್ತು ರಾಯಚೂರು ಜಿಲ್ಲೆಗಳು

೪. ಕೊಡಗು ಜಿಲ್ಲೆ ೫. ಕೊಲ್ಲಾಪುರ ಸಂಸ್ಥಾನ ೬. ಸಾಂಗಲಿ ಸಂಸ್ಥಾನ-ತೇರದಾಳ, ಶಹಾಪುರ, ದೊಡ್ಡವಾಡ, ಶಿರಹಟ್ಟಿ ಪ್ರದೇಶಗಳು ೭. ಮೀರಜ್ ಸಂಸ್ಥಾನ ೮. ಕಿರಿಮೀರಜ್ ಸಂಸ್ಥಾನ ೯. ಹಿರಿಕುರಂದವಾಡ ಸಂಸ್ಥಾನ ೧೦. ಕಿರಿಕುರುಂದವಾಡ ಸಂಸ್ಥಾನ ೧೧. ಜಮಖಂಡಿ ಸಂಸ್ಥಾನ ೧೨. ಮುಧೋಳ ಸಂಸ್ಥಾನ ೧೩. ಜತ್ತ ಸಂಸ್ಥಾನ ೧೪. ಅಕ್ಕಲಕೋಟೆ ೧೫. ಔಂದ್ ಸಂಸ್ಥಾನ ೧೬. ರಾಮದುರ್ಗ ಸಂಸ್ಥಾನ ೧೭. ಸೊಂಡೂರು ಸಂಸ್ಥಾನ ೧೮. ಸವಣೂರು ಸಂಸ್ಥಾನ ೧೯. ಬೆಂಗಳೂರ, ಬೆಳಗಾವಿ ಮತ್ತು ಬಳ್ಳಾರಿ ದಂಡು ಪ್ರದೇಶಗಳು[1]

೧೮೧೮ರ ಖಡಕಿ ಯುದ್ಧದಲ್ಲಿ ಪೇಶ್ವೆಯವರು ಸೋತ ನಂತರ ಉತ್ತರ ಕರ್ನಾಟಕವು ಬ್ರಿಟಿಷರ ವಶವಾಯಿತು. ಆದರೆ ಇದನ್ನು ಆಗಲೇ ಮಹಾರಾಷ್ಟ್ರದ ಪಟವರ್ಧನ, ಭಾವೆ ಮನೆತನದವರು ಹಂಚಿಕೊಂಡಿದ್ದರು. ಅದು ಎಷ್ಟರಮಟ್ಟಿಗೆಂದರೆ ಕೇವಲ ಹನ್ನೆರಡು ಮೈಲಿ ಅಂತರದಲ್ಲಿದ್ದ ಲಕ್ಷ್ಮೇಶ್ವರವು ಮಿರಜ ಸಂಸ್ಥಾನಕ್ಕೆ ಸೇರಿದರೆ, ಶಿರಹಟ್ಟಿಯು ಸಾಂಗ್ಲಿ ಸಂಸ್ಥಾನಕ್ಕೆ ಒಳಪಟ್ಟಿತ್ತು. ಇದೇ ರೀತಿ ಗುಡಗೇರಿ, ಕುಂದಗೋಳ ನಡುವಿನ ಅಂತರ ಕೇವಲ ಎಂಟು ಮೈಲು. ಆದರೆ ಗುಡಗೇರಿ ಮಿರಜ ಸಂಸ್ಥಾನಕ್ಕೆ

ಸೇರಿದರೆ, ಕುಂವಗೋಳ ಜಮಖಂಡಿ ಸಂಸ್ಥಾನಕ್ಕೆ ಒಳಪಟ್ಟಿತ್ತು. ಜಮಖಂಡಿಯು ಪಟವರ್ಧನ ಮನೆತನಕ್ಕೆ ಸೇರಿದರೆ, ಹತ್ತಿರದ ಮುಧೋಳ ಘೋರ್ಪಡೆ ಮನೆತನಕ್ಕೆ ಸೇರಿತ್ತು. ಅಷ್ಟೇಏಕೆ, ಹುಬ್ಬಳ್ಳಿಯ ಗಣೇಶಪೇಟೆಯ ಭಾಗ ಸಾಂಗ್ಲಿ ಸಂಸ್ಥಾನಕ್ಕೆ ಸೇರಿತ್ತೆಂದು ಹೇಳುತ್ತಾರೆ.[೧೦] ರಬಕವಿ–ಬನಹಟ್ಟಿ ಊರುಗಳು ಮಧ್ಯದ ಒಂದು ಹಳ್ಳದಿಂದ ಎರಡಾಗಿವೆ. ಜೋಡಿಯಾಗಿ ಕೂಡಿಕೊಂಡಿರುವ ಈ ಊರುಗಳಲ್ಲಿ ರಬಕವಿಯು ಸಾಂಗಲಿ ಸಂಸ್ಥಾನಕ್ಕೆ ಸೇರಿದ್ದರೆ, ಬನಹಟ್ಟಿಯು ಜಮಖಂಡಿ ಸಂಸ್ಥಾನಕ್ಕೆ ಸೇರಿತ್ತು.

೨.೩. ಸಾಮಾಜಿಕ–ಧಾರ್ಮಿಕ ಪರಿಸರ:

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಧರ್ಮ ಮತ್ತು ಸಮಾಜಗಳು ಒಂದೇ ನಾಣ್ಯದ ಎರಡು ಮುಖಗಳಂತೆ ಬೆಳೆದುಬಂದಿವೆ. ಮೊದಮೊದಲು ವೃತ್ತಿಗಳಿಂದ ಬಂದ ಜಾತಿವ್ಯವಸ್ಥೆಯು ಅಂಥ ಗಂಭೀರ ಸಮಸ್ಯೆಯಾಗಿರಲಿಲ್ಲ. ಆದರೆ ಮಧ್ಯಯುಗೀನ ಕಾಲಕ್ಕೆ ಬಂದಾಗ ವರ್ಣ, ಜಾತಿಭೇದಗಳು ಭುಗಿಲೆದ್ದು ಸಮಾಜವನ್ನು ಅವ್ಯವಸ್ಥೆಯ ಎಡೆಗೆ ನೂಕಿದವು. ಧರ್ಮದ ಹೆಸರಿನಲ್ಲಿ ಅನೇಕ ಅವ್ಯವಹಾರ ಮೂಢನಂಬಿಕೆ, ಕಂದಾಚಾರಗಳು ತಲೆದೋರಿದ್ದವು. ಜಾತಿವ್ಯವಸ್ಥೆಯ ದಟ್ಟ ಪ್ರಭಾವದಿಂದ ಸಮಾಜದಲ್ಲಿ ಒಳಪಂಗಡಗಳು ಹುಟ್ಟಿಕೊಳ್ಳಲಾರಂಭಿಸಿದವು. ಕೆಳವರ್ಗದವರ ಸ್ಥಿತಿಯಂತೂ ತೀರ ಹದಗೆಟ್ಟಿತ್ತು. ಊರ ಒಳಗೆ ಇರಲು ಅವರಿಗೆ ಪ್ರವೇಶ ನಿಷಿದ್ಧವಾಗಿತ್ತು. ಶಿಕ್ಷಣದ ಸೌಲಭ್ಯದಿಂದಲೂ ವಂಚಿತರಾಗಿದ್ದರು.

ಪುರುಷಪ್ರಧಾನವಾದ ಸಮಾಜದಲ್ಲಿ ಸ್ತ್ರೀಯರ ಸ್ಥಿತಿ ಚಿಂತಾಜನಕವಾಗಿತ್ತು. ಯಾವುದೇ ವರ್ಗದ ಮಹಿಳೆಯ ಸ್ಥಾನಮಾನ ಅಷ್ಟೊಂದು ಸುಗಮವಾಗಿರಲಿಲ್ಲ. ಧಾರ್ಮಿಕ, ಶೈಕ್ಷಣಿಕ, ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಯಾವುದೇ ಸ್ಥಾನಮಾನವಿರಲಿಲ್ಲ. ಧರ್ಮದ ಹೆಸರಿನಲ್ಲಿ ಅನೇಕ ಅನಿಷ್ಟಪದ್ಧತಿಗಳನ್ನು ಹೆಣ್ಣಿನ ತಲೆಗೆ ಕಟ್ಟಿದ್ದರು. ವಿಧವಾಮುಂಡನ, ದೇವದಾಸಿಯಂಥ ಪದ್ಧತಿಗಳು ಸಂಪ್ರದಾಯದ ಹೆಸರಿನಲ್ಲಿ ಸಹಜವಾಗಿ ಬೆಳೆದುಬಂದಿದ್ದವು. ಇವುಗಳಲ್ಲದೆ ಧರ್ಮದ ಹೆಸರಿನಲ್ಲಿ ಪ್ರಾಣಿಬಲಿಗಳಂತ ಕಂದಾಚಾರಗಳು ಅಸ್ತಿತ್ವದಲ್ಲಿದ್ದವು. ಹೀಗಾಗಿ ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಕಂದಾಚಾರ, ಅನಿಷ್ಟಪದ್ಧತಿಗಳು ಎಲ್ಲ ವರ್ಗದ ಜನರಿಗೆ ಭಾರವಾಗಿ, ಅವುಗಳನ್ನು ಒಪ್ಪಿಕೊಳ್ಳಲು ಆಗದೆ, ಬಿಡಲು ಆಗದೆ ಡೋಲಾಯಮಾನ ಸ್ಥಿತಿಯಲ್ಲಿ ನರಳುವಂತಾಯಿತು. ಭಾರತದಲ್ಲಿದ್ದ ಅಂದಿನ ಯಾವುದೇ ಮತಧರ್ಮಗಳು ಇವುಗಳನ್ನು ಸಮಸ್ಯೆ ಎಂದು ಗಮನಿಸಲಿಲ್ಲ. ಇದೇ ಸಂದರ್ಭದಲ್ಲಿ ಭಾರತವನ್ನು ಪ್ರವೇಶಿಸಿದ ಕ್ರೈಸ್ತಧರ್ಮಿಯರು ಇಂಥ ಆಚರಣೆಗಳನ್ನು ಸುಧಾರಣಾ ಕಣ್ಣಿನಿಂದ ನೋಡಲು ಆರಂಭಿಸಿ ಇಲ್ಲಿಯ ಸಮಾಜ ಚಿಂತಕರ ಒಳಗಣ್ಣನ್ನು ತೆರೆಸಿದರು.

೧೯ನೆಯ ಶತಮಾನದಲ್ಲಿ ಅನೇಕ ಸಮಾಜಸುಧಾರಕರು ಜನ್ಮತಾಳಿ, ತಮ್ಮದೇ ಆದ ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸಿ, ಅವುಗಳ ಮುಖಾಂತರ ಸುಧಾರಣೆಗೆ ತೊಡಗಿದರು. ರಾಜಾರಾಮ ಮೋಹನರಾಯರ ಬ್ರಹ್ಮಸಮಾಜ, ದಯಾನಂದ ಸರಸ್ವತಿಯವರ ಆರ್ಯಸಮಾಜ, ಥಿಯೋಸಾಫಿಕಲ್ ಸೊಸೈಟಿ, ಸ್ವಾಮಿ ವಿವೇಕಾನಂದರ ರಾಮಕೃಷ್ಣ ಆಶ್ರಮ, ರಾಧಾಕಾಂತ್‌ದೇವರ ಧರ್ಮಸಭಾ, ಬೆಹರಾಮ್‌ಜೀಯವರ ಸೇವಾಸದನ, ಗೋಪಾಲಕೃಷ್ಣ ಗೋಖಲೆಯವರ ಭಾರತೀಯ ಸೇವಾಸಂಘ,

ಎಂ.ಜಿ.ರಾನಡೆ ಅವರ ಸತ್ಯಶೋಧಕ ಮಂಡಲ್ ಹೀಗೆ ಅನೇಕ ಸಂಸ್ಥೆಗಳು ಹುಟ್ಟಿಕೊಂಡವು. ರಾಜಾರಾಮ ಮೋಹನರಾಯರು ಸಮಾಜದಲ್ಲಿದ್ದ ಅನಿಷ್ಟಪದ್ಧತಿಗಳನ್ನು ನಿರ್ಮೂಲನ ಮಾಡಲು ನಿರತರಾದರು. ಸ್ವಾಮಿ ವಿವೇಕಾನಂದರು ಹಿಂದೂಧರ್ಮದ ಆಧ್ಯಾತ್ಮಿಕತೆಯನ್ನು ಉನ್ನತ ಮಟ್ಟಕ್ಕೇರಿಸಿದರು. ಈ ಶತಮಾನದ ಎಲ್ಲ ಧರ್ಮಸುಧಾರಕರೂ ಸಾಮಾಜಿಕ ಪಿಡುಗಗಳ ವಿರುದ್ಧವಾಗಿ ಯುದ್ಧವನ್ನೇ ಸಾರಿದರು. ಧರ್ಮಸುಧಾರಕರ ಎಲ್ಲ ಸಂಸ್ಥೆಗಳು ಜಾತಿಪದ್ಧತಿ, ಶಿಶುಹತ್ಯೆ, ಅಸ್ಪೃಶ್ಯತೆ, ಅಪ್ರಾಪ್ತ ವಯಸ್ಕ ಹೆಣ್ಣುಮಕ್ಕಳೊಂದಿಗೆ ಮದುವೆ ಮಾಡಿಕೊಳ್ಳುವುದು ಮೊದಲಾದ ರೂಢಿಗಳ ವಿರುದ್ಧವಾಗಿ ಬೋಧಿಸಿದರು. ಈ ಅನಿಷ್ಟ ಪದ್ಧತಿಗಳನ್ನು ನಾಯಕರುಗಳು ಬಹಿರಂಗವಾಗಿ ಖಂಡಿಸಿದರಲ್ಲದೆ, ಅವುಗಳ ವಿರುದ್ಧವಾಗಿ ಕ್ರಮಗಳನ್ನು ಕೈಗೊಂಡರು. ಅಂತರ್ಜಾತಿಯ ವಿವಾಹಗಳನ್ನು, ಸಹಭೋಜನವನ್ನು ಪ್ರೋತ್ಸಾಹಿಸಿದರು. ಹೆಣ್ಣುಮಕ್ಕಳಿಗಾಗಿ ಶಾಲೆಗಳನ್ನು ತೆರೆದರು. ಪುರುಷರೊಂದಿಗೆ ಮಹಿಳೆಯರ ಸಮಾನತೆಯನ್ನು ಒತ್ತಿ ಹೇಳಿದರು. ಇದರಿಂದ ಅನ್ಯಧರ್ಮಕ್ಕೆ ಮತಾಂತರಗೊಳ್ಳುತ್ತಿರುವುದು ನಿಲ್ಲುವಂತಾಯಿತು. ವೈಚಾರಿಕ ಪ್ರವೃತ್ತಿಯ ಬೆಳವಣಿಗೆಯು ಭಾರತೀಯ ಪುನರುಜ್ಜೀವನದ ಕಾರಣ ಮತ್ತು ಪರಿಣಾಮಗಳಲ್ಲಿ ಒಡೆದು ಮೂಡಿತು. ರಾಷ್ಟ್ರಮಟ್ಟದಲ್ಲಿ ಆಗುತ್ತಿರುವ ಈ ಸಾಮಾಜಿಕ-ಧಾರ್ಮಿಕ ಸುಧಾರಣೆಗಳಿಗೆ ಚಿಕ್ಕೋಡಿ ಕುಟುಂಬದ ಶ್ರೀ ತಮ್ಮಣ್ಣಪ್ಪನವರು, ಶ್ರೀ ಪಂಡಿತಪ್ಪನವರು ಮತ್ತು ಶ್ರೀ ರಾಮಪ್ಪನವರು ಸ್ಪಂದಿಸಿದರು. ತಮ್ಮ ಜೀವನದಲ್ಲಿಯೂ ಸಮಾಜದ ಈ ಅನಿಷ್ಟಗಳನ್ನು ತೊಡೆದು ಸಮಾಜ ಉದ್ಧಾರಕ್ಕಾಗಿ ಶ್ರಮಿಸಲು ಸತತ ಪ್ರಯತ್ನ ನಡೆಸಿದರು.

೨.೪. ಆರ್ಥಿಕ ಪರಿಸರ:

ವರ್ಗ-ವರ್ಣಗಳೊಂದಿಗೆ ಆರ್ಥಿಕ ಅಸಮಾನತೆಯು ನಮ್ಮ ಸಮುದಾಯಗಳ ಒಂದು ಭಾಗವಾಗಿ ಬೆಳೆದು ಬಂದಿದೆ. ಬ್ರಿಟಿಷರು ಭಾರತದಲ್ಲಿ ನೆಲೆಯೂರುವುದಕ್ಕಿಂತ ಮೊದಲು ಗುಡಿ ಕೈಗಾರಿಕೆಗಳನ್ನು ನಂಬಿ, ಬದುಕಿದ ಅಸಂಖ್ಯಾತ ಕುಟುಂಬಗಳು ಇಲ್ಲಿದ್ದವು. ಬ್ರಿಟಿಷರ ವ್ಯಾಪಾರ, ಕೈಗಾರಿಕೆ ಮತ್ತು ಹಣಕಾಸು ನೀತಿ ಭಾರತವನ್ನು ಆರ್ಥಿಕ ಶೋಷಣೆಗೆ ಈಡುಮಾಡಿತು. ಇದರಿಂದ ಗುಡಿಕೈಗಾರಿಕೆಗಳನ್ನು ನಂಬಿದ ಹಲವಾರು ಕುಟುಂಬಗಳು ಬೀದಿಗೆ ಬಿದ್ದವು. ಸಮಾಜಸುಧಾರಕರು ಭಾರತೀಯರ ಬಡತನದ ಬೆಳವಣಿಗೆಯನ್ನು ಮತ್ತು ಆರ್ಥಿಕ ಹಿಂದುಳಿವಿಕೆಯನ್ನು ವಸಹಾತುಶಾಹಿ ಸಂದರ್ಭದಲ್ಲಿ ಗುರುತಿಸಿದರು. ದಾದಾಭಾಯಿ ನವರೋಜಿಯವರು ಭಾರತ ದೇಶದ ಸಂಪತ್ತು ವಿದೇಶಿ ಬಂಡವಾಳದಲ್ಲಿ ತೊಡಗಿಸುವುದು ಆರ್ಥಿಕ ದುರಂತಕ್ಕೆ ಕಾರಣವೆಂದು ಆಧಾರಸಹಿತವಾಗಿ ತಿಳಿಸಿಕೊಟ್ಟರು. ವಿದೇಶೀಯ ವಸ್ತುಗಳನ್ನು ಬಹಿಷ್ಕರಿಸುವುದರ ಮೂಲಕ ದೇಶಿಯ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಬೇಕೆಂದು ಅವರು ಪ್ರತಿಪಾದಿಸಿದರು.

ರಾಷ್ಟ್ರೀಯವಾದಿಗಳು ದಾದಾಭಾಯಿ ನವರೋಜಿಯವರ ನೇತೃತ್ವದಲ್ಲಿ ಭಾರತದ ಸಂಪತ್ತು ಬ್ರಿಟನ್‌ಗೆ ಸೋರಿಹೋಗುತ್ತಿರುವುದನ್ನು ಮೇ ೨, ೧೮೬೭ರಲ್ಲಿ ಲಂಡನ್ನಿನ ಈಸ್ಟ್ ಇಂಡಿಯಾ ಅಸೋಸಿಯೇಷನ್ನಲ್ಲಿ ತಿಳಿಸಿದ್ದರು. ಈ ವಿಷಯ ಕುರಿತು ಅನೇಕ ಲೇಖನಗಳನ್ನು ಪತ್ರಿಕೆಗಳಲ್ಲಿ

ಬರೆಯತೊಡಗಿದರು. ೧೮೬೭ರ "ಪಾವರ್ಟಿ ಆ್ಯಂಡ್ ದಿ ಬ್ರಿಟಿಷ್ ರೂಲ್ ಇನ್ ಇಂಡಿಯಾ"ದಲ್ಲಿ ಬ್ರಿಟಿಷರು ತಮ್ಮ ಆಳ್ವಿಕೆಯ ಮೂಲಕ ಭಾರತದ ೧/೪ ಭಾಗದ ಸಂಪತ್ತನ್ನು ಬ್ರಿಟನ್‌ಗೆ ಹೇಗೆ ಕೊಂಡೊಯ್ಯುತ್ತಾರೆಂಬುದನ್ನು ತಿಳಿಸುವುದರೊಂದಿಗೆ ವಿರೋಧವನ್ನು ವ್ಯಕ್ತಪಡಿಸಿದರು. ರೈತರ ಮೇಲಿನ ಭೂಕಂದಾಯವನ್ನು ಕಡಿಮೆ ಮಾಡಿ, ಅವರನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಬೇಕೆಂದು ಚಳುವಳಿ ನಡೆಸಿದರು. ಅಧಿಕ ತೆರಿಗೆಯೇ ಭಾರತದ ಬಡತನಕ್ಕೆ ಕಾರಣವಾಗಿರುವುದರಿಂದ ಉಪ್ಪಿನ ಮೇಲಿನ ತೆರಿಗೆ ರದ್ದು ಮಾಡಬೇಕೆಂದು ಮತ್ತು ಭೂಕಂದಾಯ ಕಡಿತ ಮಾಡಬೇಕೆಂದು ಆಗ್ರಹಿಸಿದರು. ರಾಷ್ಟ್ರೀಯವಾದಿಗಳು ಆರ್ಥಿಕ ಶೋಷಣೆಯ ವಿರುದ್ಧ ತಿರುಗಿಬಿದ್ದರು. ಕೋಟ್ಯಂತರ ಭಾರತೀಯ ಜನರ ಜೀವನವು 'ಅರೆಹೊಟ್ಟೆ' ಅಥವಾ 'ಉಪವಾಸ' ಅಥವಾ ಕ್ಷಾಮ ಮತ್ತು ರೋಗಗಳಿಂದ ಕೂಡಿದೆ' ಎಂದು ದಾದಾಭಾಯಿ ನವರೋಜಿಯವರು ವಾದಿಸಿದರು.

ಬ್ರಿಟಿಷ್ ಸೇವೆಯಲ್ಲಿನ ಉನ್ನತ ಹುದ್ದೆಗಳೆಲ್ಲವೂ ಯುರೋಪಿಯನ್ನರಿಗೆ ಮೀಸಲಾಗಿದ್ದವು. ಸುಶಿಕ್ಷಿತ ಭಾರತೀಯರಿಗೆ ಉದ್ಯೋಗವಕಾಶಗಳ ಅಭಾವವಿದ್ದಿತು. ಹೀಗೆ ಜನಸಾಮಾನ್ಯರಲ್ಲಿ ಹಾಗೂ ಸುಶಿಕ್ಷಿತರಲ್ಲಿ ಬ್ರಿಟಿಷ್ ವಿರೋಧಿ ಭಾವನೆ ವರ್ಧಿಸಿತು. ಸುಶಿಕ್ಷಿತ ಭಾರತೀಯರು ತಮ್ಮ ಬೇಡಿಕೆಗಳ ಪೂರೈಕೆಗಾಗಿ ಸಂಘಗಳನ್ನು ಸ್ಥಾಪಿಸಲಾರಂಭಿಸಿದರು. ಇದೊಂದು ಆರ್ಥಿಕ ಜಾಗೃತಿಯ ಸೋಪಾನವೂ ಆಗಿತ್ತು. ಬ್ರಿಟಿಷರ ಆಳ್ವಿಕೆಯು ಭಾರತೀಯ ಸಮಾಜದಲ್ಲಿ ಹಲವಾರು ವರ್ಗಗಳು ಉದಯವಾಗಲು ಕಾರಣವಾಯಿತು. ಆ ವರ್ಗಗಳೆಂದರೆ ಜಮೀನ್ದಾರರು, ಲೇವಾದೇವಿಗಾರರು, ಕೃಷಿಕಾರ್ಮಿಕರು, ರೈತರು ಮತ್ತು ವ್ಯಾಪಾರಿಗಳು. ಈ ವರ್ಗಗಳು ಗ್ರಾಮೀಣ ಸಮಾಜದಲ್ಲಿ ಹುಟ್ಟಿಕೊಂಡರೆ, ನಗರ ಸಮಾಜದಲ್ಲಿ ಬಂಡವಾಳಶಾಹಿಗಳು, ಕೈಗಾರಿಕೋದ್ಯಮಿಗಳು, ಕಾರ್ಮಿಕವರ್ಗ, ಸಣ್ಣವ್ಯಾಪಾರಿಗಳು, ವೃತ್ತಿನಿರತರು ಹೀಗೆ ವರ್ಗಗಳು ಅಸ್ತಿತ್ವಕ್ಕೆ ಬಂದವು. ಬ್ರಿಟಿಷ ಆಡಳಿತದ ಪ್ರಭಾವದಿಂದ ಭಾರತೀಯ ಸಮಾಜದಲ್ಲಿ ಶ್ರಮಜೀವಿ ವರ್ಗದ ಉದಯಕ್ಕೆ ಕಾರಣವಾಯಿತು. ಭಾರತದಲ್ಲಿ ಹೊಸದಾದ ಸಾಮಾಜಿಕ, ಆರ್ಥಿಕ ವ್ಯವಸ್ಥೆ ರೂಪಗೊಂಡು ಬಂಡವಾಳಶಾಹಿ ವ್ಯವಸ್ಥೆ ಮತ್ತು ಹೊಸ ಕೈಗಾರಿಕೆಗಳ ಸ್ಥಾಪನೆಯಾಯಿತು. ಪಟ್ಟಣ ಪ್ರದೇಶದಲ್ಲಿ ಮಧ್ಯಮವರ್ಗ ಉದಯವಾಯಿತು. ಆಡಳಿತಗಾರರು, ಅಧ್ಯಾಪಕರು, ಕಾರಕೂನರು, ಪತ್ರಿಕೋದ್ಯಮಿಗಳು, ಯುರೋಪಿನ ವರ್ತಕರು, ಕುಲೀನರು ಮುಂತಾದ ವೃತ್ತಿನಿರತರನ್ನು ಅದು ಒಳಗೊಂಡಿದ್ದಿತು. ಇಂತಹ ವ್ಯವಸ್ಥೆ ಬ್ರಿಟಿಷ್‌ಪೂರ್ವಕಾಲದಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ.

ಅಂದಿನ ಮುಂಬೈ ಕರ್ನಾಟಕದ ಪರಿಸ್ಥಿತಿಯನ್ನು ಅವಲೋಕಿಸಿದಾಗ ಸಮಾಜವು ಆರ್ಥಿಕ ಅಸಮತೋಲನದಿಂದ ಬಳಲುತ್ತಿತ್ತು. ಒಂದು ಕಡೆ ಸಂಸ್ಥಾನಿಕರ ದರ್ಬಾರು, ಇನ್ನೊಂದೆಡೆ ಬ್ರಿಟಿಷ್ ಅಧಿಕಾರಿಗಳ ಅಟ್ಟಹಾಸದಿಂದ ಅನೇಕ ಸ್ಥಳೀಯ ಸಣ್ಣ ಕೈಗಾರಿಕೆಗಳು ನೆಲ ಕಚ್ಚಿದವು. ಬಡನೇಕಾರರ ಸ್ಥಿತಿ ಇನ್ನೂ ಚಿಂತಾಜನಕವಾಗಿತ್ತು. ಮರು ಹೊತ್ತು ದುಡಿದರೂ ಒಂದು ಹೊತ್ತು ತುತ್ತಿಗೂ ಪರದಾಡುವ ಸ್ಥಿತಿ ಕಾರ್ಮಿಕರದ್ದಾಗಿತ್ತು. ಈ ಆರ್ಥಿಕ ಅಸಮತೋಲನತೆಗೆ ಅವರಲ್ಲಿರುವ ಅಜ್ಞಾನ, ಶಿಕ್ಷಣದ ಕೊರತೆಯೇ ಕಾರಣವಾಗಿತ್ತು. ರಾಷ್ಟ್ರೀಯ ಪ್ರಜ್ಞೆಯಿಂದಾಗಿ ಉತ್ತರ ಕರ್ನಾಟಕದ ಜಮಖಂಡಿ

ಸಂಸ್ಥಾನದಲ್ಲಿ ಆರ್ಥಿಕ ಪರಿಸ್ಥಿತಿಯಲ್ಲಿ ಬದಲಾವಣೆ ಕಂಡುಬರತೊಡಗಿತು. ಚಿಕ್ಕೋಡಿ ಕುಟುಂಬದ ಶ್ರೀ ತಮ್ಮಣ್ಣಪ್ಪನವರು, ಶ್ರೀ ಪಂಡಿತಪ್ಪನವರು, ಶ್ರೀ ರಾಮಪ್ಪನವರು ನೇಕಾರರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಅವರ ಆರ್ಥಿಕ ಪರಿಸ್ಥಿತಿಯನ್ನು ಎತ್ತರಿಸುವಲ್ಲಿ ಸಾಕಷ್ಟು ಶ್ರಮವಹಿಸಿದರು.

೨.೫. ಶೈಕ್ಷಣಿಕ ಪರಿಸರ

ಪ್ರಾಚೀನಕಾಲದಿಂದಲೂ ದೇವಾಲಯ ಮತ್ತು ದೇವಾಲಯಕ್ಕೆ ಅಂಟಿಕೊಂಡ ಮಠಗಳಲ್ಲಿ ಮೇಲುವರ್ಣದವರ ವಿದ್ಯಾಭ್ಯಾಸ ನಡೆಯುತ್ತಿತ್ತು. ಅಲ್ಲಿ ಕಡತ, ಹಸ್ತಪ್ರತಿ, ತಾಡೋಲೆ, ಧೂಳಾಕ್ಷರಗಳ ಮೂಲಕ ವಿದ್ಯಾರ್ಥಿಗಳಿಗೆ ಓದು-ಬರಹ ಕಲಿಸಲಾಗುತ್ತಿತ್ತು. ಅಯ್ಯನವರು ವಿದ್ಯಾಬೋಧನೆ ಹೇಳಿಕೊಡುತ್ತಿದ್ದ ಶಾಲೆಗಳನ್ನು 'ಸಾಲಿಮಠ' ಎಂದು ಕರೆಯಲಾಗುತ್ತಿತ್ತು. ಶಾಲೆಗಳನ್ನು ನಡೆಸುತ್ತಿದ್ದವರಿಗೆ 'ಸಾಲಿ' ಎಂದು ಅಡ್ಡ ಹೆಸರುಗಳು ಇರುತ್ತಿದ್ದವು. ಲಿಂಗಾಯತ ಮಠಗಳು ವಿದ್ಯಾಕೇಂದ್ರಗಳಾಗಿ ಪ್ರಾಥಮಿಕ ಶಿಕ್ಷಣವನ್ನು ನೀಡುವ ಭಾರ ಹೊತ್ತುಕೊಂಡಿದ್ದವು. ಮಠಾಧೀಶರು ಶಿಕ್ಷಣದ ಅಗತ್ಯತೆಯ ಬಗ್ಗೆ ಸದಾ ಕಾರ್ಯೋನ್ಮುಖರಾಗಿರುತ್ತಿದ್ದರು. ಶ್ರೀ ಹಾನಗಲ್ ಕುಮಾರಸ್ವಾಮಿಗಳು ವಟುಗಳ ವಿದ್ಯಾಕೇಂದ್ರವನ್ನು ಶಿವಯೋಗ ಮಂದಿರದಲ್ಲಿ ಸ್ಥಾಪಿಸಿ, ಅಲ್ಲಿ ಸಾಂಪ್ರದಾಯಿಕ ಶಿಕ್ಷಣ ಕೊಡಿಸುವ ವ್ಯವಸ್ಥೆ ಮಾಡಿದರು. ಮಠದ ಶಾಲೆಗಳಲ್ಲಿ ದೊಡ್ಡ ವಿದ್ವಾಂಸರಲ್ಲದಿದ್ದರೂ ಜನಸಾಮಾನ್ಯರ ಬದುಕಿನ ಅಗತ್ಯಕ್ಕೆ ಬೇಕಾದ ವಿದ್ಯೆಯನ್ನು ಹೇಳಿಕೊಡುವವರಿದ್ದರು. ಜ್ಯೋತಿಷ್ಯ, ಔಷಧೋಪಚಾರಗಳ ಬಗೆಗೂ ಅವರಿಗೆ ತಿಳುವಳಿಕೆಯಿದ್ದಿತು. ಇಂತಹ ಶಾಲೆಗಳಲ್ಲಿ ಗುರುಗಳು ವಿದ್ಯಾರ್ಥಿಗಳಿಗೆ ಓದು, ಬರಹ, ಗಣಿತಗಳನ್ನು ಬಹಳ ಕಾಳಜಿಪೂರ್ವಕವಾಗಿ ಕಲಿಸುತ್ತಿದ್ದರು. ಸುಂದರ ಹಾಗೂ ಸ್ಪಷ್ಟ ಅಕ್ಷರಗಳನ್ನು ವಿದ್ಯಾರ್ಥಿಗಳಿಗೆ ಬರೆಯಿಸುತ್ತಿದ್ದರು. 'ಕಿತ್ತೆ' ಬರೆಸುವುದು, ಮನೆತನದ ಖರ್ಚುವೆಚ್ಚದ ವಿಷಯವಾಗಿ ಲೆಕ್ಕಗಳನ್ನು ಕಲಿಸುವುದು ತಮ್ಮ ಹೊಣೆ ಎಂದು ಗುರುಗಳು ಭಾವಿಸಿದ್ದರು. ಮಠದ ಶಾಲೆಗಳಲ್ಲದೆ ಸಮಾಜದಲ್ಲಿಯ ಇನ್ನೂ ಕೆಲವು ವ್ಯಕ್ತಿಗಳು ಖಾಸಗಿ ಶಾಲೆಗಳನ್ನು ನಡೆಸುತ್ತಿದ್ದರು. ಇವುಗಳನ್ನು 'ಗಾವಠಿ' ಶಾಲೆಗಳೆನ್ನುತ್ತಿದ್ದರು. ಇಂತಹ ಶಿಕ್ಷಕರಿಗೆ ವಿದ್ಯಾರ್ಥಿಗಳು ತಿಂಗಳಿಗೆ ಎರಡರಿಂದ ನಾಲ್ಕು ಆಣೆಯ ವರೆಗೆ ಫೀ ಎಂದು ಕೊಡುತ್ತಿದ್ದರು. ಅಲ್ಲದೆ ಕರಿಹಲಗೆ ಪೂಜೆಯ ದಿನ ಒಂದು ದುಡ್ಡನ್ನು ಹಾಗೂ ಸಂತೆಯ ದಿವಸ ಅಲ್ಪಸ್ವಲ್ಪ ಕಾಳುಕಡಿಗಳನ್ನು ಕೊಡುತ್ತಿದ್ದರು. ಕೆಲವು ಶಿಕ್ಷಕರು ವಿದ್ಯಾರ್ಥಿಗಳ ಮನೆಗೆ ವಾರ ಹಂಚಿಕೊಂಡು ಊಟಕ್ಕೆ ಹೋಗುತ್ತಿದ್ದ ಉದಾಹರಣೆಗಳಿವೆ. ಈ ಶಿಕ್ಷಣ ಕ್ರಮದಲ್ಲಿ ಧೂಳಾಕ್ಷರ, ಬಿಡಿಅಕ್ಷರ, ದೊಡ್ಡ ಅಕ್ಷರಗಳನ್ನು ಕಲಿಸುವುದರ ಜೊತೆಗೆ ಧಾರ್ಮಿಕ ಶಿಕ್ಷಣವನ್ನೂ ಕೊಡಲಾಗುತ್ತಿತ್ತು. ಧೂಳಾಕ್ಷರಗಳನ್ನು ಬರೆಯುವ ರೀತಿಗೆ ಮರಾಠಿಯಲ್ಲಿ ಬಾರಾಖಡಿ(ಹನ್ನೆರಡು ಅಕ್ಷರ) ಎನ್ನುತ್ತಿದ್ದರು.

ಆ ಕಾಲದಲ್ಲಿ ಕನ್ನಡ ಶಿಕ್ಷಣಾಭ್ಯಾಸವನ್ನು ಮಕ್ಕಳಿಗೆ ನೀಡಿ ಕನ್ನಡ ರಕ್ಷಿಸಿ, ಸೇವಾಕೈಂಕರ್ಯವನ್ನು ಗೈದ ಮಠಗಳ ಸಾಧನೆ ಶ್ಲಾಘಿಸುವಂತಹುದು. ೧೮೩೦ರ ವರೆಗೆ ಪ್ರತಿಯೊಂದು ಲಿಂಗಾಯತ ಮಠವೂ ಶಾಲೇಯೇ ಆಗಿರುತ್ತಿತ್ತೆಂದೂ; ಪ್ರಾಯಶಃ ಕನ್ನಡವನ್ನು ಆ ಕಾಲದಲ್ಲಿ ಉಳಿಸಿದವರು ಲಿಂಗಾಯತರೆಂದೂ, ೧೮೮೦ರ ವರೆಗೆ ಪ್ರತಿಯೊಂದು ಹಳ್ಳಿಯಲ್ಲಿಯೂ ಲಿಂಗಾಯತರದೊಂದು

ಪಾಠಶಾಲೆಯು ಕಣ್ಣಿಗೆ ಬೀಳುತ್ತಿತ್ತೆಂದೂ ಸರ್ ನಾರಾಯಣ ಚಂದಾವರಕರ[೧೧] ಅವರು ಹೇಳಿದುದು ಲಿಂಗಾಯತ ಸಮಾಜದ ಮಹತ್ವ ಎಂತಹುದೆಂದು ಸ್ಪಷ್ಟಪಡಿಸುವುದು. ಇದಕ್ಕೆ ಪೂರಕವಾಗಿ ಶ್ರೀ ವೆಂಕಟ ರಂಗೋ ಕಟ್ಟಿ "The study of Kannada was confined to a few lingayat priests"[೧೨] ಎಂದು ಅಭಿಪ್ರಾಯಿಸಿದರೆ, ಡಾ.ಫ್ಲೀಟ್‌ರು "ಉತ್ತರ ದಿಕ್ಕಿನಿಂದ ಅಡಿಗಡಿಗೆ ಆಕ್ರಮಣ ಮಾಡುತ್ತಿದ್ದ ಮರಾಠರ ಆವಾಂತರದಲ್ಲಿ ಇತ್ತೀಚೆಗೆ ಅಂದವಾದ ಕನ್ನಡ ಭಾಷೆಯನ್ನು ಉಳಿಸಿದ ಕೀರ್ತಿ ಬಹಳಮಟ್ಟಿಗೆ ವೀರಶೈವರಿಗೆ ಸಲ್ಲುತ್ತದೆ"[೧೩]ಎಂದಿದ್ದಾರೆ.

ಅನೇಕ ವರ್ಷಗಳಿಂದ ಲಿಂಗಾಯತರೇ ಕರ್ನಾಟಕದಲ್ಲಿ ವಿದ್ಯಾಪ್ರದಾನ ಕಾರ್ಯವನ್ನು ಮಾಡುತ್ತಾ ಬಂದಿದ್ದರು. ಅವರ ಮಠಗಳು ವಿದ್ಯಾರ್ಥಿಗಳ ವಸತಿಗೃಹಗಳೂ ಆಗಿದ್ದವೆಂಬುದು ಅನೇಕ ಮಠಗಳ ಇತಿಹಾಸದಿಂದ ಗೊತ್ತಾಗುತ್ತದೆ. ಆದರೆ ಆಂಗ್ಲರು ಭಾರತಕ್ಕೆ ಬಂದ ನಂತರ ಲಿಂಗಾಯತರ ಈ ಕಾರ್ಯಕ್ಕೆ ಕೆಲಮಟ್ಟಿಗೆ ತಡೆಯುಂಟಾಯಿತೆಂದು ತೋರುತ್ತದೆ. ದೇಶಭಾಷೆಗಳ ಮಹತ್ವವು ಬಹುಮಟ್ಟಿಗೆ ಕಡಿಮೆಯಾಗಿ ಇಂಗ್ಲಿಷ್ ಭಾಷೆಗೆ ಹೆಚ್ಚು ಪ್ರಾಶಸ್ತ್ಯ ದೊರೆಯಲಾರಂಭಿಸಿತು. ಲಿಂಗಾಯತರ ಸಮಾಜರಚನೆಯಲ್ಲಿ ಸ್ವತಂತ್ರ ಉದ್ಯೋಗಗಳಿಗೆ ಅವಕಾಶವಿದ್ದುದರಿಂದ ಅವರಿಗೆ ಕನ್ನಡದ ಓದು ಬರಹ ಬಂದರೆ ಸಾಕಾಗುತ್ತಿತ್ತು. ಆದುದರಿಂದ ಆಂಗ್ಲಭಾಷೆಯ ಮಹತ್ವವು ಅವರಿಗೆ ಗೊತ್ತಾಗಲು ಹೆಚ್ಚು ಕಾಲ ಬೇಕಾಯಿತು. ರಾಜಕೀಯ ದೃಷ್ಟಿಯಿಂದ ಇಂಗ್ಲಿಷದ ಉಪಯೋಗವು ಬಹಳವಿದೆಯೆಂದು ಲಿಂಗಾಯತರಿಗೆ ಗೊತ್ತಾಗುವಷ್ಟರಲ್ಲಿ ಕರ್ನಾಟಕದಲ್ಲಿಯ ಪ್ರಗತಿಪರ ಬ್ರಾಹ್ಮಣಸಮಾಜ ಅದರ ಲಾಭವನ್ನು ಅದಾಗಲೇ ತೆಗೆದುಕೊಂಡು ಬಿಟ್ಟಿದ್ದಿತು. ಮುಂದೆ ಕೆಲವು ದಿವಸಗಳಲ್ಲಿ ಆಂಗ್ಲಭಾಷಾಜ್ಞಾನದ ಅಭಾವದ ಮೂಲಕ ಅವರಿಗೆ ಸರಕಾರದಲ್ಲಿ ಯೋಗ್ಯ ಮರ್ಯಾದೆ ದೊರೆಯುವುದಿಲ್ಲೆಂದು ಇವರಿಗೆ ಕಂಡು ಬರಲಾರಂಭಿಸಿತು.[೧೪] ಆದರೆ ಕನ್ನಡಭಾಷೆಯು ಅವತ್ತಿನ ಸಾಮಾಜಿಕ ಸಂದರ್ಭದಲ್ಲಿ ಸಾಮಾನ್ಯ ಜನರ ಬದುಕಿನ ಆಸರೆಯಾಗಿತ್ತೇ ವಿನಹ ಅನ್ಯಭಾಷೆಯ ದಬ್ಬಾಳಿಕೆಯನ್ನು ವಿರೋಧಿಸುವ ಸಾಮರ್ಥ್ಯವನ್ನು ಹೊಂದಿರಲಿಲ್ಲ. ಜೊತೆಗೆ ಇಂಗ್ಲಿಷ್ ಭಾಷೆಯನ್ನು ಮೆಟ್ಟಿ ಮೇಲೆಳುವಷ್ಟು ಶಕ್ತಿಯನ್ನೂ ಹೊಂದಿರಲಿಲ್ಲ. ಒಂದು ಕಡೆ ಅಧಿಕಾರಶಾಹಿ ಭಾಷೆ, ಅದಕ್ಕೆ ಹೊಂದಿಕೊಂಡು ಬದುಕುತ್ತಿರುವ ಬ್ರಾಹ್ಮಣ ಸಮಾಜ, ಇನ್ನೊಂದೆಡೆ ಇದರ ಮುಂದೆ ಮಾತೃಭಾಷೆಯ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿರುವ ಲಿಂಗಾಯತ ಸಮಾಜವನ್ನು ಕಾಣುತ್ತೇವೆ. ಅನ್ಯಭಾಷೆಗೆ ತಮ್ಮ ಸ್ವಾಭಿಮಾನವನ್ನು ಮಾರಿಕೊಂಡು ಬದುಕುತ್ತಿರುವ ಅಸಂಖ್ಯಾತ ಬ್ರಾಹ್ಮಣ ಜನ ಒಂದೆಡೆ ಇದ್ದರೆ, ಇನ್ನೊಂದೆಡೆ ಮಾತೃಭಾಷೆಯ ಬಗ್ಗೆ ಅಪಾರ ಅಭಿಮಾನವನ್ನು ಇಟ್ಟುಕೊಂಡು ಬದುಕುತ್ತಿರುವ ಅಲ್ಪಸಂಖ್ಯಾತ ಲಿಂಗಾಯತ ಜನರಿದ್ದರು.[೧೫] ಡಾ.ಎಂ.ಎಂ.ಕಲಬುರ್ಗಿಯವರು ಹೇಳುವಂತೆ "೧೯ನೆಯ ಶತಮಾನ ಕರ್ನಾಟಕದಲ್ಲಿ ಬ್ರಾಹ್ಮಣರ ಪ್ರಾಬಲ್ಯದ ಕಾಲ. ದಕ್ಷಿಣದಲ್ಲಿ ಮೈಸೂರು ಅರಸರ ಪ್ರೋತ್ಸಾಹದಿಂದ ಶ್ರೀ ವೈಷ್ಣವರು, ಉತ್ತರದಲ್ಲಿ ಪೇಶ್ವೆ ಅರಸರ ಪ್ರೋತ್ಸಾಹದಿಂದ ಮಾಧ್ವ, ಸ್ಮಾರ್ತ ಬ್ರಾಹ್ಮಣರು ಪ್ರಧಾನರಾದರು. ಇತರ ಸಮಾಜಗಳಂತೆ ಎರಡೂ ಪ್ರದೇಶಗಳಲ್ಲಿ ವೀರಶೈವರು ಅಪ್ರಧಾನರಾದರು."[೧೬] ಹೀಗಾಗಿ ಕನ್ನಡಭಾಷೆಯ ಬಗ್ಗೆ ಕಾಳಜಿ

ಇಟ್ಟುಕೊಂಡ ಲಿಂಗಾಯತ ಸಮಾಜವೇ ಅಪ್ರಧಾನವಾಗಿ ಕ್ಷೀಣಿಸಿದಾಗ, ಸಹಜವಾಗಿ ಕನ್ನಡ ಭಾಷೆಯು ಕ್ಷೀಣಿಸುವಂತಾಯಿತು.

ಈ ಕಾಲಘಟ್ಟದಲ್ಲಿ ಸಾಂಪ್ರದಾಯಿಕವಾಗಿ ಸಂಸ್ಕೃತವನ್ನು ಕಲಿಸುತ್ತಿದ್ದ ಮತ್ತು ಓದು, ಬರಹ, ಲೆಖ್ಖಗಳ ಜೊತೆಯಲ್ಲಿ ಪೌರೋಹಿತ್ಯದ ತಯಾರಿ ಕೊಡುವ ಶಾಲೆಗಳು ಬೆಳೆದು ಬಂದವು. ಮೊದಲನೆಯದರಲ್ಲಿ ಬ್ರಾಹ್ಮಣ ಬಾಲಕರಿಗೆ ಅವಕಾಶವಿದ್ದು ಸಂಸ್ಕೃತನಿಷ್ಠೆಯ ಆರ್ಯಮನೋಧರ್ಮದ ಅಧ್ಯಯನ ನಡೆಸಲಾಗುತ್ತಿತ್ತು. ಎರಡನೆಯದು ಎಲ್ಲಾ ಕೋಮುಗಳ ಬಾಲಕರಿಗೆ ಅವಕಾಶವಿದ್ದು, ಲಿಂಗಾಯತ ಉಪಾಧ್ಯಾಯರುಗಳಿದ್ದ ಶಾಲೆಗಳು. ಇವು ಕನ್ನಡನಿಷ್ಠೆಯ ದ್ರಾವಿಡ ಮನೋಧರ್ಮವನ್ನು ಬೆಳೆಸಿಕೊಂಡು ಬಂದವು ಎಂದು ನಿರ್ದಿಷ್ಟವಾಗಿ ಅರ್ಥೈಸುವುದಕ್ಕೆ ಅವಕಾಶವಿದೆ. ಈ ಕನ್ನಡನಿಷ್ಠ ಅಥವಾ ದ್ರಾವಿಡನಿಷ್ಠ ಮನೋಧರ್ಮಕ್ಕೆ ವಿಶೇಷ ಇಂಬು ದೊರೆತುದು ಲಿಂಗಾಯತ ಸಮಾಜದಲ್ಲಿಯೇ. "೧೮ನೆಯ ಶತಮಾನದಲ್ಲಿ ಪೇಶ್ವೆಯವರು ಕರ್ನಾಟಕದ ಆಡಳಿತ ಸೂತ್ರವನ್ನು ಕೈವಶ ಮಾಡಿಕೊಳ್ಳುವುದೇ ತಡ, ನಿಂತಕಾಲ ಮೇಲೆಯೇ ಕನ್ನಡವನ್ನು ಕೈಬಿಟ್ಟು ಮರಾಠಿಯನ್ನು ಕೈಗೆತ್ತಿಕೊಂಡರು. ಪ್ರತಿಷ್ಠಿತ ಬ್ರಾಹ್ಮಣ ಕುಟುಂಬಗಳಲ್ಲಿ ಮರಾಠಿ ಮನೆಮಗನಂತೆ; ಕನ್ನಡ ಮಲಮಗನಂತೆ ಬದುಕುವುದನ್ನು ಈಗಲೂ ಗಮನಿಸಬಹುದು. ಮುಂದೆ ೧೯ನೆಯ ಶತಮಾನದಲ್ಲಿ ಆಡಳಿತಸೂತ್ರ ಇಂಗ್ಲಿಷರ ಹಸ್ತಗತವಾದ ಕೂಡಲೇ ಮನೆ ತುಂಬಿದ ಮರಾಠಿಯನ್ನು ಉಪೇಕ್ಷಿಸಿ ಇಂಗ್ಲಿಷನ್ನು ಮನೆ ತುಂಬಿಸಿಕೊಂಡರು. ಹೀಗೆ ಕನ್ನಡವನ್ನು ಕೈಬಿಟ್ಟು ಮರಾಠಿಯನ್ನು, ಮರಾಠಿಯನ್ನು ಕೈಬಿಟ್ಟು ಇಂಗ್ಲಿಷ್‌ನ್ನು ಸ್ವಾಗತಿಸಿದ ಬ್ರಾಹ್ಮಣರು ಅವೆರಡರ ಋಣ ತೀರಿ ಕನ್ನಡ ಚಳುವಳಿ ಪ್ರಾರಂಭವಾಗುವಲ್ಲಿ ಧಾವಿಸಿಬಂದು ಮತ್ತೆ ಮುಂಚೂಣಿಯಲ್ಲಿ ನಿಂತುಕೊಂಡರು. ಭಾಷೆಯ ಬಗ್ಗೆ ತೋರುವ ಈ ಸಮಯಾನುವರ್ತನೆಭಾವವನ್ನು ನೋಡಿದರೆ ಪ್ರಾಚೀನ ಕರ್ನಾಟಕದ ಬ್ರಾಹ್ಮಣ ಜನಾಂಗ ಸಂಸ್ಕೃತವನ್ನು ಬಿಟ್ಟರೆ ಮಿಕ್ಕ ಭಾಷೆಗಳ ಕೂಡ ದುರ್ಬಲವಾದ(ಪ್ರಯೋಜನಾತ್ಮಕವಾದ) ಸಂಬಂಧವನ್ನು ಇಟ್ಟುಕೊಂಡುದು ಇತಿಹಾಸದುದ್ದಕ್ಕೂ ಸ್ಪಷ್ಟವಾಗುತ್ತದೆ'[೧೭]

೧೯ನೆಯ ಶತಮಾನದ ಪ್ರಾರಂಭದಲ್ಲಿ ಕ್ರೈಸ್ತ ಧಾರ್ಮಿಕ ಸಂಸ್ಥೆಗಳಿಂದ ಹಾಗೂ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಶಾಲೆಗಳಿಂದಾಗಿ ಈ ಹಳೆಯ ಸಂಪ್ರದಾಯದ ಶಾಲೆಗಳು ತಮ್ಮ ಪ್ರಾಮುಖ್ಯವನ್ನು ಕಳೆದುಕೊಂಡವು. ಅಲ್ಲದೆ ಹೊಸ ಮಾದರಿಯ ಇಂಗ್ಲಿಷ್ ಶಾಲೆಗಳಿಗೆ ಹೆಚ್ಚು ಹೆಚ್ಚು ಬೇಡಿಕೆ ಪ್ರೋತ್ಸಾಹ ಕಂಡುಬಂದಿತು. ಮುಂಬಯಿ ಕರ್ನಾಟಕದಲ್ಲಿ ೧೮೨೫ಕ್ಕೆ ಮುಂಚೆ ಮರಾಠಿ ಶಾಲೆಗಳು ಆರಂಭವಾದವು. ಕನ್ನಡ ಶಾಲೆಗಳು ೧೮೩೬ರಲ್ಲಿ ಪ್ರಾರಂಭವಾದವು.[೧೮] ಕನ್ನಡ ಮಾತೃಭಾಷೆಯನ್ನು ಹೊಂದಿದ ಕರ್ನಾಟಕದಲ್ಲಿ ಕನ್ನಡ ಶಿಕ್ಷಣದ ಪರಿಸ್ಥಿತಿಯು ತುಂಬಾ ಕಠಿಣವಾಗಿತ್ತು. ಮಾತೃಭಾಷೆ ಕನ್ನಡದಲ್ಲಿ ಶಿಕ್ಷಣ ಪಡೆಯಲು ಜನತೆ ಹಿಂಜರಿಯುತ್ತಿತ್ತು. ಕ್ರಿಶ್ಚಿಯನ್ ಮಿಷನರಿಗಳು ವಿದ್ಯಾಪ್ರಸಾರ ಮಾಡುವಲ್ಲಿ ಪರಿಶ್ರಮ ಪಡುತ್ತಿದ್ದರು. ಆದರೆ ಅಲ್ಲಿಯೂ ಇಂಗ್ಲಿಷಿನ ಪ್ರಭಾವವೇ ಎದ್ದು ಕಾಣುತ್ತಿತ್ತು.

ಹಿಂದುಸ್ಥಾನದಲ್ಲಿ ಬ್ರಿಟಿಷ್ ಶಿಕ್ಷಣಪದ್ಧತಿಗೆ ವ್ಯವಸ್ಥಿತವಾದ ಮೂರ್ತಸ್ವರೂಪವನ್ನು ತಂದು ಕೊಡಲು ಕಾರಣವಾದ ಬೋರ್ಡ್ ಆಫ್ ಡಾಯರೆಕ್ಟರರ ನಿರ್ದೇಶನವೆಂದರೆ:"ವುಡ್ಸ್ ಏಜುಕೇಶನ್ ಡಿಸ್‌ಪ್ಯಾಚ್(೧೮೫೪). ಆ ನಿರ್ದೇಶನದ ಪರಿಣಾಮವಾಗಿ ಎರಡು ಮಹತ್ವದ ಸರಕಾರಿ ಸಂಸ್ಥೆಗಳು ಮುಂಬಯಿ ಇಲಾಖೆಯಲ್ಲಿ ಏರ್ಪಟ್ಟವು. ಮೊದಲನೆಯದು: ಡಿಪಾರ್ಟಮೆಂಟ್ ಆಫ್ ಪಬ್ಲಿಕ್ ಇನಸ್ಟ್ರಕ್ಷನ್ಸ್ (೧೮೫೫)– ಸಾರ್ವಜನಿಕ ಇಲಾಖೆ– ಇದು ಪ್ರಾಥಮಿಕ ಮತ್ತು ಹಾಯಸ್ಕೂಲುಗಳ ಆಡಳಿತಕ್ಕಾಗಿ; ಎರಡನೆಯದು; ಮುಂಬಯಿ ವಿಶ್ವವಿದ್ಯಾಲಯ(೧೮೫೭)–ಇದು ಉಚ್ಚ ಶಿಕ್ಷಣದ ಸಂಘಟನೆಗಾಗಿ. ವುಡ್‌ಸಮಿತಿಯು ಇಂಗ್ಲಿಷ್ ಭಾಷೆಯ ಶಿಕ್ಷಣಕ್ಕೆ ಮಹತ್ವ ನೀಡಿತಾದರೂ ಸ್ಥಳೀಯ ಭಾಷೆಗಳಲ್ಲಿ ಶಿಕ್ಷಣ ನೀಡುವುದು ಸೂಕ್ತ ಎಂದು ಅಭಿಪ್ರಾಯಪಟ್ಟಿತು.[೧೯] ಕ್ರಿ.ಶ.೧೮೫೬ರಲ್ಲಿ ಧಾರವಾಡದಲ್ಲಿ ೧೩, ಬೆಳಗಾವಿಯಲ್ಲಿ ೧೩, ವಿಜಾಪುರದಲ್ಲಿ ೯ರಂತೆ ಪ್ರಾಥಮಿಕ ಶಾಲೆಗಳಿದ್ದವು.[೨೦] ಕನ್ನಡ ಶಾಲೆಗಳ ಕೊರತೆ, ಕನ್ನಡದ ಬಗೆಗೆ ಕನ್ನಡಿಗರಿಗೇ ಇದ್ದ ತಿರಸ್ಕಾರ ಅಥವಾ ಅಸಡ್ಡೆ, ಕನ್ನಡ ಬೋಧಿಸಬಲ್ಲ ಶಿಕ್ಷಕರ ಮತ್ತು ಕನ್ನಡ ಪಠ್ಯಗಳ ಕೊರತೆಯ ಬಗ್ಗೆ ಮುಂಬಯಿ ಪ್ರಾಂತ್ಯದ ಶಿಕ್ಷಣ ಇಲಾಖೆಯು ೧೮೫೬–೫೭ರಲ್ಲಿ ವರದಿಯನ್ನು ಮಾಡಿತು.[೨೧]

ಕನ್ನಡಿಗರ ಭಾಷಾನಿರಭಿಮಾನ ತಲೆತಗ್ಗಿಸುವಂತಹ ವಿಚಾರವಾಗಿತ್ತು. ತಮ್ಮ ಭಾಷೆಯ ಬಗ್ಗೆ ಎಳ್ಳಷ್ಟೂ ಅಭಿಮಾನವಾಗಲಿ, ತಾವು ಕಲಿಯಬೇಕೆಂದಾಗಲಿ ಕನ್ನಡಿಗರಿಗೆ ಇರಲಿಲ್ಲ. ೧೮೬೩–೬೪ರ ವರದಿಯಲ್ಲಿ ಕನ್ನಡದ ವಿದ್ಯಾರ್ಥಿಗಳಿಗಿದ್ದ ಮನೋಭಾವ ಎಂತಹುದು ಎಂದು ಕಂಡುಬರುತ್ತದೆ. "ದಕ್ಷಿಣದಲ್ಲಿ ಕನ್ನಡದ ಅಭ್ಯಾಸವು ಅದನ್ನು ಮಾತೃಭಾಷೆಯಾಗಿ ಉಳ್ಳವರಿಂದಲೇ ಉಪೇಕ್ಷಿಸಲ್ಪಟ್ಟಿದೆ. ಬೆಳಗಾವಿಯ ಶಾಲೆಯಲ್ಲಿ ಅರವತ್ತು ವಿದ್ಯಾರ್ಥಿಗಳು ತಾವು ಹುಟ್ಟಿನಿಂದ ಕನ್ನಡಿಗರು ಎಂದು ನೋಂದಾಯಿಸಿಕೊಂಡಿದ್ದರೂ ಅವರಲ್ಲಿ ಒಬ್ಬನಾದರೂ ಶಾಲಾ ವಾರ್ಷಿಕ ಪರೀಕ್ಷೆಗಳಲ್ಲಿ ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಲು ಪ್ರಯತ್ನಿಸಿಲ್ಲ ಎಂಬುದನ್ನು ವಿಷಯದ ಖಚಿತತೆಗೆ ಉದಾಹರಿಸುತ್ತೇನೆ" ಎಂದು ಕೃಷ್ಣ ಶ್ರೀ ದೇಶಪಾಂಡೆ ಹೇಳಿದ್ದಾರೆ.[೨೨]

ಕರ್ನಾಟಕದಲ್ಲಿ ನೆಲೆವೂರಿ ನಿಂತ ಬ್ರಿಟಿಷ್ ಅಧಿಕಾರಿಗಳಲ್ಲಿ ಕೆಲವರು ಕರ್ನಾಟಕದಲ್ಲಿ ಮರಾಠಿ, ಇಂಗ್ಲಿಷ್ ಮತ್ತು ಇತರ ಅನ್ಯಭಾಷೆಗಳು ಆಕ್ರಮಣ ಮಾಡಿದ್ದನ್ನು ಕಂಡು ಕನಿಕರಪಟ್ಟುಕೊಂಡರು. ಕನ್ನಡದ ಜನತೆಗೆ ಕನ್ನಡದಲ್ಲಿಯೇ ಶಿಕ್ಷಣ ನೀಡುವುದೇ ಸಮಂಜಸವೆಂದು ತೋರಿತು. ಆಂಗ್ಲ ಅಧಿಕಾರಿ ವಾಲ್ಟರ್ ಎಲಿಯಟ್‌ನು ಧಾರವಾಡದಲ್ಲಿದ್ದಾಗ ಬಹುತೇಕ ಜನಸಮೂಹ ಸಂಪರ್ಕಭಾಷೆಯು ಕನ್ನಡವೇ ಆಗಿದ್ದುದರಿಂದ ಆಡಳಿತಕ್ಕೆ ಅನುಕೂಲವಾಗುತ್ತದೆ ಎಂದು ಭಾವಿಸಿದ. ೧೮೩೦ರಲ್ಲಿ ಧಾರವಾಡದಲ್ಲಿ ಶಿಕ್ಷಕರೊಬ್ಬರನ್ನು ನೇಮಿಸಿ ಕನ್ನಡ ಶಾಲೆಯನ್ನು ಆರಂಭಿಸಿದ. ಇದಕ್ಕೆ ಸರಕಾರದ ಮಾನ್ಯತೆ ದೊರೆಯದಿದ್ದರೂ, ತಾನೇ ಸ್ವಂತ ಖರ್ಚಿನಿಂದ ಆ ಶಾಲೆಯನ್ನು ನಡೆಸಿದ. ದುಃಸ್ಥಿತಿಯಲ್ಲಿದ್ದ ಹಲವಾರು ಮರಾಠಿ ಶಾಲೆಗಳನ್ನು ಕನ್ನಡ ಶಾಲೆಗಳನ್ನಾಗಿ ಪರಿವರ್ತಿಸಿ ಸುಸ್ಥಿತಿಗೆ ತರಲು ಪ್ರಯತ್ನಿಸಿದ. ಸರ್ ವಾಲ್ಟರ್

ಎಲಿಯಟ್ ಉತ್ತರ ಕರ್ನಾಟಕವನ್ನೂ ವಿಶೇಷವಾಗಿ ಧಾರವಾಡ ಮತ್ತು ಹುಬ್ಬಳ್ಳಿಗಳನ್ನು ಮರಾಠಿ ಪ್ರಭಾವದಿಂದ ಮುಕ್ತಗೊಳಿಸಲು ಪ್ರಯತ್ನಿಸಿದವರಲ್ಲಿ ಮೊದಲಿಗ ಎನ್ನಬಹುದು.

ಸರ್ ವಾಲ್ಟರ್ ಎಲಿಯಟ್ ಆರಂಭಿಸಿದ ಕೆಲಸವನ್ನು ಮುಂದುವರೆಸಿದವರು ಡೆಪ್ಯುಟಿ ಚೆನ್ನಬಸಪ್ಪನವರು. ವರ್ತಕರ ಮಗನಾಗಿ ಜನಿಸಿದ ಚೆನ್ನಬಸಪ್ಪನವರು ಎಂಜನಿಯರಿಂಗ್ ಶಿಕ್ಷಣ ಪಡೆದವರು. ಚೆನ್ನಬಸಪ್ಪನವರು ಧಾರವಾಡ ಪ್ರದೇಶದಲ್ಲಿ ಕನ್ನಡದ ದೀಪ ಹಚ್ಚಿ ಶಿಕ್ಷಣ ಇಲಾಖೆಯನ್ನು ಪ್ರವೇಶಿಸಿದರು. ಅವರು ಬೆಳಗಾವಿಗೆ ವರ್ಗಾವಣೆಗೊಂಡು ಬಂದಾಗ ವಿದ್ಯಾ ಇಲಾಖೆಯ ದಕ್ಷಿಣ ವಿಭಾಗದ ಇನ್‌ಸ್ಪೆಕ್ಟರ್ ಆಗಿದ್ದ ರಸೆಲ್ ಅವರಿಗೆ ಆ ಪ್ರಾಂತ್ಯದ ಭಾಷೆ ಕನ್ನಡ ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ಆಗ ರಸೆಲ್‌ರು ಕನ್ನಡ ಭಾಷೆಯ ಸ್ಥಿತಿಯನ್ನು ಅರಿತು ಮರುಕಗೊಂಡರು. ಚೆನ್ನಬಸಪ್ಪನವರಿಗೆ ೧೮೬೬ರಲ್ಲಿ ರಸೆಲ್ಲರು ಬೆಳಗಾವಿಯ 'ಡೆಪ್ಯುಟಿ ಎಜುಕೇಶನಲ್ ಇನಸ್ಪೆಕ್ಟರ್' ಎಂದು ನೇಮಿಸಿದರು. 'ಕನ್ನಡದ ಹುಲಿ' ಎನ್ನಿಸಿಕೊಂಡ ಡೆಪ್ಯುಟಿ ಚೆನ್ನಬಸಪ್ಪನವರ ಪ್ರಯತ್ನದಿಂದಾಗಿ ಕನ್ನಡ ಶಾಲೆಗಳು ಹೆಚ್ಚಿದವು. ಕನ್ನಡ ಶಾಲೆ ಮತ್ತು ಗುಣಮಟ್ಟವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಿದ ಕೀರ್ತಿ ಚೆನ್ನಬಸಪ್ಪನವರದು. ಇನಸ್ಪೆಕ್ಟರಾಗಿದ್ದ ರಸೆಲ್ಲರು ಹಾಗೂ ಫ್ಲೀಟ್‌ರು ಅವರಿಗೆ ಈ ವಿಷಯದಲ್ಲಿ ತುಂಬಾ ಪ್ರೋತ್ಸಾಹ ಕೊಟ್ಟ ಕಾರಣ, ಅವರ ಕಾಲದಲ್ಲಿ ಪ್ರಾಥಮಿಕ ಶಾಲೆಗಳು ಹೆಚ್ಚಾದವು. ಕಲಾದಗಿ ಜಿಲ್ಲೆಯಲ್ಲಿ ೧೫೦, ಬೆಳಗಾವಿ ಜಿಲ್ಲೆಯಲ್ಲಿ ೧೭೭, ಧಾರವಾಡ ಜಿಲ್ಲೆಯಲ್ಲಿ ೩೪೧ ಶಾಲೆಗಳು ಸ್ಥಾಪನೆಗೊಂಡವು.

೧೮೬೭ರಲ್ಲಿ ಕೇಂದ್ರ ಸರಕಾರವು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಮುಂಬಯಿ ಸರಕಾರಕ್ಕೆ ವಾರ್ಷಿಕ ಹತ್ತು ಸಾವಿರ ರೂಪಾಯಿಗಳ ಸಹಾಯಧನವನ್ನು ಒದಗಿಸಿತು. ಅದರಿಂದಾಗಿ ಮುಂದಿನ ಎರಡು ವರ್ಷಗಳಲ್ಲಿ ಕಲಾದಗಿ ಜಿಲ್ಲೆಯಲ್ಲಿ ೮, ಧಾರವಾಡ ಜಿಲ್ಲೆಯಲ್ಲಿ ೬, ಬೆಳಗಾವ ಜಿಲ್ಲೆಯಲ್ಲಿ ೫, ಉತ್ತರಕನ್ನಡ ಜಿಲ್ಲೆಯಲ್ಲಿ ೪, ಹೀಗೆ ಒಟ್ಟು ೨೩ ಹೆಣ್ಣುಮಕ್ಕಳ ಶಾಲೆಗಳನ್ನು ಸ್ಥಾಪಿಸಲಾಯಿತು. ಜೆ.ಎಫ್. ಫ್ಲೀಟ್‌ರು ಕನ್ನಡ ಶಾಲೆಗಳ ದುಃಸ್ಥಿತಿಯ ಕುರಿತು ಅಭಿಪ್ರಾಯಿಸುತ್ತಾ ಇಲ್ಲಿಯ ಪ್ರತಿಯೊಂದು ದೇಶಭಾಷಾ ಶಾಲೆಯೂ ಮರಾಠಿ ಶಾಲೆಯಾಗಿದೆ. ಜಹಾಗೀರದಾರನು ಮತ್ತು ಅವನ ಅಧಿಕಾರಿಗಳು ಮರಾಠಿಗರಿರುವುದರಿಂದ, ಅವರಿಗೆ ಜಹಗೀರಿಯಲ್ಲಿಯ ಜನತೆಯ ನಿಕಟ ಸಂಬಂಧವಿಲ್ಲ. ಇದರ ಫಲವಾಗಿ ಅವರು ಜನರ ಮಾತೃಭಾಷೆಯನ್ನೂ, ಅವರೊಡನೆ ಬಹುಸಂಖ್ಯಾತ ನಿವಾಸಿಗಳ ಶೈಕ್ಷಣಿಕ ಹಾಗೂ ಇತರ ಅವಶ್ಯಕತೆಗಳನ್ನು ಸಂಪೂರ್ಣವಾಗಿ ಅಲಕ್ಷಿಸಿದ್ದಾರೆ. ಇದರಿಂದ ಬರಿಯ ಶೈಕ್ಷಣಿಕ ಹಾನಿಯಾಗಿಲ್ಲ. ನ್ಯಾಯಾಲಯಗಳಲ್ಲಿ ಅಪರಾಧಿಗಳು ಮತ್ತು ಸಾಕ್ಷಿದಾರರು ಕನ್ನಡದಲ್ಲಿ ಕೊಟ್ಟ ಹೇಳಿಕೆಗಳನ್ನು ಅವರಿಗೆ ಬಾರದ ಮರಾಠಿಯಲ್ಲಿ ಬರೆದುಕೊಳ್ಳಲಾಗುವುದರಿಂದ ಅವರಿಗೆ ತಮ್ಮ ವಿಚಾರಗಳನ್ನು ಸರಿಯಾಗಿ ಬರೆದುಕೊಳ್ಳಲಾಗಿದೆಯೇ ಇಲ್ಲವೆ ಎಂಬ ಅಂಶವು ತಿಳಿಯುವುದಿಲ್ಲ. ಮರಾಠಿಯ ಸ್ಥಾನದಲ್ಲಿ ಕ್ರಮವಾಗಿ ಕನ್ನಡವು ಬರಲೇಬೇಕು ಹಾಗೂ ಜಹಗೀರಿಯಲ್ಲಿಯ ಪ್ರತಿಯೊಂದು ಮರಾಠಿ ಶಾಲೆಯೂ ಕನ್ನಡ ಶಾಲೆಯಾಗಿ ಮಾರ್ಪಡಲೇಬೇಕು.[೨೩]

ರಸೆಲ್ಲರು ಕನ್ನಡದ ಬಗೆಗೆ ಇರಿಸಿಕೊಂಡ ಕಾಳಜಿ ಅಪಾರ. ಕನ್ನಡದ ಉದ್ಧಾರಕ್ಕಾಗಿ ಪಟ್ಟ ಪರಿಶ್ರಮ, ಮಹತ್ ಸಾಧನೆಯನ್ನು ಶ್ಲಾಘಿಸುತ್ತಾ ಆರ್.ಇ.ಕ್ಯಾಂಡಿ ಇವರು ಈ ಆಂದೋಲನದ ಚೈತನ್ಯವನ್ನು ೧೮೭೧-೭೨ ರಲ್ಲಿಯೇ ಗುರುತಿಸಿ, ಅದು 'ಕನ್ನಡದ ಪ್ರಾಚೀನತೆಯ ಪುನರುಜ್ಜೀವನ' ಎಂದು ಕರೆದಿದ್ದಾರೆ. ಶಿಕ್ಷಣ ಮತ್ತು ಸಾಹಿತ್ಯಗಳ ಈ ಪುನರುಜ್ಜೀವನದಲ್ಲಿ ಪಾಲ್ಗೊಂಡ ವಿದೇಶಿಯ ಗಣ್ಯರೆಂದರೆ ರಸೆಲ್, ವರ್ಥ, ಫ್ಲೀಟ್, ಮೋಗ್ಲಿಂಗ್, ಝೀಗ್ಲರ್, ಸ್ಯಾಂಡರ್‌ಸನ್, ಕಿಟೆಲ್ ಪ್ರಮುಖರಾದರೆ, ದೇಶಿಯರಲ್ಲಿ ಡೆಪ್ಯುಟಿ ಚೆನ್ನಬಸಪ್ಪ, ಗಂಗಾಧರ ಮಡಿವಾಳೇಶ್ವರ ತುರುಮರಿ, ವೆಂಕಟರಂಗೋಕಟ್ಟಿ, ಭುಜಂಗರಾವ ಹುಯಿಲಗೋಳ, ರೊದ್ದ ಶ್ರೀನಿವಾಸರಾಯರು ಮೊದಲಾದವರು ಪ್ರಮುಖರು. ಆ ಕಾಲದಲ್ಲಿ ಈ ಎಲ್ಲ ಮಹನೀಯರು ಕನ್ನಡ ಶಿಕ್ಷಣ ಹಾಗೂ ಸಾಹಿತ್ಯರಂಗಗಳಲ್ಲಿ ದಕ್ಷಿಣ ಮಹಾರಾಷ್ಟ್ರ ಭಾಗದಲ್ಲಿ ಸಲ್ಲಿಸಿದ ಸೇವೆ ಅಮೋಘವಾಗಿರುವುದು. ಕನ್ನಡ ಕೆಲಸಕ್ಕಾಗಿ ರಸೆಲ್ಲರು ಈ ಮುಖಂಡರನ್ನು ಹುರಿದುಂಬಿಸಿ, ಪ್ರೋತ್ಸಾಹಿಸಿ ಬೆಳಕಿಗೆ ತಂದರು. "ನೀಲಾಂಜನಕ್ಕಿದ್ದ ಮಹತ್ವ ಆರತಿಯ ತಟ್ಟೆಗೂ ಇದ್ದರೆ ರಸೆಲ್‌ರೇ ಆರತಿ ತಟ್ಟೆ"[೨೪] ಎಂದು ವೆಂಕಟೇಶ ಸಾಂಗಲಿಯವರ ಮಾತಿನಲ್ಲಿ ಮತ್ತು ರಾ.ಯ.ಧಾರವಾಡಕರ ಅವರು 'ಹೊಸಗನ್ನಡ ಸಾಹಿತ್ಯದ ಉದಯಕಾಲ' ಗ್ರಂಥದಲ್ಲಿ "ಕನ್ನಡದ ಪುನರುತ್ಥಾನದ ಈ ಸಮಯಕ್ಕೆ ರಸೆಲ್ ಅವರು ರಂಗಸ್ಥಳದ ಮೇಲೆ ಕಂಡುಬರದಿದ್ದರೆ, ಕನ್ನಡದ ಪುನರುಜ್ಜೀವನ ಪ್ರಾಯಶಃ ಇನ್ನೂ ಐವತ್ತು ವರ್ಷ ಮುಂದೆ ಬೀಳುತ್ತಿತ್ತು. ಶೈಕ್ಷಣಿಕವಾಗಿ ಕನ್ನಡದ ಈ ಪ್ರಾಣಪ್ರತಿಷ್ಠೆಯನ್ನು ಮಾಡಿದ ಶ್ರೇಯಸ್ಸು ರಸೆಲ್ ಸಾಹೇಬರಿಗಿದೆ"[೨೫] ಎಂದು ಹೇಳುವಲ್ಲಿ ರಸೆಲ್‌ರಿಗೆ ಕನ್ನಡದ ಬಗ್ಗೆ ಇರುವ ಕಾಳಜಿ ಮತ್ತು ಅವರ ಕನ್ನಡಪರ ಹೋರಾಟದ ಪರಿಶ್ರಮ ಎದ್ದು ಕಾಣುತ್ತದೆ.

೧೮೫೪ರ ಸಂಯೋಜನೆಯ ಆದೇಶಗಳು ಎಷ್ಟರ ಮಟ್ಟಿಗೆ ಫಲಪ್ರದವಾಗಿವೆಯೆಂಬುದನ್ನು ಕಂಡು ಹಿಡಿಯಲು, ಬ್ರಿಟಿಷ್ ಸರಕಾರವು ೧೮೮೨ರಲ್ಲಿ ಮತ್ತೊಂದು ಕಮಿಶನ್(ಇಂಡಿಯನ್ ಎಜುಕೇಶನ್ ಕಮಿಷನ್) ಹಂಟರವರ ಅಧ್ಯಕ್ಷತೆಯಲ್ಲಿ ನೇಮಿಸಿತು. ಅದು ಮುಂಬಯಿ ಇಲಾಖೆಯ ಪ್ರಾಥಮಿಕ ಶಿಕ್ಷಣವನ್ನು ಪರಿಶೀಲಿಸಿ, ನಾಲ್ಕು ಅಂಶಗಳನ್ನು ಒತ್ತಿ ಹೇಳಿತು. ಅದರ ಪ್ರಕಾರ ಪ್ರಾಥಮಿಕ ಶಿಕ್ಷಣದ ಶಾಲೆಗಳನ್ನು ತೀವ್ರವಾಗಿ ಹೆಚ್ಚಿಸುವುದು. ದೇಶಿಯ ಶಾಲೆಗಳನ್ನು ಪ್ರೋತ್ಸಾಹಿಸಿ, ಅವುಗಳನ್ನು ಸುಧಾರಣೆ ಮಾಡುವುದು. ಪ್ರಾಥಮಿಕ ಶಿಕ್ಷಣಕ್ಕಾಗಿ ಪ್ರಾಂತೀಯ ಸರಕಾರವು ಮಂಜೂರು ಮಾಡಿದ ಮೊಬಲಗಿನ ಜೊತೆಗೆ ಲೋಕಲ್ ಫಂಡ ಕರವನ್ನು ಪೂರ್ಣವಾಗಿ ವಿನಿಯೋಗಿಸುವುದರಿಂದ ಹೆಚ್ಚಿನ ಪರಿಣಾಮವನ್ನು ಸಾಧಿಸಬಹುದು. ಮುನಸಿಪಾಲಟಿಗಳು ಮತ್ತು ಲೋಕಲ್ ಬೋರ್ಡುಗಳು ಪ್ರತ್ಯೇಕವಾದ ಸ್ಕೂಲ್ ಫಂಡ್ಸಗಳನ್ನು ಏರ್ಪಡಿಸಿ, ಪ್ರಾಥಮಿಕ ಶಿಕ್ಷಣದ ಪ್ರಗತಿಯನ್ನು ಮುಂದುವರೆಸಬೇಕು. ೧೮೮೨ರ ಮುಂದೆ ಮುನಿಸಿಪಾಲಿಟಿಗಳು ಮತ್ತು ಲೋಕಲ್ ಬೋರ್ಡ್‌ಗಳು ತಮ್ಮ ತಮ್ಮ ಪಾಲಿನ ಕಾರ್ಯವನ್ನು ಮುಂದುವರೆಸಿದವು.[೨೬]

ಈ ಹಿನ್ನೆಲೆಯಲ್ಲಿ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿಯವರು ದೇಶಿಯ ಶಾಲೆಗಳನ್ನು ಸುಧಾರಿಸುವಲ್ಲಿ ಸತತ ಪ್ರಯತ್ನ ನಡೆಸಿದರು. ಸಂಸ್ಥಾನ ಮತ್ತು ಸರಕಾರದ ಸಹಾಯ ಪಡೆದುಕೊಂಡು ಶಾಲೆಗಳನ್ನು

ಹೆಚ್ಚಿಸಿದರು. ಇದರಂತೆ ಶ್ರೀ ಪಂಡಿತಪ್ಪನವರು ಬೆಳಗಾವಿಯ ಲೋಕಲ್ ಬೋರ್ಡ್ ಅಧ್ಯಕ್ಷರಾಗಿ ಅನೇಕ ಪ್ರಯತ್ನ ಮಾಡಿದರು.

೨.೬. ಭಾಷಿಕ ಪರಿಸರ:

೧೮೫೭ರ ಮಹಾದಂಗೆಯು ದೇಶಿಯ ಸಂಸ್ಥಾನಗಳ ಮೇಲೆ ಪ್ರಭಾವ ಬೀರಿತು. ೧೮೫೮ರ ಶಾಸನದ ಪ್ರಕಾರ ಭಾರತದಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯು ಕೊನೆಗೊಂಡು, ನೇರವಾಗಿ ಆಡಳಿತದ ಚುಕ್ಕಾಣಿ ಬ್ರಿಟನ್ ಮಹಾರಾಣಿಯ ಕೈಸೇರಿತು. ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟ ಕನ್ನಡನಾಡು ಧಾರವಾಡ, ವಿಜಾಪುರ, ಬೆಳಗಾವಿ ಮತ್ತು ಕಾನಡಾ ಎಂಬ ನಾಲ್ಕು ಜಿಲ್ಲೆಗಳಲ್ಲಿ ವಿಸ್ತರಿಸಿತ್ತು. ಕನ್ನಡ ಭಾಷಿಕರೇ ಅಧಿಕವಾಗಿದ್ದ ಪ್ರಾಂತ್ಯಗಳು ಬ್ರಿಟಿಷ್ ಆಡಳಿತದ ೨೦ ಘಟಕಗಳಲ್ಲಿ ಹಂಚಿಹೋಗಿದ್ದವು.[೨೬] ಮೈಸೂರು ಸಂಸ್ಥಾನ ಹೊರತು ಉಳಿದ ಸಂಸ್ಥಾನಗಳು ಅನ್ಯಭಾಷೀಯ ರಾಜರ ದೌರ್ಜನ್ಯದಿಂದ ನರಳುವಂತಾದವು. ಮುಂಬಯಿ ಪ್ರಾಂತ್ಯದಲ್ಲಿ ಮರಾಠಿಯ ಪ್ರಾಬಲ್ಯ ಇದ್ದರೆ, ಹೈದರಾಬಾದ ಪ್ರಾಂತ್ಯಗಳಲ್ಲಿ ಉರ್ದು ಮತ್ತು ಮರಾಠಿಯ ಪ್ರಾಬಲ್ಯ ಇತ್ತು. ಮದ್ರಾಸ್ ಅಧಿಪತ್ಯಕ್ಕೆ ಸೇರಿದ ಭಾಗಗಳಲ್ಲಿ ಕನ್ನಡವು ತೆಲುಗು ಮತ್ತು ತಮಿಳು ಭಾಷೆಗಳೊಂದಿಗೆ ಸ್ಪರ್ಧಿಸಬೇಕಾಗಿತ್ತು. ಹೀಗೆ ಅನ್ಯದೇಶ ಮತ್ತು ಅನ್ಯಭಾಷೆಯ ಸಂಸ್ಕೃತಿಗಳನ್ನು ಮೇಳೈಸಿಕೊಂಡು ಬದುಕುತ್ತಿದ್ದ ಕನ್ನಡದ ಸ್ಥಿತಿ ಹೀನಾಯವಾಗಿತ್ತು. ಹಲವಾರು ರಾಜರುಗಳ ರಾಜಕೀಯದಲ್ಲಿ ಸಿಕ್ಕು ಕನ್ನಡನಾಡು ತನ್ನ ಸ್ವಂತಿಕೆಯನ್ನು ಕಳೆದುಕೊಂಡಿತಲ್ಲದೆ, ಕನ್ನಡನಾಡಿನ ಜನರು ತಮ್ಮ ನೆಲದಲ್ಲಿಯೇ ಅನಾಥರಂತೆ ಬದುಕುವ ಸ್ಥಿತಿ ನಿರ್ಮಾಣಗೊಂಡಿತ್ತು. ಒಂದು ಭಾಷೆಯನ್ನಾಡುವ ಜನಾಂಗವನ್ನು ಸಂಪೂರ್ಣವಾಗಿ ನಾಶಪಡಿಸಬೇಕೆಂದಿದ್ದರೆ, ಮದ್ದು, ಗುಂಡು, ಅಪಾರ ಸೈನ್ಯ ಬೇಕೆಂದಿಲ್ಲ. ಆಡಳಿತ ಮಾಡುವ ರಾಜಕೀಯ ಭಾಷೆಯನ್ನು ಆ ಜನಾಂಗದ ಮೇಲೆ ಹೇರಿಬಿಟ್ಟರೆ ಸಾಕು. ಯಾವುದೇ ಹಿಂಸೆಯ ಗದ್ದಲವಿಲ್ಲದೆ ಆ ಸ್ಥಳೀಯ ಭಾಷೆ ಸತ್ತು ಹೋಗಿಬಿಡುತ್ತದೆ. ಒಂದು ಜನಾಂಗ ತನ್ನ ನಾಡು–ನುಡಿ–ಸಂಸ್ಕೃತಿಯೊಂದಿಗೆ ಭಾವನಾತ್ಮಕ ಸಂಬಂಧದ ಎಳೆಗಳನ್ನು ಹೊಂದಿರುತ್ತದೆ. ಆ ಸಂಬಂಧದ ಭಾಷೆಯ ಎಳೆಯನ್ನು ಕಿತ್ತುಹಾಕಿದರೆ "ಒಂದು ಭಾಷೆಯ ಬಳಕೆ ತಪ್ಪುವುದೆಂದರೆ ಆ ಭಾಷೆ ಸಾಯುವುದೆಂದೇ ಅರ್ಥ."[೨೭] ದಕ್ಷಿಣ ಕರ್ನಾಟಕದಲ್ಲಿ ಟೀಪು, ಹೈದರ ಇವರಿಂದ ಎಷ್ಟೇ ದೌರ್ಜನ್ಯ ನಡೆದರೂ, ಮೈಸೂರು ರಾಜರ ಕೃಪೆಯಿಂದ ಕನ್ನಡಕ್ಕೆ ತನ್ನದೇ ಆದ ಸ್ಥಾನಮಾನವಿತ್ತು. ಇದಕ್ಕೆ ವ್ಯತಿರಿಕ್ತವಾಗಿ ಉತ್ತರ ಕರ್ನಾಟಕವು ಮರಾಠಾ ಮತ್ತು ಮುಸಲ್ಮಾನರ ಪ್ರಭಾವದಿಂದ ತನ್ನ ಮಾತೃಭಾಷೆಯನ್ನೇ ಮರೆತುಬಿಟ್ಟಿತ್ತು. ಪೇಶ್ವೆಯವರ ಆಡಳಿತದಲ್ಲಿ ಉತ್ತರ ಕರ್ನಾಟಕವು ಹತ್ತೊಂಬತ್ತು ಭಾಗಗಳಲ್ಲಿ ಹರಿದು ಹಂಚಿ ಹೋಗಿ 'ದಕ್ಷಿಣ ಮಹಾರಾಷ್ಟ್ರ' ಎಂಬ ಹೆಸರನ್ನು ಪಡೆದುಕೊಂಡಿತು. ಕನ್ನಡಿಗರು ಮುಸಲ್ಮಾನ, ಮರಾಠಾ ಸಂಸ್ಕೃತಿಯೊಂದಿಗೆ ಪೈಪೋಟಿ ನಡೆಸುವಂತಾಯಿತು. ಉತ್ತರ ಕರ್ನಾಟಕದ ವಿದ್ಯಾರ್ಥಿಗಳು ತಮ್ಮ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬ್ರಿಟಿಷರ ಆಡಳಿತ ಕೇಂದ್ರವಾದ ಪುಣೆಗೆ ತೆರಳುತ್ತಿದ್ದರು. ಸಾರಿಗೆ ಸೌಲಭ್ಯವಿರಲಾರದ ಆ

ಪರಿಸ್ಥಿತಿಯಲ್ಲಿ ಕಾಲ್ನಡಿಗೆಯಿಂದ ಪುಣೆಗೆ ಹೋಗಿ, ಕಷ್ಟಪಟ್ಟು ಪದವಿ ಪಡೆದುಕೊಂಡು ಬರುತ್ತಿದ್ದರು. ಅಲ್ಲಿ ತಮ್ಮ ಉದ್ದೇಶವನ್ನೇ ಮರೆತು ಮರಾಠಿ ಭಾಷೆ–ಸಂಸ್ಕೃತಿಯಲ್ಲಿಯೇ ಮುಳುಗಿಹೋಗುತ್ತಿದ್ದರು.

ಮರಾಠಿ ಮೋಹಕ್ಕೊಳಗಾದ ಕನ್ನಡಿಗರು ತಾವು ಮದುವೆಯಾದ ಹೆಣ್ಣುಮಕ್ಕಳಿಗೂ ಒತ್ತಾಯಪೂರ್ವಕವಾಗಿ ಮರಾಠಿ ಕಲಿಸುತ್ತಿದ್ದರು. ವರ್ತಮಾನ ಪತ್ರಿಕೆ, ಪುಸ್ತಕ, ನಾಟಕ, ಸಂಗೀತ ಮೊದಲಾದವುಗಳನ್ನು ಮರಾಠಿಯಲ್ಲಿಯೇ ಬಯಸುತ್ತಿದ್ದರು. ಮರಾಠಿ ಭಾಷೆಯ ಪ್ರಭಾವ ಅದೆಷ್ಟು ದಟ್ಟವಾಗಿತ್ತೆಂದರೆ "ಶ್ರೀಮಂತರಾಗಿದ್ದರೆ ಮರಾಠ ಮುಲಿಗಳನ್ನು ಕಟ್ಟಿಕೊಂಡು ಮರಳುತ್ತಿದ್ದರು. ಮಾತೃಭಾಷೆ, ಪಿತೃಭಾಷೆಗಳ ಸ್ಥಾನದಲ್ಲಿ ಭಾರ್ಯ(ಹೆಂಡಂದಿರ) ಭಾಷೆ ರಾರಾಜಿಸುತ್ತಿತ್ತು. ಹೀಗೆ ಆ ಮರಾಠಿ ಅರಸಾಗಿ, ಕನ್ನಡ ಕೊರಸಾಯಿತು. ಇಂಥ ಅನ್ಯ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹೊಡೆತಕ್ಕೆ ಸಿಕ್ಕು ಸ್ಥಿತಿ ದಾರುಣವಾಯಿತು. ಕುರಿ ಹಿಂಡಿನಲ್ಲಿದ್ದ ಹುಲಿಮರಿಗೆ ಸ್ವಯಂ ಜ್ಞಾನವುಂಟಾಗಲು ವೇಳೆ ಹಿಡಿಯುವಂತೆ ಕನ್ನಡಿಗರಿಗೆ ತಮ್ಮ ಭಾಷೆ ಕನ್ನಡವೆಂದು ತಿಳಿಯಲು ಹತ್ತಾರು ವರ್ಷಗಳು ಹತ್ತಿದವು.[೨೮] ಪೇಶ್ವೆಯವರ ಅಧಿಕಾರವನ್ನು ನಿರ್ನಾಮ ಮಾಡಿದ ಆಂಗ್ಲ ಅಧಿಕಾರಿ ಥಾಮಸ್ ಮನ್ರೊ ಕನ್ನಡದ ದುರವಸ್ಥೆಯನ್ನು ಕಂಡು ೧೮೨೬ರಲ್ಲಿ ಸಲಹೆ ಮಾಡಿದ. ಕನ್ನಡ ಭಾಷಾ ಪ್ರದೇಶಗಳನ್ನೆಲ್ಲಾ ಒಂದೇ ಆಡಳಿತಕ್ಕೆ ತರಬೇಕು ಮತ್ತು ಈ ಪ್ರದೇಶದ ಜನತೆಯ ಆಡಳಿತ, ಶಿಕ್ಷಣ, ಸಾಮಾಜಿಕ ಸಾಮರಸ್ಯಗಳಿಗಾಗಿ ಅವುಗಳನ್ನು ಮುಂಬಯಿ ಅಧಿಪತ್ಯದಿಂದ ಬೇರ್ಪಡಿಸಿ, ಮದರಾಸು ಅಧಿಪತ್ಯಕ್ಕೆ ಸೇರಿಸಬೇಕು. ಒಂದು ವೇಳೆ ಈ ಸಲಹೆಯನ್ನು ಈಸ್ಟ್ ಇಂಡಿಯಾ ಕಂಪನಿ ಮಾನ್ಯ ಮಾಡಿದ್ದರೆ ಕನ್ನಡ ನಾಡು ಸುಮಾರು ೧೩೦ ವರ್ಷಗಳಿಂದ ಮರಾಠಿ ಹಿಡಿತದಿಂದ ಮುಕ್ತವಾಗಬಹುದಿತ್ತು.[೨೯]

ರಸೆಲ್ಲರು ೧೮೬೫ರಲ್ಲಿ ದಕ್ಷಿಣಭಾಗದ ಇನ್ಸಪೆಕ್ಟರರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಅಂದಿನ ಕನ್ನಡದ ಪರಿಸ್ಥಿತಿಯನ್ನು ತಮ್ಮ ವರದಿಗಳಲ್ಲಿ ಹೀಗೆ ಉಲ್ಲೇಖಿಸುತ್ತಾರೆ. "ಗುಜರಾತಿ ಮತ್ತು ಮರಾಠಿ ಭಾಷೆಗಳು ಅವರವರ ಪ್ರಾಂತ್ಯಗಳಲ್ಲಿ ಬೋಧಿಸಲ್ಪಡುತ್ತಿವೆ, ಹದಗೊಳ್ಳುತ್ತಿವೆ. ಈ ಪರಿಸ್ಥಿತಿಯಿಂದ ಕನ್ನಡ ಭಾಷೆ ವಂಚಿತವಾಗಿದೆ. ಬೇರೆ ಬೇರೆ ವಿಭಾಗಗಳಲ್ಲಿ ಶಿಕ್ಷಣದ ಸಾಧನಗಳು ವಿಪುಲವಾಗಿರುವಾಗ ಕನ್ನಡ ಪುಸ್ತಕಗಳು (ಮತ್ತು ಉಪಾಧ್ಯಾಯರುಗಳು) ಇನ್ನೂ ತಯಾರಿ ಹಂತದಲ್ಲಿವೆ. ಬಹುಜನ ಉಪಾಧ್ಯಾಯರ ಭಾಷೆ ಕನ್ನಡವಾಗಿದೆ. ಮರಾಠಿದೇಶ ಭಾಷಿಕರು ಸಾಮಾನ್ಯವಾಗಿ ಕನ್ನಡ ಮಾತಾಡಬಲ್ಲವರೇ ಇದ್ದಾರೆ. ದುರದೃಷ್ಟದ ಮಾತೆಂದರೆ ಸ್ಥಳೀಯ ಕನ್ನಡಿಗರಾದ ಕೇವಲ ಕೆಲವರು ಮಾತ್ರ ಅವರು ತಮ್ಮ ಮಾತೃಭಾಷೆಯನ್ನು ಪಾಂಡಿತ್ಯಪೂರ್ಣವಾಗಿ ಕಲಿಸಬಲ್ಲವರಾಗಿದ್ದಾರೆ. ಮಿಕ್ಕವರೆಲ್ಲ ಕನ್ನಡ ಮಾತೃಭಾಷಿಕರಾಗಿದ್ದರೂ ಉಕ್ತ ಲೇಖನವನ್ನು ಲಕ್ಷಣವಾಗಿ ಬರೆಯಲು ಕೂಡ ಅಶಕ್ತರಾಗಿದ್ದಾರೆ. ಅವರಲ್ಲಿ ಅನೇಕರು ಶಾಲೆಯ ಮಟ್ಟಿಗಾದರೂ ಕನ್ನಡಕ್ಕಿಂತ ಚೆನ್ನಾಗಿ ಮರಾಠಿಯನ್ನೇ ತಿಳಿದವರು. ಈ ಎರಡು ಭಾಷೆಗಳ ಗೊಂದಲ ಮತ್ತು ಇವೆರಡು ಭಾಷೆಗಳಲ್ಲಿ ಯಾವುದರಲ್ಲೂ ಪ್ರಾವಿಣ್ಯವಿಲ್ಲದಿರುವುದು ದಕ್ಷಿಣ ವಿಭಾಗದ ಪಂಡಿತರನ್ನು ಉಳಿದೆರಡು ವಿಭಾಗದವರಿಗಿಂತ ಸಾಕಷ್ಟು ಕಾಲ ಹಿಂದುಳಿಯುವಂತೆ ಮಾಡಿದೆ ಎಂಬ ಭಯ ನನ್ನದು. ಈ ವಿಭಾಗದ ಡೆಪ್ಯುಟಿ ಇನ್ಸಪೆಕ್ಟರುಗಳು ಮತ್ತು ಇಂಗ್ಲಿಷ

ಉಪಾಧ್ಯಾಯರುಗಳಲ್ಲಿ ಯಾರೂ ಕ್ಯಾನರೀಸ್(ಕನ್ನಡ) ಭಾಷಿಕರಿಲ್ಲ. ಹಾಗೂ ಜಿಲ್ಲೆಗಳ ದೇಶಿಯ ಶಾಲಾ ಉಪಾಧ್ಯಾಯರುಗಳಲ್ಲಿ ಕೂಡ ಕೆಲವೇ ಕೆಲವರು ಕನ್ನಡ ಭಾಷಿಕರಾಗಿದ್ದಾರೆ. ಹೆಚ್ಚಾಗಿ ಮರಾಠಿ ಪುಸ್ತಕಗಳು ಹಾಗೂ ಉಪಾಧ್ಯಾಯರುಗಳಿಂದಲೇ ತುಂಬಿದ ಈ ಶಾಲೆಗಳ ವಿಷಯವಾಗಿ ಕನ್ನಡದ ಜನರು ಉದಾಸೀನಭಾವ ಹೊಂದಿದ್ದರೆ ಆ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ."[೩೦] ಈ ಮಾತುಗಳು ಕನ್ನಡಿಗರ ನಿರಭಿಮಾನ, ಭಾಷಾ ಉದಾಸೀನತೆಯನ್ನು ಎತ್ತಿ ತೋರಿಸುತ್ತದೆ.

"ಫರ್ಗೂಸನ್ ಕಾಲೇಜಿನ ದೊಡ್ಡ ಲಾಯಬ್ರರಿಯಲ್ಲಿ ಒಂದೂ ಕನ್ನಡ ಪುಸ್ತಕವಿರಲಿಲ್ಲ. ಇದು ಕನ್ನಡದ ಉಜ್ವಲಾಭಿಮಾನಿಯಾಗಿದ್ದ ರೊದ್ದ ವ್ಯಾಸರಾಯನಿಗೆ ಸಹನವಾಗಲಿಲ್ಲ. ಆತನು ಚಳುವಳಿ ಹೂಡಿದನು. ನಾವೆಲ್ಲರೂ ಬಹಳ ಬಡಿದಾಡಿದ ಬಳಿಕ ನಮ್ಮ ಪಾಲಿಗೆ ೫೦ರೂಪಾಯಿಗಳು ಮಂಜೂರು ಮಾಡಲ್ಪಟ್ಟವು. ಆದರೆ ಆ ೫೦ರೂ.ಗಳಲ್ಲಿ ಯಾವ ಪುಸ್ತಕ ತರಿಸಬೇಕೆನ್ನುವುದು ತಿಳಿಯಲಿಲ್ಲ. ಬಿ.ವೆಂಕಟಾಚಾರ್ಯರು ಬಂಗಾಲಿಯಿಂದ ಭಾಷಾಂತರಿಸಿದ ಕನ್ನಡ ಕಾದಂಬರಿಗಳ ಕೆಲವು ಹೆಸರುಗಳ ಪರಿಚಯವೇ ನಮ್ಮ ಜ್ಞಾನದ ಬಂಡವಲು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಪತ್ರ ಬರೆದು ಅಲ್ಲಿಂದಲೂ ಮೈಸೂರಿನಿಂದಲೂ ಕೆಲವು ಪುಸ್ತಕಗಳನ್ನು ತರಿಸಿಕೊಂಡೆವು. ಆದರೆ ಆ ಪುಸ್ತಕಗಳು ಬಂದ ಬಳಿಕ ನಾವು ಆ ಪುಸ್ತಕಗಳನ್ನು ಏಕೆ ತರಿಸಿದೆವೋ ಎಂದೆನಿಸಿತು. ಯಾಕೆಂದರೆ ಅವುಗಳಲ್ಲಿ ಬಹುತರವಾಗಿ ಯಾವ ಪುಸ್ತಕವೂ ಕಿರುಬೆರಳಿಗಿಂತ ದಪ್ಪವಾಗಿರಲಿಲ್ಲ. ಹೊಲಸು ಕಾಗದ, ತಪ್ಪು ಮುದ್ರಣ"

"ಉತ್ತರ ಕರ್ನಾಟಕದ ಮಧ್ಯಸ್ಥಳವಾದ ಧಾರವಾಡ ಜಿಲ್ಲೆಯಲ್ಲಿಯೂ, ಮುಖ್ಯ, ಮುಖ್ಯ ಪಟ್ಟಣಗಳಲ್ಲಿಯೂ ದೊಡ್ಡ, ದೊಡ್ಡ ವಕೀಲರೆಂದರೆ ಮರಾಠಿಗರೇ. ಆ ಕಾಲದಲ್ಲಿ ವಕೀಲರೇ ಸಾರ್ವಜನಿಕ ಚಳುವಳಿಗಾರರು. ಆದಕಾರಣ ಧಾರವಾಡದಲ್ಲಿ ಕೂಡ ಮರಾಠಿಯಲ್ಲಿಯೇ ಭಾಷಣಗಳು. ಕನ್ನಡದ ದುರ್ದೈವದಿಂದ ಇಲ್ಲಿಯ ಕನ್ನಡಿಗರಿಗೂ ಸೊಟ್ಟಪಟ್ಟ ಮರಾಠಿಯು ಬರುತ್ತಿತ್ತು. ಆದರೆ ಅವರು ಎಂತಹ ಹಟಮಾರಿಗಳೆಂದರೆ ಎಂತಹ ಸಂದರ್ಭದಲ್ಲಾದರೂ ಮರಾಠಿಯೇ ಮಾತನಾಡುತ್ತಿದ್ದರು ಹೊರತು ಕನ್ನಡವಲ್ಲ."[೩೧]

ರಾಜಧಾನಿಗಳಿಂದ ದೂರ ಇರುವ ಕನ್ನಡಿಗರು ತಮ್ಮ ಸಮಸ್ಯೆಗಳನ್ನು ಅಧಿಕಾರಿಗಳಿಗೆ ತಲುಪಿಸುವ ಸಾಧ್ಯತೆಗಳಿರಲಿಲ್ಲ. ಹೀಗಾಗಿ ಅಧಿಕಾರಿಗಳ ಮರ್ಜಿಯಂತೆ ಎಲ್ಲವೂ ನಡೆಯಬೇಕಾಗಿತ್ತು. ಇಂತಹ ವಿಷಯ ಮತ್ತು ಅರಕ್ಷಿತ ಹಾಗೂ ಅನಾಥ ಪರಿಸ್ಥಿತಿಯಲ್ಲಿ ಸಿಕ್ಕಿ ನೋವನ್ನೇ ತಮ್ಮ ಪಾಲಿಗೆ ಪಡೆದಿದ್ದ ಕನ್ನಡಿಗರು ಒಂದಾಗಲು ಮತ್ತು ತಮ್ಮದೇ ಆದ ಆಡಳಿತ ಭಾಷೆಯನ್ನು ಪಡೆಯಲು ಹೋರಾಡಬೇಕಾದ ಪರಿಸ್ಥಿತಿಯು ೧೯ನೆಯ ಶತಮಾನದ ಕೊನೆಯ ವರ್ಷಗಳಲ್ಲಿ ಸೃಷ್ಟಿಯಾಗಿತ್ತು. ಇದೇ ರೀತಿಯಾಗಿ ಮದ್ರಾಸ್ ಪ್ರಾಂತ್ಯದ ಕನ್ನಡಿಗರ ಸಮಸ್ಯೆಗಳು ಇದ್ದವು. ಅಲ್ಲದೆ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ನಿಜಾಮರ ಆಡಳಿತದಿಂದ ಉರ್ದು ಪ್ರಭಾವವೂ ಅಧಿಕವಾಗಿದ್ದು, ಕೇವಲ ಮೈಸೂರು ಪ್ರಾಂತ್ಯದಲ್ಲಿ ಕನ್ನಡಕ್ಕೆ ಹಾಗೂ ಅದು ಬಿಟ್ಟರಲು ಸಹಕಾರವಾಗುತ್ತಿರುವ ಸಂಸ್ಕೃತಕ್ಕೆ ಅಧಿಕ ಆದ್ಯತೆ ಇತ್ತು.

ಕೊಲ್ಲಾಪುರ ಸಂಸ್ಥಾನದ ಮಿಣಚಿ ಗ್ರಾಮದಲ್ಲಿ ಹುಟ್ಟಿ, ಬೆಳೆದು ಅನಿವಾರ್ಯವಾಗಿ ಮರಾಠಿ ಶಿಕ್ಷಣವನ್ನು ಪಡೆದ ತಮ್ಮಣ್ಣಪ್ಪನವರು ಕಾರಣಾಂತರಗಳಿಂದ ಚಿಕ್ಕೋಡಿಗೆ ಬಂದರು. ಕೊನೆಗೆ ಸಾಂಗಲಿ ಸಂಸ್ಥಾನದ ರಬಕವಿಗೆ ವಲಸೆ ಬಂದರು. ನಂತರ ಜಮಖಂಡಿ ಸಂಸ್ಥಾನದ ಬನಹಟ್ಟಿಗೆ ಬಂದು ನೆಲೆನಿಂತ ತಮ್ಮಣ್ಣಪ್ಪನವರು ಕನ್ನಡ ಭಾಷಾಭಿಮಾನದಿಂದ ಮೊದಲು ತಾವು ಸ್ವಪರಿಶ್ರಮದಿಂದ ಕನ್ನಡ ಕಲಿತು ಕನ್ನಡ ಶಾಲೆಯ ಶಿಕ್ಷಕರಾದರು. ಆಗ ತಮ್ಮಣ್ಣಪ್ಪನವರಿಗೆ ಕನ್ನಡ ನಾಡು-ನುಡಿ-ಸಂಸ್ಕೃತಿಯ ದುಃಸ್ಥಿತಿ ಅರಿವಾಗತೊಡಗಿತು. ಅಂದಿನಿಂದ ತಮ್ಮ ಜೀವಿತಾವಧಿಯ ವರೆಗೂ ಕನ್ನಡ ನಾಡು-ನುಡಿಯ ಕೈಂಕರ್ಯವನ್ನು ಸಲ್ಲಿಸುತ್ತ ಬಂದರು. ಮರಾಠಿಮಯವಾಗಿದ್ದ ಸಂಸ್ಥಾನಗಳಲ್ಲಿ ಕನ್ನಡಕ್ಕೆ ಪುನಶ್ಚೇತನ ನೀಡಿದರು. ಕನ್ನಡಕ್ಕಾಗಿ ಹುಟ್ಟಿಬಂದ ಸಂಸ್ಥೆಗಳಲ್ಲೆಲ್ಲ ತಮ್ಮಣ್ಣಪ್ಪನವರು ನಿಷ್ಕಾಮವಾಗಿ ದುಡಿದರು. ಜೊತೆಗೆ ತಮ್ಮ ಮನೆತನದ ಅಣ್ಣನ ಮಗನಾದ ಪಂಡಿತಪ್ಪ, ಅಳಿಯಂದಿರಾದ ಫಕೀರಪ್ಪ ಹಳಕಟ್ಟಿ ಮತ್ತು ಚೆನ್ನಮಲ್ಲಪ್ಪ ಅಬಕಾರವರನ್ನು ಕನ್ನಡ ಭಾಷೆಯ ಹೋರಾಟಕ್ಕೆ ಪ್ರೇರೆಪಿಸಿದರು.

೨.೭. ಸಾಂಸ್ಕೃತಿಕ ಪರಿಸರ:

ಜಾಗತಿಕ ಪರಂಪರೆಯಲ್ಲಿ ಭಾರತವು ತನ್ನದೇ ಆದ ಸಂಸ್ಕೃತಿಗೆ ಹೆಸರುವಾಸಿಯಾಗಿದೆ. ಈ ಸಂಸ್ಕೃತಿಯು ಭಾರತದ ಜನರು ಆಚರಿಸುವ ಹಬ್ಬಗಳಲ್ಲೇ ಅಡಗಿದೆ. ಏಕೆಂದರೆ ಭಾರತವು ಹಬ್ಬಗಳ ತವರೂರು. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಮುಖಂಡರು ಈ ಹಬ್ಬಗಳನ್ನು ಜನಸಂಘಟನೆಗಾಗಿ ಬಳಸಿಕೊಳ್ಳಲು ಪ್ರಯತ್ನಿಸಿದರು. ೧೮೫೭ರ ಕ್ರಾಂತಿಯ ವಿಫಲತೆಗೆ ಭಾರತೀಯರಲ್ಲಿಯ ಭಾವೈಕ್ಯತೆಯ ಕೊರತೆಯೇ ಮೊದಲ ಕಾರಣವೆಂದು ಭಾರತದ ಬುದ್ಧಿಜೀವಿಗಳು ಮನಗಂಡರು. ಭಾರತದ ಜನತೆಗೆ ಬ್ರಿಟಿಷ್ ಸಾರ್ವಭೌಮತ್ವದ ದುರಾಡಳಿತ ಬೇಸರ ತಂದಿತ್ತು. ಭಾರತದ ಹಲವಾರು ಮುಖಂಡರು ದೇಶದ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡರು. ಭಾರತದ ಸ್ವಾತಂತ್ರ್ಯಕ್ಕಾಗಿ ಭಾರತೀಯರಲ್ಲಿ ಒಗ್ಗಟ್ಟಿನ ಜಾಗೃತಿಯನ್ನುಂಟು ಮಾಡಲು ಅನೇಕ ಯೋಜನೆಗಳನ್ನು ಹಾಕಿಕೊಂಡರು. ಆ ಯೋಜನೆಗಳನ್ನು ಜಾರಿಗೊಳಿಸಲು ಹಬ್ಬಗಳ ಮೂಲಕ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದರು. ಅಲ್ಲೆಲ್ಲ ಸಾರ್ವಜನಿಕ ಸಭೆ, ಸಮಾರಂಭಗಳನ್ನು ಏರ್ಪಡಿಸಿ, ರಾಜಕೀಯ ವಿಷಯಗಳನ್ನು ಚರ್ಚಿಸಲಾಗುತ್ತಿತ್ತು. ತಿಲಕ, ರಾನಡೆ, ಗೋಖಲೆ ಮುಂತಾದ ಮುಖಂಡರು ಮಾಡಿದ ಭಾಷಣಗಳನ್ನು ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸಿ ದೇಶದ ತುಂಬಾ ಪ್ರಚಾರ ಮಾಡಲಾಗುತ್ತಿತ್ತು. ತಿಲಕರು ಗಣೇಶೋತ್ಸವವನ್ನು ಸಾರ್ವಜನಿಕವಾಗಿ ಆಚರಿಸಲು ಪ್ರಾರಂಭಿಸಿದರು. ಈ ಗಣೇಶೋತ್ಸವ ಆಚರಣೆಯ ಉದ್ದೇಶ ಪರೋಕ್ಷವಾಗಿ ಜನರಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಜಾಗೃತಿಯನ್ನು ಉಂಟು ಮಾಡುವುದೇ ಆಗಿತ್ತು. ಈ ಪ್ರೇರಣೆಯು ಉತ್ತರ ಕರ್ನಾಟಕದ ಮೇಲೂ ಉಂಟಾಯಿತು. ತಮ್ಮಣ್ಣಪ್ಪನವರು ತಿಲಕರ ಈ ಗಣೇಶೋತ್ಸವ ಆಚರಣೆಯ ಉದ್ದೇಶವನ್ನು ಮೆಚ್ಚಿಕೊಂಡರು. ಇದೇ ಸಂದರ್ಭದಲ್ಲಿ ಕನ್ನಡನಾಡು ಅನ್ಯದೇಶ, ಭಾಷೆ, ಸಂಸ್ಕೃತಿಗಳಿಂದ ನಲುಗಿಹೋಗಿತ್ತು. ಹರಿದು ಹಂಚಿಹೋದ ಕನ್ನಡನಾಡು; ಅದೇ ರೀತಿಯಲ್ಲಿ ಜನರ ಭಾವನೆಗಳು ಹಂಚಿ ಹೋಗಿದ್ದವು. ತಮ್ಮಣ್ಣಪ್ಪನವರು ಕನ್ನಡ ನಾಡು-ನುಡಿ-

ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿ ಇಟ್ಟುಕೊಂಡವರು. ಕನ್ನಡ ಭಾಷೆ, ಸಂಸ್ಕೃತಿ ಕನ್ನಡಿಗರಿಗೆ ದೊರೆಯಬೇಕಾದರೆ ಕನ್ನಡಿಗರ ಒಗ್ಗೂಡುವಿಕೆ ಅವಶ್ಯಕತೆಯಿದೆ ಎಂಬುದನ್ನು ಅವರು ಮನಗಂಡರು. ಹೀಗಾಗಿ ತಮ್ಮಣ್ಣಪ್ಪನವರು ೧೯೨೩ರಲ್ಲಿಯೇ ನಾಡದೇವಿಯ ಸಂಭ್ರಮದ ಆಚರಣೆಯನ್ನು ತಂದರು. ಈ ಸಂಭ್ರಮದ ಆಚರಣೆ ಎಂದರೆ ಶ್ರೇಷ್ಠ ಸಾಹಿತಿಗಳನ್ನು ಬನಹಟ್ಟಿಯಂತಹ ಸಣ್ಣ ಊರಿಗೆ ಕರೆಸಿ, ಅವರಿಂದ ಭಾಷಣಗಳ ಸವಿಯನ್ನು ಜನತೆಗೆ ಉಣಬಡಿಸಿದರು. ೧೪-೧೦-೧೯೨೯ರಲ್ಲಿ ಜಂಗೀನ ಮುರುಗೆಯ್ಯನವರು ಮತ್ತು ಶ್ರೀ ಮಂಗಳವೇಡೆ ಕೃಷ್ಣರಾಯರನ್ನು ಬನಹಟ್ಟಿಗೆ ಆಹ್ವಾನಿಸಿದ ಕೀರ್ತಿ ಶ್ರೀ ತಮ್ಮಣ್ಣಪ್ಪನವರದು. ಅದಲ್ಲದೆ ಅವರು 'ಬಸವಜಯಂತಿ'ಯನ್ನು ಬನಹಟ್ಟಿಯ ಪ್ರಾರ್ಥನಾ ಸಮಾಜದ ಆಶ್ರಯದಲ್ಲಿ ಜರುಗಿಸಿದ್ದು ತಿಳಿದುಬರುತ್ತದೆ. ತಮ್ಮಣ್ಣಪ್ಪನವರು ಕೂಡ ಇಂತಹ ಕಾರ್ಯಕ್ರಮಗಳಿಗೆ ಅತಿಥಿಗಳಾಗಿ ಹೋಗುತ್ತಿದ್ದುದು ವಿಶೇಷವಾಗಿತ್ತು.

ಸಮಾಜದಲ್ಲಿ ಮೂಢನಂಬಿಕೆ, ಅಜ್ಞಾನ, ಅನಕ್ಷರತೆ ತುಂಬಿಕೊಂಡು ಅಂಧಕಾರದಲ್ಲಿರುವ ಸಂದರ್ಭದಲ್ಲಿ ಕತ್ತಲೆಯನ್ನು ಹೊಡೆದೋಡಿಸಲೆಂದೇ ದೀಪವಾಗಿ ಬೆಳಗಬಂದವರು ಚಿಕ್ಕೋಡಿ ಕುಟುಂಬದವರು. ಚಿಕ್ಕೋಡಿ ಕುಟುಂಬದ ಮಹನೀಯರಾದ ಶ್ರೀ ತಮ್ಮಣ್ಣಪ್ಪ, ಶ್ರೀ ಪಂಡಿತಪ್ಪ ಮತ್ತು ಶ್ರೀ ರಾಮಪ್ಪನವರು ಪ್ರಾದೇಶಿಕ ಮಟ್ಟದಲ್ಲಿದ್ದುಕೊಂಡು, ಅಪಾರ ಜ್ಞಾನವನ್ನು ಹೊಂದಿದ್ದರಲ್ಲದೆ, ಸಮಾಜದ ಬಗ್ಗೆ ಸದಾ ಕಾಳಜಿಯನ್ನು ಹೊಂದಿದ್ದರು. ಅಂತೆಯೇ ಕರ್ನಾಟಕದ ಒಂದು ಮೂಲೆಯಲ್ಲಿದ್ದರೂ ರಾಷ್ಟ್ರೀಯ ಪರಿಸ್ಥಿತಿಯನ್ನು ಅರಿತುಕೊಂಡರು. ರಾಷ್ಟ್ರೀಯ ಚಳುವಳಿಯಲ್ಲಿ ಭಾಗಿಯಾದರಲ್ಲದೆ, ಯುವಶಕ್ತಿಗೆ ಪ್ರೇರಕರಾದರು. ಮರಾಠಿ ಭಾಷೆಯ ಹೊಡೆತಕ್ಕೆ ಕನ್ನಡವು ತತ್ತರಿಸಿ ನಲುಗಿ ಹೋದಂತಹ ಸಂದರ್ಭದಲ್ಲಿ ಹುಟ್ಟಿಬಂದ ತಮ್ಮಣ್ಣಪ್ಪನವರು ಕನ್ನಡ ನಾಡು-ನುಡಿ-ಸಂಸ್ಕೃತಿಯ ಉದ್ಧಾರಕ್ಕಾಗಿ ಶ್ರಮಿಸಿ 'ಗಡಿನಾಡಿನ ಹುಲಿ' ಎಂದು ಹೆಸರು ಗಳಿಸಿದರು. ಸಮಾಜದಲ್ಲಿ ಅಜ್ಞಾನ, ಅಂಧಕಾರ ತುಂಬಿಕೊಂಡ ಸಮಯದ ಪುಣ್ಯಪುರುಷರು ಅವತರಿಸುತ್ತಾರೆ ಎಂಬುದು ಪ್ರತೀತಿ. ತಮ್ಮಣ್ಣಪ್ಪನವರ ಸಮಾಜಮುಖಿ ಕಾರ್ಯಕಲಾಪಗಳಿಗಾಗಿ ಅಂತಹ ಒಂದು ಭೂಮಿಕೆ ಸಿದ್ಧವಾಗಿತ್ತೆನ್ನೋ ಎನ್ನಿಸುತ್ತದೆ. ಲಿಂಗಾಯತ ಧರ್ಮದ ಬಗ್ಗೆ ಅಪಾರ ಕಾಳಜಿಯನ್ನಿಟ್ಟುಕೊಂಡ ತಮ್ಮಣ್ಣಪ್ಪನವರು ತಾವು ಶ್ರಮಿಸಿದರಲ್ಲದೆ, ತಮ್ಮ ಕುಟುಂಬದವರಾದ ಶ್ರೀ ಪಂಡಿತಪ್ಪ, ಶ್ರೀ ರಾಮಪ್ಪ ಮತ್ತು ಅಳಿಯ ಫ.ಗು. ಹಳಕಟ್ಟಿಯವರಿಗೆ ಪ್ರೇರಣೆಯಾದರು. ವಚನವಾಙ್ಮಯ ಸಂಶೋಧನೆ, ಬಿ.ಎಲ್.ಡಿ.ಇ ಸಂಸ್ಥೆಯ ಸ್ಥಾಪನೆಗೆ ಶ್ರಮಿಸಿದ ಹಳಕಟ್ಟಿಯವರಿಗೆ ಮತ್ತು ಗೆಳೆಯರ ಜೊತೆಯಲ್ಲಿ ಸೇರಿ ಬೆಳಗಾವಿಯಲ್ಲಿ ಕೆ.ಎಲ್.ಇ. ಸಂಸ್ಥೆಯ ಸ್ಥಾಪನೆಗೆ ಕಾರಣರಾದ ಪಂಡಿತಪ್ಪನವರಿಗೆ ಪ್ರೇರಕ ಶಕ್ತಿ ತಮ್ಮಣ್ಣಪ್ಪನವರು.

ಕೊನೆ ಟಿಪ್ಪಣಿ:

೧. The Nationalist Movement in India;Fifty Years of Modern India;Vidyadhar Mahajan, p-112

೨. The Growth of New India, 1858-1905;Advanced History Of India, p-129

೩. Ibid-p-881-882

೪. The History Of Jamakhandi State; Dr.Nidoni, p-216

೫. ಭಾರತದ ಚರಿತ್ರೆ;ಡಾ.ಬಿ.ಮುದ್ದಾಚಾರಿ, ಪುಟ-೪೩೩

೬. The Nationalist Movement in India;Fifty Years of Modern India;Vidyadhar Mahajan, p-143

೭. Ibid, p-142

೮. ಕರ್ನಾಟಕ ಏಕೀಕರಣ ಕತೆ: ರಂಗನಾಥ ದಿವಾಕರ, ಪುಟ-೩

೯. ಕರ್ನಾಟಕ ಏಕೀಕರಣ ಇತಿಹಾಸ: ಡಾ.ಎಚ್.ಎಸ್. ಗೋಪಾಲರಾವ್, ಪುಟ-೫೬-೫೭

೧೦. ಹೊಸಗನ್ನಡ ಸಾಹಿತ್ಯದ ಉದಯ ಕಾಲ; ರಾ. ಯ. ಧಾರವಾಡಕರ. ಪುಟ-೭

೧೧. 'ವೀರಶೈವರೂ, ರಾಜಕಾರಣವೂ'; ಜಯಕರ್ನಾಟಕ: ಸಂ೨, ಸಂ ೬, ಪುಟ-೪೭೨

೧೨. ಕನ್ನಡದ ದೀಪ: ಮ.ಗು. ಹಂದ್ರಾಳ. ಪುಟ-೨೪

೧೩. Dynatties of kanarese Districts;p.477 ಆಧಾರ-ಡೆಪ್ಯುಟಿ ಚೆನ್ನಬಸಪ್ಪ:ಬಾಳಣ್ಣ ಸೀಗಿಹಳ್ಳಿ.

೧೪. ಬೆಳಗು; ಹಾನಗಲ್ ಕುಮಾರಸ್ವಮಿಗಳ ಸ್ಮಾರಕ ಗ್ರಂಥ; ಲೇಖನ-ಎಸ್.ಎಸ್.ಬಸವನಾಳ, ಪುಟ-೨೪

೧೫. ಮಾರ್ಗ ಸಂ.೧, ಡಾ.ಎಂ.ಎಂ.ಕಲಬುರ್ಗಿ, ಪುಟ-೬೨೨

೧೬. ಮಾರ್ಗ ಸಂ.೧, ಡಾ.ಎಂ.ಎಂ.ಕಲಬುರ್ಗಿ, ಪುಟ-೬೨೨

೧೭. 'ಕನ್ನಡಿಗರ ಮಾತೃಭಾಷಾ ಪ್ರಜ್ಞೆಯ ಇತಿಹಾಸ': ಡಾ.ಎಂ.ಎಂ.ಕಲಬುರ್ಗಿ, ಮಾರ್ಗ ಸಂಪುಟ-೧

೧೮. ಕರ್ನಾಟಕ ಪರಂಪರೆ; ಪುಟ-೩೯೬

೧೯. ಕರ್ನಾಟಕ ಏಕೀಕರಣ ಕತೆ: ಡಾ.ಎಚ್.ಎಸ್.ಗೋಪಾಲರಾವ್.ಪುಟ-೫೭

೨೦. ಕರ್ನಾಟಕ ಪರಂಪರೆ; ಪುಟ-೩೯೮

೨೧. ಕರ್ನಾಟಕ ಏಕೀಕರಣ ಕತೆ: ಡಾ:ಎಚ್.ಎಸ್.ಗೋಪಾಲರಾವ್. ಪುಟ-೫೭

೨೨. ಅದೇ. ಪುಟ-೫೮ ಅದೇ. ಪುಟ-೪೬.

೨೩. ಕರ್ನಾಟಕ ಏಕೀಕರಣ ಕತೆ: ರಂಗನಾಥ ದಿವಾಕರ, ಪುಟ-೨೦

೨೪. ಹೊಸಗನ್ನಡದ ಪುಣ್ಯಪುರುಷರು; ಸಾಂಗಲಿ ವೆಂಕಟೇಶ; ಹಿನ್ನೆಲೆಯ ಮುನ್ನುಡಿ-ಪು.ix

೨೫. ಹೊಸಗನ್ನಡ ಸಾಹಿತ್ಯದ ಉದಯಕಾಲ: ರಾ.ಯ.ಧಾರವಾಡಕರ. ಪುಟ-೮೧

೨೬. ಕರ್ನಾಟಕ ಏಕೀಕರಣ ಕತೆ:ಎಚ್.ಎಸ್.ಗೋಪಾಲರಾವ್.ಪುಟ-೫೬

೨೭. 'ಕನ್ನಡವನ್ನು ಕಟ್ಟುವ ಕೆಲಸ': ಹಾ. ಮಾ. ನಾಯಕ (ಬೆನ್ನುಡಿ)

೨೮. ಹೊಸಗನ್ನಡ ಸಾಹಿತ್ಯದ ಉದಯಕಾಲ: ರಾ.ಯ.ಧಾರವಾಡಕರ. ಪುಟ-೭

೨೯. ಡೆಪ್ಯುಟಿ ಚೆನ್ನಬಸಪ್ಪನವರು: ಡಾ.ಬಾಳಣ್ಣ ಸೀಗಿಹಳ್ಳಿ. ಪುಟ-೧೩-೧೪

೩೦. Report of the Director of Public Inspection Bombay 1865-66 Appendix-A ಪುಟ.48,49 ಮತ್ತು 62 ಉಲ್ಲೇಖ-ಡೆಪ್ಯುಟಿ

ಚೆನ್ನಬಸಪ್ಪನವರು; ಡಾ.ಬಾಳಣ್ಣ ಸೀಗಿಹಳ್ಳಿ

೩೧. ಕರ್ನಾಟಕತ್ವದ ವಿಕಾಸ: ಆಲೂರು ವೆಂಕಟರಾಯರು ಪುಟ-೧೬೫

ಅಧ್ಯಾಯ : ಮೂರು

ಚಿಕ್ಕೋಡಿ ಕುಟುಂಬ:

೩.೧. ಕುಟುಂಬದ ಹಿನ್ನೆಲೆ

೩.೨. ಕುಟುಂಬ

೩.೩. ವಂಶವಾಹಿನಿ

೩.೪. ಕುಟುಂಬದ ಗಣ್ಯರು

೩.೫. ತಮ್ಮಣ್ಣಪ್ಪ

೩.೫.೧. ಜನನ-ಬಾಲ್ಯ

೩.೫.೨. ಶಿಕ್ಷಣ

೩.೫.೩. ವೃತ್ತಿ

೩.೫.೪. ಮದುವೆ

೩.೫.೫. ಕುಟುಂಬ ಜೀವನ

೩.೫.೬. ಆಸಕ್ತಿ-ಅಭಿರುಚಿ

೩.೫.೭. ಗುಣ-ಸ್ವಭಾವ

೩.೫.೮. ಪಂಡಿತಪ್ಪನವರ ಪ್ರೇರಕ ಶಕ್ತಿ

೩.೫.೯. ಕೊನೆಯ ದಿನಗಳು

೩.೬. ಪಂಡಿತಪ್ಪ:

೩.೬.೧. ಜನನ-ಬಾಲ್ಯ

೩.೬.೨. ಶಿಕ್ಷಣ

೩.೬.೩. ಪುಣೆ-ಮುಂಬಯಿ ಪರಿಸರದ ಪ್ರಭಾವ

೩.೬.೪. ವೃತ್ತಿ

೩.೬.೫. ಮದುವೆ

೩.೬.೬. ಕುಟುಂಬ ಜೀವನ

೩.೬.೭. ಆಸಕ್ತಿ-ಅಭಿರುಚಿ

೩.೬.೮. ಗುಣ-ಸ್ವಭಾವ

೩.೬.೯. ಕೊನೆಯ ದಿನಗಳು

೩.೭. ರಾಮಪ್ಪ:

೩.೭.೧. ಜನನ-ಬಾಲ್ಯ

೩.೭.೨. ಶಿಕ್ಷಣ

೩.೭.೩. ವೃತ್ತಿ

೩.೭.೪. ಮದುವೆ

೩.೭.೫. ಕುಟುಂಬ ಜೀವನ

೩.೭.೬. ಆಸಕ್ತಿ-ಅಭಿರುಚಿ

೩.೭.೭. ಗುಣ-ಸ್ವಭಾವ

೩.೭.೮. ಕೊನೆಯ ದಿನಗಳು

೩.೮. ಚಿಕ್ಕೋಡಿ ಮನೆತನದ ಪ್ರಭಾವ

ಅಧ್ಯಾಯ ಮೂರು

ಚಿಕ್ಕೋಡಿ ಕುಟುಂಬ

೩.೧. ಚಿಕ್ಕೋಡಿ ಮನೆತನದ ಹಿನ್ನೆಲೆ:

ಚಿಕ್ಕೋಡಿ ಕುಟುಂಬದವರು ನೇಕಾರ ಲಿಂಗಾಯತ ಒಳಪಂಗಡಕ್ಕೆ ಸಂಬಂಧಪಟ್ಟವರು. ಉತ್ತರ ಕರ್ನಾಟಕದಲ್ಲಿ ನೇಕಾರರನ್ನು 'ಜಾಡರು' ಎಂದು ಕರೆಯುತ್ತಾರೆ. ಈ ಸಮುದಾಯದಲ್ಲಿ ದೇವಾಂಗ, ಕುರುಹಿನಶೆಟ್ಟಿ ಮತ್ತು ಹಟಗಾರ ಎಂಬ ಭೇದಗಳಿವೆ. ಇವರಲ್ಲಿ ದೇವಾಂಗದವರು ಜನಿವಾರವನ್ನು ಧರಿಸಿಕೊಂಡು ಸಂಪೂರ್ಣವಾಗಿ ವೈದಿಕ ಪದ್ಧತಿಯನ್ನು ಅನುಸರಿಸುವಂಥವರು. ಇವರು ಬನಶಂಕರಿಯ ಭಕ್ತರು. ಉಳಿದ ಎರಡು ಪಂಗಡಗಳು ಲಿಂಗಧಾರಿಗಳಾಗಿದ್ದು, ಲಿಂಗಾಯತ ಮತಾವಲಂಬಿಗಳು. ತಾವು ಜೇಡರ ದಾಸಿಮಯ್ಯನ ಪಂಥದವರೆಂದು ತುಂಬಾ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಜಾಡರಲ್ಲಿ ಬಿಳಿಜಾಡರು ಮತ್ತು ಕರಿಜಾಡರು ಎಂದು ಎರಡು ಪ್ರಕಾರಗಳಿದ್ದು, ಕುರುಹಿನಶೆಟ್ಟರನ್ನು ಬಿಳಿಜಾಡರೆಂದು, ಹಟಗಾರರನ್ನು ಕರಿಜಾಡರೆಂದು ಕರೆಯುತ್ತಾರೆ.[೧]


ಒಟ್ಟಿನಲ್ಲಿ ಈ ಜಾಡ ಸಮುದಾಯವು ಲಿಂಗಾಯತರ ಒಳಪಂಗಡವಾಗಿದ್ದು, ಇವರಲ್ಲಿ ಬಡತನ, ಅಜ್ಞಾನ, ಅನಕ್ಷರತೆ ಮತ್ತು ಮೂಢನಂಬಿಕೆಗಳು ತುಂಬಿದ ಒಂದು ಕಾಲವಿತ್ತು. ಹಟಗಾರ ನೇಕಾರ ಸಮುದಾಯದಲ್ಲಿ ಅನೇಕ ಗಣ್ಯರು ಹುಟ್ಟಿ ಸಮಾಜ ಮತ್ತು ಕನ್ನಡ ನಾಡು-ನುಡಿ-ಸಂಸ್ಕೃತಿಗೆ ತಮ್ಮದೆ ಆದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಸಮಾಜದ ಅಜ್ಞಾನ, ಮೂಢನಂಬಿಕೆಗಳನ್ನು ತೊಲಗಿಸಿ, ಶಿಕ್ಷಣದ ಬೆಳಕನ್ನು ಸಮಾಜಕ್ಕೆ ನೀಡಿದ್ದಾರೆ. ನಂದಾದೀವಿಗೆಯಂತೆ ಸ್ವತಃ ತಾವೇ ಉರಿದು ದೇದಿಪ್ಯಮಾನವಾಗಿ ಬೆಳಗಿದ್ದಾರೆ. ಅವರಲ್ಲಿ ಬನಹಟ್ಟಿಯ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ, ಬೆಳಗಾವಿಯ ಶ್ರೀ ಪಂಡಿತಪ್ಪ ಚಿಕ್ಕೋಡಿ, ವಿಜಾಪುರದ ಡಾ.ಫ.ಗು.ಹಳಕಟ್ಟಿ, ಬೆಳಗಾವಿಯ ಗುರುಸಿದ್ಧಪ್ಪ ಗಿಲಗಂಚಿ ಮೊದಲಾದವರು ಪ್ರಮುಖರು. ಇವರು ಸ್ವತಃ ಶಿಕ್ಷಣಪ್ರೇಮಿಗಳಾಗಿದ್ದು, ಸಂಘಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣಪ್ರಸಾರ ಮಾಡುವಲ್ಲಿ ಟೊಂಕಕಟ್ಟಿ ನಿಂತರು. ಇವರಲ್ಲದೆ ಈ ಸಮುದಾಯದಲ್ಲಿ ಧಾರವಾಡದ ಗುರುಬಸಪ್ಪ ಹಳಕಟ್ಟಿ, ರಬಕವಿಯ ರಾಮಪ್ಪ ಚಿಕ್ಕೋಡಿ, ಮುದ್ದೇಬಿಹಾಳದ ವೀರಭದ್ರಪ್ಪ ದುಂಡಿ, ರಾಣೆಬೆನ್ನೂರಿನ ಕುರುವತ್ತೆಪ್ಪ ಕುರುವತ್ತಿ, ಧಾರವಾಡದ ಶಾಂತವೀರಪ್ಪ ಕೋಟೂರ, ಸೊಲ್ಲಾಪುರದ ಗುರುಮೂರ್ತೆಪ್ಪ ನಂದರಗಿ, ಕೊಟ್ಟೂರಿನ ಪೇಟೆ ಪರ್ವತಗೌಡರು ಮುಂತಾದವರು ಸಮಾಜಕ್ಕೆ ದುಡಿದ ಮಹನೀಯರಾಗಿದ್ದಾರೆ.[೨] ನೇಕಾರಿಕೆಯನ್ನೇ ನಂಬಿ ಬದುಕುವ ಈ ಸಮಾಜದ ಜನರಲ್ಲಿ ಅಪರಿಮಿತ ಶಿಕ್ಷಣಪ್ರೇಮ ಇರುವುದು ವಿಶೇಷ, ಅಷ್ಟೇ ಅಲ್ಲ ಅಷ್ಟೇ ಪ್ರಶಂಸನೀಯ ಕೂಡ.

೩.೨. ಚಿಕ್ಕೋಡಿ ಕುಟುಂಬ.

ಜೇಡರ ದಾಸಿಮಯ್ಯನ ಪಂಥದವರು ಎಂದು ಕರೆಯಿಸಿಕೊಳ್ಳುವ ಲಿಂಗಾಯತ ಹಟಗಾರ ನೇಕಾರರ ಕುಟುಂಬಗಳಲ್ಲಿ 'ಚಿಕ್ಕೋಡಿ ಕುಟುಂಬ'ವೂ ಒಂದು. ರಾಯಚೂರು ಜಿಲ್ಲೆಯ 'ಬಿದಿರುಕೋಟೆ' ಇವರ ಮೂಲಸ್ಥಳವೆಂದು ಹೆಳವರು ಹೇಳಿದುದಾಗಿ ತಿಳಿದಿದೆ. ಈ ಕುಟುಂಬದವರು ಮೂಲತಃ ಕೊಲ್ಲಾಪುರ ಸಂಸ್ಥಾನದ ವ್ಯಾಪ್ತಿಗೆ ಬರುವ 'ಮಿಣಚಿ' ಅಥವಾ 'ಮಿಣಜಿಗೆ' ಎಂಬ ಚಿಕ್ಕ ಗ್ರಾಮದವರು. ಆ ಗ್ರಾಮದಲ್ಲಿ ಪಾಟೀಲಗೌಡರದು ಒಂದು ಕುಟುಂಬ.[೩] ಈ ಪಾಟೀಲಗೌಡರ ಮನೆತನದಲ್ಲಿ ಸತ್ಯಪ್ಪ ಮತ್ತು ಲಕ್ಷ್ಮಣಪ್ಪ ಎಂಬ ಇಬ್ಬರು ಸಹೋದರರು. ಇವರು ತಮ್ಮ ಗ್ರಾಮ ಮಿಣಚಿಯನ್ನು ಬಿಟ್ಟು ಚಿಕ್ಕೋಡಿಗೆ ಬಂದರು.[೪] ಅದಕ್ಕೆ ನಾನಾ ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದುದು ರಾಜಕೀಯ ಕಾರಣದಿಂದ ಸರಕಾರದ ಜೊತೆ ವೈಮನಸ್ಸು ಉಂಟಾದುದು.[೫] ಆರಂಭದಲ್ಲಿ ಅವರು ಮೊಘಲ್ ಸೇನೆಯ ಕಣ್ಣು ತಪ್ಪಿಸಿ ಮಿಣಚಿಗೆ ಬಂದರು.[೬] ಮುಂದೆ ಅನಿವಾರ್ಯ ಕಾರಣಗಳಿಂದ ಮಿಣಚಿ ಗ್ರಾಮ ಬಿಟ್ಟು ಚಿಕ್ಕೋಡಿಗೆ ಹೊರಟು ಬಂದರು.[೭] ತಮ್ಮಣ್ಣಪ್ಪನವರ ತಂದೆ ಶಿಕ್ಷಣಪ್ರೇಮಿಗಳು. ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಲೆಂದು ಸ್ವಗ್ರಾಮ ತೊರೆದು ಚಿಕ್ಕೋಡಿಗೆ ಬರಬೇಕಾಯಿತು[೮] ಎಂದು ದು.ನಿಂ.ಬೆಳಗಲಿಯವರು ಹೇಳಿದರೆ, ಇನ್ನೊಂದು ಕಡೆ ಆಗಿನ ಅರಸರ ದಾಳಿಗೆ ಭಯಪಟ್ಟು ಇವರ ಪೂರ್ವಜರು ಮಿಣಚಿ ಗ್ರಾಮ ಬಿಟ್ಟು ಸಮೀಪದಲ್ಲಿರುವ ಬೆಳಗಾವಿ ಜಿಲ್ಲೆಯ ಚಿಕ್ಕೋಡಿಗೆ ಬಂದು ನೆಲೆನಿಂತರೆಂದು ಹೇಳಲಾಗಿದೆ.[೯] ಆದರೆ ಸತ್ಯ ಏನೆಂಬುದು ಸ್ಪಷ್ಟವಾಗುವುದಿಲ್ಲ. ಮೂಲತಃ ಗೌಡರ ಮನೆತನದವರಾದ್ದರಿಂದ ಈ ಮನೆತನದವರು ಸರಕಾರದ ವಿರೋಧ ಕಟ್ಟಿಕೊಂಡಿರಬಹುದು. ಅವರ ಕಿರಿಕಿರಿಯನ್ನು ತಾಳದೆ ಊರು ಬಿಟ್ಟಿರಬಹುದು. ಅಥವಾ ಅರಸರ ದಾಳಿಯಿಂದ ಇವರ ಕುಟುಂಬಕ್ಕೆ ಅಭದ್ರತೆ ಉಂಟಾಗಿರಬಹುದು.

ಸಾಂಗ್ಲಿ ಸಂಸ್ಥಾನದ ಭಾಗವಾದ ಚಿಕ್ಕೋಡಿಯಲ್ಲಿ ಕೆಲಕಾಲ ನೆಲೆನಂತ ಈ ಕುಟುಂಬ ಅದೇ ಸಂಸ್ಥಾನದ ರಬಕವಿಗೆ ಬಂದು ನೆಲೆ ನಿಂತರು. ಇವರು ಚಿಕ್ಕೋಡಿಯಿಂದ ಬಂದ ಕಾರಣ, ಈ ಕುಟುಂಬದವರಿಗೆ ಸ್ಥಳಮೂಲವಾದ ಚಿಕ್ಕೋಡಿ ಎಂಬ ಕುಟುಂಬನಾಮ ಬಂದಿದೆ. ಮುಂದೆ ಸತ್ಯಪ್ಪ, ಲಕ್ಷ್ಮಣಪ್ಪ ಅವರಿಂದ ರಬಕವಿಯಲ್ಲಿ ಚಿಕ್ಕೋಡಿ ಕುಟುಂಬಗಳು ಬೆಳೆದವು.

೩.೩. ಚಿಕ್ಕೋಡಿ ಕುಟುಂಬದ ವಂಶವಾಹಿನಿ



೩.೪. ಕುಟುಂಬದ ಗಣ್ಯರು:

ಚಿಕ್ಕೋಡಿ ಕುಟುಂಬದ ಮೂಲಪುರಷ ಸತ್ಯಪ್ಪ. ಅವನ ಮಕ್ಕಳು ರಾಯಪ್ಪ ಮತ್ತು ತಮ್ಮಣ್ಣಪ್ಪ. ರಾಯಪ್ಪ ಹೆಚ್ಚಿನ ಶಿಕ್ಷಣ ಪಡೆದರು. ಅಲ್ಲದೆ ತಹಶೀಲದಾರರಂತಹ ಒಳ್ಳೆಯ ಕೆಲಸದಿಂದ ಸಮಾಜದಲ್ಲಿ ಉನ್ನತ ಸ್ಥಾನಮಾನವನ್ನು ಹೊಂದಿದ್ದರು. ತಮ್ಮಣ್ಣಪ್ಪನವರಂತೂ ಕನ್ನಡನಾಡು ಕಂಡ ಅದ್ಭುತ ಶಕ್ತಿ. ಕಡಿಮೆ ಶಿಕ್ಷಣ ಪಡೆದರೂ, ಸಮಾಜದ ಪ್ರಗತಿಗಾಗಿ ಶಿಕ್ಷಣವೇ ಅವಶ್ಯವೆಂದು ಅರಿತಿದ್ದರು. ಕನ್ನಡದ ಉಳಿವು-ಬೆಳವಿಗಾಗಿ ಸತತ ಹೋರಾಡಿದರು. ರಾಯಪ್ಪನವರ ಮಗ ಪಂಡಿತಪ್ಪ. ಇವರು ಕೆ.ಎಲ್.ಇ. ಹೆಸರಿನ ಬೃಹತ್ ಶಿಕ್ಷಣ ಸಂಸ್ಥೆಯ ಸ್ಥಾಪಕರು. ಹಲವಾರು ಸಂಘ-ಸಂಸ್ಥೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸಾಂಘಿಕ ಶಕ್ತಿಯಾಗಿದ್ದ ಇವರು ಎಲ್ಲ ಕ್ಷೇತ್ರಗಳಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ.

ಸತ್ಯಪ್ಪನ ಸಹೋದರ ಲಕ್ಷ್ಮಣ್ಣಪ್ಪನವರು ನೇಕಾರ ವೃತ್ತಿಯನ್ನು ಚೆನ್ನಾಗಿ ನಡೆಯಿಸಿಕೊಂಡು ಬಂದಿದ್ದರು. ಇವರ ಆಸಕ್ತಿ-ಅಭಿರುಚಿಗಳು ವಿಶಿಷ್ಟವಾಗಿದ್ದವು. ಒಳ್ಳೆಯ ಹಾಡುಗಾರರಾಗಿದ್ದರು. ಸಂಗೀತ ಮತ್ತು ಮದ್ದಲೆ ನುಡಿಸುವ ಕಲೆಗಳನ್ನು ಅವರು ಚೆನ್ನಾಗಿ ಕರಗತ ಮಾಡಿಕೊಂಡಿದ್ದರು. ಒಂದೆರಡು ನಾಟಕಗಳಲ್ಲಿ ಅಭಿನಯಿಸಿದುದಾಗಿ ತಿಳಿದು ಬರುತ್ತದೆ. ಆದರೆ ಇವರು ಬಹಳ ಚಿಕ್ಕ ವಯಸ್ಸಿನಲ್ಲಿ ತೀರಿಹೋದರು. ಇವರ ನಾಲ್ಕು ಮಕ್ಕಳಲ್ಲಿ ಹಿರಿಯ ಮಗ ರಾಮಪ್ಪ. ಇವರು ಸಹಜ ಪ್ರತಿಭಾನ್ವಿತರು. ಹೆಚ್ಚಿನ ಶಿಕ್ಷಣ ಪಡೆಯದೆ ಇದ್ದರೂ, ನೇಕಾರಿಕೆ ವಿಧಾನ ಮತ್ತು ಮಶೀನುಗಳ ಬಗ್ಗೆ ಹೆಚ್ಚು ತಿಳಿದಿದ್ದರು. ತಮಗೆ ಬೇಕಾದ ಬಣ್ಣವನ್ನು ತಯಾರಿಸುವ ನೈಪುಣ್ಯತೆಯನ್ನು ಹೊಂದಿ ಬಣ್ಣದ ಕಾರಖಾನೆಯನ್ನು ಪ್ರಾರಂಭಿಸಿದ್ದರು. ನೇಕಾರಿಕೆಗಾಗಿ ಶಟಲ್ ಲಾಳಿ, ಸ್ವಯಂಚಾಲಿತ ಲೂಮ್, ಜಪಾನಿ ಮಗ್ಗ ಹೀಗೆ ವಿವಿಧ ರೀತಿಯ ಮಶೀನುಗಳಿಂದ ನೇಕಾರಿಕಾಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಿದ್ದರು. ಸಮಾಜದಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆದಿದ್ದರು. ಪ್ರಸ್ತುತ ಮಹಾಪ್ರಬಂಧದಲ್ಲಿ ಚಿಕ್ಕೋಡಿ ಕುಟುಂಬದ ಶ್ರೀಯುತರಾದ ತಮ್ಮಣ್ಣಪ್ಪ, ಪಂಡಿತಪ್ಪ ಮತ್ತು ರಾಮಪ್ಪನವರ ಜೀವನ ಮತ್ತು ಸಾಧನೆಗಳನ್ನು ಕುರಿತಾಗಿ ವಿವರಿಸಿದೆ.

೩.೫. ಶ್ರೀ ತಮ್ಮಣ್ಣಪ್ಪ:

ಹತ್ತೊಂಬತ್ತನೆಯ ಶತಮಾನ ಕರ್ನಾಟಕದಲ್ಲಿ 'ಕತ್ತಲೆಯ ಯುಗ' ಎಂದು ಗುರುತಿಸಿಕೊಂಡಿದೆ. ಒಂದು ಕಡೆ ಬ್ರಿಟಿಷ್‌ರು, ಇನ್ನೊಂದು ಕಡೆ ಸಂಸ್ಥಾನಿಕರ ಆಡಳಿತ ಇವೆರಡರ ಮಧ್ಯ ಕನ್ನಡಿಗರ ಸ್ಥಿತಿ ಕಣ್ಣುಕಣ್ಣು ಬಿಡುವಂತಾಗಿತ್ತು. ಅದರಲ್ಲೂ ಉತ್ತರ ಕರ್ನಾಟಕದವರ ಸ್ಥಿತಿಯಂತೂ ಅತ್ಯಂತ ಶೋಚನೀಯವಾಗಿತ್ತು. ಸಂಸ್ಥಾನಿಕರ ಮಾತೃಭಾಷೆ ಮರಾಠಿ. ಹೀಗಾಗಿ ರಾಜ್ಯಭಾಷೆ ಮತ್ತು ಶಿಕ್ಷಣ ಎರಡೂ

ಮರಾಠಿಯಲ್ಲಿಯೇ ಕನ್ನಡಿಗರಿಗೆ ಲಭ್ಯವಾಗುತ್ತಿತ್ತು. ಈ ರೀತಿಯಲ್ಲಿ ಮರಾಠಿಯ ದೌರ್ಜನ್ಯ ಹೆಚ್ಚುತ್ತಿದ್ದರೂ, ಕನ್ನಡಿಗರು ಅದನ್ನು ಪ್ರತಿಷ್ಠೆಯೆಂಬಂತೆ ಉಳಿಸಿಕೊಂಡು ಬಂದಿದ್ದರು. ಕನ್ನಡಿಗರ ನಿರಭಿಮಾನ ಹೆಚ್ಚಾಗಿ ಕನ್ನಡ ನಾಡಿನಲ್ಲಿ ಮಾತೃಭಾಷೆ ಕನ್ನಡ ನಾಶವಾಗುವ ಸ್ಥಿತಿ ಬಂದೊದಗಿತು. ಅಂತಹ ಸಂದರ್ಭದಲ್ಲಿ ಕನ್ನಡಿಗರಿಗೆ ಅವರ ಭಾಷೆಯ ಅರಿವು ಮೂಡಿಸಲು ಅನೇಕ ಗಣ್ಯರು ಹುಟ್ಟಿ ಬಂದರು. ಅವರಲ್ಲಿ ಉನ್ನತ ಹುದ್ದೆಯಲ್ಲಿದ್ದವರು ತಮ್ಮ ಅಧಿಕಾರ ಬಲದಿಂದ ಕನ್ನಡದ ಶ್ರೇಯಸ್ಸಿಗೆ ದುಡಿದರು. ಆದರೆ ಕೇವಲ ಮುಲ್ಕಿ ಪರೀಕ್ಷೆಯನ್ನು ಪಾಸು ಮಾಡಿದ, ಮರಾಠಿಯಲ್ಲಿ ಶಿಕ್ಷಣ ಪಡೆದ, ಸ್ವಇಚ್ಛೆಯಿಂದ ಕನ್ನಡ ಕಲಿತ ಚಿಕ್ಕೋಡಿ ತಮ್ಮಣ್ಣಪ್ಪನವರು; ಸಂಸ್ಥಾನಿಕರ ಮನವೊಲಿಸಿ ಕನ್ನಡ ಉಳಿವಿಗಾಗಿ ಅಹರ್ನಿಶಿ ದುಡಿದರು. ರಬಕವಿ–ಬನಹಟ್ಟಿಗಳಂತಹ ಚಿಕ್ಕ ಊರುಗಳಲ್ಲಿ ವಾಸವಾಗಿದ್ದ ತಮ್ಮಣ್ಣಪ್ಪನವರು ಅಂದು ಕನ್ನಡ ನಾಡಿನ ಜನತೆಗೆ ಚಿರಪರಿಚಿತರಾಗಿದ್ದರು. ಅದಕ್ಕೆ ಅವರ ಪ್ರತಿಭೆ ಮತ್ತು ಕೆಲಸ–ಕಾರ್ಯಗಳು ಕಾರಣವಾಗಿದ್ದವು. ಇವರು ಹಲವಾರು ಸಂಘ–ಸಂಸ್ಥೆಗಳ ಸ್ಥಾಪಕರಾಗಿ, ಪದಾಧಿಕಾರಿಯಾಗಿ ಅವರು ಕೆಲಸ ಮಾಡಿದರು.

೩.೫.೧.ಜನನ–ಬಾಲ್ಯ:

ಮಿಣಜಗಿಯ ಮೂಲದಿಂದ ಬಂದು ಚಿಕ್ಕೋಡಿಯಲ್ಲಿ ನೆಲೆನಿಂತ ಸತ್ಯಪ್ಪ ಮತ್ತು ಮಹಾದೇವಮ್ಮರ ಎರಡನೆಯ ಮಗ ತಮ್ಮಣ್ಣಪ್ಪ. ಇವರ ಹಿರಿಯ ಸಹೋದರ ರಾಯಪ್ಪ. ತಮ್ಮಣ್ಣಪ್ಪ ಕ್ರಿ.ಶ.೧೮೬೨ ಸಪ್ಟೆಂಬರ್ ೨ರಂದು ಮಿಣಜಗಿಯಲ್ಲಿ ಜನಿಸಿದರು. ಈ ಕುಟುಂಬದವರು ನೇಕಾರ ಸಮುದಾಯದವರಾಗಿದ್ದರು. ಆದರೆ ನೇಕಾರಿಕೆಯನ್ನು ಮಾಡುತ್ತಿರಲಿಲ್ಲ. ಉಪಜೀವನಕ್ಕಾಗಿ ಕೃಷಿಯನ್ನು ಅವಲಂಬಿಸಿದ್ದರು. ಬಡತನದ ಪರಿಸ್ಥಿತಿಯಲ್ಲಿಯೇ ಚಿಕ್ಕೋಡಿ ಕುಟುಂಬದವರು ಬದುಕಿದ್ದರು. ಹೀಗಾಗಿ ತಮ್ಮಣ್ಣಪ್ಪನವರು ಬಾಲ್ಯವನ್ನು ಕಷ್ಟದಾಯಕ ಸ್ಥಿತಿಯಲ್ಲಿ ಕಳೆದರು.

೩.೫.೨. ಶಿಕ್ಷಣ:

ಸಂಸ್ಥಾನದ ಆಡಳಿತ ಭಾಷೆ ಮರಾಠಿಯಾದ ಕಾರಣ ತಮ್ಮಣ್ಣಪ್ಪ ಮತ್ತು ರಾಯಪ್ಪ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮರಾಠಿಯಲ್ಲಿ ಮುಗಿಸಿದರು. ಉನ್ನತ ಶಿಕ್ಷಣವನ್ನು ಪಡೆಯುವ ಹಂಬಲ ತಮ್ಮಣ್ಣಪ್ಪನವರದಾಗಿತ್ತು. ಆದರೆ ಮನೆತನದ ಅನನುಕೂಲತೆಯ ಕಾರಣದಿಂದ ಉಚ್ಚ ಶಿಕ್ಷಣ ಪಡೆಯಲು ಅಸಾಧ್ಯವಾಯಿತು.[೧೦] ಮುಂದೆ ಈ ಕುಟುಂಬವು ಚಿಕ್ಕೋಡಿಯನ್ನು ಬಿಟ್ಟು ರಬಕವಿಗೆ ಬಂದಿತು.[೧೧]

ಅಣ್ಣ ರಾಯಪ್ಪ ಮತ್ತು ತಮ್ಮಣ್ಣಪ್ಪನವರು ರಬಕವಿಗೆ ಕನ್ನಡ ಕಲಿಯಲೇನೊ ಬಂದರು. ಆದರೆ ಸಾಂಗಲಿ ಸಂಸ್ಥಾನದ ಪಟವರ್ಧನ ಮನೆತನದ ಸಂಸ್ಥಾನಿಕರು ಮರಾಠರು. ಜಮಖಂಡಿ, ರಬಕವಿ, ಮುಧೋಳ, ಬನಹಟ್ಟಿ ಮುಂತಾದ ಉತ್ತರ ಕರ್ನಾಟಕ ಮತ್ತು ಮುಂಬಯಿ ಪ್ರಾಂತ್ಯದ ಪ್ರದೇಶಗಳಲ್ಲಿ ಕನ್ನಡ ಮಾತನಾಡುವರ ಸಂಖ್ಯೆಯೇ ಹೆಚ್ಚಿದ್ದರೂ, ಆಳರಸರ ಮರಾಠಿ ಭಾಷೆಯ ಕಾರಣವಾಗಿ ಶಾಲಾ ಶಿಕ್ಷಣವೆಲ್ಲ ಮರಾಠಿಯಲ್ಲಿ ಇತ್ತು. ಕನ್ನಡವಿದ್ದರೂ ಕುತ್ತಿಗೆ ಹಿಸುಕಿದ ಪ್ರಾಣದಂತೆ. ಸಾಂಗಲಿ ಮತ್ತು ಜಮಖಂಡಿ ಸಂಸ್ಥಾನಕ್ಕೆ ಸಂಬಂಧಿಸಿದ ಊರುಗಳಲ್ಲಿ ಕನ್ನಡ ಹೀನಾಯ ಸ್ಥಿತಿಯಲ್ಲಿತ್ತು.[೧೨] ಜಮಖಂಡಿ,

ಸಾಂಗಲಿ ಮುಂತಾದ ಸಂಸ್ಥಾನಗಳಲ್ಲಿ ಸರಕಾರಿ ಮಾನ್ಯ ಕನ್ನಡ ಪರೀಕ್ಷೆಗಳು ನಡೆಯುತ್ತಿರಲಿಲ್ಲ. ಹೀಗಾಗಿ ತಮ್ಮಣ್ಣಪ್ಪನವರು ಕನ್ನಡ ಪ್ರಾಥಮಿಕ ಪರೀಕ್ಷೆಯನ್ನು ವಿಜಾಪುರ ಜಿಲ್ಲೆಯ ಗಲಗಲಿ ಗ್ರಾಮದಲ್ಲಿ ಮುಗಿಸಿದರು.[೧೩] ಮುಂದೆ ಜಿಲ್ಲಾಕೇಂದ್ರವಾದ ಕಲಾದಗಿಯಲ್ಲಿ ಮುಲ್ಕಿ ಪರೀಕ್ಷೆ ಪಾಸುಮಾಡಿದರು.[೧೪]

೩.೫.೩. ವೃತ್ತಿ:

ಅಣ್ಣ ರಾಯಪ್ಪನವರ ವಿದ್ಯಾಭ್ಯಾಸಕ್ಕಾಗಿ ತಮ್ಮಣ್ಣಪ್ಪನವರಂತಹ ಮೃದುಸ್ವಭಾವದ ವ್ಯಕ್ತಿ ಪೋಲಿಸ್ ನೌಕರಿಗೆ ನಿಂತರು. ಬಡತನದ ಕಾರಣದಿಂದ ಪೋಲಿಸ್ ನೌಕರಿಗೆ ಸೇರಿದರೂ, ಆ ಕೆಲಸ ಒಗ್ಗದ ಕಾರಣ ಅದಕ್ಕೆ ಶರಣು ಹೊಡೆದರು. ತಮ್ಮಣ್ಣಪ್ಪ ಕಲಿತದ್ದು ಮರಾಠಿಯಾದರೂ, ಮಾತೃಭಾಷೆಯಾದ ಕನ್ನಡ ಕಲಿಯಲೇಬೇಕೆಂಬ ನಿಷ್ಠುರವಾದ ಹಠದಿಂದ ಸ್ವಪರಿಶ್ರಮದಿಂದ ಕನ್ನಡ ಕಲಿತರು. ಪೋಲಿಸ್ ನೌಕರಿಯನ್ನು ಬಿಟ್ಟು ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ನಿರ್ವಹಿಸತೊಡಗಿದರು. ಮುಂದೆ ರಬಕವಿಯಲ್ಲಿ ಕನ್ನಡ ಶಾಲೆಯ ಮುಖ್ಯೋಪಾಧ್ಯಾಯರಾಗಿ ಕೆಲಸಕ್ಕೆ ಸೇರಿದರು.[೧೫] ಯಾವಾಗ ಕನ್ನಡ ಶಾಲೆಯ ಶಿಕ್ಷಕರಾದರೋ, ಆವಾಗ ಕನ್ನಡದ ಹೀನ ಪರಿಸ್ಥಿತಿಯ ಅರಿವು ತಮ್ಮಣ್ಣಪ್ಪನವರಿಗೆ ಆಗತೊಡಗಿತು. ಮನೆಮಾತು ಕನ್ನಡವಾಗಿದ್ದರೂ, ಶಿಕ್ಷಣ, ಅಂಗಡಿ ಮುಗ್ಗಟ್ಟು, ವ್ಯವಹಾರಗಳೆಲ್ಲ ಮರಾಠಿಯಲ್ಲಿ ನಡೆಯುತ್ತಿದ್ದವು. ಎಲ್ಲೆಲ್ಲೂ ಮರಾಠಿಯಲ್ಲಿ ಬರೆಯಿಸಿದ ಬೋರ್ಡುಗಳು, ಲೆಖ್ಖಪತ್ರಗಳೆಲ್ಲ ಮರಾಠಿಮಯ. ಇದರಿಂದ ನೊಂದುಕೊಂಡು ಕನ್ನಡದ ಉಳಿವಿಗಾಗಿ ಪ್ರಯತ್ನಿಸಲು ಮುಂದಾದರು.[೧೬] ಮಕ್ಕಳನ್ನು ಶಾಲೆಗೆ ಕಳುಹಿಸದ ಪಾಲಕರ ಹತ್ತಿರ ಸ್ವತಃ ತಾವೇ ಹೋಗಿ ಶಿಕ್ಷಣದ ಮಹತ್ವವನ್ನು ತಿಳಿಸಿಕೊಟ್ಟು ಶಾಲೆಗೆ ಸೇರಿಸಲು ಪ್ರಯತ್ನಿಸುತ್ತಿದ್ದರು.[೧೭] ಜಾಣ ಮಕ್ಕಳನ್ನು ಕಂಡರೆ ತಮ್ಮಣ್ಣಪ್ಪನವರಿಗೆ ತುಂಬಾ ಪ್ರೀತಿ. ಅಂತಹ ಮಕ್ಕಳನ್ನು ಕರೆದು ಒಂದು ಬಾಯಿಲೆಖ್ಖವನ್ನು ಕೇಳುತ್ತಿದ್ದರು, ಉತ್ತರ ಹೇಳಿದ ಮಕ್ಕಳನ್ನು ಪ್ರೋತ್ಸಾಹಿಸಿ ಮೈಸವರಿ ಶಾಲೆಗೆ ಕಳಿಸಲು ಪೋಷಕರಿಗೆ ಹೇಳುತ್ತಿದ್ದರು.[೧೮] ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಇರುವ ಅನನುಕೂಲತೆಯ ಪರಿಸ್ಥಿತಿಯನ್ನು ತಮ್ಮಣ್ಣಪ್ಪನವರ ಮುಂದೆ ಹೇಳಿಕೊಂಡರೆ ಅವರು ಕರಗಿಬಿಡುತ್ತಿದ್ದರು. ತಾವೇ ಸ್ವತಃ ಮಕ್ಕಳನ್ನು ಶಾಲೆಗೆ ಸೇರಿಸಿ ಅನುಕೂಲ ಮಾಡಿಕೊಡುತ್ತಿದ್ದರು. ಆಗ ಅವರು ಸಹಾಯ ಮಾಡಿರದೇ ಇದ್ದರೆ ಬಡನೇಕಾರ ಕುಟುಂಬದ ಮಕ್ಕಳು ಶಾಲೆಯನ್ನೇ ಕಲಿಯುತ್ತಿರಲಿಲ್ಲ. ತಮ್ಮಣ್ಣಪ್ಪನವರು ಮಕ್ಕಳಿಗೆ ಸ್ಫೂರ್ತಿಯಾಗಿದ್ದರು. ಬಡವರಿಗೆ ಸಹಾಯ ಮಾಡುತ್ತಿದ್ದರು.[೧೯] ಹೀಗಾಗಿ ಅವರ ಮನೆಯಲ್ಲಿ ಸದಾ ಅನ್ನದಾಸೋಹ ನಡೆಯುತ್ತಿತ್ತು. ಮಕ್ಕಳನ್ನು ಪ್ರೀತಿಯಿಂದ ಕಾಣುವುದರಿಂದ ಇಡೀ ದಿನ ತಮ್ಮ ಮನೆಯಲ್ಲಿ ಇರುತ್ತಿದ್ದುದನ್ನು ತಮ್ಮಣ್ಣಪ್ಪನವರ ಮೊಮ್ಮಗಳು ಶ್ರೀಮತಿ ಅನ್ನಪೂರ್ಣ ಬಾಣಕಾರ ಅವರು ಜ್ಞಾಪಿಸಿಕೊಳ್ಳುತ್ತಾರೆ.[೨೦]

೩.೫.೪. ಮದುವೆ:

ತಮ್ಮಣ್ಣಪ್ಪನವರು ರಬಕವಿಯ ಕನ್ನಡ ಗಂಡುಮಕ್ಕಳ ಶಾಲೆಯ ಶಿಕ್ಷಕರಾಗಿ ಕಾರ್ಯ ನಿರ್ವಹಿಸತೊಡಗಿದ ಸಮಯದಲ್ಲಿಯೇ ಅವರ ಮದುವೆಯಾಯಿತು. ರಬಕವಿಯವಳಾದ ಮಡದಿ

ಗಂಗವ್ವ ಒಂದು ಹೆಣ್ಣು ಮಗುವಿಗೆ ಜನ್ಮವಿತ್ತು ಕಣ್ಣುಮುಚ್ಚಿದಳು. ಈ ಮಗುವೇ ಭಾಗೀರಥಿ, ಡಾ.ಫ.ಗು.ಹಳಕಟ್ಟಿಯವರ ಧರ್ಮಪತ್ನಿ.

ಬನಹಟ್ಟಿಯಲ್ಲಿ ಅಬಕಾರ ಅವರದು ಒಂದು ಶ್ರೀಮಂತ ಮನೆತನ. ಅಲ್ಲವ್ವ ಈ ಮನೆತನದ ಹೆಣ್ಣುಮಗಳು. ಚಿಕ್ಕವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡು ವಿಧವೆಯಾಗಿದ್ದಳು. ಇವಳಿಗೆ ಏಕೈಕ ಸುಪುತ್ರಿ ನೀಲವ್ವ. ಮನೆತನದ ಭಾರವನ್ನು ಹೊರುವ ಗಂಡಸರು ಮನೆಯಲ್ಲಿರಲಿಲ್ಲ. ಸೀರೆ ಅಂಗಡಿಯ ವ್ಯವಹಾರವನ್ನು ಹೊಂದಿದ್ದ ಈ ಮನೆತನ ದಾನ-ಧರ್ಮಗಳಿಗೆ ಹೆಸರಾಗಿತ್ತು. ಅಲ್ಲವ್ವಳಿಗೆ ಗಂಡು ಸಂತಾನವಿರಲಿಲ್ಲ. ಹೀಗಾಗಿ ಶ್ರೀಮಂತಳಾದ ಅಲ್ಲವ್ವ ಬಡತನದಲ್ಲಿರುವ ತಮ್ಮಣ್ಣಪ್ಪನವರನ್ನು ಕಂಡು ತನ್ನ ಮಗಳಾದ ನೀಲವ್ವಳನ್ನು ಕೊಡಲು ಒಪ್ಪಿದಳು. ಮದುವೆಯ ನಂತರ ಬನಹಟ್ಟಿಯ ಅಬಕಾರ ಅವರ ಮನೆತನದ ಆಡಳಿತ ನೋಡಿಕೊಳ್ಳಲು ತಮ್ಮಣ್ಣಪ್ಪನವರು ಬನಹಟ್ಟಿಗೆ ಬಂದು ನಿಂತರು. ಸಿರಿವಂತ ಮನೆತನದಲ್ಲಿದ್ದರೂ, ಬಡತನ ಮರೆತಿರಲಿಲ್ಲ.[೨೧] ಶಿಕ್ಷಕವೃತ್ತಿ ತಮ್ಮಣ್ಣಪ್ಪನವರಿಗೆ ಅತೀ ಪ್ರಿಯವಾಗಿತ್ತು. ಆದರೆ ಮನೆ, ಅಂಗಡಿ ಜವಾಬ್ದಾರಿಗಳ ಕಾರಣದಿಂದ ಸಾಂಸ್ಕೃತಿಕ, ಸಾಮಾಜಿಕ ಚಟುವಟಿಕೆಗಳಿಂದ ಶಿಕ್ಷಕ ವೃತ್ತಿಗೆ ಶರಣು ಹೊಡೆದರು.[೨೨]

ಬನಹಟ್ಟಿಯ ಶ್ರೀಮಂತ ಕುಟುಂಬದಲ್ಲಿ ನೆಲೆನಿಂತರೂ, ರಬಕವಿಯ ವ್ಯಾಮೋಹ ಅವರಿಗೆ ಹೋಗಿರಲಿಲ್ಲ. ರಬಕವಿಗೆ ಹೋಗಿ ಬರದಿದ್ದರೆ ಅವರಿಗೆ ಸಮಾಧಾನವೇ ಇರುತ್ತಿರಲಿಲ್ಲ.[೨೩] ತಮ್ಮಣ್ಣಪ್ಪನವರು ಬನಹಟ್ಟಿಯಿಂದ ದಿನಾಲು ಸಾಯಂಕಾಲ ರಬಕವಿಗೆ ಬಂದು, ಶ್ರೀ ಮುರಿಗೆಯ್ಯ ಬಾಗೋಜಿಮಠರನ್ನು ಭೇಟಿಯಾಗುತ್ತಿದ್ದರು. ಶ್ರೀ ಮುರಿಗೆಯ್ಯ ಬಾಗೋಜಿಮಠರು ಲಿಂಗಾಯತ ಪುಣ್ಯಪುರುಷರಲ್ಲಿ ಒಬ್ಬರು. ಇವರು ಸಂಸಾರಿಗಳಾಗಿದ್ದು ರಬಕವಿಯಲ್ಲಿ ವಿರಕ್ತಮಠವನ್ನು ಹೊಂದಿದ್ದರು. ತಮ್ಮ ಅಪಾರ ಆಸ್ತಿಯನ್ನು ಟ್ರಸ್ಟ್ ಮಾಡಿ ಬಡಮಕ್ಕಳಿಗೆ ಸದುಪಯೋಗವಾಗುವಂತೆ ಮಾಡಿದ್ದಾರೆ. ಇಬ್ಬರೂ ಸೇರಿ ವಿವಿಧ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದರು. ಆ ಚರ್ಚೆ ಧಾರ್ಮಿಕ, ಸಮಾಜ ಸುಧಾರಣೆ, ದೇಶಚಿಂತನೆ ಮತ್ತು ಕರ್ನಾಟಕ ಏಕೀಕರಣದ ವಿಷಯಗಳಾಗಿರುತ್ತಿದ್ದವು. ತಮ್ಮಣ್ಣಪ್ಪನವರು ಬಾಗೋಜಿಮಠದಲ್ಲಿ ನಡೆಯುವ ಶಿವಾನುಭವ ಕಾರ್ಯಕ್ರಮಗಳಲ್ಲಿ ತಪ್ಪದೇ ಪಾಲ್ಗೊಳ್ಳುತ್ತಿದ್ದರು. ಆಮೇಲೆ ಚಿಕ್ಕವರಾದ ಬಸವರಾಜ ಬಾಗೋಜಿಮಠರು ಅವರನ್ನು ಕೈಹಿಡಿದುಕೊಂಡು ಬನಹಟ್ಟಿಗೆ ಬಿಟ್ಟು ಬರುವುದನ್ನು ೮೬ ವಯಸ್ಸಿನ ವಯೋವೃದ್ಧರಾದ ಶ್ರೀ ಬಸವರಾಜ ಬಾಗೋಜಿಮಠರು ಜ್ಞಾಪಿಸಿಕೊಳ್ಳುತ್ತಾರೆ.[೨೪]

೩.೫.೫. ಕೌಟುಂಬಿಕ ಜೀವನ:

ಎರಡನೆಯ ಹೆಂಡತಿ ನೀಲವ್ವಳ ಮಡಿಲಿನಿಂದ ಮೊದಲ ಮಗು ಗಂಡಾಗಿತ್ತು, ಹೆಸರು ಬಳವಂತ. ಆದರೆ ಈ ಬಳವಂತ ೭-೮ ವರ್ಷದವನಿರಬೇಕಾದರೆ ಕಾಯಿಲೆ ಬಂದು ಅವನು ತೀರಿಕೊಂಡ. ಎರಡನೆಯ ಮಗಳು ಸಿದ್ದಲಿಂಗವ್ವ, ಇವಳು ಅಲ್ಲವ್ವ ಅಬಕಾರಳ ದತ್ತುಪುತ್ರನಾದ

ಚನಮಲ್ಲಪ್ಪ ಅಬಕಾರರ ಹೆಂಡತಿ. ಮೂರನೆಯವಳು ಸಾವಿತ್ರಿ. ಇವಳನ್ನು ಮಹಾಲಿಂಗಪುರದ ಪ್ರಸಿದ್ಧ ಮನೆತನ ದಡ್ಡೀಮನಿಯವರಿಗೆ ಕೊಡಲಾಗಿತ್ತು.[೨೫]

ತಮ್ಮಣ್ಣಪ್ಪನವರ ಅತ್ತೆ ಅಲ್ಲವ್ವಳಿಗೆ ಗಂಡು ಸಂತಾನ ಇರದ ಕಾರಣ[೧] ಚನಮಲ್ಲಪ್ಪನನ್ನು ದತ್ತಕ ತೆಗೆದುಕೊಂಡಿದ್ದಳು. ಚನಮಲ್ಲಪ್ಪ ಅಬಕಾರ ಅವರು ಹೊರಗಿನವರೇನೂ ಅಲ್ಲ. ಅಲ್ಲವ್ವಳ ಗಂಡ ಚನ್ನವೀರಪ್ಪ ಅವರ ತಮ್ಮ ರಾಮಪ್ಪ ಮತ್ತು ಸಂಗನಬಸವ್ವರ ಸುಪುತ್ರರು. ಊರಿಗೆ ಮಹಾಮಾರಿ ಪ್ಲೇಗ್ ಬಂದು ಅಬಕಾರ ಮನೆತನದವರಲ್ಲಿ ಹೆಚ್ಚು ಜನ ಸತ್ತು ಹೋದರು. ಆ ಸಂದರ್ಭದಲ್ಲಿ ಚನಮಲ್ಲಪ್ಪನಿಗೆ ಆಸರೆಯಾದವಳು ಅಲ್ಲವ್ವಜ್ಜಿ. ಚನಮಲ್ಲಪ್ಪನಿಗೆ ಹೊರಗಿನ ಹೆಣ್ಣನ್ನು ತಂದು ಮದುವೆ ಮಾಡದೆ, ಸ್ವತಃ ತನ್ನ ಮಗಳ ಮಗಳು(ಮೊಮ್ಮಗಳು) ಸಿದ್ಧಲಿಂಗವ್ವಳ ಜೊತೆ ಮದುವೆ ಮಾಡಿದಳು. ಇದಕ್ಕೆ ತಮ್ಮಣ್ಣಪ್ಪನವರ ವಿರೋಧವು ಇರದ ಕಾರಣ, ಒಂದೇ ಮನೆಯಲ್ಲಿ ಎರಡು ಸಂಬಂಧಗಳ ಬೆಸುಗೆ ಏರ್ಪಟ್ಟಿತ್ತು. ಅಲ್ಲವ್ವಜ್ಜಿಯ ಮನೆಯಲ್ಲಿ ತಮ್ಮಣ್ಣಪ್ಪ ಚಿಕ್ಕೋಡಿ ಮತ್ತು ಚನಮಲ್ಲಪ್ಪ ಅಬಕಾರರ ಸಂಸಾರಗಳು ವಾಸಮಾಡಿದ್ದವು. ಅಲ್ಲವ್ವ ಎಂದೂ ತನ್ನ ಅಳಿಯ ಮತ್ತು ಮಗನಲ್ಲಿ ಭೇದ ಎಣಿಸಲಿಲ್ಲ. ಹಳಕಟ್ಟಿಯವರ ಹೆಂಡತಿ ಭಾಗೀರಥಿಯು ತಮ್ಮಣ್ಣಪ್ಪನವರ ಮೊದಲ ಹೆಂಡತಿಯ ಮಗಳು. ಸಂಬಂಧದಲ್ಲಿ ತನ್ನ ಮಗಳು ನೀಲವ್ವಳಿಗೆ ಮಲಮಗಳು, ಅಲ್ಲವ್ವಳಿಗೆ ಮಲಮೊಮ್ಮಗಳು. ಆದರೆ ಭಾಗೀರಥಿಯನ್ನು ಎಂದೂ ಆ ರೀತಿಯಾಗಿ ನೋಡಿಕೊಳ್ಳಲಿಲ್ಲ. ತನ್ನ ಮೂರು ಹೆಣ್ಣುಮಕ್ಕಳ ಬಾಣಂತಿತನ ಮಾಡಿದ ಹಾಗೆಯೇ ಭಾಗೀರಥಿಗೂ ಮಾಡಿದಳು. ಅವಳಿಗೂ ಕೂಡಾ ತನ್ನ ಮಕ್ಕಳಿಗೆ ಕೊಡುವ ಹಾಗೆ ಆಭರಣ ಮಾಡಿಸಿ ಕೊಟ್ಟಿದ್ದಳು. ಭಾಗೀರಥಿಯ ಹೆಸರಿನಲ್ಲಿ ಬಜಾರದಲ್ಲಿರುವ ಒಂದು ಅಂಗಡಿಯನ್ನು ತಮ್ಮಣ್ಣಪ್ಪನವರು ಬರೆದರು. ಆ ಅಂಗಡಿಯನ್ನು ಭಾಡಿಗೆ ಕೊಟ್ಟಿದ್ದರು. ಪ್ರತಿ ತಿಂಗಳು ಆ ಬಾಡಿಗೆ ಹಣವನ್ನು ಹಳಕಟ್ಟಿಯವರಿಗೆ ಕೊಟ್ಟು ಕಳಿಸುತ್ತಿದ್ದರು. ತಮ್ಮಣ್ಣಪ್ಪನವರ ನಿಧನಾನಂತರ, ಚನಮಲ್ಲಪ್ಪ ಅಬಕಾರರವರು ತಮ್ಮ ಜೀವಿತಾವಧಿಯ ವರೆಗೂ, ಹಣವನ್ನು ಕಳಿಸುತ್ತಿದ್ದರು. ಈ ವಿಷಯಕ್ಕೆ ಹಳಕಟ್ಟಿಯವರು ಮತ್ತು ಚನಮಲ್ಲಪ್ಪರ ಮಧ್ಯದಲ್ಲಿ ನಡೆದ ಪತ್ರವ್ಯವಹಾರವೇ ಸಾಕ್ಷಿಯಾಗಿದೆ. (ಅನುಬಂಧ-೩.೧)

ತಮ್ಮಣ್ಣಪ್ಪನವರ ಆದೇಶದಂತೆ ಹಳಕಟ್ಟಿಯವರು ವಿಜಾಪುರದಲ್ಲಿ ವಕೀಲಿ ವೃತ್ತಿಯನ್ನು ಕೈಗೊಂಡರು. ಜೊತೆಗೆ ಅವರ ಬೆಂಬಲದಿಂದ ಸಾಹಿತ್ಯ ಪ್ರಜ್ಞೆ ಬೆಳೆಸಿಕೊಂಡರು. ವಚನವಾಙ್ಮಯ ಸಂಶೋಧನೆಯಲ್ಲಿ ತೊಡಗಿದ ಹಳಕಟ್ಟಿಯವರು ಆರ್ಥಿಕ ಅಡಚಣೆಯಿಂದ ಬಳಲುತ್ತಿರುವ ಸಂದರ್ಭದಲ್ಲಿ ತಮ್ಮಣ್ಣಪ್ಪನವರು ತಮ್ಮ ಪತ್ರದ ಮುಖಾಂತರ ಧೈರ್ಯ ಹೇಳಿ, ತಿಂಗಳಿಗೆ ೫೦೦ ರೂ.ಗಳ ಉತ್ಪನ್ನವಾಗುವಂತೆ ಮಾಡಿಕೊಟ್ಟರು.[೨೬] ಅಂದರೆ ತಮ್ಮ ಮಗಳ ಹೆಸರಿನಲ್ಲಿ ಖಾತೆಯೊಂದನ್ನು ತೆರೆದು ಪ್ರತಿತಿಂಗಳು ಅಂಗಡಿಯಿಂದ ಬಂದ ಹಣವನ್ನು ಹಾಕುತ್ತಿದ್ದರು. ಮುಂದೆ ಇದು ಚನಮಲ್ಲಪ್ಪನವರ ಜೀವಿತಾವಧಿಯ ತನಕವೂ ನಡೆದಿತ್ತು. ಇಂದಿಗೂ ಬಜಾರದಲ್ಲಿರುವ ಅಂಗಡಿ ಹಳಕಟ್ಟಿಯವರ ಹೆಸರಿನಲ್ಲಿಯೇ ಇದೆ. ಹೀಗೆ ಹಳಕಟ್ಟಿಯವರು ಮತ್ತು ತಮ್ಮಣ್ಣಪ್ಪನವರ ಮಧುರ

ಬಾಂಧವ್ಯಕ್ಕೆ ಅಬಕಾರವರ ಮನೆತನ ಎಂದೂ ಅಡ್ಡಿಯಾಗಲಿಲ್ಲ. ಹಳಕಟ್ಟಿಯವರ ಧರ್ಮಪತ್ನಿ ಭಾಗೀರಥಿಯವರು ಮೇಲಿಂದ ಮೇಲೆ ಬನಹಟ್ಟಿಗೆ ಬರುವುದನ್ನು ಶ್ರೀಮತಿ ಅನ್ನಪೂರ್ಣ ಬಾಣಕಾರ ಅವರು ನೆನಪಿಸಿಕೊಳ್ಳುತ್ತಾರೆ.[೨೭]

ತಮ್ಮಣ್ಣಪ್ಪನವರ ಅತ್ತೆ ಅಲ್ಲವ್ವಜ್ಜಿ ತನ್ನ ದಾನಗುಣದಿಂದ 'ಬನಹಟ್ಟಿಯ ತಾಯಿ'ಯೆಂದು ಹೆಸರಾಗಿದ್ದಳು. ಅವಳು ತನ್ನ ಅಳಿಯನ ದಾನಗುಣಕ್ಕೆ ಎಂದೂ ಬೇಸರಿಸಿಕೊಂಡವಳಲ್ಲ. ಅವರ ಮನೆಯೆಂದರೆ ಶರಣರ ದಾಸೋಹದ ಮನೆಯಂತಾಗಿತ್ತು. ಬಂದ ಅತಿಥಿಗಳು ಯಾರೇ ಆಗಿರಲಿ, 'ಮುಖ ತೊಳ್ಕೊಳ್ಳರಿ, ಊಟ ಮಾಡ್ರಿ' ಎಂದು ಹೇಳುವ ಪದ್ಧತಿ ಇತ್ತು. ಒಂದೊಂದು ದಿನ ಅಡಿಗೆ ಮನೆಯ ಒಲೆ ಆರದೆ ಇರುತ್ತಿತ್ತು. ಮನೆಗೆ ಬರುವ ಅತಿಥಿಗಳಿಗೆಲ್ಲಾ ಉಪಚರಿಸುವುದು ಸಹಜವೆಂಬಂತೆ ಒಪ್ಪಿಕೊಂಡಿದ್ದರು. ಅಣ್ಣ ರಾಯಪ್ಪನ ಮಗನಾದ ಪಂಡಿತಪ್ಪನವರು ಜಮಖಂಡಿ ಸಂಸ್ಥಾನ ಮತ್ತು ಆಂಗ್ಲೋ ವರ್ನಾಕ್ಯೂಲರ್ ಶಾಲೆಯ ಲೆಖ್ಖಪತ್ರಗಳನ್ನು ನೋಡಲು ಬಂದರೆ, ತಮ್ಮ ಜೊತೆ ಒಂದು ದಂಡು ಜನರನ್ನು ತರುತ್ತಿದ್ದರು. ಅವರಿಗೆಲ್ಲ ಬೇಸರಿಸದೆ ಆದರಾತಿಥ್ಯ ಮಾಡುವುದು ಈ ಕುಟುಂಬದ ವೈಖರಿಯಾಗಿತ್ತು.

೩.೫.೬. ಗುಣ–ಸ್ವಭಾವ:

ಆಜಾನುಬಾಹು ಎತ್ತರದ ದೇಹ ಹೊಂದಿರುವ ತಮ್ಮಣ್ಣಪ್ಪನವರು ಅತೀ ಕೆಂಪು ಕಪ್ಪು ಅಲ್ಲದ ಗೌರವರ್ಣ ಹೊಂದಿದ್ದರು. ಅಗಲವಾದ ಹಣೆ ನೆಟ್ಟಗೆ ಇರುವ ಮೂಗು ಅವರ ಎತ್ತರದ ವ್ಯಕ್ತಿತ್ವಕ್ಕೆ ಹೊಂದುವಂತಿತ್ತು. ಮುಖಕ್ಕೆ ಹೊಂದಿಕೊಳ್ಳುವ ದೊಡ್ಡ ಕಿವಿಗಳು, ತೇಜಸ್ಸಿನಿಂದ ಕೂಡಿದ ದೊಡ್ಡ ಕಣ್ಣುಗಳು, 'ಮುಖಕ್ಕೆ ಘನತೆಯನ್ನು ತಂದುಕೊಡುವ ದಟ್ಟ ಮೀಸೆಗಳನ್ನು ನೋಡಿದರೆ, ಪರಿಚಯವಿಲ್ಲದವರು ಸಹಿತ ಗೌರವ ಭಾವನೆಯಿಂದ ನೋಡುತ್ತಿದ್ದರು. ಅವರ ಸದೃಢ ಮೈಕಟ್ಟು ಯುವಕರನ್ನು ನಾಚಿಸುವಂತಿತ್ತು.'[೨೮]

ಚಿಕ್ಕೋಡಿ ಮನೆತನದವರು ತಾವು ಧರಿಸುವ ಬಟ್ಟೆಗಳ ಬಗ್ಗೆ ತುಂಬ ಮಹತ್ವ ಕೊಡುತ್ತಿದ್ದರು. ಬಿಳಿ ಜುಬ್ಬಾ, ಜೋಡ ಧೋತರ ಧರಿಸುವ ತಮ್ಮಣ್ಣಪ್ಪನವರು, ಹೊರಗೆ ಹೊರಟರೆ, ಅಂಗಡಿಯಲ್ಲಿ ಕೂತರೆ ಅಂಗಿಯ ಮೇಲೆ ಕಡ್ಡಾಯವಾಗಿ ರೇಷ್ಮೆ ಹೊದಿಕೆಯನ್ನು ಧರಿಸುತ್ತಿದ್ದರು. ತಲೆಯ ಮೇಲೆ ಸದಾ ದೊಡ್ಡ ರುಮಾಲನ್ನು ಸುತ್ತುತ್ತಿದ್ದುದು ಅವರದೇ ಆದ ವೈಶಿಷ್ಟ್ಯವೆನಿಸಿತ್ತು. ಕಾಲಿನಲ್ಲಿ ಜೋಡು ಹಾಕಿಕೊಂಡು ಹೊರಟರೆ ಬಜಾರದಲ್ಲಿ ಜನ ಗೌರವದಿಂದ ನೋಡುತ್ತಿದ್ದರು.[೨೯] ಯೌವನದಲ್ಲಿ ಕೋಟು ಧರಿಸಿದ್ದು ತಮ್ಮಣ್ಣಪ್ಪನವರ ಹಳೆಯ ಫೋಟೋಗಳಿಂದ ತಿಳಿದುಬರುತ್ತದೆ. ಸಭೆ ಸಮಾರಂಭಗಳಿಗೆ ಹೋಗುವಾಗ ಕೋಟನ್ನೇ ಧರಿಸುತ್ತಿದ್ದರು.

ತಮ್ಮಣ್ಣಪ್ಪನವರು ದಿನಾಲು ಬೆಳಗ್ಗೆ ಎದ್ದು ಅಂಗಡಿಯಲ್ಲಿ ಕುಳಿತುಕೊಳ್ಳುವ ಮುನ್ನ ತಮ್ಮ ಒಡನಾಡಿಗಳನ್ನು ಭೇಟಿಯಾಗುತ್ತಿದ್ದರು. ಆ ಒಡನಾಡಿಗಳೆಂದರೆ ಶ್ರೀ ಶಿವಲಿಂಗಪ್ಪ ಬೆಳಗಲಿ, ವಿರುಪಾಕ್ಷಪ್ಪ ಬಾಣಕಾರ, ಅಲ್ಲಪ್ಪ ಮಂಡಿ ಮತ್ತು ಶಿವರುದ್ರಪ್ಪ ಗುರುಪಾದಪ್ಪ ಶೆಟ್ಟರ. ಅಂಗಡಿಯ ಕಟ್ಟೆಯ ಮೇಲೆ

ತುಸುಹೊತ್ತು ಕೂತು ಮತ್ತೆ ತಮ್ಮ ವ್ಯವಹಾರಕ್ಕೆ ಮರಳುತ್ತಿದ್ದರು. ಒಣ ಹರಟೆ ಇವರ ಜಾಯಮಾನ ಅಲ್ಲ.[೩೦] ವ್ಯಾಪಾರದಲ್ಲಿ ತೊಡಗಿದಾಗ ಯಾರೇ ಬರಲಿ ಅವರನ್ನು ಆತ್ಮೀಯತೆಯಿಂದ ಮಾತನಾಡಿಸುತ್ತಿದ್ದರು. ಅಂಗಡಿಯ ಮುಂದೆ ಚಿಕ್ಕಮಕ್ಕಳು ಖಾಲಿ ಅಡ್ಡಾಡುತ್ತಿದ್ದರೆ ಅವರಿಗೆ ಸರಿ ಕಾಣುತ್ತಿರಲಿಲ್ಲ. ಆ ಮಗುವನ್ನು ಕರೆದು ಅವರಿಗೆ ಬಾಯಿಲೆಖ್ಖ ಕೇಳುತ್ತಿದ್ದರು. 'ಒಂದು ದುಡ್ಡಿಗೆ ಮೂರು ಬಾಳೆಹಣ್ಣು ಆದರೆ ಒಂದು ಆಣೆಗೆ ಎಷ್ಟು?' ಜಾಣ ಇದ್ದ ಮಗು ಬೆರಳಿನಿಂದ ಲೆಖ್ಖ ಹಾಕಿ ಹನ್ನೆರಡು ಎಂದರೆ ತಕ್ಷಣ ತಮ್ಮಣ್ಣಪ್ಪನವರು ಶಹಬ್ಬಾಶ್ ಎಂದು ಬೆನ್ನು ಚಪ್ಪರಿಸಿ ಮಗುವಿನ ಗದ್ದ ಹಿಡಿದು 'ನಮ್ಮ ಶಾಲೆಗೆ ನೀನು ಬರಬೇಕಪ್ಪಾ ಹೈಸ್ಕೂಲಿಗೂ ಹೋಗಬೇಕು, ಶಾಲೆ ಬಿಡಬೇಡಿರಿ' ಎಂದು ಹೇಳುತ್ತಿದ್ದರು. ಇದು ತಮ್ಮಣ್ಣಪ್ಪನವರ ದಿನನಿತ್ಯದ ದಿನಚರಿಯಾಗಿತ್ತು. ಯುವಕರು ಖಾಲಿ ಅಡ್ಡಾಡುತ್ತಿದ್ದರೆ ಎಂದೂ ಸುಮ್ಮನಿರುತ್ತಿರಲಿಲ್ಲ. ಕೆಲಸ ಮಾಡಿ ತಿನ್ನಲು ಸಲಹೆ ಕೊಡುತ್ತಿದ್ದರು. ತಮ್ಮ ಕಣ್ಣ ಮುಂದೆ ಹಾದುಹೋಗುವ ಹುಡುಗರಿಗೆ 'ಧಾರ್ಮಿಕ ಕೆಲಸ ಮಾಡರಿ, ಸುಮಾರ ಕೆಲಸ ಎಂದೂ ಮಾಡಬ್ಯಾಡರಿ'[೩೧] ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದರು. ಇದನ್ನು ನೋಡಿದರೆ ಇವರು ವ್ಯಾಪಾರದ ಜೊತೆಜೊತೆಯಾಗಿ ತಮಗೆ ಅರಿವಿಲ್ಲದಂತೆ ಸಮಾಜಕ್ಕೆ ಬೇಕಾದ ನೈತಿಕ ಸ್ಥೈರ್ಯವನ್ನು ಒದಗಿಸುವ ಕೈಂಕರ್ಯವನ್ನು ಹೊತ್ತುಕೊಂಡಿದ್ದರೇನೋ ಎನ್ನಿಸುತ್ತದೆ. 'ಕಟ್ಟೆಯ ಮೇಲೆ ಕೂತರೆ ಜನರು ಅವರ ಮುಂದೆ ತಲೆ ಎತ್ತಿಕೊಂಡು ತಿರುಗಲು ಹೆದರುತ್ತಿದ್ದರು. ಹೆಣ್ಣುಮಕ್ಕಳಂತೂ ಅವರ ಮುಂದೆ ಸುಳಿಯುತ್ತಿದ್ದಿಲ್ಲ.[೩೨]

ತಮ್ಮಣ್ಣಪ್ಪನವರ ಘನವ್ಯಕ್ತಿತ್ವವನ್ನು ಕಂಡು ಮಾರುಹೋದವರೆಷ್ಟೋ ಜನ. ಸಮಾಜಕ್ಕಾಗಿ ಜೀವತೆತ್ತ ತಮ್ಮಣ್ಣಪ್ಪನವರ ಪ್ರೇರಣೆಯಿಂದ ಅವರ ಹಿತನುಡಿಗಳನ್ನು ಆಲಿಸಿದವರಲ್ಲಿ ಬಾಲಕ ಶಿವಲಿಂಗಪ್ಪ ಹತ್ತಿಯವರು ಪ್ರಮುಖರು. ವಯೋವೃದ್ಧರಾದ ಅವರು ಇಂದು ತಮ್ಮ ಮರಣಾನಂತರ ತಮ್ಮ ದೇಹವನ್ನು ಕೆ.ಎಲ್.ಇ. ಸಂಸ್ಥೆಗೆ ದಾನವಾಗಿ ನೀಡಲು ಮನಸಾರೆ ಒಪ್ಪಿಕೊಂಡಿದ್ದಾರೆ. ಇದಕ್ಕೆ ತಮ್ಮಣ್ಣಪ್ಪನವರ ಪ್ರೇರಣೆಯೇ ಕಾರಣ ಎಂದು ಒಪ್ಪಿಕೊಳ್ಳುತ್ತಾರೆ.[೩೩]

ಸಾಯಂಕಾಲವಾಗುತ್ತಿದ್ದಂತೆ ಬನಹಟ್ಟಿಯಿಂದ ರಬಕವಿಯ ಬಾಗೋಜಿಮಠಕ್ಕೆ ಬಂದು ಕೂಡುತ್ತಿದ್ದರು. ಬಾಗೋಜಿಮಠದ ಮುರಿಗೆಯ್ಯನವರ ಜೊತೆ ದೇಶದಲ್ಲಾಗುವ ವಿದ್ಯಮಾನಗಳನ್ನು ಚರ್ಚಿಸುತ್ತಿದ್ದರು. ಜೊತೆಗೆ ಲಿಂಗಾಯತ ಧರ್ಮದಲ್ಲಿರುವ ಅಜ್ಞಾನ-ಮೂಢನಂಬಿಕೆಗಳ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರು. ವೀರಶೈವ ಮಹಾಸಭೆಗಳು, ಕನ್ನಡ ಸಾಹಿತ್ಯ ಸಮ್ಮೇಳನ, ಪತ್ರಿಕೆಗಳು ಹೀಗೆ ಚಿಂತನೆಗೆ ಹಚ್ಚುವ ವಿಷಯಗಳು ಅವರ ಚರ್ಚೆಯಲ್ಲಿರುತ್ತಿದ್ದವು. ಚರ್ಚೆಯ ನಂತರ ಹೊರಡಲು ಅಣಿಯಾಗುತ್ತಿದ್ದಂತೆ ಮುರಿಗೆಯ್ಯನವರು ತಮ್ಮಣ್ಣಪನವರನ್ನು ಎಂದೂ ಒಬ್ಬರನ್ನೇ ಕಳಿಸುತ್ತಿರಲಿಲ್ಲ. ತಮ್ಮ ಮಗ ಬಸವರಾಜನನ್ನು ಕರೆದು ಜೊತೆ ಮಾಡಿ ಕಳಿಸುತ್ತಿದ್ದರು. ಇಳಿವಯಸ್ಸಿನ ತಮ್ಮಣ್ಣಪ್ಪನವರು ಒಂದು ಬಗಲಲ್ಲಿ ಪತ್ರಿಕೆಯನ್ನು ಮಡಚಿಟ್ಟುಕೊಂಡು, ಅದೇ ಕೈಯ ಬೆರಳಿನಿಂದ ಧೋತರದ ಚುಂಗು ಹಿಡಿದು ನಡೆಯುತ್ತಿದ್ದರು ಎಂದು ಕೃತಜ್ಞತಾಭಾವದಿಂದ ಬಸವರಾಜ ಬಾಗೋಜಿ ನೆನಸಿಕೊಳ್ಳುತ್ತಾರೆ.[೩೪] ದೂರದ

ಊರುಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಇದ್ದರೆ ತಮ್ಮಣ್ಣಪ್ಪನವರು ಎಂದೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ವ್ಯಾಪಾರ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಕಾರಣದಿಂದ ಅವರು ತಮಗೆ ಪ್ರಿಯವಾದ ಶಿಕ್ಷಕವೃತ್ತಿಯನ್ನು ಕೈಬಿಡಬೇಕಾಯಿತು. ಹಬ್ಬ ಹರಿದಿನಗಳಲ್ಲಿ ಸಭೆ ಸಮಾರಂಭಗಳನ್ನೇರ್ಪಡಿಸುವುದು, ಯುವಕರಿಂದ ಒಳ್ಳೆಯ ಕೆಲಸಗಳನ್ನು ಮಾಡಿಸುವುದು ಅವರ ದಿನಚರಿಯ ಒಂದು ಭಾಗವೇ ಆಗಿತ್ತು. ತಮ್ಮಣ್ಣಪ್ಪನವರು ಮನೆಯಲ್ಲಿ ಒಂದು ಸಾದಾ ಆರಾಮ ಖುರ್ಚಿಯಲ್ಲಿ ಕುಳಿತುಕೊಳ್ಳುತ್ತಿದ್ದರು. ಈಗಲೂ ಅವರು ಕುಳಿತುಕೊಳ್ಳುತ್ತಿದ್ದ ಆರಾಮಖುರ್ಚಿಯು ಅಬಕಾರ ಅವರ ಮನೆಯಲ್ಲಿದೆ. 'ಖುರ್ಚಿಯ ಮೇಲೆ ಕೂತಾಗಲೂ ಎಡಗೈಯಲ್ಲಿ ಒಂದು ಪತ್ರಿಕೆ ಇದ್ದೆ ಇರುತ್ತಿತ್ತು.[೩೫]

ತಮ್ಮಣ್ಣಪ್ಪನವರು ಯುವಕರು ಸದೃಢ ಸಮಾಜದ ಪ್ರಜೆಗಳು ಎಂದು ತಿಳಿದುಕೊಂಡಿದ್ದರು. ಯುವಕರ ಶಕ್ತಿ, ಸಾಮರ್ಥ್ಯ ಸಮಾಜದ ಒಳ್ಳೆಯ ಕೆಲಸಗಳಿಗೆ ಸದ್ವಿನಿಯೋಗವಾಗಬೇಕೆಂದು ಅವರು ಸದಾ ಬಯಸುತ್ತಿದ್ದರು. ಸಮಾಜಕ್ಕೆ ವ್ಯತಿರಿಕ್ತವಾದ ತಪ್ಪುಗಳನ್ನು ಯುವಕರು ಎಸಗಿದರೆ ತಮ್ಮಣ್ಣಪ್ಪನವರು ಖಂಡಿತ ಸುಮ್ಮನಿರುತ್ತಿರಲಿಲ್ಲ. ತಮ್ಮ ಜೀವಿತದ ಕೊನೆಯ ವರೆಗೂ ಯುವಕರನ್ನು ಕರೆದು ಅವರಿಗೆ ಬುದ್ಧಿವಾದ ಹೇಳುತ್ತಿದ್ದುದನ್ನು ಬನಹಟ್ಟಿಯ ಹಿರಿಯ ನಾಗರಿಕರು ಇಂದಿಗೂ ಜ್ಞಾಪಿಸಿಕೊಳ್ಳುತ್ತಾರೆ. ಅಂದಿನ ಯುವಕರು ಕೂಡಾ ತಮ್ಮಣ್ಣಪ್ಪನವರು ಹೇಳಿದ ಮಾತುಗಳಿಂದ ಎಂದೂ ಬೇಸರಗೊಂಡವರಲ್ಲ. ಅದರಲ್ಲಿ ಸತ್ಯ ಅಡಗಿದೆ ಎಂಬುದನ್ನು ಅರ್ಥೈಸಿಕೊಳ್ಳುತ್ತಿದ್ದರು. ಆದರೆ ಇಂದಿನ ಯುವಕರು ತಾವು ಹೇಳಿದ್ದನ್ನು ಕೇಳುವುದಿಲ್ಲ. ಅಷ್ಟೇಅಲ್ಲ, ತಮ್ಮಣ್ಣಪ್ಪನವರ ಮನಸ್ಸಿಗೆ ಇಂತಹ ಕಾರ್ಯಗಳು ಹಿಡಿಸುತ್ತಿದ್ದಿಲ್ಲ ಎಂದರೂ ಕಿವಿಗೆ ಹಾಕಿಕೊಳ್ಳುವುದಿಲ್ಲ ಎಂಬ ಒಳಕೊರಗು ಇಂದಿನ ಹಿರಿಯರಲ್ಲಿ ಇದೆ.

ಹೋಳಿಹಬ್ಬ ಇಡೀ ಭಾರತ ದೇಶದಲ್ಲಿಯೇ ವರ್ಣರಂಜಿತ, ಮನೋರಂಜಿತ ಹಬ್ಬ. ಇದನ್ನು ಕರ್ನಾಟಕದವರು ಬಹು ಸಂಭ್ರಮದಿಂದ ಆಚರಿಸುತ್ತಾರೆ. ಆದರೆ ಈ ಹಬ್ಬದಲ್ಲಿ ಕೆಲವು ಅಸಂಬದ್ಧ ಪದ್ಧತಿಗಳಿವೆ. ಮನೆಮನೆಗೆ ಹೋಗಿ ಕಳ್ಳತನ ಮಾಡಿ ಕಟ್ಟಿಗೆ, ಕುಳ್ಳುಗಳನ್ನು ತಂದು ಸುಡುವುದು, ಮರಗಳನ್ನು ಕಡಿಯುವುದು, ಜೊತೆಗೆ ಸಿಕ್ಕಸಿಕ್ಕವರಿಗೆಲ್ಲಾ ಬಣ್ಣ ಎರಚುವುದು, ಅಸಂಬದ್ಧವಾಗಿ ಕುಣಿಯುವುದು, ಕುಡಿಯುವುದು ಮೊದಲಾದವುಗಳನ್ನು ತಮ್ಮಣ್ಣಪ್ಪನವರು ವಿರೋಧಿಸಿದರು. ಅಷ್ಟೇ ಅಲ್ಲ, ಹೋಳಿಹಬ್ಬದ ಮುಖ್ಯ ಉದ್ದೇಶವನ್ನು ಮರೆತು ಸಭ್ಯತೆಯ ಎಲ್ಲೆ ಮೀರಿ ನಡೆಯುವ ರೀತಿನೀತಿಗಳನ್ನು ಖಂಡಿಸಿದರು. ಹೋಳಿಹಬ್ಬದ ಸಂತೋಷ ಸಮಾರಂಭವನ್ನು ಯಾರಿಗೂ ಮನನೋಯದಂತೆ ನಡೆಸಬೇಕೆಂದು ಕರೆಕೊಟ್ಟರು.[೩೬] ಹೋಳಿಹಬ್ಬದ ದಿನಗಳಲ್ಲಿ ಯುವಕರಿಂದ ನಾಟಕಗಳನ್ನು ಆಡಿಸುತ್ತಿದ್ದರು. ಸ್ವತಃ ನಾಟಕಗಳನ್ನು ರಚಿಸಿದ ತಮ್ಮಣ್ಣಪ್ಪನವರು ನಾಟಕಗಳಲ್ಲಿ ಅಪಾರ ಆಸಕ್ತಿಯನ್ನು ಹೊಂದಿದ್ದರು. ಬಿ.ಎಂ.ಶ್ರೀ ಅವರ 'ಅಶ್ವತ್ಥಾಮನ್' ನಾಟಕದ ಮಾತುಗಳನ್ನು ಇಂದಿಗೂ ಕಂಠಪಾಠದಿಂದ ಮರೆಯದೇ ಬನಹಟ್ಟಿಯ ಹಿರಿಯಜೀವ ರಾಮಲಿಂಗಪ್ಪನವರು ಹೇಳುತ್ತಾರೆ.[೩೭] ನಾಟಕಗಳಲ್ಲದೆ ಲಾವಣಿಗಳನ್ನು ಹಾಡಿಸುವುದು, ಪದ್ಯಗಳನ್ನು ಕಟ್ಟಿ ಹಾಡಿಸುವುದು ಹೀಗೆ ತಮ್ಮಣ್ಣಪ್ಪನವರು ತಮ್ಮ ಜೀವಿತಾವಧಿಯ ವರೆಗೂ ನಡೆಸಿಕೊಂಡು ಬಂದಿದ್ದರು.

ತಮ್ಮಣ್ಣಪ್ಪನವರು ಯಾವ ಕಾರ್ಯವನ್ನೇ ಮಾಡಲಿ, ಅದರ ಹಿಂದೆ ಒಂದು ಒಳ್ಳೆಯ ಉದ್ದೇಶ ಇದ್ದೇ ಇರುತ್ತಿತ್ತು. ಬನಹಟ್ಟಿಯ ಕಾಡಸಿದ್ದೇಶ್ವರನ ಗುಡಿ ಗುಡ್ಡದ ಮೇಲೆ ಇದೆ. ಆಗ ದಟ್ಟ ಮರಗಳು ಅಧಿಕವಾಗಿದ್ದವು. ಜೊತೆಗೆ ಕಾಡುಪ್ರಾಣಿಗಳ ಭಯದಿಂದ ಜನ ಗುಡಿಗೆ ಹೋಗುವುದು ಅಸಾಧ್ಯದ ಮಾತಾಗಿತ್ತು. ವರ್ಷಕ್ಕೊಂದಾವರ್ತಿ ಜಾತ್ರೆಗೆ ಬಹುಪ್ರಯಾಸದಿಂದ ಹೋಗಬೇಕಾಗುತ್ತಿತ್ತು. ಆಗ ತಮ್ಮಣ್ಣಪ್ಪನವರು ಯುವಕರನ್ನು, ಜನರನ್ನು ಕರೆದುಕೊಂಡು ಮುಂಚೂಣಿಯಲ್ಲಿ ಹೊರಟಾಗ ಪಟಾಕಿಗಳನ್ನು ಸಿಡಿಸುತ್ತಾ ಹೋಗುತ್ತಿದ್ದರಂತೆ. ಇದು ಕೇವಲ ಪ್ರಾಣಿಗಳನ್ನು ಓಡಿಸುವ ಒಂದು ಉದ್ದೇಶವಾಗಿತ್ತು. ಮುಂದೆ ಬರಬರುತ್ತಾ ಗುಡ್ಡಕ್ಕೆ ಕಾಡುಗಲ್ಲಿನ ಮೆಟ್ಟಿಲನ್ನು ಅಬಕಾರ ಅಲ್ಲಪ್ಪಜ್ಜಿ ಮಾಡಿಸಿದ ಮೇಲೆ ಜನ ಗುಡಿಗೆ ಹೋಗಿಬರುವುದು ಜಾಸ್ತಿಯಾಯಿತು. ಜನನಿಬಿಡ ಜಾಸ್ತಿಯಾದಂತೆ ಮರಗಳು ಕೂಡಾ ಕಣ್ಮರೆಯಾದವು.[೩೮]

ಯಾರಾದರೂ ಅಸಭ್ಯವಾಗಿ ಮಾತನಾಡಿದರೆ ತಮ್ಮಣ್ಣಪ್ಪನವರು ತಡೆಯುತ್ತಿದ್ದರು. ರಬಕವಿ ಬನಹಟ್ಟಿಯಲ್ಲಿ ಯಾರದೇ ಮದುವೆ ಆಗಲಿ, ಅಲ್ಲಿ ತಮ್ಮಣ್ಣಪ್ಪನವರು ಇರಲೇಬೇಕು. ಹಿರಿಯರಾಗಿ ತಮ್ಮಣ್ಣಪ್ಪನವರು ಒಂದು ಮದುವೆ ಮನೆಗೆ ಹೋಗಿದ್ದರು. ಮದುವೆಯ ಬೇರೆ ಬೇರೆ ಕಾರ್ಯಗಳಲ್ಲಿ ತೊಡಗಿದ ಒಬ್ಬ ತರುಣ ಯಾವುದೋ ಪ್ರಸಂಗದಲ್ಲಿ ಇನ್ನೊಬ್ಬರಿಗೆ ಬೈದನಂತೆ. ತಕ್ಷಣ ತಮ್ಮ ಸ್ಥಾನ ಬಿಟ್ಟೆದ್ದ ತಮ್ಮಣ್ಣಪ್ಪನವರು ಆ ಬೈದ ತರುಣನ ಹತ್ತಿರ ಬಂದರು. ಆತನ ಹೆಗಲನ್ನು ಮೃದುವಾಗಿ ಸ್ಪರ್ಶಿಸಿ 'ತಮ್ಮಾ, ಈ ರೀತಿ ಕೆಟ್ಟ ಬೈಗುಳನ್ನು ಬೈಯ್ಯಬಾರದು. ಹೇಳುವ ಮಾತನ್ನು ಸರಿಯಾಗಿ ಹೇಳಬೇಕು. ಇನ್ನೊಬ್ಬರ ಮನಸ್ಸಿಗೆ ನೋವಾಗಬಾರದು. ಈ ಕೆಟ್ಟ ಭಾಷೆ ಮಕ್ಕಳ ಮೇಲೆ ಪರಿಣಾಮ ಬೀರಿ ಮಕ್ಕಳೂ ಆ ಭಾಷೆಯನ್ನೇ ಬಳಸುವವು. ಮಾತು ಮಧುರವಾಗಿರಬೇಕು' ಎಂದು ಆತನಿಗೆ ಹಿತವಾಗಿ ಹೇಳಿದರು.[೩೯]

ಈ ಘಟನೆ ಅತಿ ಸಾಮಾನ್ಯ ಎನ್ನಿಸಿದರೂ, ಇಂತಹ ಹಲವು ಘಟನೆಗಳಲ್ಲಿ ತಮ್ಮಣ್ಣಪ್ಪನವರು ಯುವಕರ ತಪ್ಪುಗಳನ್ನು ತಿದ್ದುತ್ತಿದ್ದರು. ಆಗ ಯುವಕರೂ ಕೂಡಾ ತಮ್ಮಣ್ಣಪ್ಪನವರಿಗೆ ಎಂದೂ ತಿರುಗಿ ಮಾತನಾಡುತ್ತಿದ್ದಿಲ್ಲ. ತಾವು ಮಾಡಿದ ತಪ್ಪುಗಳನ್ನು ಅಷ್ಟೇ ಬೇಗ ತಿದ್ದಿಕೊಳ್ಳುತ್ತಿದ್ದರು ಎಂದು ಹಿಂದಿನದನ್ನು ಹಿರಿಯರು ಜ್ಞಾಪಿಸಿಕೊಳ್ಳುತ್ತಾರೆ.

ಬಡನೇಕಾರಿಕೆಯ ಕುಟುಂಬದಲ್ಲಿ ಜನಿಸಿದ ತಮ್ಮಣ್ಣಪ್ಪನವರಿಗೆ ಬಡತನದ ಅರಿವಿತ್ತು. ಕಷ್ಟಕಾರ್ಪಣ್ಯಗಳ ಮಧ್ಯದಲ್ಲಿಯೇ ಜೀವನ ಸಾಗಿಸಿದ್ದರು. ತಾವು ಅಬಕಾರ ಅವರ ಸಿರಿವಂತ ಮನೆಯಲ್ಲಿ ವಾಸಿಸಿದರೂ, ಬಡತನದ ಸಾವು ನೋವುಗಳನ್ನು ಮರೆತಿರಲಿಲ್ಲ.[೪೦] ಮನೆಗೆ ಯಾರೇ ಸಹಾಯ ಕೇಳಿಕೊಂಡು ಬರಲಿ ಅವರನ್ನು ಬರಿಗೈಯಿಂದ ಕಳುಹಿಸಿದ್ದೇ ಇಲ್ಲ. ತಮ್ಮಣ್ಣಪ್ಪನವರು ಬಡಮಕ್ಕಳನ್ನು ಕಂಡರೆ ಮಮ್ಮಲ ಮರುಗುತ್ತಿದ್ದರು. ಅವರಿಗೆ ಕರೆದು ಊಟ ಮಾಡಿಸಿ ಕಳಿಸುತ್ತಿದ್ದರು. ಮಕ್ಕಳು ಶಾಲೆಗೆ ಹೋಗದೇ ಬಡತನದ ಕಾರಣದಿಂದ ಕೆಲಸ ಮಾಡುತ್ತಿದ್ದರೆ, ಅವರನ್ನು ಕರೆದು ಶಾಲೆಗೆ ಹೋಗಲು ಹೇಳುತ್ತಿದ್ದರು. ತಾವೇ ಸ್ವತಃ ಆ ಮಕ್ಕಳ ಪೋಷಕರ ಹತ್ತಿರ ಹೋಗಿ ತಿಳಿಸಿ ಹೇಳುತ್ತಿದ್ದರು.[೪೧] 'ಒಂದು ವೇಳೆ ನೇಕಾರ ಕುಟುಂಬದ ಮಕ್ಕಳಿಗೆ ತಮ್ಮಣ್ಣಪ್ಪನವರು ಶಿಕ್ಷಣದ ಬಗ್ಗೆ ತಿಳುವಳಿಕೆ ಮೂಡಿಸದಿದ್ದರೆ

ನಾವು ಇನ್ನೂ ಬಡತನದಲ್ಲಿಯೇ ಇರಬೇಕಾಗುತ್ತಿತ್ತು'[೪೨] ಎಂದು ಶ್ರೀ ಮನವಳ್ಳಿ ಗುರುಗಳು ಜ್ಞಾಪಿಸಿಕೊಳುತ್ತಾರೆ. ಎಷ್ಟೋ ಬಡಮಕ್ಕಳ ಶಾಲೆಯ ಫೀಸ್‌ನ್ನೂ ಅವರೇ ತುಂಬಿದ್ದಾರೆ. ಎಷ್ಟೋ ಬಡಮಕ್ಕಳಿಗೆ ಹೊಟ್ಟೆ ತುಂಬಿಸಿದ್ದಾರೆ. ಇದನ್ನು ಬನಹಟ್ಟಿಯ ಹಿರಿಯರು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ.

ತಮ್ಮಣ್ಣಪ್ಪನವರು ನೀತಿ ನ್ಯಾಯದ ವಿಷಯ ಬಂದಾಗ ತಮ್ಮ ಪ್ರಾಮಾಣಿಕತೆಯನ್ನು ಬಿಟ್ಟುಕೊಡುತಿದ್ದಿಲ್ಲ. ತಮ್ಮ ಮನೆಯವರೇ ಆಗಲಿ, ಅವರಲ್ಲಿ ತಪ್ಪು ಇದ್ದರೆ, ಖಂಡಿತ ಅದನ್ನು ಸಹಿಸುತ್ತಿರಲಿಲ್ಲ. ತಮ್ಮಣ್ಣಪ್ಪನವರ ಅಳಿಯ ಚನ್ನಮಲ್ಲಪ್ಪ ಒಮ್ಮೆ ಕಾರನ್ನು ಚಲಾಯಿಸಿಕೊಂಡು ಬರುತ್ತಿದ್ದರು. ಆ ಸಮಯದಲ್ಲಿ ರಬಕವಿ-ಬನಹಟ್ಟಿಯ ನಡುವೆ ಇರುವ ರಾಮಪುರದ ಒಂದು ಹುಡುಗ ಕಾರಿಗೆ ಅಡ್ಡಬಂದು ಮೃತಪಟ್ಟ. ಅದು ಪೋಲಿಸ್ ಪಂಚನಾಮೆಯಾಗಿ ಈ ವರದಿ ಸರಕಾರಕ್ಕೆ ಹೋಯಿತು. ಆದರೆ ಜಮಖಂಡಿ ಸಂಸ್ಥಾನದ ಮಹಾರಾಜರು ಮತ್ತು ತಮ್ಮಣ್ಣಪ್ಪನವರಲ್ಲಿ ಒಂದು ಸುಮಧುರ ಬಾಂಧವ್ಯ ಇತ್ತು. ವಿಚಾರಣೆ ನಡೆದಾಗ ತಮ್ಮಣ್ಣಪ್ಪನವರು ಅವರ ಶಿಫಾರಸ್ಸು ತೆಗೆದುಕೊಂಡು ಬರಬಹುದೆಂದು ನಿರೀಕ್ಷಿಸಿದರು. ಆದರೆ ತಮ್ಮಣ್ಣಪ್ಪನವರು ಹೋಗಲೇ ಇಲ್ಲ. ನ್ಯಾಯ ವಿಚಾರಣೆಯ ದಿನವೂ ಬಂತು. ಆದರೆ ತಮ್ಮಣ್ಣಪ್ಪನವರು ತಮ್ಮ ದಿನನಿತ್ಯದ ವ್ಯವಹಾರದಲ್ಲಿ ಮಗ್ನರಾದರೇ ಹೊರತು ಹೋಗುವ ಮನಸ್ಸು ಮಾಡಲಿಲ್ಲ. ಪರಿಚಯದವರು ತಮ್ಮಣ್ಣಪ್ಪನವರಲ್ಲಿಗೆ ಬಂದು 'ಕಾರು ನಡೆಯಿಸಿದ್ದು ನಿಮ್ಮ ಅಳಿಯ. ಆತ ಕಾರನ್ನೆ ನಡೆಸಿಲ್ಲ ಎಂದು ವಾದಿಸಿದರೆ ಈ ಕೇಸು ಬಿದ್ದು ಹೋಗುತ್ತದೆ. ನೀವು ಅಷ್ಟು ಹೇಳಿರಿ' ಎಂದರು. 'ನನ್ನಿಂದ ಸುಳ್ಳು ಹೇಳಲು ಸಾಧ್ಯವಿಲ್ಲ ನಾನು ಸತ್ಯವನ್ನೇ ಹೇಳುವವ' ಎಂದು ತಮ್ಮಣ್ಣಪ್ಪನವರು ತಮ್ಮ ಸತ್ಯನಿಷ್ಠೆಗೆ ಅಂಟಿಕೊಂಡರು. ಚೆನ್ನಮಲ್ಲಪ್ಪರಿಗೆ ತಮ್ಮ ಸ್ವಂತ ಮಗಳು ಸಿದ್ದಲಿಂಗವ್ವಳನ್ನು ಕೊಟ್ಟಿದ್ದರು. ಮಗಳ ಮುಖ ನೋಡಿಯಾದರೂ ತಮ್ಮಣ್ಣಪ್ಪ ಕರಗುತ್ತಾರೇನೋ ಎಂದು ಬನಹಟ್ಟಿಯ ಜನರು ಕಾದರಂತೆ. ಪಟವರ್ಧನ ರಾಜರು ಕೂಡಾ ತಮ್ಮಣ್ಣಪ್ಪನವರು ತಮ್ಮ ಹತ್ತಿರ ಬರಬಹುದೇನೋ ಎಂದುಕೊಂಡಿದ್ದರು. ಆದರೆ ತಮ್ಮಣ್ಣಪ್ಪನವರು ತಮ್ಮ ಸ್ವಾಭಿಮಾನವನ್ನು ಬಿಟ್ಟುಕೊಡಲಿಲ್ಲ. ಕೊನೆಗೆ ಜಮಖಂಡಿಯ ಅರಸರು ಪೋಲಿಸ್ ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ಆ ಮೃತಬಾಲಕನ ಕುಟುಂಬಕ್ಕೆ ಪರಿಹಾರವನ್ನು ಒದಗಿಸಿಕೊಟ್ಟರು.[೪೩] ಈ ವಿಷಯದಿಂದ ಚೆನ್ನಮಲ್ಲಪ್ಪನವರ ಸ್ನೇಹಿತರಿಗೆ ನೋವಾದರೂ, ತಮ್ಮ ಆದರ್ಶವನ್ನು ಮೆರೆದ ತಮ್ಮಣ್ಣಪ್ಪನವರು ಜನರ ದೃಷ್ಟಿಯಲ್ಲಿ ದೊಡ್ಡವರೆನಿಸಿದರು.

೩.೫.೭. ಆಸಕ್ತಿ-ಅಭಿರುಚಿ:

ತಮ್ಮಣ್ಣಪ್ಪನವರ ಶಿಕ್ಷಣ ಮೂಲತಃ ಮರಾಠಿಯಲ್ಲಿ ಆಗಿತ್ತು. ಕನ್ನಡದ ಮೇಲಿನ ಪ್ರೇಮದಿಂದ ಕನ್ನಡವನ್ನು ಕಲಿತು ಮುಲ್ಕಿ ಪರೀಕ್ಷೆಯನ್ನು ತೇರ್ಗಡೆ ಹೊಂದಿದರು. ಆದರೆ ಹೆಚ್ಚಿನ ಜ್ಞಾನತೃಷೆಗೆ ಇಂಗ್ಲಿಷ್ ಭಾಷೆ ಬೇಕೆ ಬೇಕು ಎಂಬ ಅನಿವಾರ್ಯತೆಯನ್ನು ಕಂಡುಕೊಂಡರು. ಹೀಗಾಗಿ ಇಂಗ್ಲಿಷನ್ನು ಕಲಿಯಬೇಕೆನ್ನುವ ಹಂಬಲ. ಆದರೆ ರಬಕವಿಯಲ್ಲಿ ಇಂಗ್ಲಿಷ್ ಬಲ್ಲವ ಪೋಸ್ಟ್‌ಮಾಸ್ತರ ಒಬ್ಬನೇ. ತಮ್ಮಣ್ಣಪ್ಪನವರು ಪಟ್ಟು ಬಿಡದೇ ಅವನ ಸಂಗಡ ಇಂಗ್ಲಿಷ್ ವಿಷಯವನ್ನು ಹೇಳಿಸಿಕೊಂಡರು. 'ಗುರು ಸಾಕ್ಷಾತ್ ಪರಬ್ರಹ್ಮ' ಎಂದು ನಂಬಿದ ತಮ್ಮಣ್ಣಪ್ಪನವರು ಗುರುವಿನ ಹತ್ತಿರ ಹಾಗೇ ಪಾಠ ಹೇಳಿಸಿಕೊಳ್ಳಲಿಲ್ಲ. ಸ್ವತಃ ತಾವೇ ತಮ್ಮ ಕೈಯಿಂದ ಗುರುವಿನ ಬಟ್ಟೆಗಳನ್ನು ತೊಳೆದು, ಒಗೆದು ಹಾಕಿ, ಸೇವೆ ಮಾಡಿ ಕೃತಜ್ಞತೆ ಸಲ್ಲಿಸಿದರು. 'ಶಿಷ್ಯ ಎಷ್ಟೇ ದೊಡ್ಡವನಾದರೂ ತನ್ನ ಅಹಂಕಾರವನ್ನು ಬಿಟ್ಟು ವಿದ್ಯೆ ಕಲಿಸಿದ ಗುರುವಿಗೆ ಕಾಣಿಕೆ ಮತ್ತು ಕೃತಜ್ಞತೆ ಸಲ್ಲಿಸಬೇಕಾದುದು ಶಿಷ್ಯನ ಪರಮಕರ್ತವ್ಯ' ಎಂದು ಅವರು ತಿಳಿದಿದ್ದರು. ಜೊತೆಗೆ ಸಂಸ್ಕೃತವನ್ನು ಓದಿಕೊಂಡಿದ್ದರು.[೪೪] ಹೀಗೆ ಕನ್ನಡ, ಇಂಗ್ಲಿಷ್, ಮರಾಠಿ ಭಾಷೆಗಳಲ್ಲಿ ಪ್ರಭುತ್ವ ಹೊಂದಿರುವ ತಮ್ಮಣ್ಣಪ್ಪನವರು ಓದಿದ್ದು ಅಪಾರ. ಇದರಿಂದ ಜ್ಞಾನಾರ್ಜನೆಗೆ ವಿದ್ಯಾರ್ಹತೆಯೇ ಪ್ರಧಾನವಲ್ಲ ಎಂಬುದು ತಿಳಿಯುತ್ತದೆ.

ಕನ್ನಡದಲ್ಲಿ ಯಾವುದೇ ಹೊಸ ಪುಸ್ತಕ ಪ್ರಕಟಗೊಳ್ಳಲಿ, ಅದನ್ನು ತರಿಸಿ ಓದುವುದು ತಮ್ಮಣ್ಣಪ್ಪನವರ ಹವ್ಯಾಸವಾಗಿತ್ತು. ಜೊತೆಗೆ ನಾಡಿನ ವಿವಿಧ ಸಾಹಿತಿ ಗೆಳೆಯರ ಬಳಗವನ್ನು ಹೊಂದಿದ್ದ ತಮ್ಮಣ್ಣಪ್ಪನವರಿಗೆ ಪ್ರೀತಿ ದ್ಯೋತಕವಾಗಿ ಅವರು ತಾವು ಬರೆದು ಪ್ರಕಟಿಸಿದ ಪುಸ್ತಕಗಳನ್ನು ಕೊಟ್ಟ ಸಾಕಷ್ಟು ಉದಾಹರಣೆಗಳಿವೆ. ಅವುಗಳಲ್ಲಿ ಒಂದು ಒಳ್ಳೆಯ ಉದಾಹರಣೆಯೆಂದರೆ 'ಕನ್ನಡದ ಕಣ್ವ' ಬಿ.ಎಂ.ಶ್ರೀ.ಯವರು ತಾವು ಬರೆದ 'ಅಶ್ವತ್ಥಾಮನ್' ನಾಟಕದ ಪ್ರತಿಯನ್ನು ತಮ್ಮ ಹಸ್ತಾಕ್ಷರಗಳಿಂದ ಬರೆದು ಗೌರವಾದರ ಕಾಣಿಕೆಯೆಂದು ಕೊಟ್ಟಿದ್ದಾರೆ. ಹೀಗಾಗಿ ತಮ್ಮಣ್ಣಪ್ಪನವರು 'ತಮ್ಮ ಮನೆಯಲ್ಲಿಯೇ ಅಪಾರ ಗ್ರಂಥರಾಶಿಯನ್ನು ಹೊಂದಿದ್ದರು. ಅವರ ಮನೆ ಒಂದು ಗ್ರಂಥಾಲಯವೇ ಆಗಿತ್ತು.[೪೫] ಅವರ ಗ್ರಂಥರಾಶಿಯಲ್ಲಿ ಕನ್ನಡ, ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳ ಅನೇಕ ಕೃತಿಗಳಿದ್ದವು. ಅವರ ಕಲಿಕೆಯ ಹಂಬಲ ಎಷ್ಟಿತ್ತೆಂದರೆ ಅವರ ಗ್ರಂಥರಾಶಿಯಲ್ಲಿ ಕಿಟೆಲ್‌ರ ಕನ್ನಡ–ಕನ್ನಡ–ಇಂಗ್ಲಿಷ್ ನಿಘಂಟು, ಇಂಗ್ಲಿಷ್ ಕನ್ನಡ ನಿಘಂಟು, ಮರಾಠಿ ವಿಶ್ವಕೋಶಗಳು ಸೇರಿದ್ದವು. ಅವುಗಳಲ್ಲಿ ತಮಗೆ ಬೇಕಾದ ಶಬ್ದ ಅಥವಾ ವಿಷಯವಿದ್ದರೆ ಅದನ್ನು ಗೆರೆ ಹಾಕಿ ಗುರುತಿಸುತ್ತಿದ್ದರು. ತಮ್ಮಣ್ಣಪ್ಪನವರ ಯಾವುದೇ ಪುಸ್ತಕ ತೆರೆದು ನೋಡಿದಾಗ ಮೊದಲ ಪುಟದ ಮೇಲೆ ಸ್ಪಷ್ಟವಾಗಿ 'ತಮ್ಮಣ್ಣಪ್ಪ ಚಿಕ್ಕೋಡಿ' ಎಂದು ಬರೆದು ದಿನಾಂಕವನ್ನು ಹಾಕಿಡುತ್ತಿದ್ದರು. ಕೆಲವು ಸಲ ಅವರ ಜ್ಞಾನದ ಹರಹು ಕಂಡು ಆಶ್ಚರ್ಯವಾಗುತ್ತದೆ. ಇದಕ್ಕೆ ಸಾಕ್ಷಿಯೆಂಬಂತೆ ಕನ್ನಡದಲ್ಲಿ ಪ್ರಕಟಗೊಂಡ ಛಂದೋಗ್ರಂಥಗಳು, ವ್ಯಾಕರಣ ಗ್ರಂಥಗಳು ಮುಂತಾದ ಪುಸ್ತಕಗಳನ್ನು ಖರೀದಿಸಿದುದಲ್ಲದೆ, ಅಷ್ಟೇ ಪ್ರೀತಿಯಿಂದ ಅಭ್ಯಸಿಸಿದರು.

ಕವಿಗಳಾದ ತಮ್ಮಣ್ಣಪ್ಪನವರು ಛಂದಸ್ಸಿನಲ್ಲಿ ಪದ್ಯಗಳನ್ನು ರಚಿಸುತ್ತಿದ್ದರು. ಇದಕ್ಕೆ ಉದಾಹರಣೆಯಾಗಿ ಬಾಗಲಕೋಟೆಯಲ್ಲಿ ನಡೆದ ನಾಲ್ಕನೆಯ ಅಖಿಲಭಾರತ ವೀರಶೈವ

ಮಹಾಸಭೆಯಲ್ಲಿ ತಾವು ಮಂಡಿಸಿದ ಪ್ರಬಂಧದ ಕೊನೆಯಲ್ಲಿ ಸ್ವರಚಿತ ಕಂದಪದ್ಯ ಹಾಡಿದುದನ್ನು ಉದಾಹರಿಸಬಹುದು.

ಅವರು ಪುಣೆಯಿಂದ ಪ್ರಕಟವಾಗುವ ತಿಲಕರ ಪುಸ್ತಕಗಳನ್ನು ತರಿಸಿದ್ದರು. ಎನ್.ಸಿ.ಕೇಳ್ಕರ್, ಗೋವಿಂದರಾವ್ ರಾನಡೆ, ಮಹಾತ್ಮಗಾಂಧಿ, ತಿಲಕರ ಭಾಷಣಗಳ ಪ್ರತಿಗಳನ್ನು ತರಿಸಿದ್ದನ್ನು ಶ್ರೀ ರಾಮಲಿಂಗಪ್ಪ ಬಾಗಲಕೋಟ ಅವರು ಜ್ಞಾಪಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ಅವುಗಳಲ್ಲಿರುವ ವಿಷಯಗಳನ್ನು ತಾವು ತಿಳಿದುಕೊಂಡು, ಸಾಯಂಕಾಲ ಯುವಕರನ್ನು ಸೇರಿಸಿ ತಾವು ಓದಿರುವ ವಿಷಯದ ಬಗ್ಗೆ ಹೇಳುತ್ತಿದ್ದರು.[೪೬] ಮೇಲ್ಮಾತಿನಲ್ಲಿ ಮಂದಗಾಮಿಗಳು ಎಂದು ಕರೆಯಿಸಿಕೊಂಡರೂ, ರಾಷ್ಟ್ರೀಯ ಮಟ್ಟದ ವಿದ್ಯಮಾನಗಳಿಂದ ತೀವ್ರಗಾಮಿಗಳ ಸ್ವರೂಪವನ್ನು ಬಿಚ್ಚಿಡುತ್ತಿದ್ದರು. ರಾತ್ರಿ ತಮ್ಮ ಗಂಡಸರು ಬರುವ ಹೊತ್ತಿಗೆ ಬಾರದೇ ಇದ್ದರೆ, ಹೆಣ್ಣುಮಕ್ಕಳು 'ತಮ್ಮಣ್ಣಪ್ಪ ಮುತ್ಯಾನ ಮುಂದ ಪೇಪರ ಹಿಡಕೊಂಡ ಕುಂತರ ಮುಗೀತು, ಇವರು ಜಗತ್ತ ಮರತ ಬಿಡತಾರ.'[೪೭] ಎಂದು ತಮ್ಮ ಮಕ್ಕಳನ್ನು ಕೊಟ್ಟು ಕರೆಯಲು ಕಳಿಸುತ್ತಿದ್ದರಂತೆ.

ತಮ್ಮಣ್ಣಪ್ಪನವರ ಓದಿನ ಬಗ್ಗೆ ಹಾಲಭಾವಿ ವೀರಭದ್ರಪ್ಪನವರು ತಮ್ಮ ಆತ್ಮಚರಿತ್ರೆಯಲ್ಲಿ "ರಬಕವಿಯು ಸಾಂಗಲಿ ಸಂಸ್ಥಾನದ ತೇರದಾಳ ತಾಲೂಕಿನ ಒಂದು ಗ್ರಾಮವು. ಅದರ ಸಮೀಪಕ್ಕಿರುವ ಬನಹಟ್ಟಿಯು ಜಂಬುಕಂಡಿ ಸಂಸ್ಥಾನದ ಒಂದು ಗ್ರಾಮವು. ಈ ಎರಡೂ ಗ್ರಾಮಗಳಲ್ಲಿ ಬಣಗಾರರ ಮತ್ತು ನೇಕಾರರ ಸಂಖ್ಯೆಯೇ ಹೆಚ್ಚು. ಇಲ್ಲಿ ವ್ಯಾಪಾರವು ಚೆನ್ನಾಗಿ ನಡೆಯುತ್ತಿದ್ದು, ಈ ಗ್ರಾಮಗಳು ಊರ್ಜಿತ ಸ್ಥಿತಿಯಲ್ಲಿದ್ದವು. ಇಲ್ಲಿಯ ವ್ಯಾಪಾರಸ್ಥರು ಸುಶಿಕ್ಷಿತರಿದ್ದು, ವಾಚನಾಭಿರುಚಿಯುಳ್ಳವರು. ಹತ್ತಿಕಾಳ ಈರಪ್ಪನ ತಮ್ಮನಾದ ಕೊಟ್ರಪ್ಪ ಮತ್ತು ರಾ.ಬ.ಹಳಕಟ್ಟಿಯವರ ಮಾವಂದಿರಾದ ತಮ್ಮಣ್ಣಪ್ಪ ಚಿಕ್ಕೋಡಿ ಇವರಿಬ್ಬರೂ ಕನ್ನಡ ಅಭ್ಯಾಸ ಮಾಡಿದವರಿದ್ದು, ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಿದ್ದರು. ಆದರೆ ತಮ್ಮ ಉದ್ಯೋಗ ವ್ಯಾಪಾರಗಳಲ್ಲಿ ತೊಡಗುವುದೇ ಲಾಭದಾಯಕವೆಂದು ಬಗೆದು ತಮ್ಮ ನೌಕರಿಗೆ ರಾಜಿನಾಮೆ ಕೊಟ್ಟು, ವ್ಯಾಪಾರ ಉದ್ಯೋಗಗಳಲ್ಲಿ ತೊಡಗಿದ್ದರು. ಇಂಥವರದೊಂದು ಗುಂಪೇ ರಬಕವಿಯಲ್ಲಿತ್ತು. ಅದರಲ್ಲಿ ದರಬಾರ ಮನೆತನದ ಸರಾಫೀ ಅಂಗಡಿಯ ವಹಿವಾಟದಾರ ಪಾಂಡಪ್ಪ ನಾಯಕ, ಬಸಲಿಂಗಪ್ಪ ಶೀಲವಂತ, ಆನೆಖಿಂಡಿ ಬಾಳಪ್ಪ ನಾಯಕ ಮುಂತಾದವರು ಇದ್ದರು. ಇವರ ಹಿರಿಯರು ತಮ್ಮಣ್ಣಪ್ಪ ಚಿಕ್ಕೋಡಿಯವರು. ಇವರು ಕೇಸರಿ, ಕಾಳ ಮುಂತಾದ ಪುಣೆಯ ವರ್ತಮಾನ ಪತ್ರಗಳನ್ನು ತರಿಸಿ ಓದುತ್ತಿದ್ದರು. ಇವರ ಚಳುವಳಿಯಿಂದಲೇ ರಬಕವಿ ಮತ್ತು ಬನಹಟ್ಟಿ ಗ್ರಾಮಗಳಲ್ಲಿ ಕನ್ನಡ ಶಾಲೆಗಳುಂಟಾಗಿದ್ದವು. ಇವರು ತರುಣ ವಿದ್ಯಾವಂತರನ್ನು ಆದರದಿಂದ ಕಾಣುವುದು ಸಹಜವೆ."[೪೮] ಎಂದು ಬರೆದಿದ್ದಾರೆ. ಈ ವಿಚಾರಗಳಿಂದ ತಮ್ಮಣ್ಣಪ್ಪನವರು ತಾವು ಓದುವುದಲ್ಲದೆ, ವ್ಯಾಪಾರಿವರ್ಗವನ್ನು ಓದಿಸುತ್ತಿದ್ದುದಾಗಿ ತಿಳಿಯುತ್ತದೆ. ಏಕೆಂದರೆ ವ್ಯಾಪಾರಿಗಳೆಂದರೆ ಬರೀ ವ್ಯವಹಾರಿಕರು. ಅಂತವರಿಗೆ ಸಾಹಿತ್ಯದ ರುಚಿ ಹಚ್ಚಿದ್ದು ಒಂದು ಸಾಧನೆ ಎಂದೇ ಹೇಳಬೇಕು.

ತಮ್ಮಣ್ಣಪ್ಪನವರ ಓದುವ ಹವ್ಯಾಸದ ಬಗೆಗೆ ಹೇಳಬೇಕಾದರೆ, ದಾರಿಯಲ್ಲಿ ಸಾಗುವಾಗಲೂ ಪತ್ರಿಕೆ ಬಿಚ್ಚಿ ಓದುತ್ತಾ ಹೋಗುತ್ತಿದ್ದರಂತೆ. ಇಳಿವಯಸ್ಸಿನಲ್ಲಿಯೂ ನಿತ್ಯ ಬನಹಟ್ಟಿಯಿಂದ ರಬಕವಿಗೆ ಹೋಗುವಾಗ, ಬರುವಾಗ ಬೆಳಕಿದ್ದರೆ ಪತ್ರಿಕೆಯನ್ನು ಓದುತ್ತಲೇ ಸಾಗುತ್ತಿದ್ದರಂತೆ.[೨೯] ಈ ಹವ್ಯಾಸದಿಂದ ತಮ್ಮಣ್ಣಪ್ಪನವರು, ತಾವು ಓದುವುದಲ್ಲದೆ, ಇತರರನ್ನು ಓದಿನ ರುಚಿಗೆ ಹತ್ತಿಸುತ್ತಿದ್ದರು. ಮನುಷ್ಯನಿಗೆ ಖಾಲಿ ಇದ್ದಕೂಡಲೇ ತಲೆಯಲ್ಲಿ ಕೆಟ್ಟ ವಿಚಾರಗಳು ಬರುತ್ತವೆ. ಅವುಗಳನ್ನು ಹೋಗಲಾಡಿಸಲು, ಮನುಷ್ಯನ ಜ್ಞಾನ ಹೆಚ್ಚಿಸಲು ವಾಚನಾಭಿರುಚಿ ಅತ್ಯಗತ್ಯ ಎಂಬುದನ್ನು ಅವರು ಕಂಡುಕೊಂಡಿದ್ದರು. ಹುಡುಗರನ್ನು ಕರೆದು 'ಸುಮಾರ ಕೆಲಸ ಮಾಡಬ್ಯಾಡರಿ, ಚಲೋ ಚಲೋ ಪುಸ್ತಕ ಓದರಿ, ತಿಳುವಳಿಕೆ ಬರತದ ಎನ್ನುವ ಮಾತುಗಳು ಇನ್ನೂ ಕಿವಿಯಲ್ಲಿ ಗುಯ್‌ಗುಡುತ್ತದೆ, ಎನ್ನುತ್ತಾರೆ, ಶ್ರೀ ಶಿವಲಿಂಗಪ್ಪ ಹತ್ತಿ.[೩೦]

ಇಳಿವಯಸ್ಸಿನಲ್ಲಿ ಕಣ್ಣು ಮಂಜಾದಾಗಲೂ ತಮ್ಮಣ್ಣಪ್ಪನವರು ಓದಲು ಹಪಹಪಿಸಿದರು. ಆದರೆ ಓದಲು ಅಸಾಧ್ಯವಾದಾಗ ಶಿಕ್ಷಣ ಪಡೆದು ಓದಲು ಬರುತ್ತಿದ್ದ ಯುವಕರನ್ನು ಮುಂದೆ ಕೂಡ್ರಿಸಿಕೊಂಡು ಅವರಿಂದ ಪತ್ರಿಕೆಗಳನ್ನು ಓದಿಸಿ ಆನಂದ ಪಡುತ್ತಿದ್ದರಂತೆ. ಮರಾಠಿ ಮತ್ತು ಕನ್ನಡ ಭಾಷೆಗಳೆರಡನ್ನೂ ಬಲ್ಲ ಶ್ರೀ ಅಯ್ಯಪ್ಪ ಬಾಗಲಕೋಟ ಅವರು ತಮ್ಮಣ್ಣಪ್ಪನವರು ಕೊನೆಯುಸಿರು ಇರುವತನಕ ಅವರಿಗೆ ಪತ್ರಿಕೆಗಳನ್ನು ಓದಿ ಹೇಳುವ ಕೈಂಕರ್ಯವನ್ನು ಮಾಡಿದರು ಎಂದು ಬನಹಟ್ಟಿಯ ಹಿರಿಯರು ನೆನಪಿಸಿಕೊಳ್ಳುತ್ತಾರೆ.[೩೧]

ತಮ್ಮಣ್ಣಪ್ಪನವರು ಕಲಿತದ್ದು ಕೇವಲ ಮುಲ್ಕಿ ಪರೀಕ್ಷೆಯ ವರೆಗೆ. ಆದರೆ ಅವರ ಓದು ನಿರಂತರವಾಗಿತ್ತು. ಯಾವ ಹೊಸ ಪುಸ್ತಕ ಬಂದರೂ ಅದನ್ನು ಕೂಡಲೇ ತರಿಸುತ್ತಿದ್ದರು. ಈ ಮಾತನ್ನು ಅವರ ಮೊಮ್ಮಗಳಾದ ಶ್ರೀಮತಿ ಅನ್ನಪೂರ್ಣ ಬಾಣಕಾರರು ಸ್ಮರಿಸಿಕೊಳ್ಳುತ್ತಾರೆ. ತಾವು ಚಿಕ್ಕವರಿದ್ದಾಗ ತಮ್ಮ ಮನೆಯಲ್ಲಿ ಪುಸ್ತಕಗಳು ಪತ್ರಿಕೆಗಳು ಬರುವುದು, ಸಂಗ್ರಹಿಸಿಡುವುದು ಸಹಜವಾಗಿತ್ತು ಎನ್ನುತ್ತಾರೆ. ತಮ್ಮಣ್ಣಪ್ಪನವರ ಪ್ರಭಾವ ಮತ್ತು ಪ್ರೇರಣೆಯಿಂದ ತಮ್ಮ ತಂದೆಯಾದ ಶ್ರೀ ಚನ್ನಮಲ್ಲಪ್ಪ ಅಬಕಾರ ಅವರು ಎಲ್ಲೆಲ್ಲಿ ಹೋಗುತ್ತಾರೋ, ಅಲ್ಲಿಂದ ಪುಸ್ತಕಗಳ ಗಂಟನ್ನು ತರುತ್ತಿದ್ದುದನ್ನು ಶ್ರೀಮತಿ ಅನ್ನಪೂರ್ಣ ಬಾಣಕಾರ ಜ್ಞಾಪಿಸಿಕೊಳ್ಳುತ್ತಾರೆ.[೩೨] ಅಲ್ಲದೆ ಚೆನ್ನಮಲ್ಲಪ್ಪ ಅಬಕಾರ ಅವರು ಪುಸ್ತಕಗಳ ವ್ಯಾಪಾರಿಗಳಾಗಿದ್ದರು. ಅದಕ್ಕೆ 'ಕರ್ನಾಟಕ ಪುಸ್ತಕ ಮಂದಿರ' ಎಂದು ಹೆಸರಿಟ್ಟಿದ್ದರು. ಮುಂದೆ ೧೯೩೮ರಲ್ಲಿ ಅದೇ ಹೆಸರಿನಿಂದ ಪುಸ್ತಕ ಪ್ರಕಾಶನವನ್ನು ತೆರೆದರು. ೧೯೪೯ರಲ್ಲಿ ಕರ್ನಾಟಕ ಪುಸ್ತಕ ಪ್ರಕಾಶನದಿಂದ ಕನ್ನಡದ ಸುಪ್ರಸಿದ್ಧ ಕವಿ ಡಿ.ಎಸ್.ಕರ್ಕಿಯವರ 'ಕಾವ್ಯಗಾನ' ಕವನಸಂಕಲನ ಪ್ರಕಟವಾಗಿದ್ದುದು ಹೆಮ್ಮೆಪಡುವ ಸಂಗತಿಯಾಗಿದೆ. ತಮ್ಮಣ್ಣಪ್ಪನವರು ಪುಣೆಯಿಂದ ಹೊರಡುವ 'Deccan college Quarterly' ಪ್ರಾರಂಭವಾದಂದಿನಿಂದ ಅದರ ಚಂದಾದಾರರಾಗಿದ್ದರು. ಪತ್ರಿಕೆಯಲ್ಲಿ ಯಾವುದೇ ಅಭಿಪ್ರಾಯಭಿನ್ನತೆಯ ಪ್ರಶ್ನೆ ಬಂದರೆ ನಿರ್ಭಿಡೆಯಿಂದ ಅದನ್ನು ಪ್ರತಿಭಟಿಸುತ್ತಿದ್ದರು.[೩೩] ಇದರಿಂದ ಮರಾಠಿ ಭಾಷೆಯ ಮೇಲೆ ಪ್ರಭುತ್ವವಿರುವ ತಮ್ಮಣ್ಣಪ್ಪನವರು

'Deccan College Quarterly' ಪತ್ರಿಕೆಗೆ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಬರೆದು ಕಳುಹಿಸುತ್ತಿರಬೇಕೆನ್ನಿಸುತ್ತದೆ. ತಮ್ಮ ಅಭಿಪ್ರಾಯಗಳನ್ನು ಕನ್ನಡ ಪತ್ರಿಕೆಗಳಿಗೆ ಕಳಿಸುವುದು ಅವರ ಹವ್ಯಾಸವಾಗಿತ್ತು. ಅರಟಾಳ ರುದ್ರಗೌಡರು ಸರಕಾರದಿಂದ ಸನ್ಮಾನ ಪಡೆದಾಗ ಮೈಸೂರಿನ ಸ್ಟಾರ್ ಪತ್ರಿಕೆಯ ಮುಖಾಂತರ ಅಭಿನಂದನೆ ಸಲ್ಲಿಸಿದ್ದು ಒಂದು ಒಳ್ಳೆಯ ಉದಾಹರಣೆಯಾಗಿದೆ.[೫೪]

'ಕಾವ್ಯಮಂಜರಿ' ಮತ್ತು ಕಾವ್ಯಕಲಾನಿಧಿ ಮಾಸಪತ್ರಿಕೆಗಳ ಮೂಲಕ ಎಸ್.ಜಿ.ನರಸಿಂಹಾಚಾರ್ಯರು, ರಾಮಾನುಜಯ್ಯಗಾರರಂತವರು ಉದ್ಗ್ರಂಥಗಳನ್ನು ಪ್ರಸಿದ್ಧ ಪಡಿಸುತ್ತಿದ್ದರು.[೫೫] ಈ ಪತ್ರಿಕೆಗಳ ಚಂದಾದಾರರಾದ ತಮ್ಮಣ್ಣಪ್ಪನವರು ಅತ್ಯಭಿಮಾನದಿಂದ ಅವುಗಳನ್ನು ತಪ್ಪದೇ ತರಿಸಿ ಓದುತ್ತಿದ್ದರು. 'ಕಾವ್ಯಕಲಾನಿಧಿ'ಯ ಕಾರ್ಯ ಸ್ಥಗಿತವಾದಾಗ ತಮ್ಮ ಒಂದು ಪತ್ರದಲ್ಲಿ "ಇದು ಕನ್ನಡಿಗರ ಹೇಡಿತನದ, ಅರಸಿಕತನದ, ಅಭಿಮಾನಶೂನ್ಯತೆಯ, ವಿದ್ಯಾಪರಾಙ್ಮುಖತೆಯ ಮತ್ತು ಸ್ವಭಾಷಾ ತಿರಸ್ಕಾರದ ಪೂರ್ಣ ದ್ಯೋತಕವಾದುದು"[೫೬] ಎಂದು ತಮ್ಮ ನೋವನ್ನು ತೋಡಿಕೊಂಡಿದ್ದಾರೆ. ಇರುವ ಸ್ವಲ್ಪೇ ಕನ್ನಡ ಪತ್ರಿಕೆಗಳಿಗೆ ಸ್ವತಃ ಚಂದಾದಾರರಾಗಿ, ತರಿಸಿ ಅವುಗಳನ್ನು ಓದಿ ಸಂತೋಷಪಡುವ ತಮ್ಮಣ್ಣಪ್ಪನವರಿಗೆ. ಆ ಪತ್ರಿಕೆ ನಿಂತು ಹೋದಾಗ, ಅಷ್ಟೇ ದುಃಖವಾಗಿದ್ದು ಸಹಜವೆ. ಕನ್ನಡಿಗರು ಮನಸ್ಸು ಮಾಡಿ ಪತ್ರಿಕೆಗಳನ್ನು ಕೊಂಡು ಓದಿದರೆ, ಆ ಪತ್ರಿಕೆ ಸ್ಥಗಿತವಾಗುತ್ತಿರಲಿಲ್ಲ ಎಂಬುದು ಅವರ ನೋವಾಗಿತ್ತು. ವಾಚನಾಭಿರುಚಿಯಿಂದ ಒಂದು ಸಮಾಜ ಜಾಗೃತವಾಗುತ್ತದೆ ಎಂದು ತಮ್ಮಣ್ಣಪ್ಪನವರು ತಿಳಿದುಕೊಂಡಿದ್ದರು. ಹೀಗಾಗಿ ಜನರು ಹೆಚ್ಚು ಓದಬೇಕು ಎಂದು ಸದಾ ಹಪಹಪಿಸುತ್ತಿದ್ದರು.

ಅಂದಿನ ಸರಕಾರದ ಪ್ರತಿಬಂಧಗಳಿಂದಾಗಿ ರಾಷ್ಟ್ರೀಯ ಪತ್ರಿಕೆಗಳನ್ನು ಗ್ರಂಥಾಲಯಗಳು ತರಿಸುವಂತಿರಲಿಲ್ಲ. ಅದಕ್ಕಾಗಿ ಪತ್ರಿಕೆಗಳನ್ನು ತರಿಸಿ, ಓದಲು ಇಡುತ್ತಿದ್ದರು. 'ಕೇಸರಿ' ಪತ್ರಿಕೆ ಜನರಿಗೆ ಲಭ್ಯವಾಗುತ್ತಿದ್ದುದು ಈ ಗ್ರಂಥಾಲಯದಿಂದಲೇ. ಬನಹಟ್ಟಿಯಲ್ಲಿ ವಾಸ ಮಾಡತೊಡಗಿದ ಮೇಲೆ ಅಲ್ಲಲ್ಲಿ 'ನೇಟಿವ್ಹ್ ಲೈಬ್ರರಿ' ಎಂಬ ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸಿದರು.[೫೭] 'ನೇಟಿವ್ಹ್ ಲೈಬ್ರರಿ'ಗಾಗಿ ಒಂದು ಸ್ವಂತ ಜಾಗೆಯನ್ನು ಬನಹಟ್ಟಿಯ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ತಮ್ಮಣ್ಣಪ್ಪನವರು ಖರೀದಿಸಿದ್ದನ್ನು ಬನಹಟ್ಟಿಯ ಎಲ್ಲ ಹಿರಿಯರು ನೆನಪಿಸಿಕೊಳ್ಳುತ್ತಾರೆ. ಆದರೆ ತಮ್ಮಣ್ಣಪ್ಪನವರ ಜೀವಿತಾವಧಿಯಲ್ಲಿ ಈ ಕಟ್ಟಡದ ಅಡಿಗಲ್ಲು ಇಡಲು ಕೂಡಾ ಸಾಧ್ಯವಾಗಲಿಲ್ಲ. ತಮ್ಮಣ್ಣಪ್ಪನವರ ವಾಚನಾಭಿರುಚಿಯ ನೆನಪಿಗಾಗಿ ಆ ಜಾಗೆಯಲ್ಲಿಯೇ ಗ್ರಂಥಾಲಯವನ್ನು ಕಟ್ಟಿ, ತಮ್ಮಣ್ಣಪ್ಪನವರಿಗೆ ಕೃತಜ್ಞತೆ ಸಲ್ಲಿಸಬೇಕೆಂದು ಬನಹಟ್ಟಿಯ ಸಮಸ್ತ ನಾಗರಿಕ ಅಭೀಪ್ಸೆಯಾಗಿದೆ. ಸರಕಾರದ ದುಡ್ಡಿನಿಂದ ಗ್ರಂಥಾಲಯಗಳನ್ನು ಸ್ಥಾಪಿಸಿ, ಪುಸ್ತಕ ಪತ್ರಿಕೆಗಳನ್ನು ಇಡುವುದು ಸಹಜ. ಆದರೆ ಒಬ್ಬ ವ್ಯಕ್ತಿ ಜನ ಓದಬೇಕೆಂದು ತನ್ನ ಸ್ವಂತ ದುಡ್ಡಿನಿಂದ ಸಾರ್ವಜನಿಕ ಗ್ರಂಥಾಲಯ ಸ್ಥಾಪಿಸಲು ಮುಂದಾದುದು ಅಪರೂಪದ ವಿಶೇಷ ಸಂಗತಿಯಾಗುತ್ತದೆ.

೩.೫.೮. ಪಂಡಿತಪ್ಪನವರ ಪ್ರೇರಕ ಶಕ್ತಿ:

ತಮ್ಮಣ್ಣಪ್ಪನವರಿಗೆ ತಮ್ಮ ಅಣ್ಣನಾದ ರಾಯಪ್ಪನ ಬಗ್ಗೆ ಮೊದಲಿನಿಂದಲೂ ಅಪಾರ ಪ್ರೇಮ. ಆ ಪ್ರೇಮವನ್ನು ರಾಯಪ್ಪನವರ ಎಂಟು ಜನ ಮಕ್ಕಳಲ್ಲಿ ಒಬ್ಬರಾದ ಪಂಡಿತಪ್ಪನವರಲ್ಲಿ ಮುಂದುವರೆಸಿಕೊಂಡು ಹೋದರು. ತಮ್ಮಣ್ಣಪ್ಪನವರಿಗೆ ಪಂಡಿತಪ್ಪನವರ ವಯಸ್ಸಿನಷ್ಟೇ ಮಗ ಬಳವಂತ ಇದ್ದ. ದುರದೃಷ್ಟವಶಾತ್ ಬಳವಂತ ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ತೀರಿಹೋದ. ತಮ್ಮಣ್ಣಪ್ಪನವರು ತಮ್ಮ ಪುತ್ರವಾತ್ಸಲ್ಯವನ್ನು ಪಂಡಿತಪ್ಪನವರಲ್ಲಿ ಕಂಡರು. ತಮ್ಮಣ್ಣಪ್ಪನವರು ಪಂಡಿತಪ್ಪನವರ ಶಿಕ್ಷಣದ ಬಗೆಗೆ ಕಾಳಜಿ ವಹಿಸಿ[೫೮] ಅವರ ಜಾಣತನ, ಮುತ್ಸದ್ಧಿತನ ಕಂಡು ಹಳಕಟ್ಟಿಯವರ ಹಾಗೆ ಪಂಡಿತಪ್ಪನೂ ಕೂಡ ವಕೀಲಿವಿದ್ಯೆಯನ್ನು ಕಲಿಯಲಿ ಎಂದು ಆಸೆಪಟ್ಟರು. ಪಂಡಿತಪ್ಪನವರೂ ಅಷ್ಟೇ. 'ತಮ್ಮ ಚಿಕ್ಕಪ್ಪನ ಮೇಲೆ ಹೆಚ್ಚು ವಿಶ್ವಾಸ. ತಮ್ಮಣ್ಣಪ್ಪನವರೇ ಪಂಡಿತಪ್ಪನವರ ಸ್ನೇಹಿತ, ತತ್ವಜ್ಞಾನಿ ಹಾಗೂ ಮಾರ್ಗದರ್ಶಿಯಂತೆ ಇದ್ದರು.[೫೯] ಮುಂಬಯಿಗೆ ಕಾನೂನು ಓದಲು ಹೋದ ಪಂಡಿತಪ್ಪನವರು ಓದನ್ನು ಅರ್ಧಕ್ಕೆ ನಿಲ್ಲಿಸಿ ಮರಳಿ ಬಂದರು. ಪಂಡಿತಪ್ಪನವರು ತಮ್ಮ ಚಿಕ್ಕಪ್ಪನ ಸಲಹೆಯಂತೆ ಶಿಕ್ಷಣಕ್ಷೇತ್ರದಲ್ಲಿ ಸೇವೆ ಕೈಗೊಳ್ಳಲು ಗೋಕಾಕಕ್ಕೆ ಬಂದು ಹೈಸ್ಕೂಲವೊಂದರಲ್ಲಿ ಮುಖ್ಯೋಪಾಧ್ಯಾಯರಾದರು.[೬೦] ಪಂಡಿತಪ್ಪನವರ ಸ್ವತಂತ್ರ ಮನೋಭಾವಕ್ಕೆ ಸರಿಹೊಂದದೆ ಗೋಕಾಕ ಬಿಟ್ಟು ಬೆಳಗಾವಿಗೆ ಬಂದು ನೆಲೆನಿಂತರು. ಈಗಾಗಲೇ ಇವರ ಸ್ನೇಹಿತವರ್ಗದವರು ಬೆಳಗಾವಿಯಲ್ಲಿಯೇ ಇರಲು ಯೋಚಿಸಿದ್ದರು. ತಮ್ಮಣ್ಣಪ್ಪನವರಿಗೂ ಈ ವಿದ್ಯಾವಂತ ಸ್ನೇಹಿತವರ್ಗದಿಂದ ಸಮಾಜವು ಅಭಿವೃದ್ಧಿ ಪಥದತ್ತ ಸಾಗುತ್ತದೆ ಎಂದು ಅನ್ನಿಸಿತ್ತು. ಹೀಗಾಗಿ ಪಂಡಿತಪ್ಪನವರ ಈ ನಿರ್ಧಾರಕ್ಕೆ ಬೆಂಬಲವಾಗಿ ನಿಂತರು.

ಪಂಡಿತಪ್ಪನವರ ಮದುವೆ ವಿಷಯಕ್ಕೆ ಬಂದಾಗ ಪಂಡಿತಪ್ಪನವರಿಗೆ ಬೆಳಗಾವಿಯ ಶ್ರೀಮಂತ ಭೋಜ ಮನೆತನದ ಗೌರಮ್ಮನವರು ಮನಸ್ಸಿಗೆ ಬಂದಿದ್ದಳು. ಬಡತನದಿಂದ ಬಂದ ಕೂಡುಕುಟುಂಬದ ಪಂಡಿತಪ್ಪನವರ ತಂದೆ ರಾಯಪ್ಪನವರಿಗೆ ಈ ಸಂಬಂಧ ಮನಸ್ಸಿಗೆ ಬರಲಿಲ್ಲ. ಶ್ರೀಮಂತ ಮನೆತನದ ಹೆಣ್ಣುಮಗಳು ತಮ್ಮ ಮನೆಗೆ ಸರಿ ಹೊಂದಬಹುದೆ ಎಂದು ಆಲೋಚಿಸಿರಬೇಕು. ಆದರೆ ತಮ್ಮಣ್ಣಪನವರು ಗೌರಮ್ಮನವರ ಸುಸಂಸ್ಕೃತ ಆಚಾರ–ವಿಚಾರಗಳನ್ನು ಕಂಡು, ಅಣ್ಣನ ಮನವೊಲಿಸಿ ಪಂಡಿತಪ್ಪನವರ ಮನಸ್ಸಿಗೆ ಬಂದ ಗೌರಮ್ಮಳನ್ನು ತಂದು ಮದುವೆ ಮಾಡಿದರು.

ತಮ್ಮಣ್ಣಪ್ಪನವರ ಗೌರವದ ಕಾರಣದಿಂದ ಪಂಡಿತಪ್ಪನವರು ಬನಹಟ್ಟಿಯ ಬಗ್ಗೆ ಅಪಾರ ಅಭಿಮಾನವನ್ನು ಇಟ್ಟುಕೊಂಡಿದ್ದರು. ಪಂಡಿತಪ್ಪನವರು ತಮ್ಮಣ್ಣಪ್ಪನವರನ್ನು ನೆನೆಸಿಕೊಂಡಾಗ ತಮ್ಮ ಪರಿವಾರಸಮೇತ ಬಂದು ಬನಹಟ್ಟಿಯಲ್ಲಿದ್ದು ಹೋಗುತ್ತಿದ್ದರು. ಪಂಡಿತಪ್ಪನವರು ಬನಹಟ್ಟಿಗೆ ಬಂದಾಗ ಸುತ್ತಲಿನ ಭಾಗದ ಜನರು ತಮ್ಮ ಸಮಸ್ಯೆಗಳನ್ನು ತೆಗೆದುಕೊಂಡು ಅವರ ಹತ್ತಿರ ಬಂದು ಪರಿಹರಿಸಿಕೊಂಡು ಹೋಗುತ್ತಿದ್ದರು.[೬೧] ಪಂಡಿತಪ್ಪನವರೂ ಅಷ್ಟೇ, ಬನಹಟ್ಟಿಯಿಂದ ಬೆಳಗಾವಿಗೆ ಯಾರಾದರು ಬಂದರೆ ತುಂಬಾ ಸೌಜನ್ಯದಿಂದ ಮಾತನಾಡಿಸುತ್ತಿದ್ದರು. ಓದು ಮುಗಿಸಿ ನೌಕರಿಗಾಗಿ ಶಿಪಾರಸ್ಸು ಪತ್ರ ಕೇಳಿದರೆ, ಆ ವ್ಯಕ್ತಿ ಯೋಗ್ಯನಾಗಿದ್ದರೆ ಶಿಪಾರಸ್ಸು ಪತ್ರ ಕೊಟ್ಟು ಕಳಿಸುತ್ತಿದ್ದರು.[೬೨]

ಪಂಡಿತಪ್ಪನವರ ಜಾಣತನವನ್ನು ಅರಿತಿದ್ದ ತಮ್ಮಣ್ಣಪ್ಪನವರು ಜಮಖಂಡಿ ಆಸ್ಥಾನದ ವ್ಯವಹಾರವನ್ನು ನೋಡಲು ಆಗಾಗ ಕರೆಸುತ್ತಿದ್ದರು. ಹೀಗಾಗಿ ಜಮಖಂಡಿ ಸಂಸ್ಥಾನದಲ್ಲಿ ಪಂಡಿತಪ್ಪನವರಿಗೂ ಕೂಡ ತಮ್ಮಣ್ಣಪ್ಪನವರಂತೆ ಒಳ್ಳೆಯ ಸ್ಥಾನಮಾನವಿತ್ತು. ಬರಬರುತ್ತಾ ಸಾಂಗಲಿ, ಮಿರಜ, ಮುಧೋಳ, ರಾಮದುರ್ಗ ಮುಂತಾದ ಸಂಸ್ಥಾನಗಳಿಗೆ ಪಂಡಿತಪ್ಪನವರ ಕಾರ್ಯಕ್ಷೇತ್ರ ಹಬ್ಬಿತು. ತಮ್ಮಣ್ಣಪ್ಪನವರ ಜೊತೆ ಸೇರಿ ಪಂಡಿತಪ್ಪನವರು ಪ್ರಜಾಪರಿಷತ್ತಿನ ಮೂಲಕ ಜನಪರ ಹೋರಾಟಗಳನ್ನು ಕೂಡ ಮಾಡಿದರು. ನೇಕಾರರ ಹಿತಚಿಂತಕರಾದ ಪಂಡಿತಪ್ಪನವರು ಅಖಿಲಭಾರತ ಕೈಮಗ್ಗ ನೇಕಾರರ ಸಮಿತಿಯ ಉಪಾಧ್ಯಕ್ಷರು, ಮುಂಬಯಿ ರಾಜ್ಯದ ನೇಕಾರರ ಸಮಿತಿಯ ಅಧ್ಯಕ್ಷರಾಗಿದ್ದರು. ತಮ್ಮಣ್ಣಪ್ಪನವರ ಅಭಿಲಾಷೆಯಂತೆ ನೇಕಾರರ ಅಭಿವೃದ್ಧಿ ಕಾರ್ಯಗಳಲ್ಲಿ ಸದಾ ತೊಡಗಿದರು.

ತಮ್ಮಣ್ಣಪ್ಪನವರಿಗೆ ಪಂಡಿತಪ್ಪನವರ ಮೇಲೆ ಸದಾ ಕಾಳಜಿ. ೧೯೩೧ರಲ್ಲಿ ಪಂಡಿತಪ್ಪನವರಿಗೆ ಎಡಗಾಲು ನೋವು ಕಾರಣವಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವ ಅನಿವಾರ್ಯತೆ ಒದಗಿತ್ತು. ಈ ಅನಾರೋಗ್ಯದ ಸುದ್ದಿ ಆಗಿನ ಮರಾಠಿಯ ಪ್ರಸಿದ್ಧ ಪತ್ರಿಕೆ 'ಜ್ಞಾನಪ್ರಕಾಶ'ದಲ್ಲಿ ಬಂದಿದ್ದನ್ನು ತಮ್ಮಣ್ಣಪ್ಪನವರು ಓದಿ, ಪಂಡಿತಪ್ಪನವರಿಗೆ ಪತ್ರ ಬರೆದಿದ್ದಾರೆ. ಈ ಪತ್ರ ಬರೀ ಕ್ಷೇಮ ಸಮಾಚಾರದ ಕುಶಲೋಪರಿಯ ವ್ಯಾವಹಾರಿಕ ಪತ್ರವಾಗಿರಲಿಲ್ಲ. ಪತ್ರದುದ್ದಕ್ಕೂ ಪಂಡಿತಪ್ಪನವರ ಜನ್ಮದ ಸಾರ್ಥಕತೆ, ಅವರ ಕರ್ತವ್ಯಗಳನ್ನು ಜ್ಞಾಪಿಸುವ ಪತ್ರ(ಅನುಬಂಧ-೩-೨) ಇದಾಗಿತ್ತು. ಪಂಡಿತಪ್ಪನವರು ಬೆಳಗಾವಿಯಲ್ಲಿದ್ದುಕೊಂಡು ಸಮಾಜದಲ್ಲಿ ಅನೇಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡವರು. ಅನೇಕ ಏರಿಳಿವುಗಳನ್ನು ಕಂಡವರು. ಸಮಾಜದ ಕೈಂಕರ್ಯದಲ್ಲಿ ತೊಡಗಿರುವ ತಮ್ಮ ವಂಶದ ಕುಡಿಯ ಬಗ್ಗೆ ತಮ್ಮಣ್ಣಪ್ಪನವರಿಗೆ ಅಪಾರ ಪ್ರೇಮ, ಅಷ್ಟೇ ವಿಶ್ವಾಸ. ತಮ್ಮ ಮನೆತನದವರ ಉದಾರ ಗುಣಗಳು ಪಂಡಿತಪ್ಪನವರಲ್ಲಿ ಮೇಳೈಸಿರುವುದನ್ನು ಕಂಡು ತಮ್ಮಣ್ಣಪ್ಪನವರು ಸಂತಸಗೊಂಡಿದ್ದರು.

ತಮ್ಮಣ್ಣಪ್ಪನವರು ತಮ್ಮ ಕೊನೆ ಗಳಿಗೆಯಲ್ಲಿಯೂ ಪಂಡಿತಪ್ಪನವರನ್ನು ಮರೆಯಲಿಲ್ಲ. ತಾವು ಸ್ಥಾಪಿಸಿದ ಎ.ವ್ಹಿ. ಸ್ಕೂಲ್ ಫಸ್ಟ್‌ಗ್ರೇಡ್ ಸ್ಕೂಲ್ ಆಗಬೇಕೆಂದು ಸಾಕಷ್ಟು ಪ್ರಯತ್ನಪಟ್ಟರು. ಅದಕ್ಕಾಗಿ ಧನ ಸಂಗ್ರಹಿಸಿದರು. ಜೊತೆಗೆ ತಮ್ಮ ಸ್ಥಿರಾಸ್ತಿಯನ್ನು ಮಾರಿ, ಅದಕ್ಕೆ ಟ್ರಸ್ಟನ್ನು ಮಾಡಿದರು. ಆ ಟ್ರಸ್ಟಿಗೆ ತಮ್ಮ ಎರಡು ಕಣ್ಣುಗಳ ಹಾಗಿದ್ದ ಮಗನಾದ ಪಂಡಿತಪ್ಪ ಮತ್ತು ಅಳಿಯನಾದ ಹಳಕಟ್ಟಿಯವರನ್ನು ನೇಮಿಸಿದರು. ಆ ಹಣದ ಸಂಪೂರ್ಣ ಸದ್ವಿನಿಯೋಗಕ್ಕಾಗಿ ಇವರೀರ್ವರಿಗೂ ಸಂಪೂರ್ಣ ಅಧಿಕಾರವನ್ನು ನೀಡಿದರು. ಹೀಗಾಗಿ ತಮ್ಮಣ್ಣಪ್ಪನವರು ಪಂಡಿತಪ್ಪನವರ ಮೇಲೆ ಇಟ್ಟ ಪ್ರೀತಿಯನ್ನು ಬನಹಟ್ಟಿಯ ಜನತೆ ಮರೆಯಲಿಲ್ಲ. 'ಜನತಾ ಶಿಕ್ಷಣ ಸಂಘ' ನಾಮಕರಣಗೊಂಡ ಮೇಲೆ ಎರಡು ಸಲ ಸಂಘದ ಕಾರ್ಯಾಧ್ಯಕ್ಷನನ್ನಾಗಿ ಮಾಡಿ ಗೌರವಿಸಿತು. ಪಂಡಿತಪ್ಪನವರು 'ಜನತಾ ಶಿಕ್ಷಣ ಸಂಘ'ದ ಪ್ರಥಮ ಕಾರ್ಯಾಧ್ಯಕ್ಷರು. ಪಂಡಿತಪ್ಪನವರು ಕೂಡ ತಮ್ಮಣ್ಣಪ್ಪನವರು ಗತಿಸಿದ ಮೇಲೆಯೂ 'ಜನತಾ ಶಿಕ್ಷಣ ಸಂಘ'ವನ್ನು ಮುನ್ನಡೆಸಿಕೊಂಡು ಹೋದರಲ್ಲದೆ, ಇಡೀ ಬನಹಟ್ಟಿ ಜನತೆಯ ನೋವು ನಲಿವುಗಳಿಗೆ

ಸ್ಪಂದಿಸಿದರು. ಹೀಗಾಗಿ ಇಂದಿಗೂ ಬನಹಟ್ಟಿಯ ಜನರ ನಾಲಿಗೆಯ ಮೇಲೆ ಬೆಳಗಾವಿಯ ಪಂಡಿತಪ್ಪ ಚಿಕ್ಕೋಡಿಯವರು ನಮ್ಮವರೇ ಎನ್ನವಷ್ಟರ ಮಟ್ಟಿಗೆ ಚಿರಪರಿಚಿತರಾಗಿದ್ದಾರೆ.

೩.೫.೯.ತಮ್ಮಣ್ಣಪ್ಪನವರ ಕೊನೆಯ ದಿನಗಳು:

ತಮ್ಮಣ್ಣಪ್ಪನವರು ತಮ್ಮ ಜೀವನದುದ್ದಕ್ಕೂ ಸತತವಾಗಿ ದುಡಿಯುತ್ತಲೇ ಸಾಗಿದವರು. ಅವರ ಕೊನೆಯ ದಿನಗಳಲ್ಲಿ ದೇಹ ಜರ್ಜರಿತವಾಗಿತ್ತು. ನಿತ್ರಾಣಗೊಂಡ ತಮ್ಮಣ್ಣಪ್ಪನವರ ಮನಸ್ಸಿನಲ್ಲಿ ಒಂದು ದೊಡ್ಡ ಚಿಂತೆ ಕೊರೆಯತೊಡಗಿತ್ತು. ಅದೆಂದರೆ ಬನಹಟ್ಟಿಯಲ್ಲಿ ಫಸ್ಟ್‌ಗ್ರೇಡ್ ಸ್ಕೂಲ್ ಇಲ್ಲದೆ ಇರುವುದು. ಈಗಾಗಲೇ ತಮ್ಮಣ್ಣಪ್ಪನವರು ಬನಹಟ್ಟಿಯಲ್ಲಿ ಆಂಗ್ಲೋ ವರ್ನಾಕ್ಯುಲರ್ ಶಾಲೆಯನ್ನು ತೆರೆದಿದ್ದರು. ನೇಕಾರ ಕುಟುಂಬದ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಮುಂದೆ ಓದಬೇಕೆಂಬ ಹಂಬಲಕ್ಕೆ ಅನಿವಾರ್ಯವಾಗಿ ಕಡಿವಾಣ ಹಾಕುವಂತಾಯಿತು. ಇದಕ್ಕೆ ಕಾರಣ ಅವರ ಆರ್ಥಿಕ ಅನನುಕೂಲತೆ. ಶ್ರೀಮಂತರು ಮಾತ್ರ ತಮ್ಮ ಮಕ್ಕಳನ್ನು ಬೇರೆ ಊರಿನಲ್ಲಿಟ್ಟು ಕಲಿಸುತ್ತಿದ್ದರು. ಇದನ್ನು ಕಂಡು ತಮ್ಮಣ್ಣಪ್ಪನವರು ತಮ್ಮ ಊರಿನ ಮಕ್ಕಳು ಮುಂದಿನ ವಿದ್ಯಾಭ್ಯಾಸವನ್ನು ಕಲಿಯಲಾಗುತ್ತಿಲ್ಲವಲ್ಲ ಎಂದು ನೊಂದುಕೊಳ್ಳುತ್ತಿದ್ದರು. ಈ ವಿಷಯವನ್ನು ಬನಹಟ್ಟಿಯಲ್ಲಿ ಎಲ್ಲರ ಮುಂದೆ ಪದೇಪದೇ ಹೇಳಲಾರಂಭಿಸಿದರು. ಆದರೆ ವರ್ತಕರೇ ಇರುವ ಈ ಊರಿನಲ್ಲಿ ಇದನ್ನು ಕಾರ್ಯರೂಪಕ್ಕೆ ತರಲು ಯಾರೂ ಮುಂದೆ ಬರಲಿಲ್ಲ. ದಿನ ಕಳೆದಂತೆ ತಮ್ಮಣ್ಣಪ್ಪನವರ ಹಪಹಪಿ ಜಾಸ್ತಿಯಾಯಿತು. ಸರಕಾರದ ಜೊತೆ ಇದರ ಬಗ್ಗೆ ಸಮಾಲೋಚಿಸಿ ಬಂದರು. ನಿಯಮದ ಪ್ರಕಾರ ೧೫,೦೦೦ರೂಪಾಯಿಗಳ ಇಡುಗಂಟನ್ನು ಕೊಡಬೇಕಾಗಿತ್ತು. ತಮ್ಮಣ್ಣಪ್ಪನವರು ತೀರಾ ಹತಾಶರಾದರು. ಯಾರ ಮುಂದೆಯೂ ಕೈವೊಡ್ಡದ ತಮ್ಮಣ್ಣಪ್ಪನವರು ವರ್ತಕರ ಬಳಿ ತಮ್ಮೊಳಗಿನ ವಿದ್ಯಾ ಹಪಹಪಿಯನ್ನು ಹೇಳಿ ಅಲವತ್ತುಗೊಂಡರು. ಮಕ್ಕಳ ವಿದ್ಯಾಭ್ಯಾಸದ ಮಹತ್ವವನ್ನು ಪರಿಪರಿಯಾಗಿ ಹೇಳಿದರು. ಆದರೆ ಕೈಬಿಚ್ಚಿ ದುಡ್ಡು ಕೊಡಲು ಯಾರೂ ಮುಂದೆ ಬರಲಿಲ್ಲ. ತಮ್ಮಣ್ಣಪ್ಪನವರ ಮನಸ್ಸಿಗೆ ತುಂಬಾ ಕಿರಿಕಿರಿಯಾಗಿ ತಲೆಯ ಮೇಲೆ ಕೈಹೊತ್ತು ಕುಳಿತಿದ್ದರು. ಎಂತಹ ಕಷ್ಟಕಾಲದಲ್ಲಿಯೂ ಎದೆಗುಂದದ ತಮ್ಮಣ್ಣಪ್ಪನವರು ನಿರಾಶರಾಗಿ ಸೋತು ಊಟ ಕೂಡ ಮಾಡದೇ ಹಣೆಗೆ ಕೈಹಚ್ಚಿ ತಮ್ಮ ಮನೆಯ ಮುಂದಿನ ಕಟ್ಟೆಯ ಮೇಲೆ ಕುಳಿತಿದ್ದರು.

ಕಷ್ಟಕಾಲದಲ್ಲಿ ಸ್ವತಃ ಭಗವಂತ ಮಾನವರೂಪದಲ್ಲಿ ಬಂದು ಸಹಾಯಹಸ್ತ ಚಾಚುತ್ತಾನೆ ಎನ್ನುವ ಮಾತಿನಂತೆ ಬನಹಟ್ಟಿಯ ಶ್ರೀಮಂತ ವರ್ತಕರಲ್ಲಿ ಒಬ್ಬರಾದ ಶ್ರೀ ಬಾಬುರಾವ್ ಮುಳೆ ಅವರು ತಮ್ಮಣ್ಣಪ್ಪನವರ ಹತ್ತಿರ ಬಂದರು. ಮುಳೆಯವರು ತಮ್ಮ ಧೋತರದ ಉಡಿಯಲ್ಲಿ ಕಟ್ಟಿಕೊಂಡು ಬಂದಿದ್ದ ಏಳುಸಾವಿರ ಬೆಳ್ಳಿಯ ರೂಪಾಯಿಗಳನ್ನು ತಂದು ತಮ್ಮಣ್ಣಪ್ಪವರ ಮುಂದೆ ಹಾಕಿ ಕೈಮುಗಿದು "ನೀವು ಹೈಸ್ಕೂಲ್ ಸ್ಥಾಪನೆಗಾಗಿ ಬೇರೆಯವರ ಹತ್ತಿರ ದುಡ್ಡು ಕೇಳುವುದನ್ನು ಕಂಡು ನನ್ನ ಮನಸ್ಸು ಕರಗಿತು. ಮೊದಲ ಕಂತು ಇದನ್ನು ತೆಗೆದುಕೊಳ್ಳಿ, ಮುಂದಿನ ಕಂತನ್ನು ಆಮೇಲೆ ಕೊಡುತ್ತೇನೆ" ಎಂದಾಗ ತಮ್ಮಣ್ಣಪ್ಪನವರು ಆನಂದದಿಂದ ಮುಳೆಯವರನ್ನು ಅಪ್ಪಿಕೊಂಡು ಗಳಗಳ ಅತ್ತುಬಿಟ್ಟರಂತೆ.

ಇದೊಂದು ತಮ್ಮ ಊರಿನಲ್ಲಿ ನಡೆದ ಅದ್ಭುತ ಪವಾಡವೆಂಬಂತೆ ಬನಹಟ್ಟಿಯ ನಾಗರಿಕರು ಹೇಳುತ್ತಾರೆ. ಏಕೆಂದರೆ ಶ್ರೀ ಮುಳೆಯವರು ಮಹಾಕೃಪಣರು. ಹೀಗಾಗಿ ಮುಳೆಯವರಲ್ಲಿ ತಮ್ಮಣ್ಣಪ್ಪನವರು ದುಡ್ಡನ್ನು ಕೇಳಿಯೇ ಇರಲಿಲ್ಲ. ಕೇಳದೆಯೇ ತಮ್ಮಣ್ಣಪ್ಪನವರಿಗೆ ಬಂದು ಸಹಾಯಮಾಡಿ ಮುಳೆಯವರು ತಮ್ಮ ಹಿರಿಮೆಯನ್ನು ಬೆಳೆಸಿಕೊಂಡರು. ಇಂದು ಜನತಾ ಶಿಕ್ಷಣ ಸಂಘದಲ್ಲಿ ಮುಳೆಯವರ ಹೆಸರು ರಾರಾಜಿಸುತ್ತಿದ್ದರೆ ಅದಕ್ಕೆ ಕಾರಣ ಚಿಕ್ಕೋಡಿ ತಮ್ಮಣ್ಣಪ್ಪನವರೇ ಎಂದು ಖಂಡಿತವಾಗಿ ಹೇಳಬಹುದು. ಏಕೆಂದರೆ ಬರೀ ದುಡ್ಡು, ಶ್ರೀಮಂತಿಕೆ ಇದ್ದರೆ ಸಾಲದು. ಜೊತೆಗೆ ಅದು ಸಮಾಜಕ್ಕೆ ಸದ್ವಿನಿಯೋಗವಾಗಬೇಕೆಂಬ ಮನಸ್ಸುಗಳು ಕೂಡಾ ಅಲ್ಲಿ ಸೇರಬೇಕಾಗುತ್ತದೆ. ಅಂಥವರನ್ನು ಸಮಾಜದ ಶಕ್ತಿಗಳನ್ನಾಗಿ ಮಾಡಿದ ಕೀರ್ತಿ ತಮ್ಮಣ್ಣಪ್ಪನವರದು.

ಈಗಾಗಲೇ ತಮ್ಮಣ್ಣಪ್ಪನವರಿಗೆ ಎಪ್ಪತ್ತೊಂದು ವಯಸ್ಸಾಗಿತ್ತು. ಬೀಗರ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ ಅವರಿಗೆ ಈಗ ದುಡಿಯುವ ವಯಸ್ಸು ಅಲ್ಲ. ಅಲ್ಲವ್ವಜ್ಜಿ ಚೆನ್ನಮಲ್ಲಪ್ಪ ಅಬಕಾರ ಅವರನ್ನು ದತ್ತು ತೆಗೆದುಕೊಂಡ ಮೇಲೆ ಚೆನ್ನಮಲ್ಲಪ್ಪನವರೇ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು. ಹೀಗಾಗಿ ಹಣದ ಅವಶ್ಯಕತೆಯನ್ನು ಅರಿತುಕೊಂಡ ತಮ್ಮಣ್ಣಪ್ಪನವರು ಕೊನೆಗೆ ಒಂದು ನಿರ್ಧಾರಕ್ಕೆ ಬಂದರು. ತಮ್ಮಣ್ಣಪ್ಪನವರು ಇದ್ದ ಒಬ್ಬ ಮಗನನ್ನು ಬಹಳ ಚಿಕ್ಕ ವಯಸ್ಸಿನಲ್ಲಿ ಕಳೆದುಕೊಂಡಿದ್ದರು. ಮೂರು ಜನ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಟ್ಟಿದ್ದರು. ಕುಟುಂಬದ ಎಲ್ಲ ಜವಾಬ್ದಾರಿಗಳನ್ನು ಮುಗಿಸಿದ ತಮ್ಮಣ್ಣಪ್ಪನವರಿಗೆ ತಾವು ಸಾಯುವ ಮುನ್ನ ಸಮಾಜದ ಬಹು ದೊಡ್ಡ ಜವಾಬ್ದಾರಿಯನ್ನು ಕಳೆದುಕೊಳ್ಳಬೇಕೆಂದು ಸದಾ ಅದೇ ಚಿಂತೆಯಲ್ಲಿಯೇ ಇದ್ದರು. ಮುಳೆಯವರು ಕೊಟ್ಟ ದುಡ್ಡನ್ನು ಸರಕಾರಕ್ಕೆ ಕಟ್ಟಿದರೂ, ಇನ್ನೂ ಹಣದ ಅವಶ್ಯಕತೆ ಇತ್ತು. ತಮ್ಮಣ್ಣಪ್ಪನವರು ನವೆಂಬರ್ ೧೪, ೧೯೩೩ರಲ್ಲಿ ಕಾನೂನುಬದ್ಧವಾಗಿ ತಮ್ಮ ಮೃತ್ಯುಪತ್ರವನ್ನು ಬರೆಯಿಸಿದರು. ಆ ಪತ್ರದ ಉಲ್ಲೇಖದ ಪ್ರಕಾರ ರಬಕವಿಯಲ್ಲಿ ತಮ್ಮಣ್ಣಪ್ಪನವರ ಹೆಸರಿನಲ್ಲಿ ಒಂದು ಮನೆ ಸ್ಥಾವರ ಆಸ್ತಿಯಿದ್ದು, ಅದನ್ನು ತಮ್ಮ ಚಿಕ್ಕಪ್ಪನ ಮಗನಾದ ರಾಮಪ್ಪ ಚಿಕ್ಕೋಡಿಯವರಿಗೆ ಮಾರಿ ೪,೦೦೦ರೂಪಾಯಿಗಳನ್ನು ಪಡೆದುಕೊಂಡರು. ಆ ಹಣವನ್ನು ಸಂಪೂರ್ಣವಾಗಿ ಹಾಯಸ್ಕೂಲ್ ಸ್ಥಾಪನೆಗಾಗಿಯೇ ಮುಡಿಪಾಗಿಟ್ಟರು. ಬನಹಟ್ಟಿಯ ಜನತೆ ತಮ್ಮ ಮರಣಾನಂತರ ಈ ಕಾರ್ಯವನ್ನು ನೆರವೇರಿಸುತ್ತಾರೊ ಇಲ್ಲವೊ ಎಂದು ಆ ಪತ್ರದಲ್ಲಿ ಸಂಸ್ಥಾನದ ಪ್ರಭುಗಳಾದ ಶಂಕರರಾವ್ ಪಟವರ್ಧನ ಅವರಿಂದ ನೆರವು ಪಡೆಯಲು ತಿಳಿಸಿದ್ದಾರೆ. ಅದರಂತೆ ಪ್ರಭುಗಳು ಕೂಡ ಸರಕಾರದಿಂದ ವರ್ಗಣಿ ಕೊಡಿಸಬೇಕೆಂದು ವಿನಂತಿಸಿಕೊಂಡಿದ್ದಾರೆ. ಈ ಕಾರ್ಯವನ್ನು ನೆರವೇರಿಸಲು ಜಮಖಂಡಿಯ ತಮ್ಮ ಪರಮಸ್ನೇಹಿತರಾದ ಶ್ರೀ ಕೃಷ್ಣಾಜಿರಾವ ಬಾಳಾಜಿ ನಾಯಿಕ ಆನಿಖಿಂಡಿ ಅವರಿಗೆ ಒಪ್ಪಿಸಿದರು. ಮುಂಬಯಿಯ ದುಂಡಪ್ಪ ಕಾಡಪ್ಪ ಜೋತಾವರ ಅವರ ಅಂಗಡಿಯ ಖಾತೆಯಲ್ಲಿ ಒಂದಿಷ್ಟು ಹಣವನ್ನು ಬಿಟ್ಟಿದ್ದಾರೆ. ಅದನ್ನು ಮುಂದೆ ತಮ್ಮ ಹೆಂಡತಿ ಬೇಡಿದ ಕಾಲಕ್ಕೆ ಬಡ್ಡಿಸಹಿತ ಕೊಡಲು ಕೇಳಿಕೊಂಡಿದ್ದಾರೆ. ಒಟ್ಟು ಅವರ ವಿಚಾರ ಹೈಸ್ಕೂಲ್ ಸ್ಥಾಪಿಸಬೇಕೆನ್ನುವುದೇ ಆಗಿತ್ತು.

ಕೆಲವೊಮ್ಮೆ ನಕಾರಾತ್ಮಕ ವಿಚಾರಗಳು ಅವರಲ್ಲಿ ಸುಳಿದು, ಒಂದು ವೇಳೆ ಹಾಯಸ್ಕೂಲ್ ಸ್ಥಾಪನೆಯಾಗದೇ ಇದ್ದರೆ ಆ ಹಣ ಮತ್ತೆ ಶಿಕ್ಷಣದ ಉದ್ದೇಶಕ್ಕೆ ಬಳಕೆಯಾಗಬೇಕೆಂದು ಅವರು ಬಯಸಿ, ಬೆಳಗಾವಿಯ ಲಿಂಗರಾಜ ಮಹಾವಿದ್ಯಾಲಯದ ವಸತಿಗೃಹದಲ್ಲಿ ತಮ್ಮ ಹೆಸರಿನಿಂದ ಒಂದು ಕೋಣೆಯನ್ನು ಕಟ್ಟಿಸಲು ಅದರಲ್ಲಿ ೧,೦೦೦ ರೂಪಾಯಿಗಳನ್ನು ಕೊಡಲು ಸೂಚಿಸಿದರು. ಉಳಿದ ೩,೦೦೦ ರೂಪಾಯಿಗಳನ್ನು ಬ್ಯಾಂಕಿನಲ್ಲಿಟ್ಟು ಅದರಿಂದ ಬಂದ ಬಡ್ಡಿಯನ್ನು ಬನಹಟ್ಟಿಯಲ್ಲಿ ಹಾಯಸ್ಕೂಲ್ ಕಲಿಯುವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಎಂದು ಕೊಡುವುದು ಎಂದು ಸ್ಪಷ್ಟವಾಗಿ ಬರೆಯಿಸಿದರು. ಉಯಿಲಿನ ಪ್ರಕಾರ ತಮ್ಮ ಈ ವ್ಯವಸ್ಥೆಗೆ ಡಾ.ಫಕೀರಪ್ಪ. ಗುರುಬಸಪ್ಪ. ಹಳಕಟ್ಟಿ ಮತ್ತು ಶ್ರೀ ಪಂಡಿತಪ್ಪ ಚಿಕ್ಕೋಡಿಯವರನ್ನು ಟ್ರಸ್ಟಿಗಳೆಂದು ನೇಮಿಸಿ ಅವರೀರ್ವರಿಗೆ ಈ ಜವಾಬ್ದಾರಿಯನ್ನು ಹೊರೆಸಿದರು.(ಅನುಬಂಧ-೩-೩) ಒಟ್ಟಿನಲ್ಲಿ ತಮ್ಮ ಹಣವು ಲಿಂಗಾಯತ ಸಮಾಜದ ಶಿಕ್ಷಣಾರ್ಥಿಗಳಿಗೆ ಸದ್ವಿನಿಯೋಗವಾಗಬೇಕೆಂಬುದೇ ಅವರ ಉದ್ದೇಶವಾಗಿತ್ತು. ತಮ್ಮಣ್ಣಪ್ಪನವರ ಪರಮಮಿತ್ರರಾದ ಶ್ರೀಯುತ ಪಾಂಡುರಂಗ ರಾಮಚಂದ್ರ ನಾಯಕ ಬೋರಗಿ, ಮುರುಗೆಯ್ಯಾ ಬಾಗೋಜಿಮಠ, ಬಸಲಿಂಗಪ್ಪ ಶೀಲವಂತ ಮತ್ತು ಮಹಾಲಿಂಗಪ್ಪ ಕಾಡಪ್ಪ ಹನಗಂಡಿಯವರು ಈ ಮೃತ್ಯುಪತ್ರಕ್ಕೆ ಸಹಿ ಹಾಕಿದ್ದಾರೆ. ಹೀಗೆ ತಮ್ಮಣ್ಣಪ್ಪನವರ ಆಶೆಯಂತೆ ಒಂದು ವ್ಯವಸ್ಥಿತವಾದ ಉಯಿಲು ಸಿದ್ಧವಾಯಿತು. ಉಯಿಲನ್ನು ನೋಡಿಕೊಳ್ಳಲು ತಮ್ಮ ಹೆಂಡತಿ ನೀಲುಬಾಯಿ ಮತ್ತು ಅಳಿಯ ಚೆನ್ನಮಲ್ಲಪ್ಪ ಅಬಕಾರರಿಗೆ ವಹಿಸಿದರು. ಇದನ್ನು ಓದಿ ಹೇಳಿದ ಮೇಲೆ ನೀಲುಬಾಯಿ "ನನಗೆ ಗಂಡುಮಕ್ಕಳಿಲ್ಲ. ಇರುವ ಆಸ್ತಿಯನ್ನು ಮಾರಿ, ಸಂಪೂರ್ಣವಾಗಿ ಸಮಾಜಕ್ಕೆ ಬರೆದರೆ ತನ್ನನ್ನು ನೋಡುವವರು ಯಾರು?" ಎಂದು ಕೇಳಿದರಂತೆ. ಆಗ ತಮ್ಮಣ್ಣಪ್ಪನವರು ನೀಲುಬಾಯಿಗೆ "ಬನಹಟ್ಟಿಯಲ್ಲಿ ಎಲ್ಲರ ಮನೆಗೆ ಹೋಗಿ ಒಂದೊಂದು ರೊಟ್ಟಿ ಕೇಳಿ ತಿನ್ನು, ಆದರೆ ನನಗೆ ಮೊದಲು ಶಾಲೆ ಆಗಬೇಕಾದ್ದು ಮುಖ್ಯ" ಎಂದರಂತೆ.[೬೩] ಇದರಿಂದ ತಮ್ಮ ಹೆಂಡತಿಯ ಜೀವನಕ್ಕಿಂತ ಮಕ್ಕಳ ಶಾಲೆಯೇ ಅವರಿಗೆ ಮುಖ್ಯವಾಗಿತ್ತು ಎಂಬುದು ತಿಳಿಯುತ್ತದೆ.

ತಮ್ಮಣ್ಣಪ್ಪನವರು ತಮ್ಮ ಜೀವನದುದ್ದಕ್ಕೂ ಖರೀದಿಸಿದ ಅಪಾರ ಗ್ರಂಥರಾಶಿಯನ್ನು ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯಕ್ಕೆ ಕೊಡುತ್ತೇನೆ ಎಂದು ಡಾ.ನಂದಿಮಠರಿಗೆ ಮಾತುಕೊಟ್ಟಿದ್ದರು. ಇದನ್ನು ಕೂಡ ಉಯಿಲಿನಲ್ಲಿ ಕಾಣಿಸಿದ್ದರು. ತಮ್ಮಣ್ಣಪ್ಪನವರ ಮರಣಾನಂತರ ಈ ಆಸೆಯನ್ನು ಈಡೇರಿಸಲಾಯಿತು.

ಮೃತ್ಯುಪತ್ರ ಬರೆಯಿಸಿ ಒಂದು ತಿಂಗಳು ಕಳೆದಿರಲಿಲ್ಲ. ತಲೆಯ ಭಾರವನ್ನು ಕಳೆದುಕೊಂಡು ನಿಶ್ಚಿಂತರಾಗಿ ತಮ್ಮಣ್ಣಪ್ಪನವರು ೬ ಡಿಸೆಂಬರ್ ೧೯೩೩ರಂದು ಲಿಂಗೈಕ್ಯರಾದರು. ಕನ್ನಡ ನಾಡಿನ 'ಗಡಿನಾಡಿನ ಹುಲಿ' ಸಮಾಜದ ಶ್ರೇಯಸ್ಸಿಗಾಗಿ ದುಡಿದುಡಿದು ಹಣ್ಣಾಗಿ ಕಳಚಿ ಬಿತ್ತು. ತಮ್ಮಣ್ಣಪ್ಪನವರ ಸಾವಿನ ಸುದ್ದಿಯನ್ನು ಕೇಳಿ ಇಡೀ ಊರಿನ ಮಕ್ಕಳು ದೌಡಾಯಿಸಿ ಅಬಕಾರ ಅವರ ಮನೆಯ ಹತ್ತಿರ ಬಂದು ನಿಂತು ದುಃಖಿಸಿ ಅಳುವುದನ್ನು ಇವತ್ತಿಗೂ ಬನಹಟ್ಟಿಯ ಹಿರಿಯರು ನೆನಸಿಕೊಳ್ಳುತ್ತಾರೆ. ಏಕೆಂದರೆ ಇಂದಿನ ಹಿರಿಯರೆ ಅಂದಿನ ಮಕ್ಕಳು. ಚಾಚಾ ನೆಹರು ಅವರಂತೆ ತಮ್ಮಣ್ಣಪ್ಪನವರು ಮಕ್ಕಳ

ಮೇಲೆ ಅಪಾರ ಪ್ರೇಮ, ಮಮಕಾರ, ಪ್ರೀತಿ, ವಾತ್ಸಲ್ಯಗಳನ್ನು ಇಟ್ಟುಕೊಂಡಿದ್ದರು. ಹೀಗಾಗಿ ತಮ್ಮ ಮನೆಯ ಸದಸ್ಯನನ್ನು ಕಳೆದುಕೊಂಡಷ್ಟೇ ದುಃಖದಿಂದ ಅಳುತ್ತಿದ್ದ ಮಕ್ಕಳನ್ನು ಕಂಡು ಅಲ್ಲಿದ್ದ ಹಿರಿಯರು ಸಮಾಧಾನಿಸಿದರಂತೆ.[೬೪]

ಕನ್ನಡ ನಾಡಿನುದ್ದಕ್ಕೂ ಚಿರಪರಿಚಿತರಾಗಿದ್ದ ತಮ್ಮಣ್ಣಪ್ಪನವರ ಅಂತ್ಯಸಂಸ್ಕಾರಕ್ಕೆ ನಾನಾ ಕಡೆಗಳಿಂದ ಸಾಕಷ್ಟು ಜನ ಬಂದು ಸೇರಿದ್ದರು. ಬನಹಟ್ಟಿಯಂತಹ ಚಿಕ್ಕ ಊರಿನಲ್ಲಿ ಅಷ್ಟು ಸಂಖ್ಯೆಯ ಜನರು ಸೇರಿದ್ದನ್ನು ಇಂದಿಗೂ ಮರೆತಿಲ್ಲವೆಂದು ಶ್ರೀ ಶಿವಲಿಂಗಪ್ಪ ಹತ್ತಿಯವರು ನೆನೆಸಿಕೊಳ್ಳುತ್ತಾರೆ.[೬೫]

ತಮ್ಮಣ್ಣಪ್ಪನವರು ನಿಧನರಾದ ಸಂದರ್ಭದಲ್ಲಿ ಪ್ರಸಿದ್ಧ ಕವಿವರ್ಯರಾದ ಬನಹಟ್ಟಿಯ ಈಶ್ವರ ಸಣಕಲ್ಲ ಅವರು 'ನಿಟ್ಟುಸಿರು' ಎನ್ನವ ಕವನವನ್ನು ರಚಿಸಿ, ಅಪಾರ ಜನಸ್ತೋಮದ ಮಧ್ಯದಲ್ಲಿ ವಾಚಿಸಿದರು. ಆ ಕವಿತೆ

ಇಂದಿದೋ ದುರ್ದಿನವು! ಮಬ್ಬು ನಿಬ್ಬರವಾಯ್ತು!
ಕೂಳ್ಕುದಿವ ಸಂಕಟವು! ಕರುಳುರಿವ ಪರಿತಾಪ!
ಹಾ! ಮನಃಪೂರ್ವಕತೆ, ನೀನೆಲ್ಲಿ ಮೈಮರೆದೆ!
ಬಡವರಾಧಾರವೇ ನೀನೆತ್ತ ಮರೆಯಾದೆ!
ಶಿಕ್ಷಣೋತ್ಸಾಹವೇ, ತೊರೆದೆಯಾ! ಮರೆದೆಯಾ!
ದಾರಿಗೈಗಂಬವೇ ಹೊರಳಿದೆಯ! ಉರುಳಿದೆಯ!
ವಿದ್ಯೆಯಾ ಛಾಯೆಯೇ, ನೀನತ್ತ ಸರಿದಿಂದು!
ಕರುನಾಡ ಗಡಿಯ ಗವಿಯಲಿ ನಿಂತು ಗರ್ಜಿಸಿದ
ಕನ್ನಡದ ಕೇಸರಿಯ ಗಂಭೀರ ನಿಸ್ವನವೆ,
ನೀನೆಲ್ಲಿ ಬಯಲಾದೆ! ನೀನೆಲ್ಲಿ ಬಯಲಾದೆ!
ಗಡಿನಾಡ ಮಕ್ಕಳಿರ, ಕಂಬನಿಯನಿಡಿರಿಂದು
ಕನ್ನಡ ತಾಯಿಯೇ, ಅಳು ಇಂದು! ಅಳು ಇಂದು!
ಭಾಷಾಭಿಮಾನವೇ, ಮರವಟ್ಟು ತೊಲಗಿದೆಯಾ!
ಪರಭಾಷೆಗಳು ಬಂದು, ಸ್ಥಳವನಾಕ್ರಮಿಸುತಿರೆ,
ಬಲದಿಂದೆ, ಛಲದಿಂದೆ, ಗೆಲವ ಪಡೆವರಾರು?
ಇನ್ನಾರ? ಗೆಲವ ಪಡೆದಾಳುವವರಿನ್ನಾರು?
ಹೆತ್ತಮ್ಮನನು ಹಳಿವ ದ್ರೋಹಿಗಳೆ, ಬನ್ನಿಲ್ಲಿ!
ಕುರಿಗಳೊಲು ಸಾಗಿರುವ ಕುರುಡರೇ ಬನ್ನಿಲ್ಲಿ!
ಒಂದೆ ದೇಹದೊಳುರಿದ ತೇಜವಿದು ಸುತ್ತಲೂ

ವ್ಯಾಪಿಸುತ ಮಿಂಚಿನೊಲು ಮರೆಯಾಗುತಿರೆ, ನೀವು
ಆ ಬೆಳಕಿನಲಿ ಕಣ್ಗಳನು ತೆರೆದು ಮುಂದರಿಯೆ
ಬನ್ನಿರೈ! ಆಗಲೇ ಆ ಬೆಳಕ ಸಾರ್ಥಕತೆ!
ಆ ಬೆಳಕಿನಿಂ ಬೆಳೆದ ಬಾಳು ಸಹ ಸಾರ್ಥಕವು
ಸಾರ್ಥಕವು! ಇಲ್ಲದೊಡೆ...........ಇಲ್ಲದೊಡೆ................[೬೬]

ತಮ್ಮಣ್ಣಪ್ಪನವರನ್ನು ಹತ್ತಿರದಿಂದ ನೋಡಿದ ಕವಿಮನಸ್ಸು ಅತ್ಯಂತ ಭಾವುಕತೆಯಿಂದ ಕೂಡಿದ್ದು ಈ ಕವಿತೆಯಿಂದ ಸ್ಪಷ್ಟವಾಗುತ್ತದೆ. ಇಡೀ ಪದ್ಯದುದ್ದಕ್ಕೂ ಜೀವನದ ಅತ್ಯಮೂಲ್ಯಸ್ವರೂಪವಾದ ಜೀವವನ್ನು ಕಳೆದುಕೊಂಡ ಆಘಾತ, ಸಂಕಟ, ತಳಮಳಗಳಿಂದ ಕೂಡಿದ ಭಾವೋದ್ಗಾರದ ಉದ್ಗಾರವಿದೆ. ಈ ಕವನ ಓದುತ್ತಿದ್ದಂತೆ ಕೇವಲ ಇದು ಕವಿಯೊಬ್ಬನ 'ನಿಟ್ಟುಸಿರು' ಆಗದೆ, ಸಮಸ್ತ ಜನರ ನೋವು ಕರಗಿ ದುಃಖದ ಕೋಡಿಯೇ ಹರಿಯಿತು. ಆಗ ಪಂಡಿತಪ್ಪನವರು ಕವಿ ಸಣಕಲ್ಲರಿಗೆ ಬರೆದ ಪತ್ರ ಮಹತ್ವದ್ದೆನಿಸುತ್ತದೆ(ಅನುಬಂಧ_೩-೪)

ತಮ್ಮಣ್ಣಪ್ಪನವರು ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದಾಗಿನಿಂದ ಆಜೀವ ಸದಸ್ಯರು, ಕಾರ್ಯಕಾರಿ ಮಂಡಳಿಯ ಸದಸ್ಯರು. ಹೀಗಾಗಿ ತಮ್ಮಣ್ಣಪ್ಪನವರಲ್ಲಿ ಇಟ್ಟ ಗೌರವದ ಕಾರಣವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ 'ಪರಿಷ್ಪತ್ರಿಕೆ'ಯಲ್ಲಿ ತಮ್ಮಣ್ಣಪ್ಪನವರ ನಿಧನದ ಸುದ್ದಿ ಪ್ರಕಟಗೊಂಡಿತು.[೬೭] ಅಷ್ಟೇ ಅಲ್ಲ, ರಾಷ್ಟ್ರೀಯ ಮಟ್ಟದಲ್ಲಿ ಅಂದಿನ ಪ್ರಸಿದ್ಧ ಪತ್ರಿಕೆಯಾದ ತಿಲಕರ 'ಕೇಸರಿ' ಪತ್ರಿಕೆಯಲ್ಲಿಯೂ ಕೂಡ ಪ್ರಕಟವಾಯಿತು.[೬೮] ಇದರಿಂದ ತಮ್ಮಣ್ಣಪ್ಪನವರು 'ಪ್ರಜಾಪರಿಷತ್'ನ ಮೂಲಕ ರಾಷ್ಟ್ರೀಯ ಮಟ್ಟದಲ್ಲೂ ಗುರುತಿಸಲ್ಪಟ್ಟಿರುವುದು ತಿಳಿದುಬರುತ್ತದೆ.

ತಮ್ಮಣ್ಣಪ್ಪನವರ ಅಂತ್ಯಸಂಸ್ಕಾರದ ವಿಷಯವೂ ಕೂಡ ಅಷ್ಟೇ ಹೃದಯಸ್ಪರ್ಶಿ! ಬನಹಟ್ಟಿಯ ಜನತೆ ತಮ್ಮಣ್ಣಪ್ಪನವರ ಅಂತ್ಯಸಂಸ್ಕಾರವನ್ನು ಸ್ಮಶಾನದಲ್ಲಿ ಮಾಡಲು ಇಚ್ಛಿಸಲಿಲ್ಲ. ಪೂಜ್ಯನೀಯ ಭಾವನೆಯನ್ನು ಜನರಿಂದ ಪಡೆದುಕೊಂಡ ತಮ್ಮಣ್ಣಪ್ಪನವರಿಗೆ ಕೊನೆಯಲ್ಲಿ ಸ್ಥಾನ ಸಿಕ್ಕಿದ್ದು ಪವಿತ್ರವಾದ ಹೀರೆಮಠದಲ್ಲಿ, ಜೊತೆಗೆ ಜನತೆಯ ಹೃನ್ಮಂದಿರದಲ್ಲಿ.

ಡಿಸೆಂಬರ್ ೬ರಂದು ತಮ್ಮಣ್ಣಪ್ಪನವರ ಪುಣ್ಯತಿಥಿಯು 'ಜನತಾ ಶಿಕ್ಷಣ ಸಂಘ'ದ ಆಶ್ರಯದಲ್ಲಿ ಜರುಗಿತು. ತಮ್ಮಣ್ಣಪ್ಪನವರ ಗದ್ದುಗೆ ಹೀರೆಮಠದಲ್ಲಿದ್ದುದರಿಂದ ಆಡಳಿತ ಮಂಡಳಿಯವರು ಶಿಕ್ಷಕ ಮತ್ತು ಸಿಬ್ಬಂದಿ ವರ್ಗದವರು ಮತ್ತು ಶಾಲಾಮಕ್ಕಳು ಹೀರೆಮಠಕ್ಕೆ ಬಂದು, ತಮ್ಮಣ್ಣಪ್ಪನವರ ಗದ್ದುಗೆ ಪೂಜೆಮಾಡಿ, ಮತ್ತೆ ಶಾಲೆಗೆ ಹೋಗಿ ಕಾರ್ಯಕ್ರಮಗಳನ್ನು ನಡೆಸಿದರು. ಇದು ಹಲವಾರು ವರ್ಷಗಳಿಂದ ನಡೆದು ಬಂದಿತ್ತು. ಆದರೆ ಮುಂದೆ 'ಜನತಾ ಶಿಕ್ಷಣ ಮಂಡಳಿ'ಯವರು ತಮ್ಮಲ್ಲಿ ಸಮಾಲೋಚಿಸಿಕೊಂಡು ಹೀರೆಮಠದಲ್ಲಿರುವ ತಮ್ಮಣ್ಣಪ್ಪನವರ ಅಸ್ತಿಯನ್ನು ತಂದು ಸಂಘದ ಆವರಣದಲ್ಲಿ ತಮ್ಮಣ್ಣಪ್ಪನವರ ಸಮಾಧಿಯನ್ನು ನಿರ್ಮಿಸಿದರು. ೬-೧೨-೨೦೦೦ರಿಂದ

ತಮ್ಮಣ್ಣಪ್ಪನವರ ಗದ್ದುಗೆ ಪೂಜೆ ಜನತಾ ಶಿಕ್ಷಣಸಂಘದ ಆವರಣದಲ್ಲಿಯೇ ನಡೆಯುವಂತಾಯಿತು. ತಮ್ಮಣ್ಣಪ್ಪನವರು ಒಂದು ದೃಷ್ಟಿಯಲ್ಲಿ ಆ ಭಾಗದ ಸಮುದಾಯದ ಜಂಗಮರಾಗಿದ್ದರು. ಜಂಗಮ ತತ್ವವನ್ನು ತಮ್ಮ ಬದುಕಿನುದ್ದಕ್ಕೂ ಅವರು ಬಾಳಿಬದುಕಿದರು.

೩.೬. ಶ್ರೀ ಪಂಡಿತಪ್ಪ:

ಕ್ರಿ.ಶ.೨೦ನೆಯ ಶತಮಾನದ ಆದಿಭಾಗದ ಅವಧಿ ಕನ್ನಡಿಗರ ಪಾಲಿಗೆ ದುರ್ದೆಶೆಯ ಕಾಲವಾಗಿತ್ತು. ಆಗ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿಯವರು ಸಮಾಜಮುಖೇನ ಅಭಿವೃದ್ಧಿಗೆ ತೊಡಗಿದರಲ್ಲದೆ, ತಮ್ಮ ಕುಟುಂಬದ ಸದಸ್ಯರಾದ ಅಣ್ಣನ ಮಗ ಪಂಡಿತಪ್ಪ, ಕಕ್ಕನ ಮಗ ರಾಮಪ್ಪ ಮತ್ತು ಅಳಿಯ ಹಳಕಟ್ಟಿಯವರನ್ನು ತೊಡಗಿಸಿದರು. ಇವರಲ್ಲಿ ಶಿಕ್ಷಣ, ಸಾಹಿತ್ಯ, ಧರ್ಮ, ಪತ್ರಿಕಾರಂಗ, ರಾಜಕೀಯ, ಆರ್ಥಿಕ ಮುಂತಾದ ಕ್ಷೇತ್ರಗಳಲ್ಲಿ ಹತ್ತು-ಹಲವಾರು ಯೋಜನೆಗಳನ್ನು ಹಾಕಿಕೊಂಡು, ಕನ್ನಡ ನಾಡು-ನುಡಿ-ಸಂಸ್ಕೃತಿಗಳಿಗೆ ತಮ್ಮ ಜೀವನವನ್ನು ತೇಯ್ದ ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ಮುಖ್ಯರು. ತಮ್ಮ ಜೀವನದುದ್ದಕ್ಕೂ ಸಮಾಜಸೇವೆಯಲ್ಲಿ ತೊಡಗಿಕೊಂಡ ಪಂಡಿತಪ್ಪನವರು ಸಾಂಘಿಕ ಶಕ್ತಿಯಾಗಿ ಬೆಳೆದರು.

ಪಂಡಿತಪ್ಪನವರು ನೂರಾರು ಸಮಿತಿಗಳಲ್ಲಿ ಮಾಡಿದ ಕಾರ್ಯಗಳನ್ನು ಗಮನಿಸಿದರೆ ದಿನದ ವೇಳೆಯನ್ನೆಲ್ಲ ಅವರು ಸಮಾಜಸೇವೆಯಲ್ಲಿಯೇ ಕಳೆಯುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಬಹುಮುಖ ವ್ಯಕ್ತಿತ್ವವನ್ನು ಹೊಂದಿದ ಪಂಡಿತಪ್ಪನವರು ಸಮಾಜದ ಎಲ್ಲ ಆಯಾಮಗಳಲ್ಲಿ ಸತತವಾಗಿ ನಿಷ್ಕಾಮದಿಂದ ಸದಾ ಕಾರ್ಯತತ್ಪರರಾಗಿರುತ್ತಿದ್ದರು ಎಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಅವರ ತಂದೆ ರಾಯಪ್ಪನವರು ತಹಶೀಲದಾರರಾಗಿದ್ದರು. ಅವರ ಮಗನಾಗಿದ್ದ ಪಂಡಿತಪ್ಪನವರು ಸಹಜ ಪ್ರತಿಭಾಸಂಪನ್ನರಾಗಿದ್ದರು. ಮನಸ್ಸು ಮಾಡಿದ್ದರೆ ಲಿಂಗಾಯತ ವಕೀಲರೇ ಇಲ್ಲದ ಅಂದಿನ ಕಾಲದಲ್ಲಿ ಸಾಕಷ್ಟು ಸಾಂಪತ್ತಿಕ ಆಸ್ತಿಯನ್ನು ಗಳಿಸಬಹುದಾಗಿತ್ತು. ಆದರೆ ಚಿಕ್ಕಂದಿನಿಂದಲೇ ತಮ್ಮಣ್ಣಪ್ಪನವರ ಒಡನಾಟದಿಂದ ಆದರ್ಶವನ್ನು ಮೈಗೂಡಿಸಿಕೊಂಡು ಬೆಳೆದ ಪಂಡಿತಪ್ಪನವರು ಕೇವಲ ನಿಷ್ಕಾಮಸೇವೆಯನ್ನು ಮಾಡಿ ಸಮಾಜದ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಸಾಕಷ್ಟು ಪ್ರಯತ್ನಪಟ್ಟರು. ಅಂದಿನ ಕಾಲದಲ್ಲಿ ಸಂಸ್ಥಾನಿಕರು, ಬ್ರಿಟಿಷರಿಂದ ಸಾಕಷ್ಟು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿದ್ದ ಪಂಡಿತಪ್ಪನವರು ಹಣಕ್ಕಾಗಿ ಎಂದೂ ಹಪಹಪಿಸಲಿಲ್ಲ.

ಬಿ.ಎ.ಪದವಿಯನ್ನು ಪಡೆದು, ವಕೀಲಿವಿದ್ಯೆಯನ್ನು ಅರ್ಧಕ್ಕೆ ನಿಲ್ಲಿಸಿದ್ದರೂ, ಕಾನೂನು ಸಲಹೆಯಲ್ಲಿ ಅಪಾರ ಪಾಂಡಿತ್ಯವನ್ನು ಪಡೆದಿದ್ದರು. ಅಂತಹ ಪಂಡಿತಪ್ಪನವರು ಸಾಮಾನ್ಯ ಶಿಕ್ಷಕರಾಗಿ, ಸಂಸ್ಥೆಯ ಕರಣಿಕರಾಗಿ ದುಡಿದರಲ್ಲದೆ ರಾಜಕೀಯ ಧುರೀಣ, ಶಿಕ್ಷಣತಜ್ಞ, ನೇಕಾರರ ಹಿತಚಿಂತಕ, ಬಡವರ ಬಂಧು, ರೈತರ ಪರ ಹೋರಾಟ, ಕಾರ್ಮಿಕರ ಹಿತರಕ್ಷಣೆ ಮುಂತಾದ ಹತ್ತು ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ಸಮರ್ಪಿಸಿಕೊಂಡರು.

೩.೬.೧. ಜನನ–ಬಾಲ್ಯ:

ಪಂಡಿತಪ್ಪನವರ ತಂದೆ ರಾಯಪ್ಪ. ರಾಯಪ್ಪ ಮತ್ತು ಸಿದ್ಧಲಿಂಗವ್ವರಿಗೆ ಒಟ್ಟು ಎಂಟು ಜನ ಮಕ್ಕಳು. ಅವರಲ್ಲಿ ಮೂರು ಜನ ಗಂಡು ಮತ್ತು ಐದು ಜನ ಹೆಣ್ಣುಮಕ್ಕಳು. ಅವರು: ಗಂಗವ್ವ, ಸಾವಿತ್ರಿ, ಪಂಡಿತಪ್ಪ, ಬಾಳವ್ವ, ಸಿದ್ಧರಾಮಪ್ಪ, ಸಂಗಪ್ಪ, ಬಸಪ್ಪ ಮತ್ತು ಬಸವ್ವ. ಪಂಡಿತಪ್ಪನವರು ರಾಯಪ್ಪನವರ ಮೂರನೆಯ ಮಗನಾಗಿ ೧೮೮೪ ಫೆಬ್ರುವರಿ ೪ರಂದು ಸಾಂಗಲಿ ಸಂಸ್ಥಾನದ ರಬಕವಿಯಲ್ಲಿ ಜನಿಸಿದರು. ಪಂಡಿತಪ್ಪನವರು ತಮ್ಮ ಬಾಲ್ಯವನ್ನು ರಬಕವಿಯಲ್ಲಿ ತಮ್ಮ ಚಿಕ್ಕಪ್ಪ ತಮ್ಮಣ್ಣಪ್ಪನವರೊಂದಿಗೆ ಕಳೆದರು. ನಂತರ ಅವರ ತಂದೆಗೆ ವಿಜಾಪುರಕ್ಕೆ ವರ್ಗವಾದಾಗ ಪಂಡಿತಪ್ಪನವರು ತಂದೆಯ ಜೊತೆಯಲ್ಲಿ ಬಂದರು.

೩.೬.೨. ಶಿಕ್ಷಣ:

ಪಂಡಿತಪ್ಪನವರು ಪ್ರಾಥಮಿಕ ಶಿಕ್ಷಣ ರಬಕವಿಯಲ್ಲಿ ಮುಗಿಸಿದರು. ಪ್ರೌಢಶಿಕ್ಷಣವು ಧಾರವಾಡ ಮತ್ತು ವಿಜಾಪುರಗಳಲ್ಲಿ ಜರುಗಿತು. ಪಂಡಿತಪ್ಪನವರ ಶಿಕ್ಷಣದ ಬಗೆಗೆ ಅವರ ಚಿಕ್ಕಪ್ಪ ತಮ್ಮಣ್ಣಪ್ಪನವರು ವಿಶೇಷ ಆಸಕ್ತಿ ವಹಿಸಿದ್ದರು.[೧೯] ಬಾಲ್ಯದಿಂದಲೂ ಜಾಣರಾದ ಪಂಡಿತಪ್ಪನವರನ್ನು ತಮ್ಮಣ್ಣಪ್ಪನವರು ಸದಾ ಪ್ರೋತ್ಸಾಹಿಸುತ್ತಿದ್ದರು. ಉನ್ನತ ಶಿಕ್ಷಣವನ್ನು ಪಡೆಯಬೇಕೆನ್ನುವ ಪಂಡಿತಪ್ಪನವರ ಹಂಬಲಕ್ಕೆ ತಂದೆಯಾದ ರಾಯಪ್ಪ ಮತ್ತು ಚಿಕ್ಕಪ್ಪ ತಮ್ಮಣ್ಣಪ್ಪನವರು ನೀರೆರೆದು ಪ್ರೋತ್ಸಾಹಿಸಿದರು. ಆಗ ಉತ್ತರ ಕರ್ನಾಟಕದ ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣ ಪಡೆಯಲು ಪುಣೆ ಮತ್ತು ಮುಂಬಯಿಗಳಿಗೆ ಹೋಗಬೇಕಾಗುತ್ತಿತ್ತು. ಪಂಡಿತಪ್ಪನವರು ಪುಣೆಯ ಫರ್ಗ್ಯುಸನ್ ಮಹಾವಿದ್ಯಾಲಯದಲ್ಲಿ ಬಿ.ಎ. ಪದವಿಯನ್ನು ಪಡೆದರು.

ತಮ್ಮಣ್ಣಪ್ಪನವರು ಪಂಡಿತಪ್ಪನು ಮುಂಬಯಿಗೆ ಹೋಗಿ ಕಾನೂನು ಓದಬೇಕೆಂದು ಬಯಸಿದ್ದರು. ಆಗ ಲಿಂಗಾಯತ ಸಮಾಜದಲ್ಲಿ ಉನ್ನತ ಶಿಕ್ಷಣ ಪಡೆದ ವಿದ್ಯಾವಂತರ ಕೊರತೆ ತುಂಬಾ ಇತ್ತು. ಅದರಲ್ಲೂ ಬೆಳಗಾವಿಯಲ್ಲಿ ಲಿಂಗಾಯತ ವಕೀಲರೇ ಇರಲಿಲ್ಲ. ಹೀಗಾಗಿ ಗೋಕಾಕದ ಮೆಸರ್ಸ್ ಘೋಡಗೇರಿ ಮತ್ತು ಬೆಂಬಳಗಿ ಕಂಪನಿಯವರು ಕಾನೂನು ಓದಿ ಬೆಳಗಾವಿಯಲ್ಲಿ ವಕೀಲಿವೃತ್ತಿಯನ್ನು ಮಾಡಬಯಸುವ ಲಿಂಗಾಯತ ವಿದ್ಯಾರ್ಥಿಗಳಿಗೆ ಧನಸಹಾಯ ಮಾಡಲು ಮುಂದೆ ಬಂದಿದ್ದರು. ಈ ಧನಸಹಾಯ ಪಡೆದ ಫಲಾನುಭವಿಗಳಲ್ಲಿ ಶ್ರೀಯುತರಾದ ಪಂಡಿತಪ್ಪ ಚಿಕ್ಕೋಡಿ, ಎಂ.ಆರ್.ಸಾಖರೆ ಹಾಗೂ ಬಿ.ಬಿ.ಮಮದಾಪುರ ಅವರು ಸೇರಿದ್ದಾರೆ.

ಮುಂಬೈ ಪಟ್ಟಣ ಅಂದು ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಅಲ್ಲಿ ಈ ಭಾಗದ ಲಿಂಗಾಯತ ಶ್ರೀಮಂತ ವರ್ತಕರು ಫಂಡು ಕೂಡಿಸಿ ತಮ್ಮಲ್ಲಿಗೆ ವ್ಯಾಪಾರಕ್ಕೆಂದು ಬರುವ ಲಿಂಗಾಯತರಿಗೆ ವಸತಿ ಹಾಗೂ ಊಟಕ್ಕಾಗಿ 'ವೀರಶೈವ ಆಶ್ರಮ' ಹೆಸರಿನ ಒಂದು ವಸತಿ ವ್ಯವಸ್ಥೆ ಮಾಡಿದ್ದರು. ಅದನ್ನು ಅಲ್ಲಿಯ ಲಿಂಗಾಯತ ವರ್ತಕರು ನಡೆಸುತ್ತಿದ್ದರು.[೨೦] ಸೊಲ್ಲಾಪುರದ ಶ್ರೀಮಂತ ವಾರದ ಮಲ್ಲಪ್ಪನವರು ಆಶ್ರಮದ ಸ್ಥಾಪನೆಗಾಗಿ ಧನಸಹಾಯ ನೀಡಿದ್ದರು.[೨೧] ಅಲ್ಲದೆ

ಗಂಗಾಧರಪ್ಪ ಸಾಬೋಜಿ ಮತ್ತು ಅವರ ಸಮಕಾಲೀನರು ಅದಕ್ಕಾಗಿ ಬಹಳ ಶ್ರಮಿಸಿದ್ದರು. ಅಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದ ಲಿಂಗಾಯತ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಊಟ-ವಸತಿಯ ವ್ಯವಸ್ಥೆ ಕಲ್ಪಿಸಲಾಗಿತ್ತು. ಪ್ರೌಢ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳು ಮತ್ತು ಧನಿಕ ವರ್ತಕರು ಈ ಆಶ್ರಮದಲ್ಲಿ ಮೇಲಿಂದಮೇಲೆ ಸೇರುವುದಕ್ಕೆ ಅವಕಾಶ ಕಲ್ಪಿಸಿದುದರಿಂದ ಅವರು ಸಮಾಜದ ಅಭಿವೃದ್ಧಿಯನ್ನು ಕುರಿತು ಚರ್ಚಿಸುತ್ತಿದ್ದರು.[೨೨] ಪಂಡಿತಪ್ಪನವರು ಕಾನೂನು ವಿದ್ಯೆಯನ್ನು ಕಲಿಯಲು ಬಂದಾಗ ಇಂತಹ ಚರ್ಚೆಗಳು ಅವರ ಮನಸ್ಸು ಪ್ರಬುದ್ಧಗೊಳ್ಳಲು ಸಹಾಯಕವಾದವು.

ಎಂ.ಆರ್.ಸಾಖರೆ, ಬಿ.ಬಿ.ಮಮದಾಪುರ ಮತ್ತು ಪಂಡಿತಪ್ಪ ಚಿಕ್ಕೋಡಿಯವರು ಕಾನೂನು ವಿದ್ಯೆಯನ್ನು ಅರ್ಥಕ್ಕೆ ನಿಲ್ಲಿಸಿ, ಸಮಾಜಸೇವೆಯನ್ನು ಮಾಡಲು ನಿರ್ಧರಿಸಿದರು. ಸಮಾಜದ ಅಭಿವೃದ್ಧಿಯೆಂದರೆ ನಿರಕ್ಷರತೆಯನ್ನು ಹೋಗಲಾಡಿಸುವುದು. ಪಂಡಿತಪ್ಪ ಚಿಕ್ಕೋಡಿಯವರು ತಮ್ಮ ಮುಂದಿನ ಗುರಿಯ ಬಗ್ಗೆ ತಮ್ಮ ಚಿಕ್ಕಪ್ಪನ ಸಲಹೆ ಪಡೆಯಲು ನೇರವಾಗಿ ರಬಕವಿಗೆ ಬಂದರು.

೩.೬.೩. ಪುಣೆ-ಮುಂಬಯಿ ಪರಿಸರದ ಪ್ರಭಾವ:

ಪಂಡಿತಪ್ಪನವರು ಬಿ.ಎ. ಪದವಿಯನ್ನು ಪಡೆಯಲು ಪುಣೆಯ ಫರ್ಗ್ಯುಸನ್ ಮಹಾವಿದ್ಯಾಲಯಕ್ಕೆ ಸೇರಿದರು. ಆಗ ಪುಣೆಯಲ್ಲಿ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳು ತಿಲಕರ ಮತ್ತು ಆ್ಯನಿಬೆಸೆಂಟರ ನೇತೃತ್ವದಲ್ಲಿ ನಡೆಯುತ್ತಿದ್ದವು. ಈ ಅವಧಿಯಲ್ಲಿ ಉತ್ತರಕರ್ನಾಟಕದಿಂದ ಕಲಿಯಲು ಹೋದ ವಿದ್ಯಾರ್ಥಿಗಳಿಗೆ ಶಾಲಾಜೀವನದ ಜೊತೆಗೆ ತಿಲಕರ ವ್ಯಕ್ತಿತ್ವದ ಪರಿಚಯವೂ ಆಯಿತು. ಅಂದು ಪುಣೆಯು ಮರಾಠಿಮಯವಾಗಿದ್ದು, ಕನ್ನಡ ಭಾಷೆಯು ತುಂಬಾ ಅಲಕ್ಷಿತವಾಗಿತ್ತು. ಪುಣೆಯ ಶ್ರೀಮಂತ ಮರಾಠಿ ವಿದ್ಯಾರ್ಥಿಗಳು ಅಹಂಕಾರ ಪ್ರವೃತ್ತಿಯವರಾಗಿದ್ದರು. ಹೊರಗಿನಿಂದ ಬಂದ ವಿದ್ಯಾರ್ಥಿಗಳನ್ನು ಅಸಡ್ಡೆಯಿಂದ ಕಾಣುತ್ತಿದ್ದರು. ಹೀಗಾಗಿ ನಿರ್ಲಕ್ಷಿತಗೊಂಡ ಕರ್ನಾಟಕದ ಲಿಂಗಾಯತ ವಿದ್ಯಾರ್ಥಿಗಳು ಒಂದುಗೂಡಲು ಇದು ಪ್ರೇರಣೆಯಾಯಿತು. ೧೯೧೩ರಲ್ಲಿ ಸುಮಾರು ೪೦ ಜನ ಲಿಂಗಾಯತ ವಿದ್ಯಾರ್ಥಿಗಳು ಪುಣೆಯ ಕಾಲೇಜುಗಳಲ್ಲಿ ಓದುತ್ತಿದ್ದರು. ಕನ್ನಡ ನಾಡಿನಿಂದ ಬಂದ ವಿದ್ಯಾರ್ಥಿಗಳೆಲ್ಲ ಸೇರಿ ಒಂದು ಬೋರ್ಡಿಂಗ್‌ನ್ನು ಪ್ರಾರಂಭಿಸಿದ್ದರು. ಎಲ್ಲರೂ ಒಂದೇ ಮನೆಯ ಅಣ್ಣತಮ್ಮಂದಿರಂತೆ ಪ್ರೀತಿಯಿಂದ ಇರುತ್ತಿದ್ದರು.[೨೩]

ಬೆಳಗಾವಿಯ ಕೆ.ಎಲ್.ಇ.ಸಂಸ್ಥೆಯ ಸಂಸ್ಥಾಪಕ ಆಜೀವ ಸದಸ್ಯರು ಪುಣೆಯಲ್ಲಿ ಪಂಡಿತಪ್ಪನವರ ಒಡನಾಡಿಗಳಾಗಿದ್ದರು. ಪಂಡಿತಪ್ಪನವರ ಜೊತೆಯಲ್ಲಿ ಫರ್ಗ್ಯುಸನ್ ಮಹಾವಿದ್ಯಾಲಯದಲ್ಲಿ ಎಂ.ಆರ್.ಸಾಖರೆಯವರು ಕಲಿಯುತ್ತಿದ್ದರು. ಶಿ.ಶಿ.ಬಸವನಾಳ, ಶ್ರೀಎಚ್.ಎಫ್.ಕಟ್ಟೀಮನಿ, ಬಿ.ಎಸ್.ಹಂಚಿನಾಳ, ಬಿ.ಬಿ.ಮಮದಾಪುರ ಇವರುಗಳು ಡೆಕ್ಕನ್ ಮಹಾವಿದ್ಯಾಲಯದಲ್ಲಿ ಕಲಿಯುತ್ತಿದ್ದರು. ಶ್ರೀ ವೀರನಗೌಡ ಪಾಟೀಲರು ಪುಣೆಯಲ್ಲಿ ಹೊಸದಾಗಿ ಪ್ರಾರಂಭವಾಗಿದ್ದ ಒಕ್ಕಲುತನದ ಕಾಲೇಜಿನಲ್ಲಿ ಕಲಿಯುತ್ತಿದ್ದರು.

ಕರ್ನಾಟಕದ ಈ ವಿದ್ಯಾರ್ಥಿಗಳು ಪುಣೆಯಲ್ಲಿ ಪ್ರತಿನಿತ್ಯ ಮಹಾವಿದ್ಯಾಲಯದಲ್ಲಿ ಕೂಡುತ್ತಿದ್ದರಲ್ಲದೆ, ಸಾಯಂಕಾಲ ಕೂಡಿಯೇ ವಾಯುವಿಹಾರಕ್ಕೆ ಹೋಗುತ್ತಿದ್ದರು. ಒಂದು ಪ್ರಶಾಂತ ಸ್ಥಳದಲ್ಲಿ ಕುಳಿತುಕೊಂಡು ತಮ್ಮ ಕಷ್ಟಸುಖಗಳನ್ನು ಹಂಚಿಕೊಳ್ಳುತ್ತಿದ್ದರು. ಕನ್ನಡ ನಾಡು–ನುಡಿ ಮತ್ತು ಲಿಂಗಾಯತ ಸಮಾಜದ ವಿಷಯಗಳನ್ನು ಚರ್ಚಿಸುತ್ತಿದ್ದರು. ಲಿಂಗಾಯತ ಸಮಾಜ ಶೈಕ್ಷಣಿಕ ದೃಷ್ಟಿಯಿಂದ ಪ್ರಗತಿ ಸಾಧಿಸದೇ ಇರುವುದಕ್ಕೆ ಅವರೆಲ್ಲ ಕೊರಗುತ್ತಿದ್ದರು. ಸಮಾಜದ ಹಿರಿಯರು ಹಾಗೂ ಶ್ರೀಮಂತರು ಮನಸ್ಸು ಮಾಡಿದರೆ ವಿದ್ಯಾಸಂಸ್ಥೆಯನ್ನು ಸ್ಥಾಪಿಸಬೇಕೆಂದು ಚರ್ಚಿಸುತ್ತಿದ್ದರು. ಈ ಗೆಳೆಯರ ಗುಂಪಿನ ಮುಕ್ತ ಮನಸ್ಸಿನ ಆಲೋಚನೆಗಳೇ ಭವಿಷತ್ತಿನಲ್ಲಿ ಮಹತ್ಕಾರ್ಯ ಸಾಧನೆಗೆ ನಾಂದಿಯಾದವು ಎನ್ನುವ ಸಂಗತಿ ಈಗ ಐತಿಹಾಸಿಕ ದಾಖಲೆಯಾಗಿದೆ.[೨೪]

ಪಂಡಿತಪ್ಪನವರಿಗೆ ಪ್ರಭಾವ ಬೀರಿದ ಇನ್ನೊಂದು ಸಂಗತಿಯೆಂದರೆ ಪುಣೆಯ ಸಾಂಸ್ಕೃತಿಕ ಪುನರುತ್ಥಾನದ ಕಾರ್ಯ. ಮುಂಬಯಿ ಪ್ರಾಂತ್ಯದ ಪ್ರಮುಖ ಪಟ್ಟಣವಾದ ಪುಣೆಯಲ್ಲಿ ಪೇಶ್ವೆಯವರ ವೈಭವ, ಕೀರ್ತಿಗಳು ಜನರ ಮನಸ್ಸಿನಲ್ಲಿ ಹಸಿರಾಗಿಯೇ ಉಳಿದಿದ್ದವು. ವ್ಯಾಪಕವಾಗಿ ಪ್ರಚಾರವಾಗುತ್ತಿದ್ದ ಇಂಗ್ಲಿಷ್ ಶಿಕ್ಷಣದಿಂದ ಜನತೆಯಲ್ಲಿ ಹೊಸವಿಚಾರಗಳು ತಲೆದೋರತೊಡಗಿದ್ದವು. ಲೋಕಮಾನ್ಯ ಬಾಲಗಂಗಾಧರ ತಿಲಕ, ಗೋಪಾಲಕೃಷ್ಣ ಗೋಖಲೆ ಮೊದಲಾದ ಮಹನೀಯರು ಜನರಲ್ಲಿ ರಾಷ್ಟ್ರೀಯತೆಯನ್ನು ಜಾಗೃತಗೊಳಿಸುವ ಕೆಲಸದಲ್ಲಿ ನಿರತರಾಗಿದ್ದರು. ಸಾರ್ವಜನಿಕ ಗಣೇಶೋತ್ಸವ, ಶಿವಾಜಿ ಜಯಂತಿ ಮುಂತಾದ ಕಾರ್ಯಕ್ರಮಗಳ ಮೂಲಕ ಜನತೆಗೆ ನಮ್ಮ ಸಂಸ್ಕೃತಿ ಹಾಗೂ ರಾಷ್ಟ್ರದ ಬಗ್ಗೆ ಅಭಿಮಾನವನ್ನು ಮೂಡಿಸಲಾಗುತ್ತಿತ್ತು. ಗೋಖಲೆಯವರು ಆರಂಭಿಸಿದ್ದ 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯ ವತಿಯಿಂದ ಹಲವಾರು ಸಂದರ್ಭಗಳಲ್ಲಿ ಗಣ್ಯರನ್ನು ಆಮಂತ್ರಿಸಿ, ಸಾರ್ವಜನಿಕ ಭಾಷಣಗಳನ್ನು ಏರ್ಪಡಿಸಲಾಗುತ್ತಿತ್ತು. 'ಡೆಕ್ಕನ್ ಎಜುಕೇಶನ್ ಸೊಸೈಟಿ'ಯ ಸಂಸ್ಥಾಪಕರಾದ ಲೋಕಮಾನ್ಯ ತಿಲಕ, ಶ್ರೀ ಅಗರಕರ, ಶ್ರೀ ಚಿಪೂಳಣಕರ ಮತ್ತು ಶ್ರೀ ಪರಾಂಜಪೆ ಮೊದಲಾದವರು ವಿದ್ಯಾಸಂಸ್ಥೆಗಳ ಮುಖಾಂತರ ಸಮಾಜದಲ್ಲಿ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ರಾಂತಿಯನ್ನು ಮಾಡುತ್ತಿದ್ದರು. ಅವರು ಸರಕಾರಿ ನೌಕರಿಯಲ್ಲಿ ಸೇರದೆ ತಮ್ಮ ಸಮಾಜಬಾಂಧವರಿಗಾಗಿ ಸ್ವಾರ್ಥತ್ಯಾಗದ ಕಠಿಣ ದಾರಿಯನ್ನು ತುಳಿದಿದ್ದರು.[೨೫] ಈ ಎಲ್ಲ ವಾತಾವರಣ ವಿದ್ಯಾರ್ಥಿಯಾಗಿದ್ದ ಪಂಡಿತಪ್ಪನವರ ಮನಸ್ಸಿನ ಮೇಲೆ ದಟ್ಟ ಪ್ರಭಾವ ಬೀರಿದವು. ಮುಂದೆ ಮುಂಬಯಿಯ ಕಾನೂನು ವಿದ್ಯೆಯ ವ್ಯಾಸಂಗಕ್ಕೆ ಇದೊಂದು ಹಿನ್ನೆಲೆಯಾಯಿತು.

೩.೬.೪. ವೃತ್ತಿ:

ಪಂಡಿತಪ್ಪನವರು ಕಾನೂನು ವಿದ್ಯೆಯನ್ನು ಅರ್ಧಕ್ಕೆ ನಿಲ್ಲಿಸಿ ರಬಕವಿಗೆ ಬಂದ ಮೇಲೆ ಉಪಜೀವನಕ್ಕಾಗಿ ಏನಾದರೂ ನೌಕರಿ ಮಾಡಬೇಕಾಗಿತ್ತು. ಶಿಕ್ಷಣಪ್ರೇಮಿಗಳಾದ ತಮ್ಮಣ್ಣಪ್ಪನವರ ಸಲಹೆಯಂತೆ ಗೋಕಾಕದ ಹೈಸ್ಕೂಲವೊಂದರಲ್ಲಿ ಮುಖ್ಯೋಪಾಧ್ಯಾಯರಾಗಿ ಕೆಲಸ ಕೈಗೊಂಡರು.[೨೬] ರ್‍ಯಾಂಗ್ಲರ್ ಡಿ.ಸಿ.ಪಾವಟೆಯವರು ಆಗಿನ್ನೂ ಹೈಸ್ಕೂಲ ವಿದ್ಯಾರ್ಥಿ. ಡಿ.ಸಿ.ಪಾವಟೆಯವರ ಪ್ರಾಥಮಿಕ

ಶಿಕ್ಷಣ ರಬಕವಿಯಲ್ಲಿ ಆದದ್ದು ಹೆಮ್ಮೆಯ ಸಂಗತಿಯೆಂದೇ ಹೇಳಬೇಕು. ಮುಂದೆ ಪಾವಟೆಯವರ ಅಣ್ಣಂದಿರು ಗೋಕಾಕಕ್ಕೆ ಬಂದುದರಿಂದ ಪಾವಟೆಯವರು ರಬಕವಿಯಿಂದ ಗೋಕಾಕಕ್ಕೆ ಬಂದರು. ಅಲ್ಲಿಯ ಇಂಗ್ಲಿಷ್ ಶಾಲೆ ಸೇರಿ, ಎರಡೂವರೆ ವರುಷ ವಿದ್ಯಾಭ್ಯಾಸ ಮಾಡಿದರು. ನಂತರ ಇಂಗ್ಲಿಷ್ ನಾಲ್ಕನೆಯ ಇಯತ್ತೆ ಪಾಸಾದರು. ಅಲ್ಲಿ ಆಗ ಪಂಡಿತಪ್ಪ ಚಿಕ್ಕೋಡಿಯವರು ಮುಖ್ಯಾಧ್ಯಾಪಕರಾಗಿದ್ದರು. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅವರೆಂದರೆ ಭಯಮಿಶ್ರಿತ ಗೌರವ, ಸತತೋದ್ಯೋಗ ಮತ್ತು ಶಿಸ್ತುಗಳಿಗೆ ಹೆಸರಾಗಿದ್ದ ಪಂಡಿತಪ್ಪನವರು ವಿದ್ಯಾರ್ಥಿಗಳಿಗೆ ಆದರ್ಶಪ್ರಾಯರಾಗಿದ್ದರು.[೨೭] ಆದರೆ ಸ್ವತಂತ್ರ ಮನೋಭಾವವನ್ನು ಹೊಂದಿದ್ದ ಪಂಡಿತಪ್ಪನವರಿಗೆ ಈ ನೌಕರಿಯ ಕಟ್ಟುಪಾಡುಗಳು ಒಗ್ಗಲಿಲ್ಲ. ಹೀಗಾಗಿ ಪಂಡಿತಪ್ಪನವರು ಗೋಕಾಕನ್ನು ಬಿಟ್ಟು ಬೆಳಗಾವಿಗೆ ಬಂದು ನೆಲೆನಿಂತರು.[೨೮]

ಪಂಡಿತಪ್ಪನವರು ಮತ್ತು ಅವರ ಒಡನಾಡಿಗಳು ಬೆಳಗಾವಿಯ ಕೋಟೆಯಲ್ಲಿ ಆ್ಯಂಗ್ಲೋವರ್ನಾಕ್ಯುಲರ್ ಸ್ಕೂಲ್ (ಗಿಲಗಂಚಿ-ಅರಟಾಳ ಪ್ರೌಢಶಾಲೆ)ಯನ್ನು ಬಹು ಉತ್ಸುಕತೆಯಿಂದ ಪ್ರಾರಂಭ ಮಾಡಿದರು. ಆದರೆ ಎಲ್ಲರೂ ಬರಿಗೈ ಬಂಟರೆ. ಸಂಪಾದನೆಯಂತೂ ಅದೇತಾನೆ ಪ್ರಾರಂಭವಾಗಿತ್ತು. ಆ ಸಂದರ್ಭದಲ್ಲಿ ಪಂಡಿತಪ್ಪ ಮತ್ತು ಗೌರಮ್ಮನವರು ಮಾಡಿದ ಉಪಕಾರವನ್ನು ಕೆ.ಎಲ್.ಇ.ಸಂಸ್ಥಾಪಕರು ನೆನಪಿಸಿಕೊಂಡಿದ್ದಾರೆ. ಮದುವೆಯಾದ ಹೊಸತರಲ್ಲಿ ಈ ಸಪ್ತರ್ಷಿಗಳ ಹೊಟ್ಟೆಯನ್ನು ತುಂಬಿಸಿದವರು ಗೌರಮ್ಮನವರು. ಅದನ್ನು ಸ್ವತಃ ಶ್ರೀ ಎಚ್.ಎಫ್.ಕಟ್ಟೀಮನಿಯವರೇ ತಮ್ಮ ಮಿತ್ರರೊಂದಿಗೆ ಕಳೆದ ಬದುಕಿನ ಹೋರಾಟದ ದಿನಗಳನ್ನು ಅತ್ಯಂತ ಹೃದಯಸ್ಪರ್ಶಿಯಾಗಿ ಬರೆದಿದ್ದಾರೆ.

ಸಪ್ತರ್ಷಿಗಳಿಂದ ಸ್ಥಾಪನೆಗೊಂಡ ಗಿಲಗಂಚಿ-ಅರಟಾಳ ಹಾಯಸ್ಕೂಲ್ ಪ್ರಾರಂಭದಲ್ಲಿ ಸಾಕಷ್ಟು ಆರ್ಥಿಕ ತೊಂದರೆಗಳನ್ನು ಅನುಭವಿಸಿತು. ಆದರೆ 'ಸೇವೆಯೇ ಪರಮಗುರಿ' ಎಂದು ನಂಬಿ, ಭಾವೈಕ್ಯದ ಸಂಗಮದಂತಿದ್ದ ಈ ಸ್ನೇಹಿತರು ತಮ್ಮ ತಾಪತ್ರಯಗಳನ್ನು ಮರೆಯುತ್ತಿದ್ದರು. "ಹೊಸದಾಗಿ ನಡೆಯಿಸುವ ಸಂಸ್ಥೆಗೆ ಹಣದ ಅಡಚಣೆ ಬಹಳವಾಗಿತ್ತು. ಕೈತುಂಬ ಸಂಬಳವಿಲ್ಲ. ಅನ್ನಬಟ್ಟೆಗೆ ಕೊರತೆ. ಬಂದದ್ದರಲ್ಲೇ ತೃಪ್ತಿಪಡುವ ಸ್ವಭಾವದಿಂದ, ಗಂಗಾಳ ಪಗಾರಕ್ಕೆ ದುಡಿಯುತ್ತಾರೆಂಬ ಪ್ರತೀತಿ ಹಬ್ಬಿತ್ತು"[೨೯] ಎಂದು ಚೆನ್ನಮಲ್ಲಪ್ಪ ಅಬಕಾರ ಅವರು ನೆನಸಿಕೊಂಡಿದ್ದಾರೆ.

ಸಂಸ್ಥೆಯನ್ನು ಕಟ್ಟಿದ ಈ ಸ್ನೇಹಿತರ ಬಳಗ ಎಂದೂ ಅತೃಪ್ತಿ ಭಾವನೆಯನ್ನು ತಾಳಲಿಲ್ಲ. ಇವರು ಮನಸ್ಸು ಮಾಡಿದ್ದರೆ ಶ್ರೀಮಂತಿಕೆಯ ಸುಖದಲ್ಲಿ ಜೀವನ ಸಾಗಿಸಬಹುದಾಗಿತ್ತು. ಆದರೆ ಇದ್ದುದರಲ್ಲಿಯೇ ತೃಪ್ತಿ ಪಡುವ ಸ್ವಭಾವದರಾಗಿದ್ದರು. ಗಿಲಗಂಚಿ-ಅರಟಾಳ ಹೈಸ್ಕೂಲನ್ನು ಸ್ಥಾಪಿಸಿ. ತಮ್ಮ ಊಟೋಪಚಾರಕ್ಕಾಗಿ ಹೈಸ್ಕೂಲ್ ಆವರಣದಲ್ಲಿಯೇ ಕ್ಲಬ್‌ನ್ನು ಸ್ಥಾಪಿಸಿಕೊಂಡಿದ್ದರು. ಅದನ್ನು ಬಿ.ಎಸ್.ಹಂಚಿನಾಳರು "ಶಾಲೆಯ ಕೆಲಸ ಮಾಡಿ ಮನೆಗೆ ಬಂದರೆ ಮತ್ತೆ ಮನೆಯ ಕೆಲಸ ಕಣ್ಮುಂದೆ ನಿಲ್ಲುತ್ತಿತ್ತು. ಆಗ ಬಸಪ್ಪ ನಮ್ಮ ಕ್ಲಬ್ಬು ನಡೆಸುತ್ತಿದ್ದ. ಒಂದು ರೂಪಾಯಿ ಕೊಟ್ಟು ನಾಲ್ಕು ರೂಪಾಯಿಯ ಬೆಣ್ಣೆ ತರ ಹೇಳುತ್ತೀರಿ ಎಂದು ಅವನ ಎಚ್ಚರಿಕೆ. ನಮಗೋ ಬೆಣ್ಣೆ ಅಷ್ಟು ತುಟ್ಟಿಯಿದೆನ್ನುವುದು ಕೂಡ

ತಿಳಿಯದು. ಆಮೇಲೆ ಆ ದಾರಿ ಬಿಟ್ಟು ಪಾವು ಸೇರು ಹಾಲು, ಕುಂಬಳಕಾಯಿಪಲ್ಲೆ, ಯಥಾಪ್ರಕಾರವಾಗಿ ನಮ್ಮ ಭೋಜನದ ಸಾಮಗ್ರಿಯಾಗುತ್ತಿದ್ದಿತು. ಆ ಕಾಲದಲ್ಲಿ ನಮಗೆ ಅದುವೆ ಪಂಚಾಮೃತ"[೮೦] ಎಂದು ಹೇಳುವ ಮಾತುಗಳು ಅವರ ಕಷ್ಟದ ಪರಿಸ್ಥಿತಿಯನ್ನು ಕಣ್ಣಮುಂದೆ ತರುವಂತಿದೆ.

"ಆರಂಭದಲ್ಲಿ ನಾವೆಲ್ಲರೂ ಬೆಳಗಾವಿಯ ಖಡೇ ಬಜಾರದಲ್ಲಿಯ ಭೋಜಣ್ಣನವರ ಮನೆಯ ಒಂದು ಕೋಣೆಯಲ್ಲಿ ಇದ್ದು, ಖಾನಾವಳಿಯಲ್ಲಿ ಊಟ ಮಾಡುತ್ತ, ಸೊಸೈಟಿಯ ಸಂಘಟನೆಯನ್ನು ಸಿದ್ಧಪಡಿಸುವುದರಲ್ಲಿ ತೊಡಗಿದ್ದೆವು. ಶ್ರೀ ಭೋಜಣ್ಣನವರ ಮರೆಪ್ಪನವರ ಮಗ ಗುರುಸಿದ್ಧಪ್ಪನವರು ನಮ್ಮ ಸಹಪಾಠಿಗಳು ಹಾಗೂ ಅವರ ತಂಗಿಯವರೇ ಶ್ರೀ ಪಂಡಿತಪ್ಪನವರ ಪತ್ನಿಯು. ಕೆಲವೊಂದು ದಿನಗಳು ಕಳೆದ ಮೇಲೆ ಭೋಜಣ್ಣವರ ವಿಶಾಲವಾದ ಉಪ್ಪರಿಗೆಯ ಮನೆಯನ್ನು ಭಾಡಿಗೆಯಿಂದ ಹಿಡಿದೆವು. ಅದಕ್ಕೆ ತಿಂಗಳಿಗೆ ಕೇವಲ ೧೫ರೂ ಬಾಡಿಗೆ. ಶ್ರೀ ಪಂಡಿತಪ್ಪನವರ ಪತ್ನಿ ಸೌ.ಗೌರಮ್ಮನವರು ನಮ್ಮೆಲ್ಲರಿಗೆ ಊಟ ಉಪಚಾರ ನಡೆಸುತ್ತಾ ಹಗಲಿರುಳು ದುಡಿದರು. ಆಗಲೇ ಅವರಿಗೆ ಒಂದು ಗಂಡುಮಗು ಆಗಿತ್ತು. ಅವರ ಉಪಕಾರವನ್ನು ನಾವು ಎಂದೂ ಮರೆಯುವಂತಿಲ್ಲ. ಆಗ ಪಂಡಿತಪ್ಪನವರೇ ನಮ್ಮೆಲ್ಲರ ವೆಚ್ಚವನ್ನು ನೋಡಿಕೊಳ್ಳುತ್ತಿದ್ದರು. ಅವರು ನೀಡುತ್ತಿರುವ ಕಾನೂನು ಸಲಹೆಗಳಿಗಾಗಿ ಗೋಕಾಕದ ಕಂಪನಿಯೊಂದು ಅವರಿಗೆ ಪ್ರತಿಫಲವಾಗಿ ತಿಂಗಳಿಗೆ ೫೦ರೂಪಾಯಿಗಳನ್ನು ದಯಪಾಲಿಸುತ್ತಿತ್ತು. ಆ ಹಣದಲ್ಲಿಯೇ ನಾವು ಜೀವಿಸುತ್ತಿದ್ದೆವು. ಸೌ.ಗೌರಮ್ಮನವರ ಸಹಾಯಕ್ಕಾಗಿ ಶ್ರೀ ಹಂಚಿನಾಳರು ತಮ್ಮ ಪತ್ನಿಯನ್ನು ಕರೆತಂದರು. ಆಗ ಶ್ರೀ ಬಸವನಾಳ, ಶ್ರೀ ಮಮದಾಪುರ, ಶ್ರೀ ಪಾಟೀಲ ಇವರು ಇನ್ನೂ ಅವಿವಾಹಿತರು. ಅಕ್ಟೋಬರ್ ತಿಂಗಳಲ್ಲಿ ಕಿಲ್ಲೆಯಲ್ಲಿರುವ ಒಂದು ಬಂಗಲೆಯನ್ನು ಭಾಡಿಗೆಯಿಂದ ಶಾಲೆಗಾಗಿ ತೆಗೆದುಕೊಂಡೆವು. ಆ ಬಂಗಲೆಯು ಕೇವಲ ೫೦೦೦ರೂಪಾಯಿಗಳಿಗೆ ಮಾರಲಿಕ್ಕೆ ಇತ್ತು. ಅಷ್ಟು ಹಣ ಕೊಟ್ಟು ಕೊಳ್ಳಬೇಕೆಂದರೆ ನಮ್ಮ ಮುಂದಾಳುಗಳು ಕೊಳ್ಳಲು ಹಿಂದುಮುಂದು ನೋಡಿದ್ದರಿಂದ ಅದನ್ನು ಕೊಳ್ಳುವುದಾಗಲಿಲ್ಲ. ಅದಕ್ಕಾಗಿ ಅದನ್ನು ಭಾಡಿಗೆಯಿಂದ ಹಿಡಿಯಬೇಕಾಯಿತು. ಹೀಗೆ ಭಾಡಿಗೆ ರೂಪದಿಂದ ೧೯೧೬ರಿಂದ ೧೯೩೨ರ ವರೆಗೆ ವಿಪುಲ ಹಣವನ್ನು ತೆರಬೇಕಾದುದು ದುರ್ದೈವ. ಆಮೇಲೆ ಪಂಡಿತಪ್ಪನವರು ಹಾಗೂ ಶ್ರೀ ಹಂಚಿನಾಳವರನ್ನು ಉಳಿದು ನಾವು ಎಲ್ಲರೂ ಕಿಲ್ಲೆಯಲ್ಲಿ ಇರಹತ್ತಿದೆವು. ನಾವೆಲ್ಲರೂ ಕೂಡಿ ಒಟ್ಟಿನಲ್ಲಿ ತಿಂಗಳಿಗೆ ೧೦೦ರೂ ಮಾತ್ರ ವೇತನ ತೆಗೆದುಕೊಳ್ಳುತ್ತಿದ್ದೆವು. ರಾ.ಬ.ಅರಟಾಳರು ಆ ಕಾಲಕ್ಕೆ ಕರ್ನಾಟಕ ಕಾಲೇಜಕ್ಕೆಂದು ಕೂಡಿಸಿ ಬ್ಯಾಂಕಿನಲ್ಲಿಟ್ಟ ೯೦,೦೦೦ರೂಪಾಯಿಯ ಮೇಲಿನ ಬಡ್ಡಿಯಲ್ಲಿ ಸರ್ಕಾರದ ಒಪ್ಪಿಗೆಯಿಂದ ನಮಗೆ ನಾಲ್ಕು ಸಾವಿರ ರೂಪಾಯಿಗಳನ್ನು ದಯಪಾಲಿಸಿದರು. ಆ ಹಣದಿಂದ ಹೈಸ್ಕೂಲನ್ನು ಆರಂಭಿಸಿದೆವು. ನಮ್ಮ ಜೊತೆಗೆ ಕೆಲವೊಂದು ವಿದ್ಯಾರ್ಥಿಗಳೂ ಇರುತ್ತಿದ್ದರು. ಅವರೆಲ್ಲರಿಗೂ ನಾವು ಪಾಲಕರಾಗಿದ್ದವು. ಪೂರ್ಣ ಹೈಸ್ಕೂಲ್ ಆದನಂತರ ಅಂದರೆ ೧೯೧೭ನೆಯ ಜೂನ್ ತಿಂಗಳಿಂದ ಪ್ರತಿಯೊಬ್ಬರೂ ತಿಂಗಳಿಗೆ ೩೫ ರೂಪಾಯಿಯಂತೆ ವೇತನ ಪಡೆಯಲಾರಂಭಿಸಿದೆವು. ೧೯೧೮ನೆಯ ಜೂನ್‌ದಿಂದ ತಿಂಗಳಿಗೆ ೫೦ ರೂಪಾಯಿಯಂತೆ ವೇತನವನ್ನು ತೆಗೆದುಕೊಳ್ಳಹತ್ತಿದೆವು. ಆಗ ನಾವೆಲ್ಲರೂ ಅಣ್ಣ-ತಮ್ಮಂದಿರಂತೆ ಸುಖದಿಂದ ಉಲ್ಲಾಸದಿಂದ ಬಾಳಿದ ಜೀವನವನ್ನು ಎಂದೂ ಮರೆಯಲಾರೆವು."[೮೧]

ಕಟ್ಟೀಮನಿಯವರ ಈ ಮಾತುಗಳಿಂದ ಪಂಡಿತಪ್ಪನವರ ಸ್ನೇಹ, ಸಹಾಯದ ಗುಣಗಳೊಂದಿಗೆ ಸ್ನೇಹಿತರಿಗೆ ತಾಪತ್ರಯ ಬರದಂತೆ ನೋಡಿಕೊಂಡದ್ದು ತಿಳಿಯುತ್ತದೆ. ಜೊತೆಗೆ ಈ ಸಪ್ತರ್ಷಿಗಳು ತಮಗೆ ನೆಲೆಯಿಲ್ಲದ ಪರಿಸ್ಥಿತಿಯಲ್ಲಿ ಮಕ್ಕಳ ಶಿಕ್ಷಣಕ್ಕಾಗಿ ಶಿಕ್ಷಣ ಸಂಸ್ಥೆ ಸ್ಥಾಪಿಸಿದ್ದು; ಬಹಳ ಕಡಿಮೆ ಸಂಬಳದಲ್ಲಿ ದುಡಿದು, ಅರೆಹೊಟ್ಟೆಯನ್ನು ತುಂಬಿಸಿಕೊಳ್ಳಲಾರದ ಪರಿಸ್ಥಿತಿಯಿದ್ದರೂ ಸ್ನೇಹಕ್ಕೆ ಕುಂದಿಲ್ಲದಂತೆ ಬದುಕಿದ್ದು ತಿಳಿಯುತ್ತದೆ.

ಕೆಲವು ವರ್ಷಗಳ ತರುವಾಯ ೧೯೪೧ನೆಯ ಇಸ್ವಿ ಜೂನ್ ತಿಂಗಳ ೨೨ನೆಯ ತಾರೀಖಿನಂದು ಸೊಸೈಟಿಯ ಕಾರ್ಯಗಳನ್ನು ನೋಡಿಕೊಳ್ಳಲು ಶ್ರೀ ಬಿ.ಜಿ.ಗಿಲಗಂಚಿಯವರ ಅಧ್ಯಕ್ಷತೆಯಲ್ಲಿ ಏಳು ಜನರ ಸಮಿತಿಯನ್ನು ನಿಯಮಿಸಲಾಯಿತು. ಇದರಲ್ಲಿ ಶ್ರೀ ಪಿ.ಆರ್ ಚಿಕ್ಕೋಡಿಯವರನ್ನು ಹೊರತುಪಡಿಸಿ ಉಳಿದ ಸಂಸ್ಥಾಪಕ ಆಜೀವ ಸದಸ್ಯರಿಗೆ ಸ್ಥಾನ ಕೊಟ್ಟಿರಲಿಲ್ಲ. ೧೯೪೨ರಲ್ಲಿ ಇದರ ಜೊತೆಗೆ ಇನ್ನೊಂದು ಸಮಿತಿಯನ್ನು ನಿಯಮಿಸಲಾಯಿತು. ಅದರಲ್ಲಿ ಶ್ರೀಮಂತ ಬಿ.ಎಲ್. ಸರದೇಸಾಯಿ ಅಧ್ಯಕ್ಷರಾಗಿದ್ದರು. ಶ್ರೀ.ಬಿ.ಜಿ.ಗಿಲಗಂಚಿ ಮತ್ತು ಶ್ರೀ ಎಸ್.ಎನ್.ಅಂಗಡಿ ಉಪಾಧ್ಯಕ್ಷರು.[೮೨]

ಪಂಡಿತಪ್ಪನವರು ಕೆ.ಎಲ್.ಇ.ಸಂಸ್ಥೆಯ ಅಸ್ತಿತ್ವಕ್ಕೆ ಪ್ರೇರಕಶಕ್ತಿಯಾದವರು. ಸಂಸ್ಥೆಯನ್ನು ಉದ್ಧರಿಸಲು ದೇಣಿಗೆ ಜೋಳಿಗೆಯನ್ನು ಸದಾ ಕೈಯಲ್ಲಿ ಹಿಡಿದುಕೊಂಡೇ ಇದ್ದವರು. ರಾಜಾಲಖಮಗೌಡರಂಥವರಿಗೆ ದಾನ ನೀಡಲು ಪ್ರೋತ್ಸಾಹಿಸಿದವರು. ಪಂಡಿತಪ್ಪ ಮತ್ತು ಅವರ ಸ್ನೇಹಿತರು ನಿಸ್ವಾರ್ಥ, ಪ್ರೇಮ ಮತ್ತು ತ್ಯಾಗಗಳಿಂದ ಕಟ್ಟಿದ ಸಂಸ್ಥೆಯಲ್ಲಿ ಅವರ ಜೀವಿತಾವಧಿಯಲ್ಲಿಯೇ ಅಂತಸ್ತು, ಅಧಿಕಾರಗಳಿಗಾಗಿ ಬಡಿದಾಡಿದ ಪ್ರಸಂಗಗಳನ್ನು ನೋಡುವಂತಾಯಿತು. ಒಮ್ಮನ್ನಸ್ಸಿನಿಂದ ಬೆವರುಹರಿಸಿ ಕಟ್ಟಿದ ಸಂಸ್ಥೆಯಲ್ಲಿ ಇಮ್ಮನಸುಗಳು ಹುಟ್ಟುವಂತಾಯಿತು.

ಪಂಡಿತಪ್ಪನವರು ಸ್ವತಂತ್ರ ಮನೋಭಾವವನ್ನು ಹೊಂದಿದ್ದರು. ಜೊತೆಗೆ ಹಲವಾರು ಸಂಘಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಹೀಗಾಗಿ ಕೆ.ಎಲ್.ಇ.ಸಂಸ್ಥೆಯನ್ನು ಅವರು ಅನಿವಾರ್ಯವಾಗಿ ಬಿಡಬೇಕಾಯಿತು. ಶಿಕ್ಷಕನಾಗಿ ಕೆಲಸ ತೊರೆದರೂ, ಆಜೀವಸದಸ್ಯ ಸ್ಥಾನದಿಂದ ಸಂಸ್ಥೆ ಅವರನ್ನು ಬಿಟ್ಟುಕೊಡಲಿಲ್ಲ. ಅವರ ಜೀವಿತಾವಧಿಯವರೆಗೂ ಕೆ.ಎಲ್.ಇ. ಸಂಸ್ಥೆಯ ಬೆಳವಣಿಗೆಗೆ ಕಾರಣರಾದರು.

೩.೬.೫. ಮದುವೆ:

ಪಂಡಿತಪ್ಪನವರು ಕಾನೂನು ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಬೆಳಗಾವಿಗೆ ಬಂದರು. ತನ್ನ ಸ್ನೇಹಿತರೊಡಗೂಡಿ ಬೆಳಗಾವಿಯ ಕೋಟೆಯಲ್ಲಿ ಒಂದು ಆಂಗ್ಲೋ-ವರ್ನಾಕ್ಯುಲರ್ ಶಾಲೆಯನ್ನು ಸ್ಥಾಪಿಸಿ, ಯುವಸ್ನೇಹಿತರೊಂದಿಗೆ ಹುಮ್ಮಸ್ಸಿನಿಂದ ವಿದ್ಯಾದಾನದ ಕಾರ್ಯಕ್ಕೆ ಕೈಹಾಕಿದರು. ಆದರೆ ಈ ಯುವಕರಿಗೆ ಹೊಟ್ಟೆ ತುಂಬಿಸಿಕೊಳ್ಳುವುದು ತುಂಬಾ ಕಷ್ಟದಾಯಕ ಪರಿಸ್ಥಿತಿ ಆಗಿತ್ತು. ಏಕೆಂದರೆ ಎಲ್ಲರೂ ಬ್ರಹ್ಮಚಾರಿಗಳು ಮತ್ತು ತಮ್ಮತಮ್ಮ ಊರುಗಳನ್ನು ಬಿಟ್ಟು ಏಕಾಂಗಿಯಾಗಿ ಬೆಳಗಾವಿಗೆ ಬಂದವರು. ಹೀಗಾಗಿ ಈ ಅಸಾನುಕೂಲತೆಯನ್ನು ನಿವಾರಿಸಿಕೊಳ್ಳಲು ಪಂಡಿತಪ್ಪನವರು ಮದುವೆಯಾಗಬೇಕಾಯಿತು.

ಬೆಳಗಾವಿಯ ಸುಪ್ರಸಿದ್ಧ ಶ್ರೀಮಂತ ಮನೆತನಗಳಲ್ಲಿ ಭೋಜ ಅವರ ಮನೆತನವೂ ಒಂದು. ಆ ಮನೆತನದ ಗೌರಮ್ಮಳನ್ನು ನೋಡಿ ಮೆಚ್ಚಿದ ಪಂಡಿತಪ್ಪನವರು ಮದುವೆಯಾಗಲು ಬಯಸಿದರು. ಆದರೆ ಹಳೆಯ ಸಂಪ್ರದಾಯದ ರಾಯಪ್ಪನವರಿಗೆ ಈ ಮದುವೆ ಇಷ್ಟವಾಗಲಿಲ್ಲ. ಆದರೆ ಪಂಡಿತಪ್ಪನವರ ಮನದಾಸೆಯನ್ನು ಅರಿತ ತಮ್ಮಣ್ಣಪ್ಪನವರು ಆ ಕನ್ಯೆಯನ್ನು ನೋಡಿಬಂದರು. ಸುಸಂಸ್ಕೃತ ಒಳ್ಳೆಯ ಕುಟುಂಬದ ಗೌರಮ್ಮಳನ್ನು ನೋಡಿ ಅಣ್ಣನ ಮನವೊಲಿಸಿ ಪಂಡಿತಪ್ಪನವರ ಮದುವೆಯನ್ನು ಮಾಡಿದರು.

ಪಂಡಿತಪ್ಪನವರ ಸಹಧರ್ಮಿಣಿಯಾಗಿ ಬಂದ ಗೌರಮ್ಮನವರು ಗಂಡನ ಸಮಾಜಕಾರ್ಯಗಳಿಗೆ ಎಂದೂ ತೊಡಕಾಗದಂತೆ, ಬೇಸರಿಸಿಕೊಳ್ಳದೆ ಜೀವನ ನಡೆಸಿದರು. 'ಅಷ್ಟು ಶ್ರೀಮಂತ ಮನೆತನದವಳಾದರೂ ಪಂಡಿತಪ್ಪನವರ ಸ್ನೇಹಿತರಿಗೆ ಅಡುಗೆ ಮಾಡಿ ಉಣಬಡಿಸುವ ಅನ್ನಪೂರ್ಣೆಯಾದರು.[೮೩]

ಪಂಡಿತಪ್ಪನವರು ಅನೇಕ ಸಮಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದುದರಿಂದ ಮನೆಗೆ ಬರುವ ಅತಿಥಿಗಳ ಸಂಖ್ಯೆಯೂ ಗಣನೀಯವಾಗಿತ್ತು. ಗೌರಮ್ಮನವರು ಬಂದ ಅತಿಥಿಗಳನ್ನು ಎಂದೂ ಹಾಗೆಯೇ ಕಳುಹಿಸಿದವರಲ್ಲ. ಆದರಾತಿಥ್ಯ ಮಾಡುವುದು ಸಹಜವೆಂಬಂತೆ ತಿಳಿದುಕೊಂಡಿದ್ದರು.

೩.೬.೬. ಕುಟುಂಬ ಜೀವನ:

ಪಂಡಿತಪ್ಪ ಮತ್ತು ಗೌರಮ್ಮನವರಿಗೆ ಒಟ್ಟು ಒಂಬತ್ತು ಜನ ಮಕ್ಕಳು. ಶಿವಪ್ಪ, ರಾಜಶೇಖರ, ಗಂಗಾಧರ, ಪ್ರಿಯಂವದಾ, ಸರೋಜಿನಿ, ಶಾಂತವೀರಪ್ಪ, ಚಂದ್ರಶೇಖರ, ಮಲ್ಲಿಕಾರ್ಜುನ ಹಾಗೂ ರುದ್ರಪ್ಪ.

ಶಿವಪ್ಪನವರಿಗೆ ಬನಹಟ್ಟಿಯ ಶ್ರೀ ಚೆನ್ನಮಲ್ಲಪ್ಪ ಅಬಕಾರರವರ ಹಿರಿಯಮಗಳು ಅಲ್ಲವ್ವ(ಪಾರ್ವತಿ)ಯನ್ನು ತೆಗೆದುಕೊಂಡಿದ್ದರು. ಆಗಲೇ ಪಂಡಿತಪ್ಪನವರು ಸಾರ್ವಜನಿಕ ರಂಗದಲ್ಲಿ ಒಳ್ಳೆಯ ಹೆಸರನ್ನು ಗಳಿಸಿಕೊಂಡಿದ್ದರು. ಸಂಸ್ಥಾನಿಕರ ಆಸ್ಥಾನದಲ್ಲಿಯೂ ಗಣ್ಯವ್ಯಕ್ತಿಯಾಗಿದ್ದುದರಿಂದ ಇವರ ಮದುವೆಯನ್ನು ಬಹಳ ವಿಜೃಂಭಣೆಯಿಂದ ಮಾಡಿದರು. ಈ ಮದುವೆಗಾಗಿ ರಬಕವಿಯ ಶ್ರೀ ರಾಮಪ್ಪ ಚಿಕ್ಕೋಡಿಯವರು ಧನಸಹಾಯ ಮಾಡಿದ್ದರು. 'ತಮ್ಮ ಅಕ್ಕನ ಮದುವೆಗೆ ಕೊಲ್ಲಾಪುರ ಸಂಸ್ಥಾನದ ರಾಜರು ಬಂದಿದ್ದು, ಸಾರೋಟದಲ್ಲಿ ನಡೆದ ಸಂಭ್ರಮದ ಮೆರವಣಿಗೆಯು ಇಂದಿಗೂ ಕಣ್ಣಮುಂದೆ ಬರುತ್ತದೆ. ಯಾವ ಶ್ರೀಮಂತ ಮದುವೆಗೂ ಕಡಿಮೆ ಇರಲಿಲ್ಲ' ಎಂದು ಬನಹಟ್ಟಿಯ ಶ್ರೀ ಅನ್ನಪೂರ್ಣ ಬಾಣಕಾರ ಅವರು ಜ್ಞಾಪಿಸಿಕೊಳ್ಳುತ್ತಾರೆ.[೮೪] ಚಿಕ್ಕಪ್ಪ ತಮ್ಮಣ್ಣಪ್ಪನವರ ಗೌರವಾದರ ಕಾರಣಗಳಿಂದ, ಅವರ ಹೆಣ್ಣುಮೊಮ್ಮಗಳನ್ನು ತಮ್ಮ ಹಿರಿಯ ಮಗನಿಗೆ ತಂದುಕೊಂಡು ಪಂಡಿತಪ್ಪನವರು ಕೃತಜ್ಞತೆ ತೋರಿಸಿದರು.

ಶ್ರೀ ರಾಜಶೇಖರ ಅವರಿಗೆ ಶ್ರೀ ಗುಗ್ಗಳಿ ಜಡ್ಜ ಅವರ ಮಗಳು ಸುಲೋಚನಾಳನ್ನು ತಂದುಕೊಳ್ಳಲಾಗಿತ್ತು. ಶಾಂತವೀರಪ್ಪ ಎಂಬುವನು ಮಂದಬುದ್ಧಿಯವನಾಗಿದ್ದು, ಅವಿವಾಹಿತನಾಗಿ

ಸತ್ತನು. ಶ್ರೀ ರುದ್ರಪ್ಪನವರು ಇಚಲಕರಂಜಿಯ ಪಾಟೀಲ ಅವರ ಮಗಳು ಶಕುಂತಲಾ ಅವರನ್ನು ಮದುವೆಯಾಗಿದ್ದರು. ಮಲ್ಲಿಕಾರ್ಜುನ ಅವರಿಗೆ ಅಥಣಿ ತಾಲೂಕಿನ ಗಳತಗಾದ ಶೋಭಾ ಅವರನ್ನು ತಂದುಕೊಂಡಿದ್ದರು. ಈಗ ಪಂಡಿತಪ್ಪನವರ ಮಕ್ಕಳೂ ಉಳಿದಿಲ್ಲ.

ಸಮಾಜಮುಖೇನ ಕಾರ್ಯಗಳಲ್ಲಿ ತೊಡಗಿದ ಪಂಡಿತಪ್ಪನವರಿಗೆ ಗೌರಮ್ಮನವರಂತಹ ಜವಾಬ್ದಾರಿ ಹೆಂಡತಿ ದೊರೆತ ಕಾರಣ, ಅವರಿಗೆ ಎಂದೂ ಮನೆಯ ಹೊಣೆ ಹೊತ್ತುಕೊಳ್ಳುವ ಸಂದರ್ಭವೇ ಬರಲಿಲ್ಲ. ಪಂಡಿತಪ್ಪನವರ ಬಿಡುವಿಲ್ಲದ ಕೆಲಸಗಳ ಸಲುವಾಗಿ ಮನೆಯ ಜವಾಬ್ದಾರಿಯನ್ನು ಅನಿವಾರ್ಯವಾಗಿ ಹಿರಿಯ ಮಗ ಶಿವಪ್ಪನು ಹೊತ್ತುಕೊಳ್ಳಬೇಕಾಯಿತು.

ರಾಜಶೇಖರನು ತನ್ನ ತಂದೆಯ ಔದ್ಯೋಗಿಕ ಸಹಕಾರ ಕೇಂದ್ರದಲ್ಲಿ ನೌಕರಿಯನ್ನು ಮಾಡುತ್ತಿದ್ದನು. ರುದ್ರಪ್ಪ ಮತ್ತು ಮಲ್ಲಿಕಾರ್ಜುನರು ವಯಸ್ಸಿಗೆ ಬರುವ ಹೊತ್ತಿಗೆ ಪಂಡಿತಪ್ಪನವರ ಆರ್ಥಿಕ ಪರಿಸ್ಥಿತಿ ತುಂಬಾ ಹದಗೆಟ್ಟಿತ್ತು. ಹೀಗಾಗಿ ಮನೆಯ ಪರಿಸ್ಥಿತಿಯ ಹೀನಾವಸ್ಥೆಯನ್ನು ಕಂಡ ಈ ಸಹೋದರರು ಅನಿವಾರ್ಯವಾಗಿ ಸೈನ್ಯವನ್ನು ಸೇರಿದರು.

೩.೬.೭. ಗುಣ–ಸ್ವಭಾವ:

ಪಂಡಿತಪ್ಪನವರದು ನೋಡಲು ಆಕರ್ಷಕ ವ್ಯಕ್ತಿತ್ವ, ಮಧ್ಯಮ ನಿಲುವು, ಅಗಲವಾದ ಮುಖ, ನೀಳವಾದ ಮೂಗು, ಅಗಲವಾದ ಏರು ಹಣೆ. ಹತ್ತು ಜನರಲ್ಲಿ ಎದ್ದು ಕಾಣುವಂತಹ ಪ್ರತಿಭಾನ್ವಿತ ವ್ಯಕ್ತಿತ್ವ. 'ಪಂಡಿತಪ್ಪನವರು ಒಂದಿಷ್ಟು ಗಂಭೀರ ಸ್ವಭಾವದವರು. ಅವರು ಗಹಗಹಿಸಿ ನಕ್ಕಿದ್ದನ್ನು ನೋಡಿಯೇ ಇಲ್ಲವೆಂದು ಬಲ್ಲವರು ಹೇಳುತ್ತಾರೆ. ಯಾರ ಜೊತೆಯಲ್ಲಿಯಾದರೂ ಮಾತನಾಡುವುದಿದ್ದರೆ, ಮುಖ್ಯವಿಷಯ ಬಿಟ್ಟು ಅನಾವಶ್ಯಕವಾಗಿ ಬಾಯಿ ಬಿಟ್ಟವರಲ್ಲ. ಹರಟೆ ಅವರಿಗೆ ಗೊತ್ತಿರಲೇ ಇಲ್ಲ. ಹೆಚ್ಚು ಬಳಬಳ ಮಾತನಾಡಿದವರೇ ಅಲ್ಲ. ತೂಕದ ಮಾತುಗಳು ಎಷ್ಟು ಬೇಕು ಅಷ್ಟೇ.[೮೫]

ಮನೆಯಲ್ಲಿಯೂ ಕೂಡಾ ಅಷ್ಟೇ. ಪತ್ನಿ ಗೌರಮ್ಮನವರನ್ನು ಬಿಟ್ಟರೆ ಯಾರ ಜೊತೆಯೂ ಅಷ್ಟೊಂದು ಸಲುಗೆಯಿಂದ ಮಾತನಾಡಿಸುತ್ತಿರಲಿಲ್ಲ. ಸ್ವತಃ ಅವರ ಮಕ್ಕಳೇ ತಂದೆಯ ಎದುರಿಗೆ ನಿಂತು ಧೈರ್ಯದಿಂದ ಮಾತನಾಡುತ್ತಿರಲಿಲ್ಲವಂತೆ. ಸೊಸೆಯಂದಿರಂತೂ ಮಾವ ಬಂದರೆ ತಗ್ಗಿಸಿದ ತಲೆಯನ್ನು ಎತ್ತುತ್ತಿರಲಿಲ್ಲವಂತೆ.[೮೬]

೩.೬.೮. ಆಸಕ್ತಿ–ಅಭಿರುಚಿ:

ಪಂಡಿತಪ್ಪನವರು ಶಿಸ್ತು ಹಾಗೂ ಅಚ್ಚುಕಟ್ಟುತನವನ್ನು ಬಹಳವಾಗಿ ಮೆಚ್ಚುತ್ತಿದ್ದರು. ಪಂಡಿತಪ್ಪನವರ ವೇಷಭೂಷಣಗಳಲ್ಲಿ ಅಚ್ಚುಕಟ್ಟುತನ ಎದ್ದು ಕಾಣುತ್ತಿತ್ತು. ಮನೆಯಲ್ಲಿ ಧೋತರ ಶರ್ಟು, ವಿಶೇಷ ಪ್ರಸಂಗಗಳಲ್ಲಿ ಪ್ಯಾಂಟ–ಕೋಟು, ಒಮ್ಮೊಮ್ಮೆ ರುಮಾಲು ಧರಿಸುತ್ತಿದ್ದುದಾಗಿ ತಿಳಿದುಬರುತ್ತದೆ. ಪಂಡಿತಪ್ಪನವರು ಗಣ್ಯವ್ಯಕ್ತಿಗಳ ಸಾಲಿನಲ್ಲಿ ನಿಲ್ಲುವಾಗ ಬಹಳ ನೀಟಾಗಿ ಡ್ರೆಸ್ ಮಾಡಿಕೊಳ್ಳುತ್ತಿದ್ದರಂತೆ. ದುಬಾರಿ ಬಟ್ಟೆಗಳನ್ನು ಧರಿಸುವುದು ಅವರ ಹವ್ಯಾಸವಾಗಿತ್ತಂತೆ. ಹೀಗಾಗಿ ಸಾಕಷ್ಟು ದಿರಿಸುಗಳನ್ನು

ಇಟ್ಟಿದ್ದನ್ನು ಸೊಸೆ ಶಕುಂತಲಾ ಅವರು ಹೇಳುತ್ತಾರೆ. ಒಂದು ದೊಡ್ಡ ಕಪಾಟಿನ ತುಂಬಾ ಪಂಡಿತಪ್ಪನವರ ದಿರಿಸುಗಳು ಇದ್ದುವಂತೆ. ಕೋಟಿಗೆ ತಕ್ಕ ಹಾಗೆ ನಾನಾ ತರಹದ ಟೈ(ಕೊರಳಪಟ್ಟಿ)ಯನ್ನು ಧರಿಸುಕೊಳ್ಳುವುದು ಪಂಡಿತಪ್ಪನವರ ವೈಖರಿಯಾಗಿತ್ತು.

ತಮ್ಮ ಶಿಸ್ತಿನ ಪದ್ಧತಿಯಂತೆ ಬೇರೆಯವರಿಂದಲೂ ಅದನ್ನೇ ನಿರೀಕ್ಷಿಸುತ್ತಿದ್ದರು. ಎಲ್ಲ ಕೆಲಸಗಳು ಅಚ್ಚುಕಟ್ಟುತನದಿಂದ ನೆರವೇರಬೇಕು. ಅವರ ನಿರೀಕ್ಷೆಯಂತೆಯೇ ಪಂಡಿತಪ್ಪನವರ ಹೆಂಡತಿ ಗೌರಮ್ಮ ನಡೆಯಿಸಿಕೊಂಡು ಹೋಗುತ್ತಿದ್ದರು.[೮೭]

ಪಂಡಿತಪ್ಪನವರ ಕೈಬರಹ ಅತ್ಯಂತ ಸುಂದರ ಮತ್ತು ಅಷ್ಟೇ ಸ್ಪಷ್ಟ. ಕೈಬರಹಕ್ಕೆ ತಕ್ಕಂತೆ ಶ್ರೇಷ್ಠಮಟ್ಟದ ಪೆನ್ನುಗಳನ್ನು ಬಳಸುತ್ತಿದ್ದುದು ಅವರ ಪ್ರೀತಿಯ ವಿಷಯವಾಗಿತ್ತು. ಸ್ಪಷ್ಟ ಬರಹಕ್ಕೆ ಹೆಸರಾದ ಪಂಡಿತಪ್ಪನವರು ಕೆ.ಎಲ್.ಇ.ಸಂಸ್ಥೆಯ ಆಡಳಿತದಲ್ಲಿ ಬರಹಕ್ಕೆ ಸಂಬಂಧಿಸಿದ ಕಾರ್ಯವನ್ನು ತಾವೇ ನಿರ್ವಹಿಸುತ್ತಿದ್ದರು. ಪಂಡಿತಪ್ಪನವರು ಕಾರ್ಯದರ್ಶಿಯಾಗಿರುವ ತನಕ ಸ್ವತಃ ಪಂಡಿತಪ್ಪನವರ ಕೈಬರಹಗಳಿಂದ ಬರೆದ ಪತ್ರಗಳು ದೊರೆಯುತ್ತವೆ. ಆ ಪತ್ರದಲ್ಲಿರುವ ವಿಷಯ, ಅಕ್ಷರ, ಶಬ್ದ, ವಾಕ್ಯ ಬಹು ಸುಸ್ಪಷ್ಟ. ಲೆಖ್ಖಪತ್ರ, ಪತ್ರವ್ಯವಹಾರಕ್ಕೆ ಪ್ರಸಿಧ್ಧಿ ಪಡೆದ ಪಂಡಿತಪ್ಪನವರು ಎಂದೂ ಸಾದಾ ಪೆನ್ ಬಳಸುತ್ತಿದ್ದಿಲ್ಲ. ಪಾರ್ಕರ್ ಪೆನ್ನಿನಿಂದ ಬರೆಯುವ ಅವರು 'ಪಾರ್ಕರ್ ಕ್ವಿಂಕ್' ಮಸಿಯನ್ನು ಉಪಯೋಗಿಸುತ್ತಿದ್ದರು.

ರಬಕವಿಯಿಂದ ತಮ್ಮ ಚಿಕ್ಕಪ್ಪ ಯಾರಾದರೂ ವಿದ್ಯಾವಂತ ಯುವಕರನ್ನು ನೌಕರಿಗಾಗಿ ಪತ್ರ ಬರೆದು ಕಳುಹಿಸಿದರೆ ಅವರು ಯೋಗ್ಯವೆನಿಸಿದರೆ ಪಂಡಿತಪ್ಪನವರು ಶಿಪಾರಸ್ಸು ಪತ್ರ ಬರೆದು ಕೊಡುತ್ತಿದ್ದರು. ಆ ಸುಂದರ ಬರಹದ ಪತ್ರದ ಬರಹವನ್ನು ಕಂಡು ಅಚ್ಚರಿಪಟ್ಟಿದ್ದನ್ನು ವಯೋವೃದ್ಧರಾದ ಶ್ರೀ ಬಿ.ಎಂ.ಮನವಳ್ಳಿ ಗುರುಗಳು ಇಂದಿಗೂ ಜ್ಞಾಪಿಸಿಕೊಳ್ಳುತ್ತಾರೆ.[೮೮] ವೈಯಕ್ತಿಕವಾಗಿ ಪತ್ರ ಬರೆಯುವಾಗ ಕಾಗದದ ಬಲಗಡೆಯ ಮೂಲೆಗೆ 'MBE'(Member Of British Empire) ಎಂದು ಲಿಖಿಸುತ್ತಿದ್ದರು. (೩–೪)

ಬನಹಟ್ಟಿಗೆ ಕೊಲ್ಲಾಪುರ ರಾಜನು ಕೊಟ್ಟ ಫೋರ್ಡ್ ಕಾರಿನಲ್ಲಿ ಬರುತ್ತಿದ್ದರು. ಆಗ ಕಮಿಷನರ್ ಬಂದಂತೆ ಬರುತ್ತಿದ್ದರು. ಅವರ ಶಿಸ್ತಿನ ಗಂಭೀರ ನಡಿಗೆ, ಶಿಸ್ತಿನಿಂದ ಎದ್ದು ಕಾಣುವ ಧಿರಿಸು, ಕೊರಳಲ್ಲಿ ಕೊರಳಪಟ್ಟಿ, ಕಾಲಲ್ಲಿ ಮಿರಮಿರಮಿಂಚುವ ಬೂಟುಗಳು, ಎಡಗೈಯಲ್ಲಿ ಬಂಗಾರ ಬಣ್ಣದ ದುಬಾರಿ ವಾಚು, ಎಡಗೈ ಬೆರಳಲ್ಲಿ ಎದ್ದು ಕಾಣುವ ಉಂಗುರ, ಶಿಸ್ತಿನಿಂದ ನೀಟಾಗಿ ಬಾಚಿದ ತಲೆ, ಎಲ್ಲಿಯೂ ಒಂದಿನಿತು ಕೊಂಕಿಲ್ಲದೆ ಸಿದ್ಧರಾಗಿರುತ್ತಿದ್ದರು. ಅವರ ಶಿಸ್ತಿನ ವೈಖರಿಯನ್ನು ಕಂಡು ಬನಹಟ್ಟಿಯ ಜನತೆ ಬೆರಗಾಗುತ್ತಿದ್ದರು. ತಲೆಯ ಮೇಲೆ ಹ್ಯಾಟ್‌ನ್ನು ಧರಿಸಿಕೊಂಡು ಬರುತ್ತಿದ್ದರು. ಮಾತನಾಡುವಾಗ ಎಡಗೈಯಲ್ಲಿ ಹ್ಯಾಟನ್ನು ಹಿಡಿದುಕೊಂಡು ಮಾತನಾಡುವ ಪರಿಯೇ ಚೆಂದವಾಗಿತ್ತು ಎನ್ನುತ್ತಾರೆ ಬನಹಟ್ಟಿಯ ಗ್ರಾಮಸ್ಥರು.

ಪಂಡಿತಪ್ಪನವರು ಬ್ರಿಟಿಷ್ ಅಧಿಕಾರಿಗಳು, ಸಂಸ್ಥಾನಿಕರು, ನಾಡಿನ ಗಣ್ಯರೊಂದಿಗೆ ಸುಮಧುರ ಬಾಂಧವ್ಯವನ್ನಿಟ್ಟುಕೊಂಡಿದ್ದರು. ಪಂಡಿತಪ್ಪನವರು ಯಾರಲ್ಲಿಯೇ ಹೋದರೂ ಅವರ ವ್ಯವಹಾರದ ಸಮಸ್ಯೆಗಳನ್ನು ಬಗೆಹರಿಸಿಕೊಟ್ಟು ಬರುತ್ತಿದ್ದರು. ಆಗೆಲ್ಲಾ ಪಂಡಿತಪ್ಪನವರಿಗೆ ಉಡುಗೊರೆಯಾಗಿ ಅಪರೂಪದ ವಸ್ತುಗಳನ್ನು ಕೊಡುತ್ತಿದ್ದರು. ನಾನಾತರಹದ ಸುಂದರ ಕೆತ್ತನೆಯ ಕಟ್ಟಿಗೆಯ ಸಾಮಾನುಗಳು ಮನೆಯಲ್ಲಿ ಸಾಕಷ್ಟು ತುಂಬಿದ್ದುದನ್ನು ಸೊಸೆ ಶ್ರೀಮತಿ ಶಕುಂತಲಾ ರುದ್ರಪ್ಪ ಚಿಕ್ಕೋಡಿ ಅವರು ನೆನೆಯುತ್ತಾರೆ.

ಮನೆಯಲ್ಲಿ ಅಲಂಕಾರಿಕ ಸಾಮಾನುಗಳನ್ನು ಇಡುವುದು ಅವರಿಗೆ ಇಷ್ಟವಾಗುತ್ತಿತ್ತು. ಸುಂದರವಾದ ಗಡಿಯಾರ, ಕಲಾತ್ಮಕವಾದ ಅಪರೂಪದ ವಸ್ತುಗಳನ್ನು ಕಲೆ ಹಾಕಿದ್ದರು. ಪಂಡಿತಪ್ಪನವರಿಗೆ ಫೋಟೋ ತೆಗೆಯಿಸಿಕೊಳ್ಳುವ ಹವ್ಯಾಸವಿತ್ತು. ತಮ್ಮ ಕುಟುಂಬದವರೊಂದಿಗೆ, ವಿಶೇಷ ಅತಿಥಿಗಳೊಂದಿಗೆ ಫೋಟೋ ತೆಗೆಯಿಸಿಕೊಳ್ಳುತ್ತಿದ್ದರು. ಅವುಗಳನ್ನು ಗೋಡೆಯ ಮೇಲೆ ತೂಗುಹಾಕಿದ್ದರು. ದಾಖಲೆಯಾಗಿಡುವ ನಿಟ್ಟಿನಲ್ಲಿ ತೆಗೆಯಿಸಿದ ಫೋಟೋಗಳು ಇಂದಿನವರ ಇತಿಹಾಸಪ್ರಜ್ಞೆಯ ಕೊರತೆಯಿಂದ ಹಾಳಾಗಿ ಹೋಗಿರುವುದು ವಿಷಾದಕರ ಸಂಗತಿ.

ಪಂಡಿತಪ್ಪನವರು ಪ್ರಕಾಂಡ ಪ್ರತಿಭಾವಂತರು. ಬಾಲ್ಯದಿಂದಲೇ ತಮ್ಮ ಚಿಕ್ಕಪ್ಪ ತಮ್ಮಣ್ಣಪ್ಪನವರಿಂದ ಓದಿನ ಹುಚ್ಚು ಹಿಡಿಸಿಕೊಂಡವರು. 'ಪಂಡಿತಪ್ಪನವರು ಮಾತೃಭಾಷೆ ಕನ್ನಡದಂತೆಯೇ ಇಂಗ್ಲಿಷ್ ಹಾಗೂ ಮರಾಠಿ ಭಾಷೆಗಳಲ್ಲಿ ಪ್ರಭುತ್ವ ಹೊಂದಿದವರು. ಅಷ್ಟೇ ನಿರರ್ಗಳವಾಗಿ ಮಾತನಾಡಬಲ್ಲವರಾಗಿದ್ದರು.[೮೯] ಈ ಮೂರು ಭಾಷೆಗಳಲ್ಲಿ ಪ್ರಕಟವಾಗುವ ಪುಸ್ತಕಗಳು ಮತ್ತು ಪತ್ರಿಕೆಗಳನ್ನು ಸ್ವತಃ ತರಿಸಿ ಓದುತ್ತಿದ್ದರು. ಪಂಡಿತಪ್ಪನವರು ಹಗಲೆಲ್ಲಾ ಪ್ರವಾಸದಲ್ಲಿರುತ್ತಿದ್ದರು. ಅದರಲ್ಲೂ ೧೪ ವರ್ಷಗಳ ಕಾಲ ಮುಂಬಯಿಯ ಲೆಜೆಸ್ಲೇಟಿವ್ ಕೌನ್ಸಿಲರು ಆದ ಸಂದರ್ಭದಲ್ಲಿ ಹಲವಾರು ಬಾರಿ ಮುಂಬಯಿಗೆ ಹೋಗುವ ಪ್ರಸಂಗ ಬರುತ್ತಿತ್ತು. ಆಗ ಅವರು ದೊಡ್ಡದೊಡ್ಡ ಗ್ರಂಥಗಳನ್ನು ಓದುತ್ತಿದ್ದರು. ದೀರ್ಘ ಪ್ರವಾಸದ ಸಮಯವನ್ನು ಓದಿಯೇ ಕಳೆಯುತ್ತಿದ್ದರು.[೯೦]

ಬನಹಟ್ಟಿಗೆ ಬಂದಾಗಲೂ ಕೂಡಾ ಪುಸ್ತಕಗಳ ರಾಶಿಯನ್ನೇ ತರುತ್ತಿದ್ದರು. ತಾವು ಓದಿದ ಪುಸ್ತಕಗಳ ಬಗ್ಗೆ ತಮ್ಮಣ್ಣಪ್ಪನವರ ಹತ್ತಿರ ಚರ್ಚೆ ಮಾಡುತ್ತಿದ್ದರು. ಪತ್ರಿಕೆಗಳಲ್ಲಿ ಬಂದ ದೇಶ, ವಿದೇಶಗಳ ವಿದ್ಯಮಾನಗಳನ್ನು ಚರ್ಚಿಸುವುದರಿಂದ ಬನಹಟ್ಟಿಯ ಜನತೆಗೆ ಬಹಳ ಸಂತಸವೆನಿಸುತ್ತಿತ್ತು. ತಮ್ಮಣ್ಣಪ್ಪನವರಿಂದ ಓದಿನ ಗೀಳು ಹಚ್ಚಿಕೊಂಡ ಕೆಲವು ಜನರು ಆ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ತಮ್ಮಣ್ಣಪ್ಪನವರು ತಮಗೆ ಬೇಕಾದ ಎಷ್ಟೋ ವಿಶೇಷ ಪುಸ್ತಕಗಳನ್ನು ಪಂಡಿತಪ್ಪನವರಿಂದ ತರಿಸಿಕೊಳ್ಳುತ್ತಿದ್ದರು. ಕೆಲವೊಂದು ವೇಳೆ ಪಂಡಿತಪ್ಪನವರಿಂದಲೇ ವಿಶೇಷ ಜ್ಞಾನವನ್ನು ತಮ್ಮಣ್ಣಪ್ಪನವರು ಮತ್ತು ಬನಹಟ್ಟಿಯ ಜನತೆ ಪಡೆದುಕೊಂಡದ್ದಿದೆ.

ಪಂಡಿತಪ್ಪನವರು ತೀರಿದ ಮೇಲೆ ಕಪಾಟು ಸಮೇತವಾಗಿ ಪುಸ್ತಕಗಳು ಬೇರೆ ಬೇರೆ ಸಂಸ್ಥೆಗಳ ಗ್ರಂಥಾಲಯಗಳಿಗೆ ಕಾಣಿಕೆಯಾಗಿ ಹೋಗಿವೆ. ಬೋರ್ಡಿಂಗ್ ಸ್ಕೂಲು ಗ್ರಂಥಾಲಯಗಳಿಗೂ, ನಾಗನೂರು ರುದ್ರಾಕ್ಷಿ ಮಠದ ವಿದ್ಯಾರ್ಥಿ ನಿಲಯದ ಗ್ರಂಥಾಲಯಕ್ಕೂ ಕಾಣಿಕೆ ನೀಡಿದುದಾಗಿ ತಿಳಿಯುತ್ತದೆ.

೩.೬.೯. ಪಂಡಿತಪ್ಪನವರ ಕೊನೆಯ ದಿನಗಳು:

ಒಂದು ಕಾಲಕ್ಕೆ ಬಡತನದಲ್ಲಿ ಬಾಳಿ–ಬದುಕಿದ ಪಂಡಿತಪ್ಪನವರು ಮುಂದೆ ಸಮಾಜದಲ್ಲಿ ಒಬ್ಬ ಶ್ರೀಮಂತ ಗಣ್ಯವ್ಯಕ್ತಿಯಾಗಿ ಬೆಳೆದರು. ಕೊಲ್ಲಾಪುರ, ಸಾಂಗ್ಲಿ ಮತ್ತು ಜಮಖಂಡಿ ಸಂಸ್ಥಾನಗಳಲ್ಲಿ ಲೆಖ್ಖಪತ್ರ ನೋಡಿಕೊಳ್ಳುವ ವ್ಯವಹಾರ, ಮುಂಬಯಿಯ ಶಾಸನ ಸಭೆಯ ಸದಸ್ಯರು, ಬೆಳಗಾವಿ ಜಿಲ್ಲಾ ಲೋಕಲ್ ಬೋರ್ಡ್‌ದ ಅಧ್ಯಕ್ಷರು, ಬೆಳಗಾವಿ ಔದ್ಯೋಗಿಕ ಸಹಕಾರ ಮಂಡಳಿಯ ಅಧ್ಯಕ್ಷರು ಇತ್ಯಾದಿ ಒಂದಲ್ಲ, ಎರಡಲ್ಲ. ಹಲವಾರು ಕ್ಷೇತ್ರಗಳಲ್ಲಿ ಅಪರಿಮಿತ ಸೇವೆಗೈದ ಪಂಡಿತಪ್ಪನವರು ಸಹಜವಾಗಿ ಶ್ರೀಮಂತಿಕೆಯನ್ನು ಅನುಭವಿಸಿದ್ದರು. ಪಂಡಿತಪ್ಪನವರು ಸೇವೆ ಮೆಚ್ಚಿ ಸಂಸ್ಥಾನಿಕರು ಅನೇಕ ಭೂಮಿಗಳನ್ನು ಉಂಬಳಿಯಾಗಿ ಕೊಟ್ಟಿದ್ದರು. ಪಂಡಿತಪ್ಪನವರು ತಾವು ಗಳಿಸಿದ ಆಸ್ತಿ, ಸಂಪತ್ತನ್ನು ತಮ್ಮ ಭವಿಷ್ಯತ್ತಿಗೆ ಇಡಬೇಕು ಎಂಬುದನ್ನು ಆಲೋಚಿಸಲಿಲ್ಲ. ವಯಸ್ಸಾದಂತೆ ರಾಜಕೀಯ, ಸಂಘಸಂಸ್ಥೆಗಳ ಸಂಬಂಧಗಳನ್ನು ಕಡಿದುಕೊಳ್ಳುತ್ತಾ ನಡೆದ ಪಂಡಿತಪ್ಪನವರಿಗೆ ಅವರ ಕೊನೆಗಾಲದಲ್ಲಿ ಸಾಕಷ್ಟು ಆರ್ಥಿಕ ಅಭದ್ರತೆ ಕಾಡಿತು. ಅದರಲ್ಲಿಯೂ ಒಂಬತ್ತು ಮಕ್ಕಳ ಜವಾಬ್ದಾರಿ, ಸೊಸೆಯಂದಿರು, ಮೊಮ್ಮಕ್ಕಳು ಕೂಡುಕುಟುಂಬ ಹೊಂದಿದ್ದ ಪಂಡಿತಪ್ಪನವರಿಗೆ ಕೊನೆಗೆ ಕುಟುಂಬದವರ ಹೊಟ್ಟೆ ತುಂಬಿಸುವುದೇ ಕಷ್ಟದಾಯಕವಾಗಿತ್ತು.

ಅಂತಹುದರಲ್ಲಿ ಶೆಟ್ಟಿಗಲ್ಲಿಯಲ್ಲಿ ಗಿಲಗಂಚಿಯವರ ಮನೆಯಲ್ಲಿ ಭಾಡಿಗೆ ಇದ್ದ ಪಂಡಿತಪ್ಪನವರಿಗೆ ರಾಜಕೀಯ ವೈಷಮ್ಯದ ಕಾರಣವಾಗಿ ಆ ಮನೆಯನ್ನು ಬಿಡುವ ಪ್ರಸಂಗ ಬಂದೊದಗಿತು. ಅನಿವಾರ್ಯವಾಗಿ ಟಿಳಕವಾಡಿಯ ತಮ್ಮ ಮನೆಗೆ ಬಂದು ನೆಲಸಿದರು. ಆದರೆ ಮನಶಾಂತಿಯೇ ಇಲ್ಲದಾಯಿತು. ದೊಡ್ಡ ಕುಟುಂಬ. ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿದ್ದುದರಿಂದ ಮಕ್ಕಳ ಉನ್ನತ ಶಿಕ್ಷಣದ ಕಡೆಗೆ ಗಮನ ಕೊಡಲಾಗಲಿಲ್ಲ. ಹಿರಿಯ ಮಗ ಶಿವಪ್ಪನಂತೂ ಮನೆ ವ್ಯವಹಾರವನ್ನು ನೋಡಿಕೊಳ್ಳಲೆಂದೇ ನಿಯೋಜಿತನಾಗಿದ್ದ. ತಂದೆ ದುಡ್ಡು ಕೊಟ್ಟಿದ್ದರಲ್ಲಿ ಮನೆ ನಡೆಸಿಕೊಂಡು ಹೋಗುವವನು. ಮಲ್ಲಿಕಾರ್ಜುನ ಮತ್ತು ರುದ್ರಪ್ಪ ಇವರೀರ್ವರೂ ವಯಸ್ಸಿನಿಂದ ಚಿಕ್ಕವರು. ರಾಜಶೇಖರ ಮಾತ್ರ ದುಡಿಯುವವ. ಅದು ದೊಡ್ಡ ನೌಕರಿಯಲ್ಲ. ಯಾವ ಕಡೆಯಿಂದಲೂ ಆರ್ಥಿಕ ಸಂಪತ್ತು ದೊರೆಯದಾಯಿತು. ಪಂಡಿತಪ್ಪನವರು ಒಳಗೊಳಗೆ ನೊಂದುಕೊಂಡರು. ಆದರೂ ಎಂದಿಗೂ ಯಾರ ಹತ್ತಿರವೂ ತಮ್ಮ ನೋವನ್ನು ಹೇಳಿಕೊಂಡವರಲ್ಲ. ಮೊದಲೇ ಮಾತು ಕಡಿಮೆ. ಟಿಳಕವಾಡಿ ಮನೆಗೆ ಬಂದ ಮೇಲಂತೂ ಮಾತು ಸಂಪೂರ್ಣವಾಗಿ ನಿಂತುಹೋಯಿತು. ಸುಮ್ಮನೆ ಆರಾಮಖುರ್ಚಿಯಲ್ಲಿ ಕುಳಿತುಬಿಡುತ್ತಿದ್ದರು ಎಂದು ನೋವಿನಿಂದ ಶ್ರೀ ರುದ್ರಪ್ಪ ಚಿಕ್ಕೋಡಿಯವರು ಹೇಳುತ್ತಾರೆ.

ಹಲವಾರು ಸಂಘಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಪಂಡಿತಪ್ಪನವರು ತಮ್ಮ ಕೊನೆಗಾಲದಲ್ಲಿ ನಿಷ್ಕ್ರಿಯರಾಗಬೇಕಾದ ಸ್ಥಿತಿ ಒದಗಿಬಂದಿತು. ಮನೆಯ ಪರಿಸ್ಥಿತಿಯನ್ನು ಅರಿತುಕೊಂಡು ಕೊನೆಯ ಮಕ್ಕಳಾದ ಶ್ರೀ ರುದ್ರಪ್ಪ ಮತ್ತು ಮಲ್ಲಿಕಾರ್ಜುನ ಅವರು ಸೈನ್ಯವನ್ನು ಸೇರಿದರು. ಪತ್ನಿ ಗೌರಮ್ಮನವರು ಪಂಡಿತಪ್ಪನವರ ಕುಟುಂಬಕ್ಕಾಗಿಯೇ ತಮ್ಮ ಜೀವನವನ್ನು ತೇಯ್ದರು. ಗಂಡನ ಸತ್ಕಾರ್ಯಗಳಿಗೆ ಬೆನ್ನೆಲುಬಾಗಿದ್ದರು. ಪಂಡಿತಪ್ಪನವರು ತಮ್ಮ ಜೀವನದ ಕೊನೆಯಲ್ಲಿ ನೋವನ್ನು ಅನುಭವಿಸಿದ್ದನ್ನು ಕಂಡು ಒಳಗೊಳಗೆ ನೊಂದುಕೊಂಡಿದ್ದರು.

ಪಂಡಿತಪ್ಪನವರದು ಸತತ ದುಡಿದು ಹಣ್ಣಾದ ಜೀವ. ಕ್ರಿ.ಶ.೧೯೬೧ ಜನವರಿ ೮ರಂದು ನಸುಕಿನಲ್ಲಿ ಪಂಡಿತಪ್ಪನವರು ಜೀವಬಿಟ್ಟರು. ಆಗ ಅವರಿಗೆ ೭೮ ವರ್ಷ ವಯಸ್ಸಾಗಿತ್ತು. 'ಪಂಡಿತಪ್ಪನವರು ತೀರಿಕೊಂಡ ವಿಷಯ ಬೆಳಗಾವಿಯಲ್ಲಿ ಸುದ್ದಿಯಾದಾಗ ಅಪಾರ ಸಂಖ್ಯೆಯಲ್ಲಿ ಜನಸ್ತೋಮ ಸೇರಿತ್ತು. ಅಂತ್ಯಸಂಸ್ಕಾರದ ವೇಳೆಯಲ್ಲಿ ಕೆ.ಎಲ್.ಇ.ಸಂಸ್ಥೆಯ ಸರ್ವಸದಸ್ಯರು, ಸಹಾಯಕ ಅಭಿಯಂತರರಾದ ಮಹಾಂತಣ್ಣನವರು, ನಗರಸಭೆಯ ಸದಸ್ಯ ಶ್ರೀ ಎಸ್.ಬಿ.ಕಣಬರ್ಗಿ, ಕಲ್ಮಠದ ಶ್ರೀ ಸಿದ್ಧರಾಮಯ್ಯಸ್ವಾಮಿ, ಪ್ರಾಚಾರ್ಯರಾದ ರುದ್ರಪ್ಪ ಮತ್ತು ಜತ್ತಿ ಮುಂತಾದವರು, ಗುತ್ತಿಗೋಳ ವಕೀಲರು, ಕೌಜಲಗಿ ವಕೀಲರು, ನಿವೃತ್ತ ಜಿಲ್ಲಾ ನ್ಯಾಯಾಧೀಶ ಶ್ರೀ ಗುಗ್ಗಳಿ,ಆಯ್.ಸಿ.ಎಸ್. ಮುಂತಾದ ಪ್ರಮುಖರು ಭಾಗವಹಿಸಿದ್ದರು. ಧಾರವಾಡ, ಇಚಲಕರಂಜಿ ಮತ್ತು ಬನಹಟ್ಟಿಗಳಿಂದ ಬಂಧುಬಳಗದವರು ಅಂತ್ಯವಿಧಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪಾಲ್ಗೊಂಡಿದ್ದರು.'[೧]

ಪಂಡಿತಪ್ಪನವರ ನಿಧನದ ಸುದ್ದಿ ಅಂದಿನ ಪ್ರಸಿದ್ಧ ಮರಾಠಿ ಪತ್ರಿಕೆ 'ತರುಣಭಾರತ'ದಲ್ಲಿ ಪ್ರಕಟವಾಗಿತ್ತು. "ಮಹಿಳಾ ವಿದ್ಯಾಲಯದ ಶಿಕ್ಷಕ ಮತ್ತು ವಿದ್ಯಾರ್ಥಿಗಳು ಸಭೆ ಸೇರಿ ಪಂಡಿತಪ್ಪ ಚಿಕ್ಕೋಡಿಯವರ ನಿಧನಾರ್ಥ ಸಂತಾಪಸೂಚಕ ಸಭೆಯನ್ನು ಕರೆದಿದ್ದರು. ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ಮಹಿಳಾ ವಿದ್ಯಾಲಯದ ಸಂಸ್ಥಾಪಕರಲ್ಲಿ ಒಬ್ಬರು. ೧೯೨೩ರಲ್ಲಿ ಪ್ರೌಢಶಾಲೆಯನ್ನು ಸ್ಥಾಪಿಸಿದರಲ್ಲದೆ ೧೯೪೫ರತನಕ ಸತತವಾಗಿ ವ್ಯವಸ್ಥಾಪಕ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಕೆಲವು ವರ್ಷಗಳವರೆಗೆ ಅಧ್ಯಕ್ಷರಾಗಿ ಸಂಸ್ಥೆಯನ್ನು ಅಭಿವೃದ್ಧಿಪಡಿಸುವಲ್ಲಿ ಸಾಕಷ್ಟು ಪ್ರಯತ್ನಪಟ್ಟರು"[೨]

ಖಾಸಭಾಗದ ಕರ್ನಾಟಕ ಆಯುರ್ವೇದ ವಿದ್ಯಾಪೀಠದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಕಾರಣ ಅಲ್ಲಿಯೂ ಕೂಡಾ ಪಂಡಿತಪ್ಪನವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಪಂಡಿತಪ್ಪನವರ ನಿಧನದ ಬಗ್ಗೆ ದುಃಖಸೂಚಕ ಗೊತ್ತುವಳಿಯನ್ನು ಸ್ವೀಕರಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಆ ದಿವಸ ಕಾಲೇಜಿಗೆ ಬಿಡುವನ್ನೂ ಕೊಡಲಾಯಿತು.

ಬೆಳಗಾವಿ ಜಿಲ್ಲೆ ಔದ್ಯೋಗಿಕ ಸಹಕಾರಿ ಬ್ಯಾಂಕು ಬೆಳಗಾವಿಯ ಶ್ಯಾಮಪ್ರಸಾದ ಮುಖರ್ಜಿ ಬೀದಿಯಲ್ಲಿರುವ ತನ್ನ ಕಾರ್ಯಾಲಯದಲ್ಲಿ ದುಃಖಸೂಚಕ ಸಭೆ ಕರೆದು ಮೃತರ ಆತ್ಮಕ್ಕೆ ಶಾಂತಿ ಕೋರಿತು.[೩] ಶವಸಂಸ್ಕಾರದ ನಂತರದಲ್ಲಿ ಕೆ.ಎಲ್.ಇ ಸಂಸ್ಥೆಯ ಸಂಸ್ಥಾಪಕರುಗಳಲ್ಲಿ ಒಬ್ಬರಾದ

ಮುಮದಾಪುರ ಅವರು ಪಂಡಿತಪ್ಪನವರ ಕುರಿತಾಗಿ ಗುಣಗಾನ ಮಾಡಿದರು. ತಾವೆಲ್ಲ ಕೂಡಿ ಕೆ.ಎಲ್.ಇ. ಸಂಸ್ಥೆಯನ್ನು ಹುಟ್ಟುಹಾಕಿದ್ದು, ಪಂಡಿತಪ್ಪನವರು ಮುಂದೆ ರಾಜಕಾರಣದ ಸಲುವಾಗಿ ಸಂಸ್ಥೆಯನ್ನು ಬಿಟ್ಟು ಹೋಗಿದ್ದದುದನ್ನು ಪ್ರಸ್ತಾಪಿಸಿದರು.

ಪಂಡಿತಪ್ಪನವರ ನಿಧನ ಸಮಾಜಕ್ಕೆ ತುಂಬಲಾರದ ನಷ್ಟವಾಗಿತ್ತು. ನಿಜ, ಆದರೆ ವಿಧಿಯ ಕರೆ ಬಂದಾಗ ಹೋಗುವುದು ಅನಿವಾರ್ಯ. ಆದರೆ ಕೆಲವರು ತಾವು ಅಳಿದರೂ ಸಮಾಜಕ್ಕೆ ಅಳಿಯದ ಕಾಣಿಕೆಯನ್ನು ಕೊಟ್ಟು ಹೋಗುತ್ತಾರೆ. ತಮ್ಮ ಕುಟುಂಬದವರಿಗೆ ಯಾವ ಸಂಪತ್ತನ್ನು ಬಿಟ್ಟು ಹೋಗದಿದ್ದರೂ, ಸಮಾಜಕ್ಕೆ ಅಗಾಧ, ಅನರ್ಘ್ಯಸಂಪತ್ತನ್ನು ಕಾಣಿಕೆಯಾಗಿ ನೀಡಿ ತಾವು ಮಾತ್ರ ಸಂತರಂತೆ ಬದುಕಿ ಅಜರಾಮರರಾಗುತ್ತಾರೆ. ಆ ಸಾಲಿನಲ್ಲಿ ಚಿಕ್ಕೋಡಿ ಪಂಡಿತಪ್ಪನವರು ನಿಲ್ಲುತ್ತಾರೆ.

೩.೭. ರಾಮಪ್ಪ:

ಚಿಕ್ಕೋಡಿ ಕುಟುಂಬದ ರಾಮಪ್ಪನವರು ಶಿಕ್ಷಣ ಪಡೆದದ್ದು ಕಡಿಮೆ. ಇವರು ಯಂತ್ರ ಮತ್ತು ಬಣ್ಣ ಸಂಶೋಧನೆಯಲ್ಲಿ ತೊಡಗಿದ್ದರು. ಇದರಿಂದ ಯಾಂತ್ರಿಕ ಶಿಕ್ಷಣ ಪಡೆದ ಅಭಿಯಂತರರಿಗಿರಬೇಕಾದ ವಿಶೇಷ ಜ್ಞಾನ ರಾಮಪ್ಪನವರಿಗಿತ್ತೆಂದು ತಿಳಿದು ಬರುತ್ತದೆ. ಸಾಮಾನ್ಯ ಜನರ ದುಃಖ, ನೋವುಗಳಿಗೆ ಸ್ಪಂದಿಸಿದ ರಾಮಪ್ಪನವರು ತಮ್ಮ ಅರ್ಥಸಂಪತ್ತನ್ನು ಸಮಾಜದ ಸೇವೆಗಾಗಿಯೇ ಇಟ್ಟರು. ನಿಸ್ವಾರ್ಥಪರರಾದ ಅವರು ಋಷಿ ಸದೃಶರಂತೆ ಬದುಕಿದರು. ಹೀಗಾಗಿ ರಾಮಪ್ಪನವರು ಒಬ್ಬ ಸಂತರಾಗಬೇಕಿತ್ತು ಎಂದು ಜನ ಹೇಳುತ್ತಾರೆ.

೩.೭.೧. ಜನನ–ಬಾಲ್ಯ:

ಚಿಕ್ಕೋಡಿ ಲಕ್ಷ್ಮಣ್ಣಪ್ಪ ಮತ್ತು ಅವ್ವಣ್ಣವ್ವ ಅವರಿಗೆ ನಾಲ್ಕು ಜನ ಗಂಡುಮಕ್ಕಳು. ಅವರು ರಾಮಪ್ಪ, ಧೂಳಪ್ಪ, ಸಿದ್ಧಗಿರಿ ಮತ್ತು ಚನ್ನಪ್ಪ. ಹಿರಿಯ ಮಗನಾದ ರಾಮಪ್ಪನವರ ಜನನದ ದಾಖಲೆಯು ದೊರೆತಿಲ್ಲ. ಹೀಗಾಗಿ ಕೆಲವು ಆಧಾರಗಳಿಂದ ಕಾಲವನ್ನು ನಿರ್ಧರಿಸಬೇಕಾಗಿದೆ. ರಾಮಪ್ಪನವರ ತಂದೆ ಲಕ್ಷ್ಮಣ್ಣಪ್ಪನವರು ಮಕ್ಕಳು ಚಿಕ್ಕವರಿರುವಾಗಲೇ ತೀರಿಕೊಂಡರು. ಸುಮಾರು ೧೮೯೬–೯೭ನೆಯ ಇಸ್ವಿ ಇರಬಹುದು. ಆಗ ಬಹುಶಃ ರಾಮಪ್ಪನವರ ವಯಸ್ಸು ಸು.೮–೧೦ವರ್ಷಗಳಿರಬೇಕು ಎಂದು ಪಂಡಿತಪ್ಪನವರು ಬರೆದ ದಾಖಲೆಯಲ್ಲಿದೆ. ಪಂಡಿತಪ್ಪ ಮತ್ತು ಹಳಕಟ್ಟಿಯವರು ಸಮಕಾಲೀನರು. ರಾಮಪ್ಪನವರು ಕ್ರಿ.ಶ.೧೯೫೪ ರಲ್ಲಿ ತೀರಿಕೊಂಡರು. ಅವರು ಸತ್ತಾಗ ೭೦ ವರ್ಷದವರಿದ್ದರು ಎಂದು ಅವರ ಕುಟುಂಬದ ಮೂಲಗಳಿಂದ ತಿಳಿದು ಬಂದಿದೆ. ಹೀಗಾಗಿ ಇವರ ಜನನದ ಇಸ್ವಿಯನ್ನು ಸುಮಾರು ೧೮೮೦ ರಿಂದ ೧೮೮೬ರ ವರೆಗೆ ಎಂದು ಗುರುತಿಸಬಹುದಾಗಿದೆ. ಎಷ್ಟೇ ಪ್ರಯತ್ನಿಸಿದರೂ ಇವರ ಜನನದ ದಾಖಲೆಗಳು ಲಭ್ಯವಾಗಲಿಲ್ಲ. ರಬಕವಿಯಲ್ಲಿ ಜನಿಸಿದ್ದ ರಾಮಪ್ಪನವರು ತಮ್ಮ ಬಾಲ್ಯವನ್ನು ರಬಕವಿಯಲ್ಲಿಯೇ ಕಳೆದರು.

೩.೭.೨. ಶಿಕ್ಷಣ:

ರಾಮಪ್ಪನವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ರಬಕವಿಯಲ್ಲಿ ಮುಗಿಸಿದರು. ಇವರ ತಂದೆ ಬಹಳ ಬೇಗ ತೀರಿಕೊಂಡಿದ್ದರಿಂದ ಇವರಿಗೆ ಹೆಚ್ಚಿಗೆ ಕಲಿಯಲು ಅವಕಾಶವಿರಲಿಲ್ಲ. ಆದರೆ ಸಹಜ ಪ್ರತಿಭೆಯನ್ನು ಹೊಂದಿದ್ದ ಇವರು ಸತತ ನೇಕಾರಿಕೆ ಮತ್ತು ಅದರ ಪರಿಕರಗಳ ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

೩.೭.೩. ವೃತ್ತಿ:

ರಾಮಪ್ಪನವರ ತಂದೆ ಲಕ್ಷ್ಮಣ್ಣಪ್ಪನವರು ನೇಕಾರ ವೃತ್ತಿಯನ್ನು ಮಾಡುತ್ತಿದ್ದರು. ರಾಮಪ್ಪನವರು ಈ ವೃತ್ತಿಯನ್ನು ಮುಂದುವರೆಸಿಕೊಂಡು ಹೋದರು. ನೇಕಾರಿಕೆಯನ್ನು ಪ್ರೀತಿಯಿಂದ ಕಂಡ ಇವರು ತಮ್ಮ ಸತತ ಪರಿಶ್ರಮದಿಂದ ಅದರಲ್ಲಿ ಅಭಿವೃದ್ಧಿಯನ್ನು ಸಾಧಿಸಿದರು. ರಬಕವಿಯಲ್ಲಿ ಇವರು 'ಶ್ರೀಮಂತ ಕುಳ' ಎನ್ನುವಷ್ಟರ ಮಟ್ಟಿಗೆ ಬೆಳೆದರು.

೩.೭.೪. ಮದುವೆ:

ರಾಮಪ್ಪನವರು ಅಲ್ಲವ್ವ ಎಂಬುವಳೊಂದಿಗೆ ಮದುವೆಯಾಗಿದ್ದರು. ಅಲ್ಲವ್ವಳು ನೋಡಲು ಅಷ್ಟೇನೂ ಸುಂದರವಾಗಿರಲಿಲ್ಲ. ಆದರೆ ಒಳ್ಳೆಯ ಹೆಣ್ಣುಮಗಳು. ಯಾವುದೇ ಆಡಂಬರ ಬಯಸದ ಸಾದಾ ಸೀದಾ ಮಹಿಳೆ. ಸದಾ ಕೆಲಸಗಳನ್ನು ಮಾಡುತ್ತಿದ್ದಳು. ಗಂಡನ ದಾನಗುಣಕ್ಕೆ ಎಂದೂ ಬೇಸರಿಸಿಕೊಂಡವಳಲ್ಲ. ಮನೆಗೆ ಬಂದ ಅತಿಥಿಗಳನ್ನು ಸತ್ಕಾರ ಮಾಡುವುದು ತನ್ನ ಧರ್ಮವೆಂದು ತಿಳಿದುಕೊಂಡಿದ್ದಳು. ಇಂತಹ ಹೆಣ್ಣುಮಗಳು ರಾಮಪ್ಪನವರಿಂದ ಅಲಕ್ಷಿತವಾದದ್ದು ಬಹು ವಿಷಾದವೆಂದೇ ಹೇಳಬೇಕು. ರಾಮಪ್ಪನವರ ಜೀವನದಲ್ಲಿ ಒಬ್ಬ ಮುಸ್ಲಿಂ ಹೆಣ್ಣಿನ ಪ್ರವೇಶವಾಯಿತು. ಅತ್ಯಂತ ಶ್ರೀಮಂತರಾಗಿದ್ದ ರಾಮಪ್ಪನವರು ಈ ಹೆಣ್ಣಿನ ಕಾರಣದಿಂದ ಇಡೀ ಆಸ್ತಿಯನ್ನು ಕಳೆದುಕೊಂಡು ನಿಸ್ಸಾಹಯಕರಾದರು.

೩.೭.೫. ಕೌಟುಂಬಿಕ ಜೀವನ:

ರಾಮಪ್ಪ ಮತ್ತು ಅಲ್ಲವ್ವರಿಗೆ ಏಕೈಕ ಸುಪುತ್ರಿ, ಅವಳ ಹೆಸರು ಬಸಲಿಂಗವ್ವ, ಇವಳನ್ನು ಅಲ್ಲವ್ವ ತನ್ನ ತಮ್ಮನಿಗೆ ಕೊಟ್ಟು ಮದುವೆ ಮಾಡಿದ್ದಳು. ರಾಮಪ್ಪನವರು ತನ್ನ ಮಗಳು ಮತ್ತು ಅಳಿಯನನ್ನು ಮನೆಯಲ್ಲಿಯೇ ಇಟ್ಟುಕೊಂಡಿದ್ದರು. ದುರದೃಷ್ಟವಶಾತ್ ಬಸಲಿಂಗವ್ವಳಿಗೆ ಮಕ್ಕಳಾಗಲಿಲ್ಲ. ಇವಳು ಬಹಳ ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡಳು.

೩.೭.೬.ಆಸಕ್ತಿ–ಅಭಿರುಚಿ:

ರಾಮಪ್ಪ ಚಿಕ್ಕೋಡಿಯವರು ಶಿಸ್ತಿಗೆ ಹೆಸರಾಗಿದ್ದರು. ಸಮಯಕ್ಕೆ ಬಹಳ ಮಹತ್ವ ಕೊಡುತ್ತಿದ್ದರು. ಮುಂಜಾನೆ ಸ್ನಾನಕ್ಕೆ ಕಾಲ್ನಡಿಗೆಯಿಂದ ಹೋಗುವುದನ್ನು ಜನ ನಿಂತು ನೋಡುತ್ತಿದ್ದರು. ಸ್ನಾನ ಮುಗಿಸಿ ಬಂದು ೧ ಗಂಟೆ ದೇವರ ಪೂಜೆ ಮಾಡುತ್ತಿದ್ದರು. ನಂತರ ಅಂಗಡಿಗೆ ಬಂದು ಗಲ್ಲಾದ ಮುಂದೆ ಕುಳಿತು ಗಡಿಯಾರ ನೋಡಿಕೊಂಡರೆ ಒಂದು ದಿನವೂ ಅವರ ನಿಗದಿತ ಸಮಯ

ಮೀರುತ್ತಿರಲಿಲ್ಲ. ವ್ಯಾಪಾರದಲ್ಲಿಯೂ ಅಷ್ಟೇ ಕಟ್ಟುನಿಟ್ಟು. ವಾಯಿದೆ ವೇಳೆಯಲ್ಲಿ ಸೀರೆ ನೇಯ್ದು ತಂದುಕೊಟ್ಟ ನೇಕಾರರಿಗೆ ಬಹಳ ಮಹತ್ವ ಕೊಡುತ್ತಿದ್ದರು. ಮನಸ್ಸಿಲ್ಲದೆ ದುಡಿಯಬೇಕೆನ್ನುವ ಜನರಿಗೆ ಮೊದಲು ತಿಳಿಸಿ ಹೇಳುತ್ತಿದ್ದರು. ನಂತರ ಒಮ್ಮೆ ನೋಡಿಕೊಂಡು ನಿರ್ದಾಕ್ಷಿಣ್ಯವಾಗಿ ಅವರಿಗೆ ಮುಖಭಂಗ ಮಾಡುತ್ತಿದ್ದರು. ಅಂಗಡಿಯಲ್ಲಿರುವ ಆಳುಕಾಳುಗಳು ಕೂಡಾ ಅಷ್ಟೇ ಸಮಯಪ್ರಜ್ಞರಾಗಿರಲು ಇಷ್ಟಪಡುತ್ತಿದ್ದರು. ಅವರ ಈ ಸ್ವಭಾವಕ್ಕೆ ಜನ ಇವರನ್ನು ಮಾತನಾಡಿಸಲು ಹೆದರುತ್ತಿದ್ದರು. ಒಮ್ಮೆ ಇಬ್ಬರು ಇವರ ಹತ್ತಿರ ಬಂದು ತಾವು ನೇಯ್ಗೆ ಕೆಲಸ ಮಾಡುವುದಾಗಿ, ಮಾಲನ್ನು ಕೊಡಬೇಕೆಂದು ವಿನಂತಿಸಿಕೊಂಡರು. ಈ ಕೆಲಸ ನಿಮಗೆ ಒಗ್ಗದು ಎಂದು ಎಷ್ಟು ತಿಳಿಸಿ ಹೇಳಿದರೂ ಕೇಳದ ಅವರು ನೂಲನ್ನು ಒಯ್ದರು. ಅವಧಿ ಮುಗಿದ ಬಳಿಕ ಕೊಡಲು ಬಂದ ಅವರಿಗೆ ದುಡ್ಡು ಕೊಟ್ಟು ನಮಸ್ಕರಿಸಿ ಕಳುಹಿಸಿ, ಮುಂದೆಂದೂ ಮಾಲಿಗೆ ಬರದಂತೆ ಹೇಳಿದರಂತೆ.

ಜಮಖಂಡಿ ಸಂಸ್ಥಾನದಲ್ಲಿ ರಾಮಪ್ಪನವರಿಗೆ ಒಳ್ಳೆಯ ಮರ್ಯಾದೆ ಇತ್ತು. ವಚನ ಪಿತಾಮಹ ರಾ.ಹಳಕಟ್ಟಿಯವರು ಮೇಲಿಂದ ಮೇಲೆ ರಬಕವಿಗೆ ಬರುತ್ತಿದ್ದರು. ಹಳಕಟ್ಟಿಯವರ ಜೊತೆ ಸಾಹಿತ್ಯಿಕ ಮತ್ತು ಪ್ರಚಲಿತ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದರು. ಕನ್ನಡ ಪತ್ರಿಕೆಗಳನ್ನು ತರಿಸಿ ಓದುತ್ತಿದ್ದರು. ಹಳಕಟ್ಟಿಯವರು ಪ್ರಕಟಿಸುತ್ತಿದ್ದ ಶಿವಾನುಭವ ಪತ್ರಿಕೆಗಳಿಗೆ ದಾನಿಯಾಗಿ ಆಗಾಗ ದುಡ್ಡು ಕಳಿಸುತ್ತಿದ್ದರು. ಹಳಕಟ್ಟಿ ವರ್ಧಂತ್ಯುತ್ಸವದ ಸಂದರ್ಭದಲ್ಲಿಯೂ ದಾನವನ್ನು ಮಾಡಿದ್ದಾಗಿ ತಿಳಿದು ಬರುತ್ತದೆ.

೩.೭.೭. ಗುಣ–ಸ್ವಭಾವ:

ರಾಮಪ್ಪನವರು ಸಂಪತ್ತಿನಲ್ಲಿ ಶ್ರೀಮಂತರಾಗಿದ್ದಂತೆ ಅವರಲ್ಲಿ ಹೃದಯ ಶ್ರೀಮಂತಿಕೆಯೂ ಇತ್ತು. ಬಡವರನ್ನು ಕಂಡರೆ ಮಮ್ಮಲ ಮರುಗುತ್ತಿದ್ದರು. ಯಾರೇ ಆಗಲಿ ಕಷ್ಟ ಹೇಳಿಕೊಂಡು ಬಂದರೆ ಎಂದೂ ಬರಿಗೈಯಿಂದ ಕಳುಹಿಸುತ್ತಿರಲಿಲ್ಲ. ಮನೆಯ ಮುಂದೆ ಯಾರಾದರೂ ಹೆಣ್ಣುಮಕ್ಕಳು ಹರಿದ ಸೀರೆಯನ್ನು ಉಟ್ಟುಕೊಂಡು ಅಡ್ಡಾಡುತ್ತಿದ್ದರೆ ಅವರನ್ನು ಕರೆದು ತಮ್ಮ ಅಂಗಡಿಯಲ್ಲಿದ್ದ ಸೀರೆಗಳನ್ನು ಕೊಟ್ಟು ಕಳಿಸುತ್ತಿದ್ದರು. ಊರಿನ ಹೆಣ್ಣುಮಕ್ಕಳು ಬಡತನದ ಕಾರಣವಾಗಿ ಉಪವಾಸ ಬಿದ್ದರೆ, ತಮ್ಮ ತವರು ಮನೆಗೆ ಹೋಗಿ ಕಾಳುಕಡಿ ತರುವಂತೆ ಅವರ ಮನೆಯಿಂದ ತರುತ್ತಿದ್ದರು. ದಾನ ಕೇಳಲು ಬಂದವರಿಗೆ ಕೊಡಲೆಂದೇ ಪಡಸಾಲೆಯಲ್ಲಿ ಸದಾ ಒಂದು ಚೀಲ ಜೋಳವನ್ನು ತುಂಬಿಡುತ್ತಿದ್ದರು. ಒಮ್ಮೆ ಒಬ್ಬ ಹೆಣ್ಣುಮಗಳು ಜೋಳ ಕೇಳಲು ಬಂದಳು. ರಾಮಪ್ಪನವರು ಆಗ ಊಟಕ್ಕೆ ಕುಳಿತಿದ್ದರಂತೆ. ಅದಕ್ಕೆ ರಾಮಪ್ಪನವರ ಹೆಂಡತಿ ಅವಳನ್ನು ಕೂಡ್ರಲು ಹೇಳಿದರಂತೆ. ಊಟವನ್ನು ಅರ್ಧಕ್ಕೆ ನಿಲ್ಲಿಸಿ ಸ್ವತಃ ತಾವೇ ಬಂದು ಮಗುವನ್ನು ಹೊತ್ತುಕೊಂಡು ಬಂದ ಹೆಣ್ಣುಮಗಳಿಗೆ ಜೋಳವನ್ನು ಹಾಕಿ ಕಳಿಸಿದರಂತೆ.

ಹುಲ್ಯಾಳದಲ್ಲಿ ಇಂದಿನ ಶ್ರೀಮಂತ ಕುಟುಂಬವಾದ ದಿ.ಚನವೀರಪ್ಪ ಜವಳಗಿಯವರು ರಾಮಪ್ಪನವರ ಸ್ನೇಹಿತರು. ತುಂಬಾ ಬಡತನದಲ್ಲಿದ್ದ ಚನವೀರಪ್ಪ ಅವರು ತಾವು ಮಗ್ಗಗಳನ್ನು ಹಾಕಿಕೊಳ್ಳಲು ರಾಮಪ್ಪನವರಿಗೆ ಸಹಾಯ ಯಾಚಿಸಿದಾಗ, ಹಿಂದೆ ಮುಂದೆ ನೋಡದೇ, ಕೊಡುಗೈ ದೊರೆಯಾದ ರಾಮಪ್ಪನವರು ಅಂದು ೧೦,೦೦೦ ರೂ.ಗಳನ್ನು ಕೊಟ್ಟರು. ಮಗ್ಗಗಳನ್ನು ಹಾಕಿ ಸೀರೆ

ಉತ್ಪಾದನೆಯಲ್ಲಿ ತೊಡಗಿದ ಚನವೀರಪ್ಪನವರಿಗೆ ರಾಮಪ್ಪನವರು ತಮ್ಮ ಸ್ವಇಚ್ಛೆಯಿಂದ ಸೀರೆ ವ್ಯಾಪಾರದ ದೊಡ್ಡ ಕೇಂದ್ರವಾದ ಬೆಳಗಾವಿ ಮಾರ್ಕೆಟನ್ನು ಬಿಟ್ಟುಕೊಟ್ಟರು. ಇದರಿಂದ ಒಮ್ಮೆಲೆ ಶ್ರೀಮಂತರಾದ ಚನವೀರಪ್ಪನವರು ತಾವು ತೆಗೆದುಕೊಂಡ ೧೦,೦೦೦ ರೂ.ಗಳನ್ನು ಮರಳಿ ಕೊಡಲು ಬಂದಾಗ ರಾಮಪ್ಪನವರು ನಿನಗೆ ಮರಳಿ ಕೊಡಲೆಂದು ಹಣವನ್ನು ಕೊಟ್ಟಿಲ್ಲ. ವ್ಯಾಪಾರಕ್ಕೆಂದು ದಾನ ಕೊಟ್ಟಿರುವೆ' ಎಂದು ನಯವಾಗಿ ನಿರಾಕರಿಸಿದರಂತೆ.

'ಮುಟ್ಟಿದ್ದೆಲ್ಲ ಚಿನ್ನ'ವಾಗುವಂತೆ ವ್ಯಾಪಾರದಲ್ಲಿ ಏರುತ್ತಾ ಹೋದಂತೆ ರಾಮಪ್ಪನವರನ್ನು ಸರಿಗಟ್ಟುವರೇ ಇಲ್ಲದಾಯಿತು. ಅಂದಿನ ಕಾಲದಲ್ಲಿ ಇವರ ಸೀರೆಯ ಅಂಗಡಿಯಲ್ಲಿ ಏಳೆಂಟು ಜನ ಕಾರಕೂನರು ಕೆಲಸಕ್ಕಿದ್ದರು. ಭಾಡಿಗೆ ಮನೆಯಲ್ಲಿದ್ದ ರಾಮಪ್ಪನವರು ವಿಶಾಲವಾದ ಜಾಗೆಗಳನ್ನು ಖರೀದಿಸಿದರು. ರಬಕವಿಯ ಟೆಂಗಿನಕಾಯಿ ಗಲ್ಲಿಯಲ್ಲಿ ದೊಡ್ಡದಾದ ಮನೆ ಕಟ್ಟಿಸಿದರು. ಆದರೆ ತಮ್ಮ ಕುಟುಂಬವೊಂದೇ ಇರಬೇಕೆಂದು ಮನಸ್ಸು ಮಾಡಿದವರಲ್ಲ. ಸಹಾಯ ಬೇಡಿ ಬಂದ ಅಣ್ಣನ ಮಕ್ಕಳನ್ನು ಕರೆದು ತಮ್ಮ ಹತ್ತಿರವೇ ಇರಲು ಜಾಗ ಕೊಟ್ಟರು. ತಮ್ಮ ಮಗಳ ಮದುವೆ ಮಾಡಿ, ಮಗಳು, ಅಳಿಯನನ್ನು ಮನೆಯಲ್ಲಿಟ್ಟುಕೊಂಡರು. ತಮ್ಮನ ಮಕ್ಕಳ-ಹೆಣ್ಣುಮಕ್ಕಳ ಮದುವೆ ಮಾಡಿಕೊಟ್ಟರು. ತಮ್ಮನ ಮಕ್ಕಳಿಗೆ ಇರಲು ಜಾಗ ಕೊಟ್ಟರು. ತಮ್ಮನಾದ ಧೂಳಪ್ಪನ ಮಕ್ಕಳಿಗೆ ಬೆಳಗಾವಿಯಲ್ಲಿಟ್ಟು ವಿದ್ಯಾಭ್ಯಾಸ ಕೊಡಿಸಿದರು. ಧೂಳಪ್ಪನವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದುದರಿಂದ ೬ ಮಕ್ಕಳ ಜವಾಬ್ದಾರಿ ಭಾರವೆನಿಸಿತ್ತು. ಇದನ್ನರಿತ ರಾಮಪ್ಪನವರು ೪ ಜನ ಹೆಣ್ಣು ಮಕ್ಕಳ ಮದುವೆ ಮತ್ತು ೨ ಗಂಡು ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಹೊತ್ತುಕೊಂಡರು. ಬರೀ ಮನೆಯವರಿಗಷ್ಟೇ ಅಲ್ಲ, ಹೊರಗಿನಿಂದ ಯಾರಾದರೂ ಬಂದು ತಮ್ಮ ಸಂಕಟವನ್ನು ಹೇಳಿಕೊಂಡರೆ ಎಂದೂ ಬರಿಗೈಯಿಂದ ಕಳುಹಿಸಿದವರೇ ಅಲ್ಲ. 'ನೇಕಾರರ ದೇವರು' 'ಕೊಡುಗೈ ದೊರೆ' 'ದಾನಶೂರ' ಎಂಬ ಅನ್ವರ್ಥಗಳಿಗೆ ಸಾಟಿಯೆಂಬಂತೆ ಅವರು ದಾನ ಮಾಡಿದರು. ರಬಕವಿ-ಬನಹಟ್ಟಿ ಮತ್ತು ಸುತ್ತಮುತ್ತಣ ಹಳ್ಳಿಗಳಲ್ಲಿ ಇವರಿಂದ ಸಹಾಯ ಪಡೆಯದ ನೇಕಾರರೇ ಇರಲಿಲ್ಲ. ಹುಲ್ಯಾಳ ಗ್ರಾಮದ ಜನರು ದೇವರ ಫೋಟೋದ ಜೊತೆಗೆ ರಾಮಪ್ಪನವರ ಫೋಟೋವನ್ನು ಪೂಜೆ ಮಾಡಬೇಕಾದದ್ದು ನಮ್ಮ ಧರ್ಮ ಎಂದು ಈಗಲೂ ಹೇಳುತ್ತಾರೆ.

ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ಚುನಾವಣೆಗೆ ನಿಂತಾಗ ಖರ್ಚಿಗಾಗಿ ಧನಸಹಾಯ ಮಾಡಿದರು. ಪಂಡಿತಪ್ಪನ ಹಿರಿಯ ಮಗನ ಮದುವೆಯನ್ನು ಅಬಕಾರ ಚೆನ್ನಮಲ್ಲಪ್ಪರ ಮಗಳ ಜೊತೆ ನಿಶ್ಚಯವಾದಾಗ ಎರಡೂ ಕಡೆಯ ಸಂಬಂಧಿಯಾದ ರಾಮಪ್ಪನವರು ಧಾರಾಳವಾಗಿ ಧನಸಹಾಯ ಮಾಡಿದರು. ಆ ವೇಳೆಗೆ ಪಂಡಿತಪ್ಪನವರು ಪ್ರತಿಷ್ಠಿತ ವ್ಯಕ್ತಿಯಾಗಿದ್ದರು. ಇವರ ಪ್ರತಿಸ್ಪರ್ಧಿಯಾಗಿರುವ ಶ್ರೀ ಅಂಗಡಿಯವರು ಕೂಡಾ ಪ್ರಸಿದ್ಧಿಯನ್ನು ಹೊಂದಿ, ಸಮಾಜದಲ್ಲಿ ಗಣ್ಯವ್ಯಕ್ತಿಗಳಾಗಿದ್ದರು. ಅಂಗಡಿಯವರು ತಮ್ಮ ಮಕ್ಕಳ ಮದುವೆಯನ್ನು ವೈಭೋವಪೇತವಾಗಿ ಮಾಡುವ ಅನಿವಾರ್ಯತೆಯನ್ನು ಕುರಿತು ತಮ್ಮ

ಆತ್ಮಚರಿತ್ರೆಯಲ್ಲಿ ಹೇಳಿಕೊಂಡಿದ್ದಾರೆ. ಬಹುಶಃ ಇದೇ ಕಾರಣದಿಂದಲೂ ಏನೋ ಪಂಡಿತಪ್ಪನವರು ಕೂಡಾ ತಮ್ಮ ಮಗನ ಮದುವೆಯನ್ನು ರಾಜವೈಭವದಿಂದ ಮಾಡಿದರು.

ರಾಮಪ್ಪನವರ ಜಾಣ್ಮೆ, ದಾನಗುಣವನ್ನು ಸಾಂಗ್ಲಿ ಸಂಸ್ಥಾನದ ಆಡಳಿತಗಾರರಾಗಿದ್ದ 'ಡೇ' ಅವರು ಕೇಳಿದರು. ಅವರನ್ನು ನೋಡ ಬಯಸಿದರು. ರಬಕವಿಯಲ್ಲಿ ಶಂಕರಲಿಂಗನ ದೇವಸ್ಥಾನದಲ್ಲಿ ಕುಳಿತು ರಾಮಪ್ಪನವರನ್ನು ಕರೆ ಕಳುಹಿಸಿದರಂತೆ. ಸ್ವಾಭಿಮಾನಿಗಳಾದ ರಾಮಪ್ಪನವರು ಅವರ ಹತ್ತಿರ ಹೋಗಲು ನಿರಾಕರಿಸಿದರು. ಹೀಗಾಗಿ ಡೇ ಅವರೇ ಸ್ವತಃ ರಾಮಪ್ಪನವರ ಮನೆಗೆ ಬಂದರು. ಮನೆಗೆ ಬಂದ ಡೇ ಸಾಹೇಬರನ್ನು ಅತ್ಯಂತ ಆದರದಿಂದ ಸತ್ಕರಿಸಿ ಗೌರವದಿಂದ ಕಂಡರು.

೩.೭.೮. ಕೊನೆಯ ದಿನಗಳು:

ಜಮಖಂಡಿ ಸಂಸ್ಥಾನದ ಎಲ್ಲಾ ಕಡೆಯಲ್ಲಿಯೂ ರಾಮಪ್ಪನವರ ಕೈಮಗ್ಗಗಳು, ಪವರ್‌ಲೂಮ್‌ಗಳು ಭರದಿಂದ ಕಾರ್ಯನಿರತವಾಗಿದ್ದವು, ವ್ಯಾಪಾರ ಅತ್ಯಂತ ಏರಿಕೆಯ ಮಟ್ಟದಲ್ಲಿ ನಡೆದಿತ್ತು. ಮುಂಬಯಿಯ ಸಟ್ಟಾ ವ್ಯಾಪಾರ. ಇದು ಎಲ್ಲರಿಗೂ ಸಾಧಿಸುವುದಿಲ್ಲ. ಕೇವಲ ಮುಂಬಯಿ ಮತ್ತು ಶಹರದಲ್ಲಿರುವವರಿಗೆ ಮಾತ್ರ ಅದು ಸಾಧ್ಯ. ಮುಂಬಯಿಯ ಮಾರವಾಡಿಯವರು ಬಜಾರದ ಧಾರಣಿಯ ಏರಿಳಿತ ನೋಡಿಕೊಂಡು ಖರೀದಿ, ಮಾರಾಟ ಮಾಡುತ್ತಾ ಹೋಗುತ್ತಾರೆ. ಬಜಾರದ ಕ್ಷಣಕ್ಷಣ ವ್ಯಾಪಾರಕ್ಕೆ ಅವರು ಸ್ಪಂದಿಸುತ್ತಾರೆ. ಪತ್ರಿಕೆಗಳ ಮೇಲಿಂದ ವ್ಯಾಪಾರ (ತೇಜಿವ್ಯಾಪಾರ) ನಡೆಸುತ್ತಾರೆ. ಆದರೆ ರಾಮಪ್ಪನವರು ನೂರಾರು ಮೈಲಿ ದೂರದಲ್ಲಿರುವ ರಬಕವಿಯಲ್ಲಿ ಕುಳಿತು ವ್ಯಾಪಾರ ಮಾಡುವುದು ಕಷ್ಟದ ಕೆಲಸವಾಗಿತ್ತು. ವ್ಯವಹಾರಿಕ ಬುದ್ಧಿ ನಡೆಯುತ್ತಿರಲಿಲ್ಲ. ದೂರದ ರಬಕವಿಗೆ ದಿನವೂ ಪತ್ರಿಕೆ ಬರುವುದು ಕನಸಿನ ಮಾತಾಗಿತ್ತು. ಹೀಗಾಗಿ ಮುಂಬಯಿಯವರ ಹಾಗೆ ಸರಿಪಡಿಸಿಕೊಂಡು ನಡೆಯುವ ವ್ಯವಹಾರ ಇಲ್ಲಿ ಕಷ್ಟವಾಗಿತ್ತು. ಸೀರೆ ಖರೀದಿಸಿ ಮುಂಬಯಿ ಪೇಟೆ ಧಾರಣಿಯನ್ನು ನೋಡಿ ಕಾಯುತ್ತಾ ಕುಳಿತಾಗ ಒಮ್ಮೊಮ್ಮೆ ಲಾಭ, ಒಮ್ಮೊಮ್ಮೆ ಅಸಲು, ಒಮ್ಮೊಮ್ಮೆ ತೊಂದರೆ ಅನುಭವಿಸಬೇಕಾಯಿತು. ಆದ ನಷ್ಟವನ್ನು ಸರಿಪಡಿಸಿಕೊಳ್ಳಲು ಆಗದೆ ಮೇಲಿಂದ ಮೇಲೆ ನಷ್ಟ ಅನುಭವಿಸಬೇಕಾಗಿ ಬಂದಿತು. ಯಾವಾಗ ರಾಮಪ್ಪನವರಿಗೆ ದುರ್ದೆಶೆ ಪ್ರಾರಂಭವಾಯಿತೋ. ಆಗ ನೇಕಾರರು ವಾಯಿದೆಗೆ ಸರಿಯಾಗಿ ಸೀರೆಗಳನ್ನು ತಂದುಕೊಡಲಿಲ್ಲ. ಕೊಡಬೇಕಾದ ದೊಡ್ಡ ಕುಳದವರು ಹಣವನ್ನು ಕೂಡಲೇ ಇಲ್ಲ. ಇವರು ಎಂದೂ ಕೈವೊಡ್ಡಿ ಬೇಡಲಿಲ್ಲ.

ದೊಡ್ಡ ಗುಣವುಳ್ಳ ದೊಡ್ಡ ಮನುಷ್ಯರು ಕೂಡಾ ಕೆಲವೊಮ್ಮೆ ಹೆಣ್ಣಿಗಾಗಿ ನಾಶವಾದುದನ್ನು ನಮ್ಮ ಕಾವ್ಯ-ಪುರಾಣಗಳು ಹೇಳುತ್ತವೆ. ರಾಮಪ್ಪನವರು ಸಹವಾಸ ದೋಷದಿಂದ ತಮ್ಮ ಘನವ್ಯಕ್ತಿತ್ವಕ್ಕೆ ಮಸಿ ಬಳೆದುಕೊಂಡರು. ರಾಮಪ್ಪನವರ ಹೆಂಡತಿ ಅಲ್ಲವ್ವ ಅಷ್ಟೇನೂ ಸುಂದರವಾಗಿರಲಿಲ್ಲ. ಸಾದಾ ಸೀದಾ ಹೆಣ್ಣು ಮಗಳು. ಲಿಂಗಾಯತರಾದ ರಾಮಪ್ಪನವರು ಮುಸ್ಲಿಂ ಹೆಣ್ಣು ಮಗಳ ಸ್ನೇಹಮಾಡಿ ಅವಳನ್ನು ಮನೆಯಲ್ಲಿಟ್ಟುಕೊಂಡರು. ಇದರಿಂದ ಬೇಸತ್ತ ರಾಮಪ್ಪನವರ ಹೆಂಡತಿ ಅಲ್ಲವ್ವ ತನ್ನ ತಮ್ಮನನ್ನು ಕರೆದುಕೊಂಡು ಮನೆಬಿಟ್ಟು ಹೊರಟು ಹೋದಳು. ಎಲ್ಲಿ ಹೋದಳು ಎಂಬುದು ಕೂಡಾ ಕೊನೆಯ

ತನಕ ತಿಳಿಯಲಿಲ್ಲ. ಆಗ ತೀರಾ ಸ್ವತಂತ್ರಳಾದ ಮುಸ್ಲಿಂ ಹೆಣ್ಣು ಮಗಳು ಸಂಪೂರ್ಣವಾಗಿ ಇವರ ಮನೆಯಲ್ಲಿಯೇ ಬಿಡಾರ ಹೂಡಿದಳು. ರಾಮಪ್ಪನವರ ಸಮಸ್ತ ಆಸ್ತಿಗೂ ಕೈ ಹಾಕಿದಳು. ತಲ್ಲಣಗೊಂಡ ರಾಮಪ್ಪನವರು ಕಡೆಗೆ ಒಂದು ಮನೆ ಮತ್ತು ಒಂದು ತೋಟ ಅವಳ ಹೆಸರಿಗೆ ಹಚ್ಚಿದರು. ತಾವಿದ್ದ ಮನೆಯಲ್ಲಿ ಒಂದು ಭಾಗವನ್ನು ತಮ್ಮ ತಮ್ಮನ ಮಗನಾದ ಮಹಾಲಿಂಗಪ್ಪನಿಗೆ ಕೊಟ್ಟಿದ್ದರು. ತಾವು ಅದೇ ಮನೆಯಲ್ಲಿ ಬಂದು ವಾಸ ಮಾಡತೊಡಗಿದರು.

ರಾಮಪ್ಪನವರು ಪಲ್ಲಂಗದ ಮೇಲೆ ಕೂತು ಏನೋ ವಿಚಾರ ಮಾಡುತ್ತಿದ್ದರು. ಮುಂಜಾನೆ ೧೦ ಗಂಟೆಯ ಸಮಯ. ಪ್ರತಿದಿನ ನಾಷ್ಟಾ ಮುಗಿಸಿ ದೊಡ್ಡಪ್ಪನನ್ನು ಭೇಟಿಯಾಗಿ ಹೋಗುವುದು ಮಹಾಲಿಂಗಪ್ಪನವರ ರೂಢಿ. ಇವರು ಹೋದಾಗ ಬಾ ಎಂದು ಕೈಸನ್ನೆ ಮಾಡಿದರು. ಅದಾಗಲೇ ಮಾತು ತೊದಲತೊಡಗಿತ್ತು. ಏನೋ ಹೇಳಬೇಕೆಂಬ ಹಂಬಲ. ಕಣ್ಣುಗಳಲ್ಲಿ ಏನೋ ಆಶೆ. ಆದರೆ ಸಾಧ್ಯವಾಗಲಿಲ್ಲ. ತೊದಲುತ್ತ ಮಗನ ಕಡೆ ನೋಡುತ್ತಾ ತಗೋ, ಕೊಡು, ದುರಸ್ತಿಮಾಡು, ಎಂದು ಕೈಮಾಡಿದರಂತೆ. ಕೊಡುವುದನ್ನೇ ಮನಸ್ಸಿನಲ್ಲಿಟ್ಟುಕೊಂಡಿದ್ದರೇನೋ, ಮಹಾಲಿಂಗಪ್ಪನವರು ಹತ್ತಿರ ಹೋಗಿ 'ಏನಾದರೂ ಹೇಳುವರೇನೋ ಎಂದು ಕುತೂಹಲದಿಂದ ನಿಂತರು. ನೋವಿನಿಂದ ನಲುಗಿ, ನೂರಾರು ಜನರ ಮಧ್ಯ ಇರುವ, ಆಳುಕಾಳುಗಳ ಮಧ್ಯದಲ್ಲೇ ಇರುವ ರಾಮಪ್ಪನವರು ಅಂತ್ಯಕಾಲದಲ್ಲಿ ಎಲ್ಲವನ್ನೂ, ಎಲ್ಲರನ್ನೂ ಕಳೆದುಕೊಂಡು ಏಕಾಂಗಿಯಾಗಿ ಸತ್ತರು. ಒಳ್ಳೆಯ ಗುಣದ ರಾಮಪ್ಪನವರು ಕೆಟ್ಟ ಹೆಣ್ಣಿನ ಸಹವಾಸ ಮಾಡಿದಾಗ ರಬಕವಿಯ ಜನ ಎಂದೂ ಅವರನ್ನು ನಿಕೃಷ್ಟವಾಗಿ ಕಾಣಲಿಲ್ಲ. ಹೊರತಾಗಿ ಆ ಹೆಣ್ಣಿನಿಂದ ನಮ್ಮ ಧಣಿ ಹಾಳಾದನಲ್ಲ! ಎಂದು ಕೊರಗಿದರು. ರಬಕವಿಯ ಜನರಿಗೆ ಹುಲ್ಯಾಳದ ಮಠದಲ್ಲಿ ತಮ್ಮ ಧಣಿಯ ಅಂತ್ಯಸಂಸ್ಕಾರವಾಗುತ್ತದೆಂದು ಭಾವಿಸಿದ್ದರು. ಆದರೆ ಹುಲ್ಯಾಳಕ್ಕೆ ರಾಮಪ್ಪನವರು ಸತ್ತ ಸುದ್ಧಿ ಕಳುಹಿಸಿದರೂ ಸ್ವಾಮಿಗಳು ಏನೊಂದು ಪ್ರತಿಕ್ರಿಯಿಸಲಿಲ್ಲ. ಇಡೀ ಕರ್ನಾಟಕವೇ ಅಚ್ಚರಿಯಿಂದ ನೋಡುವಂತೆ ಆ ಸ್ವಾಮಿಗಳಿಗೆ ರಾಮಪ್ಪ ಮಠವನ್ನು ಕಟ್ಟಿಸಿ ಕೊಟ್ಟಿದ್ದರು. ಆದರೆ ರಾಮಪ್ಪನವರು ಹೀನಾಯವಾಗಿ ಸತ್ತಾಗ ಅವರೇ ಕಟ್ಟಿದ ಮಠ ಅವರಿಂದ ದೂರವಾಯಿತು. ಹುಲ್ಯಾಳ ಗ್ರಾಮವನ್ನು ಅವರೇ ಉಳಿಸಿ ಕೊಟ್ಟಿದ್ದರು. ಆದರೆ ಅದೇ ಗ್ರಾಮದವರು ಧಣಿಗಳ ಸಮಾಧಿ ನಮ್ಮಲ್ಲಿರಬೇಕು ಎಂಬ ಭಾವನಾತ್ಮಕ ಸಂಬಂಧವನ್ನು ತಳ್ಳಿ ಹಾಕಿಬಿಟ್ಟರು. ಜನರು ಚೆನ್ನಾಗಿರಬೇಕು ಎಂಬ ಆಶೆಯಿಂದ ರಾಮಪ್ಪನವರು ಸದಾ ಕಾಲ ಚಿಂತಿಸುತ್ತಿದ್ದರು. ಆದರೆ ಕೊನೆಗಾಲದಲ್ಲಿ ಅವರ ಸಹಾಯವನ್ನು ತೆಗೆದುಕೊಂಡ ಯಾರೊಬ್ಬರು ತಿರುಗಿ ನೋಡಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರು, ೨೨ನೆಯ ಸಾಹಿತ್ಯ ಸಮ್ಮೇಳನಕ್ಕೆ ಕೈಬಿಚ್ಚಿ ಸಾಕಷ್ಟು ಖರ್ಚು ಮಾಡಿದವರು, ಕರ್ನಾಟಕ ಏಕೀಕರಣದ ಪ್ರಾಂತೀಯ ಮಟ್ಟದ ಸದಸ್ಯರು ಆಗಿದ್ದ ರಾಮಪ್ಪನವರು ಯಾವ ಗೌರವ ಮರ್ಯಾದೆಯಿಲ್ಲದೆ ಸಾಮಾನ್ಯರಂತೆ ರಬಕವಿಯ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರಗೊಳ್ಳಬೇಕಾಯಿತು. ಪ್ರಸಿದ್ಧನಾಗಿ, ಪುಣ್ಯಪುರುಷನಾಗಿದ್ದ ರಾಮಪ್ಪ ಅನಾಥನಂತೆ ಸತ್ತಿದ್ದು ಒಂದು ದುರಂತವೇ ಸರಿ.

೩.೮. ಚಿಕ್ಕೋಡಿ ಕುಟುಂಬದ ಪ್ರಭಾವ:

ಚಿಕ್ಕೋಡಿ ಮನೆತನದವರು ಕನ್ನಡ ನಾಡು-ನುಡಿ ಮತ್ತು ಇಡೀ ಸಮಾಜಕ್ಕೆ ತಮ್ಮ ತನು-ಮನ-ಧನಗಳನ್ನು ನೀಡಿ ಅಹರ್ನಿಶಿ ದುಡಿದರು. ಇವರು ಮಾಡಿದ ಸತ್ಕಾರ್ಯಗಳ ಫಲವನ್ನು ಇಂದಿಗೂ ಜನ ಪಡೆಯುತ್ತಿದ್ದಾರೆ. ಇವರು ನೀಡಿದ ಅಮೂಲ್ಯ ಕೊಡುಗೆಯನ್ನು ಮೆಚ್ಚಿ ಸಾಮಾಜಿಕರು ಕೃತಜ್ಞತೆ ಸಲ್ಲಿಸಿದ್ದಾರೆ. ತಮ್ಮಣ್ಣಪ್ಪನವರ ಪುಣ್ಯತಿಥಿಯ ಸ್ವರ್ಣಮಹೋತ್ಸವದ ಸಂದರ್ಭದಲ್ಲಿ ಜನತಾ ಶಿಕ್ಷಣ ಸಂಸ್ಥೆಯವರು ತಮ್ಮಣ್ಣಪ್ಪನವರಿಗೆ 'ತ್ಯಾಗಜೀವಿ' ಎನ್ನುವ ಸ್ಮರಣಸಂಚಿಕೆಯನ್ನು ಅರ್ಪಿಸಿದ್ದಾರೆ.

ಅಪ್ಪಣ್ಣಪ್ಪ ಜಂಬಗಿ ಅವರು ಬನಹಟ್ಟಿಯಲ್ಲಿ ನೇಕಾರವೃತ್ತಿಯನ್ನು ಮಾಡುತ್ತಿದ್ದರು. ಇವರಿಗೆ ಬಾಲ್ಯದಿಂದಲೇ ಹಾಡು ಕಟ್ಟುವ ಹವ್ಯಾಸವಿತ್ತು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರಲ್ಲದೆ, ಚಳುವಳಿಗಾರರಿಗೆ ವೀರರಸಪೂರ್ಣ ಕವನ ಬರೆದು ಕೊಟ್ಟಿದ್ದರು. ತಮ್ಮಣ್ಣಪ್ಪನವರನ್ನು ಹತ್ತಿರದಿಂದ ಕಂಡ ಜಂಬಗಿಯವರು ಅವರನ್ನು ಕುರಿತು ಗೀ ಗೀ ಪದವನ್ನು ಬರೆದಿದ್ದಾರೆ.

ಕರುನಾಡಮ್ಮನ ಕುವರ। ಧೀರ ಗಂಭೀರ। ಕರುಣ
ಸಾಗರ। ದಾನಿಗುರುವರ। ತ್ಯಾಗಿ ಪ್ರಭುವರ। ವಿನುತ
ಸುವಿಚ್ಯಾರ। ಸಾರಿದ ಬಹಾದ್ದೂರ। ತಮ್ಮಣ್ಣಪ್ಪನವರಾ। ॥೧॥
ಕವಿವೀರ ಪ್ರಾಂತ್ಯದಲ್ಲುದಿಸಿ। ಮಿಣಜಿಗಿಯನು ತ್ಯಜಿಸಿ।
ಚಿಕ್ಕೋಡಿಗಾಗಮಿಸಿ। ನಾಡದೇವಿಯ ಸ್ಮರಿಸಿ। ತಾಯ್ಗಭಿ
ವಂದಿಸಿ। ಕೃಪೆಯನು ಬಯಸಿ। ತಾಯ ಋಣ ತೀರಿಸಿ।
ಧನ್ಯತಾನೆನಿಸಿ। ಆಗಿತಾ ಅಮರ। ತಮ್ಮಣ್ಣಪ್ಪನವರಾ ॥೨॥
ಮಾತೃಭಾಷೆಗಾದ ಅವಮಾನ। ಸಹಿಸೆನೆಂದಾನ। ಕೆರಳಿ
ನಿಂತಾನ। ಸಾರಿ ಹೇಳ್ಯಾನ। ಅನ್ಯ ಭಾಷೆಯನ್ನ ತಳ್ಳಿ ನಿಂತಾನ।
ಕನ್ನಡದ ಜೇನ। ಹನಿಯನ್ನ। ಸವಿದಂಥಾ ಶೂರ। ತಮ್ಮಣ್ಣಪ್ಪನವರಾ। ॥೩॥
ಕನ್ನಡದ ನಾಡ ನುಡಿಗಾಗಿ। ಜೀರ್ಣೋದ್ಧಾರಕ್ಕಾಗಿ।
ಜೀವನದುದ್ದಕ್ಕೆಣಿಗಿ। ಸತ್ಯಕ್ಕಾಗಿ ಗುಡುಗಿ। ಸತ್ಯಪ್ಪನ ಸುತನಾಗಿ।
ನಾಡಿಗರೆದಿಗಿ। ಸಿರಿಯ ಬರಸಿದ ವೀರ। ತಮ್ಮಣ್ಣಪ್ಪನವರಾ। ॥೪॥
ನೆಲೆಸಿದರು ಬನಹಟ್ಟಿಯಲ್ಲಿ। ತರುಣರೆದೆಯಲ್ಲಿ ಸ್ಫೂರ್ತಿ ತುಂಬುತಲಿ।
ರಕ್ತ ಕಣದಲ್ಲಿ। ಹೆಮ್ಮೆ ಹೆಣೆಯುತ ಸಾಗಿದಂತಾಕಲಿ।
ಕರುನಾಡ್ಹೆಬ್ಬುಲಿ। ಅನಿಸಿದಂತಾ ವೀರ ತಮ್ಮಣ್ಣಪ್ಪನವರಾ। ॥೫॥
ನೆರೆಪ್ರಾಂತಕ್ಕ ಬುದ್ಧಿ ಕಲಿಸ್ಯಾರ। ಕನ್ನಡಿಗರ ಧೀರ।
ಕೈಯ ತೋರಿಸ್ಯಾರ। ಭಾಷಾ ಮಂದೀರ। ಶೃಂಗಾರ।

ಮಾಡ್ಯಾರ। ಕನ್ನಡದ ಮಧೂರ। ಜೇನ ಉಣಿಶ್ಯಾರ। ಅರಸ
ರಸಿಕರಾ। ತಮ್ಮಣ್ಣಪ್ಪನವರಾ। ॥೬॥
ಛಿದ್ರವಾದ ನಾಡ ಒಂದಾಗಿ। ಕರ್ನಾಟಕವಾಗಿ। ಧ್ವಜವು
ಬಾನೀಗಿ। ಏರಿದಾ ಬಗಿ। ಚಿರಂತನವಾಗಿ। ಪುಣ್ಯ ಅವರೀಗಿ
ಸಲ್ಲುದು ನಿಜವಾಗಿ। ಭೀಮನೆದೆವೀರ।
ತಾಯ್ನೆಲದುಸಿರ ತಮ್ಮಣ್ಣಪ್ಪನವರಾ। ॥೭॥
ಹಳಕಟ್ಟಿಯವರ, ನಿರ್ಮಿಸಿದ ಯೋಗಿ। ಶಿಲ್ಪಿ ತಾನಾಗಿ
ಅರ್ಪಿಸಿ ನಾಡಿಗಿ। ಧರ್ಮಕಾರ್ಯವೆಸಿದಿ। ವಚನ ಸಿರಿ ಧರಿಗಿ।
ಅರ್ಪಿಸಿ ತಾನೆರಿಗಿ। ಮಾತೆಯಾ ಅಡಿಗಿ। ತಾಯ್ ಸಿರಿ
ಮುಡುಗಿ। ಮಲ್ಲಿಗೆಯಾದ ಧೀರ। ತಮ್ಮಣ್ಣಪ್ಪನವರಾ। ॥೮॥
ಕನ್ನಡದ ಗುಡಿಯ ಗವಿಯಲ್ಲಿ। ಘರ್ಜಿಸಿದ ಹುಲಿ।
ಎಲ್ಲರೆದೆಯಲ್ಲಿ ಮೆರೆದ ಮಹಾಕಲಿ। ಸಗರ ನೆಲದಲ್ಲಿ।
ಅಮೃತದ ಶಿಲಿ। ಆಗಿದ ಮಹಾಬಲಿ।
ಮಹಾದೇವಿಯ ಕುವರ। ತಮ್ಮಣ್ಣಪ್ಪನವರಾ। ॥೯॥
ಕನ್ನಡಮ್ಮನ ಕಿರೀಟ ಬನಹಟ್ಟಿ ನಗರ। ಗಂಗಾತನಯ
ಕವಿವರ। ಅಪ್ಪಣ್ಣನಕ್ಷರ। ಮಾಣಿಕ್ಯದ ಸರ। ರತ್ನಗಳ ಹಾರ।
ತಾಯ್ ಋಣ ತೀರಿಸಿದಂಥವರ। ನುತಿಸಿ ಆದ ಉದ್ಧಾರ।
ಕರುಣಿಸಿದ ಧೀರ। ತಮ್ಮಣ್ಣಪ್ಪನವರಾ। ॥೧೦॥ಳ

ಡಾ॥ ಡಿ.ಎ. ಬಾಗಲಕೋಟ ಅವರು ಬನಹಟ್ಟಿ ಜನತಾ ಶಿಕ್ಷಣ ಸಂಘದ ಹೈಸ್ಕೂಲಿನಲ್ಲಿ ಅಧ್ಯಾಪಕರು. ಅವರು ರಚಿಸಿದ ಕವನ.

ತಮ್ಮಣ್ಣಪ್ಪನ ಬೆಳಕಿನೆಡೆಗೆ....

ಉತ್ತಿ ಬಿತ್ತಿದ ಒಂದು ಕಾಡು ಭೂಮಿಯ ನಡುವೆ
ಪ್ರಾಣವನೆ ಪಣಕಿಟ್ಟು ಕಾಳಿಡುವ ಕೃಷಿಕನೊಲು
ಗಾಢ ಕತ್ತಲೆಯಲ್ಲಿ ಬೆಳಕು ಸಿಂಪಡಿಸಿರಲು
ನಿನ್ನ ನಾಮಾವಳಿಯೆ ನಮ್ಮ ಜನಮನದೊಡವೆ
ಸ್ವಾಭಿಮಾನದ ನಡುವೆ ಕನ್ನಡದ ಕಿಚ್ಚರಳಿ
ಜ್ಞಾನದಾಹದ ಉರುಲು ಮತ್ತೆ ಕಂಠವ ಸುತ್ತಿ
ನಿನ್ನುಸಿರು ಬೆಳಗುತಿದೆ. ಉರಿಯುತಿಹ ಈ ಬತ್ತಿ

ಕನ್ನಡದ ಉಸಿರಾಗಿ ತರಲಿ ಕೆಚ್ಚನು ಮರಳಿ;
ಜಿಡ್ಡುಗಟ್ಟಿದ ಯಂತ್ರ, ನರಳುತಿಹ ಗಾಲಿಗಳು
ನಿನ್ನ ತ್ಯಾಗದ ತೈಲ ಸಂದು ಸೇರಲಿ ಬೇಗ
ಕೃಪೆದೋರು, ಪೂರೈಸು; ಇಲ್ಲವಾದರೆ ಈಗ
ಪುಟ್ಟ ಮನಗಳು ಇಲ್ಲಿ ಗೀಚಲಿಹ ಹಾಳೆಗಳು
ನಿನ್ನ ಸೇವೆಯೊಳಳಿವ ಜೀವವದು ಅತಿ ಧನ್ಯ:
ಕಾರ್ಯ-ಕಾರಣ ಭಾವವಿಲ್ಲದಿರೆ, ಅದು ಅನ್ಯ. ೯೫

ಆನಂದಕುಮಾರ ಮಂಡಿಯವರು ಬೀಳಗಿ ತಾಲೂಕಿನ ಕುಂದರಗಿ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದಾರೆ. ಇವರು ಬನಹಟ್ಟಿಯ ಜನತಾ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿ. ಅವರು ರಚಿಸಿದ ಕವನ.

ನಮನ

ನಾಡ ನಾಡವರೆಲ್ಲ ನಿನ್ನ ಪ್ರತಿಮೆಯ ನಿಲಿಸಿ
ನಿನ್ನದೆಯ ಬೆಳಕಿನಲಿ ನಮ್ಮ ತಮವನು ಕಳೆದು
ಬಾಳಿನುದ್ದಕೂ ಅರಿಯೆ ನಿನ್ನ ಜೀವನದರ್ಥ
ಬಾಳಿ ಬದುಕಲು ಸಾಕು ನಿನ್ನ ದರ್ಶನದರ್ಥ ॥೧॥
ಘಟ್ಟ ಪೆರ್ದೊರೆ ಪರಿವ ರನ್ನನಾಡಲೆ ನೆಲೆಸಿ
ಕನ್ನಡದಿ ಗೈದಿರಲು ಸಿಂಹ ಗರ್ಜನೆ ತಂದೆ
ನಡುನಾಡ ಗಡಿನಾಡ ಅಂದಿನರಸರು ಸೋತು
ತನು ಮನದಿ ಕಟ್ಟಿಹರು ಕನ್ನುಡಿಗೆ ಪಟ್ಟ ॥೨॥
ತ್ಯಾಗಜೀವಿಯೇ ತಂದೆ ನಿನ್ನ ತ್ಯಾಗದ ಫಲವು
ಹಬ್ಬಿಹಂದರವಾಗಿ ನಾಡೆಲ್ಲ ತಣಿಸಿಹುದು
ಜ್ಞಾನದಾಹದ ಜಗಕೆ ಅರವಟ್ಟಿಗೆಯು ಆಗಿ
ಮನಕೆ ತೋರಿದುದರಿವು ಇದು ನಿತ್ಯ ಸತ್ಯ ॥೩॥
ಜಡಕೆ ಚೇತನವಾಗಿ ಮಿಂಚು ಸಂಚಾರವಾಗಿ
ನಾಡನಾಡನೆ ಸುತ್ತಿ ಮನುಜರೆದೆ ಹೊಕ್ಕಿರಲು
ನಾಡನುಡಿಗಳನರಿತು ಬದುಕಿ ಬಾಳುತ ಶರಣ
'ಸಿರಿಗನ್ನಡಂ ಗೆಲ್ಗೆ' ಜಯಘೋಷ ಮೊಳಗಿದವು ॥೪॥೯೬

ಬನಹಟ್ಟಿಯ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ ಮಹಾವಿದ್ಯಾಲಯದ ಶಿಕ್ಷಕೇತರ ಸಿಬ್ಬಂದಿಯವರಾದ ಶಿವಕುಮಾರ ಜುಂಜಪ್ಪನವರ ಅವರು ರಚಿಸಿದ ಕವನ.

ಪರಮ ಮೂರ್ತಿ ತಮ್ಮಣ್ಣಪ್ಪ
ಕನ್ನಡ ಕುಲತಿಲಕ ತ್ಯಾಗಿಗೆ
ನಾಡು ನುಡಿಯ ಕಂಕಣ ತೊಟ್ಟವಗೆ
ನಿಸ್ವಾರ್ಥ ಪುಣ್ಯ ಪುರುಷಗೆ। ವಂದನೆ ಅಭಿನಂದನೆ
ಸಾಹಿತ್ಯ ಸಂಸ್ಕೃತಿ ಭಾಷಿಕ ಜಾಗೃತಿ
ಬೆಳಸಿದಾ ಕನ್ನಡದಾ ಕೀರುತಿ
ಏಕೀಕರಣಕೆ ಹೆಣಗಾಡಿದಾತ
ನಾಡಿಗೆ ಫಲವ ಉಣಿಸಿದಾತ। ವಂದನೆ ಅಭಿನಂದನೆ
ವಚನ ಪಿತಾಮಹನ ರೂಪಿಸಿದ ಶಿಲ್ಪಿ
ಕನ್ನಡ ಕಲಿಕೆಗೆ ಪಣ ತೊಟ್ಟ ಸ್ವರೂಪಿ
ಬನಹಟ್ಟಿ ಶ್ರೀ ಕಾಡಸಿದ್ಧನ ನಾಡಿಗೆ
ಜನತಾ ಶಿಕ್ಷಣ ಸಂಸ್ಥೆಯ ರೂವಾರಿಗೆ। ವಂದನೆ ಅಭಿನಂದನ[೭]

ಪುತ್ಥಳಿ ಅನಾವರಣಕ್ಕಿಂತ ಹೆಸರಿಡುವುದು ಲೇಸು:

ಜನತಾ ಶಿಕ್ಷಣಸಂಘವನ್ನು ಸ್ಥಾಪಿಸಿ ಬನಹಟ್ಟಿಯ ಶಿಕ್ಷಣಕ್ಷೇತ್ರದಲ್ಲಿ ಅಗಾಧ ಪ್ರಗತಿಯನ್ನು ತಂದ ತಮ್ಮಣ್ಣಪ್ಪನವರ ಸ್ಮರಣೆ ಪ್ರಾತಃಸ್ಮರಣೀಯವಾದದ್ದು. ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲಿ 'ವಚನ ವಾಙ್ಮಯ' ಸಂಶೋಧನೆ ನಡೆಸಿ, ಒಂದು ವಿಶ್ವವಿದ್ಯಾಲಯ ಮಾಡುವಷ್ಟು ಕೆಲಸವನ್ನು ತಾನೊಬ್ಬನೆ ಮಾಡಿದ ತಮ್ಮಣ್ಣಪ್ಪನವರ ಅಳಿಯ ಡಾ.ಫ.ಗು.ಹಳಕಟ್ಟಿಯವರನ್ನು ಕೂಡಾ ಅಷ್ಟೇ ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಡಾ.ಫ.ಗು.ಹಳಕಟ್ಟಿಯವರು ೧೯೪೬-೫೧ರ ವರೆಗೆ ಜನತಾ ಶಿಕ್ಷಣಸಂಘದ ಕಾರ್ಯಾಧ್ಯಕ್ಷರಾಗಿದ್ದರು. ಆ ನಿಟ್ಟಿನಲ್ಲಿ ಬನಹಟ್ಟಿಯ ಜನತೆಗೆ ತುಂಬಾ ನಿಕಟವರ್ತಿಗಳಾಗಿದ್ದರು. ಹೀಗಾಗಿ ಮಹಾವಿದ್ಯಾಲಯದ ಆವರಣದಲ್ಲಿ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ ಮತ್ತು ಡಾ.ಫ.ಗು.ಹಳಕಟ್ಟಿಯವರ ಕಂಚಿನ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕೆಂದು ಆಲೋಚನೆ ನಡೆದಿತ್ತು. ಅದೇ ವೇಳೆಗೆ ೧೯೭೧ರಲ್ಲಿ ಸರಕಾರದಿಂದ 'ವಾಣಿಜ್ಯ ಮಹಾವಿದ್ಯಾಲಯ' ಆರಂಭವಾಯಿತು. ಈ ಸಂದರ್ಭದಲ್ಲಿ ಬನಹಟ್ಟಿಯ ಕಿರಿಯ ಮಹಾವಿದ್ಯಾಲಯದ ಉಪನ್ಯಾಸಕರಾದ ಶ್ರೀ ಜಯವಂತ ಕಾಡದೇವರ ಅವರು ಮಹಾವಿದ್ಯಾಲಯಕ್ಕೆ 'ತಮ್ಮಣ್ಣಪ್ಪ'ನವರ ಹೆಸರನ್ನು ಇಡಬೇಕೆಂದು ಊರಿನ ಹಿರಿಯರು, ವಿದ್ಯಾರ್ಥಿಗಳು ಮತ್ತು ಸಾಹಿತಿಗಳಲ್ಲಿ ಚರ್ಚೆ ಮಾಡಲಾರಂಭಿಸಿದರು. ಅಷ್ಟರಲ್ಲಿ ಪುತ್ಥಳಿ ಅನಾವರಣದ ವಿಷಯ ಪ್ರಸ್ತಾಪವಾಗತೊಡಗಿತ್ತು. ಆದರೆ ಹೆಸರನ್ನು ಇಡಬೇಕೆನ್ನುವ ವಿಷಯಕ್ಕೆ ಅಷ್ಟಾಗಿ ಬೆಂಬಲ ಸಿಗದಾಯಿತು. ಆಗ ಪ್ರೊ. ಜಯವಂತ ಕಾಡದೇವರ ಅವರು ಸುಮ್ಮನೆ ಕೂಡ್ರಲಿಲ್ಲ. ಪಾಟೀಲ ಪುಟ್ಟಪ್ಪ ಅವರ ಪ್ರಸಿದ್ಧ

‘ಪ್ರಪಂಚ’ ಪತ್ರಿಕೆಯಲ್ಲಿ ‘ಮತ್ಥಳಿ ಅನಾವರಣಕ್ಕಿಂತ ಹೆಸರು ಇಡುವುದು ಸೂಕ್ತ’ ಎನ್ನುವ ಲೇಖನ ಬರೆದರು. ಅದೇ ಲೇಖನ ಬನಹಟ್ಟಿಯ ‘ಪ್ರಜಾಭಿಮಾನಿ’ ಪತ್ರಿಕೆಯಲ್ಲಿಯೂ ಪ್ರಕಟವಾಯಿತು. ಜಾತ್ರೆಯ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳು ‘ಪ್ರಾರ್ಥನೆ’ ಎಂಬ ಕರಪತ್ರ ಹಂಚಿದರು. ಅದರಲ್ಲೂ ಹೆಸರಿಡುವ ವಿಚಾರವೇ ಪ್ರಸ್ತಾಪ. ಬನಹಟ್ಟಿಯ ಜನರು ಈ ವಿಷಯಕ್ಕೆ ಬೆಂಬಲ ನೀಡಿದರು. ಆದರೂ ಆಡಳಿತ ಮಂಡಳಿಯವರು ಇದನ್ನೆಲ್ಲ ಉದಾಸೀನದಿಂದ ಕಂಡರು.

ಮೂರ್ತಿಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ದಿವ್ಯಸಾನಿಧ್ಯವನ್ನು ಗದುಗಿನ ಶ್ರೀ ತೋಂಟದ ಸಿದ್ಧಲಿಂಗ ಶ್ರೀಗಳು ವಹಿಸುವರಿದ್ದರು. ಪ್ರೊ. ಜಯವಂತ ಕಾಡದೇವರ ಅವರು ಮೊದಲೇ ಶ್ರೀಗಳಿಗೆ ಪತ್ರ ಬರೆದು ಈ ವಿಷಯವನ್ನು ತಿಳಿಸಿದ್ದರು. ಹೀಗಾಗಿ ಶ್ರೀಗಳು ತಮ್ಮಲ್ಲಿ ಆಲೋಚಿಸಿ, ಇದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದರು. ೨೩ ಡಿಸೆಂಬರ್ ೧೯೮೧ರ ಮೂರ್ತಿ ಅನಾವರಣ ಸಮಾರಂಭದ ಕಾರ್ಯಕ್ರಮಕ್ಕೆ ಅಂದಿನ ಉಪರಾಷ್ಟ್ರಪತಿಗಳಾದ ಶ್ರೀ ಬಿ.ಡಿ.ಜತ್ತಿಯವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗದುಗಿನ ಶ್ರೀ ತೋಂಟದ ಶ್ರೀಗಳು ವಹಿಸಿದ್ದರು. ಪ್ರೊ. ಜಯವಂತ ಕಾಡದೇವರ ಅವರು ಕಾರ್ಯಕ್ರಮದಲ್ಲಿ ತಮ್ಮಣ್ಣಪ್ಪನವರ ಹೆಸರಿಡುವುದಾದರೆ ತಮ್ಮ ತಂದೆಯವರ ಹೆಸರಿನಲ್ಲಿ ೧,೦೦೦ರೂಪಾಯಿಗಳನ್ನು ಕೊಡುವುದಾಗಿ ಪ್ರಕಟಪಡಿಸಿದರು. ಸಭಿಕವರ್ಗದಲ್ಲಿದ್ದ ಜನತಾ ಶಿಕ್ಷಣ ಸಂಘದ ಅಧ್ಯಕ್ಷರಾದ ಶ್ರೀ ಪರಪ್ಪ ಮಂಡಿಯವರು ೫,೦೦೦ರೂಪಾಯಿಗಳನ್ನು ಕೊಡಲು ಒಪ್ಪಿದರು. ಅಲ್ಲಿಯ ತನಕ ಮಹಾವಿದ್ಯಾಲಯಕ್ಕೆ ತಮ್ಮಣ್ಣಪ್ಪನವರ ಹೆಸರನ್ನು ಇಡಲು ನಕಾರ ಸೂಚಿಸಿದ ಶ್ರೀ ಎಂ.ಎಸ್ ಮಂಡಿಯವರು ಕೂಡ ದೇಣಿಗೆ ಕೊಡುವುದಾಗಿ ಘೋಷಿಸಿದರು. ಹೀಗೆ ಕೂತ ಜಾಗದಲ್ಲಿಯೇ ೧ಲಕ್ಷ ೫೨ಸಾವಿರ ರೂಪಾಯಿಗಳ ದೇಣಿಗೆಯ ವಾಗ್ದಾನ ನಡೆಯಿತು.

ಜಗದ್ಗುರು ತೋಂಟದ ಶ್ರೀಗಳು ತಮ್ಮ ಒಂದೂವರೆ ಗಂಟೆಯ ಸುದೀರ್ಘ ಭಾಷಣದಲ್ಲಿ ತಮ್ಮಣ್ಣಪ್ಪನವರ ಹೆಸರನ್ನು ಮಹಾವಿದ್ಯಾಲಯಕ್ಕೆ ಇಡುವುದು ಅವಶ್ಯವಿದೆ ಎಂಬುದನ್ನು ಬನಹಟ್ಟಿಯ ಜನತೆಗೆ ಮನವರಿಕೆ ಮಾಡಿಕೊಟ್ಟರು. ಆದರೆ ತಮ್ಮಣ್ಣಪ್ಪನವರಿಗಿಂತ ಹೆಚ್ಚು ಹಣ ಕೊಟ್ಟವರ ಹೆಸರನ್ನು ಮಹಾವಿದ್ಯಾಲಯಕ್ಕೆ ಇಡಬೇಕೆಂದು ಆಡಳಿತ ಮಂಡಳಿಯವರ ವಾದವಾಗಿತ್ತು. ಇದಕ್ಕೆ ತೋಂಟದ ಶ್ರೀಗಳು ಆಡಳಿತ ಮಂಡಳಿಯವರಿಗೆ ‘ತಮ್ಮಣ್ಣಪ್ಪನವರು ಕೊಟ್ಟ ಹಣರೂಪದ ಕಾಣಿಕೆ ಮಹತ್ವವಲ್ಲ, ಇದ್ದ ತಮ್ಮ ಸರ್ವಸ್ವವನ್ನೆಲ್ಲ ಸಮಾಜಕ್ಕೆ ಧಾರೆ ಎರೆದದ್ದು ಸಮಾಜಕ್ಕೆ ದುಡಿದದ್ದು ಬಹಳ ಮುಖ್ಯ’ ಎಂದು ತಿಳಿಸಿ ಹೇಳಿದರು. ಕಾರ್ಯಕ್ರಮದಲ್ಲಿದ್ದ ಜನತೆ ಶ್ರೀಗಳ ಸಮ್ಮುಖದಲ್ಲಿಯೇ ಹೆಸರು ಇಡುವ ವಿಷಯ ತೀರ್ಮಾನವಾಗಬೇಕು ಎಂದು ಪಟ್ಟು ಹಿಡಿದಾಗ ಆಡಳಿತ ಮಂಡಳಿಯವರು ಜನತೆಯ ಮಾತಿಗೆ ಒಪ್ಪಿ, ವಾಣಿಜ್ಯ ಮಹಾವಿದ್ಯಾಲಯಕ್ಕೆ ‘ತಮ್ಮಣ್ಣಪ್ಪ’ನವರ ಹೆಸರನ್ನು ಇಡಲು ನಿರ್ಧರಿಸಿದರು. ಅದೇ ವೇದಿಕೆಯಲ್ಲಿ ಆಡಳಿತ ಮಂಡಳಿಯವರು ಅನುಮೋದಿಸಿದ ಗೊತ್ತುವಳಿಯು ಪ್ರೊ. ಜಯವಂತ. ಕಾಡದೇವರ ಅವರಿಂದ ಘೋಷಿಸಲ್ಪಟ್ಟಿತು.[೮]

ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯೇ ತನ್ನ ಜೀವನದ ಪರಮಗುರಿ ಎಂದು ನಂಬಿಕೊಂಡು, ಇದ್ದ ಮರಾಠಿ ಶಾಲೆಗಳ ಬದಲಾಗಿ ಜನತೆಗೆ ಕನ್ನಡಭಾಷೆಯ ಶಿಕ್ಷಣವನ್ನು ನೀಡಿದ ಪುಣ್ಯಪುರುಷ, ತನ್ನ ಪ್ರೀತಿಪಾತ್ರರಾದ ಸಂಸ್ಥಾನಿಕರ ಮನವೊಲಿಸಿಕೊಂಡು ಶಾಂತರೀತಿಯಲ್ಲಿ ಹೋರಾಟ ಮಾಡಿ, ಸಾಕಷ್ಟು ಶಾಲೆಗಳನ್ನು ತೆರೆದ ಧೀರೋದಾತ್ತ, ಕನ್ನಡ ಸಾಹಿತ್ಯ ಪರಿಷತ್ತಿನ ವೇದಿಕೆಗಳಲ್ಲಿ, ಧಾರ್ಮಿಕ ಸಭೆ ಸಮಾರಂಭಗಳಲ್ಲಿಯೂ ಕೂಡ ನಮ್ಮ ಸಮಾಜಕ್ಕೆ ಶಿಕ್ಷಣದ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಟ್ಟ ಶಿಕ್ಷಣಪ್ರೇಮಿ ತಮ್ಮಣ್ಣಪ್ಪ 'ಜನತಾ ಶಿಕ್ಷಣ ಸಂಘ'ಕ್ಕೆ ತಾನೇ ಕಾರಣವಾಗಿದ್ದರೂ, ಅದೇ ಸಂಘದ ಒಂದು ಮಹಾವಿದ್ಯಾಲಯಕ್ಕೆ ಹೆಸರಿಡಬೇಕಾದರೆ ಅನೇಕ ಮನಸ್ಸುಗಳು ತಾಕಲಾಟದಲ್ಲಿ ತೊಡಗಿದ್ದು ಬಹಳ ಆಶ್ಚರ್ಯ. ಕಿಂಚಿತ್ತು ಸ್ವಾರ್ಥವಿಲ್ಲದೆ ಗಂಧದ ಕೊರಡಿನಂತೆ ಜೀವ ತೇಯ್ದು ಅದರ ಪರಿಮಳವನ್ನು ಇಡೀ ನಾಡಿನಗಲಕ್ಕೂ ಪಸರಿಸಿದರೂ, ತಾನು ಮಾತ್ರ ಎಲೆ ಮರೆಯ ಕಾಯಿಯಂತೆ ನಿರ್ಲಿಪ್ತನಾಗಿದ್ದ ತಮ್ಮಣ್ಣಪ್ಪನವರಿಗೂ ಈ ಒಣ ಪ್ರತಿಷ್ಠೆಗಳು ಬೇಕಾಗಿರಲಿಲ್ಲ. ಕಾಲ ಗತಿಸಿದಂತೆ ಇಂತಹ ಪುಣ್ಯಪುರುಷರು ಸಮಾಜದಲ್ಲಿ ಅವಜ್ಞೆಗೆ ಒಳಗಾಗುವುದು ಸಹಜ. ಹೀಗಾಗಿ ಮುಂದಿನ ಪೀಳಿಗೆಯವರಿಗೆ 'ತ್ಯಾಗಜೀವಿ ತಮ್ಮಣ್ಣಪ್ಪ'ನವರನ್ನು ನೆನಪಿಸುವುದು ನಮ್ಮೆಲ್ಲರ ಕರ್ತವ್ಯವೂ ಕೂಡ.

ಆಂಗ್ಲೋ ವರ್ನಾಕ್ಯುಲರ್ ಶಾಲೆ ಮತ್ತು ಎ.ವಿ. ಫಸ್ಟ್‌ಗ್ರೇಡ್ ಸ್ಕೂಲ್ ತಮ್ಮಣ್ಣಪ್ಪನವರಿಂದ ಪ್ರಾರಂಭಗೊಂಡವು. ನಂತರ ತಮ್ಮಣ್ಣಪ್ಪನವರ ಕಠಿಣ ಪರಿಶ್ರಮದಿಂದ ಅವರ ಮರಣಾನಂತರದಲ್ಲಿ ಹಾಯಸ್ಕೂಲ್ ಸ್ಥಾಪನೆಯಾಯಿತು. ಮುಂದೆ ಕಿರಿಯ ಮಹಾವಿದ್ಯಾಲಯ, ಪ್ರಥಮದರ್ಜೆ ಮಹಾವಿದ್ಯಾಲಯ, ವಾಣಿಜ್ಯ ಮಹಾವಿದ್ಯಾಲಯ, ಮ್ಯಾನೆಜ್‌ಮೆಂಟ್ ಕೋರ್ಸ್. ಹೀಗೆ 'ಜನತಾ ಶಿಕ್ಷಣ ಸಂಘ' ಬಹು ಎತ್ತರಕ್ಕೆ ಬೆಳೆದು ನಿಂತಿದೆ. ಇಷ್ಟು ಎತ್ತರಕ್ಕೆ ಬೆಳೆದು ಗಟ್ಟಿಯಾಗಿ ನಿಲ್ಲಬೇಕಾದರೆ ಇದಕ್ಕೆ ಗಟ್ಟಿಯಾದ ತಳಪಾಯವನ್ನು ಹಾಕಿದವರು ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿಯವರು.

ತಮ್ಮಣ್ಣಪ್ಪನವರ ಪುಣ್ಯತಿಥಿಯ ಸುವರ್ಣಮಹೋತ್ಸವದ (೬-೧೨-೧೯೮೨) ಸಂದರ್ಭದಲ್ಲಿ ತಮ್ಮಣ್ಣಪ್ಪನವರ ಗೌರವಾರ್ಥವಾಗಿ ಸಂಘವು 'ತ್ಯಾಗಜೀವಿ' ಎಂಬ ಹೆಸರಿನ ವಾರ್ಷಿಕ ಸಂಚಿಕೆಯನ್ನು ಪ್ರಕಟಿಸಿ ಗೌರವಿಸಿತು.

೬-೧೨-೨೦೦೭ರಲ್ಲಿ ತಮ್ಮಣ್ಣಪ್ಪನವರ ಪುಣ್ಯತಿಥಿಯ ಅಮೃತಮಹೋತ್ಸವದ ಕಾರ್ಯಕ್ರಮದಲ್ಲಿಯೂ ಶ್ರೀ ಮ.ನಿ.ಪ್ರ. ಜಗದ್ಗುರು ತೋಂಟದ ಶ್ರೀಗಳು ಸಾನಿಧ್ಯವನ್ನು ವಹಿಸಿದ್ದರು. ಆಗ ಶ್ರೀಗಳು ತಮ್ಮ ಭಾಷಣದುದ್ದಕ್ಕೂ ತಮ್ಮಣ್ಣಪ್ಪನವರ ಸಾಧನೆಯನ್ನು ಕುರಿತು ಶ್ಲಾಘಿಸಿದರು. ಒಂದು ವೇಳೆ ತಮ್ಮಣ್ಣಪ್ಪನವರು ಸಂಸ್ಥಾನಿಕರ ಮನವೊಲಿಸಿ ಕನ್ನಡ ಶಾಲೆಗಳನ್ನು ತೆರೆಯಲು ಪ್ರಯತ್ನಿಸದೆ ಇದ್ದರೆ, ಇಂದು ಜಮಖಂಡಿ ಸಂಸ್ಥಾನದ ಈ ಭಾಗಗಳಲ್ಲದೆ, ಉಳಿದ ಕನ್ನಡ ಭಾಗಗಳಲ್ಲಿಯೂ ಮರಾಠಿಯೇ ತಾಂಡವಾಡುತ್ತಿತ್ತು. ನಮ್ಮ ಮಾತೃಭಾಷೆ ಕನ್ನಡವೆಂಬುದು ಮರೆತೇ ಹೋಗುತ್ತಿತ್ತು. ತಮ್ಮಣ್ಣಪ್ಪನವರು ತಮ್ಮ ಇಡೀ ಜೀವನದುದ್ದಕ್ಕೂ ಸದಾ ಕ್ರಿಯಾಶೀಲ ಶಕ್ತಿಯಾಗಿದ್ದರು. ತಮ್ಮಣ್ಣಪ್ಪನವರನ್ನು

ಸ್ಮರಿಸಿಕೊಳ್ಳುವುದೆಂದರೆ ಅವರ ಹೆಸರಿನಲ್ಲಿ ಪ್ರತಿವರ್ಷ ಅನೇಕ ಸ್ಪರ್ಧೆ ಮತ್ತು ನಾಟಕ, ಸಂಗೀತ ಕಾರ್ಯಕ್ರಮಗಳನ್ನೇರ್ಪಡಿಸುವುದೇ ಆಗಬೇಕು ಎಂದು ಶ್ರೀಗಳು ಅಭಿಪ್ರಾಯಪಟ್ಟರು.

ತಮ್ಮಣ್ಣಪ್ಪನವರಂತೆಯೇ ಪಂಡಿತಪ್ಪನವರೂ ಕೀರ್ತಿಶೇಷರಾಗಿದ್ದಾರೆ. ಪಂಡಿತಪ್ಪನವರ ಕಾರ್ಯ ವೈಖರಿಯನ್ನು ಮೆಚ್ಚಿದ ಗೋಮಾಂತಕರು ಮಾನಪತ್ರವನ್ನು ನೀಡಿದರು. ಆ ಮಾನಪತ್ರದುದ್ದಕ್ಕೂ ಪಂಡಿತಪ್ಪನವರ ಸೇವಾ ಕೈಂಕರ್ಯವನ್ನು ಮೆಚ್ಚಿ ಹೊಗಳಿದ್ದನ್ನು ಕಾಣುತ್ತೇವೆ.(ಅನುಬಂಧ-೩-೫)

೧-೧೦-೧೯೯೧ರಲ್ಲಿ 'ಕೆ.ಎಲ್.ಇ.' ಸಂಸ್ಥೆಯಲ್ಲಿ ಸಂಸ್ಥಾಪಕ ಆಜೀವ ಸದಸ್ಯರ ಸ್ಮರಣಾರ್ಥ ಏಳು ಅಂಗಸಂಸ್ಥೆಗಳಿಗೆ ನಾಮಕರಣ ಸಮಾರಂಭ, ಗಿಲಗಂಚಿ-ಅರಟಾಳ ಪುತ್ಥಳಿ ಅನಾವರಣ ಹಾಗೂ ಬಿ.ಎಂ.ಕಂಕಣವಾಡಿ ಆಯುರ್ವೇದಿಕ ಮಹಾವಿದ್ಯಾಲಯದ ಹಸ್ತಾಂತರ ಇವುಗಳ ಸಂಯುಕ್ತ ಸಮಾರಂಭವು ಬಹು ವಿಜೃಂಭಣೆಯಿಂದ ಜರುಗಿತು. ಆಗ ಮಾಜಿಮಂತ್ರಿಗಳಾದ ಶ್ರೀ ನಿಜಲಿಂಗಪ್ಪ ಅವರು ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಪಂಡಿತಪ್ಪ ಚಿಕ್ಕೋಡಿ ಅವರ ಹೆಸರನ್ನು ಅಥಣಿ ತಾಲೂಕಿನ ಗಳತಗಾದ ಮಾಧ್ಯಮಿಕ ಶಾಲೆಗೆ ಇಟ್ಟು ಗೌರವ ಸೂಚಿಸಿದರು. ಸಂಸ್ಮರಣ ಸಂಪುಟದಲ್ಲಿ ಪ್ರಾಚಾರ್ಯ ಸಿದ್ದಣ್ಣ ಮಸಳಿಯವರು ಪಂಡಿತಪ್ಪನವರ ಕುರಿತಾಗಿ ಒಂದು ಕವನ ರಚಿಸಿದ್ದಾರೆ.

'ಅಭಿಮಾನಧನ ಲಿಂ.ಪಂಡಿತಪ್ಪ ಚಿಕ್ಕೋಡಿ

ಹರಕೆ ಹೊತ್ತು ಹಡೆದಳಾ ತಾಯಿ,
ಹೆಸರಿಟ್ಟಳು 'ಪಂಡಿತ'ನೆಂದು,
ಹರಸಿ ಹಾರೈಸಿ-ಹೆಸರಾಗಿ ಬಾಳಲೆಂದು.
ಈ ಸಂಸಾರ ಸಾಗರದ ತೀರ ಅಪರಂಪಾರ,
ಇಲ್ಲಿ ಬಂದವರೆಷ್ಟು, ತಿರುಗಿ ಹೋದವರೆಷ್ಟು;
ಲೆಕ್ಕ ಇಟ್ಟವರಾರು ತಂದೆ?
ಬಂದವರು ಇಲ್ಲಿ ಇದ್ದವರಿಗಾಗಿ
ಒಂದಿಷ್ಟು ಪ್ರೀತಿ, ವಿಶ್ವಾಸ, ಅಳಿದುಳಿದು ಗಳಿಕೆ
ಬಿಟ್ಟು ಹೋಗುವ ಬಯಕೆ.
ತನಗಾಗಿ, ತನ್ನಂತೆ ದುಡಿದವರಿಗಾಗಿ,
ನೆನಪು ನಿರಂತರ ಉಳಿಯಬೇಕು
ಇಟ್ಟ ಹೆಜ್ಜೆಯ ಗುರುತು, ನೆಲೆ ನಿಲ್ಲಬೇಕು.
ಹಚ್ಚಿಟ್ಟ ಪಣತೆಯ ಬೆಳಕು
ಇಲ್ಲಿಂದ ಅಲ್ಲಿಯವರೆಗೆ ಬೆಳಗಬೇಕು
ಅನ್ನದಾನವನಿಕ್ಕಿ ಹೊನ್ನ ದಾನವನಿಕ್ಕಿ
ಮಣ್ಣು ದಾನವನಿಕ್ಕಿ, ಹರಕೆ ಹೊತ್ತು

ನಿಂತವರ ಮೇಳದಲ್ಲಿ ನಿಂತು
ಒಂದು ಒಪ್ಪತ್ತು ತುತ್ತು ಊಟ
ಬಂದುದೆಲ್ಲಾ ಸಂದಿತು, ಭಗವಂತನಿಚ್ಛೆಗೆ,
ಕಾಯಕದ ನಿಷ್ಠೆಗೆ, ನಾಡು ತಲೆದೂಗಿತು,
ನಾಡು ಕಾಡಿನ ಬಸವರುದ್ಧಾರಕ್ಕೆ
ಸರಸ್ವತಿ ಸನ್ನಿಧಾನಕ್ಕೆ
ಜೀವ ಮುಡಿಪಿಟ್ಟು ದುಡಿದಿರಿ ನೀವು,
ಲಿಂಗ ಮೆಚ್ಚಿ ಹೌದೆಂದಿತು,
ನೀವು ಕಂಡರಿಸಿದ ಸರಸ್ವತಿಯ ಮೂರ್ತಿ,
ಸಾಕಾರವಾಗಿ, ವಿದ್ಯಾಮಂದಿರಗಳಾಗಿ ಬೆಳೆದು
ಕಳಸ ಥಳಥಳಸಿವೆ.
ನಿಮ್ಮ ಹರಕೆ ಸಂದಿದೆ ತಂದೆ,
ಕೋಡಿ ಚಿಕ್ಕೋಡಿಯಾದರೂ
ನೀರು ಹರಿದದ್ದು ಬಹಳ ಮುಂದೆ,
ನಾಡಿನುದ್ದಗಲಕ್ಕೂ ಬೆಳೆದು,
ಬಂಗಾರ ತೆನೆಯಾಗಿ, ಪರಿಮಳದ ಗೊನೆಯಾಗಿ,
ಸೌಗಂಧ ಹನಿಯಾಗಿ, ಝುರಿಯಾಗಿ ತೊರೆಯಾಗಿ,
ಕೃಷ್ಣ ತುಂಗೆಯರ ಮಡಿಲಲ್ಲಿ ಬೆಳೆದು
ಧೀಮಂತವಾಗಿ ನಿಮ್ಮ ಹೆಜ್ಜೆಯ ಗುರುತು
ತೋರು ಬೆರಳು
ಬರಲಿರುವ ಸಂತಾನಕ್ಕೆ
ತೌರನೆರಳು"

ಈ ಒಂದು ಕವನ ಪಂಡಿತಪ್ಪನವರ ಜೀವನದ ಸಾಧನೆಯನ್ನು ಸಮರ್ಥವಾಗಿ ಸೆರೆ ಒಡಿದಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ಪಂಡಿತಪ್ಪನವರು ಮಾಡಿದ ಸಾಧನೆಯ ಪರಿಣಾಮಗಳು ಕರ್ನಾಟಕದುದ್ದಕ್ಕೂ ಪಸರಿಸಿವೆ. ನಿಸ್ವಾರ್ಥದಿಂದ ತೇಯ್ದು ಶ್ರೀಗಂಧ ತಾನು ಅಳಿದರೂ, ತನ್ನ ಪರಿಮಳನ್ನು ಹರಡಿಸುವಂತೆ, ವ್ಯಕ್ತಿಯಾಗಿ ದುಡಿದ ಪಂಡಿತಪ್ಪನವರು ಸಾಂಘಿಕ ಶಕ್ತಿಯಾಗಿ ಬಾಳಿ ಬದುಕಿದರು.

ಕೆ.ಎಲ್.ಇ. ಸಂಸ್ಥೆಯ ಪ್ರಸಾರಾಂಗದಿಂದ 'ಯುಗಪುರುಷರು' ಎಂಬ ಕೃತಿಯು ೨೦೦೪ರಲ್ಲಿ ಪ್ರಕಟಗೊಂಡಿದೆ. ಅದರಲ್ಲಿ ಪ್ರೊ.ಮಲ್ಲಿಕಾರ್ಜುನ ಇಂಚಲ ಅವರು 'ಚಿಕ್ಕೋಡಿ ಪಂಡಿತಪ್ಪ' ಅವರ ಕುರಿತು ಕವನ ರಚಿಸಿದ್ದಾರೆ.

ರಬಕವಿಯ ರವಿಕಿರಣ
ಕನ್ನಡದ ಹೊಂಗಿರಣ
ತಾಯಿ ಕನ್ನಡಾಂಬೆಯ
ವೀರ ಕುವರ ನೀನಾದೆ
ಚಿಕ್ಕೋಡಿ ಪಂಡಿತಪ್ಪನ
ಸಾಹಸಕೆ ಬೆರಗಾದ ಜನ
ಹಾಡಿ ಹರಸಿದರಂದು
ಎದೆ ತುಂಬಿ ಮನದುಂಬಿ
ಆಹಾ!ಹೆಸರಾಯಿತು!
ಬಿರಿದ ಮಲ್ಲಿಗೆ ಪರಿಮಳದಂತೆ
ನಿನ್ನ ನೀನರ್ಪಿಸಿದೆ
ತಾಯಡಿಗೆ ತಾಯಮುಡಿಗೆ
ಬೆಳಗಾವಿಯಲಿ ನೀನು ಕಟ್ಟಿದೆ
ಸಪ್ತಪುರುಷರೊಡಗೂಡಿ ಶಿಕ್ಷಣ
ಸಂಸ್ಥೆಯನು
ಕನ್ನಡಿಗರ ಅಜ್ಞಾನ ಅಂಧಕಾರವನು
ಹೊದೆದು ಸುಜ್ಞಾನ ಚೆಂಬೆಳಕು ನೀಡಿದೆ
ಸರಳ ನಡೆಯೂ ಚಂದ
ಮಾತು ಮಾಣಿಕ್ಯದಂತೆ
ಕಾಂತಿಯನೆ ಚೆಲ್ವಂತೆ!
ಆಂಗ್ಲ ಕನ್ನಡ ವಾರಪತ್ರಿಕೆ
'ವಿಭಾಕರ' ಮುಖಾಂತರ
ಭಾರತೀಯರನು ಬಡಿದೆಬ್ಬಿಸಿದ
ಕನ್ನಡ ವೀರ ಬಂಟನಾದೆ
'ಸಾಧುಗೆ ಸಾಧೆಯ'ವಾದೆ
ಮಾಧುರ್ಯಂಗೆ ಮಾಧುರ್ಯನಾದೆ

ಬಾಧಿಪ್ಪಕಲಿಗೆ

ಕಲಿಯುಗ ವಿಪರೀತನಾದೆ,

ಓ!ಪಂಡಿತಪ್ಪ!ಕರ್ನಾಟಕ

ಏಕೀಕರಣದ ಅಧ್ಯಕ್ಷನಾದೆ,

ಜಮಖಂಡಿಯ ಸಾಹಿತ್ಯ

ಸಮ್ಮೇಳನದ, ಸ್ವಾಗತಾಧ್ಯಕ್ಷನಾದೆ.

ಮೈಸೂರು ಸಾಂಗ್ಲಿಗಳಲಿ

ವೀರಶೈವ ಮಹಾಸಭೆಯ

ಅಧ್ಯಕ್ಷನಾಗಿ, ಶಿವಭಕ್ತರ

ಉದ್ಧರಿಸಿದ ವೀರ ಶರಣನಾದೆ

ನಿನ್ನ ಸೇವಾಗುಣಕೆ

ಕರವೀರ ಪುರರಾಜ

ನೀಡಿದನು 'ಫೋರ್ಡ' ರಥವನ್ನು

ಪಂಡಿತಪ್ಪನ ಸಾಧನೆಗೆ

ಹೌಹಾರಿ! ಮುಂಬೈ ಸರಕಾರ

ನೀಡಿತು "ಮೆಂಬರ್ ಆಫ್

ಬ್ರಿಟಿಷ್ ಎಂಪಾಯರ್" ಬಿರುದನ್ನ

ಗುರುವಾದೆ, ಅಧ್ಯಕ್ಷನಾದೆ;

ಶಿಕ್ಷಣ ಸಂಸ್ಥಾಪಕ, ಸಮಾಜ ಸೇವಕನಾದೆ

ಬಸವ ಪಥದಲಿ ನಡೆದು

ಶಿವನ ಪಾದದಲಿ ಪದ್ಮನಾದೆ.[೧೦೦]

ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಮಾಡಿ ಜನಮನ್ನಣೆಯನ್ನು ಚಿಕ್ಕೋಡಿ ರಾಮಪ್ಪನವರು ಗಳಿಸಿದರು. ರಬಕವಿ, ಬನಹಟ್ಟಿ, ಹುಲ್ಯಾಳ ಮುಂತಾದ ಸುತ್ತಮುತ್ತಲಿನ ಗ್ರಾಮದಲ್ಲಿ ಜನ ಇವರನ್ನು ದೇವರೆಂದೇ ಪೂಜಿಸುತ್ತಾರೆ. ಅಂತಹ ಪುಣ್ಯಾತ್ಮನನ್ನು ಕುರಿತು ರಬಕವಿಯ ಶ್ರೀ ಬಸಲಿಂಗಪ್ಪ ಶಿವಪ್ಪ ಕುಂಬಾರ ಅವರು ತ್ರಿಪದಿಗಳನ್ನು ರಚಿಸಿ ಹಾಡಿದ್ದಾರೆ.

ಚಿಕ್ಕೋಡಿ ರಾಮಣ್ಣ। ದಯಾಳು ಗುಣದಾವ

ರಾಗಿ ಬರಬಂದು ದರ(ಪ್ರತಿ) ಜಿಲ್ಲಾ। ಬಡವರಿಗೆ

ಧಾನ್ಯವ ಕೊಟ್ಟ ಸಲಹ್ಯಾರ।

ಚಿಕ್ಕೋಡಿ ರಾಮಪ್ಪನಂತಹ ಪುಣ್ಯವಂತ

ಹಿರಿಹೊಳಿ ಅವನ ಜಳಕವ। ಮಾಡುವುದ ಕಂಡ

ಗಂಗವ್ವನ ಹರಿಕಿ ಇರಲೆಂದು।

ಸಾಹಿತ್ಯ ಸಮ್ಮೇಳನದ ಸಡಗರ ಏನ ಹೇಳಲಿ

ಹದಿನಾರು ಜೋಡ ಎತ್ತುಗೋಳ। ರಾಮಣ್ಣ

ಬಜಾರ ಹಿಡದ ಬರತಾನ।[೧೧೧]

ರಾಮಪ್ಪನವರು ರಬಕವಿಯ 'ಪಟ್ಟಣ ಶಾಲೆ'ಗೆ ಆಟದ ಬಯಲಿಗಾಗಿ ಭೂಮಿಯನ್ನು ನೀಡಿದರು. ಸಾರ್ವಜನಿಕರ ಸದಾಸೆಯ ಮೇರೆಗೆ ಆ ಶಾಲೆಯ ಸಂಸ್ಥೆಯವರು ಆ ಮೈದಾನಕ್ಕೆ 'ರಾಮಪ್ಪ ಚಿಕ್ಕೋಡಿ' ಎಂದು ನಾಮಕರಣ ಮಾಡಿದ್ದಾರೆ. ರಬಕವಿ ಬಸ್ ನಿಲ್ದಾಣದ ಎದುರಿಗೆ ಕಾಣುವ ವಿಶಾಲವಾದ ಈ ಆಟದ ಮೈದಾನವು 'ಚಿಕ್ಕೋಡಿ ರಾಮಪ್ಪ' ಎಂಬ ನಾಮಫಲಕ ಹೊತ್ತು ನಿಂತಿದೆ. ಮಹಾಲಿಂಗಪುರದ ನಾಕೆಯ ಹತ್ತಿರ ಸಾಕಷ್ಟು ಜಾಗ ತೆಗೆದುಕೊಂಡ ರಾಮಪ್ಪನವರು ಬಡವರಿಗಾಗಿ ಗುಡಿಸಲು ಹಾಕಿಕೊಳ್ಳಲು ಬಿಟ್ಟುಕೊಟ್ಟಿದ್ದರು. ಅದನ್ನು ಅಲ್ಲಿನ ಬಡಜನ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ.

ಕೊನೆ ಟಿಪ್ಪಣಿ:

೧. ಶ್ರೀ ಮ.ನಿ.ಪ್ರ. ಬಸವರಾಜ ಸ್ವಾಮಿಗಳು, ಗುಳೇದಗುಡ್ಡ ಇವರಿಂದ ಪಡೆದ ಮಾಹಿತಿ
೨. ಪಂಡಿತಪ್ಪನವರು ಚಿಕ್ಕೋಡಿ;ದು.ನಿಂ.ಬೆಳಗಲಿ. ಪುಟ–೨
೩. ಹೆಳವರ ಪ್ರಕಾರ ಚಿಕ್ಕೋಡಿ ಕುಟುಂಬದವರು ದಾಖಲಿಸಿಕೊಂಡ ವಿವರ
೪. ತಮ್ಮಣ್ಣಪ್ಪನವರು ಚಿಕ್ಕೋಡಿ;ಡಾ.ಜಯವಂತ ಕುಳ್ಳಿ, ಪುಟ–೬
೫. ಪಂಡಿತಪ್ಪನವರು ಚಿಕ್ಕೋಡಿ;ದು.ನಿಂ.ಬೆಳಗಲಿ. ಪುಟ–೫
೬. ಅದೆ
೭. ತಮ್ಮಣ್ಣಪ್ಪನವರು ಚಿಕ್ಕೋಡಿ;ಡಾ.ಜಯವಂತ ಕುಳ್ಳಿ, ಪುಟ–೬
೮. 'ಪುಣ್ಯಪುರುಷ ಚಿಕ್ಕೋಡಿ ತಮ್ಮಣ್ಣಪ್ಪನವರು'; ದು. ನಿಂ. ಬೆಳಗಲಿ.;ಜಯಕರ್ನಾಟಕ ಪತ್ರಿಕೆ;ಏಪ್ರಿಲ್ ೧೯೬೦,
೯. ಚಿಕ್ಕೋಡಿ ತಮ್ಮಣ್ಣಪ್ಪನವರು; ದು.ನಿಂ.ಬೆಳಗಲಿ. ಪುಟ–೯
೧೦. ತಮ್ಮಣ್ಣಪ್ಪನವರು ಚಿಕ್ಕೋಡಿ; ಡಾ.ಜಯವಂತ ಕುಳ್ಳಿ, ಪುಟ–೬
೧೧. ಚಿಕ್ಕೋಡಿ ತಮ್ಮಣ್ಣಪ್ಪನವರು;ದು.ನಿಂ.ಬೆಳಗಲಿ. ಪುಟ–೧೧
೧೨. 'ಪುಣ್ಯಪುರುಷ ಚಿಕ್ಕೋಡಿ ತಮ್ಮಣ್ಣಪ್ಪನವರು'; ದು. ನಿಂ. ಬೆಳಗಲಿ; ಜಯಕರ್ನಾಟಕ ಪತ್ರಿಕೆ; ಏಪ್ರಿಲ್ ೧೯೬೦, ಪುಟ–೭೦
೧೩. ಬೆಳಕು ಬಿತ್ತಿದವರು; ದು. ನಿಂ. ಬೆಳಗಲಿ, ಪುಟ–೨
೧೪. 'ಗಡಿನಾಡಿನಲ್ಲಿ ಕನ್ನಡದ ಕಿಡಿ ಹೊತ್ತಿಸಿದ ನಾಡು, ನುಡಿಯ ಸೇವಕ ಚಿಕ್ಕೋಡಿ ತಮ್ಮಣ್ಣಪ್ಪ';ದು.ನಿಂ.ಬೆಳಗಲಿ; ಸುಧಾ ಪತ್ರಿಕೆ; ದಿ:೫– ೧೨–೧೯೭೧, ಪುಟ–೨
೧೫. ಬೆಳಕು ಬಿತ್ತಿದವರು; ದು. ನಿಂ. ಬೆಳಗಲಿ, ಪುಟ–೨
೧೬. ಚಿಕ್ಕೋಡಿ ತಮ್ಮಣ್ಣಪ್ಪನವರು; ಡಾ.ಡಿ.ಎ.ಬಾಗಲಕೋಟ, ಪುಟ–೨೧–೨೨
೧೭. ತಮ್ಮಣ್ಣಪ್ಪನವರು; ಡಾ. ಎಸ್.ಬಿ. ಮಾಟೋಳಿ. ರವಿಕೀರ್ತಿ;ಚಾಲುಕ್ಯ ಉತ್ಸವ–೨೦೦೭, ಪುಟ–೩೪೮
೧೮. ಶ್ರೀ ರಾಮಲಿಂಗಪ್ಪ ಬಾಗಲಕೋಟ ಮತ್ತು ಬನಹಟ್ಟಿಯ ಹಿರಿಯರ ಹೇಳಿಕೆ
೧೯. ಶ್ರೀ ಬಿ.ಎಂ. ಮನವಳ್ಳಿ, ನಿವೃತ್ತ ಮುಖ್ಯೋಪಾದ್ಯಾಯರು, ಜನತಾ ಶಿಕ್ಷಣ ಸಂಸ್ಥೆ, ಬನಹಟ್ಟಿ
೨೦. ಶ್ರೀಮತಿ ಅನ್ನಪೂರ್ಣ ಬಾಣಕಾರ, ಬನಹಟ್ಟಿ ಅವರ ಹೇಳಿಕೆ(ಶ್ರೀ ಚ.ಚ.ಅಬಕಾರ ಅವರ ಮಗಳು, ತಮ್ಮಣ್ಣಪ್ಪನವರ ಸ್ವಂತ ಮಗಳ ಮಗಳು)
೨೧. ಬೆಳಕು ಬಿತ್ತಿದವರು; ದು. ನಿಂ. ಬೆಳಗಲಿ, ಪುಟ–೩
೨೨. ಚಿಕ್ಕೋಡಿ ತಮ್ಮಣ್ಣಪ್ಪನವರು–ದು.ನಿಂ.ಬೆಳಗಲಿ. ಪುಟ–೧೩
೨೩. ಶ್ರೀಮತಿ ಅನ್ನಪೂರ್ಣ ಬಾಣಕಾರ, ಬನಹಟ್ಟಿ ಅವರ ಹೇಳಿಕೆ
೨೪. ಶ್ರೀ ಬಸವರಾಜ ಬಾಗೋಜಿಮಠ. ರಬಕವಿ ಅವರ ಹೇಳಿಕೆ.
೨೫. ಶ್ರೀಮತಿ. ಅನ್ನಪೂರ್ಣ ಬಾಣಕಾರ ಅವರ ಹೇಳಿಕೆ
೨೬. ತಮ್ಮಣ್ಣಪ್ಪನವರು ಹಳಕಟ್ಟಿಯವರಿಗೆ ಬರೆದ ಪತ್ರ
೨೭. ಶ್ರೀಮತಿ. ಅನ್ನಪೂರ್ಣ. ಬಾಣಕಾರ ಅವರ ಹೇಳಿಕೆ
೨೮ ತಮ್ಮಣ್ಣಪ್ಪನವರು ಚಿಕ್ಕೋಡಿ; ಡಾ.ಎಸ್.ಬಿ. ಮಾಟೋಳಿ; ರವಿಕೀರ್ತಿ೨೦೦೭–ಚಾಲುಕ್ಯ ಉತ್ಸವ ಸಮಿತಿ. ಪುಟ– ೩೪೯ ಹಾಗೂ ಬನಹಟ್ಟಿಯ ಹಿರಿಯರು.
೨೯. ಶ್ರೀ ರಾಮಲಿಂಗಪ್ಪ ಬಾಗಲಕೋಟ ಅವರಿಂದ ಮಾಹಿತಿ

೩೦. ಶ್ರೀ ಬಸಲಿಂಗಪ್ಪ ಶೆಟ್ಟರ ಅವರಿಂದ ಪಡೆದ ಮಾಹಿತಿ
೩೧. ಶ್ರೀ ಶಿವಲಿಂಗಪ್ಪ ಹತ್ತಿಯವರ ಹೇಳಿಕೆ
೩೨. ಶ್ರೀಮತಿ ಬಾಣಕಾರರವರ ಹೇಳಿಕೆ
೩೩. ಶ್ರೀ ಶಿವಲಿಂಗಪ್ಪ ಹತ್ತಿ ಅವರ ಮಾಹಿತಿ
೩೪. ಶ್ರೀ ಬಸವರಾಜ ಬಾಗೋಜಿಮಠ ಅವರ ಹೇಳಿಕೆ
೩೫. ಶ್ರೀಮತಿ ಬಾಣಕಾರವರಿಂದ ಪಡೆದ ಮಾಹಿತಿ
೩೬. ಚಿಕ್ಕೋಡಿ ತಮ್ಮಣ್ಣಪ್ಪನವರು;ದು.ನಿಂ.ಬೆಳಗಲಿ; ಪುಟ-೩೧
೩೭. ಶ್ರೀ ರಾಮಲಿಂಗಪ್ಪ ಬಾಗಲಕೋಟ ಅವರ ಹೇಳಿಕೆ
೩೮. ಪ್ರೊ. ಜಯವಂತ ಕಾಡದೇವರ ಮತ್ತು ರಾಮಲಿಂಗಪ್ಪ ಬಾಗಲಕೋಟ ಅವರ ಹೇಳಿಕೆ
೩೯. ಚಿಕ್ಕೋಡಿ ತಮ್ಮಣ್ಣಪ್ಪನವರು;ದು.ನಿಂ.ಬೆಳಗಲಿ; ಪುಟ-೩೧
೪೦. ಚಿಕ್ಕೋಡಿ ತಮ್ಮಣ್ಣಪ್ಪನವರು-ದು.ನಿಂ.ಬೆಳಗಲಿ. ಪುಟ-೩೨-೩೩
೪೧. ಶ್ರೀಮತಿ ಬಾಣಕಾರವರಿಂದ ಪಡೆದ ಮಾಹಿತಿ
೪೨. ಶ್ರೀ ಬಿ.ಎಂ. ಮುನವಳ್ಳಿ ನಿವೃತ್ತ ಮುಖ್ಯ ಗುರುಗಳು-ಜನತಾ ಶಿಕ್ಷಣ ಸಂಘ ಇವರ ಮಾಹಿತಿ
೪೩. ಚಿಕ್ಕೋಡಿ ತಮ್ಮಣ್ಣಪ್ಪನವರು-ದು.ನಿಂ.ಬೆಳಗಲಿ. ಪುಟ-೩೩
೪೪. ಅದೆ
೪೫. ಶ್ರೀಮತಿ ಅನ್ನಪೂರ್ಣ ಬಾಣಕಾರ ಮತ್ತು ಶ್ರೀ ತಮ್ಮಣ್ಣಪ್ಪ ಅಬಕಾರ ಅವರ ಹೇಳಿಕೆ
೪೬. ಡಾ.ಡಿ. ಎ. ಬಾಗಲಕೋಟ ಅವರು ತಮ್ಮ ತಂದೆಯವರಿಂದ ಪಡೆದ ಮಾಹಿತಿ
೪೭. ಪ್ರೊ. ಮಲ್ಲಿಕಾರ್ಜುನ ಹುಲಗಬಾಳಿ ಅವರು ತಮ್ಮ ತಂದೆಯವರಿಂದ ಪಡೆದ ಮಾಹಿತಿ
೪೮. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ; ಸಂ. ಡಾ.ಎಂ.ಎಂ.ಕಲಬುರ್ಗಿ. ಪುಟ-೧೩
೪೯. ಶ್ರೀ ಜಯವಂತ ಕಾಡದೇವರ ಅವರ ತಂದೆ ಹೇಳುತ್ತಿದ್ದರಂತೆ. ಇದನ್ನು ಬನಹಟ್ಟಿಯ ಹಿರಿಯರು ಒಪ್ಪಿಕೊಳ್ಳುತ್ತಾರೆ.
೫೦. ಶ್ರೀ ಶಿವಲಿಂಗಪ್ಪ. ಹತ್ತಿ. ವಯಸ್ಸು ೮೬
೫೧. ಬನಹಟ್ಟಿಯ ಹಿರಿಯರು
೫೨. ಶ್ರೀಮತಿ ಬಾಣಕಾರ ಅವರಿಂದ ಪಡೆದ ಮಾಹಿತಿ
೫೩. ತಮ್ಮಣ್ಣಪ್ಪನವರು ಚಿಕ್ಕೋಡಿ; ಡಾ.ಜಯವಂತ ಕುಳ್ಳಿ; ಪುಟ-೭
೫೪. ಸ್ಟಾರ್ ಪತ್ರಿಕೆ. ಸನ್ ೧೯೧೨ನೆಯ ಇಸವಿ ಜನವರಿ ತಾರಿಖು, ೧ನೆಯ ಸೋಮವಾರ
೫೫. ಕ.ಸಾ.ಪ. ಬೆಳ್ಳಿಯ ಹಬ್ಬದ ಸವಿನೆನಪು-೨೫ ವರ್ಷಗಳ ವರದಿ. ಪುಟ-೧
೫೬. ತಮ್ಮಣ್ಣಪ್ಪನವರು ಚಿಕ್ಕೋಡಿ-ಡಾ.ಜಯವಂತ ಕುಳ್ಳಿ; ಪುಟ-೩೧
೫೭. ಅದೆ
೫೮. ಚಿಕ್ಕೋಡಿ ತಮ್ಮಣ್ಣಪ್ಪನವರು; ದು.ನಿಂ.ಬೆಳಗಲಿ. ಪುಟ-೩೩-೩೪ ಮತ್ತು ಬನಹಟ್ಟಿಯ ಹಿರಿಯರು
೫೯. ತಮ್ಮಣ್ಣಪ್ಪನವರು ಚಿಕ್ಕೋಡಿ; ಡಾ.ಜಯವಂತ ಕುಳ್ಳಿ; ಪುಟ-೭
೬೦. ಡಿ.ಸಿ.ಪಾವಟೆ;ಬಿ.ಸಿ.ಜವಳಿ; ಪುಟ-೩೨
೬೧. ಶ್ರೀಮತಿ ಬಾಣಕಾರವರ ಮತ್ತು ಬನಹಟ್ಟಿಯ ಹಿರಿಯರ ಹೇಳಿಕೆ
೬೨. ಶ್ರೀ ಮನವಳ್ಳಿ ಗುರುಗಳು ಮತ್ತು ಬನಹಟ್ಟಿಯ ಸಮಸ್ತ ಹಿರಿಯರು ನೀಡಿದ ಹೇಳಿಕೆ.
೬೩. ಪ್ರೊ. ಮಲ್ಲಿಕಾರ್ಜುನ ಹುಲಗಬಾಳಿ ಅವರು ತಮ್ಮ ತಂದೆಯವರಿಂದ ಪಡೆದ ಮಾಹಿತಿ
೬೪. ಶ್ರೀ ರಾಮಲಿಂಗಪ್ಪ ಬಾಗಲಕೋಟ ಅವರಿಂದ ಮಾಹಿತಿ
೬೫. ಶ್ರೀ ಶಿವಲಿಂಗಪ್ಪ ಹತ್ತಿಯವರ ಹೇಳಿಕೆ
೬೬. ಕವಿ ಈಶ್ವರ ಸಣಕಲ್ಲ ಅವರು ರಚಿಸಿದ 'ನಿಟ್ಟುಸಿರು' ಕವನ
೬೭. ಪರಿಷತ್ಪತ್ರಿಕೆ
೬೮. ಕೇಸರಿ ಪತ್ರಿಕೆ; ಡಿಸೆಂಬರ್ ೧೫, ೧೯೩೩, ಪುಟ-೭
೬೯. ಪಂಡಿತಪ್ಪನವರು ಚಿಕ್ಕೋಡಿ;ದು.ನಿಂ.ಬೆಳಗಲಿ, ಪುಟ-೭
೭೦. 'ಕರ್ಮಯೋಗಿ ಲಿಂ.ಶಿ.ಶಿ.ಬಸವನಾಳರು'-ಎಚ್.ಎಫ್.ಕಟ್ಟೀಮನಿ; ಬಸವನಾಳ ಸ್ಮಾರಕ ಸಂಪುಟ; ಕಟ್ಟೀಮನಿ,ಎಚ್.ಎಫ್., ವಿರುಪಾಕ್ಷನ್ ಎಂ.ಜಿ.(ಸಂ),(೧೯೫೬); ಪುಟ-೨೫೨
೭೧. ವಾರದ ಮಲ್ಲಪ್ಪನವರು; ವಿ.ಶಿವಾನಂದ (೧೯೭೭), ಪುಟ-೫೫.
೭೨. ಶಿ.ಶಿ.ಬಸವನಾಳರ ಜೀವನ ಮತ್ತು ಸಾಧನೆ; ಡಾ.ಮಹೇಶ.ಚಿಂತಾಮಣಿ, ಪುಟ-೧೨.
೭೨. ಅದೇ, ಪುಟ-೧೪
೭೩. ಅದೇ, ಪುಟ-೧೪-೧೫.
೭೪. ಅದೇ, ಪುಟ-೧೫
೭೫. ಪಂಡಿತಪ್ಪನವರು ಚಿಕ್ಕೋಡಿ; ದು.ನಿಂ.ಬೆಳಗಲಿ, ಪುಟ-೮
೭೬. ಡಿ.ಸಿ.ಪಾವಟೆಯವರು; ಬಿ.ಸಿ.ಜವಳಿ, ಪು-೬
೭೭. ಪಂಡಿತಪ್ಪನವರು ಚಿಕ್ಕೋಡಿ; ದು.ನಿಂ.ಬೆಳಗಲಿ, ಪುಟ-೮
೭೮. 'ನಮ್ಮ ಬಸವನಾಳ ಮಾಸ್ತರ'; ಚೆನ್ನಮಲ್ಲಪ್ಪ ಅಬಕಾರ; ಬಸವನಾಳ ಸ್ಮಾರಕ ಸಂಪುಟ; ಕಟ್ಟೀಮನಿ,ಎಚ್.ಎಫ್., ವಿರುಪಾಕ್ಷನ್ ಎಂ.ಜಿ.(ಸಂ),(೧೯೫೬); ಪುಟ-೨೧೭
೭೯. 'ಕೆಲವು ನೆನಪುಗಳು';ಬಿ.ಎಸ್.ಹಂಚಿನಾಳ; ಬಸವನಾಳ ಸ್ಮಾರಕ ಸಂಪುಟ;ಕಟ್ಟೀಮನಿ,ಎಚ್.ಎಫ್., ವಿರುಪಾಕ್ಷನ್ ಎಂ.ಜಿ.(ಸಂ),(೧೯೫೬); ಪುಟ-೧೨೮
೮೦. 'ಕರ್ಮಯೋಗಿ ಲಿಂ.ಶಿ.ಶಿ.ಬಸವನಾಳರು,' ಎಚ್.ಎಫ್.ಕಟ್ಟೀಮನಿ, ಬಸವನಾಳ ಸ್ಮಾರಕ ಸಂಪುಟ, ಪುಟ-೨೪೯ರಿಂದ ೨೩೨

೮೧. 'ಚರಿತ್ರಾರ್ಹ ದಿನಗಳು' ಕೆ.ಎಲ್.ಇ. ಸಂ-೧. ಪುಟ-೨೨೦-೨೨೩.
೮೨. ಪಂಡಿತಪ್ಪನವರು ಚಿಕ್ಕೋಡಿ:ದು.ನಿಂ.ಬೆಳಗಲಿ. ಪುಟ-೧೦
೮೩ ಶ್ರೀಮತಿ ಅನ್ನಪೂರ್ಣ ಬಾಣಕಾರ ಅವರು ನೀಡಿದ ಮಾಹಿತಿ
೮೪. ಪಂಡಿತಪ್ಪನವರು ಚಿಕ್ಕೋಡಿ;ದು.ನಿಂ.ಬೆಳಗಲಿ, ಪುಟ-೧೫
೮೫. ಶ್ರೀಮತಿ ಶಕುಂತಲಾ ರುದ್ರಪ್ಪ ಚಿಕ್ಕೋಡಿ(ಪಂಡಿತಪ್ಪನವರ ಸೊಸೆ) ಅವರು ನೀಡಿದ ಮಾಹಿತಿ.
೮೬. ಪಂಡಿತಪ್ಪನವರು ಚಿಕ್ಕೋಡಿ;ದು.ನಿಂ.ಬೆಳಗಲಿ, ಶ್ರೀ ಪುಟ-೧೫.
೮೭. ಶ್ರೀ ಬಿ.ಎಂ.ಮನವಳ್ಳಿ ನಿವೃತ್ತ ಮುಖ್ಯೋಧ್ಯಾಪಕರು ಮತ್ತು ಜನತಾ ಶಿಕ್ಷಣ ಸಂಸ್ಥೆ ಮಾಜಿ ಅಧ್ಯಕ್ಷರು, ಬನಹಟ್ಟಿ, ಅವರು ನೀಡಿದ ಮಾಹಿತಿ
೮೮. ಪಂಡಿತಪ್ಪನವರು ಚಿಕ್ಕೋಡಿ;ದು.ನಿಂ.ಬೆಳಗಲಿ, ಪುಟ-೧೦
೮೯. ಪಂಡಿತಪ್ಪನವರು ಚಿಕ್ಕೋಡಿ;ದು.ನಿಂ.ಬೆಳಗಲಿ, ಪುಟ-೧೫
೯೦. 'ಅಖಂಡ ೫೦ ವರ್ಷಗಳವರೆಗೆ ಸತ್ವಶಾಲಿಯಾಗಿ ಬಾಳಿದ ಪಂಡಿತಪ್ಪ ಚಿಕ್ಕೋಡಿಯವರ ನಿಧನ'; ಜನಜೀವಾಳ ಪತ್ರಿಕೆ, ಬೆಳಗಾವಿ, ಪುಟ-೧ ದಿನಾಂಕ:೧೬-೧-೧೯೬೧.
೯೧. ತರುಣ ಭಾರತ; ಬೆಳಗಾವಿ ಮರಾಠಿ ಪತ್ರಿಕೆ; ದಿನಾಂಕ:೧೬-೧-೧೯೬೧
೯೨. ಅಖಂಡ ೫೦ ವರ್ಷಗಳವರೆಗೆ ಸತ್ವಶಾಲಿಯಾಗಿ ಬಾಳಿದ ಪಂಡಿತಪ್ಪ ಚಿಕ್ಕೋಡಿಯವರ ನಿಧನ; ಜನಜೀವಾಳ ಪತ್ರಿಕೆ, ಬೆಳಗಾವಿ, ದಿನಾಂಕ:೧೬-೧-೧೯೬೧, ಪುಟ-೧
೯೩. ಗೀಗೀ ಪದ; ಅಪ್ಪಣ್ಣಪ್ಪ ಜಂಬಗಿ; 'ತ್ಯಾಗಜೀವಿ'
೯೪. ತಮ್ಮಣ್ಣಪ್ಪನ ಬೆಳಕಿನೆಡೆಗೆ; ಡಾ. ಡಿ. ಎ. ಬಾಗಲಕೋಟ;'ತ್ಯಾಗಜೀವಿ'
೯೫. ನಮನ;ಆನಂದಕುಮಾರ ಮಂಡಿ; ತ್ಯಾಗಜೀವಿ
೯೬. ವಂದನೆ;ಶಿವಕುಮಾರ ಜುಂಜಪ್ಪನವರ; ತ್ಯಾಗಜೀವಿ
೯೭. 'ಮುತ್ಥಳಿ ಅನಾವರಣಕ್ಕಿಂತ ಹೆಸರು ಇಡುವುದು ಸೂಕ್ತ'; ಪ್ರಜಾಭಿಮಾನಿ;
೯೮. ಅಭಿಮಾನಧನ ಲಿಂ.ಪಂಡಿತಪ್ಪ ಚಿಕ್ಕೋಡಿ; ಸಿದ್ಧಣ್ಣ ಮಸಳಿ; ಕೆ.ಎಲ್.ಇ; ಸಂಸ್ಮರಣ; ೧-೧೦-೧೯೯೧
೯೯. ಚಿಕ್ಕೋಡಿ ಪಂಡಿತಪ್ಪ; ಪ್ರೊ.ಮಲ್ಲಿಕಾರ್ಜುನ ಇಂಚಲ; ಯುಗಪುರುಷರು;ಕೆ.ಎಲ್.ಇ. ೨೦೦೪
೧೦೦. ಶ್ರೀ ಬಸಲಿಂಗಪ್ಪ ಶಿವಪ್ಪ ಕುಂಬಾರ ವಿರಚಿತ ತ್ರಿಪದಿಗಳು

ಅಧ್ಯಾಯ ನಾಲ್ಕು:
ಚಿಕ್ಕೋಡಿ ಕುಟುಂಬದ ಸಾಧನೆ:

೪.೧. ತಮ್ಮಣ್ಣಪ್ಪ:

೪.೧.೧. ಸಾಮಾಜಿಕ
೪.೧.೨. ಧಾರ್ಮಿಕ
೪.೧.೩. ರಾಜಕೀಯ
೪.೧.೩. ಶೈಕ್ಷಣಿಕ

೪.೨. ಪಂಡಿತಪ್ಪ:

೪.೨.೧. ಸಾಮಾಜಿಕ
೪.೨.೨. ಧಾರ್ಮಿಕ
೪.೨.೩. ರಾಜಕೀಯ
೪.೨.೪. ಸಂಸದೀಯ ಪಟು
೪.೨.೫. ಶೈಕ್ಷಣಿಕ

೪.೩. ರಾಮಪ್ಪ:

೪.೩.೧. ಸಾಮಾಜಿಕ
೪.೩.೨. ಧಾರ್ಮಿಕ
೪.೩.೩. ಶೈಕ್ಷಣಿಕ

ಅಧ್ಯಾಯ ನಾಲ್ಕು

ಚಿಕ್ಕೋಡಿ ಕುಟುಂಬದ ಸಾಧನೆಗಳು:

೪.೧. ತಮ್ಮಣ್ಣಪ್ಪ:

೪.೧.೧.ಸಾಮಾಜಿಕ:

'ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ. ಹೊನ್ನು, ಹೆಣ್ಣು, ಮಣ್ಣಿಂಗೆ ಸತ್ತುದು ಕೋಟಿ. ಗುಹೇಶ್ವರಾ ನಿಮಗಾಗಿ ಸತ್ತವರನಾರನೂ ಕಾಣೆ' ಎಂಬ ಅಲ್ಲಮಪ್ರಭುವಿನ ವಾಣಿಯಂತೆ ಈ ಜಗತ್ತಿನಲ್ಲಿ ಬಹಳಷ್ಟು ಜನ ತಮಗಾಗಿ ಬದುಕುತ್ತಾರೆ. ಸಮಾಜಕ್ಕಾಗಿ ಬದುಕುವವರು ಬಹಳ ವಿರಳ. ಈ ವಿರಳರು ತಮಗಿಂತ ಸಮಾಜ ದೊಡ್ಡದು ಎಂದು ಬಲವಾಗಿ ನಂಬಿದವರು. ಸಮಾಜಕ್ಕಾಗಿಯೇ ತಮ್ಮ ಇಡೀ ಬದುಕನ್ನು ಗಂಧದಂತೆ ಸವೆಸಿ ತಾವು ಜಗತ್ತಿಗೆ ದೀಪವಾಗಿ ಉರಿದು, ಅದರ ಬೆಳಕನ್ನು ಸಮಾಜಕ್ಕೆ ನೀಡಿದವರು. ಇಂತಹ ಪ್ರಾತಃಸ್ಮರಣೀಯ ವ್ಯಕ್ತಿಗಳಲ್ಲಿ ಶ್ರೀ ತಮ್ಮಣ್ಣಪ್ಪನವರೂ ಒಬ್ಬರು. ತಮ್ಮಣ್ಣಪ್ಪನವರು ಕಲಿತದ್ದು ಬರೀ ಮುಲ್ಕಿ ಪರೀಕ್ಷೆ. ಅವರ ವಾಸಸ್ಥಳ ಬನಹಟ್ಟಿ, ಚಿಕ್ಕ ಊರು. ಆದರೆ ಅವರ ಕಾರ್ಯಕ್ಷೇತ್ರ ವಿಶಾಲವಾದದ್ದು. ತಮ್ಮಣ್ಣಪ್ಪನವರು ಪ್ರಾಥಮಿಕ ಶಾಲೆಯ ಶಿಕ್ಷಕರಾದರೂ, ಅವರ ಕನಸು ವಿಶ್ವವಿದ್ಯಾಲಯ ಸ್ಥಾಪಿಸುವ ಸದಾಶಯ ಹೊಂದಿರುವಂತಹದು. ವ್ಯವಹಾರ ವಹಿವಾಟು ಮತ್ತು ಸಭೆ-ಸಮಾರಂಭಗಳ ಸಕ್ರಿಯ ಪಾಲ್ಗೊಳ್ಳುವಿಕೆಯ ಕಾರಣದಿಂದ ತಮ್ಮಣ್ಣಪ್ಪನವರು ಶಿಕ್ಷಕ ವೃತ್ತಿಗೆ ಶರಣು ಹೊಡೆಯಬೇಕಾಯಿತು. ತಮ್ಮಣ್ಣಪ್ಪನವರಿಗೆ ಲಿಂಗಾಯತ ಧರ್ಮದ ಬಗ್ಗೆ ಅಪಾರ ಅಭಿಮಾನವಿತ್ತು. ತಮ್ಮ ಧರ್ಮದ ಪಂಗಡದಲ್ಲಿನ ಒಳಜಗಳಗಳು, ಅಜ್ಞಾನ, ಮೂಢನಂಬಿಕೆ, ಕಂದಾಚಾರ ಮತ್ತು ಜಾತೀಯತೆಯ ತಾರತಮ್ಯ ಇವುಗಳ ಬಗ್ಗೆ ಸದಾ ಚಿಂತಿಸುತ್ತಿದ್ದರು. ಅಷ್ಟೇ ಅಲ್ಲ, ಈ ವಿಷಯಗಳನ್ನು ಚರ್ಚಿಸಲು ಧಾರ್ಮಿಕ ಸಭೆ-ಸಮಾರಂಭಗಳ ವೇದಿಕೆಗಳನ್ನು ಬಳಸಿಕೊಳ್ಳುತ್ತಿದ್ದರು. ಜೊತೆಗೆ ಸಮಾಜದ ಅಭಿವೃದ್ಧಿಗಾಗಿ ಸತತ ಪ್ರಯತ್ನಪಟ್ಟರಲ್ಲದೆ, ಸಂಘ-ಸಂಸ್ಥೆಗಳಲ್ಲಿ ಕ್ರಿಯಾತ್ಮಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅಷ್ಟೇ ಅಲ್ಲ ತಮ್ಮ ಜೀವಿತಾವಧಿಯಲ್ಲಿ ನಾಡಿನ ಹಲವಾರು ಸಂಘಸಂಸ್ಥೆಗಳೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದರು. ತಮ್ಮಣ್ಣಪ್ಪನವರು ಒಬ್ಬ ವ್ಯಕ್ತಿಯಾಗಿ ಕೆಲಸ ಮಾಡದೆ ಒಂದು ಸಾಂಘಿಕ ಶಕ್ತಿಯಾಗಿ ಕೆಲಸ ಮಾಡಿದರು. ಸ್ಥಳೀಯ ಮಟ್ಟದಲ್ಲಿ ಯುವಕರನ್ನು ಪ್ರೋತ್ಸಾಹಿಸಿ ಅವರಿಂದ ಒಳ್ಳೆಯ ಕೆಲಸಗಳನ್ನು ಮಾಡಿಸುತ್ತಿದ್ದರು. ಧಾರ್ಮಿಕ ಕಾರ್ಯಗಳಲ್ಲಿ ಸಾಧ್ಯವಾದಷ್ಟು ಒಳ್ಳೆಯ ಆಚರಣೆಗಳನ್ನು ಜಾರಿಗೆ ತರುವಲ್ಲಿ ಕಾರ್ಯೋನ್ಮುಖರಾಗುತ್ತಿದ್ದರು. ನಾಡಿನ ಹಿರಿಯ ಮುಖಂಡರುಗಳ ಜೊತೆ ನಿಕಟ ಸಂಪರ್ಕವನ್ನಿಟ್ಟುಕೊಂಡ ತಮ್ಮಣ್ಣಪ್ಪನವರು ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳನ್ನು ಹುಟ್ಟುಹಾಕುವಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ.

೪.೧.೧.೧. ಜೇಡರ ದಾಸಿಮಯ್ಯ ಪಂಗಡದ ಸುಧಾರಣೆ:

ಲಿಂಗಾಯತ ಧರ್ಮದ ಒಳಪಂಗಡಗಳಲ್ಲಿ ನೇಕಾರ ಪಂಗಡವು ಅತ್ಯಂತ ಹಿಂದುಳಿದ ವರ್ಗವಾಗಿತ್ತು. ಅದಕ್ಕೆ ಕಾರಣ ಬಡತನ, ಅನಕ್ಷರತೆ. ಬಡತನ ರೇಖೆಯಲ್ಲಿರುವ ನೇಕಾರ ಸಮುದಾಯಕ್ಕೆ ಶಿಕ್ಷಣ ಕೊಡಿಸುವುದರೊಂದಿಗೆ ಅದರ ಏಳಿಗೆಗಾಗಿ ಜಾಗೃತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಉದ್ದೇಶ ತಮ್ಮಣ್ಣಪ್ಪನವರದಾಗಿತ್ತು.

ದಿನಾಂಕ೨೭-೫-೧೯೨೯ರಂದು ಬಳ್ಳಾರಿ ಜಿಲ್ಲೆಯ ಕೊಟ್ಟೂರು ಗ್ರಾಮದಲ್ಲಿ ಶ್ರೀ ಜೇಡರ ದಾಸಿಮಯ್ಯನ ಪುರಾಣೋತ್ಸವವು ಜರುಗಿತು. ಆ ಕಾಲದಲ್ಲಿ ನೇಕಾರ ಸಮುದಾಯದ ಅನೇಕ ಜನರು ಬೇರೆಬೇರೆ ಗ್ರಾಮಗಳಿಂದ ಬಂದು ಸೇರಿದರು. ಆ ಸಮಯದಲ್ಲಿ ಕಾರ್ಯಕ್ರಮದ ಕೇಂದ್ರಬಿಂದುವಾಗಿ ವಿಜಾಪುರದಿಂದ ಡಾ.ಫ.ಗು.ಹಳಕಟ್ಟಿಯವರು ಆಗಮಿಸಿದ್ದರು. ಆ ಸಂದರ್ಭದಲ್ಲಿ ಆಯಾ ಗ್ರಾಮದ ಪ್ರಮುಖರೆಲ್ಲರೂ ಸೇರಿ ದಾಸಿಮಯ್ಯ ಪಂಗಡದ ಸುಧಾರಣೆಗೋಸ್ಕರ ವಿಶೇಷ ಪ್ರಯತ್ನಗಳನ್ನು ಎಲ್ಲ ಕಡೆಗೂ ಮಾಡಬೇಕೆಂದು ಅಭಿಪ್ರಾಯಪಟ್ಟರು.[೧]

ಯಾವುದೇ ಒಂದು ಸಮುದಾಯ ಅಭಿವೃದ್ಧಿ ಹೊಂದಬೇಕಾದರೆ ಮೊದಲು ಆ ಸಮುದಾಯದ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು. ಆರ್ಥಿಕ ಸ್ಥಿತಿ ಸುಧಾರಿಸಬೇಕಾದರೆ ಆ ಸಮುದಾಯ ಪ್ರಗತಿಪರ ವಿಚಾರಗಳನ್ನು ಮೈಗೂಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ತಮ್ಮಣ್ಣಪ್ಪನವರು ನೇಕಾರ ಸಮುದಾಯ ಪ್ರಗತಿ ಹೊಂದಿದರೆ, ಅದು ಲಿಂಗಾಯತ ಸಮಾಜದ ಬೆಳವಣಿಗೆಯ ಒಂದು ಭಾಗವೆಂದು ಎಂದು ನಂಬಿಕೊಂಡಿದ್ದರು. ನೇಕಾರ ಸಮುದಾಯದಲ್ಲಿರುವ ಅನಕ್ಷರತೆ, ಅಜ್ಞಾನ, ಕಂದಾಚಾರಗಳನ್ನು ತೊಲಗಿಸುವಲ್ಲಿ ಈ ಸಮುದಾಯದ ಮುಖಂಡರ ಜೊತೆ ಸತತ ಪ್ರಯತ್ನಪಟ್ಟರು. ಈ ಮಹನೀಯರುಗಳ ಸತತ ಚಿಂತನೆ-ಯೋಜನೆಗಳಿಂದಾಗಿ ಇಂದು ನೇಕಾರ ಸಮುದಾಯ ಶಿಕ್ಷಣ, ವ್ಯಾಪಾರ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಕಾಣಲು ಸಾಧ್ಯವಾಗಿದೆ.

೪.೧.೧.೨. ನೇಕಾರರ ಬಂಧು :

ಬನಹಟ್ಟಿ, ರಬಕವಿ, ಮಹಾಲಿಂಗಪುರ, ತೇರದಾಳ ಈ ಭಾಗದ ಜನರ ಪ್ರಮುಖ ಉದ್ಯೋಗ ನೇಕಾರಿಕೆ. ನೇಕಾರರ ಸ್ಥಿತಿ ಮೊದಲಿನಿಂದಲೂ ಶೋಚನೀಯ. ನೇಕಾರರ ಪರಿಸ್ಥಿತಿಯನ್ನು ಸುಧಾರಿಸಲು ನೇಕಾರ ಕುಟುಂಬದವರಾದ ತಮ್ಮಣ್ಣಪ್ಪನವರು ಹೆಣಗಿದರು. ಪ್ರಾಮಾಣಿಕವಾಗಿ ದುಡಿಯುವಂತೆ ನೇಕಾರರಿಗೆ ತಿಳಿಹೇಳುತ್ತಿದ್ದರು. ನೇಕಾರರಿಗೆ ನೂಲು ಕೊಟ್ಟು ಸೀರೆ ನೇಯಲು ತಿಳಿಸುತ್ತಿದ್ದರು. ವ್ಯಾಪಾರಿಗಳಿಗೂ ಪ್ರಾಮಾಣಿಕರಾಗಿರುವಂತೆ ಉಪದೇಶಿಸುತ್ತಿದ್ದರು. ಸೀರೆ ವ್ಯಾಪಾರಿ, ಬಡನೇಕಾರರ ಕಡೆಯಿಂದ ಒಂದು ಸೀರೆಗೆ ಒಂದು ಬಿಲ್ಲೆಯಂತೆ ಹಣ ಮುರಿದುಕೊಳ್ಳುತ್ತಿದ್ದ. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿತ್ತು. ಆಗಿನ ಸಮಯದಲ್ಲಿ ಒಂದು ಬಿಲ್ಲೆಗೆ ಬಹಳ ಬೆಲೆಯಿತ್ತು.

ತಮ್ಮಣ್ಣಪ್ಪನವರು ನೋಡಿಕೊಳುತ್ತಿದ್ದ ಅಬಕಾರ ಅವರ ಅಂಗಡಿಯಲ್ಲಿಯೂ ಈ ಪದ್ಧತಿ ಇತ್ತು. ಯಾವುದೋ ನೆಪಕ್ಕೆ ಬಡನೇಕಾರನಿಂದ ಹಣ ಕಸಿಯುವುದು ತಮ್ಮಣ್ಣಪ್ಪನವರಿಗೆ ಸರಿಬರಲಿಲ್ಲ. ಆ ಭಾಗದ ವ್ಯಾಪಾರಿಗಳನ್ನೆಲ್ಲ ತಮ್ಮಣ್ಣಪ್ಪನವರು ಸೇರಿಸಿದರು. ಸೀರೆಗೆ ಒಂದು ಬಿಲ್ಲೆಯಂತೆ ಹಣ ಮುರಿಯುವುದನ್ನು ಖಂಡಿಸಿದರು. ಬಡವನಿಂದ ಹಣ ಕಸಿಯುವುದು ಅನ್ಯಾಯವೆಂದು ಹೇಳಿದರು. ಬಡನೇಕಾರನಿಗೆ ಕೂಲಿ ಹೆಚ್ಚುಮಾಡಿ ಅನುಕೂಲತೆ ಒದಗಿಸುವುದನ್ನು ಬಿಟ್ಟು ಆತನಿಂದಲೇ ಕಿತ್ತುಕೊಳ್ಳುವುದೆಂದರೆ ಯಾವ ನ್ಯಾಯ ಎಂದು ವ್ಯಾಪಾರಿಗಳಿಗೆ ಕೇಳಿದರು. ವ್ಯಾಪಾರಿಗಳಿಗೂ ಈ ಮಾತು ಸರಿಕಂಡಿತು. ಅಂದಿನಿಂದ ಬಿಲ್ಲೆ ಮುರಿಯುವ ರೂಢಿ ನಿಂತು ನೇಕಾರರಿಗೆ ಹಿತವಾಯಿತು. ಈ ಘಟನೆಯಿಂದ ತಮ್ಮಣ್ಣಪ್ಪನವರ ಹೃದಯ ವೈಶಾಲ್ಯ ಎಂಥದೆಂಬುದು ತಿಳಿದುಬರುತ್ತದೆ. ಸುಮ್ಮನೆ ಒಂದು ಸೀರೆಗೆ ಒಂದು ಬಿಲ್ಲೆ ಬರುತ್ತದೆ ಎಂದರೆ ಯಾರು ಬಿಡುತ್ತಾರೆ. ಶ್ರೀಮಂತರನ್ನು ಈ ಪದ್ಧತಿಯ ನಿರಾಕರಣೆಗೆ ಒಪ್ಪಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಅನೇಕ ವರ್ಷಗಳಿಂದ ನಡೆದುಬಂದ ಪದ್ಧತಿಯನ್ನು ಬಿಟ್ಟು ಈ ಹೊಸ ಪದ್ಧತಿಯನ್ನು ಒಮ್ಮೆಲೆ ಜಾರಿ ತರುವುದು ಕಷ್ಟಕರವಾಗಿತ್ತು. ಆದರೆ ತಮ್ಮಣ್ಣಪ್ಪನವರ ಅಚಲ ಸ್ವಭಾವದಿಂದ ಬಿಲ್ಲೆ ಕೊಡುವ ಪದ್ಧತಿ ನಿಂತುಹೋಯಿತು.[೨] ಇದರಿಂದ ಬಡ ನೇಕಾರರ ಪ್ರೀತಿ ವಿಶ್ವಾಸಗಳಿಗೆ ಅವರು ಪಾತ್ರರಾದರು. ಎಷ್ಟೋ ಜನ ನೇಕಾರರ ಮನೆಯಲ್ಲಿ ತಮ್ಮಣ್ಣಪ್ಪನವರ ಫೋಟೋ ಹಾಕಿರುವುದನ್ನು ಬನಹಟ್ಟಿಯ ನಾಗರಿಕರು ನೆನಸಿಕೊಳ್ಳುತ್ತಾರೆ. ಬನಹಟ್ಟಿಯ ಶ್ರೀ ಮಲ್ಲಪ್ಪ ಹಳ್ಯಾಳರ ತಂದೆ ತಮ್ಮ ಸ್ವರ್ಗಸ್ಥ ತಂದೆಯ ಫೋಟೋವನ್ನು ಮನೆಯಲ್ಲಿ ಹಾಕಿದ್ದಿಲ್ಲವಂತೆ. ತಮ್ಮಣ್ಣಪ್ಪನವರ ಫೋಟೋವೇ ಅವರ ಮನೆಯ ಗೋಡೆಯ ಮೇಲೆ ಹಾಕಿದ್ದನ್ನು ಜ್ಞಾಪಿಸಿಕೊಳ್ಳುತ್ತಾರೆ. 'ನೇಕಾರರ ದೇವರು'ಎಂದೇ ಹೆಸರಾಗಿರುವ ತಮ್ಮಣ್ಣಪ್ಪನವರನ್ನು ನೆನಸಿಕೊಳ್ಳುವಾಗ ಅವರ ಕಣ್ಣುಗಳಲ್ಲಿ ಕೃತಜ್ಞತೆ ಕಂಡುಬರುತ್ತದೆ.[೩]

೪.೧.೨. ಧಾರ್ಮಿಕ:

೪.೧.೨.೧. ಶಿವಾದ್ವೈತ ಸಿದ್ಧಾಂತ ಪ್ರಚಾರಕ ಸಂಘ:

ಬನಹಟ್ಟಿ ಗ್ರಾಮದಲ್ಲಿ ೧೭-೫-೧೯೨೭ ಅಂದರೆ ವೈಶಾಖ ಶುದ್ಧ ೫ ಶಕೆ ೧೮೪೮ರ ಶುಭ ಮಹೂರ್ತದಲ್ಲಿ ಎಲ್ಲಟ್ಟಿ ಹಿರೇಮಠಾಧ್ಯಕ್ಷ ವೀರಸಂಗಯ್ಯಸ್ವಾಮಿ ಇವರ ಮಠದಲ್ಲಿ 'ಶಿವಾದ್ವೈತ ಸಿದ್ಧಾಂತ ಪ್ರಚಾರಕ ಸಂಘ'ವನ್ನು ಸ್ಥಾಪಿಸಲಾಯಿತು. ಲಿಂಗಾಯತ ಸಮಾಜದಲ್ಲಿ ಧರ್ಮದ ವಿಷಯಕ್ಕೆ ಅನಾದರ, ನಿಷ್ಕಾಳಜಿ ಉಂಟಾದದ್ದನ್ನು ಕಂಡು ಅವುಗಳನ್ನು ಹೋಗಲಾಡಿಸವುದರ ದೆಶೆಯಿಂದ ಇಂಥ ಸಂಘಗಳು ಪ್ರತಿಯೊಂದು ಗ್ರಾಮದಲ್ಲಿ ಇರಬೇಕೆಂದು ಆಲೋಚಿಸಿ ಈ ಸಂಘವು ಅಸ್ತಿತ್ವದಲ್ಲಿ ಬಂದಿತು. ಈ ಸಂಘಕ್ಕೂ ತಮ್ಮಣ್ಣಪ್ಪನವರಿಗೂ ಅವಿನಾಭಾವ ಸಂಬಂಧ. ಈ ಸಂಘ ಸ್ಥಾಪನೆಯಾಗಲು ತಮ್ಮಣ್ಣಪ್ಪನವರು ಕಾರಣಕರ್ತರು. ಅವರು ಈ ಸಂಘದ ಪ್ರತಿಯೊಂದು ಕಾರ್ಯಕ್ರಮದಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ಕ್ರಿ.ಶ.೧೯೨೮ರಲ್ಲಿ ಬಸವಜಯಂತಿ ಉತ್ಸವವನ್ನು ಈ ಸಂಘ ಸಂಭ್ರಮದಿಂದ

ಆಚರಿಸಿತು. ಅಂದು ಪಲ್ಲಕ್ಕಿಯಲ್ಲಿ ಬಸವಣ್ಣನ ಭಾವಚಿತ್ರವನ್ನು ಇಟ್ಟು ಮೆರವಣಿಗೆ ಮಾಡಿದರು. ತಮ್ಮಣ್ಣಪ್ಪನವರು ಬಸವಣ್ಣನ ಕುರಿತು ಭಾಷಣ ಮಾಡಿದರು. ಇದರಿಂದ ಹಳಕಟ್ಟಿಯವರ ವಚನವಾಙ್ಮಯ ಸಂಶೋಧನೆ ಮತ್ತು ಶರಣಸಿದ್ಧಾಂತದ ಪರಿಚಯ ನಾಡಿನಲ್ಲೆಲ್ಲ ಹರಡುತ್ತಿರುವುದು ಸ್ಪಷ್ಟವಾಗುತ್ತದೆ.

ಈ ಸಂಘವು ಸ್ಥಾಪನೆಯಾದ ಒಂದು ವರ್ಷದ ಅವಧಿಯಲ್ಲಿ ಸುಮಾರು ಕಾರ್ಯಕ್ರಮಗಳು ಜರುಗಿದವು. ಅವುಗಳ ವಿಷಯಗಳು ಸಂಪೂರ್ಣವಾಗಿ ಲಿಂಗಾಯತ ಧರ್ಮದ ಜಾಗೃತಿಗೆ ಪೂರಕವಾಗಿದ್ದವು. ಅವು: ಗುರುಲಿಂಗಜಂಗಮ ಚರ್ಚೆ, ವೀರಶೈವ ಧರ್ಮಾಚರಣೆ, ಇಷ್ಟಲಿಂಗ ಸ್ವರೂಪ, ಧರ್ಮಜಾಗೃತಿ, ಪಾದೋದಕ, ವಾಸನಾಕ್ಷಯ, ವಿರಕ್ತೋತ್ಪತ್ತಿ ಲಕ್ಷಣ, ಶಿವಯೋಗಾಚರಣೆ, ಶಿವಾನುಭವ ಶಾಸ್ತ್ರವಿಚಾರ, ಜಂಗಮಲಕ್ಷಣ, ಮೋಹತ್ಯಾಗ, ಸ್ವಧರ್ಮ, ವೀರಮಾಹೇಶ್ವರರ ವರ್ತಮಾನ, ಧರ್ಮಸುಧಾರಣೆ, ಭಕ್ತಿ ಮುಂತಾದ ವಿಷಯಗಳನ್ನೊಳಗೊಂಡಿದ್ದವು.

ಈ ಸಂಘವು ಧಾರ್ಮಿಕ ವಿಷಯಗಳನ್ನಲ್ಲದೆ ಸಾಮಾಜಿಕ ವಿಷಯಗಳನ್ನು ಚರ್ಚಿಸುತ್ತಿತ್ತು. ಅವುಗಳಲ್ಲಿ ತಂಬಾಕ ಚಟವನ್ನು ಬಿಡುವುದು, ಚಹಾ ತ್ಯಜಿಸುವುದು, ಪತಿವ್ರತಾಧರ್ಮ, ಸ್ತ್ರೀಧರ್ಮರಹಸ್ಯ ಮುಂತಾದ ವಿಷಯಗಳು ಪ್ರಮುಖವಾಗಿವೆ.

ಪ್ರತಿವಾರವೂ ಸಭೆ ಸೇರಿಸಿ ತಮ್ಮಣ್ಣಪ್ಪನವರು ಈ ವಿಷಯಗಳನ್ನು ಚರ್ಚಿಸುವ ಜವಾಬ್ದಾರಿಯನ್ನು ಹೊತ್ತಿದ್ದರು. ಈ ಸಂಘದ ವತಿಯಿಂದ ಗ್ರಂಥಾಲಯವನ್ನು ಸ್ಥಾಪಿಸಿದರು. ಈ ಗ್ರಂಥಾಲಯಕ್ಕೆ ಹಳಕಟ್ಟಿಯವರು 'ಶಿವಾನುಭವ' ಪತ್ರಿಕೆ ಮತ್ತು 'ವಚನಶಾಸ್ತ್ರ' ಅರ್ಪಿಸಿದರು. ಜೊತೆಗೆ ಹಲವಾರು ಭಕ್ತರು ಅನೇಕ ಧರ್ಮಗ್ರಂಥಗಳ ಸಹಾಯ ಮಾಡಿದ್ದರು. ಈ ಸಂಘದ ಉದ್ದೇಶಗಳು ಮತ್ತು ನಡೆದ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಅವಲೋಕಿಸಿದಾಗ ಲಿಂಗಾಯತ ಧರ್ಮದ ತತ್ವಗಳ ಪ್ರಚಾರವೇ ಪ್ರಧಾನವಾಗಿರುವುದು ಸ್ಪಷ್ಟವಾಗುತ್ತದೆ. ಆದರೆ ಸಂಘದ ಹೆಸರು ಮಾತ್ರ 'ಶಿವಾದ್ವೈತ ಸಿದ್ಧಾಂತ ಪ್ರಚಾರಕ ಸಂಘ'. ಇದಕ್ಕೆ ಕಾರಣ ಶ್ರೀ ಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಜಗದ್ಗುರು ಪೊಡವಿಡಿ ಶ್ರೀ ವೀರಸಂಗಯ್ಯಸ್ವಾಮಿಗಳು.[8]

ಯಾವುದೇ ಒಂದು ಧರ್ಮ ಆತ್ಮೋದ್ಧಾರದೊಂದಿಗೆ ಸಮಾಜದ ಉದ್ಧಾರಕ್ಕೆ ಮಿಸಲಾಗಿದ್ದರೆ ಅದು ವೈಚಾರಿಕ ಪ್ರಜ್ಞೆಯುಳ್ಳ ಪ್ರಗತಿಪರ ಸಮಾಜವಾಗುತ್ತದೆ. ಇಲ್ಲಿ ತಮ್ಮಣ್ಣಪ್ಪನವರು ಸಮಾಜ ಸುಧಾರಣೆಗಾಗಿ ಮಠಮಾನ್ಯಗಳನ್ನು ಬಳಸಿಕೊಂಡದ್ದು ವಿಶೇಷ. ಜನಸಾಮಾನ್ಯರಿಗೆ ಅರ್ಥವಾಗುವಂತೆ ಧರ್ಮದ ವಿಚಾರಗಳನ್ನು ಹೇಳುವುದಲ್ಲದೆ, ಸಮಾಜಕ್ಕೆ ಕಂಟಕಪ್ರಾಯವಾದ, ಜೊತೆಗೆ ಉಪಯುಕ್ತವಾದ ವಿಷಯಗಳನ್ನು ಚರ್ಚಿಸುವುದು ವಿಶೇಷವಾಗಿತ್ತು. ಭಾರತೀಯ ಸಂಸ್ಕೃತಿಯಲ್ಲಿ ನಡೆದುಕೊಂಡು ಬಂದ ವ್ಯವಸ್ಥೆಗಳೆಂದರೆ ಧರ್ಮ ಮತ್ತು ಸಮಾಜ. ಇವೆರಡೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಇಂದು ಮಠಮಾನ್ಯಗಳು ಕಂದಾಚಾರಗಳನ್ನು ಬೆಳೆಸುವ ವ್ಯಾಪಾರಿ ಕೇಂದ್ರಗಳಾಗುತ್ತಿವೆ. ಆದರೆ ಅಂದು

ತಮ್ಮಣ್ಣಪ್ಪನವರು ಮಠಗಳಿಂದ ಎಂತಹ ಒಳ್ಳೆಯ ಕೆಲಸಗಳನ್ನು ಮಾಡಿಸುತ್ತಿದ್ದರು ಎಂಬುದು ಇಂದಿಗೂ ಅನುಕರಣೀಯವಾಗಿದೆ.

೪.೧.೨.೨. ಶರಣಸಿದ್ಧಾಂತ ಮತ್ತು ಸಮಾನತೆಯ ತತ್ವ ಆಚರಣೆ:

ಹಳಕಟ್ಟಿಯವರ ವಚನವಾಙ್ಮಯಶೋಧದಿಂದ ಶರಣಸಿದ್ಧಾಂತ ತತ್ವಗಳು ಮತ್ತಮತ್ತೆ ಬೆಳಕಿಗೆ ಬಂದವು. ತಮ್ಮಣ್ಣಪ್ಪನವರು ಆ ತತ್ವಗಳಿಗೆ ಮನಸೋತರು. ಶರಣರಂತೆ ನುಡಿದಂತೆ ನಡೆಯಲು ಪ್ರಯತ್ನಿಸಿದರು. ಹನ್ನೆರಡನೆಯ ಶತಮಾನದ ಶರಣರು ವರ್ಗ, ವರ್ಣ ಮತ್ತು ಲಿಂಗಭೇದನೀತಿ ವಿರೋಧಿಸಿ ಸಮಾನತೆಯನ್ನು ಆಚರಣೆಗೆ ತಂದಂತೆ ತಮ್ಮಣ್ಣಪ್ಪನವರು ತಮ್ಮ ಕಾಲದಲ್ಲಿ ತರಲು ಪ್ರಯತ್ನಿಸಿದರು. ೧೯೨೮ರಲ್ಲಿ ಚಿತ್ರದುರ್ಗದ ಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳು ಅಥಣಿಗೆ ಆಗಮಿಸಿದ್ದರು. ರಬಕವಿಯ ಬಾಗೋಜಿಮಠ ಮುರುಗೆಯ್ಯನವರು ಅವರನ್ನು ರಬಕವಿಗೂ ಕರೆತಂದರು. ರಬಕವಿಯ ಹಡಪದ ಸಮಾಜದವರು ಜಗದ್ಗುರುಗಳಿಂದ ದೀಕ್ಷೆ ತೆಗೆದುಕೊಳ್ಳಲು ಬಯಸಿದರು. ಹೀಗಾಗಿ ಬಾಗೋಜಿಮಠರು ಹಡಪದ ಸಮಾಜದವರ ಬಿನ್ನಹವನ್ನು ಜಗದ್ಗುರುಗಳ ಮುಂದೆ ಅರುಹಿದರು. ಜಗದ್ಗುರುಗಳು ನಿಯಮಿಸಿದ ಓರ್ವ ಸಾಮಾನ್ಯ ಸ್ವಾಮಿಯಿಂದ ದೀಕ್ಷಾವಿಧಾನ ನಡೆಯಿತು. ರಬಕವಿಯ ಇಡೀ ಲಿಂಗಾಯತ ಹಡಪದವರ ಬಳಗ ದೀಕ್ಷೆಯನ್ನು ಹೊಂದಿದರು. ಅದರ ದ್ಯೋತಕವಾಗಿ ಶಂಕರಲಿಂಗನ ಗುಡಿಯಲ್ಲಿ ಸಾರ್ವಜನಿಕವಾಗಿ ಪ್ರಸಾದ ಏರ್ಪಡಿಸಿದರು. ಜಗದ್ಗುರುಗಳ ಅಣತಿಯಂತೆ ಎಲ್ಲ ಹಿರಿಯರೂ ಸಂತೋಷದಿಂದ ಊಟ ಮಾಡಿದರು. ಹಡಪದವರೇ ಬಡಿಸಿದರು. ಆದರೆ ಜಗದ್ಗುರುಗಳು ಸ್ವತಃ ತಾವು ಬಾರದೆ ತಮ್ಮ ಪ್ರತಿನಿಧಿಗಳೆಂದು ಓರ್ವ ಶಾಸ್ತ್ರಿಯನ್ನು, ಕೆಲವು ಮರಿಸ್ವಾಮಿಗಳನ್ನು ಕಳಿಸಿದ್ದರು. ಜಗದ್ಗುರುಗಳು ತಾವೇ ತೀರ್ಮಾನಿಸಿದ ದೀಕ್ಷೆಯನ್ನು ಕೃತಿಯಲ್ಲಿಳಿಸುವಾಗ ಹಿಂಜರಿದರು. ಇದನ್ನೇ ದೊಡ್ಡ ಪ್ರಶ್ನೆಯನ್ನಾಗಿ ಮಾಡಿ ಕೆಲ ವಿಘ್ನಸಂತೋಷಿಗಳು ಜಗದ್ಗುರುಗಳು ಉಂಡವರನ್ನೆಲ್ಲ ಕುಲಗೆಡಿಸಿಬಿಟ್ಟರು ಎಂದು ಜನತೆಯಲ್ಲಿ ದೊಡ್ಡ ಹುಯಿಲೆಬ್ಬಿಸಿದರು. ಆ ಕಾರಣ ಅವರೆಲ್ಲರೂ ಸಮಾಜಕ್ಕೆ ತಪ್ಪದಂಡ ಕೊಟ್ಟು ಸಮಾಜದ ಕ್ಷಮೆಯನ್ನು ಕೋರಬೇಕಾಯಿತು. ಆದರೆ ರಬಕವಿಯಲ್ಲಿ ಮುರಿಗೆಯ್ಯನವರು ಮತ್ತು ಬನಹಟ್ಟಿಯಲ್ಲಿ ಚಿಕ್ಕೋಡಿ ತಮ್ಮಣ್ಣಪ್ಪನವರು ಮಾತ್ರ ವಿಘ್ನಸಂತೋಷಿಗಳ ಕುಹಕ ಹುಯಿಲಿಗೆ ಸೊಪ್ಪು ಹಾಕಲಿಲ್ಲ. ಸಮಾಜದ ಪ್ರತಿಭಟನೆಗೆ ಹೆದರಲಿಲ್ಲ.[೫] ಬಸವತತ್ವವನ್ನು ಅಂಗೀಕರಿಸಿದ ತಮ್ಮಣ್ಣಪ್ಪನವರು ಎಂದೆಂದಿಗೂ ಅದಕ್ಕೆ ನಿಷ್ಠರಾಗಿ, ಅಚಲರಾಗಿ ನಿಂತರು. ಧರ್ಮದ ಮುಖಂಡರಿಂದ ಸಮಾಜದಲ್ಲಿ ಇದ್ದ ಜಾತಿ ಎಂಬ ಅನಿಷ್ಠ ಪದ್ಧತಿಯನ್ನು ತೊಡೆದುಹಾಕಲು ಬಾಗೋಜಿಮಠರ ನೇತೃತ್ವದಲ್ಲಿ ತಮ್ಮಣ್ಣಪ್ಪನವರು ಪ್ರಯತ್ನ ಮಾಡಿದರು. ಇದಕ್ಕೆ ೧೨ನೆಯ ಶತಮಾನದ ಶರಣರ ಕ್ರಾಂತಿಯ ಪ್ರಭಾವವು ಕಾರಣವಾಗಿತ್ತು. ಇಲ್ಲಿ ಸ್ವಾಮಿಗಳು ನುಡಿದಂತೆ ನಡೆಯಲಿಲ್ಲ. ಆದರೆ ತಮ್ಮಣ್ಣಪ್ಪನವರು ಮಾತ್ರ ಮಾತಿನ ಬದ್ಧತೆಯನ್ನು ಉಳಿಸಿಕೊಂಡರು.

ತಮ್ಮಣ್ಣಪ್ಪನವರು ಸಮಾನತೆಯ ತತ್ವಕ್ಕೆ ಹೇಗೆ ಬದ್ಧರಾಗಿದ್ದರು ಎಂಬುದನ್ನು ಇನ್ನೊಂದು ಘಟನೆಯು ತಿಳಿಸುತ್ತದೆ. ಅದೆಂದರೆ ರಬಕವಿ-ಬನಹಟ್ಟಿ ಮಧ್ಯದಲ್ಲಿ ರಾಮಪುರ ಎಂಬುದು ಒಂದು

ಕೇರಿ. ಅಲ್ಲಿ ಸಮಗಾರಸೊಬ್ಬ ತನ್ನ ಮಗನನ್ನು ಅಲ್ಲಿಯೇ ಶಾಲೆಗೆ ಸೇರಿಸಿದ್ದ. ಕೆಳಜಾತಿಯ ಪರಶುರಾಮಪ್ಪನ ಮಗನನ್ನು ಉಚ್ಚಜಾತಿಯ ಮೇಷ್ಟ್ರು ಶಾಲೆಯ ಇತರ ವಿದ್ಯಾರ್ಥಿಗಳೊಂದಿಗೆ ಕುಳಿತುಕೊಳ್ಳಲು ಅವಕಾಶ ನೀಡಲಿಲ್ಲ. ಶಾಲೆಯ ಕೋಣೆಯ ಹೊರಗೆ ಕೂಡ್ರಿಸಿ ಪಾಠ ಹೇಳುತ್ತಿದ್ದರು. ಮುಟ್ಟಿಸಿಕೊಳ್ಳುವುದಂತೂ ದೂರವೇ ಉಳಿಯಿತು. ವಿದ್ಯೆ ಕಲಿಯಬೇಕೆಂಬ ಹಂಬಲದಿಂದ ಬಂದ ವಿದ್ಯಾರ್ಥಿಗೆ ಇದು ಬಹಳ ಅಸಹನೆಯಾಗಹತ್ತಿತು. ಇದನ್ನರಿತ ಪರಶುರಾಮಪ್ಪ ತಮ್ಮಣ್ಣಪ್ಪನವರ ಹತ್ತಿರ ಹೋಗಿ ತನ್ನ ಮಗನ ಪರಿಸ್ಥಿತಿಯನ್ನು ಹೇಳಿಕೊಂಡ. ತಮ್ಮಣ್ಣಪ್ಪನವರು ಮೇಷ್ಟ್ರರಿಗೆ ತಿಳಿಹೇಳಿ ಹುಡುಗನನ್ನು ಶಾಲೆಯ ಒಳಗೆ ಸೇರಿಸಲು ಹೇಳಿದರು. ಆದರೆ ಮೇಲ್ವರ್ಗದ ಆ ಶಿಕ್ಷಕ ತಮ್ಮಣ್ಣಪ್ಪನವರಿಗೆ ಅಹಂಕಾರದಿಂದ ಉತ್ತರಿಸಿದ. ಇದರಿಂದ ನೊಂದುಕೊಂಡ ತಮ್ಮಣ್ಣಪ್ಪನವರು ಆ ಹುಡುಗನ ಜ್ಞಾನಾಭಿಲಾಷೆಯನ್ನು ಅರಿತು ಹುಡುಗನ್ನು ಬನಹಟ್ಟಿಯ ಶಾಲೆಗೆ ತಂದು ಹಚ್ಚಿದರು. ಅಷ್ಟೇ ಅಲ್ಲ, ಅಲ್ಲಿನ ಶಾಲೆಯ ಶಿಕ್ಷಕರಿಗೆ ಆ ಹುಡುಗನಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ತಿಳಿಸಿಬಂದರು. ಆ ಹುಡುಗನ ಜಾಣತನ ಮೆಚ್ಚಿದ ತಮ್ಮಣ್ಣಪ್ಪನವರು ಅವನ ವಿದ್ಯಾಭ್ಯಾಸದ ಖರ್ಚುವೆಚ್ಚಗಳನ್ನು ಭರಿಸಿದರು. ಮುಂದೆ ಆ ಹುಡುಗ ಹೈಸ್ಕೂಲ ಕಲಿಯಬೇಕೆಂದು ಆಶೆಪಟ್ಟಾಗ ಅವನನ್ನು ತಮ್ಮಣ್ಣಪ್ಪನವರು ಬೇರೆ ಕಡೆ ಕಳಿಸಿ ಖರ್ಚಿನ ಭಾರವನ್ನೆಲ್ಲ ಹೊತ್ತುಕೊಂಡರು. ಅದೇ ಸಮಗಾರ ಹುಡುಗ ವಿದ್ಯೆ ಪಡೆದು ಮುಂಬಯಿ ಪ್ರಾಂತ್ಯದಲ್ಲಿ ತಹಶೀಲದಾರನಾಗಿ ನಿವೃತ್ತಿ ಹೊಂದಿದ. ಆ ಹುಡುಗನೊಬ್ಬನ ಕಲಿಕೆ ಮುಂದೆ ಅವನ ಇಡೀ ಕುಟುಂಬ ವಿದ್ಯಾವಂತರಾಗಲು ಸಹಾಯಕವಾಯಿತು. ಈಗ ಅವರೆಲ್ಲ ಡಾಕ್ಟರ್, ಇಂಜನೀಯರ ಆಗಿ ಉನ್ನತ ಹುದ್ದೆಯಲ್ಲಿದ್ದಾರೆ. ಇದು ತಮ್ಮಣ್ಣಪ್ಪನವರು ನೀಡಿದ ವರದಾನವೆಂದು ಬನಹಟ್ಟಿಯ ಜನತೆ ಕೃತಜ್ಞತೆಯಿಂದ ನೆನೆಸಿಕೊಳ್ಳುತ್ತದೆ.[೬]

ಇದೇರೀತಿ ಇನ್ನೊಂದು ಘಟನೆಯನ್ನು ಬನಹಟ್ಟಿಯ ಜನತೆ ಹೇಳುತ್ತಾರೆ. ಬನಹಟ್ಟಿ ಸಮೀಪದಲ್ಲಿ ಜಗದಾಳ ಗ್ರಾಮದ ಹರಿಜನ ಕುಟುಂಬದಲ್ಲಿ ಒಂದು ಹುಡುಗ ತುಂಬಾ ಜಾಣ. ಆ ಹುಡುಗನಿಗೆ ವಿದ್ಯೆ ಕೊಡಿಸುವುದು ಅವರ ತಂದೆತಾಯಿಗಳಿಗೆ ತುಂಬಾ ಕಷ್ಟದಾಯಕವಾಗಿತ್ತು. ಆ ಹುಡುಗನಿಗೆ ಶಾಲೆ ಕಲಿಯಲೇಬೇಕೆಂಬ ಹಟ. ಈ ಪರಿಸ್ಥಿತಿಯನ್ನು ಬಳಸಿಕೊಂಡು ಕ್ರೈಸ್ತ ಧರ್ಮದವರು ತಮ್ಮ ಧರ್ಮಕ್ಕೆ ಮತಾಂತರ ಹೊಂದಿದರೆ ತಾವು ಆ ಹುಡುಗನ ಖರ್ಚುವೆಚ್ಚಗಳನ್ನು ಭರಿಸುವುದಾಗಿ ಹೇಳಿದರು. ಮತಾಂತರ ಹೊಂದಿದ ನಂತರ ಆ ಧರ್ಮದವರು ಏನೂ ಸಹಾಯ ಮಾಡದೆ ಅವಮಾನ ಮಾಡಿ ಕಳಿಸಿಬಿಟ್ಟರು. ಇದರಿಂದ ನೊಂದುಕೊಂಡ ಆ ಹುಡುಗನ ಪಾಲಕರು ತಮ್ಮಣ್ಣಪ್ಪನವರ ಮುಂದೆ ತಮ್ಮ ಗೋಳು ತೋಡಿಕೊಂಡರು. ತಮ್ಮಣ್ಣಪ್ಪನವರು ಅವರನ್ನು ಸಮಾಧಾನಿಸಿ ಆ ಹುಡುಗನನ್ನು ಮೊದಲಿನ ಧರ್ಮಕ್ಕೆ ಸೇರಿಸಿ, ನಂತರದಲ್ಲಿ ಅವನನ್ನು ಶಾಲೆಗೆ ಸೇರಿಸಿದರು. ಆ ಪ್ರತಿಭಾವಂತ ಹುಡುಗನ ಶಿಕ್ಷಣದ ಖರ್ಚನ್ನು ಹೊತ್ತುಕೊಂಡರು. ಆತ ವಿದ್ಯಾವಂತನಾಗಿದ್ದುದಲ್ಲದೆ ತನ್ನ ಕುಟುಂಬದ ಜನರನ್ನು ಓದಿಸಿರುವುದಾಗಿ ತಿಳಿಯುತ್ತದೆ.[೭]

೪.೧.೨.೩. ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭಾ:

ಧರ್ಮ ಮತ್ತು ಸಮಾಜ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಭಾರತೀಯ ಸಮಾಜವು ಧರ್ಮದ ಪ್ರಭಾವಕ್ಕೆ ಒಳಗಾಗಿಯೇ ಬೆಳೆದಿದೆ. ಬಸವಣ್ಣ ೧೨ನೆಯ ಶತಮಾನದ ಸಮಾಜೋ-ಧಾರ್ಮಿಕ ಮಹಾಪುರಷ. ಧರ್ಮಮುಖೇನ ಸಮಾಜದ ಪ್ರಗತಿಯನ್ನು ಬಯಸಿದ ಮಹಾಮಾನವತಾವಾದಿ. ಹಾಗೆಯೇ ೧೯ನೆಯ ಶತಮಾನದಲ್ಲಿ ಧರ್ಮದ ಮೂಲಕ ಸಮಾಜವನ್ನು ಪ್ರಗತಿಪಥದತ್ತ ಒಯ್ಯಲು ಬಯಸಿದವರು ಹಾನಗಲ್ಲ ಶ್ರೀಗಳು ಮೊದಲಾದವರು. ಹಾನಗಲ್ ಶ್ರೀ ಕುಮಾರೇಶ್ವರ ಸ್ವಾಮಿಗಳು ಸ್ಥಾಪಿಸಿದ ವೀರಶೈವ ಮಹಾಸಭೆಗೂ ಮತ್ತು ತಮ್ಮಣ್ಣಪ್ಪನವರಿಗೂ ಒಂದು ರೀತಿಯ ಅವಿನಾಭಾವ ಸಂಬಂಧ. ವೀರಶೈವ ಮಹಾಸಭೆ ಸ್ಥಾಪನೆಯಾದಾಗಿನಿಂದ ತಮ್ಮಣ್ಣಪ್ಪನವರು ಅದರ ಆಜೀವ ಸದಸ್ಯರು, ಸ್ಟ್ಯಾಂಡಿಂಗ್ ಕಮಿಟಿಯ ಸದಸ್ಯರು, ಮಹಾಸಭೆಗಳಿಗೆ ಠರಾವುಗಳನ್ನು ಕಳುಹಿಸುವುದು ಮತ್ತು ಬಂದಂತಹ ಠರಾವುಗಳಿಗೆ ಅನುಮೋದನೆ ನೀಡುವುದನ್ನು ಅವರು ಮುಂದುವರೆಸಿಕೊಂಡು ಬಂದಿದ್ದರು. ತಮ್ಮ ಜೀವಿತಾವಧಿಯ ವರೆಗೂ ಮಹಾಸಭೆಗಳಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದುದಲ್ಲದೆ, ಪ್ರಬಂಧ ಮಂಡನಕಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇಂತಹ ಧಾರ್ಮಿಕ ಸಭೆ-ಸಮಾರಂಭಗಳಲ್ಲಿಯೂ ಅವರ ಯೋಚನೆ, ಯೋಜನೆ ಸಮಾಜದ ಪ್ರಗತಿಯೇ ಆಗಿತ್ತು. ಅದರಲ್ಲಿಯೂ ಲಿಂಗಾಯತ ಸಮಾಜವು ಅಭಿವೃದ್ಧಿಯಾಗಲು ಯಾವ ನಿಟ್ಟಿನಲ್ಲಿ ಆಲೋಚಿಸಬೇಕು ಎಂಬುದು ತಮ್ಮಣ್ಣಪ್ಪನವರ ಅಭೀಪ್ಸೆಯಾಗಿತ್ತು.

ಅಖಿಲಭಾರತ ವೀರಶೈವ ಮಹಾಸಭೆಯು ಸ್ಥಾಪನೆಯಾದ ಉದ್ದೇಶವು ತುಂಬಾ ರೋಚಕವಾದುದು. ೧೯೦೩ನೆಯ ಇಸ್ವಿಯಲ್ಲಿ ಧಾರವಾಡದಲ್ಲಿ ಒಂದು ರಾಜಕೀಯ ಪ್ರಾಂತಿಕ ಪರಿಷತ್ತು ಶ್ರೀಯುತ ಖರೆ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಈ ಸಭೆಗೆ ಬಾಲಗಂಗಾಧರ ಟಿಳಕ, ಗೋಖಲೆ ಮೊದಲಾದ ಅನೇಕ ರಾಜಕೀಯ ಮುಖಂಡರು ಆಗಮಿಸಿದ್ದರು. ಧಾರವಾಡ ಜಿಲ್ಲೆಯ ಗ್ರಾಮಗಳಲ್ಲಿನ ನೂರಾರು ಜನ ಲಿಂಗಾಯತ ವ್ಯಾಪಾರಸ್ಥರೂ, ವಿದ್ಯಾವಂತರೂ ಸೇರಿದ್ದರು. ಆಗ ನಾಡಿನ ಹಿತಾಹಿತಗಳ ಸಂಬಂಧವಾಗಿ ಚರ್ಚೆಗಳು ನಡೆದವು. ಇದರಲ್ಲಿ ಮುಖ್ಯಪಾತ್ರವನ್ನು ವಹಿಸಿದವರು ಧಾರವಾಡದ ಶ್ರೀಯುತ ಗದಿಗೆಯ್ಯ ಹೊನ್ನಾಪುರಮಠ, ಬನಹಟ್ಟಿಯ ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿ, ಧಾರವಾಡದ ಮೂಗಪ್ಪ ಸವದತ್ತಿ ಮೊದಲಾದವರು. ಈ ಚರ್ಚೆಗಳ ಪರಿಣಾಮವಾಗಿ, ರಾಜಕೀಯ ಪ್ರಾಂತಿಕ ಪರಿಷತ್ತು ಹೇಗೆ ಸೇರಿದೆಯೋ ಹಾಗೆಯೇ ಲಿಂಗಾಯತರ ಹಿತಾಹಿತಗಳನ್ನು ವಿಚಾರಿಸಲು ಒಂದು ಸಂಘಟನೆ ಬೇಕೆನಿಸಿತು. ಆಮೇಲೆ ಒಂದು ವಾರದಲ್ಲಿಯೇ ಪಟ್ಟಣದಲ್ಲಿಯ ೨೦-೩೦ ಪ್ರಮುಖ ಲಿಂಗಾಯತರ ಚಿಕ್ಕ ಸಭೆಯನ್ನು ಕೂಡಿಸಲು ನಿರ್ಧರಿಸಿದರು. ಇದಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟವರು ಹಾನಗಲ್ ಶ್ರೀ ಕುಮಾರಸ್ವಾಮಿಗಳು. ಅವರಿಗೆ ಬೆಂಬಲವಾಗಿ ಕೈ.ವಾ.ರೇವಣಸಿದ್ದಪ್ಪ ಕಿತ್ತೂರು, ಕೈ.ವಾ.ಕೊಂಗವಾಡ ಮೊದಲಾದವರೂ ಇದ್ದರು.[೮] ೧೯೦೩ನೆಯ ಮೇ ತಿಂಗಳಲ್ಲಿ ಶಿರಸಂಗಿಯ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿವರ ಅಧ್ಯಕ್ಷತೆಯಲ್ಲಿ ವೀರಶೈವ ಮಹಾಸಭೆಯು

ನೆರವೇರಬೇಕೆಂದು ನಿಶ್ಚಯಿಸಿದರು.[೯] ಆಗಿನ ಸಂದರ್ಭದಲ್ಲಿ ಲಿಂಗಾಯತ ಸಮಾಜದಲ್ಲಿ ಶೈಕ್ಷಣಿಕ, ಧಾರ್ಮಿಕ ಮೊದಲಾದ ಎಲ್ಲ ಚಟುವಟಿಕೆಗಳಿಗೆ ವೀರಶೈವ ಮಹಾಸಭೆಯು ಚಾಲನೆಯನ್ನು ನೀಡಿತು. ಪಾಶ್ಚಾತ್ಯ ಶಿಕ್ಷಣದ ಗಾಳಿಯನ್ನು ಕೂಡ ಸೋಂಕಿಸಿಕೊಂಡಿರದ ಮತ್ತು ಆಧುನಿಕ ರಾಜಕಾರಣದ ಸಂಬಂಧವಿಲ್ಲದ ಪರಮಪೂಜ್ಯ ಹಾನಗಲ್ಲ ಮಹಾಸ್ವಾಮಿಗಳವರು ಅಖಿಲ ಭಾರತೀಯ ವೀರಶೈವ ಮಹಾಸಭೆಯನ್ನು ಸ್ಥಾಪಿಸಿದುದು ನಿಜವಾಗಿಯೂ ಕೌತುಕಾಸ್ಪದವಾದುದು![೧೦]

ಹಾನಗಲ್ ಕುಮಾರಸ್ವಾಮಿಗಳವರ ನೇತೃತ್ವದಲ್ಲಿಯೇ ಮೊದಲಿನ ಆರೇಳು ಮಹಾಸಭೆಗಳು ಜರುಗಿದುದರಿಂದ ಲಿಂಗಾಯತರ ಮೇಲೆ ಪರಿಣಾಮಕಾರಿಯಾದ ಜಾಗೃತಿಯುಂಟಾಯಿತು. ಧಾರವಾಡದ ಮೊದಲನೆಯ ಸಭೆಯ ಕಾಲದಲ್ಲಿಯೇ ವಿದ್ಯಾಭಿವೃದ್ಧಿ ನಿಧಿಯ ಯೋಜನೆಗಾಗಿ 'ಲಿಂಗಾಯತ ವಿದ್ಯಾವರ್ಧಕ ಫಂಡು' ಏರ್ಪಟ್ಟು ಲಿಂಗಾಯತರಲ್ಲಿ ಇಂಗ್ಲಿಷ್ ವಿದ್ಯಾಪ್ರಸಾರಕ್ಕೆ ಬಹು ಸಹಾಯವಾಯಿತು. ಅದರಂತೆಯೆ ಎರಡನೆಯ ಮಹಾಸಭೆಯು ಬೆಂಗಳೂರಲ್ಲಿ ಕೂಡಿದಾಗ ಮೈಸೂರು ಪ್ರಾಂತದ ಲಿಂಗಾಯತ ವಿದ್ಯಾಭಿವೃದ್ಧಿಗಾಗಿ ಒಂದು ಧನನಿಧಿ ಏರ್ಪಟ್ಟಿತು.[೧೧]

ತಮ್ಮಣ್ಣಪ್ಪನವರು ವೀರಶೈವ ಮಹಾಸಭೆಗಳಲ್ಲಿ ತಪ್ಪದೇ ಭಾಗವಹಿಸುತ್ತಿದ್ದರಲ್ಲದೆ, ಪ್ರಬಂಧ ಮಂಡನಕಾರರಾಗಿ ಸಮಾಜಕ್ಕೆ ಬೇಕಾದ ಉಪಯುಕ್ತ ವಿಷಯಗಳನ್ನು ಮಂಡಿಸುತ್ತಿದ್ದರು. ಧಾರವಾಡದಲ್ಲಿ ೧೯೦೪ ಮೇ, ೧೩, ೧೪, ೧೫ರಂದು ಅಖಿಲಭಾರತ ವೀರಶೈವ ಮಹಾಸಭೆಯು ಜರುಗಿತು. ಆ ಸಂದರ್ಭದಲ್ಲಿ ತಮ್ಮಣ್ಣಪ್ಪನವರು ಮಂಡಿಸಿದ ವಿಷಯ 'ಸಮುದ್ರಪರ್ಯಟನದ ಅವಶ್ಯಕತೆ'. ನಮ್ಮ ಸಮಾಜವು ವಿದ್ಯಾಬುದ್ಧಿ ಕೌಶಲ್ಯವ್ಯಾಪಾರ ಮುಂತಾದವುಗಳಲ್ಲಿ ಪ್ರಗತಿ ಸಾಧಿಸಬೇಕಾದರೆ ಸಮುದ್ರಪರ್ಯಟನೆ ಮಾಡುವ ಅವಶ್ಯಕತೆಯಿದೆ ಎಂಬುದನ್ನು ತಮ್ಮಣ್ಣಪ್ಪನವರು ಪ್ರಬಂಧದುದ್ದಕ್ಕೂ ವ್ಯಕ್ತಪಡಿಸಿದ್ದಾರೆ. "ಸಾಂಪ್ರತಕ್ಕೆ ವಿವಿಧಕಲಾ ಶಿಕ್ಷಣಾರ್ಥವಾಗಿ ಇಂಗ್ಲೆಂಡ, ಜಪಾನ ಮತ್ತು ಯುನೈಟೆಡ್ ಸ್ಟೇಟ್ಸ ಮುಂತಾದ ಸುಧಾರಿಸಿದ ದೇಶಗಳಿಗೆ ಹೋಗುವುದು ಅಗತ್ಯವಾಗಿರುವುದು. ಆದುದರಿಂದ ಸ್ವಧರ್ಮ ಸಂಗ್ರಹ ಮಾಡಿಕೊಂಡು ಮೇಲಿನ ದೇಶಗಳಿಗೆ ಸಮುದ್ರಮಾರ್ಗವಾಗಿ ಹೋಗಲಿಕ್ಕೆ ಈ ಮಹಾಸಭೆಯ ಅನುಕೂಲಾಭಿಪ್ರಾಯವಿರುತ್ತದೆ."[೧೨] ತಮ್ಮಣ್ಣಪ್ಪನವರ ಈ ವಿಚಾರಗಳು ಬಹಳ ಅರ್ಥಪೂರ್ಣವಾಗಿವೆ. 'ಒಕ್ಕಲುತನ, ಕಲಾಕೌಶಲ್ಯ ಮತ್ತು ವ್ಯಾಪಾರ ಮೊದಲಾದವುಗಳನ್ನು ನಾವು ಯುರೋಪ, ಆಸ್ಟ್ರೀಯಾ, ಮತ್ತು ಅಮೇರಿಕಾ ಖಂಡಗಳೊಳಗಿನ ಸುಧಾರಿಸಿದ ದೇಶಗಳಿಗೆ ಹೋಗಿ ಅಲ್ಲಿ ಅಭ್ಯಾಸವನ್ನು ಮಾಡಿ ಅಲ್ಲಿಯವರಂತೆ ಶೋಧಕ ಬುದ್ಧಿಯನ್ನು ಕಲಿತು, ಹೊಸಹೊಸ ಶೋಧಗಳನ್ನು ಮಾಡುವ ಯೋಗ್ಯತೆಯನ್ನು ನಮ್ಮಲ್ಲಿ ತಂದುಕೊಂಡ ಹೊರತು ನಮ್ಮ ಜನರ ಏಳಿಗೆಯ ಆಶೆಯನ್ನು ಹಿಡಿಯುವುದು ನಿರರ್ಥಕವೇ ಸರಿ" ಎಂದು ಹೇಳುವಲ್ಲಿ ತಮ್ಮಣ್ಣಪ್ಪನವರ ಪ್ರಗತಿಪರ ವಿಚಾರಗಳ ಬಗ್ಗೆ ಹೆಮ್ಮೆ ಎನ್ನಿಸುತ್ತದೆ. ಜೊತೆಗೆ ಅರ್ಥಹೀನತೆಯಿಂದ ಕೂಡಿರುವ ವಿಚಾರಗಳ ಬಗ್ಗೆ ಅವರಲ್ಲಿ ವಿರೋಧವಿತ್ತು. "ಸಮುದ್ರಪರ್ಯಟನ ಮಾಡಿದವರಿಗೆ ಬಹಿಷ್ಕಾರ ಹಾಕುವ ಸಂಪ್ರದಾಯವು ಬಿದ್ದಿರುವುದರಿಂದ ಸಮುದ್ರ ಪ್ರವಾಸ ಮಾಡಲಿಕ್ಕೆ ಜನರು ಹೆದರುತ್ತಾರೆ. ಅರ್ಥಾತ್ ನಮ್ಮ ಸಮಾಜದ

ಏಳಿಗೆಯು ನಿಂತುಹೋಗುತ್ತದೆ. ಹೀಗಾಗವುದು ಯೋಗ್ಯವಲ್ಲ. ನಮ್ಮ ಕಾಲಮೇಲೆ ನಾವೇ ಕಲ್ಲು ಚೆಲ್ಲಿಕೊಂಡಂತಾಗುತ್ತದೆ."[೧೩]

ಆಧುನಿಕ ತಂತ್ರಜ್ಞಾನದಿಂದ ನಮ್ಮ ಸಮಾಜವು ಪ್ರಗತಿಯಾಗುವುದಾದರೆ, ಅದಕ್ಕೆ ಧರ್ಮವು ಎಂದೂ ಅಡ್ಡಿಯಾಗಬಾರದು. ಹೊಸ ಹೊಸ ಯಂತ್ರಗಳಿಂದ ಉತ್ಪಾದನೆ ಹೆಚ್ಚುವುದು. ವೀರಶೈವ ತರುಣರು ಸಮುದ್ರಪರ್ಯಟನ ಕೈಗೊಳ್ಳುವುದು ಎಂಬ ಈ ಠರಾವು ಕಾರಣವಾಗಿ ಲಿಂಗಾಯತ ಸಮುದಾಯದ ಯುವಕರನ್ನು ಪ್ರೋತ್ಸಾಹಿಸಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ಕಳುಹಿಸಲು 'ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ'ಯಿಂದ ಧನಸಹಾಯವನ್ನು ಒದಗಿಸಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ತಮ್ಮಣ್ಣಪ್ಪನವರು ಕೂಡಾ ದುಡ್ಡು ಸಂಗ್ರಹಿಸಲು ಬಹುಪ್ರಯತ್ನವನ್ನು ನಡೆಸಿ ಯುವಕರಿಗೆ ವಿದೇಶಕ್ಕೆ ಕಳಿಸುವಲ್ಲಿ ಪ್ರೋತ್ಸಾಹವನ್ನು ಕೊಡುತ್ತಿದ್ದರು. ವಿದೇಶಕ್ಕೆ ಹೋಗಿ ಬಂದ ಯುವಕರಿಗೆ ಸನ್ಮಾನ ಮಾಡಿ ಗೌರವಿಸುತ್ತಿದ್ದರು. ಶ್ರೀಯುತ ಗುಗ್ಗಳಿ ಮತ್ತು ಶ್ರೀ ಡಿ.ಸಿ.ಪಾವಟೆಯವರಿಗೆ ವಿದೇಶಕ್ಕೆ ಹೋಗಲು ಸಹಾಯ ಮಾಡಿದವರಲ್ಲಿ ತಮ್ಮಣ್ಣಪ್ಪನವರೂ ಒಬ್ಬರು. ಶ್ರೀಯುತ ಗುಗ್ಗಳಿಯವರು ವಿದೇಶಕ್ಕೆ ಹೋಗಿ ಮುಂಬಯಿಗೆ ಬಂದಾಗ ಅವರನ್ನು ಸ್ವಾಗತಿಸಲು ತಮ್ಮಣ್ಣಪ್ಪನವರು ಬನಹಟ್ಟಿಯಿಂದ ಮುಂಬಯಿಗೆ ಹೋಗಿದ್ದರು. ಆ ಸಂದರ್ಭದಲ್ಲಿ ಆ ಸಭೆಯ ಅಧ್ಯಕ್ಷರಾಗಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಲಿಂಗಾಯತ ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಕಲಿಯುವುದು ಎಷ್ಟು ಅವಶ್ಯವಿದೆ' ಎಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ನಾಲ್ಕನೆಯ ಶ್ರೀಮದ್ವೀರಶೈವ ಮಹಾಸಭೆಯು ಬಾಗಲಕೋಟದಲ್ಲಿ ಜರುಗಿದಾಗ ತಮ್ಮಣ್ಣಪ್ಪನವರು ಪ್ರತಿನಿಧಿಗಳಾಗಿ ಭಾಗವಹಿಸಿದ್ದಲ್ಲದೆ, ಮಹಾಸಭೆಯಲ್ಲಿಯ ನಿರ್ಣಯಗಳಿಗೆ ಬದ್ಧರಾಗಿದ್ದರು. ತಮ್ಮದೇ ಆದ ವಿಚಾರಗಳನ್ನು ಒಳಗೊಂಡ ಪ್ರಬಂಧಗಳನ್ನು ಮಂಡಿಸಿದ್ದರು. "ವೀರಶೈವಮತದ ಪೂರ್ವಿಕರ ಇತಿಹಾಸವನ್ನು ರಚಿಸಿ ಪ್ರಸಿದ್ಧಪಡಿಸುವುದರಿಂದ ನಮ್ಮಲ್ಲಿ ಹಿಂದಿನ ಕಾಲದಲ್ಲಿ ಆಗಿಹೋದ ತತ್ವಜ್ಞಾನಿಗಳು, ಶರಣರು, ಪಂಡಿತರು, ಕವಿಗಳು ಮತ್ತು ವೀರಪುರುಷರು ಮೊದಲಾದ ಮಹಾತ್ಮರ ಸ್ಮರಣೆಯು ನಮಗೆ ನಿರಂತರವಾಗಿ ಆಗುತ್ತದೆ. ಅಷ್ಟೇ ಅಲ್ಲ ಅವರ ಆದರ್ಶದಿಂದ ನಮ್ಮ ಸಮಾಜದ ಏಳಿಗೆಯಾಗುತ್ತದೆ. ಅದಕ್ಕಾಗಿ ಮಹಾಸಭೆಯವರು ಒಂದು ಇತಿಹಾಸತಜ್ಞರ ಸಂಘವನ್ನು ಏರ್ಪಡಿಸಿ, ಅವರ ಕಡೆಯಿಂದ ಸಾಧಾರವಾದ ಒಂದು ಇತಿಹಾಸ ಗ್ರಂಥವನ್ನು ಬರೆಯಿಸಿ ಪ್ರಸಿದ್ಧ ಮಾಡಬೇಕೆಂದು ಮಹಾಸಭೆಯವರು ನಿರ್ಣಯಿಸುತ್ತಾರೆ."[೧೪] ಮಹಾಸಭೆಯ ಈ ನಿರ್ಣಯವನ್ನು ಎತ್ತಿಹಿಡಿದ ತಮ್ಮಣ್ಣಪ್ಪನವರು ಲಿಂಗಾಯತ ಸಮಾಜಕ್ಕೆ ತಮ್ಮದೇ ಆದ ಧರ್ಮಗ್ರಂಥದ ಅವಶ್ಯಕತೆ ಇರುವುದರ ಬಗ್ಗೆಯೂ ಸಾಧಾರವಾಗಿ ಚರ್ಚಿಸುತ್ತಾರೆ. ಎಲ್ಲ ಧರ್ಮಗಳಿಗೂ ಧರ್ಮಗ್ರಂಥಗಳಿರುವಂತೆ ಲಿಂಗಾಯತ ಧರ್ಮದವರಿಗೂ ಧರ್ಮಗ್ರಂಥದ ಅವಶ್ಯಕತೆಯಿದೆ ಎಂಬುದನ್ನವರು ಮನಗಂಡಿದ್ದರು.

ಇದೇ ಮಹಾಸಭೆಯ ೬ನೆಯ ನಿರ್ಣಯವು "ವೀರಶೈವ ಮಹಾಸಭೆಯಿಂದ ನಮ್ಮ ಸಮಾಜದಲ್ಲಿ ಪರಸ್ಪರವಾಗಿ ಐಕ್ಯಸ್ನೇಹಾದಿಗಳನ್ನು ಬೆಳೆಸಲಿಕ್ಕೂ, ನಮ್ಮ ರೀತಿ ನಡೆವಳಿಕೆಗಳನ್ನು ತಿದ್ದಿಕೊಳ್ಳುವುದಕ್ಕೂ, ನಮ್ಮ ಧರ್ಮಗ್ಲಾನಿಯನ್ನು ಹೋಗಲಾಡಿಸುವುದಕ್ಕೂ, ವಿದ್ಯೆವ್ಯಾಪಾರಗಳನ್ನು ಬೆಳೆಸಲಿಕ್ಕೂ ಅತ್ಯಂತ ಉಪಯೋಗವಾದುದರಿಂದ, ಮಹಾಸಭೆಯು ಹಿಂದುಸ್ಥಾನದ ಆ ಆ ಭಾಗಗಳಲ್ಲಿ ಪ್ರತಿವರ್ಷ ತಪ್ಪದೆ ನೆರೆಯುವುದು ಅತ್ಯವಶ್ಯವಾದುದೆಂತಲೂ ಅದರಲ್ಲಾಗುವ ನಿರ್ಣಯಗಳನ್ನು ಪ್ರಚಾರದಲ್ಲಿ ತರಲಿಕ್ಕೆ "ಸ್ಟ್ಯಾಂಡಿಂಗ್ ಕಮೀಟಿ, ಪ್ರಾಂತೀಕ ಕಮೀಟಿ, ತಾಲ್ಲೂಕ ಕಮೀಟಿ, ಗ್ರಾಮ ಕಮೀಟಿ" ಮೊದಲಾದ ಸಂಸ್ಥೆಗಳನ್ನು ಅಲ್ಲಲ್ಲಿ ಸ್ಥಾಪಿಸಬೇಕೆಂತಲೂ ಮಹಾಸಭೆಯವರು ನಿರ್ಣಯ ಮಾಡುತ್ತಾರೆ'[೧೫] ಈ ವಿಷಯಕ್ಕೂ ತಮ್ಮಣ್ಣಪ್ಪನವರು ಅನುಮೋದನೆಯನ್ನು ನೀಡಿ ಭಾಷಣಮಾಡಿದರು. ಈ ಎರಡು ವಿಷಯಗಳು ಧರ್ಮಜಾಗೃತಿಗಾಗಿ ಬಹಳ ಉಪಯುಕ್ತವಾದವುಗಳೇ. ಮೊದಲನೆಯದಾಗಿ ಲಿಂಗಾಯತ ಧರ್ಮಕ್ಕೆ ನಿಶ್ಚಿತವಾದ ಧರ್ಮಗ್ರಂಥ ಇರಲಾರದ್ದಕ್ಕೆ ತಮ್ಮ ಧರ್ಮದ ಮಹತ್ತಿಯನ್ನು ಅರಿಯಲು ಸಾಧ್ಯವಾಗುತ್ತಿಲ್ಲ. ಶಿವಶರಣರ ಜೀವನಚರಿತ್ರೆಗಳು, ನೂರಾರು ವಚನಗಳು ಡಾ.ಫ.ಗು.ಹಳಕಟ್ಟಿಯವರು ಪ್ರಕಟಿಸಿ ಪ್ರಚಾರ ನೀಡುತ್ತಿರುವುದು ತಮ್ಮಣ್ಣಪ್ಪನವರಿಗೆ ಹಿಡಿಸಲಾರದಷ್ಟು ಸಂತೋಷವೆನಿಸಿತ್ತು. ಹೀಗಾಗಿ ಬೇರೆ ಧರ್ಮಗಳಿಗೆ ಇರುವ ಹಾಗೆ ಲಿಂಗಾಯತ ಧರ್ಮಕ್ಕೂ ಒಂದು ಧರ್ಮಗ್ರಂಥ ಇರಬೇಕು, ಶಿವಶರಣರ ಜೀವನಚರಿತ್ರೆಗಳನ್ನು ಆಧಾರವಾಗಿಟ್ಟುಕೊಂಡು ಜೊತೆಗೆ ಬೇರೆ ಧರ್ಮಗ್ರಂಥಗಳಲ್ಲಿ ಲಿಂಗಾಯತ ಧರ್ಮದ ವಾದಗಳಿದ್ದರೆ ಪರಾಮರ್ಶಿಸಿ ಲಿಂಗಾಯತರ ಧರ್ಮಗ್ರಂಥವನ್ನು ರಚಿಸಬೇಕು ಎಂಬುದು ತಮ್ಮಣ್ಣಪ್ಪನವರ ಸದುದ್ದೇಶವಾಗಿತ್ತು. ಇನ್ನು ೬ನೆಯ ನಿರ್ಣಯದಿಂದ ಮಹಾಸಭೆಯು ತ್ವರಿತಗತಿಯಲ್ಲಿ ದೇಶದುದ್ದಕ್ಕೂ ಹರಡಬೇಕಾದರೆ ಮೊದಲು ಗ್ರಾಮಮಟ್ಟದಲ್ಲಿ ಬೆಳೆದು ನಂತರ ತಾಲೂಕ, ಜಿಲ್ಲಾ, ರಾಜ್ಯಮಟ್ಟದಲ್ಲಿ ಬೆಳೆಯಬೇಕು ಎನ್ನುವ ಹಂಬಲ ಈ ಮಹಾಸಭೆಯ ವಿದ್ವಾಂಸರ ಆಲೋಚನೆಯಲ್ಲಿತ್ತು. ಈ ನಿರ್ಣಯದ ನಂತರ ತಮ್ಮಣ್ಣಪ್ಪನವರು ಕೂಡಾ ಸ್ಟ್ಯಾಂಡಿಂಗ್ ಕಮೀಟಿಯ ಸದಸ್ಯರಾಗಿ ತೊಡಗಿಕೊಂಡು ಮಹಾಸಭೆಯ ಕಾರ್ಯಗಳಲ್ಲಿ ತಮ್ಮ ಜವಾಬ್ದಾರಿಯನ್ನು ನಿರ್ಣಯಿಸಿದರು.

ಬಾಗಲಕೋಟೆಯಲ್ಲಿ ಜರುಗಿದ ವೀರಶೈವ ಮಹಾಸಭೆಯಲ್ಲಿ 'ಶಿವಯೋಗಮಂದಿರ' ಸ್ಥಾಪಿಸುವ ಕುರಿತು ಸರ್ವಾನುಮತದಿಂದ ನಿರ್ಣಯಿಸಲಾಯಿತು. ಬಾಗಲಕೋಟೆಯ ವೈರಾಗ್ಯದ ಮಲ್ಲಣಾರ್ಯರು ಶಿವಯೋಗ ಜ್ಞಾನವನ್ನು ಗುರು-ವಿರಕ್ತರಿಗೂ ಮತ್ತು ಮುಮುಕ್ಷಗಳಿಗೂ ಬೋಧಿಸುವ ಸಂಸ್ಥೆಯೊಂದನ್ನು ಅವಶ್ಯವಾಗಿ ಸ್ಥಾಪಿಸಬೇಕೆಂದು ಸಂಕಲ್ಪ ಮಾಡಿದ್ದರು. ಮಲ್ಲಣಾರ್ಯರು ಅದಕ್ಕಾಗಿ ಜೋಳಿಗೆಯನ್ನು ಹಾಕಿದರು. ಶಿವಯೋಗ ಮಂದಿರವನ್ನು ಕಟ್ಟಲು ಹಾನಗಲ್ಲ ಶ್ರೀಗಳವರು ನಾಡಿನಲ್ಲೆಲ್ಲ ಸಂಚರಿಸಿ ಲಕ್ಷಾಂತರ ರೂಪಾಯಿಗಳ ನಿಧಿಯನ್ನು ಕೂಡಿಸಿದರು. ಮೊದಮೊದಲು ಈ ವಿಚಾರ ತಮ್ಮಣ್ಣಪ್ಪನವರಿಗೆ ಸರಿಬರಲಿಲ್ಲ. ಒಬ್ಬ ಧರ್ಮಗುರು ಆಧುನಿಕ ರೀತಿಯ ಶಿಕ್ಷಣ ಸೌಲಭ್ಯಗಳನ್ನು ಒದಗಿಸಿ ಶಿಷ್ಯಂದಿರನ್ನು ಸಮಾಜಕ್ಕಾಗಿ ತಯಾರು ಮಾಡುವುದು ಬಹಳ ಕಷ್ಟದಾಯಕ ಎಂಬ ಭಾವನೆ

ತಮ್ಮಣ್ಣಪ್ಪನವರದಾಗಿರಬೇಕು. ಸ್ವಾಮಿಗಳು ಹಣ ಸಂಗ್ರಹಣೆಗಾಗಿ ವಿಜಾಪುರಕ್ಕೆ ಬಂದುಹೋದ ವಿಷಯ ತಿಳಿದ ತಮ್ಮಣ್ಣಪ್ಪನವರು ಫ.ಗು.ಹಳಕಟ್ಟಿಯವರಿಗೆ ಪತ್ರ ಬರೆಯುತ್ತಾರೆ. "ಶ್ರೀ ಕುಮಾರಸ್ವಾಮಿಗಳು ವಿಜಾಪುರಕ್ಕೆ ಬಂದು ಹೋದ ಸಂಗತಿ ತಿಳಿಯಿತು. ಅವರು ಯೋಜಿಸಿದ ಶಿವಯೋಗ ಮಂದಿರದ ಸಂಗತಿಯೂ ತೀಳಿಯಿತು. ಅವರ ಹಳಬುತನಕ್ಕೆ ಅದೆಲ್ಲವೂ ಸರಿಯಾದದ್ದೇ; ಅವರಿಗೆ ಧರ್ಮಾಂತರ್ಗತ ಕರ್ಮಮಾರ್ಗದ ಮಹತ್ವವು ಹೆಚ್ಚು ತೋರುತ್ತದೆ. ಆದರೂ ಸಂಪೂರ್ಣವಾಗಿ ಧರ್ಮಗುರುಗಳಿಗೆ ಅನುಸಾರವಾಗಿಯೇ ನಡೆಯುವುದು ಸಾಂಪ್ರತಕ್ಕೆ ಹಿತಕರವಾಗಿಲ್ಲ. ಮಿಕ್ಕ ಎಲ್ಲ ಬಗೆಗಳಿಂದಲೂ ನಾವು ಮುಂದೆ ಬೀಳದ ಹೊರತು ನಮ್ಮ ಕಲ್ಯಾಣವಾಗದು"(ಜನವರಿ ೧೯೦೮).[೧೬] ಧರ್ಮವೊಂದರಿಂದಲೇ ಸಮಾಜವನ್ನು ಪ್ರಗತಿಪಥದತ್ತ ಒಯ್ಯಲು ಸಾಧ್ಯವಿಲ್ಲವೆಂದು ತಮ್ಮಣ್ಣಪ್ಪನವರು ಭಾವಿಸಿಕೊಂಡಿದ್ದರು. ಹಾನಗಲ್ಲ ಶ್ರೀ ಕುಮಾರಸ್ವಾಮಿಗಳ ವೀರಶೈವ ಮಹಾಸಭೆಯನ್ನು ಒಪ್ಪಿಕೊಂಡ ತಮ್ಮಣ್ಣಪ್ಪನವರು ಶಿವಯೋಗ ಮಂದಿರದ ಕಲ್ಪನೆಯನ್ನು ಒಪ್ಪಲು ಮನಸ್ಸು ಮಾಡಲಿಲ್ಲ. ಆದರೆ ಲಿಂಗಾಯತ ಸಮಾಜದ ಪ್ರಗತಿಗಾಗಿ ಶಿವಯೋಗ ಮಂದಿರದ ಅವಶ್ಯಕತೆಯನ್ನು ಸ್ವಾಮಿಗಳು ತಮ್ಮ ಸತತ ಪ್ರಯತ್ನ, ಪರಿಶ್ರಮಗಳಿಂದ ಪ್ರತಿಪಾದಿಸಿದರು. ಅಷ್ಟೇ ಅಲ್ಲ ನಾಡಿನಾದ್ಯಂತ ಜೋಳಿಗೆಯನ್ನು ಹಿಡಿದುಕೊಂಡು ಹೊರಟರು. ಕೊನೆಗೆ ತಮ್ಮಣ್ಣಪ್ಪನವರು ಶ್ರೀಗಳ ಸಮಾಜಸೇವಾ ಕಾರ್ಯವನ್ನು ಮೆಚ್ಚಿಕೊಂಡರು. ೭ನೆಯ ಅಖಿಲಭಾರತ ಮದ್ವೀರಶೈವ ಮಹಾಸಭೆಯಲ್ಲಿ ಸ್ವತಃ ತಮ್ಮಣ್ಣಪ್ಪನವರು ಶಿವಯೋಗಮಂದಿರದ ಕಾರ್ಯಕ್ಕಾಗಿ ಲಿಂಗಾಯತ ಸಮಾಜದವರು ಸಾಕಷ್ಟು ಸಹಾಯ ಸಹಕಾರಗಳನ್ನು ಒದಗಿಸಬೇಕು[೧೭] ಎಂದು ಅಭಿಪ್ರಾಯಿಸಿದರು. ಇಲ್ಲಿ ಶ್ರೀಗಳು ಕೈಕೊಂಡಿರುವ ಸಮಾಜಸೇವಾಕಾರ್ಯವು ಹಣದ ಅಡಚಣೆಯಿಂದ ಕುಂಠಿತಗೊಳ್ಳಬಾರದೆಂದೇ ತಮ್ಮಣ್ಣಪ್ಪನವರ ಮಹದಾಸೆಯಾಗಿತ್ತು.

ಹಾನಗಲ್ ಶ್ರೀಗಳ ಧರ್ಮಕೈಂಕರ್ಯವನ್ನು ಒಪ್ಪಿಕೊಂಡ ತಮ್ಮಣ್ಣಪ್ಪನವರು ಅವರ ಧನನಿಧಿ ಶೇಖರಣೆಯ ಸೇವೆಯಲ್ಲಿ ಮನಸಾರೆ ಪಾಲ್ಗೊಳ್ಳುತ್ತಿದ್ದರು. ಸ್ವಾಮಿಗಳು ಆರ್ಯಸಮಾಜದ ಗುರುಕುಲದಂತೆ, ವಟುಗಳಿಗೆ ಇಂಗ್ಲಿಷ್ ಶಿಕ್ಷಣ ಕೊಡಿಸುವ ಪ್ರಯತ್ನ ಮಾಡುತ್ತಿದ್ದುದನ್ನು ತಮ್ಮಣ್ಣಪ್ಪನವರು ಮೆಚ್ಚಿಕೊಂಡರು. ಅದಕ್ಕಾಗಿ ಶಿವಯೋಗಮಂದಿರದ ಪ್ರಗತಿಯ ಕುರಿತು ಸದಾ ಚಿಂತಿಸುತ್ತಿದ್ದರು. ಶಿವಯೋಗಮಂದಿರದ ಪ್ರತಿಯೊಂದು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು.

೧೯೦೯ರಲ್ಲಿ ಬಳ್ಳಾರಿಯಲ್ಲಿ ಜರುಗಿದ ಅಖಿಲ ಭಾರತ ವೀರಶೈವ ಮಹಾಸಭೆಯಲ್ಲಿ ತಮ್ಮಣ್ಣಪ್ಪನವರು ಬಾಲ್ಯವಿವಾಹ ಮತ್ತು ವೃದ್ಧವಿವಾಹ ನಿಷೇಧ ಕುರಿತು ಭಾಷಣ ಮಾಡಿದರು. ಆ ಭಾಷಣದಲ್ಲಿ 'ಬಾಲ್ಯವಿವಾಹ, ವೃದ್ಧವಿವಾಹಗಳು ಆರೋಗ್ಯಶಾಸ್ತ್ರ ದೃಷ್ಟಿಯಿಂದ ಅನರ್ಥಕರವಾಗಿಯೂ ಧರ್ಮಶಾಸ್ತ್ರ ದೃಷ್ಟಿಯಿಂದ ಅಯೋಗ್ಯವಾಗಿಯೂ ಇರುವುದರಿಂದ, ಅವುಗಳನ್ನು ನಮ್ಮ ಸಮಾಜದವರು ತಪ್ಪಿಸಬೇಕೆಂತಲೂ, ಪ್ರೌಢವಿವಾಹವನ್ನು ಪ್ರಚಾರದಲ್ಲಿ ತರಬೇಕೆಂತಲೂ ಈ ಮಹಾಸಭೆಯವರಾದ ನಾವು ನಿರ್ಣಯ ಮಾಡಿರುತ್ತೇವೆ"[೧೮] ಎಂದು ಪ್ರಸ್ತಾಪ ಮಾಡಿದರು. ವೃದ್ಧವಿವಾಹಗಳಿಂದ ಸಮಾಜ ಮತ್ತು ಆರೋಗ್ಯಕ್ಕೆ ಆಗುವ ಹಾನಿಗಳ ಕುರಿತಾಗಿ ಸುದೀರ್ಘವಾಗಿ ಈ ಮಹಾಸಭೆಯ ಮೂಲಕ ಎಚ್ಚರಿಸಿದ್ದಲ್ಲದೆ

ಇಂತಹ ವಿಷಯಗಳಿಗಾಗಿ ಅವರು ಬೇರೆ ಬೇರೆ ಕಡೆಯ ವೇದಿಕೆಗಳನ್ನು ಬಳಸಿಕೊಂಡಿದ್ದಾರೆ. "ಇಪ್ಪತ್ತೈದು ವರ್ಷದೊಳಗಿನ ಪುರುಷನು ಹದಿನಾರು ವರ್ಷದೊಳಗಿನ ಸ್ತ್ರೀಯಲ್ಲಿ ಗರ್ಭದಾನ ಮಾಡಿದರೆ, ಆ ಗರ್ಭವು ಹೊಟ್ಟೆಯೊಳಗೆ ಕರಗುತ್ತದೆ. ಒಂದು ವೇಳೆ ಗರ್ಭ ನಿಂತು ಕೂಸು ಹುಟ್ಟಿದರೆ, ಅದು ಬಹಳ ದಿವಸ ಬದುಕುವುದಿಲ್ಲ. ಬದುಕಿದರೆ ಅಶಕ್ತವಾಗುವುದು. ಇದರ ಮೇಲಿಂದ ತಮ್ಮ ಮನಸ್ಸಿನಲ್ಲಿ ಕೇವಲ ಋತುಮತಿಯಾದ ಕಾಲವು ಸಂಭೋಗಾರ್ಹವಲ್ಲವೆಂದು ನಿಶ್ಚಯವಾಗಿ ಹೇಳಬಹುದು." ಅವರ ಈ ವಿಚಾರಗಳಿಂದ ತಮ್ಮಣ್ಣಪ್ಪನವರು ಬಹಳ ಕಡಿಮೆ ಶಿಕ್ಷಣ ಪಡೆದುಕೊಂಡಿದ್ದರೂ, ಒಬ್ಬ ವೈದ್ಯನಂತೆ ಆಲೋಚನಾಶಕ್ತಿಯನ್ನು ಹೊಂದಿರುವುದು ತಿಳಿಯುತ್ತದೆ.

೧೯೧೧ರಲ್ಲಿ ವಿಜಾಪುರದಲ್ಲಿ ನಡೆದ ಶ್ರೀಮದ್ವೀರಶೈವ ಮಹಾಸಭೆ ನೆರವೇರಿದ ಸಂದರ್ಭದಲ್ಲಿ ತಮ್ಮಣ್ಣಪ್ಪನವರು ಸ್ಟ್ಯಾಂಡಿಂಗ್ ಕಮೀಟಿಯ ಚೇರಮನ್ನರಾಗಿ ಸಭೆಯ ಪ್ರತಿಯೊಂದು ವಿಷಯಗಳಿಗೆ ಹೆಗಲುಕೊಟ್ಟು ನಿಂತರು. "ಶ್ರೀಮದ್ವೀರಶೈವ ಮಹಾಸಭೆಯ ಧನರಾಶಿಗೆ ವಾರ್ಷಿಕ ಚಂದಾಹಣವನ್ನು ಕೊಡತಕ್ಕವರೆಲ್ಲರೂ ಏಪ್ರಿಲ್ ತಿಂಗಳಿನ ೧ನೇ ತಾರೀಖಿನ ಒಳಗಾಗಿ ಕೊಡಲಿಕ್ಕೇ ಬೇಕು. ಒಂದು ವೇಳೆ ಕೊಡದಿದ್ದರೆ, ಅವರ ಹೆಸರುಗಳನ್ನು ಸ್ಟ್ಯಾಂಡಿಂಗ್ ಕಮೀಟಿಯ ಚೇರಮನ್‌ರು, ಲಿಸ್ಟಿನೊಳಗಿಂದ ತೆಗೆದು ಹಾಕಬೇಕು." ಈ ಠರಾವನ್ನು ಸೂಚನಾರೂಪದಿಂದ ಶ್ರೀಮಂತ ಶಿವಲಿಂಗರಾವ ಜಗದೇವರಾವ ದೇಶಮುಖ ಇವರು ಸಭೆಯ ಮುಂದಿಡಲು, ಇದಕ್ಕೆ ಮಿ॥ತಮ್ಮಣಪ್ಪ ಸತ್ಯಪ್ಪ ಚಿಕ್ಕೋಡಿ ಮತ್ತು ಮಿ॥ಬಸಟ್ಟೆಪ್ಪ ಅಣ್ಣಾ ಮುತ್ತೂರ ಇವರು ಅನುಮೋದನೆ ಕೊಡಲು, ಸರ್ವಾನುಮತದಿಂದ ಪಾಸಾಯಿತು.[೧೯] ಇದರಿಂದ ಮಹಾಸಭೆಯ ಪ್ರಗತಿಗೆ ಹಣದ ಅವಶ್ಯಕತೆ ಸಾಕಷ್ಟಿದ್ದುದು ತಿಳಿಯುತ್ತದೆ. ಅದನ್ನು ಚಂದಾಹಣದಿಂದ ಸಮಾಜ ನೀಗಿಸಿಕೊಳ್ಳಬೇಕೆಂದು ತಮ್ಮಣ್ಣಪ್ಪನವರು ತಿಳಿದಿದ್ದರು.

"ಶ್ರೀ ಶಿವಯೋಗಮಂದಿರದ ಮತ್ತು ವೀರಶೈವ ಪಾಠಶಾಲೆಗಳ ಈಗಿನ ಅಭ್ಯಾಸಕ್ರಮಗಳನ್ನು ತರಿಸಿಕೊಂಡು ಅಥವಾ ತಮಗೆ ಇಷ್ಟವಿದ್ದ ಪಾಠಶಾಲೆಗಳನ್ನು ಸ್ವತಃ ನೋಡಿ ಈಗಿನ ಪರಿಸ್ಥಿತಿಗೆ ಸರಿಯಾಗಿ ಅಭ್ಯಾಸಕ್ರಮವನ್ನು ಸಿದ್ಧಪಡಿಸುವುದಕ್ಕಾಗಿ ಒಂದು ಸಬ್‌ಕಮೀಟಿಯನ್ನು ನೇಮಿಸಿದ್ದರು. ಈ ಸಬ್‌ಕಮೀಟಿಯ ಅಧ್ಯಕ್ಷರಾಗಿ ಶ್ರೀ ಸಿದ್ಧರಾಮಪ್ಪ ಪಾವಟೆ, ಹುಬ್ಬಳ್ಳಿ ನೇಮಕವಾದರೆ, ಉಳಿದ ಸದಸ್ಯರಾಗಿ ಅಪ್ಪಾಸಾಹೇಬ ಸೊಲ್ಲಾಪೂರ, ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ, ಶಿವಮೂರ್ತಯ್ಯಸ್ವಾಮಿ ಕಣಬರ್ಗಿ, ಗೋಕಾಕ, ಶ್ರೀ ಫಕೀರಪ್ಪ ಹಳಕಟ್ಟಿ, ಶ್ರೀ ಶಿವಮೂರ್ತಿ ಕೋಹಳ್ಳಿ ಪಟ್ಟದೇವರು, ಎನ್.ಆರ್.ಕರಿಬಸವಶಾಸ್ತ್ರಿಗಳು ಮೈಸೂರು, ಶ್ರೀ ವೀರಬಸವಪ್ಪ ಶೆಟ್ಟಿ ಕೊಲ್ಲಾಪೂರ ಅವರನ್ನು ನಿಯಮಿಸಲಾಗಿತ್ತು.[೨೦] ಇಲ್ಲಿ ಕೇವಲ ಮುಲ್ಕಿ ಪರೀಕ್ಷೆಯನ್ನು ಪಾಸು ಮಾಡಿದ ತಮ್ಮಣ್ಣಪ್ಪನವರು ಶಿವಯೋಗಮಂದಿರದ ಪಾಠಶಾಲೆಯ ಪಠ್ಯಕ್ರಮ ತಯಾರಿಸುವ ಸದಸ್ಯರಾಗಿ ಕೆಲಸ ಮಾಡಿದ್ದು ಬಹಳ ದೊಡ್ಡ ವಿಷಯ. ಮಹಾಸಭೆಯು ಕೂಡ ಪಾವಟೆ, ಹಳಕಟ್ಟಿಯವರಂತ ವಿದ್ವಾಂಸರ ಮಧ್ಯದಲ್ಲಿ ತಮ್ಮಣ್ಣಪ್ಪನವರ ಹೆಸರನ್ನು ಗುರುತಿಸಿಕೊಂಡದ್ದು ಅವರ ಘನವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

"ಧಾರ್ಮಿಕ, ನೈತಿಕ, ಔದ್ಯೋಗಿಕಗಳ ಕುರಿತು ಸಣ್ಣ ಗ್ರಂಥಗಳನ್ನು ಮುದ್ರಿಸಿ ಜನರಲ್ಲಿ ಪ್ರಸಾರ ಮಾಡುವ ಅವಶ್ಯಕವು ಬಹಳೇ ಉಂಟು. ಒಂದು ವೇಳೆ ಇಂಥ ಸಂಘಗಳು ಸ್ಥಾಪನೆಯಾದಲ್ಲಿ, ಅದಕ್ಕೆ ಪ್ರತಿಯೊಬ್ಬ ವೀರಶೈವನೂ ಅವಶ್ಯಕವಾಗಿ ಸಹಾಯ ಮಾಡಬೇಕು"[೨೧] ಎಂಬ ಠರಾವನ್ನು ಶ್ರೀ ತಮ್ಮಣ್ಣಪ್ಪಾ ಚಿಕ್ಕೋಡಿ ಇವರು ಸಭೆಯಲ್ಲಿ ಸೂಚಿಸಿದರು. ಅದಕ್ಕೆ ಶಿವಮೂರ್ತಿಸ್ವಾಮಿ ಕಣಬರ್ಗಿ ಮತ್ತು ಗುರುಶಾಂತಪ್ಪ ಅಣ್ಣಾ ಉಮರ್ಜಿ ಸೊಲ್ಲಾಪುರ ಇವರು ಅನುಮೋದಿಸಿದರು.

ಕನ್ನಡ ಪುಸ್ತಕಗಳ ಕೊರತೆಯು ತಮ್ಮಣ್ಣಪ್ಪನವರನ್ನು ಸದಾ ಕೊರೆಯುತ್ತಿತ್ತು. ಉಳಿದ ಧರ್ಮಗಳ ಗ್ರಂಥಗಳು ಪ್ರಕಟಗೊಂಡಿರುವುದನ್ನು ಗಮನಿಸಿದ ತಮ್ಮಣ್ಣಪ್ಪನವರು ಲಿಂಗಾಯತ ಸಮುದಾಯಕ್ಕೆ ಪುಸ್ತಕಗಳ ಅವಶ್ಯಕತೆಯನ್ನು ಸಭೆಯ ಮುಂದೆ ಇಟ್ಟರು.

ಜನಗಣತಿಯಲ್ಲಿ ಧರ್ಮ ಕಾಲಂನಲ್ಲಿ ಲಿಂಗಾಯತ ಬರೆಯಿಸಲು ಇಂದಿಗೂ ಸಾಧ್ಯವಾಗುತ್ತಿಲ್ಲ. ಆದರೆ ಬಹುದಿನಗಳ ಹಿಂದೆಯೇ ೪ನೇ ಕಾಲಮ್ಮಿನಲ್ಲಿ ಧರ್ಮ ಎಂಬ ಸದರಿನ ಕೆಳಗೆ ಲಿಂಗಾಯತ ಅಥವಾ ವೀರಶೈವ ಎಂದು ಮತ್ತು ೮ನೇ ಕಾಲಮ್ಮಿನಲ್ಲಿ ಜಾತಿ ಈ ಸದರಿನ ಕೆಳಗೆ ತಮ್ಮಲ್ಲಿ ಹೆಸರು (ಒಳಜಾತಿ) ಗಳನ್ನು ಬರೆಯಬೇಕು. ಮತ್ತು ಆಯಾ ಸರಕಾರದವರಿಗೆ ಈ ಸಂಗತಿಯನ್ನು ತಿಳಿಸಬೇಕು. ಈ ಬಗ್ಗೆ ಯೋಗ್ಯ ಪ್ರಯತ್ನಗಳನ್ನು ಆಯಾ ಪ್ರಾಂತ್ಯದ ಸೆಕ್ರೆಟರಿಗಳು ತಮ್ಮ ತಮ್ಮ ಭಾಗಗಳಲ್ಲಿ ಮಾಡತಕ್ಕದ್ದು. ಈ ಠರಾವನ್ನು ಸೂಚನಾರೂಪದಿಂದ ಮಿ॥ಸಿದ್ಧರಾಮಪ್ಪ ಪಾವಟೆ ಇವರು ಸಭೆಯ ಮುಂದೆ ತಂದಾಗ ಮಿ॥ತಮ್ಮಣ್ಣಪ್ಪಾ ಚಿಕ್ಕೋಡಿ ಇವರು ಅದನ್ನು ಅನುಮೋದಿಸಿದರು.[೨೨]

೧೯೧೨ರಲ್ಲಿ ಬೆಳಗಾವಿ ಜಿಲ್ಲೆಯ ನಿಪ್ಪಾಣಿಯಲ್ಲಿ ಜರುಗಿದ ೭ನೆಯ ಶ್ರೀಮದ್ವೀರಶೈವ ಮಹಾಸಭೆಯಲ್ಲಿ ತಮ್ಮಣ್ಣಪ್ಪನವರು ತಮ್ಮ ನಿರ್ಣಯವನ್ನು ಓದಿದರು. "ವೀರಶೈವ ಸಮಾಜದವರು ಸದ್ಯಕ್ಕೆ ಕೈಗೊಂಡಿರುವ ಶ್ರೀ ಶಿವಯೋಗ ಮಂದಿರ, ಧಾರವಾಡದ ಟೌನ್‌ಹಾಲ್ ಹಾಗೂ ಮುಂಬಯಿಯ ವೀರಶೈವಾಶ್ರಮ, ಇವುಗಳಿಗೆ ಇನ್ನೂ ಬಹಳ ಹಣವನ್ನು ಕೂಡಿಸಬೇಕಾಗಿರುವುದರಿಂದಲೂ, ಮತ್ತು ಉಚ್ಚಪ್ರತಿಯ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಗಳಿಗೆ ಕೊಡಬೇಕಾಗಿರುವ ಸ್ಕಾಲರುಶಿಪ್ಪುಗಳಿಗೆ ಹಣದ ಕೊರತೆಯಾಗಿರುವುದರಿಂದಲೂ ಕರ್ನಾಟಕ ಕಾಲೇಜದ ಸ್ಥಾಪನೆಗೆ ಸದ್ಯಕ್ಕೆ ವೀರಶೈವ ಸಮಾಜದಿಂದ ಸಹಾಯ ಮಾಡುವುದಾಗಲಾರದೆಂದು ಈ ಸಭೆಯ ಅಭಿಪ್ರಾಯವಿರುತ್ತದೆ."[೨೩] ಮುಂಬಯಿ ಇಲಾಖೆಯ ಮಹಾರಾಷ್ಟ್ರ, ಗುಜರಾತ ಮತ್ತು ಸಿಂಧ್ ಪ್ರಾಂತ್ಯಗಳಲ್ಲಿ ಆರ್ಟ್ಸ್‌ಕಾಲೇಜ ಅಸ್ತಿತ್ವದಲ್ಲಿ ಇರಲಿಲ್ಲ. ಕರ್ನಾಟಕದಲ್ಲಿ ಪ್ರತಿಯೊಬ್ಬರೂ ೨-೩ ರೂಪಾಯಿಗಳನ್ನು ಕೊಟ್ಟರೆ ಸರಕಾರದವರು ಉಳಿದ ದುಡ್ಡನ್ನು ಸೇರಿಸಿ ಕರ್ನಾಟಕ ಕಾಲೇಜು ಸ್ಥಾಪಿಸುವ ವಿಚಾರವಾಗಿತ್ತು. ಲಿಂಗಾಯತ ಸಮಾಜದವರು ಈ ಶಿಕ್ಷಣ ಸಂಸ್ಥೆಗೆ ಸಹಾಯ ಮಾಡಬೇಕೆಂದು ಸಾಕಷ್ಟು ಬಯಸಿದ್ದರೂ, ಸ್ವತಃ ಅವರೇ ಆರ್ಥಿಕ ಪರಿಸ್ಥಿತಿಯ ಕೊರತೆಯನ್ನು ಅನುಭವಿಸುತ್ತಿದ್ದರು. ಈಗಾಗಲೇ "ಲಿಂಗಾಯತ ಎಜುಕೇಶನ್" ಎಂಬ ಹೆಸರಿನ ಧನಸಿಧಿಯನ್ನು ಕೂಡಿಸಲು ಆರಂಭಿಸಿದ್ದು, ಅದು ಹೇಳಿಕೊಳ್ಳುವಷ್ಟು ದೊಡ್ಡ ಮೊತ್ತವಾಗಿರಲಿಲ್ಲ. ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವುದರಿಂದ, ವಿದ್ಯಾರ್ಥಿಗಳಿಗೆ ಹಣ ಕೊಡುವುದು ಕಷ್ಟವಾಗಿದ್ದು,

ಕರ್ನಾಟಕ ಕಾಲೇಜಿಗೆ ಧನಸಹಾಯ ನೀಡುವುದು ಆಗಲಾರದು ಎಂಬ ವಿಷಯವನ್ನು ಸ್ಪಷ್ಟಪಡಿಸಿದರು. ಅಲ್ಲದೆ ಹಾನಗಲ್ಲ ಶ್ರೀಗಳು ಕಟ್ಟಿದ ಶಿವಯೋಗಮಂದಿರ, ಧಾರವಾಡದಲ್ಲಿ ವೀರಶೈವರ ಸಾರ್ವಜನಿಕ ಉಪಯೋಗಕ್ಕಾಗಿ ಕಟ್ಟುತ್ತಿರುವ ಟೌನ್‌ಹಾಲ್, ಮುಂಬಯಿಯಲ್ಲಿ ನಿರ್ಮಿಸುತ್ತಿರುವ ವೀರಶೈವಾಶ್ರಮ ಇವುಗಳಿಗೆ ಹಣದ ಕೊರತೆ ಸಾಕಷ್ಟಾಗಿರುವುದರಿಂದ ಮೊದಲು ಈ ಸಂಸ್ಥೆಗಳನ್ನು ಬೆಳೆಸುವುದಕ್ಕೆ ಅಧಿಕ ಪ್ರಮಾಣದ ಧನನಿಧಿ ಸಂಗ್ರಹವಾಗಬೇಕೆಂದು ತಮ್ಮಣ್ಣಪ್ಪನವರು ಈ ಸಭೆಯ ಮೂಲಕ ಒತ್ತುಕೊಟ್ಟು ಹೇಳುತ್ತಾರೆ. ಇದರಿಂದ ಆರ್ಟ್ಸ್ ಕಾಲೇಜು ಮುಂಬಯಿ ಕರ್ನಾಟಕದಲ್ಲಿ ಸ್ಥಾಪಿಸಬಾರದೆಂಬುದು ತಮ್ಮಣ್ಣಪ್ಪನವರ ಅಭಿಪ್ರಾಯವಲ್ಲ. ಶಿಕ್ಷಣಪ್ರೇಮಿಯಾದ ತಮ್ಮಣ್ಣಪ್ಪನವರಿಗೆ ಅಂತಹ ಕೆಟ್ಟ ವಿಚಾರಗಳಿರಲಿಲ್ಲ. ಈಗಾಗಲೇ ಪ್ರಾರಂಭ ಮಾಡಿದ ಕಾರ್ಯವನ್ನು ಅರ್ಧಕ್ಕೆ ನಿಲ್ಲಿಸಿ, ನಮಗೆ ಆಗದ ಬೇರೊಂದು ಕಾರ್ಯಕ್ಕೆ ಕೈಹಾಕುವುದು ಎಷ್ಟು ಸೂಕ್ತಕರ ಎಂದು ತಮ್ಮಣ್ಣಪ್ಪನವರಿಗೆ ಅನ್ನಿಸಿರಬೇಕು. ಹೀಗಾಗಿ ತಮ್ಮ ತೀರ್ಮಾನವನ್ನು ಈ ಸಭೆಯ ಮುಂದಿಟ್ಟರು.

೧೯೧೭ರಲ್ಲಿ ಎಂಟನೆಯ ಶ್ರೀ ಮದ್ವೀರಶೈವ ಸಭೆಯು ದಾವಣಗೆರಿಯಲ್ಲಿ ಜರುಗಿತು. ಮೂರನೆಯ ದಿನದ ಕಾರ್ಯಕ್ರಮದಲ್ಲಿ ತಮ್ಮಣ್ಣಪ್ಪನವರು "ಪ್ರತ್ಯೇಕ ಪ್ರಾತಿನಿಧ್ಯ"ದ ವಿಷಯದ ಬಗ್ಗೆ ಭಾಷಣ ಮಾಡಿದರು. ತಮ್ಮಣ್ಣಪ್ಪನವರ ಆಶಯದಂತೆ ಲಿಂಗಾಯತ ಸಮಾಜದ ಯುವಕರು ವಿದ್ಯಾವಂತರಾಗಿ, ಎಲ್ಲ ಕ್ಷೇತ್ರಗಳಲ್ಲೂ ಸಾಧನೆಯನ್ನು ಮಾಡಬೇಕು. ಅದಕ್ಕಾಗಿ ರಾಜ್ಯಾಂಗದಲ್ಲಿ ಲಿಂಗಾಯತರಿಗೆ ಸರಿಪಾಲು ಇದ್ದರೆ ನಮ್ಮ ಧರ್ಮಾಭಿವೃದ್ಧಿ ಮೊದಲಾದವುಗಳಿಗೆಲ್ಲ ಅವಕಾಶವಾಗುತ್ತದೆ. ಪ್ರಾಂತೀಕ ಶಾಸನ ಸಭೆಯಲ್ಲಿಯೂ ಕೂಡ ಲಿಂಗಾಯತರು ಕ್ವಚಿತ್ತಾಗಿದ್ದಾರೆ. ಫಕೀರಪ್ಪ ಹಳಕಟ್ಟಿ ಮತ್ತು ಕಂಬಳಿಯವರು ಬೊಂಬಾಯಿ ಶಾಸನಸಭೆಯಲ್ಲಿ ಪ್ರಯತ್ನಪಟ್ಟರೂ ಅವರಿಗೆ ಪ್ರಜಾಮತಗಳು ಸಿಗದೇ ಇರುವುದು ವಿಷಾದನೀಯ ಸಂಗತಿ. ಲಿಂಗಾಯತರಲ್ಲಿ ವಿದ್ಯಾವಂತರ ಪ್ರಮಾಣ ಅತಿ ಕಡಿಮೆ ಇರುವುದರಿಂದ, ಸರಕಾರವು ಮನಸ್ಸು ಮಾಡಿ ನಮಗೆ "ಪ್ರತ್ಯೇಕ ಪ್ರಾತಿನಿಧ್ಯ"ವನ್ನು ಕೊಡಬೇಕೆಂದು ಸಭೆಯ ಮೂಲಕ ಕೇಳಿಕೊಂಡರು. ಲಿಂಗಾಯತ ಸಮಾಜದ ಯುವಕರು ವಿದ್ಯಾವಂತಾರಾದರೆ ರಾಜ್ಯಾಧಿಕಾರ ನಿರ್ವಾಹಕಾರ್ಯದಲ್ಲಿ ಪ್ರಭುತ್ವದವರಿಗೆ ಸಹಾಯ ಮಾಡುವುದಾಗಿ ತಮ್ಮಣ್ಣಪ್ಪನವರು ಭರವಸೆ ಕೊಟ್ಟರು. ಈ ವಿಷಯಕ್ಕೆ ಜಿ. ಪರಮಶಿವಯ್ಯ ಅವರು ಈ ವಿಷಯವನ್ನು ಅನುಮೋದಿಸಿದರು.[೨೪] ಒಟ್ಟಿನಲ್ಲಿ ತಮ್ಮಣ್ಣಪ್ಪನವರು ಲಿಂಗಾಯತ ಸಮಾಜ ಸುಶಿಕ್ಷಿತವಾಗಬೇಕೆಂಬ ಹಿರಿದಾಸೆಯನ್ನು ಇಟ್ಟುಕೊಂಡಿದ್ದರು. ಅದಕ್ಕಾಗಿ ಇಂತಹ ಸಮ್ಮೇಲನಗಳ ವೇದಿಕೆಗಳನ್ನು ಬಳಸಿಕೊಳ್ಳುತ್ತಿದ್ದರು.

ವೀರಶೈವ ಮಹಾಸಭೆಗಳಿಂದ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿಯಾಗುತ್ತಿರುವುದನ್ನು ಕಂಡ ತಮ್ಮಣ್ಣಪ್ಪನವರು ಇನ್ನೂ ಹೆಚ್ಚಿನ ಸಮಾಜೋಪಯೋಗಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಬಯಸಿದರು. ಆ ಮಹದಾಶೆಯಿಂದ ವೀರಶೈವ ತರುಣರ ವಿಶಿಷ್ಟ ಸಮ್ಮೇಲನಗಳಿಗೂ ಪ್ರೋತ್ಸಾಹಿಸುತ್ತಿದ್ದರು. ಜೊತೆಗೆ ಈ ಸಮ್ಮೇಲನಗಳಲ್ಲಿ ಭಾಗವಹಿಸಿ ಠರಾವುಗಳನ್ನು ಪಾಸು ಮಾಡಿಸುತ್ತಿದ್ದರು. ೨೨ನೆಯ ಮೇ ೧೯೨೧ರಲ್ಲಿ ಹುಬ್ಬಳ್ಳಿಯಲ್ಲಿ ಜರುಗಿದ ವೀರಶೈವ ತರುಣರ

ಸಮ್ಮೇಲನದಲ್ಲಿ ರಾವಸಾಹೇಬ ಫಕೀರಪ್ಪ ಹಳಕಟ್ಟಿಯವರು ಅಧ್ಯಕ್ಷರಾಗಿದ್ದರು. ಗಣ್ಯ ಉಪಸ್ಥಿತರ ಹೆಸರುಗಳಲ್ಲಿ ತಮ್ಮಣ್ಣಪ್ಪನವರ ಹೆಸರು ಇದ್ದುದಕ್ಕೆ ಅವರ ಘನವ್ಯಕ್ತಿತ್ವವೇ ಕಾರಣ. ಲಿಂಗಾಯತ ಸಮಾಜದ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿರುವ ತಮ್ಮಣ್ಣಪ್ಪನವರು ೭ನೆಯ ಠರಾವಿನಲ್ಲಿ ಲಿಂಗಾಯತ ಸಮಾಜಕ್ಕೆ ಅವಶ್ಯವಿರುವ ಧರ್ಮಗ್ರಂಥ ರಚನೆಯ ಬಗ್ಗೆ ಸಭೆಗೆ ಸೂಚನೆ ನೀಡಿದಾಗ ಸಭೆಯು ಇವರ ಮಾತಿಗೆ ಅನುಮೋದನೆಯನ್ನು ನೀಡಿದುದಲ್ಲದೆ ನಾಲ್ಕು ಜನರ ಸಮಿತಿಯನ್ನು ನೇಮಿಸಿತು.[೨೨] ಈ ಸಮಿತಿಯಲ್ಲಿ ರಾವಸಾಹೇಬ ಹಳಕಟ್ಟಿ, ಶ್ರೀ ಪಾವಟೆ, ಶ್ರೀ ಬಿಳೇಅಂಗಡಿ ಮತ್ತು ಬಸವನಾಳರು ನೇಮಕಗೊಂಡರು. ತಮ್ಮಣ್ಣಪ್ಪನವರ ಸೂಚನೆಗೆ ಅನುಮೋದನೆ ನೀಡಿದವರು ಬಿಳೇಅಂಗಡಿ ವಕೀಲರು ಮತ್ತು ಶ್ರೀ ಕಂಬಳಿಯವರು.[೨೩]

ತಮ್ಮಣ್ಣಪ್ಪನವರು ವೀರಶೈವ ಮಹಾಸಭೆ ಸ್ಥಾಪನೆಯಾದಾಗಿನಿಂದ ತಮ್ಮ ಜೀವಿತಾವಧಿಯ ವರೆಗೂ ಅದರ ನಂಟನ್ನು ಇಟ್ಟುಕೊಂಡು ಬಂದರು. ಅದರ ಉದ್ಧಾರಕ್ಕಾಗಿ ಸದಾ ಪರಿಶ್ರಮ ಪಟ್ಟರು. ಪ್ರತಿಯೊಂದು ಮಹಾಸಭೆಯಲ್ಲಿ ಸಮಾಜಪರ ಚಿಂತನೆಗಳನ್ನೊಳಗೊಂಡ ವಿಷಯಗಳನ್ನು ಮಂಡಿಸುತ್ತಿದ್ದರು. ಹೀಗಾಗಿ ತಮ್ಮಣ್ಣಪ್ಪನವರ ಭಾಷಣ ಎಂದರೆ ಬಹಳ ವಿಶೇಷವಾದದ್ದು ಎಂದು ಜನ ಮಾತಾಡಿಕೊಳ್ಳುತ್ತಿದ್ದನ್ನು ಬನಹಟ್ಟಿಯ ಹಿರಿಯರು ಸ್ಮರಿಸಿಕೊಳ್ಳುತ್ತಾರೆ.

೪.೧.೩. ರಾಜಕೀಯ:

ತಿಲಕರ ರಾಜಕೀಯ ಪ್ರಭಾವಕ್ಕೆ ಒಳಗಾದ ತಮ್ಮಣ್ಣಪ್ಪನವರು ರಾಜಕೀಯ ಸಂಘಟನೆಗಳಿಂದ ಸಮಾಜದಲ್ಲಿ ಪ್ರಗತಿಪರ ಕಾರ್ಯಗಳನ್ನು ಮಾಡಬಹುದು ಎಂಬುದನ್ನು ಮನಗಂಡರು. ದೇಶದ ರಾಜಕೀಯದಲ್ಲಿ ಯುವಕರು ಮುಂದೆ ಬಂದರೆ ಸಮಾಜವು ತೀವ್ರಗತಿಯಲ್ಲಿ ಬದಲಾವಣೆಯಾಗಲು ಸಾಧ್ಯ ಎಂದು ಅರಿತಿದ್ದರು. ಇದನ್ನು ವೀರಶೈವ ಮಹಾಸಭೆಗಳಲ್ಲಿ ಕೂಡ ಚರ್ಚಿಸಿದ್ದರು. ಅಂತೆಯೇ ಅವರು ಹಳಕಟ್ಟಿ, ಪಂಡಿತಪ್ಪ, ಎಸ್.ಎನ್.ಅಂಗಡಿ. ಅವರುಗಳಿಗೆ ಪ್ರೋತ್ಸಾಹಿಸಲು ತಿಳಿಸುತ್ತಿದ್ದರು. ತಮ್ಮಣ್ಣಪ್ಪನವರು ಜಮಖಂಡಿ ರಾಜರ ಪ್ರೀತಿಯನ್ನು ಗಳಿಸಿಕೊಂಡು ಆಸ್ಥಾನದಲ್ಲಿ ತಮ್ಮದೇ ಆದ ಸ್ಥಾನವನ್ನು ಹೊಂದಿದ್ದರು. ಅದರಿಂದ ಸಮಾಜದಲ್ಲಿ ಎಷ್ಟೆಲ್ಲಾ ಪ್ರಗತಿಯನ್ನು ಸಾಧಿಸಲು ಕಾರಣೀಭೂತರಾದರು. ಒಂದು ರೀತಿಯಲ್ಲಿ ರಾಜಕೀಯ ಬೆಂಬಲ ತಮ್ಮಣ್ಣಪ್ಪನವರ ಸಾಧನೆಗಳಿಗೆ ವೇದಿಕೆಯಾಗಿತ್ತು ಎಂದು ಹೇಳುವಲ್ಲಿ ತಪ್ಪೇನಿಲ್ಲ. ಅಂದಿನ ಭಾರತದ ರಾಜಕೀಯದಲ್ಲಿ ಕಾಂಗ್ರೆಸ್ ಮುಖೇನ ಚಳುವಳಿ, ಕರ್ನಾಟಕ ಏಕೀಕರಣ ಹೀಗೆ ಒಂದೊಂದು ಘಟ್ಟದಲ್ಲಿ ತಮ್ಮಣ್ಣಪ್ಪನವರು ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ.

೪.೧.೩.೧. ಜಮಖಂಡಿ ಸಂಸ್ಥಾನದಲ್ಲಿ ಸಾಮಾಜಿಕ-ರಾಜಕೀಯ ಜಾಗೃತಿ:

ಅಪ್ಪಾಸಾಹೇಬ ವಾಡವೆ ಮತ್ತು ಸದಾಶಿವ ದೊಂಡೋಪಂತ ಪೆಂಡ್ಸೆ ಇವರಿಬ್ಬರೂ ತಮ್ಮ ವಕೀಲಿ ಅಭ್ಯಾಸವನ್ನು ಮುಗಿಸಿ ಜಮಖಂಡಿಯಲ್ಲಿ ವಕೀಲರಾಗಿ ಕೆಲಸ ನಿರ್ವಹಿಸುತ್ತಿದ್ದರು. ಜೊತೆಗೆ ಸಾಮಾಜಿಕ, ರಾಜಕೀಯ ಸಮಸ್ಯೆಗಳಿಗಾಗಿ ಕೆಲ ಸಂಘ-ಸಂಸ್ಥೆಗಳನ್ನು ಹುಟ್ಟುಹಾಕಿದ್ದರು. ಇವುಗಳಲ್ಲಿ

'ವಿದ್ಯಾಭಿವೃದ್ಧಿ ಮಂಡಳ', 'ವಚನವಂಕಿ' ಮತ್ತು 'ವಾಘಧಾರಿಯಾ ಉತ್ಪಾದಿನಿ' ಎಂಬ ಸಂಸ್ಥೆಗಳು ಮುಖ್ಯವಾದವುಗಳು. ಈ ಸಂಸ್ಥೆಗಳು ಅನೇಕ ಸಾಮಾಜಿಕ, ರಾಜಕೀಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದವು. ಇದರಲ್ಲಿ ಪ್ರಸಿದ್ಧ ಭಾಷಣಕಾರರು ವಿವಿಧ ಮಹತ್ವದ ವಿಷಯಗಳನ್ನು ಚರ್ಚೆಗೆ ಎತ್ತಿಕೊಳ್ಳುತ್ತಿದ್ದರು. ಅವರಲ್ಲಿ ಅಂತಂಗಿಪಂತ ಮಿರಜಕರ, ಬನಹಟ್ಟಿಯ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ, ಶಂಕರರಾವ್ ಜೋಶಿ, ವಾಮನರಾವ್ ಪಟವರ್ಧನ, ವಿಠ್ಠಲರಾವ್ ಶಿಂಧೆ, ಅಪ್ಪಾಜಿರಾವ್ ವಾಟವೆ, ಸದಾಶಿವ ಪೆಂಡಸೆ ಪ್ರಮುಖರು. ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿಯವರು ನ್ಯಾಯವಾದಿ ಮಹಾದೇವ ಗೋವಿಂದ ರಾನಡೆ ಇವರ ಶಿಷ್ಯರಾಗಿದ್ದು ಬನಹಟ್ಟಿಯಲ್ಲಿ ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದ್ದರು. ಇವರ ಕಾರ್ಯವಿಸ್ತರಣೆ ಹೆಚ್ಚಿದಂತೆ ಜಮಖಂಡಿ ಸಂಸ್ಥಾನದಲ್ಲಿ ಉತ್ತಮ ಹೆಸರನ್ನು ಗಳಿಸಿಕೊಂಡು, ಜಮಖಂಡಿಯ ಜನತೆಯ ಜಾಗೃತಿಗೆ ಕಾರಣರಾದರು.[೨೬]

೪.೧.೩.೨. ಅಖಿಲ ಭಾರತ ಕಾಂಗ್ರೆಸ್:

ತಮಣ್ಣಪ್ಪನವರು ತಮ್ಮ ಬಾಲ್ಯದಿಂದಲೇ ರಾಷ್ಟ್ರೀಯ ಚಳುವಳಿಯನ್ನು ಕಂಡವರು. ರಾಷ್ಟ್ರೀಯ ಚಳುವಳಿಯ ಮೂರು ಹಂತಗಳ ಅನುಭವವನ್ನು ಪಡೆದವರು. ಮೊದಲ ಹಂತದ 'ಮಂದಗಾಮಿಗಳ ವಿಚಾರಗಳಿಂದ ಪ್ರೇರೆಪಿತರಾಗಿ ತಮ್ಮಣ್ಣಪ್ಪನವರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಯಾವುದೇ ಹಿಂಸಾಕ್ರಾಂತಿಯಲ್ಲಿ ತೊಡಗದೆ ಸಾರ್ವಜನಿಕ ಚರ್ಚಾಕೂಟ ಮತ್ತು ನಿಯೋಗಗಳ ಮೂಲಕ ದುಡಿಯುತ್ತಿದ್ದರು. ೧೮೮೫ರಲ್ಲಿ ಸ್ಥಾಪನೆಗೊಂಡ 'ರಾಷ್ಟ್ರೀಯ ಕಾಂಗ್ರೆಸ್' ತನ್ನ ಕಾರ್ಯ ಚಟುವಟಿಕೆಗಳನ್ನು ಇಡೀ ದೇಶಾದ್ಯಂತ ಪಸರಿಸುವ ಹಾಗೆ ಮಾಡಿತು. ತಮ್ಮಣ್ಣಪ್ಪನವರಿಗೆ ದೇಶದ ವಿದ್ಯಮಾನಗಳ ಬಗ್ಗೆ ಅತೀ ಕಾಳಜಿ ಇತ್ತು. ಈ ಹೊತ್ತಿಗೆ ನಡೆದ ಏ.ಓ.ಹ್ಯೂಮ್‌ರು ಭಾರತಾದ್ಯಂತ ಚಳುವಳಿಯ ಮುಖಂಡರಾಗಿ ಭೇಟಿ ನೀಡಿ ಜನರಲ್ಲಿ ತಿಳುವಳಿಕೆಯನ್ನು ಮೂಡಿಸುವ ಪ್ರಯತ್ನವನ್ನು ಮಾಡುತ್ತಲಿದ್ದರು. ಜೊತೆಗೆ ಸ್ವಾಮಿ ವಿವೇಕಾನಂದರ ಬೆಳಗಾವಿಯ ಭೇಟಿ, ಅವರ ಭಾಷಣ ಮತ್ತು ಲೇಖನಗಳು ಉತ್ತರ ಕರ್ನಾಟಕದವರಿಗೆ ಸಂಪೂರ್ಣವಾಗಿ ದೇಶದ ವಿದ್ಯಮಾನಗಳ ಪರಿಸ್ಥಿತಿ ಅರಿವಿಗೆ ಬರುವಂತೆ ಮಾಡಿತ್ತು.

ತಮ್ಮಣ್ಣಪ್ಪನವರು ಈ ಎಲ್ಲ ಬೆಳವಣಿಗೆಗಳ ಮಧ್ಯದಲ್ಲಿಯೇ ಇದ್ದವರು. ನಂತರ ಬಂದ 'ಲಾಲ, ಬಾಲ, ಪಾಲ'ರ ಪ್ರಭಾವಕ್ಕೆ ಒಳಗಾದರು. ತಿಲಕರ 'ಕೇಸರಿ' ಮತ್ತು 'ಮರಾಠ' ಪತ್ರಿಕೆಗಳನ್ನು ತರಿಸುತ್ತಿದ್ದ ತಮ್ಮಣ್ಣಪ್ಪನವರು ಬನಹಟ್ಟಿಯ ಜನತೆಗೆ ದೇಶದ ಪರಿಸ್ಥಿತಿಯನ್ನು ತಿಳಿಸಲು ಎಂದೂ ಬೇಸರಗೊಳ್ಳುತ್ತಿರಲಿಲ್ಲ. ಸರಕಾರದ ದಬ್ಬಾಳಿಕೆಯನ್ನು ಖಂಡಿಸಿ ಬರೆಯುತ್ತಿದ್ದ ಲೇಖನಗಳು ಮತ್ತು ಭಾಷಣಗಳು ತಿಲಕರ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿದ್ದವು. ಕಾಂಗ್ರೆಸ್ ಮೂಲಕ ನಡೆಯುವ ದೇಶದ ಚಟುವಟಿಕೆಗಳ ಬಗ್ಗೆ ಸದಾ ಆಸಕ್ತರಾಗಿದ್ದರು. ತಿಲಕರ ಉಗ್ರ ಹೋರಾಟದಿಂದ ಚಳುವಳಿ ತೀವ್ರಗತಿಯಲ್ಲಿ ಮುನ್ನೆಡೆದಾಗ ಅದಕ್ಕೆ ಅಷ್ಟೇ ಆಸಕ್ತಿಯಿಂದ ಸ್ಪಂದಿಸಿದರು.

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಗಳು ಜರುಗಿದಾಗ ತಮ್ಮಣ್ಣಪ್ಪನವರು ಭಾಗವಹಿಸುತ್ತಿದ್ದರು. ಅಧಿವೇಶನದಲ್ಲಿ ಪಾಸುಗೊಂಡ ಠರಾವುಗಳನ್ನು ಮನ್ನಿಸುತ್ತಿದ್ದರು. ಅಂತೆಯೇ ರಾಷ್ಟ್ರೀಯ ಪ್ರೇರಣೆಯಿಂದ

ತಮ್ಮಣ್ಣಪ್ಪನವರು ಖಾದಿಯ ಕಡೆ ಮನಸೋತು ಸ್ವತಃ ಖಾದಿವಸ್ತ್ರಧಾರಿಗಳಾದರು. ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆ ಮತ್ತು ಇನ್ನಿತರ ಸಮಾಜಸುಧಾರಣ ಕಾರ್ಯಗಳನ್ನು ಮೆಚ್ಚಿಕೊಂಡರು.

೧೯೧೫ರಲ್ಲಿ ಶ್ರೀ ಎಸ್.ಪಿ.ಸಿಂಹ ಅವರ ಅಧ್ಯಕ್ಷತೆಯಲ್ಲಿ ಮುಂಬಯಿಯಲ್ಲಿ ಸೇರಿದ ೩೧ನೆಯ ಕಾಂಗ್ರೆಸ್ ಮಹಾ ಅಧಿವೇಶನಕ್ಕೆ ೨೫ಸದಸ್ಯರನ್ನೊಳಗೊಂಡ ದಕ್ಷಿಣ ಸಂಸ್ಥಾನಗಳ ಹಿತವರ್ಧಕ ಸಮಿತಿಯ ಕಾಂಗ್ರೆಸ್ ಮಹಾನಾಯಕರನ್ನು ಕಂಡು, ಸಂಸ್ಥಾನಗಳಲ್ಲಿನ ಕನ್ನಡ ಭಾಷೆಯ ಅಭಿವೃದ್ಧಿ ಬಗೆಗೆ ಮಾತುಕತೆ ನಡೆಸಿದರು. ೧೯೨೮ರಲ್ಲಿ ಕಲಕತ್ತೆಯಲ್ಲಿ ಜರುಗಿದ ೪೪ನೆಯ ಕಾಂಗ್ರೆಸ್ ಮಹಾಅಧಿವೇಶನಕ್ಕೂ ಹೋಗಿದ್ದರು. ಈ ಸಭೆಯ ಅಧ್ಯಕ್ಷತೆಯನ್ನು ಪಂ.ಮೋತಿಲಾಲ ನೆಹರು ವಹಿಸಿದ್ದರು.[೨೭]

೪.೧.೩.೩. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್:

ಅಖಿಲ ಭಾರತ ಕಾಂಗ್ರೆಸ್ ದೇಶದ ಸ್ವಾತಂತ್ರ್ಯಕ್ಕೋಸ್ಕರ ಕಾರ್ಯೋನ್ಮುಖವಾದ ಅವಧಿಯಲ್ಲಿ ದೇಶದ ಮುಖಂಡರುಗಳು ಭಾಷಾವಾರು ಪ್ರಾಂತ್ಯಗಳ ರಚನೆ ಆಗಬೇಕೆಂದು ಬಯಸಿದರು. ೧೯೨೦ರಲ್ಲಿ ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಭಾಷಾವಾರು ಪ್ರಾಂತ್ಯ ರಚನೆಯ ವಿಷಯ ಒಪ್ಪಿಕೊಂಡಿತು. ಇದು ಕರ್ನಾಟಕ ಏಕೀಕರಣಕ್ಕೆ ನಾಂದಿಯಾಯಿತು.

ಈ ಹಿನ್ನೆಲೆಯಲ್ಲಿ ತಮ್ಮಣ್ಣಪ್ಪನವರು ತಮ್ಮ ನಿಕಟವರ್ತಿಗಳು ಮತ್ತು ತಮ್ಮ ಊರಿನ ಯುವಕರನ್ನು ಕರ್ನಾಟಕ ಏಕೀಕರಣಕ್ಕಾಗಿ ಹುರಿದುಂಬಿಸಿದರು. ಕನ್ನಡಪರ ಈ ಹೋರಾಟಕ್ಕೆ ತಮ್ಮ ಬೆಂಬಲವನ್ನು ಸೂಚಿಸಿದರಲ್ಲದೆ, ತಮ್ಮ ಅಣ್ಣನ ಮಗನಾದ ಪಂಡಿತಪ್ಪ ಮತ್ತು ಅಳಿಯನಾದ ಡಾ.ಹಳಕಟ್ಟಿಯವರನ್ನು ಸಂಪೂರ್ಣವಾಗಿ ಕರ್ನಾಟಕ ಏಕೀಕರಣ ಹೋರಾಟದಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಿದರು. ತಮ್ಮಣ್ಣಪ್ಪನವರ ಸದಾಸೆಯಂತೆ ಹಳಕಟ್ಟಿಯವರು ಕನ್ನಡಿಗರ ಜಾಗೃತಿಗಾಗಿ ೧೯೨೭ರಲ್ಲಿ 'ನವಕರ್ನಾಟಕ' ಎಂಬ ಪತ್ರಿಕೆಯನ್ನು ಹೊರಡಿಸುವಲ್ಲಿ ಸಫಲರಾದರು. ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾದ ಪಂಡಿತಪ್ಪನವರು ಬಳ್ಳಾರಿಯಲ್ಲಿ ನಡೆದ ಎರಡನೆಯ ಕರ್ನಾಟಕ ಏಕೀಕರಣ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾಗಿದ್ದರು. ಮುಂದೆ ತಮ್ಮಣ್ಣಪ್ಪನವರು ಅವರಿಗೆಲ್ಲ ಬೆನ್ನೆಲುಬಾಗಿ ಸಕ್ರಿಯ ಪಾತ್ರ ನಿರ್ವಹಿಸಿದರು. ಕರ್ನಾಟಕ ಏಕೀಕರಣದಲ್ಲಿ ಎಲೆ ಮರೆಯ ಕಾಯಿಯಂತೆ ಸೇವೆಯನ್ನು ಸಲ್ಲಿಸಿದ ತಮ್ಮಣ್ಣಪ್ಪನವರ ಈ ಕಾರ್ಯ ದಾಖಲೆಯ ರೂಪದಲ್ಲಿ ಎಲ್ಲಿಯೂ ಉಳಿದು ಬಂದಿಲ್ಲ.

೪.೧.೩.೪. ಕರ್ನಾಟಕ ಸಭೆ:

.೧೯೧೬ರಲ್ಲಿ ಆಲೂರು ವೆಂಕಟರಾಯರು, ಕಡಪಾ ರಾಘವೇಂದ್ರರಾಯರು, ನರಗುಂದಕರ್‌ರು ಸೇರಿ ಶ್ರೀ ಗದಿಗೆಯ್ಯ ಹೊನ್ನಾಪುರಮಠ ಅವರ ಅಟ್ಟದ ಮೇಲೆ 'ಕರ್ನಾಟಕ ಸಭೆ'ಯನ್ನು ಆರಂಭಿಸಿದರು. ಕರ್ನಾಟಕ ಏಕೀಕರಣದ ಪ್ರಧಾನ ಉದ್ದೇಶವನ್ನು ಹೊಂದಿ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆ ಮುಂದೆ ರಾಷ್ಟ್ರೀಯ ಕಾಂಗ್ರೆಸ್ ಪ್ರಾಂತೀಯ ಸಮಿತಿಗಳನ್ನು ರಚಿಸಲು ಕಾರಣವಾಯಿತು. ಕಡಪಾ

ರಾಘವೇಂದ್ರರಾಯರು ಇದರ ಮೊದಲ ಕಾರ್ಯದರ್ಶಿಯಾಗಿ ಕಾರ್ಯ ನೇರವೇರಿಸಿದರು.[೨೨] ತಮ್ಮಣ್ಣಪ್ಪ ಚಿಕ್ಕೋಡಿಯವರು ಈ ಸಂಸ್ಥೆಯ ಸಕ್ರಿಯ ಸದಸ್ಯರಾಗಿ ಶ್ರಮಿಸಿದ್ದಾರೆ. ಆದರೆ ಇವು ಕೂಡ ಬರೀ ಬಾಯಿಮಾತಿನ ಆಧಾರಗಳಾಗಿ ಉಳಿದಿವೆಯೇ ಹೊರತು ದಾಖಲೆಯಾಗಿ ಇಟ್ಟುಕೊಳ್ಳಲು ನಮ್ಮವರಿಂದ ಸಾಧ್ಯವಾಗಿಲ್ಲ.

೪.೧.೩.೫. ಜಮಖಂಡಿ ಪ್ರಜಾಪರಿಷದ್ ಸಭೆ:

೧೯೧೭ರ ಅವಧಿಯಲ್ಲಿ ಭಾರತದಲ್ಲಿ ನಡೆದ ಚಳುವಳಿಗಳ ಪರಿಣಾಮ ಜಮಖಂಡಿ ಸಂಸ್ಥಾನದ ಮೇಲೂ ಪ್ರಭಾವ ಬೀರಿತು. ಅಂದಿನ ಸಂಸ್ಥಾನದ ಸಂಸ್ಥಾನಿಕರಾದ ಪರಶುರಾಮ ಭಾವೂ ಮತ್ತು ಜಮಖಂಡಿಯ ಮುಖ್ಯ ಪದಾಧಿಕಾರಿಗಳು ಸೇರಿ ಲೋಕಸಭೆಯನ್ನು ರಚಿಸಿದರು. ಲೋಕಸಭೆಯ ಪ್ರವರ್ತಕರಾದ ಡಾ.ದಾಮೋದರ ಹುಲ್ಯಾಳಕರ ಮತ್ತು ಸಹವರ್ತಿಗಳಾಗಿ ಭಾಸ್ಕರರಾವ್ ಮಹಾಬಲ, ಶ್ರೀನಿವಾಸ ಆನಿಖಿಂಡಿ, ಯಶವಂತರಾವ್ ವಾಟವೆ, ಲಕ್ಷಣರಾವ್ ಪರಾಂಜಪೆ, ರಾಚಪ್ಪ ಅಂಬಲಿ, ವಿಠ್ಠಲರಾವ್ ಘಾಟಗೆ, ಸದಾಶಿವ ಪೆಂಡಸೆ, ಮಾಧವರಾವ್ ದೇಶಪಾಂಡೆ ಮೊದಲಾದವರು ಇದರಲ್ಲಿ ಕಾರ್ಯನಿರ್ವಹಿಸಿದರು. ಈ ಲೋಕಸಭೆಯ ಪ್ರಮುಖ ಉದ್ದೇಶ ರಾಜಾಸಾಹೇಬ ಸರ್ಕಾರ ಮತ್ತು ಜನರ ನಡುವೆ ಉತ್ತಮ ಸಹಕಾರವನ್ನು ಏರ್ಪಡಿಸುವುದಾಗಿತ್ತು. ಇದರಿಂದ ಲೋಕಸಭೆಯು ಅತ್ಯುತ್ತಮ ಕಾರ್ಯಗಳನ್ನು ನಿರ್ವಹಿಸಿ ಸುತ್ತಲಿನ ಸ್ಥಾನಿಕ ಸಂಸ್ಥೆಗಳಿಗೆ ಮಾದರಿಯಾಯಿತು. ೧೯೨೭ ಜೂನ್‌ದಲ್ಲಿ ಲೋಕಸಭೆಯು 'ದಿ ಜಮಖಂಡಿ ಸ್ಟೇಟ್ ಪ್ರಜಾಪರಿಷದ್' ಆಯಿತು. ಪ್ರಜಾಪರಿಷದ್‌ನ ಮೊದಲಿನ ಸದಸ್ಯರು ಕೇವಲ ೨೦ರಿಂದ ೨೨ಜನ ಇದ್ದರು. ಅವರಲ್ಲಿ ತಮ್ಮಣ್ಣಪ್ಪನವರು ಕೂಡ ಒಬ್ಬ ಪ್ರಭಾವಿ ಸದಸ್ಯರಾಗಿದ್ದರು. ೨ವರ್ಷಗಳ ನಂತರ ಈ ಸಂಖ್ಯೆಯು ೨೦೦ಕ್ಕಿಂತಲೂ ಹೆಚ್ಚಿಗೆ ಆಯಿತು. ಅಲ್ಲದೆ ಮುಂದೆ ಬಹಳ ತೀವ್ರಗತಿಯಿಂದ ಬೆಳೆದು ಗ್ರಾಮೀಣ ಜನರು ಪ್ರಜಾಪರಿಷದ್‌ದ ಸದಸ್ಯರಾದರು.

೧೯೨೭ರಲ್ಲಿ ಜಮಖಂಡಿಯಲ್ಲಿ ಮೊದಲನೆಯ ಪ್ರಜಾಪರಿಷದ್ ಸಭೆ ಏರ್ಪಟ್ಟಿತು. ಇದರ ಅಧ್ಯಕ್ಷತೆಯನ್ನು ಶ್ರೀ ಎನ್.ಸಿ.ಕೇಳ್ಕರ್ ಅವರು ವಹಿಸಿದ್ದರು. ಶ್ರೀ ಶ್ರೀನಿವಾಸ ಆನಿಖಿಂಡಿ, ತಮ್ಮಣ್ಣಪ್ಪ ಚಿಕ್ಕೋಡಿ, ವಾಮನರಾವ್ ಆಪ್ಟೆ, ಡಾ.ದಾಮೋದರ ಹುಲ್ಯಾಳಕರ ಮತ್ತು ಕೃಷ್ಣಾಜಿ ಪಂತ ರಾನಡೆ ಅವರು ಸ್ವಾಗತ ಸಮಿತಿಯಲ್ಲಿದ್ದರು. ಈ ಸಭೆಯು ಮಹತ್ವದ ಉದ್ದೇಶಗಳನ್ನು ಹೊಂದಿತ್ತು. ಈ ತರದ ಸಭೆ ಏರ್ಪಡಿಸಿರಲಿಲ್ಲ. ಹೀಗಾಗಿ ಜನರು ಈ ಸಭೆಯನ್ನು ಅತಿ ಉತ್ಸಾಹದಿಂದ ಸ್ವಾಗತಿಸಿದರು. ಸಾಂಗಲಿ, ಮಿರಜ, ಪುಣೆ ಮುಂತಾದ ಊರುಗಳಿಂದ ಜನರು ಆಗಮಿಸಿದ್ದರು.

ಶ್ರೀ ಕೇಳ್ಕರ್ ಅವರಿಗೆ ಕೆಲವು ಒಮ್ಮತದ ಠರಾವುಗಳನ್ನು ಪಾಸುಮಾಡಿ ಪ್ರತಿಯನ್ನು ಕಳಿಸಲಾಯಿತು. ಅವುಗಳೆಂದರೆ

೧. ಜಮಖಂಡಿ ಸಂಸ್ಥಾನದಲ್ಲಿ ಕನ್ನಡದಲ್ಲಿ ಶಿಕ್ಷಣವನ್ನು ಕೊಡಬೇಕು.

೨. ಜಮಖಂಡಿ ಪ್ರಾಂತ್ಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕು.

೩. ಆಣೆವಾರಿ ಕಾಯ್ದೆಗಳನ್ನು ಜಾರಿಗೆಗೊಳಿಸಿ, ಕಾರ್ಯರೂಪಕ್ಕೆ ತರಬೇಕು.

೪. ಆಡಳಿತ ಭಾಷೆಯು ಕನ್ನಡವಾಗಿರಬೇಕು.[೨೮]

ಎರಡನೆಯ ಪ್ರಜಾಪರಿಷದ್ ಸಭೆಯು ಫೆಬ್ರುವರಿ ೧೩, ೧೪ ೧೯೨೯ರಲ್ಲಿ ಬನಹಟ್ಟಿಯಲ್ಲಿ ಜರುಗಿತು. ಈ ಸಭೆಯ ಅಧ್ಯಕ್ಷತೆಯನ್ನು ಕೇಂದ್ರೀಯ ಅಸೆಂಬ್ಲಿಯ ಸದಸ್ಯರಾದ ಶ್ರೀ ಪಂಡಿತಪ್ಪ ಚಿಕ್ಕೋಡಿ ಅವರು ವಹಿಸಿದ್ದರು.[೨೯] ಪ್ರಜಾಪರಿಷತ್ ಸ್ಥಾಪನೆಯಿಂದ ಮೊದಲುಮಾಡಿ ಎರಡು ಸಭೆಗಳಲ್ಲಿ ಶ್ರೀ ತಮ್ಮಣ್ಣಪ್ಪನವರು ಕಾರ್ಯತತ್ಪರಾದವರು. ಹೀಗಾಗಿ ಅವರು ಜಮಖಂಡಿ ಸಂಸ್ಥಾನದಲ್ಲಿ ವಿಶೇಷವಾದ ಸ್ಥಾನವನ್ನು ಪಡೆದರು. ಸಂಸ್ಥಾನಿಕರಾದ ಶಂಕರರಾವ ಪಟವರ್ಧನ ಅವರು ತಮ್ಮಣ್ಣಪ್ಪನವರನ್ನು ಪ್ರೀತಿಯಿಂದ 'ಕಾಕಾ' ಎಂದು ಸಂಬೋಧಿಸುತ್ತಿದ್ದರು. ಅಷ್ಟೇ ಅಲ್ಲ ತಮ್ಮಣ್ಣಪ್ಪನವರಿಗಾಗಿ ಕುಳಿತುಕೊಳ್ಳಲು ಒಂದು ಖುರ್ಚಿಯನ್ನು ಮೀಸಲಾಗಿಟ್ಟಿದ್ದನ್ನು ಬನಹಟ್ಟಿಯ ಜನ ಮನತುಂಬಿ ಈಗಲೂ ನೆನಸಿಕೊಳ್ಳುತ್ತಾರೆ.

ಮುಂದೆ ತಮ್ಮಣ್ಣಪ್ಪನವರು ಪ್ರಜಾಪರಿಷದ್ ಸಭೆಗಳು ಎಲ್ಲಿಯೇ ನಡೆಯಲಿ, ಅಲ್ಲಿ ತಮ್ಮ ಠರಾವಿನೊಂದಿಗೆ ಹಾಜರಾಗುತ್ತಿದ್ದರು. ಪ್ರಜಾಪರಿಷದ್‌ನ ಮೂಲಕ ಕನ್ನಡ ಶಾಲೆಗಳನ್ನು ತೆರೆಯಲು ಮತ್ತು ಮರಾಠಿ ಶಾಲೆಗಳನ್ನು ಕನ್ನಡ ಶಾಲೆಗಳನ್ನಾಗಿ ಪರಿವರ್ತಿಸಲು ತಮ್ಮಣ್ಣಪ್ಪನವರು ಮುಂದಾದುದು ವಿಶೇಷ. ಏಕೆಂದರೆ ದೊರೆಗಳು ಸಂಪೂರ್ಣವಾಗಿ ಮರಾಠಿಗರು. ತಮ್ಮಣ್ಣಪ್ಪನವರು ಮರಾಠಿ ಆಳರಸರ ಉಕ್ಕಿನ ಹಿಡಿತದಿಂದ ಪಾರುಮಾಡಿ ಕನ್ನಡವನ್ನು ಪುನರ್‌ಪ್ರತಿಷ್ಠಾಪಿಸದೆ ಹೋಗಿದ್ದರೆ ಕನ್ನಡದ ಸ್ಥಿತಿಗತಿ ಅತ್ಯಂತ ಹೀನಾಯಸ್ಥಿತಿಯಲ್ಲಿರುತ್ತಿತ್ತು. ರಬಕವಿ, ಬನಹಟ್ಟಿ ನಗರಗಳನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡ ತಮ್ಮಣ್ಣಪ್ಪನವರು ಕೊಲ್ಲಾಪುರ, ಸಾಂಗಲಿ, ಮಿರಜ, ಜಮಖಂಡಿ, ಮುಧೋಳ ಮುಂತಾದ ಸಂಸ್ಥಾನಗಳಲ್ಲಿ ಬೇರುಬಿಟ್ಟಿದ್ದ ಮರಾಠಿಯನ್ನು ಕಿತ್ತುಹಾಕಿ ಕನ್ನಡವನ್ನು ತರಲು ಹರಸಾಹಸ ಪಡುತ್ತಿದ್ದರು. ದಕ್ಷಿಣ ಸಂಸ್ಥಾನಗಳ ಪ್ರಜಾಪರಿಷತ್ತಿನ ೭ನೆಯ ಅಧಿವೇಶನ ಮುಂಬಯಿಯ 'ಸರ್ವೆಂಟ್ಸ್ ಆಫ್ ಇಂಡಿಯಾ' ಸೊಸೈಟಿಯ ಹಾಲಿನಲ್ಲಿ ದಿನಾಂಕ ೧೭-೧೨-೧೯೨೭ರಂದು ಸೇರಿತ್ತು. ಮರುದಿನ ೧೮ರಂದು ಕೆಲವು ನಿರ್ಣಯಗಳನ್ನು ಮಂಡಿಸಿದಾಗ, ತಮ್ಮಣ್ಣಪ್ಪ ಗುಡುಗಿನ ಧ್ವನಿಯಲ್ಲಿ ಒಂದು ನಿರ್ಣಯವನ್ನು ಮಂಡಿಸಿದರು.

"ನಿರ್ಣಯ ೨೧ನೆಯದು. ರಾ.ರಾ. ತಮ್ಮಣ್ಣಪ್ಪ ಚಿಕ್ಕೋಡಿ (ಬನಹಟ್ಟಿ) ಮಂಡಿಸಿ ಹೀಗೆ ಹೇಳಿದರು. ಈ ಠರಾವಿನಿಂದ ಒಂದು ಸರಳ ಬೇಡಿಕೆ ಇಟ್ಟಿದ್ದೇವೆ. ಬಹುಜನ ನಾಗರಿಕರ ಮಾತೃಭಾಷೆಯಲ್ಲಿಯೇ ಶಿಕ್ಷಣ ದೊರೆಯಬೇಕು. ಮತ್ತು ಸರಕಾರಿ ಕೆಲಸಗಳು ನಡೆಯಬೇಕು. ಈ ಬೇಡಿಕೆಗಳನ್ನು ಈ ಠರಾವಿನ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನಮ್ಮ ಜಮಖಂಡಿ ಸಂಸ್ಥಾನದಲ್ಲಿ ಈ ಹಿಂದೆ ಅಧಿವೇಶನದಲ್ಲಿ ಇಂಥ ಠರಾವನ್ನು ಸ್ವೀಕರಿಸಿದ್ದೇವೆ. ನಮ್ಮ ಸಂಸ್ಥಾನದಲ್ಲಿ ಕನ್ನಡ ಶಾಲೆಗಳಿವೆ. ಆದರೆ ಹೈಸ್ಕೂಲಗಳ ವಿಷಯವಾಗಿ ಒಂದಿಷ್ಟು ವಿಷಮತೆ ಇದೆ. ಸಾಂಗಲಿ ಸಂಸ್ಥಾನದಲ್ಲಿಯೂ ಶಾಲೆಗಳಿವೆ. ನಮ್ಮ ಸಮೀಪದಲ್ಲಿ ಮುಧೋಳ ಸಂಸ್ಥಾನದ ಸೀಮೆ ಹತ್ತುತ್ತದೆ. ಅಲ್ಲಿ ಮಾತ್ರ ಮಾತೃಭಾಷೆಯಲ್ಲಿ ಶಿಕ್ಷಣ ಕೊಡುವ ಒಂದು ಶಾಲೆಯೂ ಇಲ್ಲ. ನಾವು ಹಾಗೆ ಒಮ್ಮೆ

ಶ್ರೀಮಂತ(ಅರಸ)ರಿಗೆ ವಿನಂತಿ ಮಾಡಿಕೊಳ್ಳಲು, ಭೇಟಿ ಕೊಟ್ಟು ಉದ್ದೇಶ ಮೊದಲಾದವುಗಳನ್ನು ವಿಚಾರಿಸಿದರು. ನಾವು ಮೇಲಿನ ವಿಷಯವನ್ನು ಹೇಳಿದೆವು. ಆದರೆ ಸಂಸ್ಥಾನವು ಮರಾಠಿಮಯವಾಗಿರುವುದರಿಂದ ಕಚೇರಿಯ ಕಾಗದಪತ್ರ ಮತ್ತು ಶಾಲೆಗಳನ್ನು ಕನ್ನಡಕ್ಕೆ ಪರಿವರ್ತಿಸಲು ಬರುವುದಿಲ್ಲ' ಎಂದು ಪರ್ಯಾಯವಾಗಿ ಅವರು ಸೂಚಿಸಿದರು.

ಅನಂತರ ನಾವು ನಮ್ಮ ವೆಚ್ಚದಲ್ಲಿ ಒಂದು ಕನ್ನಡ ಶಾಲೆಯನ್ನು ಮಹಾಲಿಂಗಪುರದಲ್ಲಿ ಪ್ರಾರಂಭಿಸಿದೆವು. ಆ ಶಾಲೆಯಲ್ಲಿ ಸರಕಾರಿ(ಮರಾಠಿ) ಶಾಲೆಗಿಂತ ಹೆಚ್ಚಿನ ಹುಡುಗರಿದ್ದಾರೆ. ಇದೇ ಸ್ಥಿತಿ ಉಳಿದೆಡೆಗಳಲ್ಲಿಯೂ ಹೆಚ್ಚು ಕಡಿಮೆ ಇದೆ. ಅದಕ್ಕಾಗಿ ಈ ಠರಾವಿನ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಣಯವನ್ನು ಸ್ವೀಕರಿಸಬೇಕೆಂಬ ವಿನಂತಿಯಿದೆ."

ಈ ಠರಾವನ್ನು ಶಿರಹಟ್ಟಿಯ ಅಶ್ವತ್ಥ ರಾಘವೇಂದ್ರ ಮಹಿಷಿ ವಕೀಲರು ತಮ್ಮ ಯೋಗ್ಯ ಶಬ್ದಗಳಲ್ಲಿ ಅನುಮೋದನೆ ಮಾಡಿದ ಬಳಿಕ ಸ್ವೀಕರಿಸಲ್ಪಟ್ಟಿತು.[೨೯] ಈ ಅಂಶವನ್ನು ಗಮನಿಸಿದಾಗ ತಮ್ಮಣ್ಣಪ್ಪನವರು ಸಂಸ್ಥಾನದ ಪ್ರಭುಗಳ ಸ್ನೇಹ ಬೆಳೆಸಿ, ಅವರಿಂದಲೇ ಸಮಾಜಕ್ಕೆ ಒಳ್ಳೆಯದಾಗುವ ಕೆಲಸಗಳನ್ನು ಮಾಡಿಸುತ್ತಿದ್ದರು. ಇದರಿಂದ ಸಂಸ್ಥಾನದ ಹಿತಾಸಕ್ತಿಗೆ ಧಕ್ಕೆಯಾಗಿದ್ದಂತೂ ನಿಜ. ತಮ್ಮಣ್ಣಪ್ಪನವರು ಮಾಡಿದ್ದು ಒಂದು ರೀತಿಯ ಶಾಂತಿಯ ಹೋರಾಟ. ಆ ಹೋರಾಟದ ಒಳ್ಳೆಯ ಫಲವನ್ನು ಕನ್ನಡ ನಾಡು ಕಂಡಿತು.

ಪ್ರಜಾಪರಿಷದ್ ಪ್ರಭಾವಿ ಸದಸ್ಯರಾಗಿ ಕನ್ನಡ ಶಾಲೆ, ಹೆಣ್ಣುಮಕ್ಕಳ ಶಾಲೆ, ಕನ್ನಡ ಭಾಷೆಯ ಬಳಕೆ, ರೈತರ, ನೇಕಾರರ ಹಿತಾಸಕ್ತಿ ಹೀಗೆ ಒಳ್ಳೆಯ ಕಾರ್ಯಗಳನ್ನು ಸಭೆಯ ಮುಂದಿಟ್ಟು ಜಾರಿಗೆ ತರುವಲ್ಲಿ ಶತಪ್ರಯತ್ನ ನಡೆಸಿದರು. ತಮ್ಮಣ್ಣಪ್ಪನವರು ಈ ಪ್ರಜಾಪರಿಷದ್ ಮೂಲಕ ಎಲ್ಲ ಕ್ಷೇತ್ರಗಳಲ್ಲಿ ತೀವ್ರಗತಿಯಲ್ಲಿ ಪ್ರಗತಿಯಾಗುವುದಕ್ಕೆ ಕಾರಣೀಭೂತರಾದರು.

೪.೧.೩.೬. ನಗರಸಭೆಯ ಪ್ರಥಮ ಅಧ್ಯಕ್ಷರು:

ತಮ್ಮಣ್ಣಪ್ಪನವರು ಬನಹಟ್ಟಿ ನಗರಸಭೆಯ ಪ್ರಥಮ ಅಧ್ಯಕ್ಷರು.[೩೦] ಸಮಾಜದ ಬಗ್ಗೆ ಕಳಕಳಿಯನ್ನು ಹೊಂದಿದ್ದ ತಮ್ಮಣ್ಣಪ್ಪನವರು ತಮ್ಮ ವ್ಯಾಪ್ತಿಯಲ್ಲಿ ಬರುವ ಕಾರ್ಯಗಳನ್ನು ಸಮರ್ಥ ರೀತಿಯಲ್ಲಿ ಮಾಡಲು ಪ್ರಯತ್ನಿಸಿದರು. ಆ ಕಾಲಕ್ಕೆ ಬೀದಿದೀಪಗಳಾಗಿ ಚಿಮಣಿಎಣ್ಣೆಯ ಲಾಟೀನುಗಳನ್ನು ಅಲ್ಲಲ್ಲಿ ಇಡುತ್ತಿದ್ದರು. ತಮ್ಮಣ್ಣಪ್ಪನವರು ಅಧ್ಯಕ್ಷರಾದ ಮೇಲೆ ಬನಹಟ್ಟಿಯಲ್ಲಿ ಓಣಿಗೊಂದರಂತೆ ಲಾಟೀನು ಇಡುವ ವ್ಯವಸ್ಥೆ ಮಾಡಿದ್ದನ್ನು ಅಲ್ಲಿಯ ಹಿರಿಯರು ಈಗಲೂ ಜ್ಞಾಪಿಸಿಕೊಳ್ಳುತ್ತಾರೆ.[೩೧] ಜೊತೆಗೆ ಊರಿನ ಸ್ವಚ್ಛತೆಯ ಬಗ್ಗೆ ಗಮನ ಹರಿಸುವುದು ಅವರ ಕಾರ್ಯವೈಖರಿಗಳಲ್ಲಿ ಒಂದಾಗಿತ್ತು.

೪.೧.೪. ಶೈಕ್ಷಣಿಕ:

೪.೧.೪.೧. ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ:

ಲಿಂಗಾಯತ ಸಮುದಾಯದ ಅಭಿವೃದ್ಧಿ ಮತ್ತು ವಿದ್ಯಾರ್ಥಿಗಳ ಶಿಕ್ಷಣದ ಅನುಕೂಲತೆಗಾಗಿ ಧಾರವಾಡದಲ್ಲಿ 'ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ' ಹುಟ್ಟಿಕೊಂಡಿತು. ಕರ್ನಾಟಕ ಸಾಂಸ್ಕೃತಿಕ

ಇತಿಹಾಸದಲ್ಲಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸ್ಥಾಪನೆ ಒಂದು ರೋಚಕ ಸಂದರ್ಭವೆನ್ನಬೇಕು. ಆರಂಭದಲ್ಲಿ ಈ ಸಂಸ್ಥೆಯ ಉದ್ದೇಶವು ಲಿಂಗಾಯತ ಸಮಾಜದಲ್ಲಿ ಇಂಗ್ಲಿಷ್ ಭಾಷೆಯ ವಿದ್ಯಾಭ್ಯಾಸ, ಸಂಸ್ಕೃತ ಹಾಗೂ ಧರ್ಮಸಂಬಂಧಿ ವಿದ್ಯಾಭ್ಯಾಸವನ್ನು ಪ್ರಸಾರ ಮಾಡುವುದಾಗಿತ್ತು. 'ಲಿಂಗಾಯತ ಏಜುಕೇಶನ್ ಫಂಡ್' ಎಂಬ ಇದರ ಹೆಸರನ್ನು ೧೮೮೯ರಲ್ಲಿ 'ಲಿಂಗಾಯತ ಏಜ್ಯುಕೇಶನ್ ಅಸೋಸಿಯೇಷನ್' (ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ) ಎಂದು ಬದಲಿಸಿ, ಅದನ್ನು ಚಾರಿಟೇಬಲ್ ಎಂಡೊವಮೆಂಟ್ ಆ್ಯಕ್ಟ ಪ್ರಕಾರ ರಜಿಸ್ಟರ ಮಾಡಿಸಲಾಯಿತು.[೩೨]

ಲಿಂಗಾಯತ ಸಮಾಜದ ವಿದ್ಯಾರ್ಥಿಗಳಿಗೆ ಸಹಾಯ ಒದಗಿಸುವ ನಿಟ್ಟಿನಲ್ಲಿ ಅಸ್ತಿತ್ವಕ್ಕೆ ಬಂದ 'ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ'ಯ ಬಗ್ಗೆ ತಮ್ಮಣ್ಣಪ್ಪನವರಿಗೆ ಅಪಾರ ಕಾಳಜಿ. ಈ ಸಂಸ್ಥೆ ಸಾಕಷ್ಟು ಎತ್ತರದಲ್ಲಿ ಬೆಳೆಯಬೇಕು ಎನ್ನುವ ಹಂಬಲ ಇವರದಾಗಿತ್ತು. ಅವರು ಈ ಸಂಸ್ಥೆಯ ಜೊತೆಗೆ ನಿಕಟ ಸಂಬಂಧವನ್ನಿಟ್ಟುಕೊಂಡಿದ್ದರು. ಈ ಸಂಸ್ಥೆಯ ಅಭಿವೃದ್ಧಿಗಾಗಿ ಹಪಹಪಿಸುತ್ತಿದ್ದ ತಮ್ಮಣ್ಣಪ್ಪನವರು ಸಭೆ ಸಮಾರಂಭಗಳಲ್ಲಿ ಅದರ ಕುರಿತು ಉದ್ಧರಿಸುತ್ತಿದ್ದರು. ವೀರಶೈವ ಮಹಾಸಭೆಯ ವೇದಿಕೆಗಳಲ್ಲಿ ತಾವು ಮಂಡಿಸಿದ ಪ್ರಬಂಧದಲ್ಲಿ ಈ 'ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ'ಯ ಉದ್ದೇಶವನ್ನು ಕುರಿತು ತಮ್ಮದೇ ಆದ ನಿರ್ಣಯವನ್ನು ಅವರು ಕೊಟ್ಟಿದ್ದಾರೆ. "ಸಮಾಜವು ಪ್ರಗತಿಪಥದಲ್ಲಿ ಸಾಗಬೇಕಾದರೆ ಅದಕ್ಕೆ ಬೇಕಾಗಿರುವುದು ಮೂಲತಃ ಶಿಕ್ಷಣ. ಸಮಾಜದಲ್ಲಿ ಲಿಂಗಾಯತ ಸಮುದಾಯವು ಹಿಂದುಳಿದ ಕಾರಣ 'ಲಿಂಗಾಯತ ಏಜ್ಯುಕೇಶನ್ ಫಂಡ್'ವೆಂಬ ಹೆಸರಿನ ಧನನಿಧಿಯನ್ನು ಕೂಡಿಸುತ್ತಿದ್ದಾರೆ. ಸುಮಾರು ೨೫ವರ್ಷಗಳಿಗಿಂತ ಹೆಚ್ಚು ಕಾಲದಿಂದ ಪ್ರಯತ್ನಿಸಿದರೂ ಕೇವಲ ೨ಲಕ್ಷದಷ್ಟು ಮಾತ್ರ ದೇಣಿಗೆಯನ್ನು ಸಂಗ್ರಹಿಸಲಾಗಿದೆ. ಈ ಧನನಿಧಿಯ ಬಡ್ಡಿಯ ಹಣವನ್ನು ಉಚ್ಚ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ಈಗ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಹೆಚ್ಚಾಗುತ್ತಿರುವುದರಿಂದ ಅನಿವಾರ್ಯವಾಗಿ ಧನಸಂಗ್ರಹಣೆಯನ್ನು ಕೂಡಾ ಹೆಚ್ಚಿಸಬೇಕಾಗಿದೆ. ಈ ಅನಿವಾರ್ಯತೆಯನ್ನು ಸಮಾಜಕ್ಕೆ ತಿಳಿಸದೇ ಹೋದರೆ ಲಿಂಗಾಯತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ದೊರೆಯುವುದು ದುರ್ಲಭವಾಗುತ್ತದೆ"[೩೩] ಎಂದು ಅಭಿಪ್ರಾಯಿಸಿದ್ದಾರೆ.

ಶಿಕ್ಷಣಪ್ರೇಮಿಗಳಾದ ತಮ್ಮಣ್ಣಪ್ಪನವರು ಲಿಂಗಾಯತ ಸಮಾಜದ ವಿದ್ಯಾರ್ಥಿಗಳು ಪಡುವ ಕಷ್ಟವನ್ನು ಕಂಡು ಮರುಗಿದ್ದಾರೆ. ಲಿಂಗಾಯತ ಸಮಾಜ ಪ್ರಗತಿಯಾಗಬೇಕಾದರೆ ಈ ಸಮಾಜದ ಯುವಕರು ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡುವುದು ಅವಶ್ಯವೆಂದು ಮನಗಂಡಿದ್ದರು. ಅಂತಹ ವಿದ್ಯಾರ್ಥಿಗಳಿಗೆ ಈ ಬಗೆಯ ಸಂಸ್ಥೆಗಳು ಅವಶ್ಯವಾಗಿ ನೆರವು ನೀಡಬೇಕೆಂದು ಅವರ ಅನಿಸಿಕೆ. ಅದನ್ನು ಸಭೆ-ಸಮಾರಂಭಗಳಲ್ಲಿ ನಿರ್ದಾಕ್ಷಿಣ್ಯವಾಗಿ ಅವರು ಹೇಳಿದ್ದಾರೆ.

ಈ ಲಿಂಗಾಯತ ಅಭಿವೃದ್ಧಿ ಸಂಸ್ಥೆಗೆ ಧನಸಂಗ್ರಹಣೆಯ ಕಾರ್ಯದಲ್ಲಿ ಅವಿರತವಾಗಿ ದುಡಿದವರು ರಾ॥ಗಿಲಗಂಚಿ ಗುರುಸಿದ್ದಪ್ಪ ಮತ್ತು ಅರಟಾಳ ರುದ್ರಗೌಡರು. ಲಿಂಗಾಯತ ಸಮುದಾಯದ ವಿದ್ಯಾಭಿವೃದ್ಧಿಗಾಗಿ ಶ್ರಮಿಸಿದ ಇವರ ಬಗ್ಗೆ ತಮ್ಮಣ್ಣಪ್ಪನವರಿಗೆ ಅಪಾರ ಗೌರವ. ರಾ॥ಅರಟಾಳರು

ದೆಹಲಿಯಲ್ಲಿ ಸರ್ಕಾರದಿಂದ ಸಿ.ಪಿ.ಎಸ್.ಒ ಪದವಿಯನ್ನು ಪಡೆದ ನಿಮಿತ್ಯ ತಮ್ಮಣ್ಣಪ್ಪನವರು ಅವರಿಗೆ ಅಭಿನಂದನಾ ಪತ್ರ ಬರೆದರು. ಆ ಪತ್ರ ಅಂದಿನ ಪ್ರಸಿದ್ಧ ಪತ್ರಿಕೆಯಾದ 'ಮೈಸೂರ್ ಸ್ಟಾರ್' ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಅದರಲ್ಲಿ "'ಲಿಂಗಾಯತ ಏಜುಕ್ಯೇಶನ್ ಫಂಡು' ನಾಮಕ ಧನನಿಧಿಯನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿ ತಾವು ಮಾಡಿದ ಸಾಹಸಕ್ಕೂ ಶ್ರಮಕ್ಕೂ ಎಣೆಯೇ ಇಲ್ಲವು. ಈ ಧನನಿಧಿಯನ್ನು ತಾವು ಉಭಯತರು ಏರ್ಪಾಡು ಮಾಡಿರುವುದರಂದಲೇ ಸಾಂಪ್ರತದಲ್ಲಿ ಸ್ವಲ್ಪ ಜನರಾದರೂ ಸುಶಿಕ್ಷಿತರು ನಮ್ಮಲ್ಲಿ ಕಾಣುತ್ತಿರುವರು. ಈ ಧನನಿಧಿಯು ಉತ್ಪನ್ನವಾಗದಿದ್ದರೆ, ನಮ್ಮ ಸಮಾಜದಲ್ಲಿ ಉಚ್ಚಪ್ರತಿಯ ಶಿಕ್ಷಣದ ಗಾಳಿಯು ಸಹ ಸುಳಿಯುತ್ತಿದ್ದಿಲ್ಲ"[೩೪] ಎನ್ನುವ ಅಭಿಮಾನಪರ ಮಾತುಗಳಿಂದ ತಮ್ಮಣ್ಣಪ್ಪನವರಿಗೆ ಈ ಸಂಸ್ಥೆಯ ಬಗ್ಗೆ ಎಷ್ಟೊಂದು ಅಕ್ಕರತೆ ಇತ್ತು ಎನ್ನವುದು ತಿಳಿಯುತ್ತದೆ.

೪.೧.೪.೨. ರಬಕವಿ-ಬನಹಟ್ಟಿಯಲ್ಲಿ ಶಿಕ್ಷಣಕ್ಕೆ ಪ್ರೋತ್ಸಾಹ:

೧೯ನೆಯ ಶತಮಾನದಲ್ಲಿ ಕನ್ನಡಿಗರಿಗೆ ಶಿಕ್ಷಣವು ನಿಲುಕದ ಮಾತಾಗಿತ್ತು. ಉತ್ತರ ಕರ್ನಾಟಕದ ಪರಿಸ್ಥಿತಿಯಂತೂ ತೀರಾ ಹದಗೆಟ್ಟಿತ್ತು. ಸಂಸ್ಥಾನಿಕರ ಕೈಯಲ್ಲಿ ಕನ್ನಡಿಗರಿಗೆ ದೊರೆಯುವ ಶಿಕ್ಷಣವೆಲ್ಲ ಮರಾಠಿಮಯವಾಗಿತ್ತು. ಅಂತಹ ಸಂದರ್ಭದಲ್ಲಿ ಸ್ವತಃ ಕನ್ನಡ ಶಿಕ್ಷಣಕ್ಕಾಗಿ ಹಂಬಲಿಸಿದವರು ತಮ್ಮಣ್ಣಪ್ಪನವರು. ತಮ್ಮಣ್ಣಪ್ಪನವರು ರಬಕವಿ-ಬನಹಟ್ಟಿಯಲ್ಲಿ ಬಡ ನೇಕಾರರ ಮಕ್ಕಳ ಶಿಕ್ಷಣದ ಕೊರತೆಯನ್ನು ಕಂಡು ಮಮ್ಮಲ ಮರುಗುತ್ತಿದ್ದರು. ಸಮಾಜದಲ್ಲಿ ಅಜ್ಞಾನ, ಮೂಢನಂಬಿಕೆ, ಕಂದಾಚಾರಗಳು ತುಂಬಿತುಳುಕುತ್ತಿರುವುದನ್ನು ಕಂಡು ತಮ್ಮಣ್ಣಪ್ಪನವರು ಇವುಗಳ ಅಂತ್ಯಕ್ಕೆ ಶಿಕ್ಷಣವೇ ಮದ್ದು ಎಂದರು. ಆ ನಿಟ್ಟಿನಲ್ಲಿ ಸದಾ ಪ್ರಯತ್ನದಲ್ಲಿ ತೊಡಗಿದ ಅವರು ಬಡಮಕ್ಕಳನ್ನು ಕರೆದು ಶಾಲೆ ಕಲಿಯುವಂತೆ ಹೇಳುವುದು, ಅದಕ್ಕಾಗಿ ಅವರ ಮನವೊಲಿಸುವುದು ಮಾಡುತ್ತಿದ್ದರು. ಶಿಕ್ಷಣಕ್ಕಾಗಿ ತೊಂದರೆ ಪಡುವ ಮಕ್ಕಳಿಗೆ ತಮ್ಮಿಂದಾದ ಸಹಾಯವನ್ನು ಒದಗಿಸುತ್ತಿದ್ದರು. ಅವರ ಫೀಜು ತುಂಬುವುದು, ಪಾಟಿ-ಪುಸ್ತಕಗಳನ್ನು ತಂದುಕೊಡುವುದು ಮಾಡುತ್ತಿದ್ದರು. ಮಕ್ಕಳ ತಂದೆ ತಾಯಿಗಳಿಗೆ ಶಿಕ್ಷಣದ ಅವಶ್ಯಕತೆಯನ್ನು ತಿಳಿಸಿ ಹೇಳುತ್ತಿದ್ದರು. ತಮ್ಮ ಪ್ರದೇಶದ ಮಕ್ಕಳು ಹೆಚ್ಚಿನ ಶಿಕ್ಷಣದಲ್ಲಿ ಪಾಸಾದರೆ ಅದಕ್ಕೆ ತುಂಬಾ ಸಂತೋಷ ಪಡುತ್ತಿದ್ದರು. ಇದಕ್ಕೆ ಉದಾಹರಣೆಯಾಗಿ ಮಹಾಲಿಂಗಪುರದ ಒಬ್ಬ ಹುಡುಗ ಬಿ.ಎ. ಪಾಸಾಗಿ ತಮ್ಮಣ್ಣಪ್ಪನವರಿಗೆ ತಿಳಿಸಲು ಬಂದ. ಇದನ್ನು ಕೇಳಿ ತಮ್ಮಣ್ಣಪ್ಪನವರು ಅತ್ಯಂತ ಹರ್ಷಿತರಾಗಿ ಕಾಡಸಿದ್ದೇಶ್ವರನಿಗೆ ಕಾಯಿ ಒಡೆಸಿಕೊಂಡು ಬರಲು ದುಡ್ಡು ಕೊಟ್ಟು ಕಳಿಸಿದರಂತೆ.[೩೫]

ತಮ್ಮ ಊರಿನ ಒಬ್ಬ ಹುಡುಗ ಕಲಿಯಲು ಇಷ್ಟಪಟ್ಟರೆ ತಮ್ಮಣ್ಣಪ್ಪನವರು ಸಹಾಯ ಮಾಡಲು ಹಿಂದೇಟು ಹಾಕಿದವರೇ ಅಲ್ಲ. ರಬಕವಿಯ ಮುರಿಗೆಯ್ಯ ಬಾಗೋಜಿಮಠರು ಬಹಳ ಬಡತನ ಪರಿಸ್ಥಿತಿಯಲ್ಲಿ ಕಲಿತು ೧೯೪೮ರಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯನ್ನು ಕಟ್ಟಿದ್ದರು. ಆಗ ಮುಂಬೈಯೊಂದೇ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯ ಕೇಂದ್ರವಾಗಿತ್ತು. ಅದಕ್ಕಿಂತ ಮೊದಲು ಅವರು ಮುಂಬೈಯನ್ನು ನೋಡಿರಲಿಲ್ಲ. ದೂರ ಪ್ರಯಾಣದ ಅನುಭವವೂ ಇರಲಿಲ್ಲ. ಅಂತಹ ಸಂದರ್ಭದಲ್ಲಿ

ತಮ್ಮಣ್ಣಪ್ಪನವರು ವರದಾನವಾಗಿದ್ದರು. ಮುರಿಗೆಯ್ಯನವರ ಸಮಸ್ಯೆಯನ್ನು ಅರಿತ ತಮ್ಮಣ್ಣಪ್ಪನವರು ಅವರಿಗೆ ಮುಂಬೈಗೆ ಹೋಗಲು ಸಹಾಯ ಮಾಡಿದರು. ಅಳಿಯನಾದ ಹಳಕಟ್ಟಿಯವರು ಪುಣೆಯ ಕಾಲೇಜಿನಲ್ಲಿ ಓದುತ್ತಿದ್ದು, ಯಾವುದೋ ಕೆಲಸಕ್ಕಾಗಿ ತಮ್ಮ ಗೆಳೆಯರೊಂದಿಗೆ ಮುಂಬೈಗೆ ಹೋಗುವವರಿದ್ದರು. ಅಳಿಯನಿಗೆ ಪತ್ರ ಬರೆದು, ಮುರಿಗೆಯ್ಯನವರನ್ನು ಕಳಿಸುವ ವ್ಯವಸ್ಥೆ ಮಾಡಿದರು.[೩೬] ಕಲಿಯುವ ವಿದ್ಯಾರ್ಥಿಗಳಿಗೆ ತುಂಬು ಮನಸ್ಸಿನಿಂದ ಸಹಾಯ ಮಾಡುವ ಪ್ರವೃತ್ತಿ ತಮ್ಮಣ್ಣಪ್ಪನವರದಾಗಿತ್ತು. ಬನಹಟ್ಟಿಯ ಜನತೆ 'ತಮ್ಮಣ್ಣಪ್ಪನವರು ವಿದ್ಯಾರ್ಥಿಗಳಿಗೆ ಹಡೆದ ತಂದೆಯಂತಿದ್ದರು'[೩೭] ಎಂದು ಅಭಿಮಾನದಿಂದ ಹೇಳುತ್ತಾರೆ.

ಯುವಕರು ಶಿಕ್ಷಣವನ್ನು ಪಡೆದು ಬಂದರೆ ತಮ್ಮಣ್ಣಪ್ಪನವರಿಗೆ ಹಿಡಿಸಲಾರದ ಸಂತಸ. ಅಂತಹ ಯುವಕರು ಸಮಾಜದ ಅಭಿವೃದ್ಧಿ, ಶ್ರೇಯಸ್ಸಿಗಾಗಿ ದುಡಿಯಬೇಕು ಎಂಬುದು ಅವರ ಆಶೆಯಾಗಿತ್ತು. ಬಾಗೋಜಿಮಠ ಮುರಿಗೆಯ್ಯನವರು ಬಡತನ ಕಾರಣದಿಂದ ವಕೀಲಿ ಅಭ್ಯಾಸ ಮಾಡುವುದನ್ನು ಬಿಟ್ಟು ಮುಂಬೈನಿಂದ ರಬಕವಿಗೆ ಬಂದುಬಿಟ್ಟರು. ಹಾಗೆ ಬಿಟ್ಟು ಬಂದು ಬಾಗೋಜಿಮಠರು ಉಪಜೀವನಕ್ಕೆ ರಬಕವಿಯ ಸ್ಥಾನಿಕ ಎ.ವ್ಹಿ. ಸ್ಕೂಲಿನಲ್ಲಿ ಶಿಕ್ಷಕ ಹುದ್ದೆಗೆ ಅರ್ಜಿ ಹಾಕಿದರು. ಇದು ತಮ್ಮಣ್ಣಪ್ಪನವರಿಗೆ ಎಷ್ಟೊಂದು ಬೇಜಾರು ತಂದಿತೆಂದರೆ ಈ ವಿಷಯವನ್ನು ತಮ್ಮ ಅಳಿಯ ಹಳಕಟ್ಟಿಯವರಿಗೆ ಪತ್ರದ ಮೂಲಕ ತಿಳಿಸಿ ಖೇದ ವ್ಯಕ್ತ ಪಡಿಸಿದ್ದಾರೆ.[೩೮]

ಜಮಖಂಡಿ ಅರಸರಾದ ಶಂಕರರಾವ್ ಪಟವರ್ಧನ ಮತ್ತು ತಮ್ಮಣ್ಣಪ್ಪನವರಿಗೆ ಎಲ್ಲಿಲ್ಲದ ಸ್ನೇಹದ ನಂಟು. ಯಾವುದೇ ಸಮಸ್ಯೆ ಇರಲಿ ಅರಸರು ತಮ್ಮಣ್ಣಪ್ಪನವರ ಸಲಹೆಯನ್ನು ಪಡೆಯದೇ ಇರುತ್ತಿರಲಿಲ್ಲ. ಅಂತಹ ಸ್ನೇಹವನ್ನು ತಮ್ಮಣ್ಣಪ್ಪನವರು ಸದುಪಯೋಗಪಡಿಸಿಕೊಂಡರು. ಅರಸರು ಮರಾಠಿ ಮಾತೃಭಾಷೆಯನ್ನು ಹೊಂದಿದ್ದರು. ಅವರಿಗೆ ಜಮಖಂಡಿ ಪ್ರಜೆಗಳ ಶಿಕ್ಷಣ ಅವರ ಮಾತೃಭಾಷೆಯಾದ ಕನ್ನಡದಲ್ಲಿಯೇ ದೊರೆಯಬೇಕೆಂದು ಮನವರಿಕೆ ಮಾಡಿಕೊಟ್ಟರು. ಕನ್ನಡ ಶಾಲೆಯ ಅವಶ್ಯಕತೆ ಮತ್ತು ಸ್ಥಾಪನೆಯ ಬಗ್ಗೆ ಅರಸರಲ್ಲಿ ಕೇಳಿಕೊಂಡರು.

ತಮ್ಮಣ್ಣಪ್ಪನವರು ಜಮಖಂಡಿ ಸಂಸ್ಥಾನದ ಶಾಲಾ ಸಮಿತಿಯಲ್ಲಿ ಸದಸ್ಯರಾಗಿದ್ದರು. ಸಂಸ್ಥಾನದ ೭೨ ಪ್ರಾಥಮಿಕ ಶಾಲೆಗಳಲ್ಲಿ ೫೬ ಶಾಲೆಗಳನ್ನು ಸಂಪೂರ್ಣ ಕನ್ನಡ ಶಾಲೆಗಳನ್ನಾಗಿ ಪರಿವರ್ತಿಸಲು ತಮ್ಮಣ್ಣಪ್ಪನವರು ಸಫಲರಾದ್ದರು. ಇದು ತಮ್ಮಣ್ಣಪ್ಪನವರ ಬಹುದೊಡ್ಡ ಯಶಸ್ಸು ಆಗಿತ್ತು. ಅದರಂತೆ ಮುಧೋಳ, ಸಾಂಗಲಿ, ಮಿರಜ ಸಂಸ್ಥಾನಗಳಲ್ಲಿಯೂ ಕನ್ನಡಿಗರನ್ನು ಜಾಗೃತಗೊಳಿಸಿ, ಅಲ್ಲಿಯೂ ಕನ್ನಡ ಶಾಲೆಗಳು ಹೆಚ್ಚುವಂತೆ ಮಾಡಿದರು.[೩೯]

ತಮ್ಮಣ್ಣಪ್ಪನವರು ಜಮಖಂಡಿ ಸಂಸ್ಥಾನವಲ್ಲದೆ ಬೇರೆ ಸಂಸ್ಥಾನಗಳಲ್ಲಿಯೂ ಕನ್ನಡ ಶಿಕ್ಷಣದ ಸಲುವಾಗಿ ಹೋರಾಡುತ್ತಿರುವುದನ್ನು ಕೇಳಿದ ಮುಧೋಳ ಸಂಸ್ಥಾನದ ರಾಜನು ತಮ್ಮಣ್ಣಪ್ಪನವರಿಗೆ ತಮ್ಮ ಸಂಸ್ಥಾನದಲ್ಲಿ ಕನ್ನಡ ಶಿಕ್ಷಣ ಜಾರಿಗೆಗಳಿಸಲು ಸಾಧ್ಯವಿಲ್ಲ ಎಂದು ನಿಷ್ಠುರವಾಗಿ ಹೇಳಿದ್ದ. ಆದರೂ ಪಟ್ಟುಬಿಡದ ತಮ್ಮಣ್ಣಪ್ಪನವರು ಮುಧೋಳ ಸಂಸ್ಥಾನದ ಕನ್ನಡಿಗರ ನಿಯೋಗವೊಂದನ್ನು ರಾಜನ ಹತ್ತಿರ

ಕರೆದುಕೊಂಡು ಹೋಗಿ, ಕನ್ನಡ ಶಿಕ್ಷಣಕ್ಕಾಗಿ ತಮ್ಮ ಬೇಡಿಕೆಯನ್ನು ಸಲ್ಲಿಸಿದರು. "ಇಲ್ಲಿನ ರಾಜ್ಯಭಾಷೆ ಮರಾಠಿ. ಪ್ರಜೆಗಳೂ ಅದನ್ನೇ ಕಲಿಯಬೇಕು" ಎಂದು ಆ ಸಂಸ್ಥಾನಿಕರು ಖಂಡತುಂಡವಾಗಿ ನಿಯೋಗದ ಮುಖಂಡರಾದ ತಮ್ಮಣ್ಣಪ್ಪನವರಿಗೆ ಹೇಳಿದರು. "ನೀವು ಹೇಳುವುದರಲ್ಲಿ ತಪ್ಪಿದೆ. ಇಲ್ಲಿನ ರಾಜ್ಯಭಾಷೆ ಕನ್ನಡವಾಗಿರಬೇಕಿತ್ತು. ಇದು ರನ್ನ ಹುಟ್ಟಿದ ನಗರ. ಇಲ್ಲಿನ ಪ್ರದೇಶವನ್ನು ಪಡೆದುಕೊಂಡ ನೀವು, ಈ ಪರಿಸ್ಥಿತಿಗೆ ಹೊಂದಿಕೊಳ್ಳದೆ, ಇಲ್ಲಿನ ಪರಿಸ್ಥಿತಿಯನ್ನು ನಿಮ್ಮಂತೆ ಬದಲಾಯಿಸಿಕೊಳ್ಳುತ್ತಿದ್ದೀರಿ. ಕನ್ನಡ ಮಕ್ಕಳ ಮೂಗು-ಬಾಯಿ ಒತ್ತಿ ಹಿಡಿದು, ನೀವು ಮರಾಠಿ ಉಸಿರಾಡಿಸಿದರೆ ಬಿಡುತ್ತೇವೆ ಎಂಬಂತೆ ನಿಮ್ಮ ನೀತಿ ಶಿಕ್ಷಾಪ್ರಧಾನವಾಗಿದೆ' ಎಂದು ನಿಷ್ಠುರವಾಗಿ ಹೇಳಿದರಂತೆ. ಪ್ರಜಾಭಿಪ್ರಾಯಕ್ಕೆ ಸಂಸ್ಥಾನದ ಅರಸರು ಮಣಿಯಬೇಕಾಯಿತು. ವಿಧಿಯಿಲ್ಲದೆ ಮುಧೋಳ ಅರಸರು ಕನ್ನಡ ಶಿಕ್ಷಣಕ್ಕಾಗಿ ಅನೇಕ ಸೌಲಭ್ಯಗಳನ್ನು ಒದಗಿಸಿಕೊಟ್ಟರು.[೪೦]

ತಮ್ಮಣ್ಣಪ್ಪನವರ ಶಿಕ್ಷಣಪ್ರೇಮ ಅವರನ್ನು ಎಂದೂ ಕೈಕಟ್ಟಿ ಸುಮ್ಮನೆ ಕೂಡ್ರುವ ಹಾಗೆ ಮಾಡಲಿಲ್ಲ. ಬನಹಟ್ಟಿಯಲ್ಲಿ 'ಜನತಾ ಶಿಕ್ಷಣ ಸಮಿತಿ'ಯೊಂದನ್ನು ಸ್ಥಾಪಿಸಿ, ಅದರ ಮೂಲಕ ಶಿಕ್ಷಣ ಪ್ರಸಾರಮಾಡಲು ಬಯಸಿದರು. ಈ ಬಯಕೆಯ ಬೀಜವೆಂಬಂತೆ ಜಮಖಂಡಿಯ ಆಳರಸರ ಸಹಾಯ, ಸಹಕಾರಗಳಿಂದ ತಮ್ಮಣ್ಣಪ್ಪನವರು ೧೯೨೩ರಲ್ಲಿ ಬನಹಟ್ಟಿಯಲ್ಲಿ ಆಂಗ್ಲೋ-ವರ್ನಾಕ್ಯುಲರ್ ಶಾಲೆಯನ್ನು ಸ್ಥಾಪಿಸಿದರು. ಈ ಶಾಲೆಯಲ್ಲಿ ೧-೩-೧೯೩೩ರಲ್ಲಿ ಒಟ್ಟು ೧೫ ವಿದ್ಯಾರ್ಥಿಗಳು ಪ್ರವೇಶ ಪಡೆದರು.[೪೧] ಇದರಿಂದ ಬನಹಟ್ಟಿ ಮತ್ತು ಸುತ್ತಮುತ್ತಲಿನ ಗ್ರಾಮದ ವಿದ್ಯಾರ್ಥಿಗಳು ಶಿಕ್ಷಣದ ಪ್ರಯೋಜನ ಪಡೆಯುವಂತಾಯಿತು. ಶಾಲೆಯಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ಪ್ರತಿವರ್ಷ ಹೆಚ್ಚುತ್ತ ಹೋಯಿತು. ಆದರೆ ಕೇವಲ ಆಂಗ್ಲೋ ವರ್ನಾಕ್ಯುಲರ್ ಶಾಲೆಯ ಶಿಕ್ಷಣವನ್ನು ಪೂರೈಸಿಕೊಂಡ ಬನಹಟ್ಟಿಯ ವಿದ್ಯಾರ್ಥಿಗಳು ಅಷ್ಟಕ್ಕೆ ಓದನ್ನು ನಿಲ್ಲಿಸುವಂತಾಗಿತ್ತು. ಇದಕ್ಕೆ ಬಡತನವೂ ಕಾರಣವಾಗಿತ್ತು. ಬಹಳ ಕಡಿಮೆ ಜನ ಶ್ರೀಮಂತರು ಮಾತ್ರ ತಮ್ಮ ಮಕ್ಕಳನ್ನು ಪರ ಊರಿಗೆ ಕಳಿಸಿ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸುವ ವ್ಯವಸ್ಥೆ ಮಾಡಿಕೊಂಡಿದ್ದರು. ಇದನ್ನರಿತ ತಮ್ಮಣ್ಣಪ್ಪನವರು ಸಂಸ್ಥಾನಿಕರ ಮನವೊಲಿಸಿ ಆಂಗ್ಲೊ ವರ್ನಾಕ್ಯುಲರ್ ಶಾಲೆಯನ್ನು ಫಸ್ಟ್‌ಗ್ರೇಡ್ ಶಾಲೆಯನ್ನಾಗಿ ಪರಿವರ್ತಿಸಲು ಸತತ ಪ್ರಯತ್ನ ಪಟ್ಟರು. ತಮ್ಮಣ್ಣಪ್ಪನವರ ಪರಿಶ್ರಮದ ಫಲವಾಗಿ ೧೯೨೭ರಲ್ಲಿ ಫಸ್ಟಗ್ರೇಡ್ ಶಾಲೆಯಾಗಿ ಪರಿವರ್ತನೆಗೊಂಡಿತು. ತಮ್ಮಣ್ಣಪ್ಪನವರ ಅಭಿಲಾಷೆಯಂತೆ ಶಾಲೆಯನ್ನು ತೆರೆಯಲು ಶ್ರೀ ಶಂಕರರಾವ ಅಪ್ಪಾಸಾಹೇಬರು ಅನುಮತಿ ಕೊಟ್ಟರು. ಈ ಕೃತಜ್ಞತೆಗೆ ಅವರಿಗೆ ಟೌನ್ ಮುನಿಸಿಪಾಲಿಟಿಯವರು ೩೦ ಜೂನ ೧೯೨೭ರಂದು ಮಾನಪತ್ರವನ್ನು ಸಲ್ಲಿಸಿದರು. 'ಮಾನಪತ್ರ' ಕೊಡುವ ಕಾಲಕ್ಕೆ ತಮ್ಮಣ್ಣಪ್ಪನವರು ಶ್ರೀ ಶಂಕರರಾವ ಅಪ್ಪಾಸಾಹೇಬರಿಗೆ ಕೃತಜ್ಞಾಪೂರ್ವಕವಾಗಿ ಅವರ ಮೇಲೆ ಮೂರು ಪದಗಳನ್ನು ರಚಿಸಿ ಅರ್ಪಿಸಿದ್ದಾರೆ.(ನೋಡಿ.ಕವಿಯಾಗಿ ತಮ್ಮಣ್ಣಪ್ಪನವರು)

ಸಮಾಜೋಭಿವೃದ್ಧಿಯ ಕನಸನ್ನು ಕಂಡ ತಮ್ಮಣ್ಣಪ್ಪನವರು ಶಿಕ್ಷಣದಿಂದ ಮಾತ್ರ ಇದು ಸಾಧ್ಯ ಎಂಬುದನ್ನು ಮನಗಂಡರು. ಈಗಾಗಲೇ ಜಮಖಂಡಿ ಸಂಸ್ಥಾನದಲ್ಲಿ ೧೮೮೦ರಿಂದಲೇ ಇಂಗ್ಲಿಷ್

ವರ್ನಾಕ್ಯುಲರ್ ಶಾಲೆಯನ್ನು ಹೈಸ್ಕೂಲ್ ದರ್ಜೆಗೆ ಎತ್ತರಿಸಲಾಗಿತ್ತು. ಜಮಖಂಡಿಯ ವಿದ್ಯಾರ್ಥಿಗಳು ಮೆಟ್ರಿಕ್ಯುಲೇಶನ್ ಪರೀಕ್ಷೆ ಮುಗಿಸಿ ಹೆಚ್ಚಿನ ಶಿಕ್ಷಣಕ್ಕಾಗಿ ಪುಣೆಗೆ ಹೋಗುತ್ತಿದ್ದರು. ಹೆಚ್ಚಿನ ಶಿಕ್ಷಣ ಪಡೆದುಕೊಂಡು ಬಂದ ವಿದ್ಯಾರ್ಥಿಗಳು ಸಮಾಜದ ಪ್ರಗತಿಯಲ್ಲಿ ಕಾರ್ಯೋನ್ಮುಖರಾಗಿದ್ದರು. ತಮ್ಮಣ್ಣಪ್ಪನವರು ಬನಹಟ್ಟಿಯಲ್ಲಿ ಹೈಸ್ಕೂಲನ್ನು ಸ್ಥಾಪಿಸುವ ಉತ್ಕಟೇಚ್ಛೆಯಿಂದ ಸಾಕಷ್ಟು ಪ್ರಯತ್ನ ಮಾಡಿದರು. ಹೈಸ್ಕೂಲ್ ಆಗಲೇಬೇಕೆಂಬ ಹಂಬಲದಿಂದ ತಮ್ಮ ಇಡೀ ಸರ್ವಸ್ವವನ್ನು ಧಾರೆ ಎರೆದು ತ್ಯಾಗಜೀವಿಯಾದರು. ತಮ್ಮಣ್ಣಪ್ಪನವರ ಜೀವಿತಾವಧಿಯಲ್ಲಿ ಹೈಸ್ಕೂಲ್ ಆಗಲಿಲ್ಲ. ಅವರ ಮರಣಾನಂತರ ಬನಹಟ್ಟಿಯಲ್ಲಿ 'ಜನತಾ ಶಿಕ್ಷಣ ಸಂಘ' ಸ್ಥಾಪನೆಯಾಗಿ ಅದರ ಅಡಿಯಲ್ಲಿ ತಮ್ಮಣ್ಣಪ್ಪನವರ ಆಶಯದಂತೆ 'ಶ್ರೀಮಂತ ರಾಮಚಂದ್ರ ಅಪ್ಪಾಸಾಹೇಬ'(ಎಸ್.ಆರ್.ಎ) ಎಂಬ ಹೆಸರಿನಲ್ಲಿ ಹಾಯಸ್ಕೂಲ್ ಸ್ಥಾಪನೆಯಾಯಿತು. ಪ್ರಗತಿಪಥದಲ್ಲಿ ಸಾಗಿದ ಎಸ್.ಆರ್.ಎ. ಪ್ರೌಢಶಾಲೆಯು ಮುಂದೆ ೧೯೭೨ರಲ್ಲಿ ಪದವಿಪೂರ್ವ ವರ್ಗಗಳನ್ನು ಪ್ರಾರಂಭಿಸಿತಲ್ಲದೆ, ಮುಂದಿನ ಹಂತದಲ್ಲಿ ಪದವಿ ತರಗತಿಗಳನ್ನು ಪ್ರಾರಂಭಿಸಿತು. ಇಂದು ಮ್ಯಾನೇಜ್‌ಮೆಂಟ್‌ನಂಥ ಕೋರ್ಸಗಳನ್ನು ಪ್ರಾರಂಭಿಸಿ, ಅದು ಅಭಿವೃದ್ಧಿಯ ಸಾಕಾರವನ್ನು ಹೊತ್ತ ಸಂಸ್ಥೆಯಾಗಿದೆ. ಈ ಬೆಳವಣಿಗೆಯ ಹಿಂದೆ ತಮ್ಮಣ್ಣಪ್ಪನವರ ಪರಿಶ್ರಮ ಇದೆಯೆಂಬುದನ್ನು ನಾವು ಮರೆಯಬಾರದು.

೪.೨. ಪಂಡಿತಪ್ಪ:

೪.೨.೧. ಸಾಮಾಜಿಕ:

೪.೨.೧.೧. ರಾಜ್ಯ ನೇಕಾರ ಸಮಿತಿಯ ಅಧ್ಯಕ್ಷರು:

ಪಂಡಿತಪ್ಪನವರು ಮೂಲತಃ ನೇಕಾರ ಕುಟುಂಬದಲ್ಲಿ ಜನಿಸಿದವರು. ಕಷ್ಟಸಹಿಷ್ಣುಗಳಾದ ರೈತರ ಮತ್ತು ನೇಕಾರ ಕುಟುಂಬದವರ ಆರ್ಥಿಕ ಸ್ಥಿತಿ ಅಂದು ತುಂಬಾ ಹೀನಾಯವಾಗಿತ್ತು. ಎಷ್ಟು ದುಡಿದರೂ ಅರೆಹೊಟ್ಟೆ ತುಂಬುತ್ತಿರಲಿಲ್ಲ. ಪಂಡಿತಪ್ಪನವರು ರೈತರ ಮತ್ತು ನೇಕಾರರ ಸಮಸ್ಯೆಯನ್ನು ಸೂಕ್ಷ್ಮಗ್ರಾಹಿಯಾಗಿ ಅವಲೋಕಿಸಿದ್ದರು. ಹೀಗಾಗಿ ನೇಕಾರರ ಹಿತಚಿಂತಕರಾಗಿ ಕಾರ್ಯ ನಿರ್ವಹಿಸಿದರು. ನೇಕಾರಿಕೆಯ ಮೂಲ ಬಂಡವಾಳ ನೂಲು. ಎರಡನೇ ಮಹಾಯುದ್ಧದ ಕಾಲದಲ್ಲಿ ಅದು ಎಲ್ಲೆಡೆ ದೊರೆಯುತ್ತಿರಲಿಲ್ಲ. ಆಗ ನೇಕಾರರೆಲ್ಲ ಹೊಟ್ಟೆ ಹೊರೆಯುವುದಕ್ಕಾಗದೆ ಕಂಗಾಲಾಗಿದ್ದರು. ನೇಕಾರಿಕೆಯನ್ನೇ ನಂಬಿದ ಅವರಿಗೆ ಬದುಕುವ ಮತ್ತೊಂದು ದಾರಿ ಗೊತ್ತಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನೇಕಾರರಿಗೆ ಆಪದ್ಬಾಂವರಾಗಿ ಬಂದವರು ಪಂಡಿತಪ್ಪ ಚಿಕ್ಕೋಡಿಯವರು. ಮುಂಬಯಿ ಸರಕಾರದಲ್ಲಿ ಪ್ರಯತ್ನಿಸಿ ಎಲ್ಲ ನೇಕಾರರಿಗೆ ಸುಲಭವಾಗಿ ನೂಲು ದೊರೆಯುವಂತೆ ಮಾಡಿದರು. ಅಖಿಲ ಭಾರತ ಕೈಮಗ್ಗ ನೇಕಾರರ ಸಮಿತಿಯ ಉಪಾಧ್ಯಕ್ಷರಾಗಿ, ಮುಂಬಯಿ ರಾಜ್ಯದ ನೇಕಾರ ಸಮಿತಿಯ ಅಧ್ಯಕ್ಷರಾಗಿ ಅನೇಕ ಅನುಕೂಲತೆಗಳನ್ನು ಅವರಿಗೆ ಒದಗಿಸಿಕೊಟ್ಟರು.

೪.೨.೧.೨. ದಕ್ಷಿಣ ಸಂಸ್ಥಾನಗಳ ನೇಕಾರ ಸಹಕಾರ ಸಂಘಗಳ ಪರಿಷತ್ತಿನ ಅಧ್ಯಕ್ಷ:

ಪಂಡಿತಪ್ಪನವರು ೧೯೩೭ರಲ್ಲಿ ಬನಹಟ್ಟಿಯಲ್ಲಿ ಜರುಗಿದ ಮುಂಬಯಿ ಪ್ರಾಂತದ ಪ್ರಥಮ ನೇಕಾರ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಸ್ವಾತಂತ್ರ್ಯ ದೊರೆತ ನಂತರ ೧೯೪೯ರಲ್ಲಿ ಬನಹಟ್ಟಿಯಲ್ಲಿಯೇ ವಿಲೀನಗೊಂಡ ದಕ್ಷಿಣ ಸಂಸ್ಥಾನಗಳ ನೇಕಾರ ಸಹಕಾರ ಸಂಘಗಳ ಪರಿಷತ್ತಿನ ಅಧ್ಯಕ್ಷರಾದರು. ಅಂದು ಅವರು ತಮ್ಮ ಅಧ್ಯಕ್ಷೀಯ ಭಾಷಣದುದ್ದಕ್ಕೂ ನೇಕಾರ ಸಮಾಜದ ಆರ್ಥಿಕಾಭಿವೃದ್ಧಿಯ ಕುರಿತು ಮಾತನಾಡಿದರು. ಕೈಮಗ್ಗದ ಉದ್ದಿಮೆಯನ್ನು ಅಭಿವೃದ್ಧಿ ಪಡಿಸಿದರೆ ನೇಕಾರರ ಮತ್ತು ದೇಶದ ಆರ್ಥಿಕ ಪರಿಸ್ಥಿತಿಯ ಕೊರತೆಯನ್ನು ನೀಗಿಸಿಕೊಳ್ಳಬಹುದು ಎಂಬುದು ಪಂಡಿತಪ್ಪನವರ ಅಭಿಪ್ರಾಯವಾಗಿತ್ತು. ಹೀಗಾಗಿ ಸರಕಾರಕ್ಕೆ ಕೆಲವೊಂದು ಸಲಹೆಗಳನ್ನು ನೀಡಿದ್ದರು. ಅವುಗಳಲ್ಲಿ ಸರಕಾರದ ಆರ್ಥಿಕ ಸಹಾಯ ಪಡೆದು ಅಲ್ಲಲ್ಲಿ ಗಿರಣಿಗಳನ್ನು ಸ್ಥಾಪಿಸುವುದು, ನಂತರ ಅರಿವೆ ಉತ್ಪಾದನೆಯ ಮೇಲೆ 'ಎಕ್ಸಾಯಿಜ್' ಕರವನ್ನು ಹಾಕುವುದು, ರೇಲ್ವೆ ಸವಲತ್ತುಗಳನ್ನು ಒದಗಿಸುವುದು ಮುಂತಾದವು ಮುಖ್ಯವಾಗಿದ್ದವು.

ಕೇಂದ್ರ ಸರಕಾರಕ್ಕೆ ಒತ್ತಾಯಿಸುವುದರೊಂದಿಗೆ ಪ್ರಾಂತೀಯ ಆಡಳಿತ ಕೂಡ ಈ ನಿಟ್ಟಿನಲ್ಲಿ ಪ್ರಯತ್ನಿಸಿದರೆ ಆರ್ಥಿಕ ಅಸಮತೋಲನ ನೀಗಿಸಿಕೊಳ್ಳಬಹುದು ಎಂಬುದು ಅವರ ವಿಚಾರವಾಗಿತ್ತು. ಇದಕ್ಕಾಗಿ ಪ್ರಾಂತೀಯ ಸರಕಾರದವರು ನೇಕಾರ ಸಹಕಾರ ಸಂಘಗಳನ್ನು ಸ್ಥಾಪಿಸುವುದು, ನೇಕಾರ ಬಾಲಕರಿಗೆ ಶಿಕ್ಷಣವನ್ನು ಕೊಡುವುದು, ಪಾವರ್‌ಲೂಮ್ಸ್ ಮತ್ತು ಅಟೋಮೆಟಿಕ್ ಲೂಮ್ಸ್‌ಗಳನ್ನು ಹಾಕಲು ಸಹಾಯಮಾಡುವುದು, ಮಾರ್ಕೆಟಿಂಗ್ ಯೋಜನೆಯಿಂದ ವ್ಯವಹರಿಸುವುದು, ವಿದೇಶಗಳಲ್ಲಿ ಹೆಚ್ಚಿನ ಬೇಡಿಕೆ ಬರುವ ಹಾಗೆ ಮಾಲು ತಯಾರಿಸುವುದು ಹೀಗೆ ಅನೇಕ ಮಹತ್ವದ ಯೋಜನೆಗಳನ್ನು ಸರಕಾರದ ಮುಂದಿಟ್ಟರು.[೪೨] ನೇಕಾರರ ಹಿತಚಿಂತಕರಾಗಿ ದೇಶದ ಆರ್ಥಿಕ ಅರ್ಥವ್ಯವಸ್ಥೆಯ ಮೇಲೆ ಬೆಳಕು ಚೆಲ್ಲಿದರು.

೪.೨.೧.೩.ಲೋಕಲ್ ಫಂಡ್ ಹಣಕಾಸು ಪರೀಕ್ಷಕ (ಅಕೌಂಟ್ಸ್ ಎಕ್ಸಾಮಿನರ್):

ಪಂಡಿತಪ್ಪನವರು ಹಣಕಾಸಿನ ವ್ಯವಹಾರದಲ್ಲಿ ಬಹಳ ನಿಷ್ಣಾತರು. ಅವರು ಅಚ್ಚುಕಟ್ಟಾಗಿ ಮಾಡಿದ ಹಣಕಾಸಿನ ಲೆಕ್ಕಪತ್ರಗಳನ್ನು ಸರಕಾರವು ಮೆಚ್ಚಿಕೊಳ್ಳುತ್ತಿತ್ತು. ಮುಂಬಯಿ ಆಫೀಸ್ ಇವರ ಲೆಕ್ಕಪತ್ರಗಳನ್ನು ತಪಾಸ ಮಾಡಿ ಈ ಪ್ರಕಾರ ತಮ್ಮ ಅಭಿಪ್ರಾಯವನ್ನು ಬರೆದಿದ್ದಾರೆ.

ಅ) "ಲೆಕ್ಕಗಳನ್ನು ತಪಾಸಮಾಡಿ ಅಡಿಟ್ ನೋಟನ್ನು ಸಾದ್ಯಂತವಾಗಿ ಚರ್ಚಿಸಿದೆ. ಲೆಕ್ಕದ ಯಾವತ್ತೂ ಪುಸ್ತಕಗಳು ರಜಿಸ್ಟರಗಳು ಚೆನ್ನಾಗಿ ಬರೆಯಲ್ಪಟ್ಟಿವೆ. ಇದರ ಮೇಲಿಂದ ತಿಳಿಯುವದೇನೆಂದರೆ_ಚೀಫ್ ಆಫೀಸರರು, ಚೀಫ್ ಎಂಜನೀಯರರು ತಮ್ಮ ತಮ್ಮ ಆಫೀಸನಲ್ಲಿದ್ದ ಖಾತೆಗಳ ಕಾರಭಾರವನ್ನು ಒಳ್ಳೆಯ ಕುಶಲತೆಯಿಂದ ನಡೆಸಿರುವರು. ಮತ್ತು ಇವರೆಲ್ಲರ ಮೇಲೆ ಪ್ರೆಸಿಡೆಂಟ್ ಸಾಹೇಬರ ಮೇಲ್ವಿಚಾರಣೆಯು ವಿಶೇಷ ಪರಿಣಾಮಕಾರಿಯಾಗಿರುತ್ತದೆ."(೨೪ಮೇ ೧೯೩೨)

ಬ) "ವಿಶೇಷತಃ ಏನೂ ತಪ್ಪಿಲ್ಲದೆ ಕೆಲಸ ಮಾಡಿದ್ದು, ಇದು ಮತ್ತೊಂದು ವರುಷವು. ಕಳೆದ ಮೂರು ವರ್ಷಗಳ ಆಡಿಟ್ ನೋಟುಗಳ ಮೇಲಿಂದ ತಿಳಿದುಬರುವುದೇನೆಂದರೆ ಮಿ.ಪಿ.ಆರ್.ಚಿಕ್ಕೋಡಿಯವರಂಥ ಕಾರ್ಯದಕ್ಷ ಅಧ್ಯಕ್ಷರೂ ಮತ್ತು ಅವರ ಕೈಕೆಳಗಿನ ಆಜ್ಞಾಧಾರಕರ ಹಾಗೂ ನಿರಾಲಸ್ಯ ಅಧಿಕಾರಿಸ್ಥರೂ ಇದ್ದರೆ ಹಣದ ವ್ಯವಹಾರ ಕಾರಭಾರವು ಒಳ್ಳೇ ಮೇಲ್ಮೆಯಿಂದಲೂ ದೋಷವಿಲ್ಲದೆಯೂ ನಡೆಯುವುದು"(೨೪ಮೇ ೧೯೩೨)[೪೩]

೪.೨.೧.೪. ಔದ್ಯೋಗಿಕ ಮಂಡಲದಲ್ಲಿ ಪಂಡಿತಪ್ಪ ಚಿಕ್ಕೋಡಿಯವರು:

ನೇಕಾರಿಕೆಯ ಬಗ್ಗೆ ಅಪಾರ ಕಾಳಜಿಯುಳ್ಳ ಪಂಡಿತಪ್ಪನವರು ನೇಕಾರಿಕೆಯನ್ನು ಅಭಿವೃದ್ಧಿಪಡಿಸುವತ್ತ ಸದಾ ಚಿಂತಿಸುತ್ತಿದ್ದರು. ಅದಕ್ಕೆ ಪೂರಕವಾಗಿ ನಾನಾ ಯೋಜನೆಗಳನ್ನು ಹಾಕಿಕೊಂಡು, ಅವುಗಳನ್ನು ಸಂಘಸಂಸ್ಥೆಗಳ ಮೂಲಕ ಪ್ರಚುರಪಡಿಸುತ್ತಿದ್ದರು. ಅವರು ಬೆಳಗಾವಿಯ ಕೈಮಗ್ಗ ಉದ್ಯಮ ಮಂಡಲಿ ಸದಸ್ಯರಾಗಿ(೧೯೪೧) ಕಾರ್ಯನಿರ್ವಹಿಸಿದರು. ಅಲ್ಲದೆ ಬೆಳಗಾವಿ ಜಿಲ್ಹಾ ಔದ್ಯೋಗಿಕ ಸಹಕಾರ ಮಂಡಳ ಸದಸ್ಯರಾಗಿ(೧೯೪೧), ಬೆಳಗಾವಿ ಜಿಲ್ಹಾ ಔದ್ಯೋಗಿಕ ಸಹಕಾರಿ ಮಂಡಲಿಯ ನಿರ್ದೇಶಕ ಸಮಿತಿಯ ಅಧ್ಯಕ್ಷರಾಗಿ(೧೯೪೫) ಕಾರ್ಯನಿರ್ವಹಿಸಿದರು. ಈ ನಿಟ್ಟಿನಲ್ಲಿ ಪಂಡಿತಪ್ಪನವರು ನೇಕಾರರಿಗೆ ಸುಲಭವಾಗಿ ನೂಲು ದೊರಕಿಸಿಕೊಡುವುದು ಮತ್ತು ಅವರಿಗೆ ಬಂಡವಾಳ ಒದಗಿಸಿಕೊಡುವಲ್ಲಿ ಸಾಕಷ್ಟು ಪರಿಶ್ರಮಿಸಿದರು.[೪೪]

ಆದರೆ ಪಂಡಿತಪ್ಪನವರ ದುರ್ದೆಶೆಯೆಂಬಂತೆ ಔದ್ಯೋಗಿಕ ಮಂಡಲದಲ್ಲಿ ಅವರ ಘನತೆ ಗೌರವಗಳಿಗೆ ಧಕ್ಕೆ ತರುವಂತಹ ಕೆಲವು ಘಟನೆಗಳು ನಡೆದವು. ಈ ಸಂಸ್ಥೆಗೆ ನೂಲು ಹಂಚುವ ಸರ್ವಸಗಟು ಗುತ್ತಿಗೆಯನ್ನು ಕೊಡಲಾಗಿತ್ತು. ೧೯೫೦ರಲ್ಲಿ ಈ ಸಂಸ್ಥೆಗೆ ನೂಲು ಹಂಚಿದ ಬಗ್ಗೆ ೧ ಲಕ್ಷ ೯ ಸಾವಿರ ರೂ.ಗಳ ದಲಾಲಿಯೂ ದೊರೆತಿತ್ತು. ಹೀಗಿದ್ದೂ ಈ ಸಂಸ್ಥೆಗೆ ೩೬,೦೦೦ ರೂಪಾಯಿಗಳ ಹಾನಿಯಾಗಿದೆಯೆಂಬ ಬೊಬ್ಬಾಟವೆದ್ದಿತ್ತು. ಈ ಸಂಸ್ಥೆಯು ಹುಟ್ಟಿದ ಈ ಹತ್ತು ವರುಷಗಳಲ್ಲಿ ಒಂದು ಕವಡಿಯ ಲಾಭ(ಡಿವಿಡೆಂಡ)ವನ್ನು ಹಂಚಿಲ್ಲವೆಂಬ ಮಾತು ಬೆಳಗಾವಿಯಲ್ಲಿ ಕೇಳಿಬರತೊಡಗಿತ್ತು. ಐದಾರು ವರ್ಷಗಳಿಂದ ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ಬೆಳಗಾವಿ ಜಿಲ್ಲೆಯ ಔದ್ಯೋಗಿಕ ಮಂಡಲದ ಅಧ್ಯಕ್ಷರಾಗಿದ್ದರು. ಪಂಡಿತಪ್ಪನವರ ಮಗನಾದ ರಾಜಶೇಖರ ಚಿಕ್ಕೋಡಿಯವರು ಈ ಸಂಸ್ಥೆಯ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಈ ಸಂಸ್ಥೆಯ ಕಾರ್ಯಕಲಾಪಗಳನ್ನು ನೋಡುತ್ತಿರುವುದಕ್ಕಾಗಿ ಶ್ರೀ ಪಂಡಿತಪ್ಪನವರಿಗೆ ಕೈತುಂಬ ಸಂಭಾವನೆ ಸಿಗುತ್ತಿರುವುದಲ್ಲದೆ ಇವರ ಮಗನಿಗೂ ಬೊಗಸೆಗಟ್ಟಲೆ ಸಂಬಳ ಸಿಗುತ್ತಿರುವುದೆಂದು ಮಾತುಗಳು ಕೇಳುತ್ತವೆ ಎಂದು 'ಜನಜೀವಾಳ' ಪತ್ರಿಕೆಯವರು ಬರೆದಿದ್ದಾರೆ.[೪೫]

ಪಂಡಿತಪ್ಪನವರ ಅಧ್ಯಕ್ಷತೆಯಲ್ಲಿ ೨೭-೯-೧೯೫೦ರಲ್ಲಿ ಸರ್ವ ಸಾಧಾರಣ ಸಭೆ ಕರೆಯಲಾಗಿತ್ತು. ಈ ಸಂಸ್ಥೆಯ ನಿಯಮ(Byelaw)ಗಳು ತಿದ್ದುಪಡಿ ಹೊಂದಿದ್ದು, ಅವು ಒಪ್ಪಿಗೆಯಾಗಿ ಬರುವವರೆಗೆ ಸಭೆಯನ್ನು ಮುಂದೆ ಹಾಕಿ ೮-೧೦-೧೯೫೦ರಂದು ಎರಡನೆಯ ಸಭೆ ಸೇರಲಾಯಿತು.

ಚಿಕ್ಕೋಡಿಯವರ ಬಗ್ಗೆ ಮಾಡಿದ ಅಪಪ್ರಚಾರವನ್ನು ನಂಬಿದ ಜನತೆ ಸಾರಾಸಾರ ವಿಚಾರಿಸದೆ ಪಂಡಿತಪ್ಪ ಚಿಕ್ಕೋಡಿಯವರ ವಿರುದ್ಧ ಶ್ರೀ ಕೆ.ಎ. ಶೇಖ ಅವರನ್ನು ನಿಲ್ಲಿಸಿ ಅಧ್ಯಕ್ಷರನ್ನಾಗಿ ನೇಮಿಸಿತು.[೪೬]

ಸಂಘದ ಆರ್ಥಿಕ ಕೊರತೆಯಿಂದ ಈ ಸಂಘವು ತನ್ನ ನೂಲು ಹಂಚುವ ಕಾರ್ಯವನ್ನು ಅನಿವಾರ್ಯವಾಗಿ ಸರಕಾರಕ್ಕೆ ಬಿಟ್ಟುಕೊಡುವ ಪರಿಸ್ಥಿತಿ ಬಂದಿತು. ಆದರೆ ಸರಕಾರ ಆ ನೂಲು ಹಂಚುವ ಕಾರ್ಯವನ್ನು ತಾನು ಕೈಗೆತ್ತಿಕೊಂಡು ವರ್ಷವಾದರೂ ಸಮರ್ಥವಾಗಿ ಕಾರ್ಯ ನಿರ್ವಹಿಸಲಿಲ್ಲ. ಇದರಿಂದ ಮತ್ತೆ ನೇಕಾರರು ನೂಲು ದೊರೆಯದೆ ಕಂಗೆಡುವಂತಾಯಿತು. ಈ ಪರಿಸ್ಥಿತಿಗೆ ಕಾರಣವನ್ನು ಕೂಲಂಕಷವಾಗಿ ಪರಿಶೀಲಿಸಿದ ಸಂಘ ಪಂಡಿತಪ್ಪನವರೇ ಔದ್ಯೋಗಿಕ ಸಹಕಾರ ಮಂಡಳದ ಅಧ್ಯಕ್ಷರಾಗಲು ಸೂಕ್ತ ಎಂಬುದನ್ನು ಅರಿತು ಮರಳಿ ಅವರಿಗೆ ಆ ಸ್ಥಾನವನ್ನು ನೀಡಿತು.

ಭಾರತದಲ್ಲಿ ಒಕ್ಕಲುತನದೊಂದಿಗೆ ನೇಕಾರಿಕೆಯು ಬೆಳೆದು ಬಂದಿದೆ. ಇಲ್ಲಿ ೨೦ಲಕ್ಷಗಳಷ್ಟು ನೇಕಾರ ಕುಟುಂಬಗಳಿದ್ದು, ಸುಮಾರು ಒಂದೂವರೆ ಕೋಟಿ ಜನರು ಈ ವೃತ್ತಿಯನ್ನು ಅವಲಂಬಿಸಿದ್ದಾರೆ. ಇಷ್ಟು ದೊಡ್ಡ ಪ್ರಮಾಣದ ಜನತೆಯನ್ನು ಮರೆತು ನೆಯ್ಗೆಯಂತ್ರಗಳ ಬೆನ್ನು ಹತ್ತುವದು ಯಾವ ಸರಕಾರಕ್ಕೂ ಹಿತಕರವಾಗಲಾರದು ಎಂದು ಅಂದಿನ ಮದ್ರಾಸದ ಹಿರಿಯ ಮಂತ್ರಿ ಶ್ರೀ ಚಕ್ರವರ್ತಿ ಗುಡುಗಿದರು. ಮುಂದುವರೆದು ಅವರು 'ಧೋತರ ಮತ್ತು ಸೀರೆ'ಗಳ ತಯಾರಿಕೆಯನ್ನು ಕೈಮಗ್ಗಳಿಗೆ ಮೀಸಲಾಗಿರಿಸಬೇಕೆಂದು ಹೇಳಿದರು. ಈ ಗುಡುಗಿಗೆ ಎಚ್ಚೆತ್ತ ಭಾರತ ಸರಕಾರದ ವ್ಯಾಪಾರ ಮತ್ತು ಕೈಗಾರಿಕೆಯ ಮಂತ್ರಿ ಶಾಖೆ ಕೈಮಗ್ಗಗಳ ಮಂಡಲದ ಕಡೆಗೆ ಗಮನಹರಿಸಿತು. ಸಂಸತ್ತಿನಲ್ಲಿ ಕೈಮಗ್ಗಗಳ ಸಂರಕ್ಷಣಾರ್ಥವಾಗಿ ಮಸೂದೆಯನ್ನು ಹೊರಡಿಸಿತು. ಕೈಮಗ್ಗದ ತೊಡಕುಗಳನ್ನು ಬಿಡಿಸುವ ಬಗ್ಗೆ ಸಲಹೆ ನೀಡುವುದಕ್ಕೆಂದು ಅಖಿಲಭಾರತ ಕೈಮಗ್ಗದ ಮಂಡಳವು ಅಸ್ತಿತ್ವಕ್ಕೆ ಬಂದಿತು.

ಮೊದಲಿದ್ದ ಕೇಂದ್ರ ಕೈಮಗ್ಗದ ಸ್ಥಾಯಿಸಮಿತಿಯನ್ನು ತೆಗೆದುಹಾಕಿ ಭಾರತ ಸರಕಾರವು ೨೫-೧೦-೧೯೫೨ರಂದು ಅಖಿಲಭಾರತ ಕೈಮಗ್ಗದ ಮಂಡಲವೊಂದನ್ನು ಸ್ಥಾಪಿಸಿತು. ಇದು ಭಾರತದ ನೇಕಾರರ ಹಿತರಕ್ಷಣೆಗಾಗಿಯೇ ಅಸ್ತಿತ್ವಕ್ಕೆ ಬಂದಿತು. ಇದರಲ್ಲಿ ೧೬ ಜನ ಅಧಿಕಾರಿಗಳು ೫ ಜನ ಅಧಿಕಾರೇತರರೂ ಇದ್ದರು. ಈ ಐವರಲ್ಲಿ ಮೂವರು ಮದ್ರಾಸದವರು, ಇಬ್ಬರು ನಾಗಪುರ, ಇನ್ನೊಬ್ಬರು ಬೆಳಗಾವಿಯ ಶ್ರೀ ಪಂಡಿತಪ್ಪ ಚಿಕ್ಕೋಡಿಯವರು. ಅಂದು ಭಾರತ ಸರಕಾರವು ಶ್ರೀ ಪಂಡಿತಪ್ಪ ಚಿಕ್ಕೋಡಿಯವರನ್ನು ಐವರು ಅಧಿಕಾರೇತರ ಅಖಿಲ ಭಾರತ ಕೈಮಗ್ಗದ ತಜ್ಞರಲ್ಲೊಬ್ಬರೆಂದು ಗಣಿಸಿದುದು ಗಮನಾರ್ಹವಾಗಿದೆ. ಶ್ರೀ ಚಿಕ್ಕೋಡಿಯವರ ತಜ್ಞತೆಯ ಬಗ್ಗೆ ಮತಭೇದವೇ ಇರಲಿಲ್ಲ. ೧೯೨೧ರಿಂದಲೂ ಅವರು ಸಾರ್ವಜನಿಕ ಜೀವನದಲ್ಲಿಯೇ ಬಾಳನ್ನು ಸವೆಸಿರುವರು. ಅವರು ಎಷ್ಟೋ ಆಂಗ್ಲಕಾಲೀನ ಸಂಘಸಂಸ್ಥೆಗಳಲ್ಲಿ ಭಾಗವಹಿಸಿ ಹೆಚ್ಚು ಆಸ್ಥೆಯಿಂದ ಕೆಲಸ ಮಾಡಿದ್ದಕ್ಕೆ ಅಂದಿನ ಸರಕಾರ ಅವರಿಗೆ 'ಮೆಂಬರ್ ಆಫ್ ಎಂಪರರ್' ಎಂಬ ಸರ್ವಶ್ರೇಷ್ಠ ಬಿರುದನ್ನು ದಯಪಾಲಿಸಿ ಗೌರವಿಸಿತು.[೪೭]

ಬೆಳಗಾವಿಯ ಗಣ್ಯರಿಂದ ತಿರಸ್ಕೃತಗೊಂಡಿದ್ದ ಪಂಡಿತಪ್ಪನವರನ್ನು ಒಬ್ಬ ಸಮರ್ಥ ನೇಕಾರ ಹಿತಚಿಂತಕ ಎಂದು ಕೇಂದ್ರ ಸರಕಾರ ಗುರುತಿಸಿತು. ಹೀಗಾಗಿ ಇಡೀ ದೇಶಾದ್ಯಂತ ಗುರುತಿಸಿಕೊಂಡ ತಜ್ಞರಲ್ಲಿ ಇವರು ಒಬ್ಬರಾಗಿದ್ದುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿಯೆನ್ನಬೇಕು.

ಪಂಡಿತಪ್ಪನವರಿಗೂ ಗೋಕಾಕ ನೂಲಿನ ಗಿರಣಿಗೂ ಅವಿನಾಭಾವ ಸಂಬಂಧ. ನೂಲಿನ ಗಿರಣಿಯವರು ಗಿರಣಿಯ ಶ್ರೇಯೋಭಿವೃದ್ಧಿಗಾಗಿ ಪಂಡಿತಪ್ಪನವರಲ್ಲಿ ಸಾಕಷ್ಟು ಸಲಹೆಗಳನ್ನು ಪಡೆದುಕೊಳ್ಳುತ್ತಿದ್ದರು. ಪಂಡಿತಪ್ಪನವರ ಸೇವೆಯನ್ನು ಮೆಚ್ಚಿ ಗೋಕಾಕ ಮಿಲ್ಸ್ ಹೆಡ್‌ಕ್ಲಾರ್ಕರಾದ ಶ್ರೀಯುತ ಲಕ್ಷ್ಮಣರಾವ ಎಸ್. ವಾಘ್ ಇವರು ದಿ. ೩೧ ಮೇ ೧೯೩೧ರಲ್ಲಿ ನಡೆದ ಒಂದು ಸಾರ್ವಜನಿಕ ಸಂದರ್ಭವನ್ನು ಉದ್ದೇಶಿಸಿ ಬರೆದ ಪತ್ರವೊಂದು ಹೀಗಿದೆ:

“ ಅವಾಸ್ತವವಾಗಿ ನಿಮ್ಮ ಸ್ತುತಿಮಾಡುವ ಸಲುವಾಗಿ ಈ ಪತ್ರವು ಬರೆಯಲ್ಪಟ್ಟಿಲ್ಲವೆಂದು ನಾನು ಇಲ್ಲಿ ಹೇಳಬಹುದು. ಆದರೆ ಸಾರ್ವಜನಿಕ ಉಪಯುಕ್ತತೆಯ ಕಾರ್ಯವನ್ನು ನೀವು ಸ್ವತಃ ಮನಸ್ಸು ಹಾಕಿ ಮಾಡಿದ್ದಕ್ಕೆ ಹಾರ್ದಿಕ ಪ್ರಶಂಸೆಗೆ ಸಂಪೂರ್ಣವಾಗಿ ನೀವು ಪಾತ್ರರಿರುತ್ತೀರೆಂದು ತಿಳಿಸಬೇಕಾಗಿದೆ. ಕಾರವಾರ ಜಿಲ್ಲೆಯೊಳಗೆ ಸಾರ್ವಜನಿಕ ಹಿತದ ಕೆಲಸವನ್ನು ನೀವು ಮಾಡಿದ ಬಗ್ಗೆ ನಾನು ವೈಯಕ್ತಿಕವಾಗಿ ಕೆಲವು ಮಾತುಗಳನ್ನು ಹೇಳಬಹುದು. ನಾನು ಕಾರವಾರದ ನಾಗರಿಕನಿರುವುದರಿಂದ ಅಂತಃಕರಣಪೂರ್ವಕ ನಿಮ್ಮ ಉಪಕಾರವನ್ನು ಸ್ಮರಿಸುವೆನು. ಹಳ್ಳಿಗಳಿಗೆ ಮೇಲಿಂದ ಮೇಲೆ ಭೆಟ್ಟಿಕೊಟ್ಟು ಸ್ವತಃ ವಿಚಾರಿಸಿ, ಜನತೆಯ ಕಷ್ಟನಷ್ಟಗಳನ್ನು ತಿಳಿದುಕೊಳ್ಳಲಿಕ್ಕೆ ಶ್ರಮ ಪಡತಕ್ಕವರೂ ಮತ್ತು ಸಮಯೋಚಿತ ಸಂದರ್ಭದಲ್ಲಿ ಅವುಗಳ ನಿವಾರಣೆಯನ್ನು ಮಾಡುವವರೂ ಆದ ನಿಮ್ಮಂಥ ಸದ್‌ಗೃಹಸ್ಥರೇ, ಅಧ್ಯಕ್ಷ ಪದವನ್ನು ವಹಿಸಲಿಕ್ಕೆ ಯೋಗ್ಯರಿರುತ್ತಾರೆ. ಸದಸ್ಯರು ಸಾರ್ವಜನಿಕ ಪ್ರಶ್ನೆಗಳ ಬಗೆಗೆ ಸಹಾನುಭೂತಿಯುಳ್ಳವರಿದ್ದರೆ, ಮತ್ತು ಜನತೆಯ ತೊಂದರೆಗಳನ್ನು ತಕ್ಷಣ ದೂರಮಾಡುವುದರಲ್ಲಿ ತತ್ಪರರಿದ್ದರೆ ಮಾತ್ರ ಅವರು ಮರ್ಯಾದೆಯನ್ನು ಪಡೆಯುತ್ತಾರೆ. ಮತ್ತು ಅಧಿಕಾರವನ್ನು ವಹಿಸಲು ಯೋಗ್ಯರೆಂದು ತಿಳಿಯಲ್ಪಡುತ್ತಾರೆ. ಕಡೆಗೆ ನಾನು ಹೇಳುವುದೇನೆಂದರೆ, ನೀವು ಮಾಡಿದ ಸತ್ಕಾರ್ಯಗಳನ್ನು ಜನರು ಎಂದೂ ಮರೆಯುವುದಿಲ್ಲ. ಅವುಗಳ ಬಗ್ಗೆ ಎಲ್ಲ ಶ್ರೇಯಸ್ಸು ನಿಮ್ಮದೇ ಇರುತ್ತದೆ.”[೪೮]

ಈ ಪತ್ರದಿಂದ ಪಂಡಿತಪ್ಪನವರು ಜನಸೇವೆಗಾಗಿ ಪಟ್ಟ ಪರಿಶ್ರಮ ಮತ್ತು ಮಾಡಿದ ಕೆಲಸಗಳು ತಿಳಿದುಬರುತ್ತವೆ. ಜನರ ಹಿತಾಸಕ್ತಿಗಳ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಪಂಡಿತಪ್ಪನವರು ಜನತೆ ನೆನಸಿಕೊಳ್ಳುವ ದಾಖಲೆಯ ಕಾರ್ಯಗಳನ್ನು ಮಾಡಿದ್ದಾರೆ.

೪.೨.೧.೩. ಭಾರತೀಯ ಆರ್ಥಿಕ ವಿಚಾರಣಾ ಸಮಿತಿ:

ಮೈಸೂರು ಸಂಸ್ಥಾನದ ದಿವಾನರೂ, ಕುಶಾಗ್ರಮತಿಗಳೂ ಆಗಿದ್ದ ವಿಶ್ವೇಶ್ವರಯ್ಯನವರು ದೇಶದ ಆರ್ಥಿಕಸ್ಥಿತಿಯನ್ನು ಸುಧಾರಿಸುವಲ್ಲಿ ಸಾಕಷ್ಟು ಪರಿಶ್ರಮಿಸಿದರು. ಆ ನಿಟ್ಟಿನಲ್ಲಿ ಸರಕಾರದಿಂದ ನೇಮಕಗೊಂಡು ತಮ್ಮ ನಿಲುವುಗಳನ್ನು ಅಭಿಪ್ರಾಯಿಸಿ, ದೇಶಕ್ಕೆ ಆರ್ಥಿಕ ಭದ್ರತೆಯನ್ನು ಒದಗಿಸಿದರು.

ಒಮ್ಮೆ ಅವರ ಅಧ್ಯಕ್ಷತೆಯ ಆರ್ಥಿಕ ವಿಚಾರಣಾ ಸಮಿತಿಯಲ್ಲಿ ವಿಚಾರಣೆ ಮೂರು ದಿನ ನಡೆದು, ಅದು ಮುಂಬಯಿಗೆ ರವಾನೆಯಾಯಿತು. ಈ ಸಮಿತಿಯವರ ಎದುರಿಗೆ ರಾ.ಗ.ಪ್ರಧಾನ, ಪಂಡಿತಪ್ಪ ಚಿಕ್ಕೋಡಿ, ಗೋ.ಕೃ.ದೇವಧರ, ಮಿ॥ಕಾಟನ್, ಮಿ॥ಶೆಜವಿಕ, ಸಿ.ಎನ್.ವಕೀಲ ಇವರು ಸಾಕ್ಷಿ ಹೇಳಿದುದಾಗಿ ತಿಳಿಯುತ್ತದೆ.[೯೯] ಇದರಿಂದ ದೇಶದ ಆರ್ಥಿಕ ಸುಧಾರಣೆಯಲ್ಲಿ ಸರಕಾರವು ಪಂಡಿತಪ್ಪನವರ ವಿಚಾರವನ್ನು ಎತ್ತಿ ಹಿಡಿಯುತ್ತಿತ್ತು ಎಂಬುದು ಅರ್ಥವಾಗುತ್ತದೆ. ಇಲ್ಲಿ ವಿಶ್ವೇಶ್ವರಯ್ಯನವರ ಮುಂದೆ ಪಂಡಿತಪ್ಪನವರು ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದು ಹೆಮ್ಮೆಯ ಸಂಗತಿ.

೪.೨.೧.೬. ಸಹಕಾರಿ ಕ್ಷೇತ್ರ:

ಪಂಡಿತಪ್ಪನವರು ಬೆಳಗಾವಿ ಜಿಲ್ಲೆಯ ಔದ್ಯೋಗಿಕ ಸಹಕಾರಿ ಬ್ಯಾಂಕ್‌ನ್ನು ಸ್ಥಾಪಿಸಿ, ಎಂಟು ವರ್ಷ ಅದರ ನಿರ್ದೇಶಕರಾಗಿ ದುಡಿದರು. ಈ ಸಂಸ್ಥೆ ಬೆಳಗಾವಿ ಜಿಲ್ಲೆಯಲ್ಲಿಯೇ ಅತಿ ದೊಡ್ಡ ಸಂಸ್ಥೆಯಾಗಿ ಬೆಳೆದು, ಅನೇಕ ಉದ್ಯಮಗಳ ಏಳಿಗೆಗಾಗಿ ಶ್ರಮಿಸಿತು. ನಂತರ ಪಂಡಿತಪ್ಪನವರು ಕರ್ನಾಟಕ ವಿಭಾಗ ಧಾರವಾಡದ ಸಹಕಾರಿ ಸಂಸ್ಥೆ ಸದಸ್ಯರಾಗಿ, ಪ್ರಾಂತೀಯ ಸಹಕಾರಿ ಸಂಸ್ಥೆಯ ಕೌನ್ಸಿಲಿನ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಜೊತೆಗೆ ಸಹಕಾರಿ ಆಂದೋಲನಗಳ ಸಭೆ ಸಮಾರಂಭ, ಅಧಿವೇಶನಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅವುಗಳಲ್ಲಿ ಧಾರವಾಡ ಜಿಲ್ಲೆಯ ನವಲಗುಂದದ ಸಹಕಾರಿ ಅಧಿವೇಶನ, ವಿಜಾಪುರದಲ್ಲಿ ನಡೆದ ಜಿಲ್ಲಾ ಸಹಕಾರಿ ಅಧಿವೇಶನದ ಅಧ್ಯಕ್ಷರಾಗಿದ್ದರು.

ಪಂಡಿತಪ್ಪನವರು ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿದ ಈ ಸೇವೆಯನ್ನು ಮನ್ನಿಸಿ ಮುಂಬಯಿ ಇಲಾಖೆಯ ರಜಿಸ್ಟ್ರಾರಸಾಹೇಬರು ತಮ್ಮ ಮೆಚ್ಚುಗೆಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ: "ಈ ಬ್ರ್ಯಾಂಚಕ್ಕೆ ಮಿ.ಪಿ.ಆರ್.ಚಿಕ್ಕೋಡಿಯವರು ಅಧ್ಯಕ್ಷರೆಂದು ಲಭಿಸಿದ್ದು ಸಂತೋಷಕರವಾದ ಸಂಗತಿಯು. ಎರಡನೇ ಎಷ್ಟೋ ಕೆಲಸಗಳಲ್ಲಿ ತೊಡಗಿದ್ದರೂ ಅವರು ಈ ಲೋಕೋಪಕಾರಕವಾದ ಕೆಲಸದಲ್ಲಿಯೂ ಸಹ ತಕ್ಕಮಟ್ಟಿಗೆ ತಮ್ಮ ವೇಳೆಯನ್ನು ಉಪಯೋಗಿಸುತ್ತಾರೆ".[೫೦]

೪.೨.೧.೭. ರೈತ ನಾಯಕ:

ನೇಕಾರರ ಹಿತಚಿಂತಕರಾದಂತೆ ಪಂಡಿತಪ್ಪನವರು ರೈತರ ಹಿತೈಷಿಗಳೂ ಆಗಿದ್ದರು. ಘಟಪ್ರಭಾ ನದಿಗೆ ಧೂಪದಾಳ ಹತ್ತಿರ ಒಂದು ಒಡ್ಡುಕಟ್ಟಿ ಗೋಕಾಕ ನೂಲಿನ ಗಿರಣಿಯ ವಿದ್ಯುತ್ ಉತ್ಪಾದನೆಗೆ ಕೊರತೆಯಾಗದಂತೆ ನೀರನ್ನು ಸಂಗ್ರಹಿಸಲಾಗಿತ್ತು. ಅದೇ ಚಿಕ್ಕ ಆಣೆಕಟ್ಟಿನಿಂದ ಘಟಪ್ರಭಾ ಎಡದಂಡೆಯ ಕಾಲುವೆ ಮೂಲಕ ರೈತರಿಗೆ ನೀರು ಪೂರೈಸಲು ಪಂಡಿತಪ್ಪನವರು ಅನುಕೂಲತೆಯನ್ನು ಒದಗಿಸಿಕೊಟ್ಟರು. ಗೋಕಾಕ ಕಾಲುವೆ ಅಚ್ಚುಕಟ್ಟು ಪ್ರದೇಶದ ರೈತಪರಿಷತ್ತಿನ ಅಧ್ಯಕ್ಷರೂ ಆಗಿದ್ದ[೫೧] ಪಂಡಿತಪ್ಪನವರ ಸೇವಾಕೈಂಕರ್ಯಕ್ಕೆ ಮೆಚ್ಚಿ ಗೋಕಾಕ ರೈತರ ಪರವಾಗಿ ಗೋಕಾಕ ನೀರಾವರಿ ಸಮಿತಿಯ ಅಧ್ಯಕ್ಷರು ಕೃತಜ್ಞತಾ ಪತ್ರ ಬರೆದರು.

"ಸರಕಾರವು ಎಲ್ಲ ಗ್ರಾಮಗಳಿಗೆ ಸಾಕಷ್ಟು ನೀರು ಕೊಡುವ ನಿರ್ಧಾರವನ್ನು ತಿಳಿದು ನನಗೆ ತುಂಬ ಸಂತೋಷವಾಗಿದೆ. ಈ ಯಶಸ್ಸನ್ನು ಸಂಪಾದಿಸಲು ತಾವು ಶ್ರಮಿಸಿದ ಬಗೆಗೆ ತಮ್ಮನ್ನು

ಅಭಿನಂದಿಸಲು ನಾನು ಈ ಸುವರ್ಣಾವಕಾಶವನ್ನು ಪಡೆಯುತ್ತೇನೆ. ತಮ್ಮ ಪ್ರಯತ್ನಕ್ಕೆ ನಾನು ತುಂಬ ಬೆಲೆ ಕೊಟ್ಟಿದ್ದೇನೆ. ತಮ್ಮ ದಿಟ್ಟ ಹೋರಾಟದಿಂದ ಆತಂಕಗಳೆಲ್ಲ ಹೊಗೆಯಾಗಿ ಹೋದವು ಎಂಬುದನ್ನು ಬಲ್ಲೆ".[೫೨]

ಈ ಪತ್ರದ ಆಶಯದಂತೆ, ಪಂಡಿತಪ್ಪನವರು ತಾವು ಹಿಡಿದ ಕಾರ್ಯಗಳನ್ನು ಪಟ್ಟು ಬಿಡದೆ ಮಾಡಿ ಜನಮನ್ನಣೆಯನ್ನು ಗಳಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಹಾಗೇ ೧೯೩೬ ಫೆಬ್ರುವರಿ ೨೯ರಂದು ಅರಭಾವಿ ಮಠದಲ್ಲಿ ಸೇರಿದ ಗೋಕಾಕ ಕಾಲುವೆ ನೀರಾವರಿ ಸಮಿತಿ ಸಭೆಯು ಪಂಡಿತಪ್ಪನವರ ಕುರಿತು ಹೀಗೆ ನಿರ್ಣಯವನ್ನು ಸ್ವೀಕರಿಸಿತು: "ಶ್ರೀಯುತ ಪಿ.ಆರ್.ಚಿಕ್ಕೋಡಿಯವರು, ಗೋಕಾಕ ಕಾಲುವೆಯ ನೀರನ್ನು ರೈತರಿಗೆ ಪೂರೈಸುವ ಬಗೆಗೆ ಮಾಡಿದ ಪ್ರಯತ್ನಕ್ಕಾಗಿ, ಅವರು ಸಲ್ಲಿಸಿದ ಅಮೋಘ ಸೇವೆಗಾಗಿ ನಾವೆಲ್ಲರು ಹಾರ್ದಿಕವಾಗಿ ಅಭಿನಂದಿಸುತ್ತೇವೆ".[೫೩]

ಪಂಡಿತಪ್ಪನವರ ಕಾರ್ಯವ್ಯಾಪ್ತಿ ತುಂಬ ವಿಶಾಲವಾಗಿತ್ತು. ಅದರಲ್ಲೂ ಅವರು ಮುಂಬಯಿ ಪ್ರಾಂತ್ಯದಲ್ಲಿ ಲೇಜಿಸ್ಲೇಟೆಟಿವ್ ಕೌನ್ಸಿಲರ್ ಇದ್ದುದರಿಂದ ದೇಶದ ಯಾವುದೇ ಮೂಲೆಯಲ್ಲಿರುವ ಸಮಸ್ಯೆಯನ್ನು ಬಗೆಹರಿಸುತ್ತಿದ್ದರು.ಕಾರವಾರ ಜಿಲ್ಲೆಯೊಳಗಿನ ಒಕ್ಕಲಿಗರಿಗೂ ಸಹಾಯಮಾಡಿದ ಕಾರಣ ರೈತರಿಗೆ ಒಳ್ಳೆಯ ಪ್ರಯೋಜನಗಳಾದವು. ಇದನ್ನು ತಿಳಿದ ಮಹಾತ್ಮಾಗಾಂಧಿಜಿಯವರು ಕೆಳಗಿನಂತೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

"ಕರ್ನಾಟಕದಲ್ಲಿ ಸಿರ್ಸಿ ಮತ್ತು ಸಿದ್ಧಾಪೂರ ತಾಲೂಕುಗಳಲ್ಲಿಯ ಒಕ್ಕಲಿಗರು ಕಷ್ಟ ಸ್ಥಿತಿಯಲ್ಲಿರುವುದರಿಂದ ಸಹಾಯವನ್ನು ಬೇಡಿದರು. ಕರಬಂದೀ ಚಳುವಳಿಯು ಇದ್ದಿದ್ದಿಲ್ಲ. ಕಾಯಿದೆ ಕೌನ್ಸಿಲದ ಮೆಂಬರರಾದ ಮಿ. ಚಿಕ್ಕೋಡಿಯವರ ಮುಖಾಂತರ ಅಧಿಕಾರಸ್ಥರ ಕಡೆಗೆ ಸಹಾಯದ ಬಗ್ಗೆ ಪ್ರಯತ್ನಗಳಾದವು. ಸಹಾಯದ ಆಶ್ವಾಸನವು ದೊರಕಿತು ಮತ್ತು ಕೆಲವು ಮಟ್ಟಿಗೆ ಸಹಾಯವು ಕೊಡಲ್ಪಟ್ಟಿತು".[೫೩] ಒಬ್ಬ ಕನ್ನಡಿಗ ಮುಂಬಯಿ ಕಾಯಿದೆ ಮಂಡಲದ ಸದಸ್ಯರಾಗಿ ರೈತರ ಕಷ್ಟ–ನಷ್ಟಗಳನ್ನು ಅರಿತುಕೊಂಡು, ಪರಿಹಾರೋಪಾಯಗಳನ್ನು ಸೂಚಿಸಿ ಸ್ವತಃ ಮಹಾತ್ಮಾ ಗಾಂಧೀಜಿಯವರಿಂದ ಹೌದೆನ್ನಿಸಿಕೊಂಡಿದ್ದು ಕನ್ನಡಿಗರ ಹೆಮ್ಮೆಯೇ ಸರಿ. ಹೀಗೆ ಪಂಡಿತಪ್ಪನವರು ರೈತರ ಅನೇಕ ಸಂಘ, ಸಂಸ್ಥೆ, ಸಮಿತಿಗಳಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಅವುಗಳಲ್ಲಿ ಸಾಂಗಲಿ ಸಂಸ್ಥಾನ ರೈತ ಅಸೆಂಬ್ಲಿಯ ಸದಸ್ಯ (೧೯೩೫), ಮಿರಜ(ಕಿರಿಯ) ಸಂಸ್ಥಾನ ರೈತ ಅಸೆಂಬ್ಲಿಯ ಸದಸ್ಯ(೧೯೪೩), ಬೆಳಗಾವಿಯ ಗ್ರಾಮೀಣ ಅಭಿವೃದ್ಧಿಯ ದನಗಳ ಪ್ರದರ್ಶನ ಸಮಿತಿ, ಉಪಸಮಿತಿಯ ಸದಸ್ಯ, ಎಡೂರ ಹಾಗೂ ಅಥಣಿಗಳಲ್ಲಿ ಜರುಗಿದ ದನಗಳ ಪ್ರದರ್ಶನಗಳ ಅಧ್ಯಕ್ಷ, ಬೈಲಹೊಂಗಲದಲ್ಲಿ ನೆರೆದ ಸಂಪಗಾಂವ ತಾಲೂಕ ರೈತ ಸಮ್ಮೇಲನ ಅಧ್ಯಕ್ಷ(೧೯೩೪), ಬೆಳಗಾವಿಯಲ್ಲಿ ಸೇರಿದ ಅಖಿಲಭಾರತ ಗೋ ಸಮ್ಮೇಳನದ ಸ್ವಾಗತಾಧ್ಯಕ್ಷ (೧೯೨೪)ರಾಗಿ ಅನೇಕ ರೈತಪರ ಕಾರ್ಯಗಳನ್ನು ಮಾಡಿದುದಲ್ಲದೆ, ರೈತಾಪಿ ವರ್ಗದ ಎಷ್ಟೋ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ.

೪.೨.೧೮. ಬಾರ್ಡೋಲಿ ಚಳುವಳಿ-೧೯೨೮:

೧೯೨೮ರಲ್ಲಿ ಬಾರ್ಡೋಲಿ ತಾಲೂಕಿನಲ್ಲಿ ಸರಕಾರವು ಇರುವ ಕರಕ್ಕಿಂತ ಶೇ.೨೦ರಷ್ಟು ಹೆಚ್ಚಿಸಿತ್ತು. ಇದು ರೈತರಿಗೆ ಆರ್ಥಿಕ ಹೊರೆಯಾಗಿತ್ತು. ಈ ಸಂಕಷ್ಟವನ್ನು ಕೇಳಲು ಕೋರ್ಟ್ ನಿರಾಕರಿಸಿತು. ಹೀಗಾಗಿ ಅನಿವಾರ್ಯವಾಗಿ ಬಾರ್ಡೋಲಿಯ ಪ್ರಜೆಗಳು ಮುಂಬಯಿಯ ಕೌನ್ಸಲ್‌ರಾದ ಪಂಡಿತಪ್ಪನವರ ಸಹಾಯ ಯಾಚಿಸಿದರು. ಸರಕಾರದ ವಿರುದ್ಧ ಸತ್ಯಾಗ್ರಹದ ಮುಖಂಡತ್ವವನ್ನು ವಹಿಸಿಕೊಂಡಿದ್ದ ಪಂಡಿತಪ್ಪನವರು ಸರಕಾರಕ್ಕೆ ರೈತರಿಗೆ ಆದ ಸಂಕಷ್ಟಗಳನ್ನು ಮನವರಿಕೆ ಮಾಡಿಕೊಟ್ಟರು. ದೇಶದ ಬೆನ್ನೆಲುಬಾದ ರೈತರಿಗೆ ಕಷ್ಟ ಬಂದೊದಗಿದರೆ ದೇಶದಲ್ಲಿ ಪರಿಸ್ಥಿತಿ ಬಿಗಡಾಯಿಸುತ್ತದೆ. ಅನ್ನನೀಡುವ ರೈತನ ಬೆನ್ನಮೇಲೆ ಸರಕಾರ ಏರಿ ಕುಳಿತರೆ ರೈತ ಬದುಕಲು ಸಾಧ್ಯವಿಲ್ಲ ಎಂದು ಅವರು ರೈತರ ಹೋರಾಟಕ್ಕೆ ಹೆಗಲು ಕೊಟ್ಟು ನಿಂತರು. ಪಂಡಿತಪ್ಪನವರ ಉಗ್ರ ಹೋರಾಟದಿಂದ ಬಾರ್ಡೋಲಿ ಚಳುವಳಿ ಯಶಸ್ವಿಯಾಯಿತು.[೫೪]

ತಮ್ಮ ಪರವಾಗಿ ಹೋರಾಡಿದ ಪಂಡಿತಪ್ಪನವರಿಗಾಗಿ ರೈತರು ೧೯೨೮ ಆಗಸ್ಟ್ ೨೧ರಂದು ಅಭಿನಂದನಾಪರ ಸಭೆಯನ್ನು ಕರೆದಿದ್ದರು. ಸಭೆಯ ಅಧ್ಯಕ್ಷ ಸ್ಥಾನವನ್ನು ತಾತ್ಯಾಸಾಹೇಬ ಕೇಳ್ಕರ್ ಅವರು ವಹಿಸಿದ್ದರು. ಸರಕಾರ ಯೋಚಿಸುತ್ತಿದ್ದ ಮಾಪನ ಆಧಾರಿತ ಕರ ನೀಡುವ ಕಾಯಿದೆಯನ್ನು ವಿರೋಧಿಸುವ ಮನೋಭಾವ ಪಂಡಿತಪ್ಪನವರದಾಗಿತ್ತು. ರೈತ ನೆಮ್ಮದಿಯಿದ್ದರೆ ದೇಶ ನೆಮ್ಮದಿಯಿರುತ್ತದೆ[೫೫] ಎಂಬುದು ಪಂಡಿತಪ್ಪನವರ ಸ್ಪಷ್ಟ ನಿಲುವಾಗಿತ್ತು.

೪.೨.೧೯. ರೈತರ ಪರ ಅಭಿಪ್ರಾಯ:

೧೯೨೨ರಲ್ಲಿ ಪ್ರಾಥಮಿಕ ಶಿಕ್ಷಣ ಸಮಿತಿಯವರು ಬಹುಮತದಿಂದ ಲೋಕಲ್ ಫಂಡದ ಒಂದು ಆಣೆ ಸೆಸ್ಸನ್ನು ಏರಿಸಬೇಕೆಂದು ವಿಚಾರ ನಡೆಸಿದ್ದರು. ಸ್ಥಾನಿಕ ಸ್ವರಾಜ್ಯಸಂಸ್ಥೆಗಳ ಮಂತ್ರಿಗಳಾದ ಖಾನಬಹದೂರ ಹಿದಾಯತುಲ್ಲಾ ಇವರು ಪುಣೆಯಲ್ಲಿ ಭಾಷಣ ಮಾಡುವಾಗ ಇದನ್ನು ಹೇಳಿದರು. ಬಡ ಒಕ್ಕಲಿಗರ ಮೇಲೆ ಕರ ಹೇರುವ ಈ ವಿಚಾರ ಕೇಳಿದ ಪಂಡಿತಪ್ಪನವರ ಮನಸ್ಸು ಮಮ್ಮಲ ಮರಗಿತು. ಏಕೆಂದರೆ ಒಕ್ಕಲಿಗರಿಗೆ ವ್ಯವಸಾಯದ ತೊಂದರೆಗಳು ಹೆಚ್ಚು. ಅವರು ಮೇಲಿಂದ ಮೇಲೆ ಗೋಳಾಡುತ್ತಿರುವುದನ್ನು ಅವರು ಕಂಡಿದ್ದರು. ಇದಕ್ಕೆ ಕಾರಣ ಒಕ್ಕಲಿಗರ ಬಡತನ ಮತ್ತು ನಿರಕ್ಷರತೆ ಆಗಿತ್ತು. ಹೀಗಾಗಿ ಸರಕಾರವನ್ನು ವಿರೋಧಿಸದ ಬಡ ಒಕ್ಕಲಿಗರ ಮೇಲೆ ಕರ ಹೇರುವುದನ್ನು ಪಂಡಿತಪ್ಪನವರು ವಿರೋಧಿಸಿದರು. ಅಷ್ಟೇ ಅಲ್ಲ, ತಮ್ಮ ಪತ್ರಿಕೆ 'ವಿಭಾಕರ' ದಲ್ಲಿ ಖಂಡಿಸಿ ಲೇಖನ ಬರೆದರು.

ಸರಕಾರದವರು ಆದಷ್ಟು ಒಕ್ಕಲಿಗರಿಗೆ ಸಹಾಯ, ಸಹಕಾರಗಳನ್ನು ಒದಗಿಸಿ ಅವರ ಬಡತನವನ್ನು ಹೋಗಲಾಡಿಸುವಂತೆ ಪ್ರಯತ್ನಿಸಬೇಕು. ಜೊತೆಗೆ ರೈತರೂ ಕೂಡ ಸರಕಾರವು ತಮ್ಮ ಮೇಲೆ ಮಾಡುವ ಅನ್ಯಾಯವನ್ನು ಸಹಿಸಿಕೊಂಡು, ಸುಮ್ಮನೆ ಕುಳಿತುಕೊಳ್ಳದೆ ರೈತಸಂಘಗಳನ್ನು ಮಾಡಿಕೊಳ್ಳಬೇಕು. ತಮ್ಮ ತಕರಾರುಗಳನ್ನು ಸುಸಂಘಟಿತ ಮಾರ್ಗದಿಂದ ಸರಕಾರದ ಎದುರಿಗೆ

ಮಂಡಿಸಬೇಕು. ಒಕ್ಕಲಿಗರ ಸಲುವಾಗಿ ಶ್ರಮಿಸುವ ಜನವಿಲ್ಲದ್ದನ್ನು ತಿಳಿದುಕೊಂಡು, ಸರಕಾರಕ್ಕೆ ಸ್ವತಃ ತಮ್ಮ ಅಳಲನ್ನು ತಿಳಿಸಿಕೊಡಬೇಕು ಎಂದು ಕಾಳಜಿಪೂರ್ವಕ ಮಾತುಗಳನ್ನು ಪಂಡಿತಪ್ಪನವರು ಹೇಳಿದ್ದಾರೆ.[೫೬]

ಈ ಎಲ್ಲ ವಿಚಾರಗಳಿಂದ ಪಂಡಿತಪ್ಪನವರು ಸರಕಾರಿ ಸಂಸ್ಥೆಗಳಲ್ಲಿ ಕಾರ್ಯಮಾಡಿದಾಗಲೂ, ಅವರ ವಿಚಾರಗಳು ಬಡ ಒಕ್ಕಲಿಗರ ಪರವಾಗಿದ್ದವು. ಇದಕ್ಕೆ ಸರಕಾರದ ವಿರೋಧ ಬಂದರೂ ಲೆಕ್ಕಿಸದೇ ಜನಹಿತದ ಪರವಾಗಿ ನಿಂತು ಅವರು ಕೆಲಸ ಮಾಡಿದರು.

೪.೨.೧.೧೦. ಮುಂಬಯಿ ಗ್ರಾಮಪಂಚಾಯತಿ ನಿಯಮಾವಳಿ:

ಪಂಡಿತಪ್ಪ ಚಿಕ್ಕೋಡಿಯವರು ಮುಂಬಯಿ ಲೇಜಿಸ್ಲೆಟಿವ್ ಕೌನ್ಸಿಲ್(ಶಾಸನಸಭೆಯ) ಸದಸ್ಯರಾಗಿದ್ದರು. ಅವರು ೧೯೨೪ರಲ್ಲಿ ಮುಂಬಯಿ ಗ್ರಾಮ ಪಂಚಾಯತಿಗಳ ಸುಧಾರಣೆಗೆ ಮೌಲಿಕ ಸಲಹೆಗಳನ್ನು ನೀಡಿದರು. ಅವರು ನೀಡಿದ ಸಲಹೆಗಳನ್ನು ಸರಕಾರವು ಮೆಚ್ಚಿತಲ್ಲದೆ ಅವುಗಳನ್ನು ಕಾರ್ಯರೂಪಕ್ಕೆ ತಂದಿತು. ಈ ವಿಷಯ ತಿಲಕರ ಪ್ರಸಿದ್ಧ ಪತ್ರಿಕೆ 'ಕೇಸರಿ'ಯಲ್ಲಿ ಹೀಗೆ ಪ್ರಕಟವಾಗಿದೆ.

"ಗ್ರಾಮೀಣ ಜನತೆಗೆ ಸ್ವರಾಜ್ಯದ ಶಿಕ್ಷಣ ಕೊಡುವುದು ಅವಶ್ಯವಿದೆ ಎಂಬ ಉದ್ದೇಶದಿಂದ ನೀರು ಪೂರೈಕೆ, ಆರೋಗ್ಯ, ಕೌಟುಂಬಿಕ, ಕ್ರಿಮಿನಲ್, ಆಸ್ತಿ ಸಂಬಂಧಿ ಇತರೆ ಸ್ಥಾನಿಕ ಕಾರ್ಯಗಳು ಹಳ್ಳಿಯಲ್ಲಿಯೇ ಆಗಬೇಕು. ಇದರಿಂದ ಹಳ್ಳಿಯ ಜನರು ಸ್ವತಃ ತಮ್ಮ ಜವಾಬ್ದಾರಿಯನ್ನು ಅರಿತು, ಸಂತೋಷದಿಂದ ಕಾರ್ಯಗಳನ್ನು ಮಾಡುವಂತಾಗುತ್ತಾರೆ. ಜಿಲ್ಲಾ ಲೋಕಲ್ ಬೋರ್ಡನ ಅಧ್ಯಕ್ಷರ ಶಿಫಾರಸ್ಸಿನ ಮೇಲೆ ಕಲೆಕ್ಟರರು ಗ್ರಾಮಪಂಚಾಯತಿಯಲ್ಲಿ ತೆರದಿದ್ದ ಹುದ್ದೆಗಳನ್ನು ತುಂಬಬೇಕು. ಯಾವುದೇ ಊರಿನಲ್ಲಿ ಕಾನೂನು ಪ್ರಕಾರ ಮತದಾರರಿದ್ದು, ೫೦ ಜನವಾದರೂ ಅಸ್ಪೃಶ್ಯರಿದ್ದರೆ, ಅವರಲ್ಲಿ ಒಬ್ಬ ಪ್ರತಿನಿಧಿ ಇರಬೇಕು. ಆ ಪ್ರತಿನಿಧಿಯನ್ನು ನೇರವಾಗಿ ಆಯ್ಕೆ ಮಾಡಿಕೊಳ್ಳಬೇಕು. ಎರಡು ತರಹದ ಪಂಚಾಯತಿಗಳಿದ್ದು ಅವುಗಳಲ್ಲಿ ದೊಡ್ಡ ಹಳ್ಳಿಗೆ ಒಂದು ಪಂಚಾಯತಿ ಅದನ್ನು ಸಾದಾ ಪಂಚಾಯತಿ ಎಂದು, ಇನ್ನೊಂದು ಕೆಲವು ಹಳ್ಳಿಗಳನ್ನು ಸೇರಿಸಿದ ಪಂಚಾಯತಿ 'ಸಂಘ ಪಂಚಾಯತಿ' ಎಂದು ಇರಬೇಕು. ದೊಡ್ಡ ಪಂಚಾಯತಿಯಲ್ಲಿ ೧ರಿಂದ ೫೦೦೦ ಜನರಿದ್ದರೆ, ಎರಡನೆಯ ಸಂಘ ಪಂಚಾಯತಿಯಲ್ಲಿ ೨೦೦೦ ಸಂಖ್ಯೆಯಲ್ಲಿರುವ ಜನರು ಇರಬೇಕು.[೫೭]

೪.೨.೧.೧೧. ಬ್ರಾಹ್ಮಣೇತರ ಯುವಕ ಪರಿಷತ್ತು(೧೯೩೩):

ಪಂಡಿತಪ್ಪನವರು ಬ್ರಾಹ್ಮಣೇತರರ ಚಳುವಳಿಯ ಮುಖಂಡರಾಗಿ ಸಾಕಷ್ಟು ಕೆಲಸಗಳನ್ನು ಮಾಡಿದರು. ೨೦ನೆಯ ಶತಮಾನದ ಎರಡನೆಯ ಹಾಗೂ ಮೂರನೆಯ ದಶಕಗಳಲ್ಲಿ ಈ ಚಳುವಳಿ ಮಹಾರಾಷ್ಟ್ರದಲ್ಲಿ ತೀವ್ರತರವಾಗಿ ನಡೆದಿತ್ತು. ಅದರ ಗಾಳಿ ಕರ್ನಾಟಕಕ್ಕೂ ಬೀಸಿತು. ಪಂಡಿತಪ್ಪನವರು ಪ್ರತ್ಯಕ್ಷವಾಗಿ ಈ ಚಳುವಳಿಯ ಮುಂದಾಳುತನ ವಹಿಸಿದ್ದರು. ಅಷ್ಟೇ ಅಲ್ಲ ಧಾರವಾಡದಲ್ಲಿ ೧೯೨೮ರ ಸುಮಾರಿಗೆ ಜರುಗಿದ ಪ್ರಥಮ ಕರ್ನಾಟಕ ಬ್ರಾಹ್ಮಣೇತರ ಪ್ರಾಥಮಿಕ ಶಾಲಾ ಶಿಕ್ಷಕರ ಸಮ್ಮೇಲನದ ಅಧ್ಯಕ್ಷತೆ ವಹಿಸಿದ್ದರು.

೧೯೩೩ರ ಆಗಸ್ಟ್ ೨೦ರಂದು ಮುಂಬಯಿಯಲ್ಲಿ ಬ್ರಾಹ್ಮಣೇತರ ಯುವಕ ಪರಿಷತ್ತು ಸೇರಬೇಕಾಗಿತ್ತು. ಆಗ ಈ ಸಮ್ಮೇಲನದ ಅಧ್ಯಕ್ಷತೆಗಾಗಿ ಮಹಾರಾಷ್ಟ್ರದಲ್ಲಿ ಅನೇಕ ಯುವ ಬ್ರಾಹ್ಮಣೇತರ ಮುಖಂಡರನ್ನು ಆಹ್ವಾನಿಸುವ ವಿಷಯ ಚರ್ಚೆಗೆ ಬಂದಿತು. ಆಗ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಲು ನಿರ್ಧರಿಸಲಾಯಿತು. ಆದರೆ ಅವರು ತಮ್ಮ ಮುಂದಿನ ಅಧ್ಯಯನಕ್ಕಾಗಿ ವಿಲಾಯತಿಗೆ ಹೋಗಬೇಕಾಗಿರುವುದರಿಂದ ಅಧ್ಯಕ್ಷ ಸ್ಥಾನಕ್ಕೆ ಗುರುವರ್ಯ ಅಣ್ಣಾಸಾಹೇಬ ಶಿಂಧೆ, ರಾಜಾಸಾಹೇಬ ಮುಧೋಳ, ಮದ್ರಾಸಿನ ಬೊಬ್ಬಿಲಿ ಮಹಾರಾಜರು, ಪಿ.ಸಿ.ರಾಯ್ ಮತ್ತು ಡಾ.ನಾಯಕ ಇವರ ಹೆಸರುಗಳು ಕೇಳಿಬಂದವು. ಅಣ್ಣಾಸಾಹೇಬ ಶಿಂಧೆಯವರು ಅಧ್ಯಕ್ಷ ಸ್ಥಾನವನ್ನು ನಿರಾಕರಿಸಿದರು. ಉಳಿದವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಮಿತಿಯು ಒಪ್ಪಿರಲಿಲ್ಲ. ಆಗ ಸಮಿತಿಯು ಚಿಕ್ಕೋಡಿ ಪಂಡಿತಪ್ಪನವರನ್ನೇ ಅಧ್ಯಕ್ಷರನ್ನಾಗಿ ಮಾಡಲು ನಿರ್ಧರಿಸಿತು. ಅದಕ್ಕೆ ಬ್ರಾಹ್ಮಣೇತರ ಯುವಪರಿಷತ್ತಿನ ಪ್ರಧಾನ ಕಾರ್ಯದರ್ಶಿ, ಅಡ್ವೋಕೇಟ್ ಜಿ.ವ್ಹಿ.ಮೊಕಾಶಿ ಅವರು ದಿನಾಂಕ ೧೩-೮-೧೯೩೩ರಲ್ಲಿ ಒಂದು ಜಾಹೀರ ಪ್ರಕಟಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಯೋಗ್ಯರಾದ ಪಂಡಿತಪ್ಪನವರನ್ನು ಹೀಗೆ ಸಮರ್ಥಿಸಿಕೊಂಡಿದ್ದಾರೆ:

"ದಿವಾನ ಬಹದ್ದೂರ ಲಠ್ಠೆ ಅವರು ಮಹಾರಾಷ್ಟ್ರದ ಒಬ್ಬ ಮುಖಂಡರು. ಅವರು ಬ್ರಾಹ್ಮಣೇತರ ಮುಖಂಡರಾಗಿದ್ದರಲ್ಲದೆ, ಅನೇಕ ಶಿಕ್ಷಣಸಂಸ್ಥೆಗಳ ಸಂಸ್ಥಾಪಕರು. ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತರು. ಹಿಂದಿನ ಕೊಲ್ಲಾಪುರ ಸಂಸ್ಥಾನದ ದಿವಾಣರಾಗಿದ್ದರು. ಮುಂಬಯಿ ಪ್ರಾಂತ್ಯದ ಮಂತ್ರಿಯೂ ಆಗಿದ್ದರು. ಅವರ ನಂತರ, ಅಷ್ಟಾಗಿ ರಾಜಕಾರಣವನ್ನು ಅರಿತವರು, ರಾಜ್ಯ ಸಂಸ್ಥೆಗಳನ್ನು ಅಧ್ಯಯನ ಮಾಡಿದವರು ಮತ್ತು ಅವುಗಳ ಬಗೆಗೆ ಮಾರ್ಮಿಕವಾಗಿ ತಮ್ಮ ವಿಚಾರಗಳನ್ನು ಅಭಿವ್ಯಕ್ತ ಪಡಿಸುವವರು, ಬರೆಯುವವರು ಪಂಡಿತಪ್ಪನವರು."[೨೮] ಮಹಾರಾಷ್ಟ್ರದವರು ಅಂಬೇಡ್ಕರರಿಗೆ ಸರಿಸಮಾನವಾದ ಪ್ರಭಾವಿ ವ್ಯಕ್ತಿತ್ವವನ್ನು ಗುರುತಿಸಿಕೊಂಡಿದ್ದು ಕರ್ನಾಟಕದ ಪಂಡಿತಪ್ಪನವರಲ್ಲಿ ಎಂಬುದು ಗಮನಾರ್ಹ.

ಪಂಡಿತಪ್ಪನವರು ಬ್ರಾಹ್ಮಣೇತರ ಪರಿಷತ್ತಿನ ಅಧ್ಯಕ್ಷರಾಗಿ ಪರಿಷತ್ತಿನ ಆಶಯಕ್ಕೆ ತಕ್ಕಂತೆ ಇಂಗ್ಲಿಷಿನಲ್ಲಿ ಭಾಷಣ ಮಾಡಿದರು. ಅವರ ಪ್ರಕಾರ 'ಬ್ರಾಹ್ಮಣೇತರ ಸಂಘಟನೆಯ ಉದ್ದೇಶ ಇನ್ನಿತರ ಸಮುದಾಯದವರನ್ನಾಗಲಿ ಅಥವಾ ಜನಾಂಗವನ್ನಾಗಲೀ ದ್ವೇಷಿಸುವುದಲ್ಲ. ಆದರೆ ಮುಂದುವರಿದ ಸಮುದಾಯ ಮತ್ತು ಬ್ರಾಹ್ಮಣೇತರ ಜನಾಂಗದ ಮಧ್ಯ ಆರೋಗ್ಯಕರವಾದ ಸಂಬಂಧವನ್ನು ಬೆಳೆಸಲು ಸಹಾಯಮಾಡುವ ಸೇತುವೆಯನ್ನು ನಿರ್ಮಿಸಿ ಅವರ ಜೊತೆಗೂಡಿ ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಸರ್ವತೋಮುಖವಾಗಿ ಬೆಳೆಯುವ ಉದ್ದೇಶ ಹೊಂದಿದೆ. 'ಬ್ರಾಹ್ಮಣೇತರ' ಎಂಬ ಶಬ್ದವನ್ನು ಉಪಯೋಗಿಸುತ್ತಿರುವುದು ಒಂದು ದುರ್ದೈವದ ಸಂಗತಿ. ಮೇಲ್ವರ್ಗದ ಸಮುದಾಯದವರಿಗಿಂತ 'ಬ್ರಾಹ್ಮಣೇತರ' ಸಮುದಾಯವು ಎದುರಿಸುತ್ತಿರುವ ಸಮಸ್ಯೆಗಳು ಅಪಾರ. ಇವು ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಇದರಿಂದ ಸಮಾಜದಲ್ಲಿ ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ

ನೆಲೆಯಲ್ಲಿ ಭಿನ್ನತೆಗಳನ್ನು ಕಾಣಬಹುದಾಗಿದೆ. ಈ ಭಿನ್ನತೆಗಳನ್ನು ಹೋಗಲಾಡಿಸುವಲ್ಲಿ ಶತಪ್ರಯತ್ನ ನಡೆದಿದ್ದರೂ ಅವು ಇನ್ನೂ ಜೀವಂತವಾಗಿರುವುದು ಖೇದಕರ ಸಂಗತಿ. ಈ ತಾರತಮ್ಯಗಳನ್ನು ಬ್ರಾಹ್ಮಣೇತರ ಸಂಘಟನೆಗಳು ಹೋಗಲಾಡಿಸಬೇಕು. ಮಾಂಟೆಗೊ ಜೇಮ್ಸ್‌ಫೋರ್ಡ್‌ರ ಸುಧಾರಣೆ ಕ್ರಮಗಳು ಜಾರಿಯಲ್ಲಿ ಬಂದಾಗ ಪೂರ್ಣವಲ್ಲದಿದ್ದರೂ ಸ್ವಲ್ಪಮಟ್ಟಿಗಾದರೂ ತಾರತಮ್ಯ ದೂರ ಮಾಡುತ್ತವೆ ಎಂದು ತಿಳಿಯಲಾಗಿತ್ತು. ಇಂದು ಬ್ರಾಹ್ಮಣೇತರರು ಸಂಪೂರ್ಣ ಅಸಂತುಷ್ಟರಾಗಿ, ಸಮಾಜದಲ್ಲಿ ಯಾವುದೇ ಭದ್ರತೆಯ ನೆಲೆಯಿಲ್ಲದೆ ಕೊಳೆಯುವಂತಾಗಿದೆ. ಆದ್ದರಿಂದ ಸಮಾಜದಲ್ಲಿ ಬ್ರಾಹ್ಮಣೇತರ ಸ್ಥಾನವನ್ನು ಗುರುತಿಸುವುದು ಅತ್ಯವಶ್ಯವಾಗಿದೆ. ಹೀಗಾದಲ್ಲಿ ಅವರ ತೊಂದರೆಗಳಿಗೆ ಪರಿಹಾರ ಕಂಡುಕೊಳ್ಳಲು ಸುಲಭವಾಗುತ್ತದೆ. ಮುಂಬಯಿ ಪ್ರಾಂತ್ಯದಲ್ಲಿ ೫೭%ರಷ್ಟು ಬ್ರಾಹ್ಮಣೇತರರಿದ್ದಾರೆ. ಇವರೆಲ್ಲ ಆರ್ಥಿಕವಾಗಿ ರಾಜಕೀಯವಾಗಿ ಹಾಗೂ ಧಾರ್ಮಿಕವಾಗಿ ವೈವಿಧ್ಯತೆಯನ್ನು ಹೊಂದಿದ್ದಾರೆ. ಇವರೆಲ್ಲ ತಮ್ಮ ಜೀವನೋಪಾಯಕ್ಕಾಗಿ ಕೂಲಿಯನ್ನೇ ಅವಲಂಬಿಸಿರುವ ಜನರಾಗಿದ್ದಾರೆ. ಬ್ರಾಹ್ಮಣೇತರರ ಬದುಕಿನ ಆದಾಯದ ಉನ್ನತಿ ಮತ್ತು ಅವನತಿಯು ಸಮಾಜದಲ್ಲಿನ ಬಂಡವಾಳಶಾಹಿಗಳನ್ನು ಅವಲಂಬಿಸಿತ್ತು. ಬಂಡವಾಳಶಾಯಿಗಳು ರಚಿಸಿರುವ ಕಾನೂನುಗಳನ್ನು ಹಾಗೂ ಸೂತ್ರಗಳನ್ನು ಒಪ್ಪಿಕೊಂಡು ಬ್ರಾಹ್ಮಣೇತರರು ಕೆಲಸ ಮಾಡಲು ಒಪ್ಪಬೇಕಾಗುತ್ತಿತ್ತು. ಹೀಗಾಗಿ ಸಮಾಜದಲ್ಲಿ ಆರ್ಥಿಕವಾಗಿ ಮೇಲ್ವರ್ಗ ಹಾಗೂ ಕೆಳವರ್ಗಗಳು, ನೌಕರಿವರ್ಗ ಮತ್ತು ಕೂಲಿವರ್ಗ ಎಂಬ ಬಿರುಕು ಕಾಣಿಸಿಕೊಂಡಿತು. ಸಮಾಜದಲ್ಲಿ ದಾಸ್ಯ ಅಥವಾ ಅಸಮಾಧಾನ ಒಂದು ಮುಖವಾದರೆ, ಆಶ್ರಯದಾತನೆಂಬ ಅಹಂಭಾವ ಅಥವಾ ದುರಹಂಕಾರ ಇನ್ನೊಂದು ಮುಖವಾಗಿತ್ತು. ಇಂತಹ ಹೀನಾಯ ಪರಿಸ್ಥಿತಿಯಲ್ಲಿ ಬಂಡವಾಳಶಾಹಿ ವರ್ಗದವರು ದುಡಿಯುವ ವರ್ಗದವರ ಉದ್ಧಾರ ಹಾಗೂ ಪ್ರಗತಿಯ ಬಗ್ಗೆ ಚಿಂತಿಸುವುದು ಅಸಾಧ್ಯವಾಗಿತ್ತು. ಇಂತಹ ಸಾಮಾಜಿಕ ಇರುವಿಕೆಯಲ್ಲಿ ಬ್ರಾಹ್ಮಣೇತರರು ಅನೇಕ ನ್ಯೂನತೆಗಳಿಂದ ಪಡಬಾರದ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಇಂತಹದರಲ್ಲಿ ಗ್ರಾಮೀಣ ಪ್ರದೇಶದ ಜನತೆಯ ಸ್ಥಿತಿಯಂತೂ ತುಂಬಾ ಚಿಂತಾಜನಕವಾಗಿದೆ. ಅವರಿಗೆ ಇರಲು ಸ್ವಚ್ಛ ವಾತಾವರಣವಿಲ್ಲ. ಕುಡಿಯಲು ಶುಚಿಯಾದ ನೀರಿಲ್ಲ. ವೈದ್ಯಕೀಯ ಸೌಲಭ್ಯ ಎಲ್ಲರಿಗೂ ನಿಲುಕುವುದಿಲ್ಲ. ಬ್ರಾಹ್ಮಣೇತರರಿಗೆ ಸಮಾಜದಲ್ಲಿ ಅವಕಾಶಗಳು ಸಿಗದೆ ಅನಾನುಕೂಲ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ.

ಪ್ರತಿಕೂಲಕರ ಆರ್ಥಿಕ ಪರಿಸ್ಥಿತಿಯ ಅಡಿಯಲ್ಲಿ ದಾಸ್ಯದಿಂದ ಕೆಲಸ ಮಾಡುತ್ತಿರುವ ಬ್ರಾಹ್ಮಣೇತರರ ಈ ಸ್ಥಿತಿಗೆ ಯಾರು ಹೊಣೆ? ಸಮಾಜದಲ್ಲಿ ಮಾನವತೆಯನ್ನು ಪರಿಣಾಮಕಾರಿಯಾಗಿ ಅಳವಡಿಸಿದ್ದೆಯಾದರೆ ನ್ಯೂನತೆಗಳಿರುವ ಪರಿಸ್ಥಿತಿ ಇರುತ್ತಿರಲಿಲ್ಲ. ಹಾಗೂ ಎಲ್ಲರಿಗೂ ಅವರ ಯೋಗ್ಯತೆಯನುಸಾರವಾಗಿ ಸಮಾನವಾದ ಅವಕಾಶ ದೊರೆಯುತ್ತಿದ್ದವು. ಯಾವಾಗ ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಅವನ ಹುಟ್ಟು ಅಥವಾ ಸಾಮಾಜಿಕ ಸ್ಥಾನಮಾನಗಳನ್ನು ಗಣನೆಗೆ ತೆಗೆದುಕೊಳ್ಳದೆ ತನಗೆ ದೈವದತ್ತವಾಗಿರುವ ಶಕ್ತಿ, ಸಾಮರ್ಥ್ಯ, ಜಾಣತನವನ್ನು ಪರಿಣಾಮಕಾರಿಯಾಗಿ ಹಾಗೂ

ಸಮಾನವಾಗಿ ಉಪಯೋಗಿಸಲು ಅವಕಾಶವಿರುತ್ತದೆಯೊ ಅಲ್ಲಿ ಎಲ್ಲರಿಗೂ ಸಮಾನ ಅವಕಾಶಗಳು ಲಭ್ಯವಾಗುತ್ತವೆ. ಕೇವಲ ಅವಕಾಶಗಳನ್ನು ಮಾತ್ರ ಒದಗಿಸುವುದರಿಂದ ಬ್ರಾಹ್ಮಣೇತರರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಸುಧಾರಣೆಗೊಳ್ಳುವುದಿಲ್ಲ; ಅವನಿಗೆ ದೊರೆಯಬೇಕಾದ ಗೌರವ, ಘನತೆಗಳನ್ನು ಪಡೆದುಕೊಳ್ಳಲಾಗುವುದಿಲ್ಲ. ಟ್ವೆನೆಯ ಹೇಳಿಕೆಯ ಪ್ರಕಾರ "ಎಲ್ಲರಿಗೂ ಎಲ್ಲ ತರದ ಜೀವನದ ಅಭಿವೃದ್ಧಿ ಮಾರ್ಗಗಳು ಸರಿಸಮಾನವಾಗಿ ತೆರೆದಿರಬೇಕು." ಒಡೆಯನಂತೆ ಕೂಲಿಕಾರನಿಗೂ ಕೂಡಾ ತನ್ನ ಶಕ್ತಿ, ಸಾಮರ್ಥ್ಯ ಅನುಸಾರ ತನ್ನ ಜಾಣ್ಮೆಯನ್ನು ಉಪಯೋಗಿಸಿಕೊಳ್ಳುವ ಅವಕಾಶಗಳಿರಬೇಕು. ಅವಕಾಶಗಳು ಸರಿಸಮಾನವಾಗಿ ಇರದ ಕಾರಣ ಶ್ರೀಮಂತರು ಬಡವರನ್ನು ಶೋಷಣೆಗೆ ಒಳಪಡಿಸುವಂಥ ಆರೋಗ್ಯವಂತ ಸಮಾಜವಿಲ್ಲದಿರುವ ಈ ಪರಿಸ್ಥಿತಿಯಲ್ಲಿ ಎಲ್ಲರಿಗೂ ಸರಿಸಮಾನವಾದ ಅವಕಾಶವಿದೆ ಎಂಬುದು ಹಾಸ್ಯಾಸ್ಪದ. ಈ ರೀತಿಯಾಗಿ ಸಮಾನತೆಯನ್ನು ಎಲ್ಲರಿಗೂ ನೀಡಲಾಗುವುದು ಎಂಬ ನಂಬಿಕೆಯ ಮಾತು, ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಸ್ವಾಗತ ಬಯಸಿದ ಅತಿಥಿಗಳಿಗೆ ಸೌಜನ್ಯದ ನೆಪದಲ್ಲಿ ಬರಲು ಆಹ್ವಾನ ನೀಡಿದ ಅಧಿಕಪ್ರಸಂಗತನದಂತಿದೆ. ಕೇವಲ ಸಮಾನ ಅವಕಾಶಗಳು ಅಸ್ತಿತ್ವದಿಂದ ಬ್ರಾಹ್ಮಣೇತರರ ಸ್ಥಿತಿಗತಿಗಳ ಕಾರ್ಯತಃ ಸುಧಾರಣೆಗೊಳ್ಳುವುದಿಲ್ಲ. ಆಟದ ನಿಯಮಗಳಿಂದ ಕೆಲವು ಆಟಗಾರರಿಗೆ ನ್ಯಾಯ ಒದಗಿಸಿದೆಂದರ್ಥವಲ್ಲ. ಈಗಿನ ಸಾಮರ್ಥ್ಯಕ್ಕನುಗುಣವಾಗಿ ದುಡಿಮೆ ದೊರೆಯುತ್ತಿದೆ ಎಂದು ಹೇಳುವುದು ಅಕ್ಷರಶಃ ತಪ್ಪು. ಪಂದ್ಯದಲ್ಲಿ ತರಬೇತಿ ಪಡೆಯದೆ ಭಾಗವಹಿಸಿದಾಗ ಪಂದ್ಯದ ಸ್ಪರ್ಧೆಯಲ್ಲಿ ಬಂದ ಮೊದಲಿಗ ತನ್ನ ಸಾಮರ್ಥ್ಯ, ಶಕ್ತಿಯನುಸಾರವಾಗಿ ಮುಂಚೂಣಿಯಲ್ಲಿದ್ದಾನೆ ಎಂದು ಹೇಳುವುದು ಎಷ್ಟು ಸಮಂಜಸವೆನಿಸಬಹುದು? ಸಮಾನತೆಯ ಅವಕಾಶ ಹಾಗೂ ತೆರೆದ ಸ್ಪರ್ಧೆ ಎಂಬ ನಾಟಕದ ತೆರೆಯ ಹಿಂದೆ ಪೌರೋಹಿತಶಾಹಿಯ ಸಮಾಜದಲ್ಲಿ ಅಲ್ಪಸಂಖ್ಯೆಯಲ್ಲಿರುವ ಶ್ರೀಮಂತರ ಸಂಘಸಂಸ್ಥೆಗಳಿಂದ ರಚಿಸಿದ ಕಾನೂನುಗಳ ಕೈವಾಡವಿದೆ. ಜನರ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಉಪಯೋಗ ಮಾಡಿಕೊಳ್ಳುವ ಅವಕಾಶವಿದೆ. ಅಲ್ಲದೆ ಶೈಕ್ಷಣಿಕ ಕ್ಷೇತ್ರದಲ್ಲಿಯೂ ಹುದ್ದೆಗಳನ್ನು ಗಿಟ್ಟಿಸಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿರುವ ಬ್ರಾಹ್ಮಣೇತರರ ಮಕ್ಕಳು ಉದ್ಯೋಗ ಅವಕಾಶ ಪಡೆಯಲು ಹರಸಾಹಸ ಪಡಬೇಕಾಗುತ್ತದೆ. ಅಲ್ಲದೆ ಕಡಿಮೆ ಸಂಭಾವನೆ ನೀಡುವ ಹುದ್ದೆಗೆ ಅವರ ಮಕ್ಕಳನ್ನು ಒತ್ತಾಯ ಮಾಡಿ ಅನಿವಾರ್ಯವಾಗಿ ಕಳಿಸಬೇಕಾಗುತ್ತದೆ.

ಎಲ್ಲಿಯತನಕ ಪ್ರತಿಕೂಲ ಪರಿಸ್ಥಿತಿ ಇರುತ್ತದೆಯೊ, ಅಲ್ಲಿಯ ತನಕ ಬ್ರಾಹ್ಮಣೇತರರು ಮುಂದುವರಿದ ವರ್ಗಗಳ ಜೊತೆಗೆ ಹೋರಾಡಲು ಸಾಧ್ಯವಿಲ್ಲ. ಕೈಗಾರಕೊದ್ಯಮಿಗಳು ಮಾನವೀಯ ದೃಷ್ಟಿಕೋನ ಹೊಂದಿ ಎಲ್ಲರಿಗೂ ಅನುಕೂಲಕರವಾದ ಪರಿಸ್ಥಿತಿಯನ್ನು ಸಮಾನವಾಗಿ ನೀಡಬೇಕು. ವ್ಯಕ್ತಿಯಿಂದ ವ್ಯಕ್ತಿಯು ವಿಭಿನ್ನಕೌಶಲ್ಯ ಹಾಗೂ ಜಾಣತನದಿಂದಾಗುವ ಭಿನ್ನತೆಗಳನ್ನು ಹೋಗಲಾಡಿಸಬೇಕೆಂದಲ್ಲ. ಬದಲಾಗಿ ಸಮಾಜದ ಏಳ್ಗೆಗಾಗಿ ದುಡಿಯುತ್ತಿರುವ ಶ್ರಮಜೀವಿಗಳಿಗೆ

ಒಳ್ಳೆಯ ಪ್ರಗತಿಪರನಾಗಿ ಬೆಳೆಯಲು ಸಮಾನ ಅವಕಾಶ ಮಾಡಿಕೊಡಲು ಪಂಡಿತಪ್ಪನವರು ಇಡೀ ತಮ್ಮ ಭಾಷಣದುದ್ದಕ್ಕೂ ಕಳಕಳಿಯ ವಿನಂತಿಯನ್ನು ಮಾಡಿಕೊಳ್ಳುತ್ತಾರೆ[೫೯].

ಅಷ್ಟೇ ಅಲ್ಲ ಬ್ರಾಹ್ಮಣೇತರ ಯುವಕರ ಸಂಘಟನೆಯ ಬಗ್ಗೆ ಪಂಡಿತಪ್ಪನವರು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸುತ್ತಾರೆ. ತಮ್ಮ ಸಮುದಾಯದವರಿಗೆ ಸೇವೆ ಸಲ್ಲಿಸಲು ಅವಕಾಶವಿರದ ಕಾರಣ ಯುವಜನರು ಅಸಂತುಷ್ಟರಾಗಿದ್ದಾರೆ ಹಾಗೂ ನಿರಾಶರಾಗಿದ್ದಾರೆ. ಈ ಉತ್ಸಾಹಿ ಯುವಕರಲ್ಲಿನ ಶಕ್ತಿಯನ್ನು ಉಪಯೋಗಿಸಿಕೊಳ್ಳಬೇಕಾದರೆ ಅನೇಕ ರಚನಾತ್ಮಕ ಯೋಜನೆಗಳನ್ನು ಹಮ್ಮಿಕೊಂಡು ಅವರಿಗೆ ಅವಕಾಶ ನೀಡಬೇಕು. ರಾಜಕೀಯ ಪಕ್ಷಗಳು ಚುನಾವಣೆಗೆ ನಿಲ್ಲಲು ಹಣಾಹಣಿ ನಡೆಸಿವೆ. ಬ್ರಾಹ್ಮಣೇತರ ಯುವಜನ ಇದರಿಂದ ದೂರವಿರುವುದನ್ನು ನೋಡಿ ಭಯಗೊಂಡ ಈ ಸಂಘಟನೆಯನ್ನು ಸಂಘಟಿಸಿರುವರು.

ಶೈಕ್ಷಣಿಕ ರಂಗದಲ್ಲಿ ಹಿಂದುಳಿದ ಮುಸಲ್ಮಾನರಿಗೆ ಕೊಟ್ಟ ಸೌಲಭ್ಯಗಳನ್ನು ಕೂಡ ಸರಕಾರದವರು ಬ್ರಾಹ್ಮಣೇತರರಿಗೆ ಕೊಟ್ಟಿಲ್ಲ. ಅಲ್ಲದೆ ಶಿಷ್ಯವೇತನವನ್ನು ನೀಡುವಲ್ಲಿಯೂ ಕೂಡ ಸರಕಾರ ಮಲತಾಯಿ ಧೋರಣೆಯನ್ನು ಅನುಸರಿಸಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಬ್ರಾಹ್ಮಣೇತರರಿಗೆ ಆದ ಅನ್ಯಾಯವನ್ನು ಸರಿಪಡಿಸುವ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ಶೋಷಣೆಗೊಳಗಾದ ಜನರ ಸ್ಥಿತಿಯಂತೂ ಇನ್ನೂ ಚಿಂತಾಜನಕವಾಗಿದೆ. ಅವರ ಜೀವನದಲ್ಲಿ ಅತೃಪ್ತಿಯ ಹೊಗೆಯಾಡುತ್ತಿದೆ. ಈ ಸಮಸ್ಯೆಯನ್ನು ಕಡೆಗಣಿಸದೆ ಲಕ್ಷ್ಯವಹಿಸಬೇಕಾದದ್ದು ಅತ್ಯವಶ್ಯವಾಗಿದೆ' ಎಂಬುದು ಪಂಡಿತಪ್ಪನವರ ಅಭಿಪ್ರಾಯವಾಗಿತ್ತು.

ಪಂಡಿತಪ್ಪನವರ ಈ ಎಲ್ಲ ವಿಚಾರಗಳನ್ನು ಪರಾಮರ್ಶಿಸಿದಾಗ ಅವರು ಬ್ರಾಹ್ಮಣೇತರ ಸಮಾಜ ಅನುಭವಿಸುತ್ತಿರುವ ಅನ್ಯಾಯ ನೋವುಗಳನ್ನು ಕುರಿತು ಅದಕ್ಕೆ ಸ್ಪಂದಿಸಿರುವುದು ಸ್ಪಷ್ಟವಾಗುತ್ತದೆ. ಜೊತೆಗೆ ಸಮಾಜದಲ್ಲಿನ ತಾರತಮ್ಯನೀತಿ ಅದರ ಪ್ರಗತಿಗೆ ಅಡ್ಡಿಯಾಗುತ್ತಿರುವುದನ್ನು ಅವರು ಗಮನಿಸಿದ್ದಾರೆ. ಅಷ್ಟೇ ಅಲ್ಲ, ಸರಕಾರವು ಈ ಪರಿಸ್ಥಿತಿಯನ್ನು ಕಣ್ತೆರೆದು ನೋಡಿ ಸಮಸ್ಯೆಗೆ ಪರಿಹಾರವೊದಗಿಸಬೇಕೆಂದು ಈ ವೇದಿಕೆಯ ಮೂಲಕ ಆಗ್ರಹ ಪಡಿಸಿದ್ದಾರೆ.

ಇಪ್ಪತ್ತನೆಯ ಶತಮಾನದ ಆದಿಭಾಗ ಧರ್ಮದ ಹೆಸರಿನಲ್ಲಿ ಅನ್ಯಾಯ, ದೌರ್ಜನ್ಯಗಳು ನಡೆಯುತ್ತಿದ್ದ ಕಾಲ. ಇವುಗಳನ್ನು ಹೊಡೆದೊಡಿಸಿ ಜನತೆಯಲ್ಲಿ ಜಾಗೃತಿಯನ್ನುಂಟುಮಾಡಲು ಅನೇಕ ಮುಖಂಡರು ಬೆಂಬಲವಾಗಿ ನಿಂತರು. ಅವರಲ್ಲಿ ಚಿಕ್ಕೋಡಿ ಪಂಡಿತಪ್ಪನವರೂ ಒಬ್ಬರು.

೪.೨. ೩. ಧಾರ್ಮಿಕ:

೪.೨.೩.೧. ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆ

ಶ್ರೀಮದ್ವೀರಶೈವ ಮಹಾಸಭೆಯ ಸ್ಥಾಪನೆ ಕನ್ನಡದ ನೆಲದಲ್ಲಿ ಜರುಗಿದ ಒಂದು ಅಪೂರ್ವಘಟನೆ ಎನ್ನಬೇಕು. ಲಿಂಗಾಯತ ಸಮಾಜದ ಸಮಗ್ರ ನಿರ್ಮಾಣ ಈ ಸಂಸ್ಥೆಯ ಉದ್ದೇಶ. ಕಳೆದ ಶತಮಾನದ ಆದಿಭಾಗದಲ್ಲಿ ಕರ್ನಾಟಕ ಏಕೀಕರಣ, ಸ್ವಾತಂತ್ರ್ಯ ಸಂಗ್ರಾಮಗಳು ಒಂದು ಕಡೆ ನಡೆದಿದ್ದರೆ; ಸಾಮಾಜಿಕ-ಧಾರ್ಮಿಕ ಏಕೀಕರಣಗಳು ಮತ್ತೊಂದು ಕಡೆ ಕಾಣಿಸಿಕೊಳ್ಳಹತ್ತಿದವು. ಇದೇ

ಅವಧಿಯಲ್ಲಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಶೋಷಣೆಗೆ ಒಳಗಾಗುತ್ತ ಬಂದಿದ್ದ ಲಿಂಗಾಯತರ ಸಂಕಷ್ಟವನ್ನು ಸಮಾಜದ ಕೆಲವು ಮುಖಂಡರು, ಧರ್ಮಗುರುಗಳು, ಮುಖ್ಯವಾಗಿ ಹಾನಗಲ್ಲ ಶ್ರೀ ಕುಮಾರಸ್ವಾಮಿಗಳು ಗಮನಿಸಿದರು. ಅದರ ಫಲವಾಗಿ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭಾ ಮತ್ತು ಶಿವಯೋಗಮಂದಿರಗಳು ಅಸ್ತಿತ್ವಕ್ಕೆ ಬಂದವು. ಮೊದಲನೆಯದು ಇಡೀ ಲಿಂಗಾಯತ ಸಮಾಜದ ಮಹತ್ವವನ್ನು ಮನಗಾಣಿಸಿ ಲಿಂಗಾಯತರಿಂದಲೇ ಸಮಾಜೋದ್ಧಾರ ಕಾರ್ಯಗಳತ್ತ ಮುನ್ನಡೆಸುವ ಸಂಸ್ಥೆಯಾದರೆ, ಎರಡನೆಯದು ಲಿಂಗಾಯತ ಮಠಮಾನ್ಯಗಳಿಗೆ ಸೂಕ್ತರೆನಿಸಬಲ್ಲ ವಟುಗಳನ್ನು ಆಯ್ಕೆ ಮಾಡಿ, ಅವರಿಗೆ ಧರ್ಮತತ್ವಗಳ ಬೋಧನೆ ನೀಡಿ, ಅವುಗಳ ಅನುಷ್ಠಾನಕ್ರಮಗಳನ್ನು ಪ್ರಯೋಗಗಳ ಮೂಲಕ ಬಿಂಬಿಸಿ, ಅವರನ್ನು ಪೀಠಗಳ ಸೇವೆಗೆ ಅಣಿಗೊಳಿಸುವುದಾಗಿತ್ತು.

೧೯೦೪ರಲ್ಲಿ ಅಸ್ತಿತ್ವಕ್ಕೆ ಬಂದ ಅಖಿಲ ಭಾರತ ವೀರಶೈವ ಮಹಾಸಭೆಗೆ ಅಂದಿನ ಮುಂದಾಳುಗಳಾಗಿದ್ದ ಸಿರಸಂಗಿ ದೇಸಾಯಿಯವರು, ವಂಟಮುರಿ ಸಂಸ್ಥಾನದ ಅಧಿಪತಿಗಳು, ಸರಕಾರಿ ಅಧಿಕಾರಿಗಳಾಗಿದ್ದ ರುದ್ರಗೌಡರು, ನಾಡಿನ ಶಿಕ್ಷಣತಜ್ಞರು ಹಾಗೂ ಶ್ರೇಷ್ಠ ಸಾಹಿತಿಗಳು ಬೆಂಬಲವಾಗಿ ನಿಂತರು.

ಈ ಸಮಾಜೋ-ಧಾರ್ಮಿಕ ಕೈಂಕರ್ಯಕ್ಕೆ ಮನಸೋತವರು ಚಿಕ್ಕೋಡಿ ಕುಟುಂಬದ ತಮ್ಮಣ್ಣಪ್ಪನವರು. ಮೊದಮೊದಲು ಸ್ವಾಮಿಗಳ ಈ ಕಾರ್ಯವನ್ನು ಸಂಶಯದೃಷ್ಟಿಯಿಂದ ಕಂಡ ತಮ್ಮಣ್ಣಪ್ಪನವರು ನಂತರ ಸಾರಾಸಾರ ಆಲೋಚಿಸಿದರಲ್ಲದೆ, ಬಹುವಾಗಿ ಮೆಚ್ಚಿಕೊಂಡರು. ಅಲ್ಲದೆ ತಮ್ಮ ಅಣ್ಣನ ಮಗನಾದ ಪಂಡಿತಪ್ಪ ಮತ್ತು ಅಳಿಯನಾದ ಹಳಕಟ್ಟಿಯವರು ಈ ಸಂಸ್ಥೆಯಲ್ಲಿ ಸಂಪೂರ್ಣವಾಗಿ ಸೇವೆ ಸಲ್ಲಿಸುವ ಹಾಗೆ ಮಾಡಿದರು.

ಪಂಡಿತಪ್ಪನವರು ಅಖಿಲಭಾರತ ವೀರಶೈವ ಮಹಾಸಭೆಯ ಆಜೀವ ಸದಸ್ಯರಾಗಿದ್ದರು. ಪ್ರತಿನಿಧಿಯಾಗಿ ಪಾಲ್ಗೊಳ್ಳುತ್ತಿದ್ದರು. ಉಪಸ್ಥಿತ ಗಣ್ಯರಲ್ಲಿ ಒಬ್ಬರಾಗಿರುತ್ತಿದ್ದರು. ವೀರಶೈವ ತರುಣ ಸಮ್ಮೇಳನ, ಜಿಲ್ಲಾ, ತಾಲ್ಲೂಕ, ಸಂಸ್ಥಾನಗಳಲ್ಲಿ ಜರುಗಿದಾಗ ಭಾಗವಹಿಸುತ್ತಿದ್ದರು. ಮೈಸೂರು ಜಿಲ್ಲೆಯ ಕೊಳ್ಳೆಗಾಲದ ತಾಲ್ಲೂಕಿನಲ್ಲಿ ನವೆಂಬರ್ ೧೬, ೧೯೩೪ ಭಾನುವಾರದಂದು ನಡೆದ ವೀರಶೈವ ಮಹಾಸಭೆಗೆ ಪಂಡಿತಪ್ಪ ಚಿಕ್ಕೋಡಿಯವರೇ ಅಧ್ಯಕ್ಷರಾಗಿದ್ದರು. ಇವರ ನೇತೃತ್ವದಲ್ಲಿ ಕೆಲವೊಂದು ಮಹತ್ವದ ಠರಾವುಗಳು ತೀರ್ಮಾನವಾದವು. ಅವುಗಳೆಂದರೆ,

ಅ) ಶ್ರೀ ಪ್ರಭುದೇವಾದಿ ನಿರಂಜನಮೂರ್ತಿಗಳು, ಶ್ರೀ ರೇಣುಕಾದಿ ಆಚಾರ್ಯರು, ಶ್ರೀ ಬಸವಾದಿ ಪ್ರಮಥರೂ ಬೋಧಿಸಿರುವ, ವೀರಶೈವ ಮತತತ್ವಗಳು ಒಂದೇ ಆಗಿರುವದರಿಂದ ಅವು ಇಡೀ ವೀರಶೈವ ಸಮಾಜಕ್ಕೇನೇ ಮಾನ್ಯವಾಗಿರುತ್ತವೆಯಲ್ಲದೇ, ಶ್ರೀ ಗುರುವರ್ಗ ಮತ್ತು ವಿರಕ್ತ ವರ್ಗವೇ ಆದಿಯಾಗಿ ಸಮಸ್ತ ವೀರಶೈವರಿಗೂ ಶ್ರೀ ಬಸವಾದಿ ಪ್ರಮಥರು ಪೂಜ್ಯರೂ ವಂದ್ಯರೂ ಆಗಿರುತ್ತಾರೆ.

ಬ) ಈ ಮಹಾವಿಭೂತಿಗಳನ್ನು ನಿಂದಿಸುವ ನಾನಾ ಬಗೆಯ ಚಳುವಳಿಗಳು ಸಮಾಜದಲ್ಲಿ ಇತ್ತೀಚೆಗೆ ನಡೆದು ಸಮಾಜಕ್ಕೆ ಘಾತಕವಾಗಿರುವುದರಿಂದ ಅವುಗಳನ್ನು ಖಂಡಿಸಬೇಕು. ಈ ಚಳುವಳಿಗಳನ್ನು

ನಿವಾರಣೆ ಮಾಡಲು ಸಮಾಜದ ಸಕಲ ಮಹಾಶಯರೂ ಪ್ರಯತ್ನಿಸಬೇಕಾಗಿ ಈ ಸಭೆಯು ವಿನಂತಿ ಮಾಡಿಕೊಳ್ಳುತ್ತದೆ.

ಮೇಲಿನ ಈ ಎರಡೂ ಠರಾವುಗಳಲ್ಲಿ ಅಡಕವಾಗಿರುವ ತತ್ವಗಳಿಗೆ ಶ್ರೀ ಮದ್ರಂಭಾಪುರಿ ಶ್ರೀಗಳವರು ತಮಗೆ ಯಾವ ಷರತ್ತು ಅಥವಾ ವ್ಯತ್ಯಾಸವಿಲ್ಲದೆ ಸರ್ವಸಮ್ಮತಿಯಿರುವುದಾಗಿ; ತಮ್ಮ ಅಧಿಕಾರವಾಣಿಯಿಂದ, ತಕ್ಷಣ ಅಂದರೆ ಶ್ರೀಗಳು ರಾಜಧಾನಿಗೆ ಬರುವ ದಿನಕ್ಕೆ ನಾಲ್ಕು ದಿನಗಳು ಮುಂಚಿತವಾಗಿ, ಸರಿಯಾದ ಕ್ರಮದಿಂದ ಸಾಂದರ್ಭಿಕವಾಗಿ ಮೌಖಿಕವಾಗಿ ಮತ್ತು ಪ್ರಕಟಣೆಗಳ ಮೂಲಕ ಎಲ್ಲಡೆ ಪ್ರಸ್ತಾಪಿಸುವುದಾದರೆ, ರಾಜಧಾನಿಯ ವೀರಶೈವರು ಒಮ್ಮತದಿಂದ ಶ್ರೀ ಪೂಜ್ಯರನ್ನು ಸ್ವಾಗತಿಸಿಕೊಂಡು ಸತ್ಕರಿಸುವುದು. ಒಂದು ವೇಳೆ ಹಾಗಾಗದಿದ್ದಲ್ಲಿ ಶಾಂತಿಯುತವಾಗಿ ಶ್ರೀ ಪೂಜ್ಯರ ವಿಷಯದಲ್ಲಿ ರಾಜಧಾನಿಯ ವೀರಶೈವರು ತಮಗುಂಟಾಗುವ ಅಸಮಾಧಾನವನ್ನು ತೋರ್ಪಡಿಸುವ ರೀತಿಯಲ್ಲಿ ವಿರೋಧಿಸಬೇಕಾಗುತ್ತದೆ. ಇದೇ ರೀತಿಯಲ್ಲಿ ಮೈಸೂರು ಜಿಲ್ಲೆ ಹಾಗೂ ಕೊಳ್ಳೆಗಾಲ ತಾಲ್ಲೂಕು ವೀರಶೈವರು ನಡೆದುಕೊಳ್ಳಬೇಕು ಎಂದು ಸಭೆಯವರು ತೀರ್ಮಾನಿಸಿರುತ್ತಾರೆ.

ಕ) ಪಂಚಾಚಾರ್ಯ ಪ್ರಭಾ ಪತ್ರಿಕೆಯು ಅಲ್ಲಮಾದಿ ವಿರಕ್ತಮೂರ್ತಿಗಳನ್ನು ಮ್ಲೇಂಛರೆಂಬ ನಿಂದಾ ಲೇಖನಗಳನ್ನು ಬಸವಾದಿ ಪ್ರಮಥರ ನಿಂದಾ ಲೇಖನಗಳನ್ನು ಪದೇ ಪದೇ ಬರೆದು ಪ್ರಕಟಿಸುತ್ತಿರುವುದರಿಂದ ಬಹುಜನ ವೀರಶೈವರ ಮನಸ್ಸಿಗೆ ಬಹಳ ಖೇದವನ್ನುಂಟು ಮಾಡುತ್ತಿರುವದರಿಂದ, ಈ ವರ್ತನವನ್ನು ಈ ಸಭೆಯವರು ಬಹಳ ತೀಕ್ಷ್ಣವಾಗಿ ನಿಷೇಧಿಸುತ್ತಾರಲ್ಲದೆ ಇಂತಹ ಬರವಣಿಗೆಗಳನ್ನು ಮುಂದೆ ಖಂಡಿತವಾಗಿಯೂ ಪ್ರಕಟಿಸದಂತೆ ನಮ್ಮ ಘನಸರ್ಕಾರದವರು ಸದರಿ ಪತ್ರಿಕೆಯ ಸಂಪಾದಕರಿಗೆ ಸರಿಯಾದ ಎಚ್ಚರಿಕೆ ಕೊಡಬೇಕೆಂದು ಈ ಸಭೆಯವರು ಪ್ರಾರ್ಥಿಸುತ್ತಾರೆ.

ಡ) ಈ ಮಹಾಸಭೆಯಲ್ಲಿ ಪಾಸಾದ ಎಲ್ಲಾ ಠರಾವುಗಳನ್ನು ನಮ್ಮ ಶ್ರೀ ಮನ್ಮಹಾರಾಜವರ ಪರಾಂಬರಿಕೆಗೂ ನಮ್ಮ ಘನಸರ್ಕಾರದವರಿಗೂ ಶ್ರೀ ರಂಭಾಪುರಿಸ್ವಾಮಿಗಳವರಿಗೂ ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಸಾಹೇಬರವರಿಗೂ ಡಿಸ್ಟ್ರಿಕ್ಟ್ ಪೋಲಿಸ್ ಸೂಪರಿಂಡೆಂಟರವರಿಗೂ ವೃತ್ತಪತ್ರಿಕೆಗಳಿಗೂ ಕಳುಹಿಸಿಕೊಡುವುದಲ್ಲದೆ ಹಸ್ತಪತ್ರಿಕೆಗಳ ಮೂಲಕ ಸಾರ್ವತ್ರಿಕವಾಗಿ ಪ್ರಸಿದ್ಧಪಡಿಸುವುದು ಎಂದು ಈ ಸಭೆಯವರು ತೀರ್ಮಾನ ಮಾಡಿರುತ್ತಾರೆ.[೬೦]

ಉತ್ತರ ಕರ್ನಾಟಕದವರಾದ ಪಂಡಿತಪ್ಪ ಚಿಕ್ಕೋಡಿಯವರು ದೂರದ ಮೈಸೂರು ಜಿಲ್ಲೆಯ ವೀರಶೈವ ಮಹಾಸಭೆಗೆ ಅಧ್ಯಕ್ಷರಾಗಿದ್ದುದು ಹೆಮ್ಮೆಯ ಸಂಗತಿ. ಪಂಡಿತಪ್ಪನವರು ಸಮಾಜಮುಖಿ ಚಿಂತಕರಾಗಿದ್ದು, ಸಮಾಜಕ್ಕೆ ಕಂಟಕಪ್ರಾಯವಾದ ಸಮಸ್ಯೆಗಳು ಬಂದರೆ ಅವುಗಳನ್ನು ವಿರೋಧಿಸುತ್ತಿದ್ದರು. ಅಷ್ಟೇ ಅಲ್ಲ, ಅಂಥ ಸಂದರ್ಭಗಳಲ್ಲಿ ಎಚ್ಚರಿಕೆಯನ್ನು ನೀಡುವ ಅಧಿಕಾರವನ್ನು ಕೂಡ ಅಂದಿನ ಸರ್ಕಾರ ಅವರಿಗೆ ಕೊಟ್ಟಿತ್ತು.

೪.೨.೩.೨.ಸಾಂಗಲಿ ಸಂಸ್ಥಾನದ ವೀರಶೈವ ಮಹಾಸಭೆಯ ಅಧ್ಯಕ್ಷ:

ಅಖಿಲ ಭಾರತ ಶ್ರೀಮದ್ವೀರಶೈವ ಮಹಾಸಭೆಯು ಬಹು ತೀವ್ರಗತಿಯಲ್ಲಿ ಬೆಳೆದು ಬಹುದೊಡ್ಡ ಸಂಸ್ಥೆಯಾಯಿತು. ಜಿಲ್ಲಾ, ತಾಲ್ಲೂಕು, ಪ್ರಾಂತ್ಯ ಮಟ್ಟದಲ್ಲಿ ಸಮ್ಮೇಳನಗಳನ್ನು ನಡೆಸಿ ಲಿಂಗಾಯತರಲ್ಲಿ ಜಾಗೃತಿಯನ್ನು ಮಾಡುತ್ತ ನಡೆಯಿತು. ಅದರಂತೆ ಸಂಸ್ಥಾನಗಳಲ್ಲಿಯೂ ವೀರಶೈವ ಮಹಾಸಭೆಗಳನ್ನು ನಡೆಸುವ ನಿರ್ಧಾರವಾದಾಗ ಸಾಂಗಲಿಯಲ್ಲಿ ದಿನಾಂಕ:೨೬-೦೯-೧೯೩೬ ರಂದು ಆ ಸಂಸ್ಥಾನದ ಪ್ರಥಮ ವೀರಶೈವ ಮಹಾಸಭೆ ಜರುಗಿತು. ಸಮ್ಮೇಳನದ ಅಧ್ಯಕ್ಷರಾದ ಶ್ರೀ ಪಂಡಿತಪ್ಪನವರು ತಮ್ಮ ಭಾಷಣದುದ್ದಕ್ಕೂ ಲಿಂಗಾಯತ ಸಮಾಜದ ಬಗ್ಗೆ ಅಪಾರ ಕಾಳಜಿಯನ್ನು ವ್ಯಕ್ತಪಡಿಸಿದರು.

ಧಾರ್ಮಿಕ ವಿಷಯಗಳು, ನಿರ್ಣಯಗಳಿಗೆ ಬದ್ಧವಾದ ಈ ಸಮ್ಮೇಳನಗಳು ಜಾತಿ ಮತ್ತು ಕೋಮುವಾದಕ್ಕೆ ಎಡೆಮಾಡಿಕೊಡಬಾರದು. ಮತೀಯ ಭಾವನೆಗಳನ್ನು ಬೆಳೆಸಿಕೊಂಡು, ರೂಢಿ ಸಂಪ್ರದಾಯ ಭಾವನೆಗಳ ಬಲ ಇರುವ ವರೆಗೆ ಮಾನಸಿಕ ಪರಿವರ್ತನೆ ಅಸಾಧ್ಯ. ಇಂತಹ ಸಮ್ಮೇಲನಗಳು ರಾಷ್ಟ್ರೀಯ ಪ್ರಜ್ಞೆಗಳನ್ನು ಬೆಳೆಸುವುದರಿಂದ ಆಗಾಗ ಸಭೆ ಸಮಾರಂಭಗಳನ್ನು ನಡೆಸಬೇಕಾಗುವುದು ಅನಿವಾರ್ಯವಾಗುತ್ತದೆ. ಸಾಂಗಲಿ ಸಂಸ್ಥಾನದಲ್ಲಿ ಲಿಂಗಾಯತರ ಜನಸಂಖ್ಯೆ ೧೫.೫% ರಷ್ಟಿದ್ದು, ಒಕ್ಕಲುತನ, ಹಾಗೂ ವ್ಯಾಪಾರದ ಮೇಲೆ ಅವಲಂಬಿತವಾಗಿದೆ. ಮರಾಠರ ನಂತರ ದೊಡ್ಡ ಸಂಖ್ಯೆಯಲ್ಲಿರುವ ಲಿಂಗಾಯತರು ರೈತರಾಗಿ, ವ್ಯಾಪಾರಿಗಳಾಗಿ, ಉದ್ಯಮಿಗಳಾಗಿ ತಮ್ಮ ಸ್ವಂತ ಆರ್ಥಿಕ ನೆಲೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಸದ್ಯಕ್ಕೆ ವ್ಯಾಪಾರಿಗಳ ಆರ್ಥಿಕ ಪರಿಸ್ಥಿತಿ ಕುಸಿದು ಬಿದ್ದಿದೆ. ಲಿಂಗಾಯತ ಸಮುದಾಯವು ರಾಜಕೀಯ, ಶೈಕ್ಷಣಿಕ ಮತ್ತು ಆರ್ಥಿಕ ರಂಗದಲ್ಲಿ ಹಿಂದುಳಿದ ಕಾರಣ ಸಮಾಜದಲ್ಲಿ ಅಸಮತೋಲನ ಉಂಟಾಗಿದೆ. ಇಂದಿನ ಅತ್ಯಂತ ಸ್ಪರ್ಧಾತ್ಮಕ ಹಾಗೂ ಬದುಕಿಗಾಗಿ ಕಷ್ಟದಿಂದ ಹೋರಾಡುವ ಸಂದರ್ಭದಲ್ಲಿ ತಮ್ಮ ಒಳಪಂಗಡಗಳ ಮಾತ್ಸರ್ಯ, ದ್ವೇಷ, ವೈಷಮ್ಯ ಭಾವನೆಗಳನ್ನು ಬೆಳೆಸಿಕೊಳ್ಳದೆ, ಅದಕ್ಕಾಗಿಯೇ ತಮ್ಮ ಶಕ್ತಿ, ಸಾಮರ್ಥ್ಯಗಳನ್ನು ಹಾಳು ಮಾಡಿಕೊಳ್ಳಲಾರದೆ ತಮ್ಮ ದೌರ್ಬಲ್ಯಗಳನ್ನು ತಾವೇ ಹುಡುಕಿ ತಮ್ಮ ನೆಲೆಗಳನ್ನು ಕಂಡುಕೊಳ್ಳಬೇಕಾದುದು ಅನಿವಾರ್ಯವಾಗಿದೆ.[೬೧]

ಮೇಲೆ ಹೇಳಿದ ಎಲ್ಲ ವಿಚಾರಗಳನ್ನು ಜಾರಿಗೆ ತಂದು, ಸಂಸ್ಥಾನದಲ್ಲಿ ಲಿಂಗಾಯತರ ಅಭಿವೃದ್ಧಿಗಾಗಿ ಸಂಸ್ಥಾನಿಕರು ಸಾಕಷ್ಟು ಸಹಾಯ ಸಹಕಾರಗಳನ್ನು ಒದಗಿಸಿದರೆ ಸಮಾಜದ ಪ್ರಗತಿ ಎತ್ತರಕ್ಕೇರುವಲ್ಲಿ ಸಂಶಯವೇ ಇಲ್ಲ. ಲಿಂಗಾಯತಸಮಾಜ ವೈಯಕ್ತಿಕವಾಗಿ ತನ್ನನ್ನು ತಾನು ತಿಳಿದುಕೊಂಡರೆ ಅದು ಸಮಾಜೋಭಿವೃದ್ಧಿಗೆ ಸಹಕಾರಿಯಾಗಬಲ್ಲುದು ಎಂಬುದು ಪಂಡಿತಪ್ಪನವರ ಅಭಿಪ್ರಾಯವಾಗಿತ್ತು.

೪.೨.೩.೩. ವೀರಶೈವ ತರುಣ ಸಂಘ:

ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆಯ ಅಧಿವೇಶನಗಳಿಂದ ಲಿಂಗಾಯತ ಸಮಾಜದಲ್ಲಿ ಜಾಗೃತಿ ಉಂಟಾಗಲು ತೊಡಗಿತು. ಈ ಜಾಗೃತಿ ಇನ್ನೂ ತೀವ್ರಗತಿಯಲ್ಲಿ ನಡೆಯಬೇಕು ಎಂದು

ಸಮಾಜದಲ್ಲಿಯ ಮುಂದಾಳುಗಳು ಪ್ರಯತ್ನಿಸಿದರು. ಈ ಆಲೋಚನೆಯ ಫಲವೇ 'ವೀರಶೈವ ತರುಣ ಸಂಘ'. ಇದರ ಮುಂದಾಳುತನವನ್ನು ವಹಿಸಿಕೊಂಡವರು ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು, ಹರ್ಡೇಕರ ಮಂಜಪ್ಪನವರು ಮೊದಲಾದವರು.

ಹರ್ಡೇಕರ ಮಂಜಪ್ಪನವರು ಒಂದು ಸಲ ಪುಣೆಗೆ ಹೋದಾಗ ಅಲ್ಲಿ ಕನ್ನಡ ನಾಡಿನ ವೀರಶೈವ ವಿದ್ಯಾರ್ಥಿಗಳನ್ನು ಕಂಡು "ವೀರಶೈವ ತರುಣ ಸಂಘ' ಸ್ಥಾಪನೆಯ ವಿಚಾರವನ್ನು ಪ್ರಸ್ತಾಪಿಸಿದರು. ಶ್ರೀ ಶಿವಮೂರ್ತಿಸ್ವಾಮಿ ಹಿರೇಮಠ, ಕೇಸರಿ, ಪುರಾಣಿಕ ಮೊದಲಾದವರು ಅಲ್ಲಿ ಕಲಿಯುತ್ತಿದ್ದರು. ಅವರು ಆಸಕ್ತಿಯನ್ನು ತೋರಿಸಿದಾಗ ಪುಣೆಯಲ್ಲಿಯೇ ಇಂಗ್ಲಿಷಿನಲ್ಲಿ ಈ ಬಗ್ಗೆ ಒಂದು ಪ್ರಕಟಣೆಯನ್ನು ಹೊರಡಿಸಿ ಪ್ರಚಾರ ಮಾಡಿದರು. ವೀರಶೈವ ತರುಣರು "ಕ್ರಿಶ್ಚಿಯನ್ ಯಂಗಮೆನ್ ಅಸೋಸಿಯೇಶನ್' ಮತ್ತು 'ಸೋಸಿಯಲ್ ಸರ್ವೀಸ್ ಲೀಗ್'ದವರಂತೆ ಲೋಕಸೇವಾ ಕಾರ್ಯವನ್ನು ಕೈಗೊಳ್ಳಬೇಕು ಎನ್ನುವುದು ಅವರ ಇಚ್ಛೆಯಾಗಿತ್ತು. ತರುವಾಯ ದಾವಣಗೆರೆಗೆ ಬಂದು ಅಲ್ಲಿ ವೀರಶೈವರ ಏಳ್ಗೆಗಾಗಿ ನಿರಂತರ ಶ್ರಮಿಸುತ್ತಿದ್ದ ಶ್ರೀ ಮೃತ್ಯುಂಜಯ ಸ್ವಾಮಿಗಳಲ್ಲಿ ಅರಿಕೆ ಮಾಡಿಕೊಂಡಾಗ ಅವರು ತುಂಬ ಸಂತೋಷದಿಂದ 'ವೀರಶೈವ ತರುಣಸಂಘ' ಸ್ಥಾಪನೆಯನ್ನು ಸ್ವಾಗತಿಸಿ ಕಾರ್ಯಪ್ರವೃತ್ತರಾದರು.[೬೨] ಅವರ ಪ್ರಯತ್ನದಿಂದ ೧೯೧೭ರಲ್ಲಿ 'ವೀರಶೈವ ತರುಣ ಸಂಘ' ಸ್ಥಾಪನೆಯಾಯಿತು.

'ವೀರಶೈವ ತರುಣ ಸಂಘ'ದ ಮೊದಲನೆಯ ಸಮ್ಮೇಲನವನ್ನು ೧೯೧೭ರ ಬಸವ ಜಯಂತಿಯಂದು ದಾವಣಗೆರಿಯಲ್ಲಿ ಧಾರವಾಡದ ಶ್ರೀ ಗದಿಗೆಯ್ಯ ಹೊನ್ನಾಪುರಮಠ ವಕೀಲರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಯಿತು. ಶ್ರೀ ಮೃತ್ಯುಂಜಯಸ್ವಾಮಿಗಳ ನೇತೃತ್ವದಲ್ಲಿ ಸುಪ್ರಸಿದ್ಧ ವ್ಯಾಪಾರಸ್ಥರು ಹಾಗೂ ಮುಂದಾಳುತನವನ್ನು ವಹಿಸಿದ್ದ ಹರ್ಡೇಕರ ಮಂಜಪ್ಪನವರು ಮತ್ತು ಇನ್ನಿತರ ವೀರಶೈವ ಲಿಂಗಾಯತ ಮುಖಂಡರು ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ವೀರಶೈವ ಯುವಕರು ಸಮಾಜಕ್ಕೆ ಮತ್ತು ರಾಷ್ಟ್ರಕ್ಕೆ ಸಲ್ಲಿಸಬಹುದಾದ ಸೇವೆಯ ಕುರಿತು ಚರ್ಚೆ ಮಾಡಲಾಯಿತು. ಇದರಿಂದ 'ವೀರಶೈವ ತರುಣ ಸಂಘ'ಗಳು ಅಸ್ತಿತ್ವದಲ್ಲಿ ಬರತೊಡಗಿದವು.

'ವೀರಶೈವ ತರುಣ ಸಂಘ'ಗಳ ಎರಡನೆಯ ಮಹಾಸಮ್ಮೇಳನವನ್ನು ಬೆಳಗಾವಿಯಲ್ಲಿ ೧೯೧೮ರ ಎಪ್ರಿಲ್ ತಿಂಗಳಲ್ಲಿ ಜರುಗಿಸಲಾಯಿತು. ಬ್ಯಾರಿಸ್ಟರ್ ಗರಡಿ ರುದ್ರಪ್ಪನವರು ಅಧ್ಯಕ್ಷರಾಗಿದ್ದರು. ಸಮ್ಮೇಳನಕ್ಕೆ ದಾವಣಗೆರೆ, ಹರಪನಹಳ್ಳಿ ಮೊದಲಾದ ದೂರದೂರದ ಪ್ರಸಿದ್ಧ ವ್ಯಾಪಾರಿಗಳು, ಗಣ್ಯರು, ಕಾಲೇಜು ವಿದ್ಯಾರ್ಥಿಗಳು ಹುರುಪಿನಿಂದ ಆಗಮಿಸಿದ್ದರು. 'ಸೋಶಿಯಲ್ ಸರ್ವೀಸ್ ಲೀಗಿ'ನ ಮುಖ್ಯ ಚಾಲಕರಾದ ರಾ.ಕುಲಕರ್ಣಿ ವಿಶೇಷ ಅತಿಥಿಯಾಗಿದ್ದರು. ಅವರು ಮಾತನಾಡಿ ತಮ್ಮ ಸಂಘದ ಇತಿಹಾಸ ಮತ್ತು ಕಾರ್ಯಚಟುವಟಿಕೆಗಳನ್ನು ತಿಳಿಸಿ ಸಮಾಜಸೇವೆ ಮಾಡುವ ಪದ್ಧತಿಯನ್ನು ವಿವರಿಸಿದರು. ಶ್ರೀ ಮೃತ್ಯುಂಜಯಸ್ವಾಮಿಗಳು ಅಲ್ಲಿ ಉಪಸ್ಥಿತರಿದ್ದರು. ಈ ಸಮ್ಮೇಳನದ ಅಭೂತಪೂರ್ವ ಯಶಸ್ಸಿಗೆ ಕೆ.ಎಲ್.ಇ. ಸೊಸೈಟಿಯ ಆಜೀವ ಸದಸ್ಯರು ಸಾಕಷ್ಟು ಶ್ರಮಿಸಿದರು.[೬೩]

ವೀರಶೈವ ತರುಣರ ಸಮ್ಮೇಲನಗಳು ಒಂದು ವಿಶಿಷ್ಟ ಉದ್ದೇಶವನ್ನು ಇಟ್ಟುಕೊಂಡು ನಡೆಯತೊಡಗಿದವು. ಯುವಶಕ್ತಿಯಿಂದ ಲಿಂಗಾಯತ ಸಮಾಜದ ಅಭಿವೃದ್ಧಿಯಾಗಲು ಸಾಧ್ಯ ಎಂದು ತರುಣರೇ ಸಮ್ಮೇಲನಗಳನ್ನು ಏರ್ಪಡಿಸಿ, ತೀವ್ರಗತಿಯ ಜಾಗೃತಿಯುಂಟಾಗುವಂತೆ ಮಾಡಿದರು. ಈ ಸಮ್ಮೇಲನಗಳು ಹೊನ್ನತ್ತಿ, ಹುಬ್ಬಳ್ಳಿ, ಬಾಗಲಕೋಟ, ವಿಜಾಪುರ, ರಾಣೆಬೆನ್ನೂರ, ಸಿದ್ಧಗಂಗಾ ಮೊದಲಾದ ಊರುಗಳಲ್ಲಿ ಜರುಗಿದವು. ೧೯೨೧ ಮೇ ೨೨ ರಂದು ವೀರಶೈವ ತರುಣರ ಸಮ್ಮೇಲನಕ್ಕೆ ರಾವ್‌ಸಾಹೇಬ ಫಕೀರಪ್ಪ ಹಳಕಟ್ಟಿಯವರು ಅಧ್ಯಕ್ಷರಾಗಿದ್ದರು. ಆಗ ಶ್ರೀಯುತರಾದ ತಮ್ಮಣ್ಣಪ್ಪ ಚಿಕ್ಕೋಡಿ, ಪಂಡಿತಪ್ಪ ಚಿಕ್ಕೋಡಿ, ಷಣ್ಮುಖಪ್ಪ ಅಂಗಡಿ, ಬಿಳೇ ಅಂಗಡಿ, ಪಾವಟೆ, ಬಸವನಾಳ, ಕಂಬಳಿ ಮುಂತಾದ ಗಣ್ಯರು ಉಪಸ್ಥಿತರಿದ್ದರು.'[೬೪]

ಈ ತರುಣ ಸಮ್ಮೇಲನಗಳು ಬರಬರುತ್ತ ಪ್ರಾಂತೀಕ ಮಟ್ಟದಲ್ಲಿ ಜರುಗಲಾರಂಭಿಸಿದವು. ೨೦-೨೧ ಜೂನ್ ೧೯೨೬ರಂದು ಬಳ್ಳಾರಿಯಲ್ಲಿ ವೀರಶೈವ ತರುಣಸಂಘದ ವತಿಯಿಂದ 'ಮೊದಲನೆಯ ಪ್ರಾಂತೀಕ ವೀರಶೈವ ತರುಣಸಮ್ಮೇಲನ' ನಡೆಯಿತು. ರಾ॥ಬ॥ಹಳಕಟ್ಟಿಯವರು ಈ ಸಮ್ಮೇಲನದ ಅಧ್ಯಕ್ಷರಾಗಿದ್ದರು. ಜೊತೆಗೆ ದೂರದೂರದ ಪ್ರಾಂತ್ಯಗಳಿಂದ ಅನೇಕ ಮಹನೀಯರು ಆಗಮಿಸಿದ್ದರು. ಅವರಲ್ಲಿ ಶ್ರೀಯುತರಾದ ಎಸ್.ಟಿ.ಕಂಬಳಿ, ಪಂಡಿತಪ್ಪ ಚಿಕ್ಕೋಡಿ, ಮಂಜಪ್ಪ ಹರ್ಡೇಕರ, ಶಿವಮೂರ್ತಿಸ್ವಾಮಿ ಹಿರೇಮಠ ಮುಂತಾದವರು ಪ್ರಮುಖರು. ಈ ಸಭೆಯಲ್ಲಿ ಅನೇಕ ಮಹತ್ವದ ಠರಾವುಗಳು ಪಾಸುಗೊಂಡವು.[೬೫]

ಪಂಡಿತಪ್ಪನವರು ಅಖಿಲಭಾರತ ಕೈಮಗ್ಗದ ಅಧ್ಯಕ್ಷರು, ನೇಕಾರರ ಹಿತಚಿಂತಕರು, ಔದ್ಯೋಗಿಕ ಕ್ಷೇತ್ರದ ಹರಿಕಾರರು. ಆದಕಾರಣ ಇಂತಹ ಸಮ್ಮೇಲನಗಳಲ್ಲಿ ಮಂಡಿಸಿದ ಠರಾವುಗಳು ತುಂಬಾ ಮಹತ್ವವೆನಿಸಿದ್ದವು. "ಅಖಿಲಭಾರತೀಯ ವೀರಶೈವ ತರುಣಸಮ್ಮೇಲನದಲ್ಲಿ ತೀರ್ಮಾನವಾದ ಪ್ರಕಾರ ಈ ಸಮ್ಮೇಲನವೂ ಕೂಡ ವೀರಶೈವ ಸಮಾಜದ ಸಾಂಪತ್ತಿಕ ಅಭಿವೃದ್ಧಿಗಾಗಿ ಕೈನೂಲು ಕೈಮಗ್ಗಗಳಿಂದಾದ ಬಟ್ಟೆಗಳನ್ನೇ ಧರಿಸಬೇಕೆಂದು ವೀರಶೈವ ಸಮಾಜದವರಿಗೆ ಸೂಚಿಸುತ್ತದೆ"[೬೬] ಎಂಬ ಠರಾವನ್ನು ಇಲ್ಲಿ ಗಮನಿಸಬಹುದು.

ರಾಷ್ಟ್ರಮಟ್ಟದಲ್ಲಿ ಜರುಗುತ್ತಿದ್ದ ಸಾಮಾಜಿಕ-ಧಾರ್ಮಿಕ ಪ್ರಕ್ರಿಯೆಗಳು ಉತ್ತರ ಕರ್ನಾಟಕದವರ ಮೇಲೆಯೂ ಪರಿಣಾಮ ಬೀರಿದವು. ಸಮಾಜ ಸುಧಾರಣೆಗೆ ಅನೇಕ ಸಂಘ-ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಅದೇ ನಿಟ್ಟಿನಲ್ಲಿ ಉತ್ತರಕರ್ನಾಟಕದ ತರುಣರು ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಮಾಡಿದ ಸಾಧನೆ ಅಭೂತಪೂರ್ವವಾದುದು. ಬೆಳಗಾವಿಯ ಕೆ.ಎಲ್.ಇ.ಸಂಸ್ಥೆಯು ಅಸ್ತಿತ್ವಕ್ಕೆ ಬಂದದ್ದು ತರುಣ ಆಜೀವ ಸದಸ್ಯರಾದ ಸಪ್ತರ್ಷಿಗಳಿಂದ, ಧಾರವಾಡದ ಶ್ರೀಮುರುಘರಾಜೇಂದ್ರ ಪ್ರಸಾದನಿಲಯ ಪ್ರಾರಂಭಗೊಂಡುದು ತರುಣವಯಸ್ಕರಾದ ಶ್ರೀ ಮೃತ್ಯುಂಜಯ ಸ್ವಾಮಿಗಳಿಂದ. ಹುಬ್ಬಳ್ಳಿಯ ಲಿಂಗಾಯತ ವಿದ್ಯಾವರ್ಧಕ ಸಂಘವು ಅಸ್ತಿತ್ವಕ್ಕೆ ಬಂದದ್ದು ತರುಣರಾದ ಶ್ರೀ ಸಿ.ಎಸ್.ಕೆಂಪಣ್ಣವರ ಮೊದಲಾದವರಿಂದ. ಅಂದಿನ ತರುಣರು ಸಮಕಾಲೀನ ಪರಿಸ್ಥಿತಿಯನ್ನು

ಅರಿತುಕೊಂಡು, ತಮ್ಮ ಸ್ವಾರ್ಥ, ಸುಖಭೋಗಗಳನ್ನು ತೊರೆದು ಸಮಾಜಸೇವೆಗೆ ಟೊಂಕಕಟ್ಟಿ ನಿಲ್ಲುತ್ತಿದ್ದರು. ಅಂದಿನ ಯುವಶಕ್ತಿಯು ಸಮಾಜೋಭಿವೃದ್ಧಿಯಲ್ಲಿ ಒಂದು ಉತ್ತಮ ಸಂಘಟನಾಶಕ್ತಿಯಾಗಿ ಪರಿಣಮಿಸಿದ್ದಲ್ಲದೆ, ಸಾಧಕಶಕ್ತಿಯಾಗಿತ್ತು.

೪.೨.೩.೪. ಬಾಳೆಹಳ್ಳಿ ಜಗದ್ಗುರುಗಳ ವಿವಾದದ ಮಧ್ಯಸ್ಥಿಕೆ:

ಬಾಳೆಹಳ್ಳಿಪೀಠವು ಮಲೆನಾಡಿನ ಗುರುಪೀಠ. ಅಲ್ಲಿ ಸದಾಶಿವಶಾಸ್ತ್ರಿಗಳು ಉಜ್ಜಯಿನಿ ಸಿದ್ಧಲಿಂಗ ಸ್ವಾಮಿಗಳಿಂದ ಅನುಗ್ರಹಿತರಾಗಿ, ಜಗದ್ಗುರು ಶಿವಾನಂದಸ್ವಾಮಿಗಳೆಂಬ ನೂತನ ನಾಮಧರಿಸಿ ಭಕ್ತೋದ್ಧಾರಕ್ಕಾಗಿ ಸಂಚಾರ ಹೊರಟರು. ಈ ಸದಾಶಿವಶಾಸ್ತ್ರಿಗಳು ಪಟ್ಟಾಭಿಷೇಕಕ್ಕಾಗಿ ಬಾಳೆಹಳ್ಳಿಗೆ ಹೊರಡುವ ಮುಂಚೆ ಶ್ರೀಮನ್ಮಹಾರಾಜರ ಭೇಟಿಗೆ ಹೋದಾಗ ಮಹಾರಾಜರು ಕೊಟ್ಟ ಸಲಹೆ ಗಮನಾರ್ಹವಾಗಿದೆ. "ಬಹು ಪೈಪೋಟಿಯ ವಿಷಮ ವಾತಾವರಣದಲ್ಲಿ ತಾವು ಗುರುಪೀಠವೊಂದಕ್ಕೆ ಉತ್ತರಾಧಿಕಾರಿಗಳಾಗಿ ಚುನಾಯಿತರಾಗಿದ್ದೀರಿ. ಬಾಳೆಹಳ್ಳಿಮಠದ ಪರಂಪರೆಯು ಅಡೆತಡೆಗಳಿಲ್ಲದೆ ನಡೆದುಕೊಂಡು ಹೋಗಿ, ವೀರಶೈವ ಅಭಿವೃದ್ಧಿಯಾಗಲೆಂಬ ಸದುದ್ದೇಶದಿಂದ ಸರ್ಕಾರದವರು ತಮ್ಮ ಮೇಲೆ ಬಹು ಜವಾಬ್ದಾರಿಯನ್ನು ತೆಗೆದುಕೊಂಡಿರುವರು. ನಿಮ್ಮ ಸಮಾಜದಲ್ಲಿರುವ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಳ್ಳಬೇಕು. ಹಿಂದೆ ನಿಮಗೆ ವಿರೋಧಿಗಳಾಗಿದ್ದವರೂ ನಿಮ್ಮಲ್ಲಿ ಭಕ್ತಿ, ವಿಶ್ವಾಸ ಹುಟ್ಟುವಂತೆ ನಿಮ್ಮ ಆಚರಣೆಯನ್ನು ಇಟ್ಟುಕೊಳ್ಳಬೇಕು. ಆಗ ಮಾತ್ರ ಸರ್ಕಾರದವರ ಯತ್ನ ಸಾರ್ಥಕವಾದಂತಾಗುತ್ತದೆ"[೬೭] ಎಂದು ಹೇಳಿ ಜಗದ್ಗುರು ಶಿವಾನಂದ ಸ್ವಾಮಿಗಳವರನ್ನು ಬೀಳ್ಕೊಟ್ಟರು.

ಆದರೆ ಈ ಸ್ವಾಮಿಗಳು ಹಿತನುಡಿಗಳಿಗೆ ವಿರೋಧವಾಗಿ ಬಸವಾದಿ ಪ್ರಮಥರ ಬಗ್ಗೆ ನಿಂದಿಸುತ್ತಾ ನಡೆದರು. ಜಗದ್ಗುರುಗಳವರು ಸಂಚರಿಸಿದ ಕಡೆಯಲ್ಲೆಲ್ಲಾ ಶ್ರೀಮದ್ ಬಸವಾದಿ ಪ್ರಮಥರ ನಿಂದೆಯ ಸಂಬಂಧವಾಗಿ ಭಕ್ತರು ಸ್ವಾಮಿಗಳನ್ನು ಪ್ರಶ್ನೆಮಾಡಹತ್ತಿದರು. ಇವುಗಳಲ್ಲಿ ಒಂದಕ್ಕೂ ಸ್ವಾಮಿಗಳು ಸಮರ್ಪಕವಾದ ಉತ್ತರಕೊಡಲಿಲ್ಲ. ಪಕ್ಷ, ಪಂಗಡಗಳಿರುವ ಊರುಗಳಲ್ಲಿ, ಸಹಜಪರಿಸ್ಥಿತಿಯ ಲಾಭ ತೆಗೆದುಕೊಂಡು ಉತ್ಸವಕ್ಕೆ ಏರ್ಪಾಟು ಮಾಡಿಕೊಂಡರು. ಬಂದವರು ಬರಲಿ, ಬಾರದವರು ಬಿಡಲಿ; ತಮ್ಮ ವಾದದಂತೆ ತಲೆ ಹಾಕುವವರನ್ನು ಹಿಡಿದುಕೊಂಡು ಸಂಚಾರ ಸಾಗಿಸಿದರು. ಆದರೆ ದಾವಣಗೆರೆ, ಹರಿಹರ, ರಾಣೆಬೆನ್ನೂರು, ಬ್ಯಾಡಗಿ, ಹಾವೇರಿ, ಹುಬ್ಬಳ್ಳಿ, ಬೆಂಗಳೂರು, ಮೈಸೂರು ನಗರಗಳಲ್ಲಿನ ಉತ್ಸವವನ್ನು ಹಲವು ಭಕ್ತರು ಬಹಿಷ್ಕರಿಸಿದರು. ಇಷ್ಟೇ ಅಲ್ಲ, ಇವರ ಪ್ರವೇಶದ ಮೊದಲನೇ ದಿನ ಬೆಂಗಳೂರು, ಮೈಸೂರು ನಗರಗಳ ಭಕ್ತರು ವಿಶೇಷ ರೈಲುಗಾಡಿ ಏರ್ಪಾಡು ಮಾಡಿಕೊಂಡು, ಸಿದ್ಧಗಂಗೆಗೂ, ಮಲ್ಲನಮೂಕಿಗೂ ಹೋಗಿ ಉತ್ಸವದ ನಂತರ ಬಂದರು.[೬೮]

ಜಗದ್ಗುರುಗಳ ಬಸವಾದಿಪ್ರಮಥರ ಟೀಕಾನಿಂದೆಗಳು ಮತ್ತು ಅದಕ್ಕೆ ಭಕ್ತರ ಬಹಿಷ್ಕಾರ ಇವೆಲ್ಲ ಅಹಿತಕರ ಘಟನೆಗಳನ್ನು ಕಂಡು ಉತ್ತರ ಕರ್ನಾಟಕದ ಜನ ಜಾಗೃತರಾದರು. ತಾವು ಕೂಡಾ ಈ ಸಮಾಜವಿರೋಧಿ ಬೆಳವಣಿಗೆಗಳಿಗೆ ಸ್ಪಂದಿಸದೇ ಇದ್ದರೆ ಅದು ಇನ್ನಷ್ಟು ವ್ಯಾಪಿಸಬಹುದೆಂಬ ಸದುದ್ದೇಶದಿಂದ ವಿಜಾಪುರದ ಡಾ.ಫ.ಗು.ಹಳಕಟ್ಟಿಯವರ 'ನವಕರ್ನಾಟಕ' ಪತ್ರಿಕೆಯಲ್ಲಿ ಬಾಳೆಹಳ್ಳಿ

ಜಗದ್ಗುರುಗಳಿಗೆ ನೇರವಾಗಿ ಪತ್ರ ಬರೆದರು. ಕರ್ನಾಟಕದ ವಿವಿಧ ಭಾಗದ ೯೫ ಗಣ್ಯರು ಜಗದ್ಗುರುಗಳ ಸಮಾಜವಿರೋಧಿ ಚಟುವಟಿಕೆಗಳನ್ನು ಖಂಡಿಸಿ ಬರೆದ ಪತ್ರದಲ್ಲಿ ಸಹಿಮಾಡಿದ್ದರು.[೬೮] ಈ ವಿಷಯದಲ್ಲಿ ಅತೀ ಹೆಚ್ಚು ಕಾಳಜಿ ತೆಗೆದುಕೊಂಡವರು ಪಂಡಿತಪ್ಪನವರು.

ಮೈಸೂರು, ಮೊಕ್ಕಾಂನಲ್ಲಿ ಬಾಳೆಹಳ್ಳಿ ಜಗದ್ಗುರುಗಳಿಂದಾಗಿ ಸೃಷ್ಟಿಯಾದ ವಿಷಮ ವಾತಾವರಣವನ್ನು ನಿವಾರಣೆಮಾಡಿ ಸಮಾಜದಲ್ಲಿ ಸೌಹಾರ್ದ ಭಾವವನ್ನುಂಟು ಮಾಡಬೇಕೆಂದು ಒಂದು ಸಮ್ಮೇಳನ ನಡೆಸಲಾಯಿತು. ಆಗ್ಗೆ ಮುಂಬಯಿ ಕಾಯಿದೆ ಕೌನ್ಸಿಲ್ ಸದಸ್ಯರಾಗಿದ್ದ ಪಂಡಿತಪ್ಪ ಚಿಕ್ಕೋಡಿಯವರನ್ನು ಸಭೆಗೆ ಅಧ್ಯಕ್ಷರನ್ನಾಗಿ ಚುನಾಯಿಸಿದರು. ಬಸವಾದಿಪ್ರಮಥರು ವಿರಕ್ತರಿಗೂ, ಗುರುಸ್ಥಳದವರಿಗೂ ಪೂಜ್ಯರಾಗಿರುತ್ತಾರೆ. ನಿಂದಾಕಾರ್ಯವನ್ನು ಯಾರೂ ಮಾಡದೆ ಅದಕ್ಕೆ ಪ್ರೋತ್ಸಾಹ ಕೊಡದೆ ಸಮಾಜಕಲ್ಯಾಣಕ್ಕಾಗಿ ಯತ್ನಿಸಬೇಕಾಗಿ ಸಭೆಯಲ್ಲಿ ಠರಾವಾಯಿತು".[೬೯]

ಭಾರತೀಯರಿಗೆ ಧರ್ಮ, ಮತಮಾನ್ಯಗಳು, ಸ್ವಾಮಿಗಳ ಬಗೆಗೆ ಪೂಜ್ಯನೀಯ ಭಾವನೆ. ಸ್ವಾಮಿಗಳಂತೂ ನಮ್ಮ ಜನತೆಯ ಪಾಲಿಗೆ 'ಅವತಾರಿ ಪುರಷರು', 'ದೇವರೇ' ಆಗಿರುತ್ತಾರೆ. ಇಂತಹ ಸ್ವಾಮಿಗಳು ಸಮಾಜಕ್ಕೆ ಕಂಟಕಪ್ರಾಯವೆನಿಸಿದ ವಿಚಾರಗಳನ್ನು ಸಮಾಜದಲ್ಲಿ ಬಿತ್ತ ತೊಡಗಿದರೆ ಅದನ್ನು ತಡೆದು ನಿಲ್ಲಿಸುವ ಶಕ್ತಿ ಜನತೆಯದಾಗಿತ್ತು. ಜಗದ್ಗುರುಗಳಿಗೆ ತಿಳಿಸಿ ಹೇಳುವ, ತೀರ್ಮಾನ ತೆಗೆದುಕೊಳ್ಳುವ ಅರ್ಹತೆ ಪಂಡಿತಪ್ಪನವರಲ್ಲಿದ್ದ ಕಾರಣ ಅವರನ್ನೇ ಸಮ್ಮೇಳನದ ಅಧ್ಯಕ್ಷರನ್ನಾಗಿ ಚುನಾಯಿಸಲಾಗಿತ್ತು.[೭೦]

೪.೨.೩.೫. ವ್ಯಾಸನ ತೋಳಿನ ಪ್ರಕರಣದ ಇತ್ಯರ್ಥ:

ಬಹು ಹಿಂದಿನಿಂದಲೂ ವೀರಶೈವ ಮತ್ತು ಬ್ರಾಹ್ಮಣರಲ್ಲಿ ವಿರಸ, ದ್ವೇಷ ಬೆಳೆದು ಬಂದಿತ್ತು. ಒಬ್ಬರಿಗೊಬ್ಬರು ತಾವೇ ಶ್ರೇಷ್ಠರು ಎಂದು ಹೇಳಿಕೊಳ್ಳುತ್ತ, ಹಳಿದುಕೊಳ್ಳುತ್ತ ಸಾಗಿದ್ದರು. ಇವುಗಳಲ್ಲಿ ವ್ಯಾಸನ ತೋಳಿನ* ಪ್ರಕರಣವು ಒಂದು. ಬ್ರಾಹ್ಮಣ ಮತ್ತು ವೀರಶೈವರ ದ್ವೇಷ ದಾಯಾದಿ ಮತ್ಸರವಿದ್ದಂತೆ, ಈ ಎರಡೂ ಸಮಾಜದವರು ಇದ್ದಲೆಲ್ಲ ಒಂದಲ್ಲಾ ಒಂದು ರೀತಿಯ ಜಗಳವಿದ್ದುದೇ. ಬಹುಕಾಲದಿಂದ ವ್ಯಾಸನತೋಳು ಮತ್ತು ನಂದೀಧ್ವಜವನ್ನು ವೀರಶೈವರು ತಮ್ಮ ಉತ್ಸವಗಳಲ್ಲಿ ಮೆರೆಯಿಸುತ್ತಿದ್ದರು. ಅದನ್ನು ಬ್ರಾಹ್ಮಣರು ತಡೆಯುತ್ತಿದ್ದರು. ತಮ್ಮ ಗುರು ವ್ಯಾಸನ ತೋಳನ್ನು ವೀರಶೈವರು ಉತ್ಸವದಲ್ಲಿ ಕಟ್ಟಿ ಮೆರೆಯಿಸುವುದು ಅವರಿಗೆ ಬೇಕಾಗಿರಲಿಲ್ಲ.

ನ್ಯಾಯಸ್ಥಾನಕ್ಕೆ ವ್ಯಾಜ್ಯ ಹೋಯಿತು. ವೀರಶೈವರು ವ್ಯಾಸನ ತೋಳನ್ನು ತಮ್ಮ ಉತ್ಸವಗಳಲ್ಲಿ ಮೆರೆಯಿಸುವುದರಿಂದ ತಮಗೆ ಅಪಮಾನ ಮಾಡಿದಂತಾಗುತ್ತದೆ. ತಮ್ಮ ಧಾರ್ಮಿಕ ಭಾವನೆಗಳಿಗೆ ನೋವುಂಟಾಗುತ್ತದೆ ಎಂದು ಬ್ರಾಹ್ಮಣರು ನ್ಯಾಯಾಧಿಪತಿ ಮುಂದೆ ವಾದಿಸಿದರು. ವಿಷ್ಣು ಸರ್ವೋತ್ತಮನೆಂದು ವ್ಯಾಸನು ಪುರಾಣವನ್ನು ಬರೆಯಲು ಅವನ ತೋಳೊಂದು ಕತ್ತರಿಸಿ ಬಿತ್ತು. ಇದರಿಂದ ಈ ಮಹರ್ಷಿ ಬಹು ಪಶ್ಚಾತ್ತಾಪಪಟ್ಟನು. ಅವನಿಗೆ ಜ್ಞಾನೋದಯವಾಗಿ ಶಿವನೇ ಸರ್ವೋತ್ತಮನೆಂದು ಪುನಃ ಬೇರೆ ಪುರಾಣ ಬರೆಯಲು ಅವನಿಗೆ ತೋಳುಗಳು ಬಂದವು.

ಶಾಸ್ತ್ರಗಳಿಂದ ಈ ಮಾತು ಸಿದ್ಧವಾಗುತ್ತದೆ ಎಂದು ವೀರಶೈವರು ವಾದಿಸಿದರು. ಇದರ ಆಧಾರದ ಮೇಲೆ ವ್ಯಾಸನ ತೋಳನ್ನು ಮರೆಯಿಸುತ್ತೇವೆಂದು ಅವರು ಹೇಳಿಕೆ ಕೊಟ್ಟರು. ಈ ವಿವಾದದ ಇತ್ಯರ್ಥ ಕೊನೆಗೊಮ್ಮೆ ತೀರ್ಮಾನವಾಯಿತು. ಇಬ್ಬರೂ ತೃಪ್ತರಾಗದಿದ್ದರೂ ಶಾಂತರಾಗುವಂತೆ ನ್ಯಾಯಾಸ್ಥಾನವು ತೀರ್ಮಾನ ಕೊಟ್ಟಿತು.[೭೧] ಇದರಿಂದುಂಟಾದ ಮನಃಕಷಾಯ ಸ್ವಲ್ಪಮಟ್ಟಿಗೆ ಕಡಿಮೆಯಾದಂತಾಯಿತು. ಈ ನ್ಯಾಯಸ್ಥಾನದ ಜವಾಬ್ದಾರಿಯನ್ನು ಸರಕಾರದವರು ಶ್ರೀ ಪಂಡಿತಪ್ಪ ಚಿಕ್ಕೋಡಿಯವರಿಗೆ ನೀಡಿತ್ತು. ಪಂಡಿತಪ್ಪ ಚಿಕ್ಕೋಡಿಯವರು ಯಾವ ಗೊಡ್ಡು ಬೆದರಿಕೆಗಳಿಗೆ ಬಗ್ಗದೆ ಸರಿಯಾದ ತೀರ್ಮಾನವನ್ನು ಕೊಟ್ಟರು. ಇದರಿಂದ ಸಂತುಷ್ಟಗೊಂಡ ಅಥಣಿ ಪಟ್ಟಣದ ದೈವದವರು ಪಂಡಿತಪ್ಪ ಚಿಕ್ಕೋಡಿಯವರಿಗೆ ಕೃತಜ್ಞತಾ ಪತ್ರ ಬರೆದರು.

"ಶ್ರೀಯುತ ರಾ.ರಾ. ಪಂಡಿತಪ್ಪ ರಾಯಪ್ಪ ಅಣ್ಣಾ ಚಿಕ್ಕೋಡಿ (ಬಿ.ಎ.ಎಂ.ಎಲ್.ಸಿ.) ಇವರಿಗೆ, "ಅಥಣೀ ವೀರಶೈವ ಲಿಂಗಾಯತ ಸಮಾಜದ ನಮಸ್ಕಾರಗಳು. ಎಲ್ಲ ವೀರಶೈವ ಸಮಾಜಕ್ಕೆ ಸಂಬಂಧಪಟ್ಟ ಒಳ್ಳೆ ಮಹತ್ವದ ವಿಷಯವಾದಂತಹ ವ್ಯಾಸನ ತೋಳ ಮೆರವಣಿಗೆಯ ಬಗ್ಗೆ ಸರಕಾರದಲ್ಲಿ ನಡೆದ ವಿಷಯದಲ್ಲಿ ವೀರಶೈವ ಸಮಾಜದ ಪೂರ್ಣ ಅಭಿಮಾನಿಗಳೂ, ಧೈರ್ಯಶಾಲಿಗಳೂ ಆದ ತಾವು ಒಳ್ಳೆಯ ಯತ್ನವನ್ನು ಪಟ್ಟು ಸಮಾಜದ ನಿಜಸ್ಥಿತಿಯನ್ನು ಮತ್ತು ವ್ಯಾಸನ ತೋಳದ ಬಗ್ಗೆ ಖರೇ ಸಂಗತಿಯನ್ನು ಸರಕಾರಕ್ಕೆ ನಿವೇದಿಸಿ ಒಳ್ಳೆ ಕಳಕಳಿಯಿಂದ ಮತ್ತು ಅಭಿಮಾನದಿಂದ ಕೆಲಸ ಮಾಡಿದ ಬಗ್ಗೆ ಎಲ್ಲ ವೀರಶೈವ ಸಮಾಜದ ವತಿಯಿಂದ ನಾವು ನಿಮಗೆ ಬಹಳೇ ಆಭಾರಿ ಇದ್ದೇವೆ. ಮತ್ತು ದೇವರು ನಿಮ್ಮ ಪ್ರಯತ್ನಕ್ಕೆ ಯಶಕೊಟ್ಟ ಬಗ್ಗೆ ದೇವರನ್ನೂ ಅನನ್ಯಭಾವದಿಂದ ಸ್ಮರಿಸುತ್ತೇವೆ. ನಿಮ್ಮ ಪ್ರಯತ್ನದಿಂದ ಎಲ್ಲ ಸಮಾಜವು ನಿಮಗೆ ಋಣಿಯಾಗಿರುತ್ತವೆ".[೨]

೪.೨.೩.೬. ರಾಜಾ ಬಾಗೇವಾಡಿ ಬೋರ್ಡ್‌ನ್ನು ತೆಗೆಸಿದ್ದು:

ತಾಲ್ಲೂಕು ಸ್ಥಳ ಬಾಗೇವಾಡಿ ಬಸವನ ಬಾಗೇವಾಡಿ ಎಂದೇ ಖ್ಯಾತಿ ಪಡೆದಿದೆ. ೧೯೫೪ರಲ್ಲಿ ಕೆಲವು ಕುಹಕಿಗಳು ವಿಜಾಪುರದಿಂದ ೩೦ಮೈಲು ದೂರವಿರುವ(ತೆಲಗಿ) ರೇಲ್ವೆ ನಿಲ್ದಾಣದಲ್ಲಿ 'ರಾಜಾ ಬಾಗೇವಾಡಿ ರೋಡು' ಎಂದು ಬೋರ್ಡ್ ತೂಗುಹಾಕಿದ್ದರು. ಬಳ್ಳಾರಿಯ 'ನವಸಂದೇಶ' ವಾರಪತ್ರಿಕೆಯ ಸಂಪಾದಕರಾದ ಮಾನ್ಯ ಟಿ.ಎಚ್.ಎಂ.ಹೊಳೆಬಸವಶಾಸ್ತ್ರಿಗಳವರು ಆ ದಾರಿಯಲ್ಲಿ ಹೋಗುವಾಗ ಸಹಜವಾಗಿ ಆ ಬೋರ್ಡ್‌ನ್ನು ನೋಡಿ ಕೋಪಗೊಂಡರು. ಅಲ್ಲಿಂದ ಮೈಸೂರಿಗೆ ಬಂದವರೇ ತಮ್ಮ ಪತ್ರಿಕೆಯಲ್ಲಿ ಬಸವನ ಬಾಗೇವಾಡಿಯು ರಾಜಾ ಬಾಗೇವಾಡಿಯಾಗಿ ಪರಿವರ್ತನೆಯಾದುದರ ಕುರಿತು ಲೇಖನ ಬರೆದು ಆಂದೋಲನ ನಡೆಸಿದರು. ಅಲ್ಲದೆ ಕಾರ್ಯಕ್ರಮಗಳಿಗೆ ಹೋದಡೆಯೆಲ್ಲೆಲ್ಲ ಈ ವಿಷಯವಾಗಿ ಚರ್ಚೆ ಮಾಡಿದರು. ರೇಲ್ವೆ ಬೋರ್ಡಿನವರಿಗೂ ತಿಳಿಸಿದರು. ಆದರೆ ಅಧಿಕಾರಿಗಳು ಮಾತ್ರ ತಮ್ಮ ಹಟ ಬಿಡಲಿಲ್ಲ ಕಲೆಕ್ಟರ್‌ರವರ ಆದೇಶದ ಮೇರೆಗೆ ಬೋರ್ಡ್‌ನ್ನು ಹಾಕಿದೆ ಎಂದು ಹೇಳುತ್ತ ಬಂದರು. ಕೊನೆಗೆ ಈ ಆಂದೋಲನಕ್ಕೆ ಬೆಳಗಾವಿಯ ರೇಲ್ವೆ ಮಂಡಳದ ಸದಸ್ಯರಾದ ಪಂಡಿತಪ್ಪನವರು ಬರಬೇಕಾಯಿತು. ಪಂಡಿತಪ್ಪನವರ ಉಗ್ರ ಹೋರಾಟದ ಫಲವಾಗಿ

'ರಾಜಾ ಬಾಗೇವಾಡಿ' ಹೆಸರಿರುವ ಬೋರ್ಡ್‌ನ್ನು ಕಿತ್ತು ಹಾಕಲಾಯಿತು. ಪಂಡಿತಪ್ಪನವರು ಬಸವಣ್ಣನ ಹೆಸರಿಗೆ ಮಸಿ ಬಳಿಯುತ್ತಿರುವವರನ್ನು ಖಂಡಿಸಿ ಹೋರಾಟ ನಡೆಸಿದರು.[೭೩]

ಪಂಡಿತಪ್ಪನವರು ಲಿಂಗಾಯತಧರ್ಮದ ಮುಖಂಡರೆಂದು ಗುರುತಿಸಿಕೊಂಡದ್ದು ಹೆಮ್ಮೆಯ ವಿಷಯವಾಗಿದೆ. ಅವರು ಕಠಿಣತರವಾದ ವ್ಯಾಜ್ಯಗಳನ್ನು ಸರಿಯಾದ ರೀತಿಯಲ್ಲಿ ಬಗೆಹರಿಸುತ್ತಿದ್ದರು. ಪಂಡಿತಪ್ಪನವರಿಗೆ ಲಿಂಗಾಯತಧರ್ಮ ಮತ್ತು ಸಮಾಜದ ಬಗ್ಗೆ ಅಪಾರ ಶ್ರದ್ಧೆ ಮತ್ತು ಕಾಳಜಿ ಇತ್ತು. ಲಿಂಗಾಯತ ಧರ್ಮದ ತತ್ವಗಳನ್ನು ಚಿಕ್ಕೋಡಿ ತಮ್ಮಣ್ಣಪ್ಪ ಮತ್ತು ಪಂಡಿತಪ್ಪನವರು ಪಾಲಿಸಿಕೊಂಡು ಬಂದಿದ್ದರು. ಇವರ ಅಳಿಯನಾದ ಡಾ.ಹಳಕಟ್ಟಿಯವರು ವಚನವಾಙ್ಮಯ ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವುದು ಇವರಿಗೆ ಅತಿಶಯ ಸಂತೋಷ ತಂದಿತ್ತು. ಬಸವಾದಿಪ್ರಮಥರ ತತ್ವಗಳು ಉದಾತ್ತವಾಗಿದ್ದು, ಸಾರ್ವಕಾಲಿಕ ಸತ್ಯವುಳ್ಳವಾಗಿದ್ದವು. ಹೀಗಾಗಿ ಶರಣರು ಮತ್ತು ಅವರ ತತ್ವಗಳನ್ನು ನಿಂದಿಸಿದವರ ವಿರುದ್ಧ ಸಿಡಿದೆದ್ದು ನಿಂತರು. ಲಿಂಗಾಯತ ಸಮಾಜದ ಪ್ರಗತಿಗೆ ಸದಾ ಹೆಗಲುಕೊಟ್ಟು ನಿಂತವರು ಪಂಡಿತಪ್ಪನವರು. ಇದನ್ನರಿತು ಅಂದಿನ ಕಮೀಷನ್‌ರಾದ ಫ್ರೆಡರಿಕ್ ಸೈಕ್ಸ ಅವರು ಪಂಡಿತಪ್ಪನವರ ಬಗ್ಗೆ ಈ ರೀತಿ ಮೆಚ್ಚುಗೆ ಸೂಚಿಸಿದ್ದಾರೆ. "I am asked to convey to the members of the deputation, through you. His excellency's appreciation of the attitude of the Lingayats towards civil disobedience and his gratification in receiving their assurance of support of their community in the maintenance of law and order." "ಲಿಂಗಾಯತ ಸಮಾಜದ ಶಿಷ್ಟಮಂಡಳಿ ಸದಸ್ಯರಿಗೆ ನಿಮ್ಮ ಮುಖಾಂತರ ತಿಳಿಸಲು ನನಗೆ ಅಪ್ಪಣೆಯಾದ ಪ್ರಕಾರ ನಾನು ತಿಳಿಸುವುದೇನೆಂದರೆ, ಕಾಯಿದೆ ಮತ್ತು ಸುವ್ಯವಸ್ಥೆ ಇವುಗಳ ರಕ್ಷಣೆಗೆ ಲಿಂಗಾಯತ ಸಮಾಜವು ತನ್ನ ಬೆಂಬಲವನ್ನು ಕೊಡುತ್ತದೆಂದು ಆಶ್ವಾಸನ ಕೊಟ್ಟಿದ್ದಕ್ಕಾಗಿಯೂ ಸವಿನಯ ಕಾಯಿದೆಭಂಗದ ವಿಷಯದಲ್ಲಿ ಅದು ಸ್ವೀಕರಿಸಿದ ಧೋರಣೆಯ ಬಗ್ಗೆಯೂ ನೇಕನಾಮದಾರ ಮೇ.ಗವ್ಹರ್ನರ ಸಾಹೇಬರು ಸಮಾಧಾನವನ್ನು ವ್ಯಕ್ತಪಡಿಸುತ್ತಾರೆ."[೭೪]

೪.೨.೪. ರಾಜಕೀಯ:

ಪ್ರಜಾಪರಿಷದ್ ಸಭೆಗಳು:

ಸಂಸ್ಥಾನದ ರಾಜರು ಮತ್ತು ಜನಸಾಮಾನ್ಯರ ಮಧ್ಯದಲ್ಲಿ ಬಾಂಧವ್ಯವನ್ನು ಒಡಮೂಡಿಸುವ ವಿಚಾರದಿಂದ ಅಸ್ತಿತ್ವಕ್ಕೆ ಬಂದ ಸಂಸ್ಥೆಯೇ ಪ್ರಜಾಪರಿಷದ್. ಆಯಾ ಸಂಸ್ಥಾನಗಳು ಪ್ರಜಾಪರಿಷದ್‌ನ ಅಧಿವೇಶನಗಳನ್ನು ಏರ್ಪಡಿಸಿ, ಅವುಗಳ ಮೂಲಕ ಜನತೆಯ ಬೇಕು–ಬೇಡಗಳನ್ನು ಕುರಿತು ಚರ್ಚಿಸುತ್ತಿದ್ದರು.

೪.೨.೪.೧. ಸಾಂಗಲಿ ಪ್ರಜಾಪರಿಷದ್ ೬ ನೇ ಅಧಿವೇಶನ:

೧೯೨೮ ಎಪ್ರಿಲ್ ೭ ಮತ್ತು ೮ರಂದು ಸಾಂಗಲಿ ಪ್ರಜಾಪರಿಷದ್‌ನ ಆರನೆಯ ಅಧಿವೇಶನ ಸಾಂಗಲಿ ಸಂಸ್ಥಾನದ ತೇರದಾಳದಲ್ಲಿ ಜರುಗಿತು. ತೇರದಾಳ ಹಳ್ಳಿಯಾಗಿದ್ದು, ರೇಲ್ವೆಯ

ಅನುಕೂಲವಿರದಿದ್ದರೂ ೧೦೦ಕ್ಕಿಂತ ಹೆಚ್ಚು ಪ್ರತಿನಿಧಿಗಳು ಬಂದಿದ್ದರು. ಪ್ರತಿನಿಧಿ, ಅತಿಥಿಗಳನ್ನು ಹೊರತುಪಡಿಸಿ ಸ್ವಾಗತಮಂಡಳಿಯ ೭೫ ಜನ ಮತ್ತು ಪ್ರೇಕ್ಷಕರು ಇದ್ದರು.

೭ನೆಯ ತಾರೀಖಿನ ದಿವಸ ಪ್ರತಿನಿಧಿಗಳು ಮತ್ತು ಪ್ರೇಕ್ಷಕರು ಬಂದಾಗ ಅಧ್ಯಕ್ಷರಾದ ಬೆಳಗಾವಿಯ ಪ್ರಸಿದ್ಧ ಧುರೀಣರಾದ ಪಂಡಿತಪ್ಪ ಚಿಕ್ಕೋಡಿಯವರ ಭವ್ಯ ಮೆರವಣಿಗೆಯನ್ನು ಮಾಡಲಾಯಿತು. ಸರಕಾರಿ ಧರ್ಮಶಾಲೆಯ ಹತ್ತಿರ ಪರಿಷತ್‌ನ ಸಭೆಗೆ ಹೂಗಳಿಂದ ಅಲಂಕೃತಗೊಂಡ ಸುಂದರವಾದ ಮಂಟಪವನ್ನು ರಚಿಸಲಾಗಿತ್ತು. ಮಂಟಪದಲ್ಲಿ ಅಧಿಪತಿಗಳಾದ ಕೈ. ಶ್ರೀ ತಾತ್ಯಾಸಾಹೇಬ, ವಿದ್ಯಮಾನ ಅಧಿಪತಿ ಅಪ್ಪಾಸಾಹೇಬ, ಲೋಕಮಾನ್ಯ ತಿಲಕ, ಗಾಂಧೀಜಿಯವರ ಭಾವಚಿತ್ರಗಳನ್ನು ತೂಗು ಬಿಡಲಾಗಿತ್ತು. ಪರಿಷದ್‌ನ ಕಾರ್ಯಕ್ರಮವು ಮಧ್ಯಾಹ್ನ ೪ಗಂಟೆಗೆ ಪ್ರಾರಂಭವಾಯಿತು. ಸ್ವಾಗತಾಧ್ಯಕ್ಷರಾದ ಕೃ.ಗೋ.ದೇಶಪಾಂಡೆಯವರು ತಮ್ಮ ಭಾಷಣದಲ್ಲಿ "ತೇರದಾಳ, ರಬಕವಿಗಳು, ಔದ್ಯೋಗಿಕ ವಿಚಾರದಿಂದ ಬಹಳ ಪ್ರಸಿದ್ಧವಾದವುಗಳಾಗಿವೆ. ಬೆಳಗಾವಿಯ ತನಕ ಇಲ್ಲಿಯ ಸೀರೆಗಳು ಬಹಳ ಪ್ರಸಿದ್ಧವಾಗಿವೆ. ಆದರೆ ಈ ನೇಕಾರರು ಶಿಕ್ಷಣ ದೃಷ್ಟಿಯಿಂದ ಹಿಂದುಳಿದಿದ್ದಾರೆ. ನೇಕಾರರಿಗೆ ಬಂಡವಾಳ ಕೊಡಲು ಸಹಕಾರ ಪತ್ತಿನ ಸಂಸ್ಥೆಗಳು ಮುಂದೆ ಬರಬೇಕು. ಕಾಜಿನ ಕಾರ್ಖಾನೆಗೆ ಬೇಕಾದ ಕಚ್ಚಾ ಪದಾರ್ಥಗಳ ಸೌಲಭ್ಯವಿರದು, ಅವುಗಳ ಸ್ಥಾಪನೆಗೆ ಗಮನ ಕೊಡಬೇಕು. ಈ ವರ್ಷದ ಸಭೆಯ ಸಂತೋಷದ ಸಂಗತಿಯೆಂದರೆ ಪಂಡಿತಪ್ಪ ಚಿಕ್ಕೋಡಿಯವರಂತಹ ತಜ್ಞರ, ಗಣ್ಯರು ನಮಗೆ ಲಭ್ಯವಾಗಿರುವುದು. ಇವರು ಮುಂಬಯಿ ವಿಶ್ವವಿದ್ಯಾಲಯದ ಪದವೀಧರರು, ಮುಂಬಯಿ ಮಂತ್ರಿಮಂಡಲದ ಕೌನ್ಸಿಲ್ಲರು. ಇವರು ಸಂಸ್ಥಾನದ ಯಾವುದೇ ಸಮಸ್ಯೆಗಳನ್ನು ಬಗೆಹರಿಸುವಂತವರು ಎಂದು ಹೇಳಿದರು. ಮಹಾತ್ಮಾ ಗಾಂಧೀಜಿ, ಅಣ್ಣಾಸಾಹೇಬ, ಬೋಪಟಕರ, ಅಮದಾರ ಗುಂಜಾಳ, ಶ್ರೀ ವಾಮನರಾವ ಪಟವರ್ಧನ, ರಾಘವೇಂದ್ರರಾವ ಶರ್ಮಾ, ಗಂಗಾಧರ ದೇಶಪಾಂಡೆಯವರು ಸಭೆಗೆ ಸಂದೇಶಗಳನ್ನು ಕಳಿಸಿದ್ದರು.

ಪಂಡಿತಪ್ಪ ಚಿಕ್ಕೋಡಿಯವರು ಒಂದೂವರೆ ಘಂಟೆ ಕನ್ನಡದಲ್ಲಿ ಭಾಷಣ ಮಾಡಿದಾಗ ಪ್ರೇಕ್ಷಕರಿಂದ ಮೆಚ್ಚುಗೆಯ ಕರತಾಡನಗಳು ಕೇಳಿಬಂದವು.[೭೫] ಪಂಡಿತಪ್ಪನವರು ತಮ್ಮ ಭಾಷಣದುದ್ದಕ್ಕೂ ಸಂಸ್ಥಾನದ ಪ್ರಜೆಗಳ ಹಿತಾಸಕ್ತಿಯನ್ನು ಕುರಿತು ಮಾತನಾಡಿದರು. "ಸಾಂಗಲಿ ಸಂಸ್ಥಾನದ ಅಕ್ಕಪಕ್ಕದ ಖಾಲಸಾ ಇಲಾಖೆ(ಬ್ರಿಟಿಷ್ ಹಿಂದುಸ್ಥಾನ)ಗಳಲ್ಲಿ ಸ್ವಾತಂತ್ರ್ಯದ ಗಾಳಿ ನಿಧಾನವಾಗಿ ಪಸರಿಸುತ್ತಿರುವುದು ಕಂಡುಬರುತ್ತದೆ. ಕಳೆದ ೮ವರ್ಷಗಳಿಂದ ಖಾಲಸಾ ಇಲಾಖೆಯಲ್ಲಿ ಜವಾಬ್ದಾರಿಯುತ ರಾಜ್ಯಪದ್ಧತಿ ಅಂಶತಃ ಪ್ರಾರಂಭವಾಗಿದೆ. ಆದರೂ ಪೂರ್ಣಪ್ರಮಾಣದ ಜವಾಬ್ದಾರಿ ತಮಗೆ ದಕ್ಕಬೇಕೆಂದು ಬ್ರಿಟಿಷರು ಹೋರಾಟ ನಡೆಸಿದ್ದಾರೆ. ಖಾಲಸಾ ಮತ್ತು ಸಂಸ್ಥಾನಿ ಮೂಲಕ ಎರಡರೊಳಗೆ ಅಂತರವಿಲ್ಲ. ಲಾರ್ಡ್ ಇರ್ವಿನ್ ಸಾಹೇಬರು ಒಂದು ಭಾಷಣದಲ್ಲಿ ಸಂಸ್ಥಾನಿಕರು ಮತ್ತು ಬ್ರಿಟಿಷ ಹಿಂದುಸ್ಥಾನ ಎರಡಲ್ಲಿಯೂ ನಿಕಟ ಸಂಬಂಧವಿದೆ. ಆದ್ದರಿಂದ ಇವೆರಡರಲ್ಲಿ ಒಂದರ ಮೇಲೆ ಇನ್ನೊಂದರ ಪರಿಣಾಮಗಳು ಉಂಟಾಗುವುದು ಸಹಜ. ಒಂದು ಸ್ವಾತಂತ್ರ್ಯದ ಕಡೆಗೆ ಉತ್ಸುಕ ತೋರಿದ್ದರೆ, ಇನ್ನೊಂದು, ಇನ್ನೂ

ದೌರ್ಜನ್ಯ, ಅತ್ಯಾಚಾರಗಳ ಮಧ್ಯದಲ್ಲಿ ನಲಗುತ್ತಿದೆ. ರಾಜಸ್ಥಾನದ ಬಿಕಾರ ರಾಜನು ತಮ್ಮ ಭಾಷಣದಲ್ಲಿ 'ರಾಜ ಮತ್ತು ಪ್ರಜೆಗಳ ಸಂಬಂಧವು ಭಿನ್ನವಿರದೇ ಒಂದೇ ಇದೆ. ಅದು ಅಷ್ಟೇ ಸತ್ಯ. ಬ್ರಿಟಿಷ ಹಿಂದುಸ್ಥಾನ(ಖಾಲಸಾ)ದಲ್ಲಿ ಪ್ರಜೆಗಳು ಮತ್ತು ಬ್ರಿಟಿಷ ಅಧಿಕಾರಿಗಳು ಪರಕೀಯರಿರುವುದರಿಂದ ಭೇದ ಇರುವುದು ಸಹಜ. ಆದರೆ ಸಂಸ್ಥಾನಗಳಲ್ಲಿ ಆ ಭೇದವಿಲ್ಲ. ರಾಜ ಮತ್ತು ಪ್ರಜೆ ಒಂದೇ ರಕ್ತ, ಸಂಸ್ಕೃತಿಯುಳ್ಳವರು ಇದ್ದಾರೆ. ಹೀಗಾಗಿ ಹಿತಸಂಬಂಧಗಳು ಬೇರೆಬೇರೆ ಇರಲು ಸಾಧ್ಯವಿಲ್ಲ. ಹೀಗಿದ್ದರೂ ಭಾರತದ ಯಾವುದೇ ಸಂಸ್ಥಾನದಲ್ಲಿ ತಮ್ಮ ಪ್ರಜೆಗಳಿಗೆ ಜವಾಬ್ದಾರಿಯುತ ರಾಜ್ಯಪದ್ಧತಿ ಕೊಡುವುದನ್ನು ಉಪಕ್ರಮ ಮಾಡಿಲ್ಲ. ಇದು ದುರ್ದೈವದ ಸಂಗತಿ" ಎಂದು ಹೇಳಿದರು.

ಪಂಡಿತಪ್ಪನವರು ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ ಪ್ರಜೆಗಳ ಬಡತನವನ್ನು ನಿವಾರಿಸಲು ಸಂಸ್ಥಾನಿಕರು ಮಾಡಬೇಕಾದ ಕಾರ್ಯಗಳ ಬಗ್ಗೆ ಚಿಂತನೆ ಇತ್ತು. ಸಂಸ್ಥಾನಗಳಲ್ಲಿ ಸಂಸ್ಥಾನಿಕರು ತಾವು ವೈಯಕ್ತಿಕವಾಗಿ ಶ್ರೀಮಂತರಾಗಿ ವೈಭೋವೋಪೇತ ಜೀವನ ನಡೆಸುವುದಲ್ಲ. ಆ ಆಡಂಬರ ಜೀವನಕ್ಕೆ ಕಾರಣರಾದವರು ಸಂಸ್ಥಾನದ ಪ್ರಜೆಗಳು. ಹೀಗಾಗಿ ಪ್ರಜೆಗಳ ಹಿತದೃಷ್ಟಿಯಿಟ್ಟುಕೊಂಡು, ಅವರ ಜೀವನ ಸುಗಮವಾಗಿ ಸಾಗುವಂತೆ ಸಂಸ್ಥಾನಿಕರು ಪ್ರಯತ್ನಿಸಬೇಕು ಎಂದು ಹೇಳಿದರು.

ಪಂಡಿತಪ್ಪನವರ ಅಧ್ಯಕ್ಷತೆಯಲ್ಲಿ ಮಹತ್ವದ ಠರಾವುಗಳು ಮಂಡಿತವಾದವು. ಅವುಗಳೆಂದರೆ

೧. ಅಧಿಪತ್ಯದವರ ಖಾಸಗೀ ಖರ್ಚುಗಳಿಗೆ ನಿಯಂತ್ರಣ ಹಾಕುವುದು.

೨. ಬಟ್ಲರ್ ಸಮಿತಿಯ ಮುಂದೆ ಪ್ರಜೆಗಳ ಸಮಸ್ಯೆಗಳನ್ನು ಮಂಡಿಸುವ ಸಲುವಾಗಿ ಪರಿಶೀಲಿಸುವ ಸಮಿತಿ ಇರಬೇಕು.

೩. ನ್ಯಾಯದಾನದ ಪದ್ಧತಿಯಲ್ಲಿ ವಿಲಂಭವಾಗಬಾರದು. ನ್ಯಾಯ ಮತ್ತು ಅಮಲ ಬಜಾವಣೆ ಈ ಎರಡು ಖಾತೆಗಳು ಬೇರೆಯಾಗಿರಬೇಕು. ಮತ್ತು ಅಧಿಕಾರಿ ವರ್ಗದವರನ್ನು ಬದಲಿ ಮಾಡಬೇಕು.

೪. ರೈತವರ್ಗದವರಲ್ಲಿ ಸುಧಾರಣೆಗಾಗಿ ಸಹಾಯ ಸಹಕಾರಗಳನ್ನೊದಿಸುವುದು. ವ್ಯಾಪಾರ ಉದ್ಯೋಗಗಳಿಗೆ ಸರಕಾರದಿಂದ ಸಹಾಯ ಮಾಡಬೇಕು

೫. ಸಂಸ್ಥಾನದಲ್ಲಿಯ ಕೆಲಸಕ್ಕೆ ಹೊರಗಿನ ಜನರನ್ನು ನೇಮಕ ಮಾಡದೇ ಸಂಸ್ಥಾನದಲ್ಲಿಯ ಯೋಗ್ಯ ವ್ಯಕ್ತಿಗಳನ್ನು ನೇಮಕ ಮಾಡಬೇಕು. ಅದರಲ್ಲೂ ಹಿಂದುಳಿದ ವರ್ಗದವರಿಗೆ ಪ್ರಾಧಾನ್ಯತೆ ನೀಡಬೇಕು.

೬. ಶಿರಹಟ್ಟಿ ತಾಲೂಕಿನಲ್ಲಿ ಬರಗಾಲ ಇರುವುದರಿಂದ ಶೇತಕಾರ ಕರವನ್ನು ರದ್ದು ಮಾಡುವುದು ಇಲ್ಲವೆ ರಿಯಾಯತಿ ತೋರಿಸುವುದು.

೭. ರೈತಸಭೆಯ ಹಕ್ಕುಗಳನ್ನು ವಿಸ್ತರಿಸಬೇಕು.

೮. ಖಾದಿವಸ್ತ್ರಗಳನ್ನು ಉಪಯೋಗ ಮಾಡುವುದು. ಶಾಲೆಯಲ್ಲಿ ಚರಕ ಮತ್ತು ನೇಯುವ ಶಿಕ್ಷಣವನ್ನು ಕೊಡಬೇಕು.

೯. ಸ್ಥಾನಿಕ ಸ್ವರಾಜ್ಯ ಸಂಸ್ಥೆಯು ಪೂರ್ಣ ಪ್ರತಿನಿಧಿಕ ಮಾಡಬೇಕು.

೧೦. ಚಾಲ್ತಿ ಇರುವ ಕೌನ್ಸಿಲ್‌ನ್ನು ರದ್ದು ಮಾಡಿ ಒಂದು ಬಿನ್ ಸರಕಾರಿ ಇನ್ನೊಂದು ಸರಕಾರಿ ಹೀಗೆ ಎರಡೂ ಸಭಾಸದ ಇರುವ ಕೌನ್ಸಿಲ್‌ಗಳನ್ನು ಮಾಡಬೇಕು.

೧೧. ಸಂಸ್ಥಾನದಲ್ಲಿ ಕನ್ನಡ ತಾಲೂಕಿನಲ್ಲಿ ಕೋರ್ಟ್ ಭಾಷೆ ಕನ್ನಡವಾಗಿರಬೇಕು.

೧೨. ಪ್ರಜಾಪರಿಷದ್‌ದ ಘಟನಾ ತಯಾರು ಮಾಡಬೇಕು ಮತ್ತು ಒಂದು ವರ್ಷ ಪ್ರಜಾಪರಿಷದ್‌ದ ಕಾರ್ಯ ನಡೆಸಲು 'ಶಾಶ್ವತನಿಧಿ'ಯನ್ನು ಸ್ಥಾಪಿಸಬೇಕು.

೧೩. ಪ್ರಾಥಮಿಕ ಶಿಕ್ಷಣದ ಬಗ್ಗೆ ಪರಿಶೀಲಿಸಲು ಒಂದು ಸಮಿತಿ ಸ್ಥಾಪಿಸಬೇಕು.

೧೪. ಬರಗಾಲ ಪ್ರದೇಶದಲ್ಲಿ ಒಡ್ಡು ನಿರ್ಮಿಸಬೇಕು.

೧೫. ಪ್ರತಿಯೊಂದು ತಾಲೂಕಿನಲ್ಲಿ ಒಂದು ಆಯುರ್ವೇದ ಆಸ್ಪತ್ರೆ ಸ್ಥಾಪಿಸಬೇಕು.

೧೬. ಸಂಸ್ಥಾನದಲ್ಲಿ ಮದ್ಯಪಾನ ಪ್ರತಿಬಂಧ ಮಾಡಬೇಕು.

೧೭. ಗ್ರಾಮ ಪಂಚಾಯತಿ ಕಾಯಿದೆಯನ್ನು ಪ್ರಾರಂಭಿಸಬೇಕು.

೧೮. ಮುದ್ರಣ ಸ್ವಾತಂತ್ರ್ಯದ ಸಲುವಾಗಿ ಜಾಹಿರಾತು ಪ್ರಕಟಣೆ ನೀಡಬೇಕು.[೬]

ಪ್ರಜಾಪರಿಷತ್ತುಗಳು ಸಂಸ್ಥಾನಗಳಲ್ಲಿ ಅಸ್ತಿತ್ವಕ್ಕೆ ಬಂದಾಗಿನಿಂದ ರಾಜ ಮತ್ತು ಪ್ರಜೆಗಳ ಮಧ್ಯದಲ್ಲಿ ಒಂದು ಮಧುರವಾದ ಬಾಂಧವ್ಯ ಹುಟ್ಟಲು ಪ್ರಾರಂಭವಾಯಿತು. ವೈಯಕ್ತಿಕವಾಗಿ ಸಾಕಷ್ಟು ಆಡಂಬರ ಜೀವನ ನಡೆಸುತ್ತಿದ್ದ ಸಂಸ್ಥಾನಿಕರಿಗೆ ಪ್ರಜೆಗಳ ಹಿತದೃಷ್ಟಿಯ ಕಡೆಗೆ ಗಮನವೇ ಇರಲಿಲ್ಲ. ಆದರೆ ಇಂತಹ ಪ್ರಜಾಪರಿಷತ್ತುಗಳ ಅಧಿವೇಶನಗಳಿಂದ ಸಂಸ್ಥಾನಗಳಲ್ಲಿ ಸಾಕಷ್ಟು ಸುಧಾರಣೆಗಳು ಕಂಡುಬಂದವು. ಪಂಡಿತಪ್ಪನವರು ಸಂಸ್ಥಾನಿಕರ ಮನವೊಲಿಸಿ ಸಾಕಷ್ಟು ಸುಧಾರಣೆಗಳನ್ನು ಸಾಧಿಸಿದರು. ಶಿಕ್ಷಣಕ್ಷೇತ್ರದಲ್ಲಿ ಅಪಾರ ಪ್ರಗತಿಯನ್ನು ತಂದರು. ರೈತರ, ಬಡಕಾರ್ಮಿಕರ, ಬಡನೇಕಾರರ ಕಷ್ಟಗಳನ್ನು ಪರಿಹರಿಸಿ ಸಮಾಜದಲ್ಲಿ ಆರ್ಥಿಕ ಸಮಾನತೆಯನ್ನು ತರುವಲ್ಲಿ ಸಾಕಷ್ಟು ಶ್ರಮಿಸಿದರು.

೪.೨.೪.೨.ಜಮಖಂಡಿ ಸಂಸ್ಥಾನದ ಪ್ರಜಾಪರಿಷತ್ತು:

ದಕ್ಷಿಣಭಾರತದ ಸಂಸ್ಥಾನಗಳಲ್ಲಿ ಪ್ರಜಾಪರಿಷತ್ತು ಸ್ಥಾಪನೆಯಾಗಿದ್ದದನ್ನು ತಿಳಿದ ಜಮಖಂಡಿ ಸಂಸ್ಥಾನದ ಮುಖಂಡರು ಅದನ್ನು ತಾವೂ ಸ್ಥಾಪಿಸಲು ಮುಂದಾದರು. ಪೂರ್ವಭಾವಿಯಾಗಿ ಪ್ರಜೆ–ಆಳರಸರ ನಡುವೆ ಮಧುರ ಬಾಂಧವ್ಯ ಬೆಳೆಸುವ ದೃಷ್ಟಿಯಿಂದ ೧೯೧೭ರಲ್ಲಿ 'ಲೋಕಸಭೆ' ಎಂಬ ಸಂಘಟನೆ ಜಮಖಂಡಿಯಲ್ಲಿ ಸ್ಥಾಪಿತವಾಯಿತು. ಭಾಸ್ಕರ ಮಹಾಬಳ, ಶ್ರೀನಿವಾಸ ಆನಿಖಿಂಡಿ, ಯಶವಂತ ವಾಟವೆ, ಸದಾಶಿವ ಪೆಂಡಸೆ, ದಾಮೋದರ ಹುಲ್ಯಾಳಕರ, ಲಕ್ಷ್ಮಣ ಪರಾಂಜಪೆ, ರಾಜಪ್ಪ ಅಂಬಲಿ, ವಿಠಲರಾವ್ ಘಾಟಕೆ, ವಾಸುದೇವರಾವ್ ವಾಟವೆ, ಭೀಮಾಜಿ ಆಪಟೆ, ಪುರುಷೋತ್ತಮ ಘಾಟಕೆ, ಮಾಧವ ದೇಶಪಾಂಡೆ ಮುಂತಾದವರು 'ಲೋಕಸಭೆ'ಯ ಸಂಸ್ಥಾಪಕ ಸದಸ್ಯರಾಗಿದ್ದರು. ಲೋಕಸಭೆಯ ಮೂಲಕ ಜಮಖಂಡಿಯಲ್ಲಿಯೂ 'ಪ್ರಜಾಪರಿಷತ್ತು' ಮಾದರಿಯ ಅಧಿವೇಶನ ನಡೆಯಬೇಕೆಂಬುದೇ ಅವರ ಅಪೇಕ್ಷೆಯಾಗಿತ್ತು. ಲೋಕಸಭೆಯ ಮೂಲಕ ರಾಜದರ್ಬಾರಿನಲ್ಲಿ ಗೋವಧೆ,

ಮದ್ಯಪಾನ ನಿರ್ಬಂಧ, ರಾಜಕೀಯ ಸುಧಾರಣೆ, ಆಡಳಿತ ಭಾಷೆ, ರೈತರಿಗೆ ನೆರವು ಮುಂತಾದ ಬೇಡಿಕೆಗಳನ್ನು ಮುಖಂಡರು ಮುಂದಿಟ್ಟರು. ಪಟವರ್ಧನರ ಮಾತೃಭಾಷೆ ಮರಾಠಿ ಇದ್ದು, ಆಡಳಿತ ಭಾಷೆ ಮರಾಠಿ ಆಗಿತ್ತು. ಹೀಗಾಗಿ ಕೊಲ್ಲಾಪುರ, ಸಾಂಗ್ಲಿ, ಸಾತಾರಾ, ಪುಣೆ ಭಾಗದವರನ್ನೇ ಸೇವೆಗೆ ತೆಗೆದುಕೊಳ್ಳುತ್ತಿದ್ದು, ಎಲ್ಲವೂ ಮರಾಠಿಮಯವಾಗಿತ್ತು. ಇವುಗಳ ಪರಿಹಾರಕ್ಕೆ 'ಪ್ರಜಾಪರಿಷತ್' ಸ್ಥಾಪನೆಯಾಗಬೇಕಿತ್ತು. ೧೯೨೬ರಲ್ಲಿ ಸಿಂಹಾಸನರೂಢರಾದ ಶಂಕರರಾವ್ ಅಪ್ಪಾಸಾಹೇಬರು ಪ್ರಜಾಕಲ್ಯಾಣಕ್ಕೆ ಆದ್ಯತೆ ನೀಡಿದರು. ಕುಡಿಯುವ ನೀರಿನ ಪೂರೈಕೆಗೆ ಹಾಗೂ ಶಿಕ್ಷಣ ಸುಧಾರಣೆಗಳಿಗಾಗಿ ಯೋಜನೆಗಳನ್ನು ಹಮ್ಮಿಕೊಂಡರು.

ಅಷ್ಟೇ ಅಲ್ಲ ಇವರು, ಸಂಸ್ಥಾನಕ್ಕೆ ಸೇರಿದ್ದ ಕುಂದಗೋಳ ಹಾಗೂ ಬನಹಟ್ಟಿಗಳಲ್ಲಿ ಪ್ರೌಢಶಾಲೆಗಳನ್ನು ಆರಂಭಿಸಿದರು. ಜಮಖಂಡಿಯಲ್ಲಿ ವಿದ್ಯುತ್ ಉತ್ಪಾದನೆಗೆ ಕ್ರಮ ಕೈಗೊಂಡು ಅರಳೆ ಪೇಟೆಯನ್ನು ಆರಂಭಿಸಿದರು. ಮುಖಂಡರ ಬಹುದಿನಗಳ ಬೇಡಿಕೆಯಂತೆ ಶಂಕರರಾವ್ ಅಪ್ಪಾಸಾಹೇಬರು ೧೯೩೮ರಲ್ಲಿ 'ಪ್ರಾತಿನಿಧಿಕ ಸಭೆ'ಯನ್ನು ಆರಂಭಿಸಿದರು. ಅದರಲ್ಲಿ ೧೬ಮಂದಿ ಸದಸ್ಯರು ಪ್ರಜೆಗಳಿಂದ ಆಯ್ಕೆಗೊಂಡ ಪ್ರತಿನಿಧಿಗಳಾಗಿದ್ದು ಉಳಿದ ೧೪ಮಂದಿ ಸದಸ್ಯರು ನಾಮಕರಣಗೊಂಡವರಾಗಿರುತ್ತಿದ್ದರು. ಇದಕ್ಕೆ ಬಾವುರಾವ್ ಆಪಟೆ, ಹುಲ್ಯಾಳಕರ್, ಅಪ್ಪಾರಾವ್ ವಾಟವೆ, ಕೃಷ್ಣಾಜಿಪಂತ ರಾನಡೆ, ಚಿಕ್ಕೋಡಿ ಪಂಡಿತಪ್ಪ ಮೊದಲಾದವರು ಮುಖಂಡರಾಗಿದ್ದರು.[೭೭]

೧೯೨೯ರಲ್ಲಿ ಜಮಖಂಡಿ ಸಂಸ್ಥಾನದ ಎರಡನೆಯ ಪ್ರಜಾಪರಿಷತ್ತಿನ ಅಧಿವೇಶನವು ಬನಹಟ್ಟಿಯಲ್ಲಿ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿಯವರ ನೇತೃತ್ವದಲ್ಲಿ ಜರುಗಿತು. ಇದರ ಅಧ್ಯಕ್ಷ ಸ್ಥಾನವನ್ನು ಪಂಡಿತಪ್ಪ ಚಿಕ್ಕೋಡಿಯವರು ವಹಿಸಿದ್ದರು. ಆಗ ದಕ್ಷಿಣದಲ್ಲಿಯ ಮರಾಠಿ ಸಂಸ್ಥಾನಗಳಲ್ಲಿನ ಪ್ರಜೆಗಳ ಪರಿಸ್ಥಿತಿ ತೀರ ಶೋಚನೀಯವಾಗಿತ್ತು. ಒಂದೆಡೆ ಬ್ರಿಟಿಷ್ ಆಡಳಿತದಲ್ಲಿ ಭಾರತೀಯರು ಸೋತು ಹೋಗಿದ್ದರೆ, ಇನ್ನೊಂದೆಡೆ ಸ್ವದೇಶಿ ಆಳರಸರ ಆಡಳಿತಕ್ಕೆ ಜನ ಬೇಸತ್ತಿದ್ದರು. ಬಹುಸಂಖ್ಯೆಯ ಸಣ್ಣ–ದೊಡ್ಡ ಸಂಸ್ಥಾನಿಕರು ತಮ್ಮ ಸ್ವಂತ ಸುಖೋಪಭೋಗದತ್ತ ಗಮನ ಹರಿಸಿದರೇ ಹೊರತು, ಪ್ರಜೆಗಳ ಕಷ್ಟಸುಖಗಳತ್ತ ಕಣ್ಣು ಹಾಯಿಸುತ್ತಿರಲಿಲ್ಲ. ಅಲ್ಲದೆ ಇವರು ಅನ್ಯಭಾಷಿಕರು ಬೇರೆ. ಇವರು ಮರಾಠಿ ಭಾಷಿಕರಾಗಿದ್ದುದರಿಂದ ಕರ್ನಾಟಕದಲ್ಲಿ ಕನ್ನಡವನ್ನು ಮಣ್ಣುಗೂಡಿಸಿದ್ದರು. ಇಂಥ ವಿಷಮ ಸಂಧಿಕಾಲದಲ್ಲಿ ಪಂಡಿತಪ್ಪ ಪ್ರಜೆಗಳಿಗಾಗಿ ದುಡಿದರು. ಜಮಖಂಡಿ, ಸಾಂಗಲಿ, ಮಿರಜ, ರಾಮದುರ್ಗ, ಮುಧೋಳ ಸಂಸ್ಥಾನಗಳ ಕನ್ನಡ ಪ್ರದೇಶಗಳು ಇವರ ಕಾರ್ಯಕ್ಷೇತ್ರವಾಗಿದ್ದವು. ಇವೂ ಅಲ್ಲದೆ ಮೈಸೂರು ಮತ್ತು ಹೈದ್ರಾಬಾದ ಸಂಸ್ಥಾನಗಳ ಪ್ರಜೆಗಳಿಗಾಗಿಯೂ ಅವರು ಕಾರ್ಯ ನಿರ್ವಹಿಸಿದ್ದಾರೆ.

ಮುಂಬಯಿಯಲ್ಲಿ ೧೯೨೬ರ ನವ್ಹಂಬರ್ ೨೮ರಂದು ಹೈದ್ರಾಬಾದ್ ಸಂಸ್ಥಾನದ ಪ್ರಜಾಪರಿಷತ್ತು ಸೇರಿತ್ತು. ಮಧ್ಯಪ್ರಾಂತ ಕಾಯ್ದೆ ಕೌನ್ಸಿಲಿನ ಹಿಂದಿನ ಅಧ್ಯಕ್ಷರಾದ ಯಾದವ ಮಾಧವ ಕಾಳೆ ಅವರು ಅದರ ಅಧ್ಯಕ್ಷತೆ ವಹಿಸಿದ್ದರು. ಹೈದ್ರಾಬಾದ ಸಂಸ್ಥಾನದಲ್ಲಿ ಹೊಣೆಗಾರ ಸರಕಾರವನ್ನು ಸ್ಥಾಪಿಸಲು ನಡೆದ ಹೋರಾಟಕ್ಕೆ ಬೆಂಬಲವಸ್ನೀಯಲು, ಬ್ರಿಟಿಷ್ ಪ್ರಾಂತ್ಯಗಳ ಹಾಗೂ ಇತರ ಸಂಸ್ಥಾನಗಳ ಒಂದು ಸಮಿತಿ

ಸ್ಥಾಪಿಸಲ್ಪಟ್ಟಿತು. ಅದರ ಸದಸ್ಯರಲ್ಲಿ ಚಿಕ್ಕೋಡಿ ಪಂಡಿತಪ್ಪನವರ ಜತೆ ಮುಖ್ಯವಾಗಿ ಡಿ.ಮಿ.ತುಳಜಾಪುರಕರ, ಬ್ಯಾರಿಸ್ಟರ್ ಎಂ.ಆರ್.ಜಯಕರ, 'ಕೇಸರಿ' ಪತ್ರಿಕೆಯ ಸಂಪಾದಕ ನ.ಚಿಂ.ಕೇಳಕರ, ಮದ್ರಾಸಿನ 'ಸ್ವರಾಜ್ಯ' ಪತ್ರಿಕೆಯ ಸಂಪಾದಕ ಟಿ. ಪ್ರಕಾಶಮ್, ನಾಗಪುರದ ಮುಂದಾಳು ಡಾ. ಬಿ.ಎಸ್.ಮುಂಜೆ, ವರ್ಧಾಡಿನ ಎಂ.ಎಸ್.ಆಣೆ ಮೊದಲಾದ ಅನೇಕ ಪ್ರಮುಖರಿದ್ದುದು ವಿಶೇಷವಾಗಿದೆ.

ಸಪ್ಟಂಬರ್ ೧೫, ೧೯೩೫ರಲ್ಲಿ ಬ್ರಾಹ್ಮಣೇತರರ ಯುವಪಕ್ಷದ ಪರಿಷತ್ತು ಆಯೋಜಿಸಲಾಗಿತ್ತು. ಸ್ವಾಗತಾಧ್ಯಕ್ಷರಾಗಿ ಶ್ರೀ ಸಾವಂತ ಅವರು, ಅಧ್ಯಕ್ಷರಾಗಿ ಪಂಡಿತಪ್ಪನವರು ಭಾಗವಹಿಸಿದ್ದರು.[೭೮]

ರಾಮದುರ್ಗ ಸಂಸ್ಥಾನದ ಅಸೆಂಬ್ಲಿಯ ಸದಸ್ಯ:

ರಾಮದುರ್ಗವು ಬೆಳಗಾವಿ ಜಿಲ್ಲೆಯಲ್ಲಿ ಲೀನವಾಗುವವರೆಗೂ, ಮೂವತ್ತೂರು ಹಳ್ಳಿಗಳು ಕೂಡಿ ಆದ ಒಂದು ಸುಂದರ ಸಂಸ್ಥಾನವಾಗಿತ್ತು. ಅದು ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟ ಐದುನೂರು ಭಾರತೀಯ ಸ್ಥಾನಿಕ ರಾಜ್ಯಗಳಲ್ಲಿ ಒಂದು. ಪಂಡಿತಪ್ಪ ಚಿಕ್ಕೋಡಿಯವರು ಈ ಸಂಸ್ಥಾನದ ಅಸೆಂಬ್ಲಿಯ ಸದಸ್ಯರಾಗಿದ್ದರು. ಹೀಗಾಗಿ ಅವರು ಪದೇಪದೇ ಅಲ್ಲಿನ ಸಭೆಗಳಲ್ಲಿ ಭಾಗವಹಿಸುತ್ತಿದ್ದರು. ಅದಕ್ಕೆ ಈ ಕೆಳಗಿನ ಪತ್ರಗಳು ಸಾಕ್ಷಿಯನ್ನೊದಗಿಸುತ್ತವೆ.

೧. ರಾಮದುರ್ಗ ದರಬಾರದ ಆಜ್ಞೆ:

ನಂ. ಆರ್/೫೯ ದಿ.೨೬ ಫೆಬ್ರುವರಿ ೧೯೫೯ರಂದು ರಾಮದುರ್ಗ ದರಬಾರವು ಸ್ವೀಕರಿಸಿದ ಅನುಸೂಚಿ:

"ಪ್ರಜಾಸಂಘದ ಕಾರ್ಯಕಾರಿ ಸಮಿತಿ ದರಬಾರ ಇವುಗಳ ನಡುವೆ ಒಂದು ಸಮ್ಮತವಾದ ನಿರ್ಣಯವು ಸ್ವೀಕೃತವಾಗಿದೆ. ಬುಧವಾರ ದಿ.೨೨ ರಿಂದ ಪ್ರಾರಂಭವಾಗಿ ಗುರುವಾರ ದಿ.೨ ಫೆಬ್ರುವರಿ ೧೯೫೯ರವರೆಗೆ ನಡೆದ ಚರ್ಚೆಯಲ್ಲಿ ಶ್ರೀಮಂತ ರಾಜಾಸಾಹೇಬರು ಸಮಕ್ಷಮದಲ್ಲಿದ್ದರು. ದಿವಾಣ ಸಾಹೇಬ, ಹುಜೂರ ಸೆಕ್ರೆಟರಿ ಹಾಗೂ ಶ್ರೀ ಚಿಕ್ಕೋಡಿ ಅವರು ಪ್ರತ್ಯಕ್ಷರಾಗಿ ಹಾಜರಿದ್ದು, ಚರ್ಚೆಯು ಸಮಾಧಾನಕರವಾಗಿ ಮುಗಿಯುವಂತೆ ಸಹಕರಿಸಿದರು."

೨. ರಾಮದುರ್ಗ ಸಂಸ್ಥಾನ ಪ್ರಜಾಸಂಘ:

೧೯೫೯ಫೆಬ್ರುವರಿ ೨೬ರಂದು ರಾಮದುರ್ಗ ಸಂಸ್ಥಾನದ ಪ್ರಜಾಸಂಘವು ತನ್ನ ಸಾಮಾನ್ಯ ಸಭೆಯಲ್ಲಿ ಸ್ವೀಕರಿಸಿದ ನಿರ್ಣಯವು:

"ರಾಮದುರ್ಗ ಸಂಸ್ಥಾನದ ರಾಜಾಸಾಹೇಬ, ಪಂಚಮಂಡಳಿ ಹಾಗೂ ಪ್ರಜಾಸಂಘದ ಕಾರ್ಯಕಾರಿ ಸಮಿತಿಯ ಮಧ್ಯೆ ನಡೆದ ಸಭೆಯು ಒಮ್ಮತಕ್ಕೆ ಹಾಗೂ ಒಂದು ನಿರ್ಣಯಕ್ಕೆ ಬರುವ ಸಲುವಾಗಿ ಕಷ್ಟ ತೆಗೆದುಕೊಂಡ ಶ್ರೀಯುತ ಪಂಡಿತಪ್ಪ ರಾಯಪ್ಪ ಚಿಕ್ಕೋಡಿ ಅವರಿಗೆ ಈ ಸಭೆಯು ಹಾರ್ದಿಕವಾದ ಅಭಿನಂದನೆಗಳನ್ನು ಸಲ್ಲಿಸುತ್ತದೆ."

೩. ರಾಮದುರ್ಗ ದರಬಾರ:

ಶ್ರೀಯುತ ರಾಜಾಸಾಹೇಬ ರಾಮದುರ್ಗ ಅವರ ಸಲಹೆಯಂತೆ, ಅವರ ದಿವಾಣರು ದಿ.೬ ಮಾರ್ಚ್ ೧೯೩೯ರಂದು ಬರೆದ ಪತ್ರ.

"ಈಗ ರಾಮದುರ್ಗ ಚಳುವಳಿಯು ನಿಂತಂತಾಗಿದೆ. ಮುಂದೆ ನಾವು ಕಾಯ್ದು ನೋಡಬೇಕು. ಈ ಸಮಸ್ಯೆಗಳ ಪರಿಹಾರದಲ್ಲಿ ತಾವು ನಿರ್ವಹಿಸಿದ ಪಾತ್ರಕ್ಕಾಗಿ, ತೆಗೆದುಕೊಂಡ ಶ್ರಮಕ್ಕಾಗಿ ದರಬಾರವು ತಮಗೆ ಕೃತಜ್ಞವಾಗಿದೆ."[೭೯]

ಈ ಪತ್ರಗಳನ್ನು ನೋಡಿದರೆ ಪಂಡಿತಪ್ಪನವರು ಸಂಸ್ಥಾನದಲ್ಲಿನ ವ್ಯಾಜ್ಯಗಳನ್ನು ಬಗೆಹರಿಸುತ್ತಿದ್ದರು ಎಂದು ತಿಳಿಯುತ್ತದೆ. ಪ್ರಜಾಮಂಡಳ ಮತ್ತು ಸಂಸ್ಥಾನಿಕರ ಮಧ್ಯದಲ್ಲಿದ್ದ ತಿಕ್ಕಾಟಗಳನ್ನು ಬಗೆಹರಿಸಲು ಇವರು ಸಾಕಷ್ಟು ಕಷ್ಟಪಟ್ಟರು. ಆದರೂ ಏಪ್ರಿಲ್ ೭, ೧೯೩೯ರಲ್ಲಿ ರಾಮದುರ್ಗದ ಸಂಸ್ಥಾನದಲ್ಲಿ ಜೀವಂತ ಮಾರಣಹೋಮದ ದುರಂತ ನಡೆಯಿತು. ಇದು ಇತಿಹಾಸದಲ್ಲಿ 'ರಾಮದುರ್ಗ ದುರಂತ'ವೆಂದೇ ಪ್ರಸಿದ್ಧಿ ಪಡೆಯಿತು.

೪.೨.೪.೩. ಡಿ.ಎಲ್.ಬಿ(ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ್):

ಪಂಡಿತಪ್ಪ ಚಿಕ್ಕೋಡಿಯವರು ಜಿಲ್ಲಾ ಲೋಕಲ್ ಬೋರ್ಡಿಗೆ ೧೯೨೨ ಮತ್ತು ೧೯೨೮-೩೩ರಲ್ಲಿ ಎರಡು ಸಲ ಅಧ್ಯಕ್ಷರಾಗಿದ್ದರು. ಹಾಗೂ ಅದಕ್ಕೆ ಸತತ ನಾಲ್ಕು ಸಲ(೧೨ವರ್ಷ) ಸದಸ್ಯರಾಗಿದ್ದರು. ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಜಿಲ್ಲೆಯ ಅನೇಕ ಕಡೆಗಳಲ್ಲಿ ಕೆರೆ ಕಾಲುವೆ ಕಟ್ಟಿಸಿ, ರಸ್ತೆಗಳನ್ನು ನಿರ್ಮಿಸಲು ಕಾರಣರಾದರು. ತಮ್ಮ ಅಧಿಕಾರವಧಿಯನ್ನು ಸಾರ್ಥಕಪಡಿಸಿಕೊಂಡ ಪಂಡಿತಪ್ಪನವರು ಲೋಕಲ್ ಬೋರ್ಡ್‌ನಿಂದ ಶಾಲೆಗಳನ್ನು ಹೆಚ್ಚಿಸಿದರು. ರೈತ ಮತ್ತು ಕಾರ್ಮಿಕರ ಪರ ಹೋರಾಡಿದರು. ಸಾಕಷ್ಟು ಅಭಿವೃದ್ಧಿಪರ ಯೋಜನೆಗಳನ್ನು ಹಾಕಿ ಸರಕಾರದ ಮುಂದೆ ಇಟ್ಟರು. ಸರಕಾರದಿಂದ ಕೆಲವೊಮ್ಮೆ ಇವರಿಗೆ ನಿರಾಕರಣೆಯ ಉತ್ತರ ಬಂದಾಗ ಜನಪರವಾಗಿ ನಿಂತು ಹೋರಾಡಿದರು. ಲೋಕಲ್ ಬೋರ್ಡ್ ಚುನಾವಣೆಗೆ ಶ್ರೀ ಚಿಕ್ಕೋಡಿ ಪಂಡಿತಪ್ಪ ಮತ್ತು ಶ್ರೀ ಎಸ್.ಎನ್.ಅಂಗಡಿಯವರು ಪ್ರತಿಸ್ಪರ್ಧಿಗಳಾಗಿರುತ್ತಿದ್ದರು. ೧೯೨೩ರ ಡಿ.ಎಲ್.ಬಿ.ಚುನಾವಣೆಯಲ್ಲಿ ಚಿಕ್ಕೋಡಿಯವರು ಅಂಗಡಿಯವರಿಂದ ಸೋತಿದ್ದರು. ಏನೇ ವೈಯಕ್ತಿಕ ದ್ವೇಷಗಳಿದ್ದರೂ ಪಂಡಿತಪ್ಪನವರು ಜನಹಿತ ಕಾರ್ಯಗಳಿಗೆ ಮಾತ್ರ ಎಂದೂ ಧಕ್ಕೆ ಮಾಡಲಿಲ್ಲ. ಡಿ.ಎಲ್.ಬಿ. ಅಧ್ಯಕ್ಷರಾಗಿದ್ದಾಗ ತಮ್ಮ ವ್ಯಾಪ್ತಿಯಲ್ಲಿ ಬರುವ ಬಾವಿಗಳನ್ನು ಹರಿಜನರಿಗೆ ಮುಕ್ತ ಮಾಡಿದರು. ಹರಿಜನ ವಿದ್ಯಾರ್ಥಿಗಳಿಗೆ ಸವಲತ್ತುಗಳಿಲ್ಲದ ಸಮಯ; ಅವರಿಗೆ ವಿದ್ಯಾರ್ಥಿ-ವೇತನ ಕೊಡಿಸಿದರು. ವಿದ್ಯಾವಂತರಿಗೆ ನೌಕರಿ ಕೊಡಿಸಿದರು. ಹೀಗೆ ಅನೇಕ ರೀತಿಯಲ್ಲಿ ಹಿಂದುಳಿದವರ ಉದ್ಧಾರಕ್ಕೆ ನೆರವಾದರು.

ಸಂಸದೀಯ ಪಟು:

ಪಂಡಿತಪ್ಪನವರು ಒಬ್ಬ ದಕ್ಷ ಆಡಳಿತಗಾರರು, ಶ್ರೇಷ್ಠ ಶಿಕ್ಷಣತಜ್ಞರು ಮತ್ತು ಮುತ್ಸದ್ಧಿ ರಾಜಕಾರಣಿಗಳಾಗಿದ್ದರು. ೧೯೨೦ರಿಂದ ಸುಮಾರು ೧೪ವರ್ಷಗಳ ಕಾಲ ಅವರು ಮುಂಬಯಿಯ

ಲೆಜೆಸ್ಲೇಟಿವ್ ಕೌನ್ಸಿಲ್‌ದ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು. ೧೯೨೩ರ ಮುಂಬಯಿ ಕೌನ್ಸಿಲ್ ಚುನಾವಣೆಯಲ್ಲಿ ಬೆಳಗಾವಿ ಮತಕ್ಷೇತ್ರಕ್ಕೆ ಎರಡು ಸ್ಥಾನಗಳನ್ನು ನೀಡಲಾಗಿತ್ತು. ಬ್ರಾಹ್ಮಣೇತರ ಪಕ್ಷದವರಾದ ಶ್ರೀ ಪಂಡಿತಪ್ಪ ಮತ್ತು ಲಠ್ಠೆಯವರು ಶ್ರೀ ಎಸ್.ಎನ್.ಅಂಗಡಿ ಮತ್ತು ದಳವಿಯವರೊಂದಿಗೆ ಸ್ಪರ್ಧಿಸಿ ಸೋತರು. ನಂತರ ೧೯೨೭ರಲ್ಲಿ ಮತ್ತೆ ಸ್ಪರ್ಧಿಸಿ ಗೆದ್ದರು. ೧೯೩೦ರಲ್ಲಿ ಇವರ ಕಾರ್ಯದಕ್ಷತೆಯನ್ನು ಮೆಚ್ಚಿ ಸರಕಾರವು ಅವಿರೋಧವಾಗಿ ಆಯ್ಕೆ ಮಾಡಿತು. ಮುಂಬಯಿ ಲೆಜೆಸ್ಲೆಟಿವ್ ಕೌನ್ಸಿಲ್‌ನಲ್ಲಿ ಅನೇಕ ಆಯ್ಕೆ ಸಮಿತಿಗಳ ಸದಸ್ಯರಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದರು. ಆರ್ಥಿಕ ಸಮಿತಿ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸದಸ್ಯರಾಗಿ ಇವರು ಸದನದ ಚರ್ಚೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರಲ್ಲದೆ, ಎಷ್ಟೋ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾದರು. ಆ ಸಂದರ್ಭದಲ್ಲಿ ಶ್ರೀ ಆರ್.ಪಿ.ಪರಾಂಜಪೆ, ಶ್ರೀ ಬಿ.ಜಿ.ಪಹಲಾಜನಿ, ಶ್ರೀ ಸಿ.ಎಮ್.ಗಾಂಧೀ, ಶ್ರೀ ಚುನ್ನಿಲಾಲ ಮೆಹತಾ ಮುಂತಾದ ಗಣ್ಯರು ಸದನದಲ್ಲಿರುವುದು ವಿಶೇಷವಾಗಿತ್ತು. ಪಂಡಿತಪ್ಪ ಚಿಕ್ಕೋಡಿಯವರು ಸಂಸದೀಯ ಪಟುವಾಗಿ ಮಂಡಿಸಿದ ಕೆಲ ವಿಚಾರಗಳು ಈ ಕೆಳಗಿನಂತಿವೆ.

೪.೨.೪.೪.೧. ಬಾರ್ಡೋಲಿಯ ರೈತರ ವಿರುದ್ಧದ ಅನ್ಯಾಯ ಖಂಡನೆ(ಆಗಸ್ಟ್ ೧೯೨೦)

ಬಾರ್ಡೋಲಿಯ ರೈತರಿಗೆ ಆದ ಅನ್ಯಾಯಕ್ಕೆ ಸರಕಾರದ ಅಧೀನ ಅಧಿಕಾರಿಗಳಾದ ಜಿಲ್ಲಾಧಿಕಾರಿಗಳು, ಸೆಟಲ್‌ಮೆಂಟ್ ಅಧಿಕಾರಿಗಳು, ವಿಭಾಗೀಯ ಆಯುಕ್ತರು ಮತ್ತು ಇನ್ನಿತರರು ಕಾರಣರೆಂದು ಸದನದಲ್ಲಿ ಚರ್ಚೆಗೆ ಬಂದಾಗ ಪಂಡಿತಪ್ಪನವರು ಅದನ್ನು ವಿರೋಧಿಸುತ್ತಾರೆ. ಏಕೆಂದರೆ ಸರಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದ ಈ ಅಧಿಕಾರಿಗಳು ಸರಕಾರದಿಂದಲೇ ಆದೇಶಗಳನ್ನು ಪಡೆಯುತ್ತಿದ್ದರು. ಅವರು ಸರಕಾರದ ಆದೇಶಗಳನ್ನು, ಯೋಚನೆಗಳನ್ನು ಸರಕಾರದ ಬೆಂಬಲ ಮತ್ತು ಒಪ್ಪಿಗೆಯಂತೆ ಕಾರ್ಯಗತಗೊಳಿಸುತ್ತಿದ್ದರು. ಆ ಕಾರಣಕ್ಕಾಗಿ ಕೇವಲ ಅಧಿಕಾರಿಗಳಷ್ಟೇ ಅಲ್ಲದೆ ಇಡಿಯ ಸರಕಾರವೇ ಹೊಣೆ ಹೊರಬೇಕಾಗುತ್ತದೆ ಎಂದು ಅಭಿಪ್ರಾಯಿಸುತ್ತಾರೆ. ಯಾವುದಾದರೂ ಒಂದು ಗಲಾಟೆಯಾದ ತಕ್ಷಣ ಸರಕಾರವು ಅದನ್ನು ಅಧಿಕಾರಿಗಳ ಮೇಲೆ ಹಾಕಿ ಮೋಜು ನೋಡುವುದು ಇಂದಿಗೂ ಚಲಾವಣೆಯಲ್ಲಿದೆ. ಸ್ವತಃ ರಾಜಕಾರಣಿಗಳಾದ ಪಂಡಿತಪ್ಪನವರು ಇದನ್ನು ಖಂಡಿಸುತ್ತಾರೆ. ಏಕೆಂದರೆ ಅಧಿಕಾರಿಗಳು ಸರಕಾರದ ಅಧೀನದಲ್ಲಿಯೇ ಕೆಲಸ ಮಾಡುವುದರಿಂದ ಯಾವುದೇ ಅವ್ಯವಹಾರ ನಡೆಯಬಾರದೆಂಬ ಯೋಚನೆ ಅವರದಾಗಿತ್ತು.[೮೦]

೪.೨.೪.೪.೨.ದಾಂಡೇಲಿ ಕಿರಾವತ್ ರೇಲ್ವೆ ಮಾರ್ಗ:(೨ನೇ ಮಾರ್ಚ್ ೧೯೨೨)

ಪಂಡಿತಪ್ಪನವರು ರೇಲ್ವೆ ವಿಭಾಗದ ಕಾರ್ಯಗಳಲ್ಲಿ ಸಾಕಷ್ಟು ಆಸಕ್ತಿ ವಹಿಸಿದುದಲ್ಲದೆ ಕ್ರಿಯಾಶೀಲರಾಗಿ ಕೆಲಸ ಮಾಡಿದುದು ಕಂಡುಬರುತ್ತದೆ. ಇದಕ್ಕೆ ಸಾಕ್ಷಿ ಬೆಳಗಾವಿಯ ಇ.ಎಂ.ಎಸ್ ರೇಲ್ವೆ ಸಮಿತಿಯಲ್ಲಿ ಸು ೨೦ವರ್ಷ ಸಲಹಾ ಸದಸ್ಯರಾಗಿ ಕೆಲಸ ಮಾಡಿರುವುದು. ಅದರಂತೆ ದಾಂಡೇಲಿ ಕಿರಾವತ್ ರೇಲ್ವೆ ಮಾರ್ಗದ ಬಗ್ಗೆಯೂ ಕೂಡ ಕೌನ್ಸಿಲ್‌ರಾಗಿ ಸಭೆಯಲ್ಲಿ ತಮ್ಮ ವಿಚಾರವನ್ನು ಮಂಡಿಸಿದ್ದಾರೆ. ರೇಲ್ವೆ ಮಾರ್ಗದ ಕಾರ್ಯಕ್ಕಾಗಿ ಸಂಶಯ ವ್ಯಕ್ತಪಡಿಸಿದ ಮತ್ತು ಹಣ ಬಿಡುಗಡೆ ಮಾಡಲು

ಕೋರಿದ ಶ್ರೀ ಸಿ.ವಿ.ಮೆಹತಾ ಅವರ ಮಾತಿಗೆ ಪಂಡಿತಪ್ಪನವರು ಹೀಗೆ ಉತ್ತರ ಕೊಡುತ್ತಾರೆ. "ರೇಲ್ವೆ ಮಾರ್ಗದ ಅವಶ್ಯಕತೆ ಇದ್ದರೂ ಅದಕ್ಕೆ ಅಲ್ಲಿ ತಲೆಯೆತ್ತಿ ನಿಂತಿರುವ ಕಟ್ಟಿಗೆ ಅಡ್ಡೆಗಳು ಅಡ್ಡಿಯಾಗಿವೆ. ದಕ್ಷಿಣ ವಿಭಾಗದ ಕಮೀಶನರರು ತಮ್ಮ ವರದಿಯಲ್ಲಿ ಕಟ್ಟಿಗೆ ಅಡ್ಡೆಗಳನ್ನು ಅಳ್ನಾವರದಲ್ಲಿ ಕೇಂದ್ರಿಕೃತಗೊಳಿಸುವ ಅವಶ್ಯಕತೆ ಇದೆ ಎಂದಿದ್ದರೂ ಅದರ ಸಮಸ್ಯೆ ಬಗೆಹರಿದಿಲ್ಲ. ಹೀಗಾಗಿ ಮೊದಲು ಆ ಸಮಸ್ಯೆಯನ್ನು ಬಗೆಹರಿಸದೆ ರೇಲ್ವೆ ಮಾರ್ಗದ ವಿಸ್ತರಣೆಗೆ ಹಣ ತೊಡಗಿಸುವುದು ಸೂಕ್ತಕರವಲ್ಲ'.[೮೧]

ಹಣ ಬಿಡುಗಡೆಯ ಅನವಶ್ಯಕತೆಗೆ ಇನ್ನೊಂದು ಮಹತ್ವದ ಕಾರಣವನ್ನು ಅವರು ನೀಡಿದ್ದಾರೆ. ಅರಣ್ಯಗಳ ಮೇಲೆ ಸರಕಾರವು ಭಾರೀ ಹಣ ಹೂಡಿಕೆ ಮಾಡಿದೆ. ಆದರೆ ಅಷ್ಟು ಪ್ರಮಾಣದ ಆದಾಯ ಅದರಿಂದ ಇಲ್ಲ. ಹೀಗಾಗಿ ಅರಣ್ಯ ಕಾಮಗಾರಿಯ ಮೇಲೆ ತೊಡಗಿಸಬೇಕೆಂದಿರುವ ಹಣ ಕಡಿತಗೊಳಿಸಬೇಕೆನ್ನುವ ವಿಚಾರವನ್ನು ಪಂಡಿತಪ್ಪನವರು ಬೆಂಬಲಿಸುತ್ತಾರೆ.

ಪಂಡಿತಪ್ಪನವರು ಸರಕಾರದ ಜವಾಬ್ದಾರಿಯನ್ನು ಆಗಾಗ ಎತ್ತಿ ಹೇಳುತ್ತಿದ್ದರು. ಇದಕ್ಕೆ ಉದಾಹರಣೆಯೆಂದರೆ ೧೯೧೯ರಲ್ಲಿ ನಡೆದ ಶಿಮ್ಲಾ ಸಮ್ಮೇಳನದಲ್ಲಿ ಮಂಡಿತಗೊಂಡ ವಿಚಾರಗಳು. ಮುಂಬಯಿ ಪ್ರೆಸಿಡೆನ್ಸಿಯ ಒಟ್ಟಾರೆ ಬಾಕಿ ಮೊತ್ತವು ಸುಮಾರು ೨ಕೋಟಿಯಷ್ಟಾಗಬೇಕಿತ್ತು. ಆದರೆ ಅದು ಹಾಗಾಗದೆ ಕೇವಲ ೭೦ಲಕ್ಷಕ್ಕೆ ಬಂದು ನಿಂತಿತು. ಹೀಗಿರುವಾಗ ನಮ್ಮ ದೇಶದ ಆರ್ಥಿಕ ಸ್ಥಿತಿ ಸುಧಾರಣೆಯಾಗುವುದು ಅಸಾಧ್ಯ. ಜೊತೆಗೆ ಸಾರ್ವಜನಿಕರ ಅನೇಕ ಬೇಡಿಕೆಗಳಿಗೆ ಸ್ಪಂದಿಸುವುದು ಮತ್ತು ಭಾರಿ ಪ್ರಣಾಳಿಕೆಗಳನ್ನು ಈಡೇರಿಸುವುದು, ಕೊಟ್ಟ ವಚನಗಳನ್ನು ಸಂಪನ್ನಗೊಳಿಸುವುದು ಅಷ್ಟೇ ಮಹತ್ವದ ಕರ್ತವ್ಯವಾಗಿದೆ ಎಂದು ಪಂಡಿತಪ್ಪನವರು ಸ್ಪಷ್ಟಪಡಿಸುತ್ತಾರೆ.[೮೨]

೪.೨.೪.೪.೩. ಮೌಖಿಕ ಉತ್ತರಗಳು:

ಎಚ್.ವ್ಹಿ.ಪಾಟಸ್ಕರ್ ಅವರೊಂದಿಗೆ ಸಂವಾದದಲ್ಲಿ ತೊಡಗಿದ ಪಂಡಿತಪ್ಪನವರು, ಕೃಷಿ ಇಲಾಖಾ ಉಪನಿರ್ದೇಶಕರುಗಳ ಪ್ರಯಾಣ ಭತ್ಯೆಯನ್ನು ಸರಕಾರವು ನೀಡುವ ವಿಚಾರದ ಬಗ್ಗೆ ಪ್ರಶ್ನೆ ಎತ್ತುತ್ತಾರೆ. ಅಂದರೆ ಈ ಇಲಾಖೆಯಿಂದ ರೈತರಿಗೆ ಅನುಕೂಲವಾಗುವುದಾದರೆ ಅಲ್ಲಿಯ ಅಧಿಕಾರಿಗಳಿಗೆ ಸರಕಾರವು ಅನುಕೂಲ ಮಾಡಿಕೊಡಬೇಕು ಎಂದು ಅವರ ಅಭಿಪ್ರಾಯವಾಗಿತ್ತು.[೮೩]

೪.೨.೪.೪.೪. ಬೆಳಗಾವಿ ಜಿಲ್ಲೆಯ ಪಶುಸಂಗೋಪನಾ ಶುಲ್ಕ; ಮೌಖಿಕ ಉತ್ತರಗಳು;(೧೮ನೇ ಅಕ್ಟೋಬರ್ ೧೯೨೭):

ನಮ್ಮದು ಕೃಷಿಯಾಧಾರಿತ ದೇಶವಾದ್ದರಿಂದ ಇಲ್ಲಿಯ ಅರಣ್ಯ, ದನ-ಕರುಗಳು, ಆಡು, ಕುರಿ ಇವೆಲ್ಲ ಸಂಪನ್ಮೂಲಗಳಾಗುತ್ತವೆ. ಇವುಗಳಿಂದ ಸರಕಾರಕ್ಕೆ ಆರ್ಥಿಕ ಭದ್ರತೆ ಇರುವುದರಿಂದ ಪಂಡಿತಪ್ಪನವರು ಇವುಗಳ ಬಗ್ಗೆ ಸರಕಾರದ ಜೊತೆಗೆ ಸಮಾಲೋಚನೆ ಮಾಡುತ್ತಾರೆ. 'ಬೆಳಗಾವಿ ಜಿಲ್ಲೆಯ ಗ್ರಾಮಗಳು, ಅರಣ್ಯ ಗ್ರಾಮಗಳು ಮತ್ತು ಸಾಮಾನ್ಯಗ್ರಾಮಗಳೆಂದು ವಿಂಗಡಿಸಲ್ಪಟ್ಟಿವೆಯೆ? ಮತ್ತು ಈ ವಿಂಗಡಣೆಗೆ ಬಳಸಿಕೊಂಡಿರುವ ಮೂಲತತ್ವಗಳು ಯಾವುವು? ಬೆಳಗಾವಿ ಜಿಲ್ಲೆಯಲ್ಲಿರುವ ಅರಣ್ಯಗ್ರಾಮಗಳ ಒಟ್ಟು ಸಂಖ್ಯೆಯೆಷ್ಟು? ಮತ್ತು ಅವುಗಳ ಹೆಸರೇನು? ಯಾವ ದಿನಾಂಕದಂದು ಈ

ವಿಂಗಡಣೆಯನ್ನು ಮಾಡಲಾಗಿದೆ? ಅದಕ್ಕಿರುವ ಕಾರಣಗಳೇನು? ಮತ್ತು ಈ ಕುರಿತಾಗಿ ಮಾಡಲಾಗಿರುವ ಆದೇಶ ಅಥವಾ ಸಂಕಲ್ಪಗಳ ಪ್ರತಿಯನ್ನು ಮಂಡಲಿಗೆ ನೀಡುವುದೆ? ಅರಣ್ಯಗಳಲ್ಲಿ ಪಶುಗಳನ್ನು ಮೇಯಿಸುವ ದೃಷ್ಟಿಯಿಂದ ಇವು ಅರಣ್ಯಗ್ರಾಮಗಳಿಗೆ ಸೇರಿದ ಜಾನುವಾರಗಳು ಮತ್ತು ಇವು ಸಾಮಾನ್ಯ ಅರಣ್ಯಗಳಿಗೆ ಸೇರಿದ ಜಾನುವಾರಗಳೆಂದೆಣಿಸಿ ಬೇರೆಬೇರೆಯಾಗಿ ಪಶುಸಂಗೋಪನಾ ಶುಲ್ಕ ವಿಧಿಸಲಾಗಿದೆಯೆ? ಹಾಗೊಮ್ಮೆ ಮಾಡಿದ್ದೇ ಆದರೆ ಶುಲ್ಕ ಮೊತ್ತವಾದರು ಎಷ್ಟು? ದರವನ್ನು ಏರಿಸಲಾಗಿದೆಯೆ? ಏರಿಸಿದ್ದರೆ ಯಾವ ದಿನಾಂಕದಿಂದ ಏರಿಸಲಾಗಿದೆ? ಈ ಹಿಂದಿನ ಮತ್ತು ಇಂದಿನ ದರಗಳಾವುವು? ಜಿಲ್ಲೆಯ ಹಳ್ಳಿಗಳನ್ನು ಅರಣ್ಯ ಆಧಾರದ ಮೇಲೆ ಪಶುಸಂಗೋಪನಾ ಶುಲ್ಕ ವಿಧಿಸುವುದರಲ್ಲಾಗಲಿ ಅಥವಾ ಜಿಲ್ಲಾ ಶಾಸನಸಭೆಗೆ ಪ್ರತಿನಿಧಿಯಾಗಿ ಆಯ್ಕೆಯಾದ ಸದಸ್ಯರನ್ನಾಗಲಿ ವಿಚಾರಿಸುವುದು ಅವಶ್ಯಕವೆಂದು ನಿರ್ಧರಿಸಲಾಯಿತೆ? ಇಲ್ಲವೆ? ಮೇಲಿನ ಪ್ರಶ್ನೆಗೆ ಉತ್ತರವು ಋಣಾತ್ಮಕವಾಗಿದ್ದರೆ, ಹಳ್ಳಿಗರನ್ನಾಗಲಿ ಅಥವಾ ಶಾಸನ ಸಭೆಯ ಪ್ರತಿನಿಧಿಗಳನ್ನಾಗಲಿ ವಿಚಾರಿಸದಿರಲು ಕಾರಣಗಳಾದರೂ ಏನು? ಕೆಲ ಅಥವಾ ಯಾವುದೆ ಜಾನುವಾರಗಳು ಮೇಯಿಸುವುದಕ್ಕೆ ಕಾಡಿಗೆ ಹೋಗಿವೆಯೆ ಇಲ್ಲವೆ ಎಂಬುದನ್ನು ಪರಿಗಣಿಸದೆ ಎಲ್ಲ ಜಾನುವಾರಗಳ ಮೇಲೆ ಏಕಪ್ರಕಾರದ ಪಶುಸಂಗೋಪನಾ ಶುಲ್ಕ ವಿಧಿಸಲಾಗಿದೆಯೇ? ಶುಲ್ಕ ವಿದಿಸಲಾಗಿದ್ದರೆ ತಾರತಮ್ಯವೇನಾದರೂ ಆಗಿದೆಯೆ?[೮೭] ಪಂಡಿತಪ್ಪನವರ ಈ ಎಲ್ಲ ಪ್ರಶ್ನೆಗಳಿಂದಾಗಿ ಸರಕಾರವು ಮುಂದಿನ ಯೋಜನೆಗಳಿಗೆ ವಿಚಾರ ಮಾಡುವಂತಾಗುತ್ತದೆ. ಬೆಳಗಾವಿ ಜಿಲ್ಲೆಯಿಂದ ಚುನಾಯಿತರಾದ ಪಂಡಿತಪ್ಪನವರಿಗೆ ಹಳ್ಳಿಗರು ಸಂಪೂರ್ಣ ಕೃತಜ್ಞರಾಗಿದ್ದಾರೆ. ಹಳ್ಳಿಗಳಿಂದಲೇ ದೇಶ ಉದ್ಧಾರವಾಗಬೇಕು ಎಂಬುದು ಅವರ ಆಶಯವಾಗಿತ್ತು. ಹೀಗಾಗಿ ಹಳ್ಳಿಗಳಲ್ಲಿನ ಸಂಪನ್ಮೂಲಗಳ ಬಗ್ಗೆ ಸರಕಾರವು ಸದಾ ಎಚ್ಚರಿಕೆಯನ್ನು ವಹಿಸಬೇಕಲ್ಲದೆ, ಅವುಗಳ ಉದ್ಧಾರಕ್ಕಾಗಿ ಅದು ಸದಾ ಪ್ರಯತ್ನಶೀಲವಾಗಬೇಕು ಎಂಬುದು ಪಂಡಿತಪ್ಪನವರ ಅಭಿಪ್ರಾಯವಾಗಿತ್ತು.[೮೮]

೪.೨.೪.೪.೫. ಸರಕಾರದ ವಾರ್ಷಿಕ ಆಯವ್ಯಯ ಕುರಿತಾದ ಚರ್ಚೆ(೨೫ನೆಯ ಫೆಬ್ರುವರಿ):

ಪಂಡಿತಪ್ಪನವರು ೧೯೧೦ರಿಂದ ಹತ್ತು ವರ್ಷಗಳ ಮುಂಗಡ ಪತ್ರದ ಅಂಕಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಅದರ ಬಾಧಕಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ. ನಮ್ಮ ಆದಾಯದ ಮೂಲಗಳಿಂದ ಯಾವುದೇ ಲಾಭಾಂಶಗಳು ಇಲ್ಲದಿದ್ದರೂ, ಖರ್ಚು ಮಾತ್ರ ಭಾರಿ ಗಾತ್ರದಲ್ಲಿ ಅಭಿವೃದ್ಧಿಸುತ್ತಿದ್ದು, ಸಾರ್ವಜನಿಕ ಹಿತಾಸಕ್ತಿಗಳಿಗೆ ಪ್ರಯೋಜನವಾಗಿಲ್ಲವೆಂಬುದನ್ನು ಸರಕಾರಕ್ಕೆ ಮನವರಿಕೆ ಮಾಡಿಕೊಡುತ್ತಾರೆ. ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ನುರಿತ ಆರ್ಥಿಕ ತಜ್ಞರನ್ನು ನೇಮಿಸಬೇಕೆಂದು ಸರಕಾರಕ್ಕೆ ಸೂಚಿಸುತ್ತಾರೆ. ಆದಾಯ ತೆರಿಗೆಯ ಪಾಲಿನ ಜೊತೆಗೆ ಉಪ್ಪಿನ ಮೇಲಿನ ಆದಾಯವನ್ನು ನೀಡಬೇಕೆಂಬ ಬೇಡಿಕೆಯನ್ನು ಕೇಂದ್ರ ಸರಕಾರದೆದುರು ಇಡಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಬಂಗಾಲದಂತಹ ರಾಜ್ಯಗಳಲ್ಲಿ ಅದನ್ನು ಆಮದು ಮಾಡಿಕೊಳ್ಳಲಾಗುತ್ತಾದರೂ, ನಮ್ಮ ಪ್ರೆಸಿಡೆನ್ಸಿಯಲ್ಲಿ ಅದನ್ನು ಸ್ಥಳೀಯವಾಗಿ ತಯಾರಿಸಿ ಬಳಸಲಾಗುತ್ತಿದೆ. ಹಾಗಾಗಿ ಅದರ ಮೇಲಿನ

ಕರವು ಶುದ್ಧವಾಗಿ ಜಕಾತಿಯ ಸ್ವರೂಪದ್ದಾಗಿರುತ್ತದೆ. ಹೀಗಾಗಿ ಉಪ್ಪಿನ ಮೇಲೆ ಕರವನ್ನು ವಿಧಿಸಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತಾರೆ. ಹಣಕಾಸಿನ ಸಂಬಂಧಗಳ ಹೊಂದಾಣಿಕೆ ಮಾಡಿಕೊಡುವಲ್ಲಿನ ಪ್ರಶ್ನೆಗಳನ್ನೊಳಗೊಂಡು ಸಂವಿಧಾನವೇ ಪರಿಷ್ಕರಿಸಲ್ಪಡುತ್ತಿರುವ ಈ ಸಂದರ್ಭದಲ್ಲಿ ಹೆಚ್ಚಿನ ಆದಾಯದ ಸಂಪನ್ಮೂಲಗಳನ್ನು ಪಡೆದುಕೊಳ್ಳುವುದು ಸಾಧ್ಯವಾಗುತ್ತದೆ. ಖರ್ಚು-ವೆಚ್ಚಗಳಲ್ಲಿನ ಕಡಿತದೆಡೆ ಹೆಚ್ಚಿನ ಒತ್ತು ನೀಡುವುದು ನಿರುಪಯುಕ್ತವಾದುದಾಗಿದೆ. ಏಕೆಂದರೆ ಇದರ ಪರಿಣಾಮವಾಗಿ ಚಪರಾಸಿಗಳು, ಕಾರಕೂನರು ಮತ್ತಿತರ ಕೆಳದರ್ಜೆಯ ನೌಕರರು ಮನೆ ಸೇರುತ್ತಾರೆ ಮತ್ತು ಇವರೊಂದಿಗೆ ಇವರನ್ನೇ ನಂಬಿಕೊಂಡಿರುವ ಇವರ ಕುಟುಂಬದವರು ನಿರ್ಗತಿಕರಾಗುತ್ತಾರೆ. ಹೀಗಾಗಿ ಖರ್ಚು-ವೆಚ್ಚಗಳಲ್ಲಿನ ಕಡಿತದೆಡೆ ಮುಂದಡಿಯಿಡಬಾರದು ಮತ್ತು ಇದರಿಂದ ಯಾವುದೇ ರೀತಿಯಾಗಿ ಗಣನೀಯವಾದ ಹಣಕಾಸಿನ ಉಳಿತಾಯವನ್ನು ಮಾಡಲಾಗುವುದಿಲ್ಲವೆಂದು ಪಂಡಿತಪ್ಪನವರು ಶಾಸನ ಸಭೆಯಲ್ಲಿ ಚರ್ಚಿಸುತ್ತಾರೆ.[೮೫]

೪.೨.೪.೪.೬. ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಕೊಡುಗೆ(೬ ಆಗಸ್ಟ್ ೧೯೨೮):

ಈ ಠರಾವಿನಲ್ಲಿ ಎತ್ತಿರುವ ಪ್ರಶ್ನೆಯು ಗ್ರಾಮೀಣ ಪ್ರದೇಶಗಳ ಮೇಲೆ ಮಹತ್ತರ ಪರಿಣಾಮ ಬೀರುವ ಕಾರಣ, ಬಹಳ ಮುಖ್ಯವಾದುದಾಗಿತ್ತು. ಶಿಕ್ಷಣದ ಬೇಡಿಕೆಯಂತೆ ಸರಕಾರದಿಂದ ತೃಪ್ತಿದಾಯಕ ಅನುದಾನವಿಲ್ಲ. ಹೀಗಾಗಿ ನಮ್ಮ ದೇಶದ ಶಿಕ್ಷಣದ ಸುಧಾರಣೆಗೆ ಸರಕಾರವು ಅನುದಾನ ನೀಡುವಲ್ಲಿ ಗಮನ ಹರಿಸಬೇಕೆಂದು ಪಂಡಿತಪ್ಪನವರು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತಾರೆ. ಶ್ರೇಷ್ಠ ಶಿಕ್ಷಣ ತಜ್ಞರಾದ ಪಂಡಿತಪ್ಪನವರು ಶಿಕ್ಷಣದಿಂದ ಸಮಾಜ ಪ್ರಗತಿಯಾಗುತ್ತದೆ ಎಂದು ಬಲವಾಗಿ ನಂಬಿಕೊಂಡಿದ್ದರು. ಹೀಗಾಗಿ ತಮ್ಮ ಜೀವನದುದ್ದಕ್ಕೂ ಶಿಕ್ಷಣಕ್ಕಾಗಿ ಬೇಕಾಗುವ ಯೋಜನೆಗಳನ್ನು ಹಾಕುತ್ತಿದ್ದರು.[೮೬]

ಮಂತ್ರಿ ಮಹೋದಯರು ಮಾಡುವ ಅನಗತ್ಯ ಪ್ರವಾಸಗಳನ್ನು ಮತ್ತು ಅವುಗಳ ಖರ್ಚುಗಳನ್ನು ಪಂಡಿತಪ್ಪನವರು ಮಂತ್ರಿ ಮಂಡಲದಲ್ಲಿ ಪ್ರಶ್ನಿಸುತ್ತಾರೆ. ಇದರಿಂದ ಮಂತ್ರಿಗಳು ಸರಕಾರದಿಂದ ಅನವಶ್ಯವಾಗಿ ಆರ್ಥಿಕ ನಷ್ಟವನ್ನು ಮಾಡಬಾರದೆಂಬುದಾಗಿತ್ತು. ೧)೧೯೨೬ನೆಯ ಸಾಲಿನಲ್ಲಿ ಗೌರವಾನ್ವಿತ ಮಂತ್ರಿಮಹೋದಯರು ಭೇಟಿ ನೀಡಿದ ಗ್ರಾಮಗಳು ಅಥವಾ ಪಟ್ಟಣಗಳು ಮತ್ತು ಅವುಗಳ ಜಿಲ್ಲೆಗಳು ೨) ಭೇಟಿ ನೀಡಿದ ದಿನಾಂಕಗಳು ೩) ೧೯೨೬ರ ಸಾಲಿನಲ್ಲಿನ ಇಂತಹ ಪ್ರವಾಸಗಳಿಗೆ ಮಾನ್ಯಮಂತ್ರಿಗಳು ಮಾಡಿರುವ ಒಟ್ಟು ಖರ್ಚು ೪) ನಾಲ್ಕು ತಿಂಗಳ ಅವಧಿಯಲ್ಲಿ ಮಂತ್ರಿಗಳು ಒಂದೇ ಜಿಲ್ಲೆಗೆ ೧೫ಬಾರಿ ಭೇಟಿ ನೀಡಿದರೆಂಬ ಖಚಿತ ಮಾಹಿತಿಯನ್ನಾಧರಿಸಿ ಸರಕಾರದಿಂದ ಮಾನ್ಯ ಮಂತ್ರಿಗಳನ್ನು ಸಾತಾರಾಕ್ಕೆ ಕಳುಹಿಸಲು ಗುಜರಾತಿನ ಪ್ರವಾಹದಂತಹ ವಿಶೇಷ ಸನ್ನಿವೇಶಗಳು ಅಥವಾ ಇತರೆ ಮಹತ್ತರ ಕೆಲಸಗಳಿದ್ದುವೆ ಮತ್ತು ಯಾವ ವಿಷಯವಾಗಿ ಈ ಪ್ರವಾಸಗಳ ಖರ್ಚು ವೆಚ್ಚ ಭರಿಸಲಾಗಿದೆ. ಈ ಪ್ರಶ್ನೆಗಳಿಂದ ಪಂಡಿತಪ್ಪನವರು ಮಂತ್ರಿಗಳು ಸರಕಾರದ ಬೊಕ್ಕಸದಿಂದ ಅನವಶ್ಯವಾಗಿ ಖರ್ಚು ಮಾಡುವುದನ್ನು ವಿರೋಧಿಸುತ್ತಾರೆ.[೮೭]

೪.೨.೪.೪.೬. ಕೈಗಾರಿಕೆಗಳು(೧೦ ಮಾರ್ಚ್ ೧೯೨೮)

ಕೈಗಾರಿಕೋದ್ಯಮಗಳ ಅಭಿವೃದ್ಧಿಗೆ ಸರಕಾರವು ಮಾಡಿದ ಕಾರ್ಯಗಳ ಬಗ್ಗೆ ಪಂಡಿತಪ್ಪನವರು ಸದನದಲ್ಲಿ ಪ್ರಸ್ತಾಪಿಸುತ್ತಾರೆ. ಸರಕಾರಕ್ಕೆ ಅಧಿಕ ತೆರಿಗೆಯನ್ನು ಪಾವತಿಸಬೇಕಾದ ಅನಿವಾರ್ಯತೆ ಜನರಿಗಿದೆ.[೮೮] ಎಂದು ವಾದಿಸುತ್ತಾರೆ.

೪.೨.೪.೪.೭. ಮುಂಬೈ ವಿಶ್ವವಿದ್ಯಾಲಯ ಕರಡು ಮಸೂದೆ(೩೦ ಸಪ್ಟೆಂಬರ್ ೧೯೨೭)

ವಿಶ್ವವಿದ್ಯಾಲಯಕ್ಕೆ ಇರುವ ಕಾನೂನುಗಳು ಕಾಲಮಾನಕ್ಕೆ ತಕ್ಕಂತೆ ಬದಲಾವಣೆ ಹೊಂದಬೇಕು. ಆಯಾ ಕಾಲಕ್ಕೆ ತಕ್ಕಂತೆ ಇರುವ ಕಾನೂನು ವಿಚಾರಗಳನ್ನು ಎಲ್ಲ ಕಾಲದಲ್ಲಿಯೂ ಬಳಸಲಿಕ್ಕೆ ಬರಲು ಸಾಧ್ಯವಿಲ್ಲ. (೨) ಮತ್ತು (೩) ನೆ ಉಪಖಂಡಗಳು ಕೆಲವೊಂದು ಅಧಿಕಾರಗಳನ್ನು ಸಂದರ್ಶಕರು ಮತ್ತು ಕುಲಪತಿಗಳಿಗೆ ವಹಿಸಿಕೊಡುತ್ತದೆ. ಸಂದರ್ಶಕ ಅಧಿಕಾರಿಗಳು ತಮ್ಮ ಪರವೀಕ್ಷಣೆ ಮತ್ತು ತನಿಖೆಯ ನಂತರ ವರದಿಯನ್ನು, ಸಂಸದ ಅಥವಾ ಸಿಂಡಿಕೇಟಿನ ಮುಂದಿಡಲು ಕುಲಪತಿಗಳಿಗೆ ಸಲ್ಲಿಸುತ್ತಾರೆ. ಮತ್ತು ತಮಗೆ ತೋಚಿದ ಅವಶ್ಯ ಅಂಶಗಳನ್ನು ಅಳವಡಿಸಿಕೊಳ್ಳುವ ವಿಚಾರವನ್ನು ವಿಶ್ವವಿದ್ಯಾಲಯಕ್ಕೆ ಬಿಟ್ಟುಕೊಡಬೇಕು. ಬದಲಿಗೆ ಅದು ಕುಲಪತಿಗಳ ಆಕಾಂಕ್ಷೆಗಳನ್ನೋ ಅಥವಾ ಆದೇಶಗಳನ್ನೋ ಪಾಲಿಸುವ ಅಧೀನ ಸಂಸ್ಥೆಯಾಗುವಂತೆ ಒತ್ತಡ ಹೇರಬಾರದು. ವಿಶ್ವವಿದ್ಯಾಲಯಕ್ಕೆ ಕೆಲ ಹಂತದ ವರೆಗೆ ಸ್ವಾತಂತ್ರ್ಯವಿದೆ. ಆದರೆ ೫ನೇಯ ಪರಿಚ್ಛೇದದ ಉಪಖಂಡದ ಪರಿಣಾಮವು ಸ್ಪಷ್ಟವಾಗಿ ವಿಶ್ವವಿದ್ಯಾಲಯದ ಸ್ವಾಯತ್ತತೆಯ ಅತಿಕ್ರಮಣವಾಗಿದೆ. ಆದುದರಿಂದ ಈ ಪರಿಚ್ಛೇದವನ್ನು ತೆಗೆದುಹಾಕಬೇಕೆಂದು ಪಂಡಿತಪ್ಪನವರು ಬಯಸುತ್ತಾರೆ. ಏಕೆಂದರೆ ಈ ಪರಿಚ್ಛೇದವು ಒಬ್ಬನೇ ವ್ಯಕ್ತಿಗೆ ಸಮಸ್ತ ಅಧಿಕಾರವನ್ನು ಹಸ್ತಾಂತರಿಸಿದಂತಾಗುತ್ತದೆ ಎಂದು ಅವರ ಅಭಿಪ್ರಾಯ. ಪಂಡಿತಪ್ಪನವರಿಗೆ ವಿಶ್ವವಿದ್ಯಾಲಯವನ್ನು ಪ್ರಜಾಪ್ರಭುತ್ವವಾದಿಯನ್ನಾಗಿಸುವುದು ಮತ್ತು ಅದರ ಅಧಿಕಾರವನ್ನು ಹೆಚ್ಚಿಸುವುದು ಬಹಳ ಮುಖ್ಯವಾದ ವಿಚಾರವಾಗಿದೆ.[೮೯]

೪.೨.೪.೪.೮. ಮುಂಬಯಿ ಬಾಲಕರ ಸ್ಕೌಟ್ಸ್ ಸಂಸ್ಥೆ(೧೧ನೇಯ ಮಾರ್ಚ್ ೧೯೨೭):

ಪಂಡಿತಪ್ಪನವರು ಮುಂಬಯಿ ಬಾಲಕರ ಸ್ಕೌಟ್ಸ್ ಸಂಸ್ಥೆಗೆ ನೀಡಿದ ಅನುದಾನವನ್ನು ರದ್ದುಪಡಿಸಬೇಕೆನ್ನುವ ವಿಚಾರವನ್ನು ಬೆಂಬಲಿಸುತ್ತಾರೆ. ಈ ಅಭಿಯಾನದ ನ್ಯೂನತೆಗಳನ್ನು ಕಂಡುಕೊಂಡ ಅವರು ಅವುಗಳನ್ನು ಬಗೆಹರಿಸಲು ಸರಕಾರಕ್ಕೆ ವಿನಂತಿಸಿಕೊಳ್ಳುತ್ತಾರೆ. ಸ್ಕೌಟ್ಸ್ ಶಿಬಿರಗಳು ಪ್ರತಿ ಜಿಲ್ಲೆಯಲ್ಲಿ ನಡೆಯುತ್ತಿದ್ದು, ಅವುಗಳ ಖರ್ಚನ್ನು ಭರಿಸಬೇಕಾದ ಅನಿವಾರ್ಯತೆ ಇದೆ. ಕೆಲ ಪ್ರಾಥಮಿಕ ಶಾಲಾ ಉಪಾಧ್ಯಾಯರು ಸ್ಕೌಟಗಳಾಗಿ ತರಬೇತಿ ಪಡೆಯಲು ಆಸೆ ಮತ್ತು ಒಪ್ಪಿಗೆ ಸೂಚಿಸಿದ್ದರೂ, ಅವರ ಸಮವಸ್ತ್ರ ಮತ್ತು ಇತರೆ ಖರ್ಚುವೆಚ್ಚ ಭರಿಸುವುದು ಸಮಸ್ಯೆಯಾಗಿರುವುದನ್ನು ಪಂಡಿತಪ್ಪನವರು ಗುರುತಿಸಿದ್ದಾರೆ. ಹೀಗಾಗಿ ಈ ಸಮಸ್ಯೆಗಳನ್ನು ಬಗೆಹರಿಸಲು ಪುರಸಭೆಗಳು, ಸ್ಥಾನಿಕ ಸಮಿತಿಗಳು

ಖರ್ಚಿನ ಹೊಣೆಯನ್ನು ಹೊತ್ತರೆ ಸರಕಾರ ಈ ಸಂಸ್ಥೆಗೆ ಆರ್ಥಿಕ ಭರವಸೆಯನ್ನು ನೀಡಬೇಕಾಗುತ್ತದೆ ಎಂಬ ಸಲಹೆಯನ್ನು ನೀಡುತ್ತಾರೆ.[೮೦]

೪.೪.೨.೪.೯. ಭಾರತೀಯ ಶಾಸಕಾಂಗ ನಿಯೋಗ ಸಮಿತಿ(೨ನೆಯ ಆಗಸ್ಟ್ ೧೯೨೮)

ಈ ಸಮಿತಿಯ ಅಡಿಯಲ್ಲಿ ಪಂಡಿತಪ್ಪನವರು ಸರಕಾರಕ್ಕೆ ಹಲವಾರು ಸವಾಲುಗಳನ್ನು ಮುಂದಿಡುತ್ತಾರೆ. ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಅಕ್ಷರಸ್ಥರ ಸಂಖ್ಯೆ ಎಷ್ಟಿದೆ? ಉದ್ದಿಮೆಗಳ ಪರಿಸ್ಥಿತಿ ಏನು? ಕೃಷಿಯ ಸ್ಥಿತಿ ಏನಿದೆ? ತಾಂತ್ರಿಕ ಶಿಕ್ಷಣದ ಪರಿಸ್ಥಿತಿ ಎಂತಹುದು? ಸರಕಾರದಿಂದ ನೇಮಿಸಲ್ಪಟ್ಟ ಸಮಿತಿಯು ಅತ್ಯಂತ ದುಬಾರಿ ವೇತನದ ಅಧಿಕಾರ ಸ್ಥಾನಗಳನ್ನು ಸೃಷ್ಟಿಸಿದ್ದಾರೆ. ಈ ಎಲ್ಲ ವಿಚಾರಗಳನ್ನು ಪರಿಷ್ಕರಿಸಲು ಸರಕಾರಕ್ಕೆ ಮನವಿ ಸಲ್ಲಿಸುತ್ತಾರೆ. ರಸ್ತೆಗಳ ನಿರ್ಮಾಣ, ಅದರ ದುರಸ್ತಿ, ಖರ್ಚು-ವೆಚ್ಚಗಳ ಬಗ್ಗೆ ಸರಕಾರದ ಮುಂದೆ ಇಟ್ಟ ಲೆಖ್ಖಾಚಾರವನ್ನು ನೋಡಿದರೆ ಪಂಡಿತಪ್ಪನವರು ಮಿತವ್ಯಯದಿಂದ ಸರಕಾರ ಕೆಲಸಮಾಡಬೇಕು. ಮತ್ತು ಜನತೆಗೆ ಒಳಿತಾಗಬೇಕು ಎಂಬ ಚಿಂತನೆ ಮಾಡುತ್ತಿದ್ದುದು ಸ್ಪಷ್ಟವಾಗುತ್ತದೆ. ಇದಕ್ಕೆ ಉದಾಹರಣೆಯೆಂದರೆ ಅವರ ಮಂಡಿಸಿದ ಒಂದು ಠರಾವು. ೧೯ ಲಕ್ಷ ಅನುದಾನ ಮತ್ತು ಸರ್ಕಾರದ ಬಳಿಯಿರುವ ೧ಲಕ್ಷ ಕಾಯ್ದಿಟ್ಟ ಹಣವೆರಡನ್ನು ವಜಾ ಹಾಕಬೇಕು. ಹಾಗಾದಲ್ಲಿ ೭೧ಲಕ್ಷದಷ್ಟು ಮೊತ್ತವು ಉಳಿಯಲಿದ್ದು, ಉಳಿದಂತೆ ವಿಸ್ತರಣಾ ಖರ್ಚು ಆ ಮೊತ್ತದ ೪೦ಪ್ರತಿಶತದಷ್ಟು ಇರುತ್ತದೆ. ಆರ್ಥಿಕವಾಗಿ ಬಿಗುವಿನ ವಾತಾವರಣವಿದ್ದರೂ, ಕಾಮಗಾರಿಗಳ ಮೇಲೆ ಕಡಿಮೆ ಖರ್ಚು ಮಾಡಲಾಗುತ್ತಿದ್ದು, ಖರ್ಚು ಗಗನಕ್ಕೇರುತ್ತಿದೆ. ೧೯೨೧-೨೨ರಿಂದ ಇತ್ತಿಚೆಗೆ ಲೋಕೋಪಯೋಗಿ ಇಲಾಖೆಯ ವತಿಯಿಂದ ನಿರ್ಮಾಣವಾದ ರಸ್ತೆಗಳ ವಿಸ್ತಾರವನ್ನು ೧,೪೩೩ ಮೈಲಿಗಳಷ್ಟು ಕಡಿಮೆ ಮಾಡಲಾಗಿದೆ. ೧೯೨೧-೨೨ರಲ್ಲಿ ೯,೯೫೧ಮೈಲಿಗಳಷ್ಟು ರಸ್ತೆ ಮಾಡಲಾಗಿತ್ತು. ಆದರೆ ೧೯೨೭-೨೮ರಲ್ಲಿ ಅದು ಕೇವಲ ೮,೫೧೮ ಮೈಲಿಗಳಷ್ಟಿತ್ತು. ೧೯೨೧-೨೨ನೇ ಸಾಲಿನಲ್ಲಿ ಪ್ರತಿ ಮೈಲು ರಸ್ತೆಯ ದುರಸ್ತಿ ಮತ್ತು ನಿರ್ವಹಣಾ ವೆಚ್ಚವು ಕೇವಲ ೨೫೬ ರೂಪಾಯಿಗಳಷ್ಟಿತ್ತು. ಆದರೆ ೧೯೨೭ರಲ್ಲಿ ಅದು ೪೦೬ ರೂಪಾಯಿಗಳಾಷ್ಟಾಯಿತು. ಅಂದರೆ ಪ್ರತಿಶತ ೫೯% ರಷ್ಟು ಏರಿಕೆ. ಇದರಿಂದ ಈ ವೆಚ್ಚದಲ್ಲಿ ಮೊತ್ತವನ್ನು ಕಡಿತಗೊಳಿಸುವ ವಿಚಾರವನ್ನು ಪಂಡಿತಪ್ಪನವರು ವಿಶದಪಡಿಸುತ್ತಾರೆ.[೮೧]

೪.೨.೪.೪.೧೦. ೨೭ನೆಯ ಜುಲೈ ೧೯೨೯ದಂದು ಮಾಡಿದ ಠರಾವುಗಳು:

೧೮೬೬-೬೭, ೧೮೯೬-೯೭ ಮತ್ತು ೧೯೨೬-೨೭ರಲ್ಲಿನ ಕೆಳಗಿನ ವಿಷಯಗಳ ಕುರಿತಾಗಿ ಪ್ರಾಂತ್ಯ, ವಿಭಾಗ ಮತ್ತು ಜಿಲ್ಲಾವಾರು ಅಂಕಿಅಂಶಗಳ ಬಗ್ಗೆ ಪಂಡಿತಪ್ಪನವರು ಬೇಡಿಕೆ ಸಲ್ಲಿಸುತ್ತಾರೆ. ಅವುಗಳೆಂದರೆ:

೧. ಅ.ಒಟ್ಟು ಕೃಷಿ ಸಾಗುವಳಿ ಮಾಡಬಹುದಾದ ಭೂಮಿ ಬ.ಒಟ್ಟು ಸಾಗುವಳಿ ಮಾಡಲಾದ ಭೂಮಿ ಕ.ಸಾಗುವಳಿ ಮಾಡದೆ ಇರುವ ಒಟ್ಟು ಭೂಮಿ ಡ.(ಬ) ಮತ್ತು (ಅ) ನಡುವಿನ ಶೇಕಡಾವಾರು ಅನುಪಾತ ಇ.(ಕ) ಮತ್ತು (ಅ) ನಡುವಿನ ಶೇಕಡಾವಾರು ಅನುಪಾತ

೨. ಕ್ರೋಢಿಕರಿಸಿದ ಒಟ್ಟು ಭೂ ಕಂದಾಯ

೩. ೧೮೬೬-೬೭ನ್ನು ಪರಿಗಣಿಸಿದಾಗ ೧೮೯೬-೯೭ ಮತ್ತು ೧೯೨೬-೨೭ ಶೇಖರಿಸಲಾದ ಒಟ್ಟು ಭೂಕಂದಾಯದಲ್ಲಿನ ಏರಿಕೆ, ಅದರಲ್ಲಿ ಎಷ್ಟು ಪಾಲು. ಅ. ಕಂದಾಯದಲ್ಲಿನ ಏರಿಕೆ ಬ. ಕೃಷಿ ಚಟುವಟಿಕೆಯ ವಿಸ್ತರಣೆಗೆ ಸಂಬಂಧಿಸಿದಂತೆ ಬಾಕಿ ಉಳಿದಿದೆ.[೯೨]

ರೈತಪರ ಹೋರಾಟಗಾರರಾದ ಪಂಡಿತಪ್ಪನವರು ಸರಕಾರದಿಂದ ರೈತರಿಗೆ ಮತ್ತು ರೈತರಿಂದ ಸರಕಾರಕ್ಕೆ ಯಾವುದೇ ರೀತಿಯ ಅನ್ಯಾಯವಾಗದಂತೆ ಸದಾ ಚಿಂತಿಸುತ್ತಿದ್ದರು. ಹೀಗಾಗಿ ಅಂಕಿಅಂಶಗಳ ಆಧಾರದಿಂದ ದೇಶ ಅಭಿವೃದ್ಧಿಯಾಗಲು ಯಾವ ರೀತಿ ಮುಂದಾಲೋಚನೆ ಮಾಡಿಕೊಳ್ಳಬೇಕು ಎಂಬುದನ್ನು ವಿವರಿಸುವುದು ಅವರ ಉದ್ದೇಶವಾಗಿತ್ತು.

೪.೨.೪.೪.೧೧. ಶಾಲಾ ಮಕ್ಕಳಿಗೆ ವೈದ್ಯಕೀಯ ತಪಾಸಣೆ(೨೭ ಜುಲೈ ೧೯೨೯):

ವಿವಿಧ ಸರಕಾರಿ ಶಾಲೆಗಳಲ್ಲಿ ಓದುತ್ತಿರುವ ಶಾಲಾಮಕ್ಕಳಿಗೆ ವೈದ್ಯಕೀಯ ತಪಾಸಣೆ ಇರಲೇಬೇಕೆಂದು ಸರಕಾರವು ಯೋಜನೆಯನ್ನು ಹಾಕಿಕೊಂಡಿತ್ತು. ನಂತರದಲ್ಲಿ ಮಿತವ್ಯಯದ ಮಾನವೊಡ್ಡಿ ಆ ಯೋಜನೆಯನ್ನು ಸ್ಥಗಿತಗೊಳಿಸಿತ್ತು. ಇದನ್ನು ಪ್ರಶ್ನಿಸಿದ ಪಂಡಿತಪ್ಪನವರು ವಿದ್ಯಾರ್ಥಿಗಳ ಸಾಮಾನ್ಯ ಆರೋಗ್ಯದ ಸ್ಥಿತಿಯನ್ನು ಅರಿಯಲು ಈ ಯೋಜನೆ ಅವಶ್ಯವಿದೆ ಎಂಬುದನ್ನು ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟರು.[೯೩]

೪.೨.೪.೪.೧೨. ದಖನ್ನಿನ ನೀರಾವರಿ ಕಾಮಗಾರಿಗಳು(ಆಗಸ್ಟ್ ೬, ೧೯೩೧):

ಸಮಸ್ಯೆಗಳನ್ನು ಆರ್ಥಿಕ ದೃಷ್ಟಿಕೋನದಿಂದಲೇ ಪರಿಗಣಿಸುತ್ತಿದ್ದ ಪಂಡಿತಪ್ಪನವರು, ದಖನ್ನಿನ ನೀರಾವರಿ ಕಾಮಗಾರಿಗಳ ಫಲಿತಾಂಶಗಳು ನಿರಾಶಾದಾಯಕವಾಗಿದ್ದು ಅವುಗಳ ಪರಿಹಾರವೇನು? ಎಂಬುದನ್ನು ಪ್ರಸ್ತುತ ಪಡಿಸಿದರು. ನೀರಾವರಿ ಇಲಾಖೆಯ ಆಡಳಿತ ವ್ಯವಸ್ಥೆಯ ವೈಖರಿಯ ಸ್ಥೂಲ ಪರೀಕ್ಷಣೆ ಮತ್ತು ಈ ನಷ್ಟಕ್ಕೆ ಕಾರಣಗಳನ್ನು ತನಿಖೆಮಾಡಲು ಪಂಡಿತಪ್ಪನವರು ಸೂಚಿಸುತ್ತಾರೆ. ನಿಷ್ಪ್ರಯೋಜಕಗಳೆಂದು ಗುರುತಿಸಲಾಗಿರುವ ಆಡಳಿತದ ನಲವತ್ತೆಂಟು ವ್ಯವಸ್ಥೆಗಳಲ್ಲಿ ಕೇವಲ ಆರು ಮಾತ್ರ ಸ್ವಲ್ಪ ಮಟ್ಟಿನ ಲಾಭಾಂಶವನ್ನು ಕೊಡುತ್ತಿದ್ದು, ಉಳಿದಂತೆ ನಲವತ್ತೆರಡು ವಿಭಾಗಗಳು ನಷ್ಟದಲ್ಲಿಯೇ ಕಾರ್ಯ ನಿರ್ವಹಿಸುತ್ತಿರುವುದನ್ನು ಸರಕಾರದ ಗಮನಕ್ಕೆ ತರುತ್ತಾರೆ. ಉತ್ಪಾದನೆಯಾಗುತ್ತಿರುವ ಕಂದಾಯಕ್ಕಿಂತಲೂ ಹೆಚ್ಚು ಕಾಮಗಾರಿಯ ಖರ್ಚುವೆಚ್ಚವೇ ಇರುವುದನ್ನು ತಿಳಿಸುತ್ತಾರೆ. ಅದಕ್ಕೆ ಉದಾಹರಣೆಯಾಗಿ ಶಿರುಸಫಹಾಳ ಕೆರೆಯ ಕುರಿತಾಗಿ ಹೇಳುತ್ತಾರೆ. ಇಲ್ಲಿನ ಒಟ್ಟು ಕಂದಾಯವು ೫,೧೧೦ರೂಪಾಯಿಗಳು. ಇಲ್ಲಿ ಕಾಮಗಾರಿಯ ಖರ್ಚುವೆಚ್ಚಗಳು ಎರಡು ರೀತಿಯದ್ದಾಗಿದೆ. ಒಂದು ಕಂದಾಯ ನಿರ್ವಹಣೆ ಮತ್ತು ದುರಸ್ತಿ ಖರ್ಚು. ಕಂದಾಯ ನಿರ್ವಹಣೆಯು ಸರಕಾರಕ್ಕೆ ಬಿಳಿಯಾನೆ ಸಾಕಿದಂತಾಗಿದೆ. ೫,೦೦೦ರೂಪಾಯಿ ಕಂದಾಯ ಸಂಗ್ರಹಿಸಲು ಬೇಕಾದ ಕರಪತ್ರಗಳ ತಯಾರಿಗೆ ಸರಿಸುಮಾರು ೧೩,೦೦೦ ರೂಪಾಯಿಗಳ ಖರ್ಚಿದೆ. ಅದೇ ತರಹ ಯರಳಾ ನದಿ ನೀರಾವರಿ ಕಾಮಗಾರಿಯ ಒಟ್ಟು ಕಂದಾಯವು ೨೦,೮೦೦ರೂಪಾಯಿಗಳಷ್ಟಿದ್ದು, ಕಂದಾಯ ನಿರ್ವಹಣಾ ವೆಚ್ಚವೇ ೨೪,೦೦೦ದಷ್ಟಿದೆ. ಹೀಗಾಗಿ ನೀರಾವರಿ ಆಡಳಿತ ವರದಿಯನ್ನು ವಿಶ್ಲೇಷಿಸಿ ಎಲ್ಲಿ ಮತ್ತು ಹೇಗೆ ಸ್ಥಾಪನಾ

ವೆಚ್ಚವನ್ನು ಹೆಚ್ಚಿಸಲಾಗಿದೆ ಎಂಬುದನ್ನು ಕಂಡುಕೊಳ್ಳಲು ಮಾನ್ಯಮಂತ್ರಿಗಳಿಗೆ ಶಿಫಾರಸ್ಸು ಮಾಡುತ್ತಾರೆ.[೬] ಹೀಗೆ ಪಂಡಿತಪ್ಪನವರು ಮಾಡಿದ ಶಿಫಾರಸ್ಸುಗಳನ್ನು ಗಮನಿಸಿ ಅಂದಿನ ಮಂತ್ರಿಮಂಡಲವು ಕಾರ್ಯಗತಗೊಳಿಸಲು ಆಲೋಚಿಸುತ್ತಿತ್ತು. ಅಂತಹ ಸೂಕ್ತ ಯೋಜನೆಗಳನ್ನು ಪಂಡಿತಪ್ಪನವರು ಹೊಂದಿದ್ದರು. ಈ ಮೇಲಿನ ವಿಚಾರವನ್ನು ಮಂತ್ರಿಗಳು ಪರಿಗಣಿಸದೇ ಇದ್ದರೆ, ದರಗಳ ಹೆಚ್ಚಳದಿಂದ ಸಾರ್ವಜನಿಕರು ಆಕ್ರೋಶಗೊಳಗಾಗಿ ಅನಾಹುತವಾಗಬಹುದು ಎಂಬುದಂತೂ ಸತ್ಯ. ಹೀಗಾಗದಂತೆ ಸಾರ್ವಜನಿಕರಿಗೆ ಸಮಸ್ಯೆಯನ್ನು ಮನವರಿಕೆ ಮಾಡಿಕೊಡಲು ನೀರಿನ ಮೇಲಿನ ಕರವನ್ನು ಹೆಚ್ಚಿಸುವ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಲು ಸೂಚಿಸುತ್ತಾರೆ. ಒಟ್ಟಿನಲ್ಲಿ ಪ್ರಜೆ ಮತ್ತು ಸರಕಾರದ ಮಧ್ಯದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳು ಬಾರದಂತೆ ಸರಕಾರವು ಆ ನಿಟ್ಟಿನಲ್ಲಿ ಕೆಲಸ ನಿರ್ವಹಿಸಬೇಕೆಂದು ಪಂಡಿತಪ್ಪನವರ ವಿಚಾರವಾಗಿತ್ತು.

೪.೨.೪.೪.೧೩. ಸ್ಥಾನಿಕ ಸಮಿತಿ ಕಾಯಿದೆ ತಿದ್ದುಪಡಿ ಮಸೂದೆ(೨೧ ಜುಲೈ ೧೯೩೧):

ದಂಡಾಧಿಕಾರ ಹೊಂದಿದ್ದರೂ ಪೋಲಿಸ್ ಪಾಟೀಲರು ಸ್ಥಾನಿಕ ಸಮಿತಿಯ ಕಂದಾಯ ವಸೂಲಿ ಮಾಡುವುದಕ್ಕೆ ಇಂತಿಷ್ಟು ಸಂಭಾವನೆಯನ್ನು ಪಡೆಯುವ ಕುಲಕರ್ಣಿಗಳನ್ನೇ ಹೋಲುತ್ತಾರೆ. ಹೀಗಾಗಿ ಪೋಲಿಸ್ ಪಾಟೀಲರು ಸ್ಥಾನಿಕ ಸಮಿತಿಯ ಸದಸ್ಯರಾಗಿ ತಮ್ಮ ಕಾರ್ಯವನ್ನು ನೆರವೇರಿಸಬೇಕೆಂದು ಸರಕಾರವು ಅವರನ್ನು ನೇಮಿಸಿತ್ತು. ಅವರು ತಮ್ಮ ಸೇವೆಯ ಮೂಲಕ ಸ್ಥಾನಿಕ ಸಮಿತಿಗಳಿಗೆ ಅನುದಾನವನ್ನು ತಂದುಕೊಡುವವರಾಗಿದ್ದರು. ಆದರೆ ಈಗ ಸಾರ್ವಜನಿಕ ಕ್ಷೇತ್ರವನ್ನು ಪ್ರತಿನಿಧಿಸುವ ಪೋಲಿಸ್ ಪಾಟೀಲರ ಈ ಎಲ್ಲ ಹಕ್ಕುಗಳನ್ನು ಕಾನೂನು ತಜ್ಞರು ಕಸಿದುಕೊಂಡಿದ್ದಾರೆ. ಆದರೆ ಇದು ಸಾಧುವಲ್ಲ. ಇದನ್ನು ಸ್ಥಾನಿಕ ಸಮಿತಿಗಳು ಮತ್ತು ಪೋಲಿಸ್ ಪಾಟೀಲರೊಂದಿಗೆ ಸಮಾಲೋಚಿಸಿ ಅಭಿಪ್ರಾಯವನ್ನು ಪಡೆದು, ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಂದಲೂ ಬೆಂಬಲಿಸಲ್ಪಟ್ಟಾಗ ಆ ತಿದ್ದುಪಡಿ ಮಸೂದೆಗೆ ಮಾನ್ಯತೆ ಬರುತ್ತದೆ ಎಂದು ಪಂಡಿತಪ್ಪನವರು ಅಭಿಪ್ರಾಯಪಟ್ಟಿದ್ದಾರೆ.[೬೫]

೪.೨.೪.೪.೧೪. ಮುಂಬೈ ತಂಬಾಕು ಕಾಯ್ದೆ ತಿದ್ದುಪಡಿ ಕಾಯಿದೆ (ಫೆಬ್ರುವರಿ ೧೯೩೫ ೧೯೩೩):

ತಂಬಾಕು ಕಾಯ್ದೆಯ ಅವಧಿಯು ಎರಡು ವರ್ಷಗಳಿದ್ದು, ನಂತರ ಅದನ್ನು ತೆಗೆದು ಹಾಕಬೇಕೆಂದು ಸದನದಲ್ಲಿ ಒಪ್ಪಂದವಾಗಿತ್ತು. ಆದರೆ ಪಂಡಿತಪ್ಪನವರು ಅದರ ಅವಧಿಯನ್ನು ಮೂರು ವರ್ಷಗಳ ವರೆಗೆ ಮುಂದುವರಿಸಲು ಒತ್ತಾಯಿಸುತ್ತಾರೆ. ಜೊತೆಗೆ ಅದರ ಸಾಧಕಗಳನ್ನು ತಿಳಿಯಪಡಿಸುತ್ತಾರೆ. ಇಡೀ ಮುಂಬಯಿ ಪ್ರಾಂತ್ಯದಲ್ಲಿ, ತಂಬಾಕು ಉತ್ಪಾದಿಸುವ ಕ್ಷೇತ್ರವು ಕೇವಲ ಕೈರಾ ಮತ್ತು ಬೆಳಗಾವಿ ಹೀಗೆ ಎರಡೇ ಜಿಲ್ಲೆಗಳಿಗೆ ಸೀಮಿತವಾಗಿದೆ. ತಂಬಾಕು ಬೆಳೆಯುವ ಒಟ್ಟು ಪ್ರದೇಶದ ೭೩% ಭೂಮಿಯು ಈ ಎರಡು ಜಿಲ್ಲೆಗಳ ವ್ಯಾಪ್ತಿಯಲ್ಲಿಯೇ ಬರುತ್ತದೆ ಮತ್ತು ಈ ವಿಚಿತ್ರ ಸನ್ನಿವೇಶದ ತತ್ಪರಿಣಾಮ ಇಲ್ಲಿನ ಜನರೇ ಅತ್ಯಂತ ತೊಂದರೆಗೊಳಗಾದವರಾಗಿದ್ದಾರೆ. ಅದರಲ್ಲೂ ಬೆಳಗಾವಿ ಜಿಲ್ಲೆಯ ನಿಪ್ಪಾಣಿ ಮತ್ತು ಚಿಕ್ಕೋಡಿ ತಾಲ್ಲೂಕುಗಳಲ್ಲಿ ನಡೆಯುತ್ತಿದ್ದ ತಂಬಾಕು ವ್ಯಾಪಾರ ೩೦%ರಿಂದ ೪೦%

ಕುಂಠಿತಗೊಂಡಿದ್ದು, ನೆರೆಯ ರಾಜ್ಯದ ಊರುಗಳಾದ ಸಾಂಗ್ಲಿ, ಜೈಸಿಂಗಪುರ ಮತ್ತು ಕಾಗಲಗಳಲ್ಲಿ ಹೆಚ್ಚಾಗಿದ್ದನ್ನು ಪಂಡಿತಪ್ಪನವರು ಗುರುತಿಸಿದ್ದಾರೆ. ಹೀಗಾಗಿ ಬೆಳಗಾವಿ ಜಿಲ್ಲೆಯಲ್ಲಿ ತಂಬಾಕು ವ್ಯಾಪಾರವು ಗಣನೀಯವಾಗಿ ಕುಂದತೊಡಗುತ್ತಿದ್ದು, ಅದು ನೆರೆರಾಜ್ಯಗಳಿಗೆ ಹಂತ ಹಂತವಾಗಿ ವರ್ಗಾಯಿಸಲ್ಪಡುತ್ತದೆ. ಚಿಲ್ಲರೆ ಮಾರಾಟಗಾರರನ್ನು ಪರಿಗಣನೆಗೆ ತೆಗೆದುಕೊಂಡಲ್ಲಿ, ಬಳಕೆದಾರನಿಗೆ ಪಕ್ಕದ ರಾಜ್ಯದಲ್ಲಿ ಕಡಿಮೆ ಬೆಲೆಗೆ ತಂಬಾಕು ದೊರಕುವುದಾದರೆ ತನ್ನ ಮನೆಯ ಚಿಲ್ಲರೆ ವ್ಯಾಪಾರಿಯಲ್ಲಿ ಆತ ತಂಬಾಕು ಕೊಳ್ಳುವುದಿಲ್ಲ. ಇದಕ್ಕೆ ಕಾರಣ ಆತನ ಮೇಲೆ ಹೇರಲಾಗಿರುವ ತೆರಿಗೆ ಮತ್ತು ಆತ ಸಾಮಾನ್ಯವಾಗಿ ನಿಗದಿಸುವ ಅಧಿಕ ದರ. ಹೀಗಾಗಿ ವ್ಯಾಪಾರವು ನೆರೆ ರಾಜ್ಯಗಳಿಗೆ ಸ್ಥಳಾಂತರವಾಗಿದೆ ಎಂಬುದನ್ನು ಪಂಡಿತಪ್ಪನವರು ಸ್ಪಷ್ಟಪಡಿಸುತ್ತಾರೆ. ಹೀಗಾಗಿ ಚಾಲ್ತಿಯಲ್ಲಿರುವ ಕಾಯ್ದೆಯಡಿ ಈ ಉತ್ಪನ್ನದ ಮೇಲೆ ತೆರಿಗೆ ವಿಧಿಸಬಾರದು. ಬೆಳೆಗಾರ ಮತ್ತು ಬಳಕೆದಾರರಿಗೆ ಹೊರೆಯಾಗದಂತೆ ತೆರಿಗೆಯನ್ನು ವಿಧಿಸಬೇಕು. ಇಲ್ಲದಿದ್ದರೆ ಸಣ್ಣ ಕೈಗಾರಿಕೆಗಳು ಮಾಯವಾಗುತ್ತವೆ ಎಂದು ಸದಸ್ಯರಿಗೆ ಮನವರಿಕೆ ಮಾಡಿಕೊಡುತ್ತಾರೆ. ಇದರಿಂದ ಸ್ಥಳೀಯ ಕೈಗಾರಿಕೆಗಳು ನಶಿಸಿ ಹೋಗದಂತೆ ನೋಡಿಕೊಳ್ಳುವುದು ಸರಕಾರದ ಹೊಣೆಗಾರಿಕೆ ಎಂದು ಪಂಡಿತಪ್ಪನವರು ಅತ್ತ ಗಮನ ಸೆಳೆಯುತ್ತಾರೆ.

ಇವುಗಳಲ್ಲದೆ ಬಡ್ಡಿ ವ್ಯಾಪಾರಿಗಳ ಮಸೂದೆ, ಮುಂಬಯಿ ಸಿಟಿ ಪೋಲಿಸ್ ಹೆಚ್ಚಳ, ವಾಹನಗಳ ತೆರಿಗೆ ಪಾವತಿ ಮುಂತಾದ ವಿಷಯಗಳ ಬಗ್ಗೆ ತಾರ್ಕಿಕವಾಗಿ ಮಾತನಾಡುತ್ತಿದ್ದರಲ್ಲದೆ, ಅಷ್ಟೇ ತೀವ್ರವಾಗಿ ಆ ಯೋಜನೆಗಳು ಜನತೆಗೆ ಮುಟ್ಟುವ ಬಗ್ಗೆ ಕಾಳಜಿ ವಹಿಸುತ್ತಿದ್ದರು.

೪.೨.೫. ಶೈಕ್ಷಣಿಕ:

ಇಪ್ಪತ್ತನೆಯ ಶತಮಾನದ ಶೈಕ್ಷಣಿಕ ಕ್ಷೇತ್ರದಲ್ಲಿ ಹೆಸರುಮಾಡಿದ ಗಣ್ಯರಲ್ಲಿ ಚಿಕ್ಕೋಡಿ ಪಂಡಿತಪ್ಪನವರು ಒಬ್ಬರಾಗಿದ್ದಾರೆ. ಮುಂಬೈ ಕರ್ನಾಟಕದ ಶಿಕ್ಷಣಕ್ಷೇತ್ರದಲ್ಲಿ ಅವರು ನಾಲ್ವತ್ತೈದು ವರ್ಷಗಳವರೆಗೆ ಸಲ್ಲಿಸಿದ ಸೇವೆ ಚಿರಸ್ಮರಣೀಯವಾಗಿದೆ.

ಚಿಕ್ಕೋಡಿ ಪಂಡಿತಪ್ಪನವರ ಶೈಕ್ಷಣಿಕ ಕಾರ್ಯಕ್ಷೇತ್ರ ತುಂಬಾ ಹಿರಿದಾದು. ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯದ ವರೆಗೆ ತಮ್ಮ ಸೇವೆಯನ್ನು ಸಲ್ಲಿಸುತ್ತ ಬಂದಿದ್ದರು. ಅಷ್ಟೇ ಅಲ್ಲ, ಶಿಕ್ಷಣ ಪ್ರಸಾರಕ್ಕೆ ತಮ್ಮ ತನು–ಮನ–ಧನಗಳನ್ನು ಸಮರ್ಪಿಸಿ ದುಡಿದವರು. ಅವರು ಬೃಹತ್ ಶಿಕ್ಷಣಸಂಸ್ಥೆಯೊಂದರ ಸಂಸ್ಥಾಪಕ ಆಜೀವ ಸದಸ್ಯರಲ್ಲಿ ಒಬ್ಬರು. ಅವರು ಮಾಡಿದ ವಿದ್ಯಾಪ್ರಸಾರದ ಕಾರ್ಯವು ಸ್ಮರಣೀಯವಾಗಿದೆ.

ಲಿಂಗಾಯತರಲ್ಲಿ ವಕೀಲರೇ ಇಲ್ಲದ ಸಂದರ್ಭದಲ್ಲಿ ವಕೀಲಿ ವಿದ್ಯೆಯನ್ನು ಪಡೆಯಲು ಹೋದ ಪಂಡಿತಪ್ಪನವರು, ಓದನ್ನು ಅರ್ಧಕ್ಕೆ ನಿಲ್ಲಿಸಿ ಶಿಕ್ಷಕವೃತ್ತಿಯನ್ನು ಆರಿಸಿಕೊಂಡರು. ಆದರೆ ಅಲ್ಲಿಯೂ ಮನಸ್ಸು ನಿಲ್ಲಲಿಲ್ಲ. ಏಕೆಂದರೆ ಲಿಂಗಾಯತಸಮಾಜವು ಅಜ್ಞಾನ, ಅಂಧಕಾರಗಳಿಂದ ತುಂಬಿಹೋಗಿತ್ತು. ಇವು ತೊಲಗಬೇಕಾದರೆ ಶಿಕ್ಷಣವೇ ಮದ್ದು ಎಂಬುದನ್ನು ಅವರು ಅರಿತುಕೊಂಡರು. ಈ ಒಂದು

ಆದರ್ಶದ ನಿರ್ಧಾರಕ್ಕೆ ಬರಲು ಸಮಕಾಲೀನ ಲಿಂಗಾಯತಸಮಾಜದ ಸ್ಥಿತಿಗತಿಗಳು, ಪುಣೆ ಮತ್ತು ಮುಂಬೈಗಳಲ್ಲಿ ಕಳೆದ ವಿದ್ಯಾರ್ಥಿಜೀವನದ ದಿನಗಳು ಪ್ರೇರಕವಾಗಿದ್ದವು.

ಆಗ ಬೆಳಗಾವಿಯಲ್ಲಿ 'ಸರದಾರ ಹೈಸ್ಕೂಲ್' ಪ್ರಸಿದ್ಧವಾಗಿತ್ತು. ಅದು ಈ ಭಾಗದ ದೇಸಾಯಿ, ದೇಶಪಾಂಡೆ, ನಾಡಗೌಡ ಮುಂತಾದ ಸರದಾರರ ಮಕ್ಕಳ ಸಲುವಾಗಿ ಪ್ರಾರಂಭವಾಗಿತ್ತು. ಆದ್ದರಿಂದಲೇ ಅದಕ್ಕೆ 'ಸರದಾರ ಹೈಸ್ಕೂಲ್' ಎಂಬ ಹೆಸರು ಬಂದಿತ್ತು. ಲಿಂಗಾಯತ ವಿದ್ಯಾರ್ಥಿಗಳಿಗೆ ಅಲ್ಲಿ ಪ್ರವೇಶ ಸಿಗುವುದು ಸಾಧ್ಯವಿರಲಿಲ್ಲ. ಶ್ರೀ ಎಂ.ಆರ್.ಸಾಖರೆಯವರು ಹೆಚ್ಚಿನ ಅಂಕಗಳನ್ನು ಗಳಿಸಿದ್ದರೂ ಅವರಿಗೆ ಅಲ್ಲಿ ಪ್ರವೇಶ ಸಿಗಲಿಲ್ಲ ಎನ್ನುವುದು ಇದಕ್ಕೆ ಒಂದು ನಿದರ್ಶನ.[೬] ಹೀಗಾಗಿ, ಮುಂಬೈ ಕರ್ನಾಟಕದ ಲಿಂಗಾಯತರು ಶಿಕ್ಷಣ ಪಡೆದುಕೊಳ್ಳಲು ಕಾತುರರಾಗಿದ್ದರು. ಅವರ ಅನಿವಾರ್ಯತೆಗೆ ಹೈಸ್ಕೂಲ್ ಸ್ಥಾಪನೆಯಾಗಬೇಕಾಯಿತು. ವೀರಶೈವ ಮಹಾಸಭೆಯ ವಾರ್ಷಿಕ ಅಧೀವೇಶನಗಳಲ್ಲಿಯೂ ಶಿಕ್ಷಣ ಸಂಸ್ಥೆಗಳನ್ನು ತೆರೆಯುವ ಬಗ್ಗೆ ಠರಾವುಗಳು ಪಾಸಾಗಿದ್ದವು. ಅವುಗಳ ಆಶಯವೇ 'ಕರ್ನಾಟಕ ಲಿಂಗಾಯತ ಏಜ್ಯುಕೇಶನ್ ಸೊಸೈಟಿ'.

೪.೨.೫.೧. ಕರ್ನಾಟಕ ಲಿಂಗಾಯತ ಏಜುಕೇಶನ್ ಸೊಸೈಟಿ (೧೯೧೬)

ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ಅಸ್ತಿತ್ವಕ್ಕೆ ಬಂದ ಶಿಕ್ಷಣಸಂಸ್ಥೆಗಳಲ್ಲಿ ಬಾಗಲಕೋಟೆಯ 'ಬಸವೇಶ್ವರ ವಿದ್ಯಾವರ್ಧಕ ಸಂಘ', ವಿಜಾಪುರದ 'ಬಿಜಾಪುರ ಲಿಂಗಾಯತ ಏಜುಕೇಶನ ಸೊಸಾಯಿಟಿ' ಮತ್ತು ಬೆಳಗಾವಿಯ 'ಕರ್ನಾಟಕ ಲಿಂಗಾಯತ ಏಜ್ಯುಕೇಶನ್ ಸೊಸೈಟಿ' ಪ್ರಮುಖವಾಗಿವೆ. ಇವುಗಳಲ್ಲಿ ಕರ್ನಾಟಕ ಲಿಂಗಾಯತ ಏಜ್ಯುಕೇಶನ್ ಸೊಸೈಟಿಯು ಇಂದು ಅನೇಕ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತ ಹೆಮ್ಮರವಾಗಿ ಬೆಳೆದಿದೆ. ಅದರ ಸ್ಥಾಪನೆಯ ಹಿನ್ನೆಲೆ ಒಂದು ಅದ್ಭುತ ರೋಮಾಂಚನಕಾರಿ ಇತಿಹಾಸ. ಆ ಸಂದರ್ಭದಲ್ಲಿ ಸಮಾಜದ ಪರಿಸ್ಥಿತಿಯನ್ನು ಕಂಡು, ಸ್ವತಃ ಪ್ರೇರೆಪಿತರಾಗಿ ಲಿಂಗಾಯತ ಸಮಾಜವನ್ನು ಉದ್ಧರಿಸಲೆಂದು ತ್ಯಾಗ, ಪರಿಶ್ರಮಗಳ ಬೆವರಿನ ಫಲದಿಂದ ಹುಟ್ಟಿ ಬಂದ ಸಂಸ್ಥೆ. ಅದು ಏಳು ಜನ ವಿದ್ಯಾವಂತ ಯುವಕರು, ಜೀವನದ ಸುಖ-ಸಂತೋಷಗಳನ್ನು ಅನುಭವಿಸುವುದನ್ನು ಬಿಟ್ಟು, ಸರಕಾರಿ ನೌಕರಿಯನ್ನು ತ್ಯಜಿಸಿ, ಸಮಾಜದ ಅಭಿವೃದ್ಧಿಗೆ ಶಿಕ್ಷಣವೇ ಮದ್ದು ಎಂದು ನಿರ್ಧರಿಸಿದರು. ತಮ್ಮ ಹೊಟ್ಟೆಬಟ್ಟೆ ಕಟ್ಟಿಟ್ಟು, ಸಂಸಾರಿಗಳಾಗಿದ್ದೂ ಋಷಿಸದೃಶ್ಯರಾಗಿ ಬಾಳಿ ಬದುಕಿದರು. ಕೆ.ಎಲ್.ಇ. ಸಂಸ್ಥೆಯನ್ನು ಕಟ್ಟುವಲ್ಲಿ ಅವರು ಮಾಡಿದ ಹೋರಾಟ, ತ್ಯಾಗ, ಪರಿಶ್ರಮಗಳು ಇಂದು ದಂತಕಥೆಯಾಗಿವೆ.

೪.೨.೫.೨. ಕರ್ನಾಟಕ ಲಿಂಗಾಯತ ಏಜ್ಯುಕೇಶನ್ ಸೊಸೈಟಿ ಸ್ಥಾಪನೆ:

ಕಾನೂನು ಪದವಿಯನ್ನು ಅರ್ಧಕ್ಕೆ ನಿಲ್ಲಿಸಿ ಬೆಳಗಾವಿಗೆ ಬಂದ ಪಂಡಿತಪ್ಪನವರು ತನ್ನ ಪದವೀಧರರ ಸ್ನೇಹಿತರೊಂದಿಗೆ, ಸೇರಿ ಕಾರ್ಯೋನ್ಮುಖರಾದರು. ಮುಂಬಯಿಯ 'ವೀರಶೈವ ಆಶ್ರಮ'ದಿಂದ ಸ್ಫೂರ್ತಿಪಡೆದ ಶಿವಮೂರ್ತಿಸ್ವಾಮಿ ಕಣಬರಗಿಮಠ ಅವರು ಬೆಳಗಾವಿಯಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಬೇಕೆಂದಿದ್ದರು. ಇದೇ ಅವಧಿಯಲ್ಲಿ ಪಂಡಿತಪ್ಪನವರು ಒಂದು ಸಮಾಲೋಚನಾ

ಸಭೆಯನ್ನು ಕರೆದಿದ್ದರು. ಅದಕ್ಕೆ ಅವರು 'ವೀರಶೈವ ಪದವೀಧರ ಸಂಘ' ಎಂದು ನಾಮಕರಣ ಮಾಡಿದ್ದರು. ಈ ಸಂಘದಲ್ಲಿ ಪಂಡಿತಪ್ಪನವರಲ್ಲದೆ ಎಚ್.ಎಫ್. ಕಟ್ಟೀಮನಿ, ಎಂ.ಆರ್. ಸಾಖರೆ, ಶಿ.ಶಿ. ಬಸವನಾಳ, ಬಿ.ಬಿ. ಮಮದಾಪೂರ, ಬಿ.ಎಸ್. ಹಂಚಿನಾಳ ಇವರು ಸದಸ್ಯರಾದರು. ಸಾಖರೆಯವರು ಕಾರ್ಯದರ್ಶಿಗಳಾದರು. ಈ ತರುಣರೆಲ್ಲ ಒಂದೇ ವಿಚಾರಧಾರೆಯವರು. ತಾವು ಸ್ಥಾಪಿಸಬೇಕೆಂದಿರುವ ಶಾಲೆಗೆ ಸಹಾಯ ಸಹಕಾರಗಳನ್ನೊದಗಿಸಲು ವೀರಶೈವ ಮುಖಂಡರಲ್ಲಿ ಬಿನ್ನವಿಸಿಕೊಂಡರು.[೯೮]

ಪಂಡಿತಪ್ಪನವರ ಹಿರಿತನದಲ್ಲಿ ಬೆಳಗಾವಿಯಲ್ಲಿ ಒಂದು ಸಮಾಲೋಚನಾ ಸಭೆಯನ್ನು ಕರೆಯಲಾಗಿತ್ತು. ೧೯೧೬ರಲ್ಲಿ ಶಿ.ಶಿ. ಬಸವನಾಳರು ಎಂ.ಎ. ಪದವೀಧರರಾಗಿ ಬಂದ ಮೇಲೆ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ಕುರಿತು ಶ್ರೀ ಪಂಡಿತಪ್ಪ ಚಿಕ್ಕೋಡಿ, ಶ್ರೀ ಬಿ.ಬಿ. ಮಮದಾಪೂರ ಮತ್ತು ಶ್ರೀ ಎಮ್.ಆರ್. ಸಾಖರೆಯವರೊಂದಿಗೆ ಆಲೋಚಿಸಿದರು. ಕೂಡಲೇ ಶ್ರೀ ಪಂಡಿತಪ್ಪನವರ ಹಿರಿತನದಲ್ಲಿ ಅರಟಾಳ ರುದ್ರಗೌಡರನ್ನು ಭೇಟಿಯಾಗಿ ತಮ್ಮ ಮನೋಗತವನ್ನು ಪ್ರಸ್ತಾಪಿಸಿದರು. ಅರಟಾಳರು ಈ ಯುವಕರ ನಿರ್ಧಾರ ಎಷ್ಟೊಂದು ದೃಢವಾಗಿದೆ ಎಂಬುದನ್ನು ಪರೀಕ್ಷಿಸತೊಡಗಿದರು. ಆಗ ಎಚ್.ಎಫ್.ಕಟ್ಟೀಮನಿಯವರು ಅರಟಾಳ ರುದ್ರಗೌಡರಿಗೆ– "ಇವರೆಲ್ಲ ಮಿತ್ರರು ಸರಕಾರಿ ನೌಕರಿ ಸೇರಲಿ, ನಾನೊಬ್ಬನೇ ನಿಮ್ಮ ಕುದುರೆ ಕಟ್ಟುವ ಸ್ಥಳದಲ್ಲಿ ಮೂರು ಇಯತ್ತೆಯ ಎ.ವ್ಹಿ. ಸ್ಕೂಲನ್ನು ಒಂದು ವರ್ಷ ನಡೆಸುತ್ತೇನೆ. ಆಮೇಲೆ ಬಂದ ಮಾಡಿ ಲಿಂಗವಂತ ಹಿರಿಯರು ನಮಗೆ ಯಾರೂ ಸಹಾಯ ಮಾಡಲಿಲ್ಲ. ಎಂದು ಹೇಳುತ್ತ ಹೋಗುತ್ತೇನೆ" ಎಂದರು.[೯೯] ಇದು ಈ ಯುವಕರ ದೃಢ ನಿರ್ಧಾರವನ್ನು ಸ್ಪಷ್ಟಪಡಿಸುತ್ತದೆ.

ಪದವೀಧರರಾದ ತಮ್ಮ ಗುರಿ ಸಮಾಜದಲ್ಲಿ ಶೈಕ್ಷಣಿಕ ಪ್ರಗತಿ ತರುವುದಾಗಿದೆಯೇ ಹೊರತು ತಮ್ಮ ವೈಯಕ್ತಿಕ ಬೆಳವಣಿಗೆಯಲ್ಲ ಎಂಬುದು ಅವರೆಲ್ಲರ ಮನೋಭಾವವಾಗಿತ್ತು. ಇವರ ಮನೋಧರ್ಮವನ್ನು ಮೆಚ್ಚಿದ ಅರಟಾಳ ರುದ್ರಗೌಡರು ಸಪ್ತರ್ಷಿಗಳನ್ನು, ತುಂಬು ಮನಸ್ಸಿನಿಂದ ಆಶೀರ್ವದಿಸಿದರು. ಶ್ರೀಯುತರಾದ ಪಿ.ಆರ್. ಚಿಕ್ಕೋಡಿ, ಶಿ.ಶಿ. ಬಸವನಾಳ, ಮಮದಾಪೂರ, ಎಂ.ಆರ್. ಸಾಖರೆ, ಬಿ.ಎಸ್.ಹಂಚಿನಾಳ ಎಚ್.ಎಫ್. ಕಟ್ಟೀಮನಿ ಮತ್ತು ಬಿ.ಎಲ್. ಪಾಟೀಲ ಒಟ್ಟು ಏಳು ಜನರು ಸೇರಿ ಒಕ್ಕಟ್ಟಿನಿಂದ ಒಂದು ಸಂಸ್ಥೆಯನ್ನು ಸ್ಥಾಪಿಸುವ ನಿರ್ಧಾರ ಮಾಡಿದರು. ಅವರಲ್ಲಿ ಧಾರವಾಡದಲ್ಲಿ ಇರಬೇಕಾದ ಅನಿವಾರ್ಯತೆ ಬಂದೊದಗಿದ್ದರಿಂದ ಈ ಸಂಘಟನೆಯಿಂದ ಹೊರಗುಳಿದರು.

ಇದಾದ ಮೇಲೆ ಹೈಸ್ಕೂಲನ್ನು ಯಾವ ಊರಿನಲ್ಲಿ ಪ್ರಾರಂಭಿಸಬೇಕು ಎನ್ನುವ ಬಗ್ಗೆ ಸಮಾಲೋಚನೆ ನಡೆಯಿತು. ಕೆಲವರು ಧಾರವಾಡದಲ್ಲಿ ಆರಂಭಿಸಲು ಆಗ್ರಹಿಸಿದರು. ಅಲ್ಲಿ ಆಗಲೇ 'ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ' ಸ್ಥಾಪನೆಗೊಂಡಿತ್ತು. ಬೇರೆ ಕೆಲವರು ವಿಜಾಪುರ, ಬಾಗಲಕೋಟೆ, ಶಿವಯೋಗ ಮಂದಿರ ಮೊದಲಾದ ಸ್ಥಳಗಳನ್ನು ಸೂಚಿಸಿದರು. ಈ ಗೊಂದಲವನ್ನು ಪರಿಹರಿಸುವ ಉದ್ದೇಶದಿಂದ ಬಸವನಾಳರು ಮತ್ತು ಇನ್ನುಳಿದವರು ಎರಡನೆಯ ಸಭೆಯನ್ನು ಬೆಳಗಾವಿಯ ಕಲ್ಮಠದಲ್ಲಿ

ನಡೆಸಿದರು. ಅಲ್ಲಿ ಎಲ್ಲರ ಅಭಿಪ್ರಾಯಗಳನ್ನು ಪರಿಶೀಲಿಸಿ, ಅಂತಿಮವಾಗಿ ಬೆಳಗಾವಿಯಲ್ಲಿಯೇ ಶಾಲೆ ಸ್ಥಾಪಿಸುವ ನಿರ್ಧಾರ ಮಾಡಿದರು.[೧೦೦]

೧೯೧೬ ರ ನವಂಬರ್೫ ರಂದು ಬೆಳಗಾವಿ ದಂಡು ಪ್ರದೇಶದ ರಾವ್‌ಬಹಾದ್ದೂರ್ ಅರಟಾಳ ರುದ್ರಗೌಡರ ಬಂಗ್ಲೆಯಲ್ಲಿ ಗಿಲಗಂಚಿ ಅರಟಾಳ ಹೈಸ್ಕೂಲಿನ ಪ್ರವರ್ತಕರ ಸಭೆ ಸೇರಿತ್ತು. ಈ ಸಭೆಗೆ ಹಾಜರಿದ್ದ ಪ್ರಮುಖರೆಂದರೆ ರಾವ್‌ಬಹಾದ್ದೂರ ದೇಸಾಯಿ ಚಚಡಿ, ಸರ್ವಶ್ರೀ ಬಿ.ಬಿ. ಮಮದಾಪೂರ, ಎಸ್.ಎಸ್.ಬಸವನಾಳ, ಪಿ.ಆರ್.ಚಿಕ್ಕೋಡಿ, ಬಿ.ಎಸ್.ಹಂಚಿನಾಳ ಮತ್ತು ಎಚ್.ಎಫ್.ಕಟ್ಟೀಮನಿ. ಈ ಸಭೆಯು 'ಕರ್ನಾಟಕ ಲಿಂಗಾಯತ ಏಜ್ಯುಕೇಶನ್ ಸೊಸೈಟಿ'ಯನ್ನು ರಚಿಸಲು ನಿರ್ಣಯಿಸಿತು. ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ರೂಪಿಸಿದ ಸೊಸೈಟಿಯ ನಿಯಮಾವಳಿಗಳನ್ನು ಸಭೆ ಸರ್ವಾನುಮತದಿಂದ ಒಪ್ಪಿಕೊಂಡಿತು.[೧೦೧] ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ಸೂಚಿಸಿದಂತೆ ಈ ಸಭೆಯಲ್ಲಿ ಶ್ರೀಮಂತ ಸರದಾರ ಲಖಮನಗೌಡ ಬಸವಪ್ರಭು ಸರದೇಸಾಯಿ, ವಂಟಮುರಿ ಹಾಗೂ ಶ್ರೀಮಂತ ಸರದಾರ ವ್ಹಿ.ಜಿ. ನಾಯಿಕ ಬಹದ್ದೂರ ದೇಸಾಯಿ ಚಚಡಿ ಮತ್ತು ಅರಟಾಳ ರುದ್ರಗೌಡರನ್ನು ಸೊಸಾಯಿಟಿಯ ಮಹಾಪೋಷಕರೆಂದು (Patrons) ಹಾಗೂ ಶ್ರೀಮಂತ ವೈಜಪ್ಪ ಅನಿಗೋಳ ಅವರನ್ನು ಸೊಸೈಟಿಯ ಸಾಮಾನ್ಯ ಸದಸ್ಯರೆಂದು ಆಯ್ಕೆ ಮಾಡಲಾಯಿತು. ಇದೇ ಸಭೆಯಲ್ಲಿ ಸರ್ವಶ್ರೀ ಎಂ.ಆರ್.ಸಾಖರೆ, ಬಿ.ಎಸ್.ಹಂಚಿನಾಳ, ಪಿ.ಆರ್. ಚಿಕ್ಕೋಡಿ, ಬಿ.ಬಿ.ಮಮದಾಪೂರ, ಎಸ್.ಎಸ್.ಬಸವನಾಳ ಹಾಗೂ ಎಚ್.ಎಫ್. ಕಟ್ಟೀಮನಿಯವರು ಸೊಸೈಟಿಯ ಆಜೀವ ಸದಸ್ಯರಾಗಿ ಆಯ್ಕೆಯಾದರು. ರಾ.ಬ. ಅರಟಾಳ ರುದ್ರಗೌಡರನ್ನು ಸೊಸಾಯಿಟಿಯ ಅಧ್ಯಕ್ಷರನ್ನಾಗಿ, ೧೯೧೬-೧೭ನೆಯ ವರ್ಷಕ್ಕಾಗಿ ಸೊಸೈಟಿಯ ಆಡಳಿತ ಮಂಡಳಿಗೆ ಸರ್ವಶ್ರೀ ರಾ.ಬ. ರುದ್ರಗೌಡರು, ಶ್ರೀಮಂತ ಸರದಾರ ವಿ.ಜಿ.ನಾಯಿಕ ಬಹದ್ದೂರ ದೇಸಾಯಿ ಚಚಡಿ, ಶ್ರೀ ವೈಜಪ್ಪ ಅನಿಗೋಳ, ಎಸ್.ಎಸ್.ಬಸವನಾಳ ಮತ್ತು ಬಿ.ಬಿ. ಮಮದಾಪೂರ ಇವರನ್ನು ಆಯ್ಕೆ ಮಾಡಲಾಯಿತು. ಶ್ರೀ ಪಂಡಿತಪ್ಪ ಚಿಕ್ಕೋಡಿ ಕಾರ್ಯದರ್ಶಿಯಾಗಿ ಆಯ್ಕೆಯಾದರು.[೧೦೨] ಕಾರ್ಯದರ್ಶಿಯಾಗಿ ಕಾರ್ಯಮಾಡಿದ ಪಂಡಿತಪ್ಪನವರು ಮೊದಲಿನಿಂದಲೂ ಹೆಸರಿಗೆ ತಕ್ಕಂತೆ ತಜ್ಞರು, ಪಂಡಿತರಾಗಿದ್ದರು. ಇಂಗ್ಲಿಷ್ ಭಾಷೆಯಲ್ಲಿ ಪ್ರಭುತ್ವ ಪಡೆದ ಪಂಡಿತಪ್ಪನವರು ಲೆಖ್ಖ-ಪತ್ರಗಳ ವ್ಯವಹಾರದಲ್ಲಿಯೂ ಚಾಣಾಕ್ಷರಾಗಿದ್ದರು. ಹೀಗಾಗಿ ಸಂಸ್ಥೆಯ ವ್ಯವಹಾರವನ್ನು ಅಚ್ಚುಕಟ್ಟುತನದಿಂದ ಮಾಡಿದರು. ಅವರ ಸ್ಪಷ್ಟ, ಸುಂದರ ಬರಹಗಳುಳ್ಳ ಪತ್ರಗಳನ್ನು ನೋಡಿದರೆ ಹೃದಯ ತುಂಬಿಬರುತ್ತದೆ. ಜಮಖಂಡಿ, ಸಾಂಗಲಿ, ಕೊಲ್ಲಾಪೂರ ಸಂಸ್ಥಾನಿಕರು ಪಂಡಿತಪ್ಪನವರ ಹತ್ತಿರ ಸಲಹೆ-ಸೂಚನೆಗಳನ್ನು ಕೇಳುತ್ತಿದ್ದರು. ಆಗ ಪಂಡಿತಪ್ಪನವರು ಸುಖ-ಭೋಗಗಳಿಗೆ ಮನಸ್ಸುಮಾಡಿದ್ದರೆ ಸಂಸ್ಥಾನಿಕರು ಅವರನ್ನು ಐಶಾರಾಮದಿಂದ ಇರುವಂತೆ ನೋಡಿಕೊಳ್ಳುತ್ತಿದ್ದರು. ಆದರೆ ಯಾರಿಗೂ ಜೀ ಹುಜೂರ್ ಎನ್ನದ ಸ್ವತಂತ್ರ ಮನೋಭಾವದ ಪಂಡಿತಪ್ಪನವರು ಸಮಾಜಮುಖಿ ಸೇವೆಗೆ ಮನಸೋತು ಸ್ವತಃ ಕಾರಕೂನ ಕೆಲಸವನ್ನು ಮಾಡಿದರು.(ಅನುಬಂಧ-೩-೬)

ಅಂದು ಸಪ್ತರ್ಷಿಗಳು ತೆಗೆದುಕೊಂಡ ನಿರ್ಧಾರದಿಂದಾಗಿ ಬೆಳಗಾವಿಯು ಇಂದು ಕರ್ನಾಟಕದ ಬಹು ದೊಡ್ಡ ಶೈಕ್ಷಣಿಕ ನಗರ ಎಂದು ಹೆಸರುವಾಸಿಯಾಗಲು ಕಾರಣವಾಗಿದೆ. ಕೆ.ಎಲ್.ಇ. ಶಿಕ್ಷಣ ಸಂಸ್ಥೆಯನ್ನು ತೆರೆಯುವ ಮೂಲಕ ಕನ್ನಡ ಭಾಷೆಯನ್ನು ಉಳಿಸಿ-ಬೆಳೆಸುವ ತೀರ್ಮಾನವನ್ನು ಸದಸ್ಯರು ತೆಗೆದುಕೊಂಡರು.

೪.೨.೫.೩. ಸೊಸಾಯಿಟಿಯ ಉದ್ದೇಶ:

ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಪ್ರಾಂತದಲ್ಲಿ ಪ್ರಾಥಮಿಕ, ಪ್ರೌಢ ಮತ್ತು ಮೇಲ್ತರದ ಶಿಕ್ಷಣವನ್ನು (Primary, Secondary and Higher Education) ಪ್ರಸಾರ ಮಾಡುವುದು, ವಾಙ್ಮಯವನ್ನು ಪ್ರಚುರ ಪಡಿಸುವುದು, ಪಾಶ್ಚಾತ್ಯ ಶಾಸ್ತ್ರಜ್ಞಾನದಲ್ಲಿ ಅಭಿರುಚಿಯನ್ನು ಹುಟ್ಟಿಸುವುದು ಇವೇ ಮೊದಲಾದವುಗಳು ಈ ಸಂಸ್ಥೆಯ ಉದ್ದೇಶಗಳಾಗಿದ್ದವು. ಈ ಉದ್ದೇಶಗಳಿಗೆ ಅನುಸರಿಸಿ, ಬೆಳಗಾವಿಯಲ್ಲಿ ಗಿಲಗಂಚಿ ಅರಟಾಳ ಹಾಯಸ್ಕೂಲನ್ನು ೭ನೆಯ ನವೆಂಬರ್ ೧೯೧೬ ಇಸ್ವಿಯ ದಿವಸ ಸೊಸಾಯಿಟಿಯವರು ಸ್ಥಾಪಿಸಿದರು. ಕೆ.ಎಲ್.ಇ. ಸೊಸೈಟಿಯ ದಾಖಲೆಗಳ ಪ್ರಕಾರ ಈ ಎ.ವ್ಹಿ. ಸ್ಕೂಲ (ಗಿಲಗಂಚಿ ಅರಟಾಳ ಹೈಸ್ಕೂಲು) ೧೯೧೬ ನವೆಂಬರ್ ೧೩ ರಂದು ಪ್ರಾರಂಭವಾಯಿತು.

ಹೀಗೆ ಶಿಕ್ಷಣಕ್ಕಾಗಿ ೧೯೧೬ರಲ್ಲಿ ಸ್ಥಾಪನೆಗೊಂಡ 'ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿ'ಯು ೧೯೧೭ ಜುಲೈ ೨೦ ರಂದು ಸೊಸೈಟಿಗಳ ನೋಂದಣಿ ಕಾಯಿದೆ ೧೮೬೦ರ ಪ್ರಕಾರ ಕಾನೂನು ಬದ್ಧವಾಗಿ ನೋಂದಣಿಯಾಯಿತು. ಆಗ ಅದರ ಕಾರ್ಯಕಾರಿ ಮಂಡಳಿ ಸದಸ್ಯರಾಗಿ:

೧. ಶ್ರೀಮಂತ ಸರದಾರ ವೀರಭದ್ರಪ್ಪ ಗುಣಪ್ಪ ನಾಯಿಕ ಬಹದ್ದೂರ್ ದೇಸಾಯಿ, ಚಚಡಿ

೨. ರಾವಬಹದ್ದೂರ್ ಶ್ರೀ ಆರ್.ಸಿ. ಅರಟಾಳ

೩. ರಾವಬಹದ್ದೂರ್ ವಿ.ಎ. ಅನಿಗೋಳ

೪. ಶ್ರೀ ಬಿ.ಎಸ್.ಹಂಚಿನಾಳ ಬಿ.ಎ.ಬಿ.ಎಡ್.

೫. ಶ್ರೀ ಎಚ್.ಎಫ್. ಕಟ್ಟೀಮನಿ ಬಿ.ಎ.

೬. ಶ್ರೀ ಬಿ.ಬಿ.ಮಮದಾಪೂರ, ಬಿ.ಎ.

೭. ಶ್ರೀ ಎಮ್.ಆರ್.ಸಾಖರೆ, ಎಂ.ಎ.

೮. ಶ್ರೀ ಎಸ್.ಎಸ್.ಬಸವನಾಳ ಎಮ್.ಎ.

೯. ಶ್ರೀ ಪಿ.ಆರ್.ಚಿಕ್ಕೋಡಿ, ಬಿ.ಎ.

೧೦. ಶ್ರೀ ವಿ.ವಿ.ಪಾಟೀಲ

ಈ ಹತ್ತು ಜನ ಸಂಸ್ಥಾಪಕ ಸದಸ್ಯರಲ್ಲಿ ಮೊದಲಿನ ಮೂವರು ಸಂಸ್ಥಾಪಕ ಸದಸ್ಯರು, ಉಳಿದ ಏಳು ಜನರು ಸಂಸ್ಥಾಪಕ ಆಜೀವ ಸದಸ್ಯರು. ಇವರಲ್ಲಿ ಪಂಡಿತಪ್ಪ ಚಿಕ್ಕೋಡಿಯವರು ಸಾರ್ವಜನಿಕ ಜೀವನಕ್ಕೆ ಪ್ರವೇಶಿಸುವ ಹಿನ್ನಲೆಯಲ್ಲಿ ಸದಸ್ಯತ್ವಕ್ಕೆ ೧೯೧೮ರಲ್ಲಿ ರಾಜೀನಾಮೆ ನೀಡಿದರು.[೧೦೩]

[illegible]

೪.೨.೫.೪. ಸರದಾರ ಲಖಮಗೌಡ ಆಂಗ್ಲೋವರ್ನ್ಯಾಕ್ಯೂಲರ್ ಸ್ಕೂಲ್(ವಂಟಮುರಿ):

ಬೆಳಗಾವಿ ಜಿಲ್ಲೆಯ ವಂಟಮುರಿ ಸಂಸ್ಥಾನದ ಪ್ರಸಿದ್ಧ ದೇಸಾಯಿಯರಾದ ಶ್ರೀಮಂತ ಸರದಾರ ಲಖಮಗೌಡ ಬಸವಪ್ರಭು ಸರದೇಸಾಯಿ ಅವರು ವಿದ್ಯಾಪ್ರಸಾರದ ಬಗ್ಗೆ ಆಸಕ್ತಿಯುಳ್ಳವರಾಗಿದ್ದರು. ೧೯೧೯ರಲ್ಲಿ ಸೊಸೈಟಿಯು ತಮ್ಮಲ್ಲಿ ಒಂದು ಎ.ವ್ಹಿ.ಸ್ಕೂಲನ್ನು ತೆರೆದರೆ, ಅದರ ಖರ್ಚನ್ನು ತಾವೇ ನೋಡಿಕೊಳ್ಳಲು ಸಿದ್ಧರಿರುವುದಾಗಿ ತಿಳಿಸಿದರು. ಅವರ ಅಭೀಷ್ಟದಂತೆ ಸೊಸಾಯಿಟಿಯು ವಂಟಮುರಿಯಲ್ಲಿ 'ಸರದಾರ ಲಖಮಗೌಡ ಆಂಗ್ಲೋ ವರ್ನ್ಯಾಕ್ಯುಲರ್ ಸ್ಕೂಲ್' ಎಂಬ ಹೆಸರಿನಿಂದ ಮೂರು ವರ್ಗಗಳ ಒಂದು ಶಾಲೆಯನ್ನು ಸ್ಥಾಪಿಸಿತು. ಇದರ ಸಕಲ ಖರ್ಚನ್ನೂ ಶ್ರೀ ಲಖಮಗೌಡರೇ ನಿಭಾಯಿಸುತ್ತಿದ್ದರು.[೧೦೪]

ವಂಟಮುರಿಯ ರಾಜಾ ಲಖಮಗೌಡಾ ಸರದೇಸಾಯಿ ಅವರು ಪಂಡಿತಪ್ಪನವರ ಆತ್ಮೀಯ ಸ್ನೇಹಿತರು. ವಂಟಮುರಿ ವಾಡೆಗೆ ಗವ್ಹರ್ನರ್, ಕಲೆಕ್ಟರ್ ಯಾರಾದರೂ ಸಂದರ್ಶಿಸುವಂತಿದ್ದರೆ, ಮುಂಚೆ ಪಂಡಿತಪ್ಪನವರಿಗೆ ಕರೆ ಬರುತ್ತಿತ್ತು. ಪಂಡಿತಪ್ಪ ಎಲ್ಲ ಕಾರ್ಯವಿಧಾನಗಳನ್ನು ಅಚ್ಚುಕಟ್ಟಾಗಿ ಮಾಡುತ್ತಲಿದ್ದರು. ಸರದೇಸಾಯಿ ಅವರು ಇದೇ ಸ್ನೇಹಸಂಬಂಧದಿಂದ, ಪಂಡಿತಪ್ಪನವರ ಹೇಳಿಕೆಯಂತೆ ಕೆ.ಎಲ್.ಇ. ಸಂಸ್ಥೆಗೆ ಬಹುದೊಡ್ಡ ಮೊತ್ತದ ದೇಣಿಗೆ ನೀಡಲು ಕಾರಣರಾದರು.[೧೦೫] ಅಷ್ಟೇಅಲ್ಲ, ಮುಂದೆ ಧಾರವಾಡದಲ್ಲಿ ರಾಜಾ ಲಖಮಗೌಡಾ ಸರದೇಸಾಯಿ ಹೈಸ್ಕೂಲನ್ನು ಸ್ಥಾಪಿಸುವಲ್ಲಿಯೂ ಪಂಡಿತಪ್ಪನವರ ಪಾತ್ರವಿದೆ.

ಆನಂತರ ಪಂಡಿತಪ್ಪನವರು ಲಿಂಗರಾಜ ಮಹಾವಿದ್ಯಾಲಯ ಸ್ಥಾಪನೆಯಾಗಲು ಸಾಕಷ್ಟು ಪರಿಶ್ರಮಿಸಿದರು. ಜಿಲ್ಹಾ ಲೋಕಲ್ ಬೋರ್ಡಿನಿಂದ ವಿದ್ಯಾರ್ಥಿನಿಲಯಗಳಿಗೆ ಧನಸಹಾಯ ಒದಗಿಸಿದರು. ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಲು ಕಾರಣರಾದರು.[೧೦೬] ೧-೧೧-೧೯೪೩ರಿಂದ ಲಿಂಗರಾಜ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಸದಸ್ಯರಾಗಿದ್ದರು.[೧೦೭]

ತಮ್ಮ ಸ್ನೇಹಿತರೊಂದಿಗೆ ಸಂಸ್ಥೆಯನ್ನು ಪ್ರಾರಂಭಿಸಿದ ಅವರು ತಮ್ಮ ಜೀವನದುದ್ದಕ್ಕೂ ಕೆ.ಎಲ್.ಇ.ಸಂಸ್ಥೆಯ ಆಜೀವ ಸದಸ್ಯರಾಗಿ ನಿಸ್ವಾರ್ಥದಿಂದ ದುಡಿದರು. ಮುಂಬಯಿ ಪ್ರಾಂತ್ಯದ ಲೇಜಿಸ್ಲೇಟಿವ್ ಕೌನ್ಸಿಲ್‌ರಾಗಿದ್ದ ಪಂಡಿತಪ್ಪನವರು ಸಂಸ್ಥೆಯ ವಿದ್ಯಾರ್ಥಿಗಳಿಗೆ ಸಾಕಷ್ಟು ಸಹಾಯ ಸಹಕಾರಗಳನ್ನು ಒದಗಿಸಿದರು. ಲೋಕಲ್ ಬೋರ್ಡ್ ಅಧ್ಯಕ್ಷರಾಗಿದ್ದ ಪಂಡಿತಪ್ಪನವರು ವಿದ್ಯಾರ್ಥಿನಿಲಯಗಳನ್ನು ಒದಗಿಸಿಕೊಟ್ಟರು. ೧೯೧೮ರಲ್ಲಿಯೇ ಕೆ.ಎಲ್.ಇ. ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಆಡಳಿತದಿಂದ ದೂರವಿದ್ದರೂ, ಸಂಸ್ಥೆಯ ಅಭಿವೃದ್ಧಿಪರ ಪ್ರತಿಯೊಂದು ಕಾರ್ಯಚಟುವಟಿಕೆಯಲ್ಲಿಯೂ ಪಂಡಿತಪ್ಪನವರ ಪಾತ್ರವಿದೆ ಎಂಬುದು ಸತ್ಯ. ಪಂಡಿತಪ್ಪನವರ ಮುಂದಾಲೋಚನೆ ಮತ್ತು ಅವರ ಕ್ರಿಯಾಶೀಲತೆಯ ಕಾರಣಗಳಿಂದ ಕೆ.ಎಲ್.ಇ.ಸಂಸ್ಥೆಗೆ ಭದ್ರಬುನಾದಿ ದೊರಕಿತು. ಇಂದು ಏಷ್ಯಾದಲ್ಲಿಯೇ ಬೃಹತ್ತಾದ ಸಂಸ್ಥೆಯಾಗಿ ಬೆಳೆದು ನಿಂತಿರುವ ಕೆ.ಎಲ್.ಇ. ಸಂಸ್ಥೆಗೆ ಅದರ ಸಂಸ್ಥಾಪಕರು, ಸತ್ಯ, ಪ್ರೇಮ, ಸೇವೆ, ಸ್ವಾರ್ಥತ್ಯಾಗಗಳೆಂಬ ದಿವ್ಯಪದಗಳನ್ನೊಳಗೊಂಡ

ಸಂಕೇತವನ್ನು ರೂಪಿಸಿದರು. ಅವೇ ಅವರ ಮೂಲತತ್ವಗಳಾದವು. ನುಡಿದಂತೆ ನಡೆದು, ಪ್ರತಿಫಲಾಪೇಕ್ಷೆಯನ್ನು ಪಡೆಯದೆ, ನಿಷ್ಕಾಮ ಕಾಯಕವೆಸಗಿದ ಅವರೆಲ್ಲ ದಾಸೋಹಿಗಳಾದರು.

ಪಂಡಿತಪ್ಪನವರು ತಮ್ಮ ರಾಜಕೀಯ ಚಟುವಟಿಕೆಗಳ ಕಾರಣಗಳಿಂದ ಕೆ.ಎಲ್.ಇ. ಸಂಸ್ಥೆಯ ಕಾರ್ಯಕಾರಿ ಮಂಡಳಿಯಿಂದ ಹೊರಗೆ ಬಂದಿದ್ದರೂ, ಆಜೀವ ಸದಸ್ಯರಾಗಿ ಸಂಸ್ಥೆಯ ಜೊತೆಗೆ ಸದಾ ನಂಟನ್ನು ಇಟ್ಟುಕೊಂಡಿದ್ದರು. ಸಪ್ತರ್ಷಿಗಳು 'ಗಿಲಗಂಚಿ-ಅರಟಾಳ' ಹೈಸ್ಕೂಲ್ ಸ್ಥಾಪನೆ ಮಾಡಿದ ಮೇಲೆ, ಅಷ್ಟಕ್ಕೆ ಬಿಡದೇ ಅದರ ಕಾರ್ಯವಿಸ್ತಾರತೆಯನ್ನು ಹೆಚ್ಚಿಸಲು ಪ್ರಯತ್ನಿಸಿದರು. ಅವರ ಪ್ರಯತ್ನದ ಫಲದಿಂದ ಇಂದು ನೂರಾರು ಅಂಗಸಂಸ್ಥೆಗಳನ್ನು ಹೊಂದಿದ ಆಲದ ಮರದಂತೆ ಬೆಳೆದು ನಿಂತ ಮಹಾಸಂಸ್ಥೆಯ ಬೆಳವಣಿಗೆಯ ಹಿಂದೆ ಸಪ್ತರ್ಷಿಗಳ ತ್ಯಾಗ, ಪರಿಶ್ರಮ, ಬೆವರಿನ ಫಲವೇ ಇದೆ.

ಪಂಡಿತಪ್ಪನವರಂತೂ ಅಗಾಧ ಪಂಡಿತರು. ಮನಸ್ಸು ಮಾಡಿದ್ದರೆ ಯಾವುದಾದರೂ ಸರಕಾರಿ ನೌಕರರಿಗೆ ಸೇರಿ ಆರಾಮವಾಗಿ ಇರಬಹುದಿತ್ತು. ಆದರೆ ಅಂದಿನ ಸಂದರ್ಭದಲ್ಲಿ ತಮ್ಮ ಬಗ್ಗೆ ಯಾವುದೇ ದೂರಾಲೋಚನೆ ಇಟ್ಟುಕೊಳ್ಳಲಾರದೆ ದುಡಿದರು. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಸಮಾಜಕ್ಕೆ ದುಡಿದು ವೃದ್ಧಾಪ್ಯದಲ್ಲಿ ಆರ್ಥಿಕ ತೊಂದರೆಗಳಿಂದ ಬಳಲಿದರು. ಇದು ಬಹಳ ನೋವಿನ ಸಂಗತಿ.

೪.೨.೫.೫. ಕರ್ನಾಟಕ ವಿಶ್ವವಿದ್ಯಾಲಯ:

ಇಪ್ಪತ್ತನೆಯ ಶತಮಾನದಲ್ಲಿ ಶಿಕ್ಷಣದ ಪ್ರಸಾರವು ಒಂದೊಂದೆ ಹಂತದಲ್ಲಿ ಪ್ರಗತಿಯಾಗುತ್ತ ಸಾಗಿತು. ಕರ್ನಾಟಕದ ಮುಖಂಡರು ಧಾರವಾಡ ಮತ್ತು ಬೆಳಗಾವಿಗಳಲ್ಲಿ ಮಹಾವಿದ್ಯಾಲಯಗಳನ್ನು ಸ್ಥಾಪಿಸಿ, ಅವುಗಳಿಂದ ಶಿಕ್ಷಣದ ಪ್ರಸಾರವಾಗುವಂತೆ ಸತತವಾಗಿ ಪ್ರಯತ್ನಿಸಿದರು. ಮುಂದೆ 'ಕನ್ನಡಿಗರಿಗೆ ಒಂದು ವಿಶ್ವವಿದ್ಯಾಲಯದ ಅವಶ್ಯಕತೆ ಇದೆ' ಎಂಬುದನ್ನು ಮನಗಂಡು, ಆ ದಿಶೆಯತ್ತ ಪ್ರಯತ್ನಿಸಿದರು. ಸಪ್ತರ್ಷಿಗಳು ತಮ್ಮ ತ್ಯಾಗ ಸೇವೆಗಳ ನಿರಂತರ ಕ್ರಿಯೆಯಿಂದ 'ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ'ಯನ್ನು ಸ್ಥಾಪಿಸದೆ ಹೋಗಿದ್ದರೆ 'ಕರ್ನಾಟಕ ವಿಶ್ವವಿದ್ಯಾಲಯ'ದ ಅಸ್ತಿತ್ವ ಇನ್ನೂ ಕನಸಿನ ಮಾತಾಗುತ್ತಿತ್ತು. ಅಷ್ಟೇ ಅಲ್ಲ, ನಮ್ಮ ವಿದ್ಯಾರ್ಥಿಗಳು ಅಂದಿನಂತೆ ಇಂದಿಗೂ ತಮ್ಮ ಸ್ನಾತಕೋತ್ತರ ಅಭ್ಯಾಸಕ್ಕೆ ಪುಣೆ, ಮುಂಬೈ ನಗರಗಳಿಗೆ ಹೋಗಬೇಕಾಗುತ್ತಿತ್ತು. ೧೯೨೫ ಮೇ ಬೆಳಗಾವಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಒಂದು ವಿಶೇಷ ಸರ್ವಸಾಧಾರಣಸಭೆಯನ್ನು ಸೇರಿಸಿ, ಕೆಲವು ಠರಾವುಗಳನ್ನು ಪಾಸುಮಾಡಿತು. ಅವುಗಳೆಂದರೆ,

೧೩.(ಕ) ಬ್ರಿಟಿಷ ಕರ್ನಾಟಕ ಜಿಲ್ಲೆಗಳಿಗೆ ಒಂದು ವಿಶ್ವವಿದ್ಯಾಲಯವು ಅವಶ್ಯಕವೆಂದು ಈ ಸಮ್ಮೇಳನವು ಅಭಿಪ್ರಾಯಪಡುವುದು; ಈ ವಿಷಯವನ್ನು ಈ ಸಮ್ಮೇಳನವು ಸರಕಾರಕ್ಕೆ ತಿಳಿಸಿ ಪ್ರಾರ್ಥಿಸಿಕೊಳ್ಳುವುದು.

ಖ)ಅಲ್ಲದೆ, ಇದಕ್ಕಾಗಿ ಈ ಸಮ್ಮೇಳನವು ಕೆಳಗೆ ಕಂಡ ಒಂದು ಉಪಸಭೆಯನ್ನು ನಿಯಮಿಸಿರುತ್ತದೆ. ಬೇಕಾದರೆ ಇನ್ನೂ ಹೆಚ್ಚಿನ ಸದಸ್ಯರನ್ನು ಸೇರಿಸಿಕೊಳ್ಳಲು ಈ ಉಪಸಭೆಯವರಿಗೆ ಅಧಿಕಾರವಿರುವುದು.

ಫ)ಈ ಉಪಸಮಿತಿಯವರು ವಿಶ್ವವಿದ್ಯಾಲಯ ಸ್ಥಾಪನೆಯ ವಿಚಾರದಲ್ಲಿ ಎಲ್ಲಿ? ಹೇಗೆ? ಮುಂತಾದ ಎಲ್ಲ ವಿಷಯಗಳನ್ನೂ ಆಮೂಲಾಗ್ರವಾಗಿ ವಿಮರ್ಶಿಸಿ, ತಮ್ಮ ಅಭಿಪ್ರಾಯಗಳನ್ನು ಆರು ತಿಂಗಳು ಕಾಲದೊಳಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸ್ಥಾನಕ್ಕೆ ತಿಳಿಸಬೇಕು.

(ಫ)ಹೀಗೆ ಬಂದ ಅಭಿಪ್ರಾಯಗಳನ್ನು ಪರಿಷತ್ತಿನವರು ಕೂಡಲೆ ವರ್ತಮಾನ ಪತ್ರಿಕೆಗಳಿಂದಲೂ ಬೇರೆ ರೀತಿಯಿಂದಲೂ ಪ್ರಕಟಪಡಿಸಿ, ಮಹಾಜನರ ಅಭಿಪ್ರಾಯಗಳೊಂದಿಗೆ ಮುಂದಿನ ಸಮ್ಮೇಳನದ ಕಾಲಕ್ಕೆ ಸಿದ್ಧಪಡಿಸಬೇಕು ಎಂದು ಈ ಸಮ್ಮೇಳನವು ಸೂಚಿಸುತ್ತದೆ. ಉಪಸಮಿತಿಯ ಸದಸ್ಯರುಗಳೆಂದರೆ,
೧.ಡಾ.ವೈ.ಜಿ.ನಾಡಗೀರ್,ಎಸ್.ಬಿ.ಯು. ೨.ಡಿ.ವಿ.ಬೆಳವಿ.ಎಂ.ಎಲ್.ಎ.ಬೆಳಗಾವಿ. ೩.ರಾವ್‌ಬಹದ್ದೂರ್ ವ್ಹಿ.ಬಿ.ಜೋಶಿ,ಧಾರವಾಡ. ೪. ಪಂಡಿತ ರಾಯಪ್ಪ ಚಿಕ್ಕೋಡಿ ಎಂ.ಎಲ್.ಸಿ.
೫.ಎಸ್.ಟಿ.ಕಂಬಳಿ.ಎಂ.ಎಲ್.ಸಿ.ಹುಬ್ಬಳ್ಳಿ. ೬.ಬಿ.ರಾಮರಾವ್,ಮದರಾಸು.
೭.ಡಾ॥ಯು.ರಾಮರಾವ್,ಮದರಾಸು ೮.ಬಿ.ಸೀತಾರಾಮರಾವ್.ಮದರಾಸು. ೯.ಪಿ.ಶಿವರಾವ್, ಬಳ್ಳಾರಿ.
೧೦.ರಾ॥ಬ॥ಕರ್ಪೂರ ಶ್ರೀನಿವಾಸರಾವ್. ೧೧.ಪಿ.ಜಿ.ಹಳಕಟ್ಟಿ,ವಿಜಾಪುರ. ೧೨.ಪಿ.ಎಸ್.ಕಟ್ಟಿ.
೧೩.ಸಿ.ಎನ್.ವೆಂಕಪ್ಪಯ್ಯ,ಮಡಿಕೇರಿ. ೧೪.ಕ.ಸಾ.ಪ. ಕಾರ್ಯದರ್ಶಿ. ೧೫.ಎಂ.ಆರ್.ಸಾಖರೆ.[೧೦೮]

ಇವರೆಲ್ಲ ಸೇರಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಶ್ನೆಯನ್ನು ಅಧ್ಯಯನ ಮಾಡಿ, ಜನಾಭಿಪ್ರಾಯ ಪಡೆದು ವರದಿ ಮಾಡಬೇಕಿತ್ತು. ಇವರೆಲ್ಲರೂ ಊರೂರು ಸಂಚರಿಸಿ ೧೯೨೬ರಲ್ಲಿ ಒಂದು ವರದಿಯನ್ನು ಸಿದ್ಧಪಡಿಸಿದರು. ೧೯೨೬ ಮೇ ತಿಂಗಳಲ್ಲಿ ಬಳ್ಳಾರಿಯಲ್ಲಿ ಫ.ಗು.ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ೧೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಈ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಕುರಿತಾಗಿ ಸಾಕಷ್ಟು ಹೋರಾಟ ನಡೆಯಿತು. ಆದರೆ ತಳಪಾಯದ ಹಂತದಲ್ಲಿ ದುಡಿದವರು ಪಂಡಿತಪ್ಪ ಚಿಕ್ಕೋಡಿಯವರು. ಶೈಕ್ಷಣಿಕ ಪ್ರಸಾರಕ್ಕೆ ಒತ್ತುಕೊಟ್ಟಿದ್ದ ಇವರು ವಿಶ್ವವಿದ್ಯಾಲಯ ಸ್ಥಾಪನೆಯ ಹಂತದಲ್ಲಿಯೂ ಸಾಕಷ್ಟು ಪರಿಶ್ರಮ ಪಟ್ಟಿದ್ದಾರೆ.

೪.೨.೫.೬. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ:

ಲಿಂಗಾಯತ ಸಮುದಾಯದ ವಿದ್ಯಾರ್ಥಿಗಳು ಸಮಾಜದ ಮೇಲ್ವರ್ಗದ ಪಂಗಡದವರೊಂದಿಗೆ ಸ್ಪರ್ಧಿಸಲು ಅಸಮರ್ಥವಾಗಿರುವದನ್ನು ಲಿಂಗಾಯತ ಗಣ್ಯರು ಮನಗಂಡರು. ಈ ಸಮಾಜದಲ್ಲಿಯ ಮೌಢ್ಯತನ, ಅಜ್ಞಾನ, ಅಂಧಕಾರಗಳು ತೊಲಗಬೇಕಾದರೆ ವಿದ್ಯಾವಂತ ಸುಶಿಕ್ಷಿತ ಜನಾಂಗದ ಅವಶ್ಯಕತೆ ಇದೆ ಎಂಬುದನ್ನು ಅರಿತರು.

ಈ ನಿಟ್ಟಿನಲ್ಲಿ ಅರಟಾಳ ರುದ್ರಗೌಡರು ಗಿಲಗಂಚಿ ಗುರುಸಿದ್ದಪ್ಪನವರೊಂದಿಗೆ ಸೇರಿಕೊಂಡು ೧೮೮೩ರಲ್ಲಿ ಲಿಂಗಾಯತ ಬಡ ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ 'ಲಿಂಗಾಯತ ಎಜ್ಯುಕೇಶನ್ ಫಂಡ್' ಪ್ರಾರಂಭಿಸಿದರು. ಅದುವೇ ಮುಂದೆ 'ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ'ಯ ರೂಪ ತಳೆಯಿತು. ಲಿಂಗಾಯತರ ಶ್ರೇಯೋಭಿವೃದ್ಧಿಗೆ ರೂಪಗೊಂಡ ಅಖಿಲ ಕರ್ನಾಟಕದ ಪ್ರಪ್ರಥಮ ಸಂಸ್ಥೆ ಅದು.

ಅಂದಿನ ಪ್ರಮುಖ ಲಿಂಗಾಯತರೆಲ್ಲ ಈ ಫಂಡಿಗೆ ಉದಾರವಾಗಿ ದೇಣಿಗೆ ನೀಡಿದ್ದಾರೆ. ಅರಟಾಳ ರುದ್ರಗೌಡರು ಈ ನಿಧಿಗಾಗಿ ಹೆಚ್ಚಿನ ಮೊತ್ತ ಸಂಗ್ರಹಿಸಿಕೊಟ್ಟಿದ್ದಾರೆ.[೧೦೯]

ಅರಟಾಳ ರುದ್ರಗೌಡರು ಮತ್ತು ಗಿಲಗಂಚಿ ಗುರುಸಿದ್ದಪ್ಪನವರ ಕಾರ್ಯಕ್ಕೆ ಸಂಪೂರ್ಣವಾಗಿ ಕೈ ಜೋಡಿಸಿದವರು ಸೊಲ್ಲಾಪೂರದ ವಾರದ ಮಲ್ಲಪ್ಪನವರು, ವಂಟಮುರಿಯ ರಾಜಾ ಸಾಹೇಬರು ಮತ್ತು ಸಿರಸಂಗಿ ಲಿಂಗರಾಜ ದೇಸಾಯಿಯವರು. ಅರಟಾಳ ರುದ್ರಗೌಡರ ಸೇವಾಕೈಂಕರ್ಯವನ್ನು ಮೆಚ್ಚಿಕೊಂಡರಲ್ಲದೆ, ಅವರ ಪ್ರಭಾವದಿಂದ ಸಿರಸಂಗಿ ಲಿಂಗರಾಜ ದೇಸಾಯಿಯವರು ತಮ್ಮ ಸಮಸ್ತ ಆಸ್ತಿಯನ್ನು ಲಿಂಗಾಯತ ವಿದ್ಯಾರ್ಥಿಗಳ ಸಹಾಯಕ್ಕೆ ಧಾರೆ ಎರೆದು. 'ಶಿರಸಂಗಿ ಟ್ರಸ್ಟ' ಅಸ್ತಿತ್ವಕ್ಕೆ ಬರಲು ಕಾರಣರಾದರು. ಈ ಟ್ರಸ್ಟಿನ ಸಹಾಯದಿಂದಲೇ ಡಿ.ಸಿ.ಪಾವಟೆ, ಎಸ್.ಡಬ್ಲ್ಯೂ. ಮೆಣಸಿನಕಾಯಿಯವರು ಉನ್ನತ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಹೋಗಿ ಬಂದರು.[೧೧೦]

ಪಂಡಿತಪ್ಪ ಚಿಕ್ಕೋಡಿಯವರು 'ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ'ಗೆ ದೇಣಿಗೆ ಕೂಡಿಸುವಲ್ಲಿ ಸದಾ ಮುಂದಿದ್ದರು. ನಾಡಿನಲ್ಲಿ ಗಣ್ಯರ, ಶ್ರೀಮಂತರ ಪರಿಚಯವಿದ್ದುದರಿಂದ ಅವರನ್ನು ಮನವೊಲಿಸಿ ಸಾಕಷ್ಟು ದೇಣಿಗೆ ಲಭಿಸುವಂತೆ ಮಾಡಿದ್ದರು. ರ್‍ಯಾಂಗ್ಲರ್ ಡಿ.ಸಿ.ಪಾವಟೆಯವರು ಪಂಡಿತಪ್ಪನವರ ಹೈಸ್ಕೂಲಿನ ವಿದ್ಯಾರ್ಥಿಗಳಾಗಿದ್ದರು. ಅವರ ಪ್ರತಿಭೆಯನ್ನು ಮೆಚ್ಚಿದ್ದ ಪಂಡಿತಪ್ಪನವರು ಅವರಿಗೆ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಿಂದ ಧನಸಹಾಯ ಒದಗಿಸುವಲ್ಲಿ ಸಹಾಯಮಾಡಿದರು. 'ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಿಂದ ಕೆ.ಎಲ್.ಇ. ಸಂಸ್ಥೆಯ ಹೈಸ್ಕೂಲ್ ಸ್ಥಾಪನೆಗೆ ಅರಟಾಳ ರುದ್ರಗೌಡರು ಮತ್ತು ಗಿಲಗಿಂಚಿಯವರು ದೇಣಿಗೆಯನ್ನು ನೀಡಿದ ಕಾರಣ, ಪಂಡಿತಪ್ಪನವರು ಮತ್ತು ಅವರ ಸ್ನೇಹಿತರು ಆ ಹೈಸ್ಕೂಲಿಗೆ 'ಗಿಲಗಂಚಿ ಅರಟಾಳ ಹೈಸ್ಕೂಲ್' ಎಂದು ನಾಮಕರಣ ಮಾಡಿದರು.[೧೧೧]

೪.೨.೫.೭. ಕರ್ನಾಟಕ ಲಿಂಗಾಯತ ಏಜ್ಯುಕೇಶನ್ (ಶಿಕ್ಷಣ) ಕಾನ್ಫರನ್ಸ್:

ಕರ್ನಾಟಕ ಲಿಂಗಾಯತ ಏಜ್ಯುಕೇಶನ್ ಸೊಸಾಯಿಟಿಯವರು ಬೆಳಗಾವಿಯಲ್ಲಿ ತಾ.೧೨-೧೦-೧೯೨೫ ರಂದು ಲಿಂಗಾಯತ ಶಿಕ್ಷಣಪರಿಷತ್ತನ್ನು ಕೂಡಿಸಿದ್ದರು. ಗಿಲಗಂಚಿ ಅರಟಾಳ ಹಾಯಸ್ಕೂಲಿಗೆ ಯೋಗ್ಯವಾದ ಸ್ಥಳ ಮತ್ತು ಕಟ್ಟಡ, ಚಿಕ್ಕಮಕ್ಕಳ ಸಲುವಾಗಿ ವಸತಿ ಗೃಹಯುಕ್ತವಾದ (Residential) ಪ್ರಾಥಮಿಕ ಶಾಲೆ, ಯೋಗ್ಯವಾದ ಸ್ಥಳದಲ್ಲಿ ಒಂದು ಕಾಲೇಜ ಈ ಎಲ್ಲ ವಿಷಯಗಳ ಬಗ್ಗೆ ಅವಶ್ಯವಾದ ಫಂಡನ್ನು ಎತ್ತುವುದಕ್ಕೋಸ್ಕರ ಏರ್ಪಾಟನ್ನು ಮಾಡುವುದೇ ಈ ಪರಿಷತ್ತಿನ ಮುಖ್ಯ ಉದ್ದೇಶವಾಗಿತ್ತು. ಈ ಪರಿಷತ್ತಿಗೆ ದಕ್ಷಿಣಭಾಗದ ಕಮೀಶನರರಾದ ಮೆ॥ಎಲ್.ಜೆ.ಮೌಂಟಫರ್ಡ ಅಧ್ಯಕ್ಷರಾಗಿದ್ದರು. ಜೊತೆಗೆ ಮುಂಬಯಿ ಸರಕಾರದ ಆರ್ಥಿಕ ಖಾತೆಯ ಪ್ರಧಾನರಾದ ನಾಮದಾರ ಎಚ್.ಎಸ್.ಲಾರೆನ್ಸ್ ಸಾಹೇಬರು ಆಗಮಿಸಿದ್ದರು.

ಗಿಲಗಂಚಿ ಅರಟಾಳ ಹಾಯಸ್ಕೂಲ ೧೯೧೬ರಿಂದ ಬೆಳಗಾವಿಯ ಹೊರಭಾಗದಲ್ಲಿ ದೂರ ಇರುವ ಕೋಟೆಯ ಮೂಲೆಯ ಒಂದು ಬಾಡಿಗೆ ಬಂಗಲೆಯಲ್ಲಿ ನಡೆಯುತ್ತಿದ್ದು, ಶಾಲೆಯ ಪ್ರಗತಿಗೆ

ಇದು ಆತಂಕವಾಗಿತ್ತು. ಹೀಗಾಗಿ ಒಂದು ಸುಸಜ್ಜಿತವಾದ ಬಿಲ್ಡಿಂಗ್ ನಿರ್ಮಾಣವಾಗಬೇಕೆಂಬ ಕಾರಣದಿಂದ ಲಿಂಗಾಯತ ಎಜುಕೇಶನ್ ಪರಿಷತ್ತಿನಲ್ಲಿ ಒಂದು ಬಿಲ್ಡಿಂಗ್ ಕಮೀಟಿಯು ಅಸ್ತಿತ್ವಕ್ಕೆ ಬಂದಿತು. ಆ ಕಮೀಟಿಗೆ ಸರದಾರ ಎಲ್.ಬಿ.ಸರದೇಸಾಯಿ ಚಚಡಿ; ರಾವಸಾಹೇಬ ಮಲ್ಲಪ್ಪಣ್ಣಾ ಸಿಂತ್ರೆ; ಶ್ರೀ ಪಂಡಿತಪ್ಪ ಚಿಕ್ಕೋಡಿ, ಬಿ.ಎ. ಪ್ರೆಸಿಡೆಂಟ್ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ; ಶ್ರೀ ಎಸ್.ಎನ್.ಅಂಗಡಿ, ಮತ್ತು ಶ್ರೀ ವಿ.ವಿ.ಪಾಟೀಲ ಆಯ್ಕೆಗೊಂಡರು.[೧೧೨]

ಮೌಂಟಫರ್ಡರು ತಮ್ಮ ಭಾಷಣದಲ್ಲಿ ಲಿಂಗಾಯತ ಸಮಾಜದ ಪ್ರಗತಿಯ ಅವಶ್ಯಕತೆ ಹೇಳುವುದರ ಜೊತೆಗೆ, ಈ ಸಮಾಜದಲ್ಲಿ ಕೌನ್ಸಿಲ್ ಮೆಂಬರರಾದ ಶ್ರೀ ಅಂಗಡಿಯವರು, ಶ್ರೀ ಪಂಡಿತಪ್ಪ ಚಿಕ್ಕೋಡಿಯವರು, ಡಿಸ್ಟ್ರಿಕ್ ಲೋಕಲ್ ಬೋರ್ಡಿನ ಪ್ರೆಸಿಡೆಂಟರಾದ ಇನ್ನೋರ್ವ ಕೌನ್ಸಿಲ್ ಮೆಂಬರರೂ, ಹುಬ್ಬಳ್ಳಿ ಮುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ ಕಂಬಳಿಯವರು, ವಂಟಮುರಿಯ ಸರದೇಸಾಯಿಯವರು, ಕೌಜಲಗಿ ದೇಸಾಯಿ ಮುಂತಾದ ಲಿಂಗಾಯತ ಗಣ್ಯರು ಶಿಕ್ಷಣ ಪ್ರಸಾರ ಮಾಡುತ್ತಿರುವದನ್ನು ಹೆಮ್ಮೆಯಿಂದ ಪ್ರಶಂಸಿದರು. ಮೌಂಟ್‌ಫರ್ಡ ಭಾಷಣದ ನಂತರ ಕೆಲವು ಮಹತ್ವದ ಗೊತ್ತುವಳಿಗಳು ಪಾಸಾದವು.

ಈ ಮಹತ್ವದ ಸಭೆಯಲ್ಲಿ ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ಅಧ್ಯಕ್ಷರ, ನಾಮದಾರರ ಮತ್ತು ಸಭಿಕರ ಆಭಾರವನ್ನು ಮನ್ನಿಸಿದರು. ಕೆ.ಎಲ್.ಇ ಸಂಸ್ಥೆಯ ಜವಾಬ್ದಾರಿಯನ್ನು ಹೊತ್ತ ಪಂಡಿತಪ್ಪನವರು ತಮ್ಮ ಹಿತೈಷಿಗಳು ಆತ್ಮೀಯರೂ ಆಗಿದ್ದ ರಾಜಾ ಲಖಮಗೌಡರಿಂದ, ಪರಿಚಯವಿದ್ದ ನಗರದ ಗಣ್ಯರಿಂದ ಸಾಕಷ್ಟು ದೇಣಿಗೆಯನ್ನು ಸಂಗ್ರಹಿಸಲು ಸಹಾಯ ಮಾಡಿದರು. ಜೊತೆಗೆ ಕಟ್ಟಡ ವಿಭಾಗದ ಸದಸ್ಯರಾಗಿ ನೇಮಕರಾದುದರಿಂದ 'ಗಿಲಗಂಚಿ ಅರಟಾಳ ಹೈಸ್ಕೂಲ' ಗ್ರಂಥಾಲಯ ಮೈದಾನ ಮುಂತಾದ ಕಟ್ಟಡಗಳ ನಿರ್ವಹಣಾ ಕಾರ್ಯವನ್ನು ತಾವೇ ಸ್ವತಃ ನಿಂತು ಮಾಡಿದರು. ಒಟ್ಟಾರೆ ಬ್ರಿಟಿಷ್ ಸರಕಾರದ ಅಧಿಕಾರಿಗಳು ಇವರ ಕಾರ್ಯದಕ್ಷತೆಯನ್ನು ಮೆಚ್ಚಿಕೊಂಡಿದ್ದರು.

೪.೨.೫.೮. ಕರ್ನಾಟಕ ಆಯುರ್ವೇದ ವಿದ್ಯಾಪೀಠ

ಬೆಳಗಾವಿ ಶಹಪೂರದ ಕೆ.ಎಲ್.ಇ. ಸಂಸ್ಥೆಯ ಅಂಗಸಂಸ್ಥೆಯಾದ ಶ್ರೀ ಬಿ.ಎಂ.ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯ ಬೆಳೆದು ಬಂದ ರೀತಿ ತುಂಬಾ ಅದ್ಭುತವಾಗಿದೆ. ೧೯೩೩ರಲ್ಲಿ ಶ್ರೀ ಬಸಪ್ಪಣ್ಣ ಮಲ್ಲಪ್ಪಣ್ಣ ಕಂಕಣವಾಡಿಯವರು ನೀಡಿದ ೫೦,೦೦೦ ರೂಪಾಯಿಗಳ ಉದಾರ ದೇಣಿಗೆಯಿಂದಾಗಿ ಆ ವಿದ್ಯಾಪೀಠ ಪ್ರಾರಂಭವಾಯಿತು. ಆಗ ಅದಕ್ಕೆ ಇದ್ದ ಹೆಸರು 'ಕರ್ನಾಟಕ ಆಯುರ್ವೇದ ವಿದ್ಯಾಪೀಠ ಸೊಸೈಟಿ'. ೧೯೩೮ರಲ್ಲಿ ಬೆಳಗಾವಿಯ ಖಾಸಭಾಗದಲ್ಲಿದ್ದ ಉಪ್ಪಾರ ಬೀದಿಯ ಒಂದು ಮನೆಯನ್ನು ಖರೀದಿಸಿ ಅಲ್ಲಿ ಆಸ್ಪತ್ರೆ ಹಾಗೂ ಫಾರ್ಮಸಿಯನ್ನು ಪ್ರಾರಂಭಿಸಿದರು. ೧೯೪೦ ತನಕ ಈ ಸಂಸ್ಥೆ ಅನೇಕ ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತ ಬಂದಿತ್ತು.[೧೧೩]

ಇನ್ನೇನು ಸಂಸ್ಥೆ ಮುಚ್ಚಿಹೋಗುವ ಸ್ಥಿತಿಗೆ ಬಂದಾಗ ಕರ್ನಾಟಕ ಆಯುರ್ವೇದ ವಿದ್ಯಾಪೀಠವನ್ನು ಜೀವಂತವಾಗಿಡಲು ಮುಂದೆ ಬಂದವರು ಶ್ರೀ ಪಂಡಿತಪ್ಪ ಚಿಕ್ಕೋಡಿಯವರು. ಆಗ

ಮುಂಬಯಿ ಮಂತ್ರಿ ಮಂಡಲದಲ್ಲಿ ಕೌನ್ಸಿಲ್‌ರಾಗಿದ್ದ ಪಂಡಿತಪ್ಪನವರು ಸರಕಾರದಿಂದ ಮಾನ್ಯತೆ ತಂದರು.[೧೧೪] ಆಗಿನ ದಿನಗಳಲ್ಲಿ ಈ ಕಾಲೇಜು ಅಖಿಲಭಾರತ ಆಯುರ್ವೇದ ವಿದ್ಯಾಪೀಠದ ನಿಯಮಾವಳಿಗಳಿಗೆ ಮತ್ತು ಮುಂಬಯಿ ಸರಕಾರದ ಕಾಯಿದೆಗಳಿಗೆ ಅನುಗುಣವಾಗಿ ವೈದ್ಯಕೀಯ ಪದವಿವರ್ಗಗಳನ್ನು ನಡೆಸಿತು.

೧೯೪೦ರಿಂದ೧೯೪೮ರ ವರೆಗೆ ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ಕರ್ನಾಟಕ ಆಯುರ್ವೇದ ವಿದ್ಯಾಪೀಠದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಮುಳುಗಿ ಹೋಗುತ್ತಿದ್ದ ಹಡಗನ್ನು ಎತ್ತಿ ನಿಲ್ಲಿಸಿ ಸುಸೂತ್ರವಾಗಿ ತೆಗೆದುಕೊಂಡು ಹೋಗುವ ನಾವಿಕನಂತೆ ಪಂಡಿತಪ್ಪನವರು ಆಯುರ್ವೇದ ವಿದ್ಯಾಪೀಠವನ್ನು ಮುನ್ನಡೆಸಿಕೊಂಡು ಹೋದರು. ತಾವೇ ಸ್ವತಃ ನಿಂತು ಆಯುರ್ವೇದ ವಿದ್ಯಾಪೀಠದ ಸಂವಿಧಾನದ ನಿಯಮಾವಳಿಯನ್ನು ತಯಾರಿಸಿದ್ದರು. ೧೯೪೫-೪೮ರಲ್ಲಿ ಮತ್ತೆ ಹೊಸ ನಿಯಮಾವಳಿಗಳನ್ನು ಹೊಂದಿರುವ ಸಂವಿಧಾನವನ್ನು ತಂದರು.

ಕರ್ನಾಟಕ ಆಯುರ್ವೇದ ವಿದ್ಯಾಪೀಠವು ಅಭಿವೃದ್ಧಿಯಾಗುವ ಯೋಜನೆಗಳನ್ನು ರೂಪಿಸಿ, ಅವುಗಳನ್ನು ಕಾರ್ಯರೂಪಕ್ಕೆ ತಂದರು. ಕ್ರಿ.ಶ.೧೯೫೭ರಲ್ಲಿ ಆರೋಗ್ಯ ಮಂತ್ರಿಯಾದ ಶ್ರೀ ಕಲ್ಮರಕರ ಅವರನ್ನು, ಮಹಾವಿದ್ಯಾಲಯಕ್ಕೆ ಕರೆಯಿಸಿದ್ದರು. ಅವರಿಂದ ಮಹಾವಿದ್ಯಾಲಯಕ್ಕೆ ಅನುಕೂಲತೆಯನ್ನು ಒದಗಿಸಿಕೊಟ್ಟರು.

೧೦-೦೧-೧೯೯೧ರಂದು ಕರ್ನಾಟಕ ವಿದ್ಯಾಪೀಠ ಆಡಳಿತದ ಆಯುರ್ವೇದ ಕಾಲೇಜು, ಆಸ್ಪತ್ರೆ ಹಾಗೂ ಫಾರ್ಮಸಿಗಳು ಕೆ.ಎಲ್.ಇ. ಸಂಸ್ಥೆಗೆ ಹಸ್ತಾಂತರಗೊಂಡವು. ಈಗ ಶಹಾಪುರದ ಖಾಸಭಾಗದಲ್ಲಿ ಸುಂದರವಾಗಿ ತಲೆಯೆತ್ತಿ ನಿಂತಿರುವ ಭವ್ಯವಾದ ಕಟ್ಟಡಗಳ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಇವುಗಳಿಗೆ ಮೊದಲು ಭದ್ರಬುನಾದಿಯನ್ನು ಹಾಕಿದವರು ಪಂಡಿತಪ್ಪ ಚಿಕ್ಕೋಡಿಯವರು. ಆರ್ಥಿಕ ಸಂಕಷ್ಟಗಳಿಂದ ಮುಚ್ಚಿಯೇ ಹೋಗುತ್ತಿದ್ದ ಸಂಸ್ಥೆಯೊಂದು ಇಂದು ಬೃಹತ್ ಪ್ರಮಾಣದಲ್ಲಿ ಬೆಳೆಯಬೇಕಾದರೆ ಅದಕ್ಕೆ ಪಂಡಿತಪ್ಪನವರ ಪರಿಶ್ರಮವೇ ಕಾರಣ. ಆದರೆ ಬಿ.ಎಂ.ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯದ ಆವರಣದಲ್ಲಿ ಅವರನ್ನು ಸ್ಮರಿಸುವ ಒಂದಾದರೂ ಕಟ್ಟಡಗಳಿಲ್ಲ. ಬಿ.ಎಂ.ಕಂಕಣವಾಡಿಯವರು ಅಪಾರ ಪ್ರಮಾಣದ ದುಡ್ಡು ಕೊಟ್ಟು ಮಹಾವಿದ್ಯಾಲಯವನ್ನು ಪ್ರಾರಂಭ ಮಾಡಿರಬಹುದು. ಆದರೆ ಅದರ ಚಾಲನಾಶಕ್ತಿ ನಿಂತುಹೋದಾಗ, ಮತ್ತೆ ಜೀವಕಳೆ ತುಂಬಿ, ಎಂದೆಂದೂ ಅಳಿಯಲಾಗದಂತ ಜ್ಞಾನದೇಗುಲವನ್ನು ಉಳಿಸಿಕೊಟ್ಟವರು ಪಂಡಿತಪ್ಪ ಚಿಕ್ಕೋಡಿಯವರು. ಆದ್ದರಿಂದ ಬಿ.ಎಂ.ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯದ ಆವರಣದಲ್ಲಿ ಪಂಡಿತಪ್ಪ ಚಿಕ್ಕೋಡಿ ಅವರ ಸ್ಮರಣೆಗಾಗಿ ಪುತ್ಥಳಿ ಇಲ್ಲವೆ ಕಟ್ಟಡ ಅನಾವರಣಗೊಳ್ಳುವ ಅಗತ್ಯವಿದೆ.

೪.೨.೫.೯. ಪ್ರಾಥಮಿಕ ಶಿಕ್ಷಣ:

೧೯೧೪-೧೮ನೆಯ ಇಸ್ವಿಯ ಯುರೋಪದ ಮಹಾಯುದ್ಧದಲ್ಲಿ ಹಣದ ಅಡಚಣಿಯ ಮೂಲಕ ಬೆಳಗಾವಿ ಜಿಲ್ಲೆಯೊಳಗಿನ ಪ್ರಾಥಮಿಕ ಶಿಕ್ಷಣ ಪ್ರಸಾರವು ನಿಂತಿತ್ತು. ಆದರೆ ಜನರು ಪ್ರಾಥಮಿಕ ಶಿಕ್ಷಣದ ಅವಶ್ಯಕತೆ ಪೂರೈಸಲು ಸರಕಾರಕ್ಕೆ ಶಿಕ್ಷಣಕ್ಕಾಗಿ ಒತ್ತಾಯಿಸುತ್ತಿದ್ದರು. ಅಂದು ಬೆಳಗಾವಿ ಜಿಲ್ಲೆಯ ಲೋಕಲ್ ಬೋರ್ಡ್‌ದ ಅಧ್ಯಕ್ಷರಾದ ಶ್ರೀಯುತ ಪಿ.ಆರ್.ಚಿಕ್ಕೋಡಿಯವರು ೧೫೦ ಶಾಲೆಗಳನ್ನು ತೆಗೆಯುವ ಸಲುವಾಗಿ ಒಂದು ಯೋಜನೆಯನ್ನು ತಯಾರಿಸಿ ಅದಕ್ಕೆ ಸರಕಾರದ ಒಪ್ಪಿಗೆಯನ್ನು ದೊರಕಿಸಿದರು. ಆಗ ಪಂಡಿತಪ್ಪನವರ ಸಾಧನೆಯನ್ನು ಮೆಚ್ಚಿ ಮುಂಬಯಿಯ ದೈನಿಕ ಪತ್ರವಾದ ಟಾಯಿಮ್ಸ್ ಆಫ್ ಇಂಡಿಯಾ ದಿನಾಂಕ ೧೧ ಜನೇವರಿ ೧೯೨೬ ರ ಪತ್ರಿಕೆಯು ಹೀಗೆ ಬರೆಯಿತು.

"ಬೆಳಗಾವಿ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡವು ಮಿ.ಪಿ.ಆರ್.ಚಿಕ್ಕೋಡಿಯವರ ಹುರುಪಿನ ಅಧ್ಯಕ್ಷತೆಯಲ್ಲಿ ಒಳ್ಳೆಯ ಅದ್ಭುತವಾದ ಕಾರ್ಯವನ್ನು ಕಳೆದ ಮೂರು ವರ್ಷಗಳಲ್ಲಿ ಮಾಡಿದೆ. ಜಿಲ್ಲೆಯ ತುಂಬೆಲ್ಲ ಪ್ರಾಥಮಿಕ ಶಿಕ್ಷಣ ಪ್ರಸಾರವಾಗಬೇಕೆಂದು ಬೋರ್ಡವು, ಎಷ್ಟು ಉತ್ಸುಕವಿರುವುದೆಂದರೆ ಪ್ರಾಥಮಿಕ ಶಿಕ್ಷಣದ ಕಾನೂನು ಎಂಬ ಕಾಯಿದೆ ಸುರುವಾಗುವ ಪೂರ್ವದಲ್ಲಿಯೇ ಜಿಲ್ಲೆಯೊಳಗೆ ೧೫೦ (ಪ್ರಾಥಮಿಕ) ಶಾಲೆಗಳನ್ನು ತೆಗೆಯಲು ಮುಂಬಯಿ ಇಲಾಖೆಯ ಇತರ ಯಾವದೇ ಜಿಲ್ಲೆಗೆ ಅನುಮತಿ ದೊರೆತಿಲ್ಲ. ಇದು ಬೆಳಗಾವಿ ಜಿಲ್ಲೆಗೆ ಅಭಿಮಾನದ ಸಂಗತಿಯಾಗಿದೆ. ಹೊಸ ಶಾಲೆಗಳನ್ನು ತೆಗೆಯುವುದು ಈ ವಾರ ಮುಗಿಯಿತು. ಆದುದರಿಂದ ಪ್ರಾಥಮಿಕ ಶಾಲೆಯಿಲ್ಲದ ೫೦೦ ಅಥವಾ ಅದಕ್ಕಿಂತಲೂ ಹೆಚ್ಚಿಗೆ ಜನಸಂಖ್ಯೆಯುಳ್ಳ ಒಂದು ಹಳ್ಳಿಯು ಉಳಿಯಲಿಲ್ಲ".[೧೧೫]

ಇದೇ ರೀತಿ "ದಿ ಬಾಂಬೆ ಕ್ರಾನಿಕಲ್" ಮುಂಬಯಿಯ ದೈನಿಕ ಪತ್ರಿಕೆ (ಜನವರಿ ೧೨, ೧೯೨೬) ಪಂಡಿತಪ್ಪನವರನ್ನು ಕುರಿತು ಶ್ಲಾಘನೀಯ ಮಾತುಗಳನ್ನು ಬರೆದಿದೆ.

"ಬೆಳಗಾವಿಯ ಸಾಹಸೀ ಕೃತ್ಯವನ್ನು ಇಲಾಖೆಯೊಳಗಿನ ಯಾವತ್ತೂ ಜಿಲ್ಲಾ ಲೋಕಲ್ ಬೋರ್ಡುಗಳು ಅನುಕರಣ ಮಾಡಬೇಕಾಗಿದೆ. ೧೫೦ ಪ್ರಾಥಮಿಕ ಶಾಲೆಗಳನ್ನು ಒಮ್ಮೆಲೇ ತೆಗೆದು ಬೆಳಗಾವಿ ಜಿಲ್ಲೆಯೊಳಗಿನ ನಿರಕ್ಷರತೆಯನ್ನು ಕಡಿಮೆ ಮಾಡಲು ಒಳ್ಳೇ ಶ್ಲಾಘನೀಯವಾದ ಮತ್ತು ಧೈರ್ಯದ ಪ್ರಯತ್ನವನ್ನು ಮಾಡಿರುತ್ತದೆ. ಜಿಲ್ಲೆಯೊಳಗೆ ಮೊದಲೆ ಇದ್ದ ಶಾಲೆಗಳು, ಮತ್ತೆ ಈಗ ತೆಗೆದ ಹೆಚ್ಚಿನ ಶಾಲೆಗಳು, ಇವೆರಡನ್ನು ಕೂಡಿಸಿದರೆ ೫೦೦ ಜನಸಂಖ್ಯೆಯುಳ್ಳ ಒಂದೂ ಹಳ್ಳಿಯ ಶಾಲೆ ಇಲ್ಲದೆ ಉಳಿಯಲಾರದು. ಪ್ರಾಥಮಿಕ ಶಾಲೆಯೊಳಗಿನ ವಿದ್ಯಾರ್ಥಿಗಳ ಒಲವು ಬೇಸಾಯದ ಕಡೆಗೆ ಹೋಗದಂತೆ ಸರಕಾರದವರ ಕಡೆಯಿಂದ ಮಾನ್ಯತೆಯನ್ನು ದೊರಕಿಸಿ ಬೋರ್ಡಿನ ಪ್ರೆಸಿಡೆಂಟರಾದ ಶ್ರೀ ಪಿ.ಆರ್.ಚಿಕ್ಕೋಡಿಯವರು ಶಿಕ್ಷಣದ ಪ್ರಗತಿಯಲ್ಲಿ ಒಳ್ಳೇ ಮನೋವೇದಕ ಉಪಕ್ರಮವನ್ನು ನಡೆಸಿರುವರು".[೧೧೬]

ಈ ಎರಡು ಪತ್ರಿಕೆಗಳ ಅಭಿಮಾನಪರ ಮಾತುಗಳನ್ನು ಅವಲೋಕಿಸಿದಾಗ ಗ್ರಾಮಾಂತರ ಶಾಲೆಗಳ ಹೆಚ್ಚುವಿಕೆಗೆ ಪಂಡಿತಪ್ಪನವರು ಕಾರಣೀಭೂತರಾಗಿ, ಈ ಮಹತ್ವದ ಕೆಲಸಗಳನ್ನು ಸರಕಾರದಿಂದ ಹೇಗೆ ಮಾಡಿಸಿದರೆಂದು ಅಚ್ಚರಿಯಾಗುತ್ತದೆ.

೪.೨.೫.೧೦.ಶೇತಕಿ ವಿದ್ಯೆ ಅಥವಾ ಒಕ್ಕಲುತನದ ಶಾಲೆಗಳ ಸ್ಥಾಪನೆ:

ಭಾರತವು ಕೃಷಿಯಾಧಾರಿತ ದೇಶವಾಗಿದ್ದು, ಇಲ್ಲಿಯ ಆರ್ಥಿಕಸ್ಥಿತಿ ಸುಧಾರಿಸಬೇಕಾದರೆ ಒಕ್ಕಲುತನವೇ ಆಧಾರವಾಗಿರುತ್ತದೆ. ಒಕ್ಕಲುತನದ ಆಧುನಿಕ, ವೈಜ್ಞಾನಿಕ ಪದ್ಧತಿಗಳನ್ನು ತಿಳಿದುಕೊಳ್ಳುವುದು ಒಕ್ಕಲಿಗರಿಗೆ ಸುಲಭದ ಕೆಲಸವಾಗಿರಲಿಲ್ಲ. ಹೀಗಾಗಿ ಒಕ್ಕಲುತನವನ್ನು ಸುಧಾರಿಸುವ ಪೂರ್ವದಲ್ಲಿ ಒಕ್ಕಲಿಗರನ್ನು ಸುಧಾರಿಸುವುದು ಅವಶ್ಯವಾಗಿತ್ತು. ಸುಧಾರಣೆಯ ಮದ್ದು ಎಂದರೆ ಶಿಕ್ಷಣ. ಯಾವ ರೀತಿ ರೋಗಿಗೆ ಇಷ್ಟವಿರಲಿ, ಬಿಡಲಿ ಅವನ ರೋಗ ನಿವಾರಣೆಯಾಗಬೇಕಾದರೆ ಒತ್ತಾಯಪೂರ್ವಕ ಔಷಧಿ ಕೊಡುವ ಹಾಗೆ, ವಿದ್ಯೆಯ ಗಂಧವೇ ಅರಿಯದ ಒಕ್ಕಲಿಗರಿಗೆ ಅವರ ಅಜ್ಞಾನವನ್ನು ಕಳೆಯಲು ಅವರಿಗೆ ಫೀ ವಗೈರೆ ಇಲ್ಲದ ಪುಕ್ಕಟೆ ಶಿಕ್ಷಣವನ್ನು ಕೊಡಲು ಸರ್ಕಾರ ಯೋಚಿಸಿತು.

ಅದುವರೆಗೆ ಒಕ್ಕಲುತನದ ಉಚ್ಚಶಿಕ್ಷಣ ಕೊಡಲು ಇಲಾಖೆಗೊಂದರಂತೆ ಕಾಲೇಜುಗಳಿದ್ದವು. ಈ ತರಹದ ಮಹಾವಿದ್ಯಾಲಯಗಳಿಂದ ಒಕ್ಕಲಿಗರಿಗೆ ಒಕ್ಕಲುತನ ವಿದ್ಯೆ ಸಂಪಾದಿಸುವುದು ಸಾಧ್ಯವಿಲ್ಲವೆಂದು ಭಾವಿಸಿ, ಸರಕಾರದವರು ಇಲಾಖೆಗೊಂದರಂತೆ ದೇಶಭಾಷೆಯಲ್ಲಿ ಒಕ್ಕಲುತನ ವಿದ್ಯೆಯನ್ನು ಕೊಡುವಂತೆ ಶೇತಕೀ ಶಾಲೆಗಳನ್ನು ತೆಗೆದರು.

ಬೆಳಗಾವಿ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡನ ಅಧ್ಯಕ್ಷರಾದ ಪಂಡಿತಪ್ಪನವರು ಒಕ್ಕಲುತನ ಶಿಕ್ಷಣವನ್ನು ಕೊಡುವ ಉತ್ಸಾಹವನ್ನು ತೋರಿಸಿ, ಬೆಳಗಾವಿ ಜಿಲ್ಲೆಯಿಂದ ೬ ಜನ ಮಾಸ್ತರರನ್ನು ದೇವಿ ಹೊಸೂರ ಕನ್ನಡ ಶೇತಕಿ ಶಾಲೆಗೆ, ಒಬ್ಬರನ್ನು ಮರಾಠಿ ಶೇತಕಿ ಶಾಲೆಗೆ ಕಳುಹಿಸಿ ಅಸಾಧಾರಣ ಮಾದರಿಯಾದರು. ಉಳಿದ ಜಿಲ್ಲೆಗಳಿಂದ ಒಬ್ಬೊಬ್ಬರು ಶೇತಕೀ ಶಾಲೆಗೆ ಬಂದಿರುವ ಕಾಲಕ್ಕೆ ಬೆಳಗಾವಿ ಜಿಲ್ಲೆಯಿಂದ ಒಮ್ಮೆಲೆ ಏಳುಜನ ಮಾಸ್ತರರು ಬಂದದ್ದು ಪಂಡಿತಪ್ಪನವರ ವಿಶ್ವಪ್ರಯತ್ನಕ್ಕೆ ಸಾಕ್ಷಿಯಾಗಿದೆ. ಒಂದು ರೀತಿಯಿಂದ ಕರ್ನಾಟಕದಲ್ಲಿ ಶೇತಕೀ ಶಿಕ್ಷಣವನ್ನು ಕೊಡಲು ಮನಸ್ಸುಮಾಡಿ ಯಶಸ್ಸನ್ನು ಹೊಂದಿದವರಲ್ಲಿ ಇವರೇ ಮೊದಲನೆಯವರು.[೧೧೭]

ಈ ವಿಷಯವಾಗಿ ಮೆ॥ 'ಡಾಯರೆಕ್ಟರ್ ಆಫ್ ಪಬ್ಲಿಕ್ ಇನಸ್ಟ್ರಕ್ಶನ್' ಇವರು ತಮ್ಮ ಐದು ವರ್ಷದ ರಿಪೋರ್ಟನಲ್ಲಿ ಹೀಗೆ ಬರೆದಿದ್ದಾರೆ.

ಮುಂಬಯಿ ಇಲಾಖೆಯ ಶೇತಕಿ ಖಾತೆಯ ಮುಖ್ಯಾಧಿಕಾರಿಗಳಾದ ಮೆ. ಡಾ.ಬರ್ನ್ಸ ಇವರು ಬೆಳಗಾವಿ ಜಿಲ್ಲೆಯೊಳಗಿನ ಕೊಂಗನೊಳ್ಳಿಯಲ್ಲಿಯ ಒಕ್ಕಲುತನದ ಶಾಲೆಯ ಬಗ್ಗೆ ವಿಜಿಟರ್ಸ ಬುಕ್ಕಿನಲ್ಲಿ ಕೆಳಗಿನ ಪ್ರಕಾರ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿರುವರು.

" ಒಕ್ಕಲುತನ ಕಲಿಸುವ ವರ್ಗದ ಕೆಲಸವು ಅತ್ಯುತ್ತಮವಿದೆ. ತೋಟದ ಸ್ಥಿತಿಯು ಚೆನ್ನಾಗಿ ಉನ್ನತಿಗೈದಿದೆ. ನೀರನ್ನು ಮೇಲೆ ತೆಗೆಯುವ ಮತ್ತು ಅದನ್ನು ಹಾಯಿಸುವ ವ್ಯವಸ್ಥೆಯು ಬಹಳೇ ಚೆನ್ನಾಗಿದೆ. ಬೆಳೆಗಳು ಒಳ್ಳೇ ಅಂದವಾದ ಸ್ಥಿತಿಯಲ್ಲಿ ಇವೆ. ಹಳ್ಳಿಯ ಶಾಲೆಯು ನಿಜವಾಗಿ ಮಾಡಬೇಕಾಗಿದ್ದ ಕಾರ್ಯವನ್ನು ಈ ಶಾಲೆಯು ನಿಸ್ಸಂಶಯವಾಗಿ ಮಾಡುತ್ತಲಿದೆ. ಮತ್ತು ಶಾಲೆಯ ಪರಿಣಾಮದ ಬಗ್ಗೆಯೂ, ಉತ್ಸಾಹದಿಂದ ನಡೆದ ಕೆಲಸದ ಬಗ್ಗೆಯೂ ಹೆಡ್‌ಮಾಸ್ತರರು ಅಭಿನಂದನೆಗೆ ಪಾತ್ರರಿರುವರು".[೧೧೮] ಇದರ ಮೇಲಿಂದ ಈ ತರದ ಕೆಲವು ಶಾಲೆಗಳಲ್ಲಿ ಎಷ್ಟು ಉತ್ತಮವಾಗಿ ಶಿಕ್ಷಣ ಕಾರ್ಯವು ನಡೆಯುತ್ತದೆಂಬುವದು ಸ್ಪಷ್ಟವಾಗುತ್ತದೆ.

ಮುಂಬಯಿ ಇಲಾಖೆಯಲ್ಲಿ ಎಲ್ಲಕ್ಕೂ ಮೊದಲು ಅಂದರೆ ೧೯೨೨ನೆಯ ಇಸ್ವಿಯಲ್ಲಿ ಒಕ್ಕಲುತನವನ್ನು ಕಲಿಸುವ ಶಾಲೆಗಳು ಪ್ರಾರಂಭವಾದವು. ಅವುಗಳ ಪ್ರಯೋಗಾರ್ಥವಾಗಿ ಮಧ್ಯಭಾಗವು ಗೊತ್ತು ಮಾಡಲ್ಪಟ್ಟಿತು. ಇದು ತಿಳಿದ ಕೂಡಲೆ ಮಿ.ಚಿಕ್ಕೋಡಿಯವರು ದಕ್ಷಿಣಭಾಗದಲ್ಲಿಯೂ ಇಂಥದೊಂದು ಶಾಲೆಯನ್ನು ತೆಗೆಯಲೇಬೇಕೆಂತಲೂ ದಕ್ಷಿಣಭಾಗ ಮತ್ತು ಮಧ್ಯಭಾಗಗಳಲ್ಲಿ ಏಕಕಾಲಕ್ಕೆ ಇಂಥ ಶಾಲೆಗಳು ಆರಂಭವಾಗಬೇಕೆಂತಲೂ ಜೋರಿನಿಂದ ಪ್ರಯತ್ನ ಮಾಡಿದರು. ಆ ಪ್ರಯತ್ನವು ಯಶಸ್ವಿಯಾಯಿತು. ಇದಕ್ಕಾಗಿ ಒಂದು ಶಾಲೆಯನ್ನು ಶಿಫಾರಸ ಮಾಡಲಿಕ್ಕೆ ಚಿಕ್ಕೋಡಿಯವರಿಗೆ ಕೇಳಿದರು. ಅದರಂತೆ ಅವರು ಶಿಫಾರಸ್ಸು ಮಾಡಿದ ಮೇಲೆ ಹೇಳಿದ ಶಾಲೆಯ ವಿಷಯವಾಗಿ ಒಕ್ಕಲುತನ ಖಾತೆಯ ಮುಖ್ಯಾಧಿಕಾರಿಗಳಾದ ಡಾಯರೆಕ್ಟರ್ ಆಫ್ ಅಗ್ರಿಕಲ್ಚರ್ ಇವರು ಮೇಲಿನಂತೆ ಮೇಲ್ತರದ ಪ್ರಶಂಸೆ ಮಾಡಿದ್ದದು ಒಳ್ಳೇ ಸಮಾಧಾನಕಾರಕ ಸಂಗತಿಯು.

೪.೨.೫.೧೧. ಬೆಳಗಾವಿ ಜಿಲ್ಲೆಯೊಳಗಿನ ಕೈಗಾರಿಕೆಯ ಕ್ಲಾಸುಗಳು (Manual Training Classses): ಮತ್ತು ಒಕ್ಕಲುತನದ ಶಾಲೆಗಳು:

ಬೆಳಗಾವಿ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳಿಗೆ ಜೋಡಿಸಿ ಕೆಲವು ಕೈಗಾರಿಕೆಯ ಕ್ಲಾಸುಗಳಿದ್ದವು. ಇದ್ದವು. ಆದರೆ ಅವು ಕೆಲವು ಕಾರಣಗಳಿಂದ ಬಂದಾಗಿದ್ದವು. ಚಿಕ್ಕೋಡಿಯವರು ಈ ಸಂಗತಿಯನ್ನು ಮೆ.ಡಾಯರೆಕ್ಟರ್ ಆಫ್ ಪಬ್ಲಿಕ್ ಇನಸ್ಟ್ರಕ್ಸನ್ ಇವರ ದೃಷ್ಟಿಗೆ ತಂದು, ಅವುಗಳ ಪುನರುಜ್ಜೀವನ ಮಾಡಿದರು. ಸರಕಾರಿ ಅಧಿಕಾರಿಗಳ ಕಡೆಯಿಂದ ಅವುಗಳ ವಾರ್ಷಿಕ ಇನ್ಸಪೆಕ್ಶನ್ ಮತ್ತು ಪರೀಕ್ಷೆಗಳ ವ್ಯವಸ್ಥೆಯನ್ನು ಸಹ ಅವರು ಮಾಡಿದರು.

ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ ಪ್ರೆಸಿಡೆಂಟ ಆಗಿದ್ದ ಚಿಕ್ಕೋಡಿಯವರು ತಮ್ಮ ಮೊದಲನೇ ಆಡಳಿತೆಯಲ್ಲಿ ಪ್ರತಿಯೊಂದು ವರ್ಷಕ್ಕೆ ೫ ಒಕ್ಕಲುತನದ ಕ್ಲಾಸುಗಳನ್ನು ಬೆಳಗಾವಿ ಜಿಲ್ಲೆಯಲ್ಲಿ ಸ್ಥಾಪಿಸುವ ಯೋಜನೆಯನ್ನು ತಯಾರಿಸಿ, ಸರಕಾರದ ಮನ್ನಣೆಯನ್ನು ದೊರಕಿಸಿದರು. ಆ ಪ್ರಕಾರ ೩-೪ ವರ್ಷಗಳ ವರೆಗೆ ಕೆಲಸವು ಚೆನ್ನಾಗಿ ಸಾಗಿತು. ಆದರೆ ಶ್ರೀ ಚಿಕ್ಕೋಡಿಯವರ ಆಡಳಿತವು ಮುಗಿದ ಕೂಡಲೇ ಯೋಜನೆಯು ಬಂದಾಯಿತು.[೧೧೯]

ಚಿಕ್ಕೋಡಿಯವರ ಲೋಕಲ್ ಬೋರ್ಡ್ ಕಾರ್ಯಭಾರದ ವಿಷಯವಾಗಿ ಮೆ.ಕಮೀಶನರ್ ಸಾಹೇಬರು ತೆಗೆದ ಉದ್ಗಾರಗಳಿವು: “ಕೊನೆಗೆ ನಿವೃತ್ತರಾಗುವ ಅಧ್ಯಕ್ಷರ ವಿಷಯದಲ್ಲಿ, ವಿಶೇಷತಃ ಶ್ರೀಯುತ ಪಿ.ಆರ್.ಚಿಕ್ಕೋಡಿ ಇವರ ಬಗ್ಗೆ, ನಾನು ಕಳೆದ ವರ್ಷ ಮಾಡಿದ ಪ್ರಶಂಸೆಯನ್ನೇ ಪುನಃ ವ್ಯಕ್ತ ಮಾಡುವೆನು. ಅವರು ಒಳ್ಳೆಯ ಸದ್ವಿವೇಕ ಬುದ್ಧಿಯಿಂದಲೂ, ಅಂತಃಕರಣದಿಂದಲೂ ತಮ್ಮ ಬೋರ್ಡಿನ ಸಲುವಾಗಿ ದುಡಿದಿರುವರು. ಇದಲ್ಲದೆ, ಇನ್ನುಮುಂದೆ ಇವರ ಸ್ಥಳದಲ್ಲಿ ಬರುವವರಿಗೆ ಅನುಕರಿಸಲು ಯೋಗ್ಯವಾದ ಕಾರ್ಯ ಪರಂಪರೆಯನ್ನೂ ಸಹ ಇವರು ಹಾಕಿಕೊಟ್ಟಿರುವರು.”[೧೨೦] ಈ ಎಲ್ಲ ಪ್ರಶಂಸೆಗಳನ್ನು ಗಮನಿಸಿದ ಸರಕಾರದವರು ಮಿ.ಚಿಕ್ಕೋಡಿಯವರ ನಾಮ ನಿರ್ದೇಶನ ಮಾಡಿದರು.

೧೯೨೫ ಮತ್ತು ೨೬ ಇಸ್ವಿಗಳ ಲೋಕಲ್ ಬೋರ್ಡ್ ಕಾರ್ಯನಿರ್ವಹಣೆಯ ವಿಷಯವಾಗಿ ಸರಕಾರದವರು ಮಾಡಿದ ತಮ್ಮ ವಾರ್ಷಿಕ ಪರಿಶೀಲನೆಯಲ್ಲಿ (Reviews) ಮಿ. ಪಿ. ಆರ್. ಚಿಕ್ಕೋಡಿಯವರ ಕೆಲಸವನ್ನು ಗೌರವಿಸುವ ಉದ್ದೇಶದಿಂದ ಅವರ ಹೆಸರನ್ನೂ ಅಲ್ಲಿ ಕಾಣಿಸಿರುವರು.[೧೨೧]

ಮುಂಬಯಿ ಇಲಾಖೆಯ ಸ್ಥಾನಿಕ ಸ್ವರಾಜ್ಯ ಮಂತ್ರಿಗಳಾದ ನಾಮದಾರ ಸರ್ ರುಸ್ತುಮ ವಕೀಲ ಇವರು ಒಂದು ವಿಶೇಷ ಪ್ರಸಂಗದಲ್ಲಿ ಸಾರ್ವಜನಿಕವಾಗಿ ಈ ರೀತಿ ಉದ್ಗಾರ ತೆಗೆದಿದ್ದಾರೆ.

“ಸದ್ಗೃಹಸ್ಥರೆ, ಕೊನೆಯಲ್ಲಿ ನಿಮ್ಮ ಬೋರ್ಡಿನ ಕಾರ್ಯ ನಿರ್ವಹಣೆಯು ಬಹಳೇ ಉತ್ತಮ ರೀತಿಯಿಂದ ನಡೆದುದನ್ನು ಕಂಡು, ನಾವು ನಿಮ್ಮನ್ನು ಅಭಿನಂದಿಸುತ್ತೇವೆ. ಇಲ್ಲಿ ಒಂದು ಸಂಗತಿಯನ್ನು ಹೇಳುವೆ. ಅದೇನೆಂದರೆ, ಮಿ.ಚಿಕ್ಕೋಡಿಯವರಂಥ ಒಳ್ಳೆ ಅತ್ಯತ್ತಮ ಅಧ್ಯಕ್ಷರು ನಿಮಗೆ ದೊರೆತಿರುವರು. ಇವರ ಪರಿಚಯವು ನನಗೆ ಬಹಳ ಕಾಲದಿಂದ ಇದೆ. ರಿಟ್ರೆಂಚ್‌ಮೆಂಟ್ ಕಮೀಟಿಯ ಮೆಂಬರ್ ಎಂದು ಕಳೆದ ಆರೇಳು ತಿಂಗಳುಗಳಲ್ಲಿ ಚೇರಮನ್ ಇರುವೆನು. ಮಿ.ಚಿಕ್ಕೋಡಿಯವರೆಂದರೆ ನನ್ನ ಮಾನ್ಯ ಸಹಕಾರೀ ಸದಸ್ಯರು. ಸರಕಾರೀ ಬಜೆಟ್‌ಗಳ ವಿಷಯದಲ್ಲಿಯೂ ಫೈನಾನ್ಸಿಯಲ್ ಅಂದರೆ ಹಣಕಾಸಿನ ಆಯವ್ಯಯ ವಿಷಯದಲ್ಲಿಯೂ ಅವರು ಸಾದ್ಯಂತ ಜ್ಞಾನವುಳ್ಳವರು. ಅವರು ಸರಕಾರೀ ಆಯವ್ಯಯ ವಿಷಯದಲ್ಲಿ ಒಳ್ಳೇ ನಿಷ್ಣಾತರೂ ಮತ್ತು ಮಾರ್ಮಿಕ ಅಭ್ಯಾಸಿಗಳೂ ಎಂದು ನನಗೆ ತೋರುತ್ತದೆ. ಅವರ ಅಧಿಪತ್ಯದಲ್ಲಿ ನಿಮ್ಮ ಬೋರ್ಡಿನ ಪ್ರಗತಿಯು ಚೆನ್ನಾಗಿ ಆಗುವುದು. ಸಾರ್ವಜನಿಕ ಕಾರ್ಯಗಳಿಗಾಗಾಗಿ ಅವರು ಸಮಾಜದವರ ಕಡೆಯಿಂದಲೂ, ಸರಕಾರದ ಕಡೆಯಿಂದಲೂ ಗೌರವಕ್ಕೆ ಅರ್ಹರಾಗಿದ್ದಾರೆ.”[೧೨೨]

ದಕ್ಷಿಣಭಾಗದ ಮೆ.ಕಮೀಶನರ್ ಸಾಹೇಬರು ಅವರು ೧೯೩೨-೩೩ರಲ್ಲಿ ಪುನಃ ಲೋಕಲ್ ಬೋರ್ಡುಗಳ ಆಡಳಿತದ ವಾರ್ಷಿಕ ವರದಿಯಲ್ಲಿ ಹೀಗೆ ಉಲ್ಲೇಖಿಸಿದ್ದಾರೆ.

“ಬೆಳಗಾವಿ ಬೋರ್ಡಿನ ಅಧ್ಯಕ್ಷರಾದ ಮಿ.ಚಿಕ್ಕೋಡಿಯವರು ನಾನಾ ತರದ ಸಾರ್ವಜನಿಕ ಕೆಲಸಗಳನ್ನು ಮಾಡಿ ದೊರಕಿಸಿದ ಹೇರಳವಾದ ಅನುಭವದಿಂದ ಬೋರ್ಡಿನ ಕಾರಭಾರವನ್ನು ಒಳ್ಳೆಯ ಕಾಳಜಿಯಿಂದಲೂ, ವಿಶಾಲ ದೃಷ್ಟಿಯಿಂದಲೂ ಮಾಡಿರುವರು. ಅವರ ಈ ಗುಣಗಳು ಅವರು ಕೈಕೊಂಡ ಎಲ್ಲ ಸಾರ್ವಜನಿಕ ಕೆಲಸಗಳಲ್ಲಿ ಕಂಡುಬರುತ್ತವೆ. ಕಲೆಕ್ಟರರ ಇಂಥ ಪ್ರಶಂಸಾಪರಗುಣ ವರ್ಣನೆಯ ಉದ್ಗಾರಗಳನ್ನು ನಾನೂ ಒಪ್ಪಿಕೊಳ್ಳುತ್ತೇನೆ.”[೧೨೩]

ತಾ.೨೯ ಸಪ್ಟಂಬರ್ ೧೯೩೩ ಇಸ್ವಿಯ ದಿವಸ ಬೆಳಗಾವಿ ಜಿಲ್ಲಾ ಲೋಕಲ್ ಬೋರ್ಡಿನವರು ಮುಂಬಯಿ ಇಲಾಖೆಯು ನೇಕ ನಾಮದಾರ ಗವರ್ನರ್ ಸಾಹೇಬರಿಗೆ ಮಾನಪತ್ರವನ್ನು ಕೊಟ್ಟ ಸಂದರ್ಭದಲ್ಲಿ ಮೆ.ಗವರ್ನರ್ ಸಾಹೇಬರು ಹೀಗೆ ಉತ್ತರಿಸಿದ್ದಾರೆ. "ಇದಕ್ಕೂ ಮೊದಲು ಅಧ್ಯಕ್ಷರಾಗಿದ್ದ ಮಿ.ಪಿ.ಆರ್.ಚಿಕ್ಕೋಡಿಯವರ ಆಡಳಿತದಲ್ಲಿ ನಿಮ್ಮ ಬೋರ್ಡಿನ ಕೆಲಸವು ಉತ್ತಮವಾಗಿತ್ತೆಂದು ನಾನು ಬಹಳೇ ಕೇಳಿರುವೆನು. ಇಂಥ ಕೀರ್ತಿಯನ್ನು ಅನುಸರಿಸಿಯೇ ನೀವಾದರೂ ನಿಮ್ಮ ಕಾರ್ಯವನ್ನು ಮಾಡುವಿರೆಂದು ನಾನು ನಂಬಿರುವೆನು. ಇದಕ್ಕೂ ಹೆಚ್ಚಿನ ಪ್ರಶಂಸೆಯನ್ನು ಮಾಡಲಾರೆ."[೧೨೪]

ಹೀಗೆ ಒಕ್ಕಲಿಗರಿಗೆ ಅನುಕೂಲವಾಗುವ ಶಾಲೆಗಳನ್ನು ತೆರೆದು, ದೇಶದ ಆರ್ಥಿಕ ಪರಿಸ್ಥಿತಿಯನ್ನು ಎತ್ತರಿಸಬಹುದು ಎಂಬ ಬಲವಾದ ಆಶೆಯಿಟ್ಟುಕೊಂಡು ಪಂಡಿತಪ್ಪನವರು ಕೃಷಿ ಕುಟುಂಬದವರಿಗೆ ಅನುಕೂಲ ಮಾಡಿಕೊಟ್ಟರು. ಆದರೆ ಮುಂದೆ ಈ ಯೋಜನೆಯನ್ನು ಮುನ್ನಡೆಸಿಕೊಂಡು ಹೋಗುವ ಆಡಳಿತಗಾರರು ಬರದೇ ಇರುವುದು ವಿಷಾದನೀಯ.

೪.೨.೫.೧೨. ಬೆಳಗಾವಿ ಜಿಲ್ಲಾ ಸ್ಕೂಲ್ ಬೋರ್ಡ್ ಅಧ್ಯಕ್ಷರು:

೧೯೨೬ರಲ್ಲಿ ಬೆಳಗಾವಿ ಜಿಲ್ಲಾ ಸ್ಕೂಲ್ ಬೋರ್ಡ್ ಆರಂಭವಾದಾಗ ಪಂಡಿತಪ್ಪನವರು ಅದರ ಪ್ರಥಮ ಅಧ್ಯಕ್ಷರು. ಅದರ ಮುಖಾಂತರ ಜಿಲ್ಲೆಯ ಶಿಕ್ಷಣಕ್ಷೇತ್ರದಲ್ಲಿ ಇನ್ನೂ ವ್ಯಾಪಕವಾಗಿ ಸೇವೆ ಸಲ್ಲಿಸಿದರು. ತಮ್ಮ ಸೇವೆಯ ಅವಧಿಯಲ್ಲಿ ಸುಮಾರು ೨೨೫ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಅವಕಾಶ ಮಾಡಿಕೊಟ್ಟು, ಜಿಲ್ಲೆಗೆ ಮಹದುಪಕಾರವನ್ನು ಮಾಡಿದರು. ಆಗ ಸರಕಾರವು ಪಂಡಿತಪ್ಪನವರ ಕೆಲವೊಂದು ಹಿತಕರ ವಿಚಾರಗಳನ್ನು ಒಪ್ಪದಿದ್ದಾಗ, ಜನಹಿತಕ್ಕಾಗಿ ಹೋರಾಡಿ ಯಶಸ್ವಿಯಾದರು.

೪.೨.೫.೧೩. ಉಚಿತವಾದ ಪ್ರಾಥಮಿಕ ಶಿಕ್ಷಣ:

ಬೆಳಗಾವಿ ಜಿಲ್ಲೆಯೊಳಗೆ ಏಳೂ ತರಗತಿಯ(ಕ್ಲಾಸು) ಪ್ರಾಥಮಿಕ ಶಿಕ್ಷಣವು ಬಡವರಿಗೂ ಶ್ರೀಮಂತರಿಗೂ ಉಚಿತವಾಗಿ ದೊರಕುವಂತೆ ಶ್ರೀಯುತ ಪಿ.ಆರ್.ಚಿಕ್ಕೋಡಿಯವರು ವ್ಯವಸ್ಥೆಮಾಡಿದರು. ಇದು ಅವರ ಪರಿಶ್ರಮದಿಂದ ಸಾಧ್ಯವಾಯಿತು. ೧೯೨೬ರರಿಂದ ಉಚಿತ ಶಿಕ್ಷಣದ ವ್ಯವಸ್ಥೆ ಆರಂಭವಾಯಿತು. ಇದು ಪಂಡಿತಪ್ಪನವರ ವಿರೋಧಿಗಳಿಗೆ ಸರಿ ಬಾರದೇ, ಅವರು ಮತ್ಸರ ಭಾವನೆಯನ್ನು ವ್ಯಕ್ತಮಾಡಿದರು. ಇಷ್ಟೇ ಅಲ್ಲ, ಚಿಕ್ಕೋಡಿಯವರು ತಮ್ಮ ಕಾಯಿದೆ ಕೌನ್ಸಿಲಿನ ಸ್ಥಾನವನ್ನು ಕಳೆದುಕೊಂಡರು. ಆದರೆ ಜನಹಿತವನ್ನು ಬಯಸಿ ಕಾರ್ಯಮಾಡಿದ ಪಂಡಿತಪ್ಪನವರ ಬಗ್ಗೆ ಬಡಬಗ್ಗರಿಗೆ ಮತ್ತು ಹಳ್ಳಿಯವರಿಗೆ ಕೃತಜ್ಞತಾ ಭಾವವಿತ್ತು. ಹೀಗಾಗಿ ಹಳ್ಳಿಗರು ಅಲ್ಲಲ್ಲಿ ಸಭೆಗಳನ್ನು ಸೇರಿಸಿ ಪಂಡಿತಪ್ಪನವರು ಮಾಡಿದ ಪ್ರಾಥಮಿಕ ಶಿಕ್ಷಣದ ಸೇವೆ ಜನಹಿತಕಾರಿಯಾಗಿತ್ತು ಎಂದು ತಮ್ಮ ಧನ್ಯತೆಯನ್ನು ವ್ಯಕ್ತಪಡಿಸಿದರು.[೧೨೫]

ಬಾಹ್ಯದಲ್ಲಿ ನೋಡಿದಾಗ ಪಂಡಿತಪ್ಪನವರು ಬಲು ಅಹಂಕಾರ, ಪ್ರತಿಷ್ಠೆ, ಆಡಂಬರದ ವ್ಯಕ್ತಿ ಎನ್ನಿಸುತ್ತಾರೆ. ಆದರೆ ಅಂತರಂಗದಲ್ಲಿ ಬಡಬಗ್ಗರ, ದೀನದಲಿತರ, ಒಕ್ಕಲಿಗರ ಬಗ್ಗೆ ಅಪಾರ ಕಾಳಜಿಯನ್ನು ಅವರು ಹೊಂದಿದ್ದರು. ಸರಕಾರದಲ್ಲಿ ಎಷ್ಟೇ ಒತ್ತಡಗಳು, ವೈರತ್ವ ಎದುರುದಾರೂ

ಬಗ್ಗದೇ ತಮ್ಮ ಮನಸ್ಸಿಗೆ ಹಿಡಿಸುವ ಕೆಲಸವನ್ನು ಅವರು ಮಾಡಿದರು. ಅಧಿಕಾರ, ಪ್ರತಿಷ್ಠೆಗಳಿಗಾಗಿ ಬಡಿದಾಡಿದ್ದರೆ ಪಂಡಿತಪ್ಪನವರು ಸಾಕಷ್ಟು ಸಿರಿಸಂಪತ್ತು, ಶ್ರೀಮಂತಿಕೆಯಲ್ಲಿ ತೇಲಾಡಬಹುದಾಗಿತ್ತು.

೪.೨.೫.೧೫. ಒತ್ತಾಯದ ಪ್ರಾಥಮಿಕ ಶಿಕ್ಷಣ:

ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭ ಮಾಡುವುದಕ್ಕೆ ಯೋಜನೆಯನ್ನು ತಯಾರಿಸಲು ಸರಕಾರದವರು ಒಂದು ಸಮಿತಿಯನ್ನು ನೇಮಿಸಿದ್ದರು. ಪಂಡಿತಪ್ಪ ಚಿಕ್ಕೋಡಿಯವರು ಈ ಸಮಿತಿಯ ಸದಸ್ಯರಿದ್ದು, ಈ ಯೋಜನೆಗೆ ಕೈಹಾಕಿದ್ದರು. ಈ ಸಮಿತಿಯ ಮುಂದೆ ಮುಂದುವರೆದ ವರ್ಗ ಮತ್ತು ಹಿಂದುಳಿದ ವರ್ಗದವರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಇವರಲ್ಲಿ ಮುಂದುವರೆದ ವರ್ಗದವರು ನಗರ ಮತ್ತು ದೊಡ್ಡ ಊರುಗಳಲ್ಲಿ ಮೊದಲು ಒತ್ತಾಯದ ಶಿಕ್ಷಣ ಪ್ರಾರಂಭವಾಗಬೇಕೆಂದು ಅಭಿಪ್ರಾಯಪಟ್ಟರೆ, ಇದಕ್ಕೆ ವಿರುದ್ಧವಾಗಿ ಪಂಡಿತಪ್ಪನವರು ಹಳ್ಳಿಗಾಡಿನ ಜನ ಅಜ್ಞಾನ, ಅಂಧಕಾರದಲ್ಲಿರುವುದರಿಂದ ಅವರಿಗೆ ಒತ್ತಾಯದ ಶಿಕ್ಷಣವನ್ನು ಕೊಡಬೇಕೆಂದರು. ಆದರೆ ಸರಕಾರ ಇದರ ಬಗ್ಗೆ ಯೋಚನೆ ಮಾಡದಿರಲು ಪಂಡಿತಪ್ಪನವರು ತಮ್ಮ ಅಭಿಪ್ರಾಯವನ್ನು 'ವಿಭಾಕರ' ಪತ್ರಿಕೆಯಲ್ಲಿ ಪ್ರಕಟಿಸಿದರು. ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಶೇ.೮೦ ರಷ್ಟು ಹಳ್ಳಿಗಳಿವೆ. ಹೀಗಾಗಿ ಹಳ್ಳಿಯ ಹಿತಾಹಿತಗಳಿಗೆ ಧಕ್ಕೆ ಬಾರದಂತೆ, ಅವರಿಗೆ ಹೆಚ್ಚು ಪ್ರಯೋಜನವಾಗುವಂತೆ ಕೆಲಸ ನಿರ್ವಹಿಸುವುದು ಸರಕಾರದರ ಆದ್ಯ ಕರ್ತವ್ಯವಾಗಿದೆ. ಹಳ್ಳಿಯವರ ಅಭಿಪ್ರಾಯವನ್ನು ತಿರಸ್ಕರಿಸಿದರೆ ದೇಶಕ್ಕೆ ಹಾನಿಯಾಗುವುದು ಖಂಡಿತ. ನಗರದಲ್ಲಿ ಅಶಿಕ್ಷಿತರ ಸಂಖ್ಯೆ ಕಡಿಮೆಯಿದ್ದರೆ ಗ್ರಾಮಗಳಲ್ಲಿ ಅತೀ ಹೆಚ್ಚು ಇದೆ. ಹಳ್ಳಿಗಳಲ್ಲಿ ಈ ಯೋಜನೆಯನ್ನು ಮೊದಲು ಪ್ರಾರಂಭಿಸಿದರೆ ಸಾಕಷ್ಟು ದುಡ್ಡು ವ್ಯಯವಾಗುತ್ತದೆ ಎನ್ನುವ ಆಲೋಚನೆಯಿಂದ ಸರಕಾರವು ತಮ್ಮ ಗಮನವನ್ನು ನಗರಗಳಿಗೆ ನೀಡಿದರೆ, ಅಜ್ಞ ಜನತೆಗೆ ಅನ್ಯಾಯವನ್ನು ಮಾಡಿದಂತಾಗುತ್ತದೆ.[೧೨೬]

ಅಲ್ಲದೆ ಶಿಕ್ಷಣ ಸಮಿತಿಯಲ್ಲಿ ನಡೆದ ಈ ಮತಭೇದ ವಿಚಾರವನ್ನು ಮತ್ತು ವರದಿಯನ್ನು ಕೇವಲ ಆಂಗ್ಲಭಾಷೆಯಲ್ಲಿ ಮುದ್ರಿಸಿ ಪ್ರಕಟಮಾಡದೆ, ಇಲಾಖೆಯೊಳಗಿನ ಮುಖ್ಯ ಮಾತೃಭಾಷೆಗಳೊಳಗೆ ಮುದ್ರಿಸಿ ಪ್ರಕಟಿಸಬೇಕು. ಅಂದರೆ ಅವು ಕನ್ನಡ, ಮರಾಠಿ, ಗುಜರಾತಿ ಮತ್ತು ಸಿಂಧಿ ಭಾಷೆಗಳಲ್ಲಿ ಪ್ರಸಿದ್ಧವಾಗಬೇಕು. ಆಂಗ್ಲಭಾಷೆಯಲ್ಲಿ ಅಚ್ಚಾದ ಸಮಿತಿಯ ಶಿಫಾರಸ್ಸುಗಳು ಸಾಮಾನ್ಯ ಜನಸಮೂಹಕ್ಕೆ ಅರ್ಥವಾಗುವುದು ಹೇಗೆ? ಜನರು ಸ್ವತಂತ್ರರೀತಿಯಿಂದ ವಿಚಾರಮಾಡಿ ತಮ್ಮ ಅಭಿಪ್ರಾಯಗಳನ್ನು ಹೇಗೆ ಕೊಡುತ್ತಾರೆ? ಹೀಗಾಗಿ ಶಿಕ್ಷಣಸಮಿತಿಯ ವರದಿಗಳು ದೇಶಭಾಷೆಯಲ್ಲಿ ಇರುವುದು ಯೋಗ್ಯವೆಂದು ಪಂಡಿತಪ್ಪನವರು ಅಭಿಪ್ರಾಯಪಟ್ಟರು.[೧೨೭]

ಪಂಡಿತಪ್ಪನವರು ಶಿಕ್ಷಣತಜ್ಞರಾಗಿ ಬಹುಮುಖವ್ಯಕ್ತಿತ್ವದ ಪಂಡಿತರಾಗಿದ್ದ ಕಾರಣ, ಅಂದಿನ ಸರಕಾರವು ಇವರ ವಿಚಾರಗಳಿಗೆ ಹೆಚ್ಚಿನ ಮಹತ್ವವನ್ನು ಕೊಡುತ್ತಿತ್ತು. ಇದು ಸ್ಥಳೀಯರಿಗೆ ಹೆಮ್ಮೆಯ ಸಂಗತಿಯಾಗಿತ್ತು.

೪.೨.೫.೧೬. ಶಿಕ್ಷಕರ ಸಮ್ಮೇಲನ:

ಬೆಳಗಾವಿ ಸ್ಕೂಲ್ ಬೋರ್ಡ್‌ವು ಪ್ರತಿವರ್ಷ ಶಿಕ್ಷಕರ ಸಮ್ಮೇಳನವನ್ನು ನಡೆಸುತ್ತಿದ್ದಿತು. ಸ್ಕೂಲ್ ಬೋರ್ಡ್ ಅಧ್ಯಕ್ಷರಾಗಿದ್ದ ಪಂಡಿತಪ್ಪನವರು ಇದರಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಇವರು ಬೆಳಗಾವಿ ಜಿಲ್ಲೆಯ ಸಮ್ಮೇಲನದ ಅಧ್ಯಕ್ಷರಾಗಿ ಕೆಲವು ಮಹತ್ವದ ವಿಚಾರಗಳನ್ನು ಸಭೆಯ ಮುಂದಿಟ್ಟರು. 'ಶಿಕ್ಷಣ ಕ್ಷೇತ್ರದಲ್ಲಿ ಗಣನೀಯವಾಗಿ ಬದಲಾವಣೆಯಾಗಬೇಕು. ಇದರಿಂದ ಸಮಾಜವು ಪ್ರಗತಿಯೆಡೆಗೆ ಸಾಗಲು ಸಾಧ್ಯ. ಸುಧಾರಿಸಿದ ದೇಶಗಳಲ್ಲಿ ಶಿಕ್ಷಣಕ್ಷೇತ್ರದ ಬೇರೆಬೇರೆ ಅಂಗಗಳಲ್ಲಿ ಸಮ್ಮೇಲನಗಳು ನಡೆಯುತ್ತವೆ. ಅಂದರೆ ಪ್ರತಿಯೊಂದು ವಿಷಯಕ್ಕೂ ಸಮ್ಮೇಳನ ಮತ್ತು ಸಂಘ ಬೇರೆಬೇರೆ. ಆ ಸಂಘಗಳಿಂದ ಹಲವು ಪ್ರಯೋಜನಗಳಾಗಿದ್ದನ್ನು ಅವರು ಮನಗಂಡಿದ್ದಾರೆ. ಅಂತಹ ವಿಶಿಷ್ಟ ಪ್ರಯೋಗಗಳನ್ನು ನಮ್ಮ ಕ್ಷೇತ್ರದಲ್ಲಿಯೂ ಪ್ರಾರಂಭಿಸಿ, ಪ್ರಯೋಜನಗಳನ್ನು ಪಡೆದುಕೊಳ್ಳಬೇಕು. ಈ ಸಂಘಗಳ ಮೂಲಕ ಪ್ರತ್ಯಕ್ಷ ಶಿಕ್ಷಣವನ್ನು ಕೊಡುತ್ತಿರುವ ಸಂದರ್ಭದಲ್ಲಿ ಬರುವ ತೊಂದರೆಗಳು, ಅವುಗಳನ್ನು ನಿವಾರಿಸುವ ಬಗೆ, ಶಾಲೆಗಳಲ್ಲಿ ಕಲಿಸುವ ಅವಶ್ಯ ವಿಷಯಗಳಾವವು? ಅನವಶ್ಯವಾದವುಗಳಾವವು? ಪ್ರಶ್ನೆಪತ್ರಿಕೆಯ ಮಾದರಿ, ಇವೆಲ್ಲವುಗಳ ಬಗ್ಗೆ ಸಾದ್ಯಂತವಾಗಿ ಈ ಸಮ್ಮೇಲನದ ಮೂಲಕ ಚರ್ಚಿಸಬೇಕಾಗಿದೆ. ಈ ಕಾರ್ಯವನ್ನು ಶಿಕ್ಷಕರು ಆದಷ್ಟು ಜಾರಿಗೆ ತಂದು ಶಿಕ್ಷಣಕ್ಷೇತ್ರದಲ್ಲಿ ಸುಧಾರಣೆ ತರಬೇಕಾಗಿದೆ ಎಂಬುದು ಪಂಡಿತಪ್ಪನವರ ವಿಚಾರವಾಗಿದೆ.

ಸರಕಾರಿ ನೌಕರರಿಗೆ ಬೇಕಾಗುವ ಶಿಕ್ಷಣವೆಂದರೆ ಮ್ಯಾಟ್ರಿಕ್ ಪರೀಕ್ಷೆ. ಅಂದರೆ ಹತ್ತನೆಯ ತರಗತಿ. ಇದಕ್ಕೆ ವಿಶಿಷ್ಟವಾದ ತರಬೇತಿಯನ್ನು ಮಕ್ಕಳಿಗೆ ನೀಡುವುದು ಅವಶ್ಯವಾಗಿದೆ. ನಮ್ಮ ದೇಶದಲ್ಲಿ ನರ್ಸರಿ ಸ್ಕೂಲುಗಳಿರಲಿಲ್ಲ. ಪಂಡಿತಪ್ಪನವರು ವಿದೇಶಗಳಲ್ಲಿ ಅವು ಇರುವುದನ್ನು ಗಮನಿಸಿ ಅಂತಹ ಶಾಲೆಗಳಿಂದ ಮಕ್ಕಳಿಗೆ ಪ್ರಯೋಜನವಾಗುವುದರಿಂದ ಅವುಗಳನ್ನು ಪ್ರಾರಂಭಿಸಬೇಕು ಎನ್ನುತ್ತಾರೆ. ಮುಂದುವರೆದು ಮಾತೃಭಾಷೆಯಲ್ಲಿಯೇ ಎಲ್ಲ ವಿಷಯಗಳನ್ನು ಕಲಿಸಬೇಕೆ. ಇಂಗ್ಲಿಷ್ ವಿಷಯವನ್ನು ಮಾತ್ರ ಅದೇ ಭಾಷೆಯಲ್ಲಿ ಕಲಿಸಬೇಕು. ಮಾತೃಭಾಷೆಯಿಂದಲೇ ಕಲಿಸಿದರೆ ವಿದ್ಯಾರ್ಥಿಗಳಿಗೆ ಎಲ್ಲ ವಿಷಯಗಳು ಮನದಟ್ಟಾಗುವವು. ಈ ವಿಷಯವನ್ನು ಪಂಡಿತಪ್ಪನವರು ಸರಕಾರಕ್ಕೆ ಒತ್ತಾಯಸುತ್ತಾರೆ. ಏಕೆಂದರೆ ಆಗ ದೊರೆಯುವ ಶಿಕ್ಷಣದಲ್ಲಿ ಇಂಗ್ಲಿಷ್ ಭಾಷೆಯೇ ಪ್ರಾಧಾನ್ಯವಾಗಿತ್ತು.

ವಿದ್ಯಾರ್ಥಿಗಳು ಪಡೆಯುವ ಶಿಕ್ಷಣದಿಂದ ಅವರು ಆಯಾ ಕ್ಷೇತ್ರಗಳಲ್ಲಿ ಪರಿಣಿತರಾಗಿ ಉದ್ಯೋಗಗಳಲ್ಲಿ ತೊಡಗುವಂತಾಗಬೇಕು. ಒಕ್ಕಲುತನ, ನೇಕಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಪರಿಣಿತರನ್ನಾಗಿ ಮಾಡಿ, ಅವರಿಗೆ ಉದ್ಯೋಗವನ್ನು ಹಚ್ಚಿಕೊಡುವ ಶಿಕ್ಷಣವನ್ನು ಸರಕಾರವು ಒದಗಿಸಬೇಕು.

ಶಿಕ್ಷಣದ ಮೇಲಿನ ಪ್ರೀತಿಯಿಂದ ಈ ಕ್ಷೇತ್ರಕ್ಕೆ ಶಿಕ್ಷಕರು ಕಾಲಿಡಬೇಕು. ಕೇವಲ ಪಗಾರದ ಹಂಬಲವು ಇಲ್ಲಿರಬಾರದು. ಶಿಕ್ಷಣದ ಒಲವಿನಿಂದ ಬಂದವರು ಮಾತ್ರ ಶಿಕ್ಷಣಕ್ಷೇತ್ರವನ್ನು ಅಭಿವೃದ್ಧಿ ಪಡಿಸಬಲ್ಲರು ಎಂಬುದು ಪಂಡಿತಪ್ಪನವರ ಅಭಿಪ್ರಾಯವಾಗಿತ್ತು.[೧೨೮]

೪.೨.೫.೧೭. ಜನತಾ ಶಿಕ್ಷಣಸಂಸ್ಥೆ:

ತಮ್ಮಣ್ಣಪ್ಪನವರು ಬನಹಟ್ಟಿಯ ಎ.ವ್ಹಿ.ಸ್ಕೂಲನ್ನು ಹಾಯಸ್ಕೂಲನ್ನಾಗಿ ಎತ್ತರಿಸಲು ಬಯಸಿದರು. ಏಕೆಂದರೆ ಬನಹಟ್ಟಿಯ ವಿದ್ಯಾರ್ಥಿಗಳು ಹಾಯಸ್ಕೂಲ ಶಿಕ್ಷಣಕ್ಕಾಗಿ ಬೇರೆ ಕಡೆಗೆ ಹೋಗಬೇಕಾಗತ್ತಿತ್ತು. ಇದು ಎಲ್ಲ ವಿದ್ಯಾರ್ಥಿಗಳಿಗೂ ಅಸಾಧ್ಯವಾಗಿತ್ತು. ಹೀಗಾಗಿ ತಮ್ಮಣ್ಣಪ್ಪನವರು ಹೈಸ್ಕೂಲ ಸ್ಥಾಪನೆಯ ಅವಶ್ಯಕತೆಯನ್ನು ಅರಿತರು. ಆದರೆ ಅದು ಅಷ್ಟು ಸುಲಭದ ಮಾತಾಗಿರಲಿಲ್ಲ. ಆಗಿನ ಸರಕಾರದ ನಿಯಮದಂತೆ ೧೫೦೦ರೂಪಾಯಿಗಳನ್ನು ಇಡುಗಂಟಾಗಿ ಇಡಬೇಕಾಗಿತ್ತು. ತಮ್ಮಣ್ಣಪ್ಪನವರು ತಮ್ಮ ಸಮಸ್ತ ಆಸ್ತಿಯನ್ನು ಹಾಯಸ್ಕೂಲ ಸ್ಥಾಪನೆಗಾಗಿ ಮಾರಿದರು. ಊರಿನ ಗಣ್ಯರ ಮನವೊಲಿಸಿ ಸಾಕಷ್ಟು ದೇಣಿಗೆಯನ್ನು ಸಂಗ್ರಹಿಸಿದರು. ಆದರೆ ತಮ್ಮಣ್ಣಪ್ಪನವರಿಗೆ ವಯಸ್ಸಾದ ಕಾರಣ ದೇಹಸ್ಥಿತಿ ಕೆಡಲಾರಂಭಿಸಿತು. ಇದನ್ನು ಅರಿತ ತಮ್ಮಣ್ಣಪ್ಪನವರು ಮೃತ್ಯುಪತ್ರವನ್ನು ಬರೆಯಿಸಿದರು. ಅದರಲ್ಲಿ ಹೈಸ್ಕೂಲ್ ಸ್ಥಾಪನೆಗಾಗಿ ತಾವು ಮಾಡಿದ ದಾನಕ್ಕೆ ತಮ್ಮ ಮಗನಾದ ಶ್ರೀ ಪಂಡಿತಪ್ಪ ಚಿಕ್ಕೋಡಿ ಮತ್ತು ಅಳಿಯ ಫ.ಗು.ಹಳಕಟ್ಟಿಯವರನ್ನು ಟ್ರಸ್ಟಿಗಳನ್ನಾಗಿ ಮಾಡಿದರು. ತಮ್ಮಣ್ಣಪ್ಪನವರ ಮರಣಾನಂತರದಲ್ಲಿ ಅಂದರೆ ೧೯೩೫ರಲ್ಲಿ ಹೈಸ್ಕೂಲ ಸ್ಥಾಪನೆಗೆ ಜಮಖಂಡಿ ಸರಕಾರದಿಂದ ಅನುಮತಿ ದೊರೆಯಿತು. ಸ್ಥಾಪನೆಯಾದ ಹೈಸ್ಕೂಲಿಗೆ 'ಶ್ರೀ ರಾಮಚಂದ್ರರಾವ ಅಪ್ಪಾಸಾಹೇಬ ಹೈಸ್ಕೂಲ' ಎಂದು ನಾಮಕರಣವಾಯಿತು.[೧೯]

ಬನಹಟ್ಟಿಯ ಜನತೆ ತಮ್ಮಣ್ಣಪ್ಪನವರು ಮಾಡಿದ ತ್ಯಾಗವನ್ನು ಎಂದೂ ಮರೆಯಲಿಲ್ಲ. ಅವರ ಮೇಲೆ ಅಪಾರ ಗೌರವ, ಭಕ್ತಿಯನ್ನು ಇಟ್ಟುಕೊಂಡ ಜನತೆಯು ಅವರ ಮಗನಾದ ಬೆಳಗಾವಿಯ ಪಂಡಿತಪ್ಪನವರನ್ನು ಮೊದಲ ಅಧ್ಯಕ್ಷರನ್ನಾಗಿ ಮಾಡಿ ಕೃತಜ್ಞತೆ ಸಲ್ಲಿಸಿತು. ಪಂಡಿತಪ್ಪನವರೂ ಚಿಕ್ಕಪ್ಪನ ಮೇಲಿನ ಪ್ರೀತಿಯಿಂದ ಬನಹಟ್ಟಿಯ ಜನತೆಗೆ ಎಂದೂ ನಿರಾಶೆಗೊಳಿಸಲಿಲ್ಲ. ಹೈಸ್ಕೂಲ್ ಪ್ರಾರಂಭವಾದಾಗ ಸಾಕಷ್ಟು ಕಷ್ಟದ ಪರಿಸ್ಥಿತಿಯಲ್ಲಿತ್ತು. ಅದನ್ನು ಮುನ್ನಡೆಸಿಕೊಂಡು ಹೋಗಬೇಕಾದರೆ ಆರ್ಥಿಕ ಭದ್ರತೆ ಅವಶ್ಯಕತೆಯಿತ್ತು. ಪಂಡಿತಪ್ಪನವರು ಅಧ್ಯಕ್ಷರಾಗಿ ಬಂದ ಸಂದರ್ಭದಲ್ಲಿ ಈ ವಿಷಯವನ್ನು ಜನತೆಗೆ ತಿಳಿಹೇಳಿದ ಕಾರಣ ಅವರಿಂದ ಸಾಕಷ್ಟು ದೇಣಿಗೆಗಳು ಸಂಘಕ್ಕೆ ಲಭಿಸುವಂತಾಯಿತು. ಅವರಲ್ಲಿ ಮುಖ್ಯರಾದವರೆಂದರೆ ಯುವರಾಜ ಶ್ರೀ ರಾಮಚಂದ್ರರಾವ ಅವರು ಹೆಸರಿನಿಂದ ರೂ.೧೫,೦೦೦ರೂಪಾಯಿಗಳನ್ನು ಸಂಘಕ್ಕೆ ದೇಣಿಗೆ ಸಲ್ಲಿಸಿದರಲ್ಲದೆ, ಸರಕಾರದ ವಶದಲ್ಲಿದ್ದ ಕಮತಗಿ ಗುಡ್ಡವನ್ನು ಶಾಲಾಕಟ್ಟಡದ ಸ್ಥಳಕ್ಕಾಗಿ ದೇಣಿಗೆ ಇತ್ತರು.[೧೩೦]

ಹೈಸ್ಕೂಲು ಆರಂಭವಾದ ಮೇಲೆ ಸಂಘವು ಅನೇಕ ತೊಂದರೆಗಳನ್ನು ಅನುಭವಿಸಬೇಕಾಯಿತು. ಪಾಲಕರಲ್ಲಿ ವಿಶೇಷ ಪ್ರಜ್ಞೆಯನ್ನು ಮೂಡಿಸಬೇಕಾಯಿತು. ತರಬೇತಿ ಹೊಂದಿದ ಪದವೀಧರ ಶಿಕ್ಷಕರನ್ನು ದೊರಕಿಸುವುದು ಕೂಡ ಕಷ್ಟದ ಕೆಲಸವಾಗಿದ್ದಿತು. ಅನಿವಾರ್ಯ ಪರಿಸ್ಥಿತಿಗಳಲ್ಲಿ 'ಲೆಂಟ್ ಹ್ಯಾಂಡ್" ಕೂಡ ಪಡೆಯಲಾಯಿತು. ಅಂಥ ಕಠಿಣ ಪರಿಸ್ಥಿತಿಯಲ್ಲಿ ಪಂಡಿತಪ್ಪ

ಚಿಕ್ಕೋಡಿಯವರು ಅಧ್ಯಕ್ಷರಾಗಿ ಸಂಘವನ್ನು ಸುಗಮವಾಗಿ ನಡೆಸಿಕೊಂಡು ಹೋಗುವಲ್ಲಿ ಅಪಾರ ಪರಿಶ್ರಮವಹಿಸಿದರು.[೧೩೧]

ಜನತೆಯ ಆಗ್ರಹದ ಮೇಲೆ ೧೯೪೦ರಲ್ಲಿ ಮತ್ತೆ ಎರಡನೆಯ ಸಲ ಅಧ್ಯಕ್ಷರಾಗಿ ಆಯ್ಕೆಯಾದರು. ೧೯೪೧ರಲ್ಲಿ ಪಂಡಿತಪ್ಪನವರು ಅಧ್ಯಕ್ಷಸ್ಥಾನವನ್ನು ಬಿಟ್ಟುಕೊಡಲು ನಿರ್ಧರಿಸಿದರು. ಆದರೆ ಅದೇತಾನೆ ಬೆಳೆಯುತ್ತಿದ್ದ ಸಂಸ್ಥೆಗೆ ಪಂಡಿತಪ್ಪನವರ ಅವಶ್ಯಕತೆ ಇತ್ತು. ಈ ವಿಷಯ ಸಂಸ್ಥೆಯ ಮೀಟಿಂಗ್ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ."ಮೆ||ಪಂಡಿತಪ್ಪ ಚಿಕ್ಕೋಡಿ ಬಿ.ಎ. ಬೆಳಗಾವಿ ಇವರು ಈ ಸಂಸ್ಥೆಯ ಪ್ರೆಸಿಡೆಂಟರಿದ್ದು ಈಗ ಅವರು ಈ ಸಂಸ್ಥೆಯಿಂದ ಮುಕ್ತ ಆಗತಕ್ಕವರಿದ್ದಾರೆಂದು ತಿಳಿಸಿದ್ದಾರೆ. ಆದರೆ ಅವರು ಈ ಸಂಸ್ಥೆಯನ್ನು ಬಿಟ್ಟುಹೋದಲ್ಲಿ ಅವರ ಈ ಜವಾಬ್ದಾರಿಯ ಕೆಲಸವನ್ನು ಮಾಡಲಿಕ್ಕೆ ಯೋಗ್ಯರು ಬೇರೊಬ್ಬರಿಲ್ಲ. ಕಾರಣ ಈ ಸಭೆಯು ಅವರನ್ನು ಅತಿ ಆಗ್ರಹದಿಂದ ಸಂಸ್ಥೆಯ ಪ್ರೆಸಿಡೆಂಟ್ ಕೆಲಸ ಮಾಡಲಿಕ್ಕೆ ಕೇಳಿಕೊಳ್ಳುತ್ತದೆ."[೧೩೨] ಪಂಡಿತಪ್ಪನವರು ಸಂಸ್ಥೆ ಪ್ರಾರಂಭವಾದಾಗಿನಿಂದ ಪ್ರತಿ ತಿಂಗಳು ಭೇಟಿಕೊಡುತ್ತಿದ್ದರು. ಸಂಸ್ಥೆಯನ್ನು ಸುಧಾರಿಸುವ ಸಲುವಾಗಿ ಠರಾವುಗಳನ್ನು ಪಾಸುಮಾಡುತ್ತಿದ್ದರು.

ಪಂಡಿತಪ್ಪನವರು 'ಜನತಾ ಶಿಕ್ಷಣ ಸಂಸ್ಥೆ'ಯಿಂದ ಯಾವುದೇ ಪ್ರತಿಫಲಾಕ್ಷೆ ಪಡೆದವರಲ್ಲ. ಚಿಕ್ಕಪ್ಪನ ಮೇಲಿನ ಪ್ರೀತಿಯಿಂದ, ಅವರ ಕನಸಿನ ಕೂಸಾದ ಈ ಸಂಸ್ಥೆಯನ್ನು ಬೆಳಸುವುದಕ್ಕೋಸ್ಕರ ತಾವೇ ಸ್ವಂತ ಖರ್ಚಿನಿಂದ ಬನಹಟ್ಟಿಗೆ ಬಂದು ಕೆಲಸ ಮಾಡಿಕೊಟ್ಟು ಹೋಗುತ್ತಿದ್ದರು. "೮)ಮೆ||ಪಂಡಿತಪ್ಪ ಚಿಕ್ಕೋಡಿ ಬಿ.ಎ. ಬೆಳಗಾವಿ ಇವರು ಈ ಸಂಸ್ಥೆಯು ಸುರು ಆಗುವ ಮೊದಲಿನಿಂದ ಅಂದರೆ ಕೈ||ವಾ||ತಮ್ಮಣ್ಣಪ್ಪ ಚಿಕ್ಕೋಡಿ ಇವರು ಅಜಾರಿ ಆದಾಗಿನಿಂದ ಈ ಸಂಸ್ಥೆಯ ಕೆಲಸಕ್ಕೆ ಅನೇಕ ಸಾರೆ ಬಂದುಹೋಗಿ ಮಾಡಿದ್ದಾರೆ. ಅವರ ಇದುವರೆಗೆ ಏನೂ ಹಣ Travelling allowance ಅಂತ ತೆಗೆದುಕೊಂಡಿಲ್ಲ. ಮತ್ತು ಅವರು ಕೇಳಿಲ್ಲ. ಕಾರಣ ಅವರು ಬರು-ಹೋಗುವ ಖರ್ಚನ್ನಾದರೂ ನಮ್ಮ ಸಂಸ್ಥೆಯು ಕೊಡಬೇಕಾಗಿದೆ. ಪರಂತು ಅದನ್ನು ಸಹ ಕೊಡಲಿಕ್ಕೆ ಈಗ ನಮ್ಮ ಕಡೆಗೆ ಸಾಕಷ್ಟು ಹಣ ಇಲ್ಲ. ಆದ್ದರಿಂದ ನಿಧಾನವಾಗಿ ಮೆ||ಪಂಡಿತಪ್ಪ ಚಿಕ್ಕೋಡಿ ಇವರನ್ನು ಕೇಳಿ ಅವರ ಈಗ ಎಂಟು ವರ್ಷಗಳ ಟಿ.ಎ.ದ ಬಿಲ್ಲು ತೆಗೆದುಕೊಂಡು, ಅದನ್ನು ಅವರ ಖಾತೆಗೆ ಜಮಾ ಹಿಡಿಯಬೇಕು."[೧೩೩] ಹೀಗೆ ಪಂಡಿತಪ್ಪನವರು ಒಂದು ಸಂಸ್ಥೆಯನ್ನು ಪ್ರಾರಂಭಿಸಿದರೆ ಅದರ ಪ್ರಗತಿಯನ್ನು ಬಯಸುತ್ತಿದ್ದರು. ಇದಕ್ಕಾಗಿ ತಮ್ಮ ತನು-ಮನ-ಧನಗಳನ್ನು ಅರ್ಪಿಸುತ್ತಿದ್ದರು.

೧೯೩೮ರಲ್ಲಿ ಹೈಸ್ಕೂಲ್ ಪ್ರಾರಂಭವಾದಾಗ ಅನೇಕ ಸಂಕಷ್ಟಗಳನ್ನು ಎದುರಿಸಿದ್ದು ಸಹಜ. ಏಕೆಂದರೆ ಬನಹಟ್ಟಿ ಪ್ರದೇಶವು ಮುಖ್ಯವಾಗಿ ಬಡ ನೇಕಾರರಿಂದ ಕೂಡಿತ್ತು. ಇಂತಹ ಸಂದರ್ಭದಲ್ಲಿ ಶಾಲೆಯು ನಿಗದಿ ಪಡಿಸಿದ ಫೀ ಹಣವನ್ನು ತುಂಬಲಾರದ ಪರಿಸ್ಥಿತಿ ಇತ್ತು. ಜೊತೆಗೆ ಶಿಕ್ಷಣದ ಮಹತ್ವ ಕೂಡ ಅಷ್ಟಾಗಿ ಇರಲಿಲ್ಲ. 'ಹೀಗಾಗಿ ಹೈಸ್ಕೂಲಿನ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರಲಿಲ್ಲ. ಇದನ್ನು ಮನಗಂಡ ಜನತಾ ಶಿಕ್ಷಣ ಸಂಘವು, ತಾನು ಸ್ವತಃ ಎಷ್ಟೇ ಆರ್ಥಿಕ ಮುಗ್ಗಟ್ಟಿನಲ್ಲಿದ್ದರೂ, ಬಡ ವಿದ್ಯಾರ್ಥಿಗಳ ಸಹಾಯಕ್ಕೆ ಸಿದ್ಧವಾಯಿತು. ಫೀ ಹಣವನ್ನು ಕೊಡಲಾಗದ ವಿದ್ಯಾರ್ಥಿಗಳಿಗೆ ಫೀ ವಿನಾಯತಿಯನ್ನು

ಕೊಟ್ಟಿತು. ಪುಸ್ತಕಗಳನ್ನು ಕೊಳ್ಳಲು ಅಸಮರ್ಥರಾದ ವಿದ್ಯಾರ್ಥಿಗಳಿಗೆ ಸಂಘವೇ ವ್ಯವಸ್ಥೆ ಮಾಡಿತು. ಹೈಸ್ಕೂಲಿನಲ್ಲಿ ಉತ್ತಮ ಮಟ್ಟದ ಶಿಕ್ಷಣ ದೊರೆಯುವಂತೆ ವಿವಿಧ ವಿಷಯಗಳಲ್ಲಿ ಪರಿಣಿತರಾದ, ತರಬೇತಿ ಹೊಂದಿದ ಶಿಕ್ಷಕರನ್ನು ನೇಮಕಾತಿ ಮಾಡಿತು.'[೧೩೪] ಇದರಿಂದ ಸ್ಥಳೀಯರಲ್ಲದೆ ಬೇರೆಬೇರೆ ಕಡೆಯ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಂಸ್ಥೆ ಇದಾಯಿತು.

ಇಂದು ಜನತಾ ಶಿಕ್ಷಣದ ಅಡಿಯಲ್ಲಿ ಎಸ್.ಆರ್.ಎ. ಸಂಯುಕ್ತ ಕಿರಿಯ ಮಹಾವಿದ್ಯಾಲಯ, ಕಲಾ ಹಾಗೂ ವಾಣಿಜ್ಯ ಪದವಿ ಮಹಾವಿದ್ಯಾಲಯ, ಮ್ಯಾನೇಜ್‌ಮೆಂಟ್ ಕೋರ್ಸುಗಳಿವೆ. ಜೊತೆಗೆ ಸಂಸ್ಥೆಯು ಸಾಕಷ್ಟು ಅಭಿವೃದ್ಧಿಪಥದಲ್ಲಿ ಸಾಗಿದ್ದು, ಉತ್ತರಕರ್ನಾಟಕದಲ್ಲಿ ಉತ್ತಮಸಂಸ್ಥೆ ಎಂದು ಹೆಸರು ಮಾಡಿದೆ. ಈ ಎಲ್ಲ ಪರಿಶ್ರಮಗಳ ಹಿಂದೆ ಸಂಘದ ಮೊದಲ ಅಧ್ಯಕ್ಷರಾದ ಪಂಡಿತಪ್ಪನವರ ಪರಿಶ್ರಮ ಇದ್ದೇ ಇದೆಯೆಂಬುದನ್ನು ಮರೆಯಬಾರದು.

ಬನಹಟ್ಟಿಯ ಜನತೆಯು ತಮ್ಮಣ್ಣಪ್ಪನವರ ಅಳಿಯ ಡಾ.ಫ.ಗು.ಹಳಕಟ್ಟಿಯವರು ಜನತಾ ಶಿಕ್ಷಣ ಸಂಸ್ಥೆಗೆ ಮಾಡಿದ ಸೇವೆಯನ್ನು ಸ್ಮರಿಸಿಕೊಂಡು, ಅವರ ಪುತ್ಥಳಿಯನ್ನು ಸಂಸ್ಥೆಯ ಆವರಣದಲ್ಲಿ ಅನಾವರಣಗೊಳಿಸಿದೆ. ಅವರನ್ನು ತಮ್ಮಣ್ಣಪ್ಪನವರ ಜೊತೆಯಲ್ಲಿಯೇ ಸ್ಮರಿಸಿಕೊಳ್ಳುವುದು ಬನಹಟ್ಟಿಯಲ್ಲಿ ವಾಡಿಕೆಯಾಗಿದೆ. ಹಳಕಟ್ಟಿಯವರ ಹೆಸರನ್ನು ಪ್ರೌಢಶಾಲೆಗೆ ಇಟ್ಟಿದ್ದಾರೆ. ಇದು ಅವರಿಗೆ ಸಲ್ಲಬೇಕಾದ ಗೌರವ. ಇದನ್ನು ಖಂಡಿತವಾಗಿ ಅಲ್ಲಗಳೆಯಲಾಗದು. ಆದರೆ ಪಂಡಿತಪ್ಪನವರು ೧೯೨೯ರಲ್ಲಿ ಪ್ರಾರಂಭವಾದ 'ಆಂಗ್ಲೋ-ವರ್ನಾಕ್ಯುಲರ್ ಶಾಲೆ'ಯಿಂದ ಹಿಡಿದು 'ಎಸ್.ಆರ್.ಐ.ಹೈಸ್ಕೂಲ'ನ್ನು ಪ್ರಾರಂಭಿಸಿ ಅದನ್ನು ಬೆಳವಣಿಗೆಯ ಹಂತಕ್ಕೆ ತರುವದರ ತನಕ ಸಾಕಷ್ಟು ನಿಸ್ವಾರ್ಥದಿಂದ ದುಡಿದಿದ್ದಾರೆ. ಹಲವಾರು ಸಂಘ-ಸಂಸ್ಥೆಗಳಲ್ಲಿ ಸದಾ ಕಾರ್ಯೋನ್ಮುಖರಾಗಿದ್ದರೂ, ಬನಹಟ್ಟಿಯ ಶಿಕ್ಷಣದ ಕಾರ್ಯವನ್ನು ಯಾವತ್ತೂ ಮರೆಯಲಿಲ್ಲ. ಅಂತಹ ತ್ಯಾಗ, ಸೇವೆ ಮತ್ತು ಪರಿಶ್ರಮಗಳ ಮೂಲಮಂತ್ರವಾಗಿದ್ದ ಪಂಡಿತಪ್ಪನವರ ಹೆಸರು ಮಾತ್ರ ಇಂದು ಬನಹಟ್ಟಿಯ ಜನತಾ ಶಿಕ್ಷಣಸಂಸ್ಥೆಯ ಅಧ್ಯಕ್ಷರ ಹೆಸರುಗಳ ಪಟ್ಟಿಯಲ್ಲಿ ಮಾತ್ರ ಇದೆ. ಯಾವುದಾದರೂ ಒಂದು ಅಂಗಸಂಸ್ಥೆಗೆ ಪಂಡಿತಪ್ಪನವರ ಹೆಸರನ್ನು ಇಟ್ಟು ಕೃತಜ್ಞತೆ ಸಲ್ಲಿಸಬೇಕಾಗಿತ್ತು. ಎತ್ತರಕ್ಕೆ ಬೆಳೆದು ನಿಂತ ಜನತಾ ಶಿಕ್ಷಣಸಂಸ್ಥೆಗೆ ಭದ್ರಬುನಾದಿಯನ್ನು ಹಾಕಿದ ಪಂಡಿತಪ್ಪನವರನ್ನು ಶಾಶ್ವತವಾಗಿ ಸ್ಮರಿಸಿಕೊಳ್ಳುವುದು ನಮ್ಮ ಕರ್ತವ್ಯಗಳಲ್ಲೊಂದೆಂಬುದನ್ನು ಮರೆಯುವಂತಿಲ್ಲ.

೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಶಿಕ್ಷಣಾಧಿಕಾರಿಗಳಾದ ಮೆ॥ರಸೆಲ್ ಮತ್ತು ಡೆಪ್ಯುಟಿ ಚೆನ್ನಬಸಪ್ಪನವರು ಉತ್ತರ ಕರ್ನಾಟಕದ ಜನತೆಯಲ್ಲಿ ಶಿಕ್ಷಣದ ಜಾಗೃತಿಯನ್ನು ಮೂಡಿಸಿ ಕನ್ನಡದ ದೀಪವೇ ಆಗಿದ್ದರು. ಅವರ ತರುವಾಯ ಅರಟಾಳ ರುದ್ರಗೌಡರು, ಗಿಲಗಂಚಿ ಗುರುಸಿದ್ಧಪ್ಪನವರು ಕನ್ನಡಿಗರ ಪಾಲಿಗೆ ಕಾಮಧೇನುವಾಗಿ ಪರಿಣಮಿಸಿದ್ದರು. ಇವರು ಮಾಡಿದ ಧನಸಹಾಯದಿಂದ ಶೈಕ್ಷಣಿಕ ಕ್ಷೇತ್ರ ವಿಪುಲವಾಗಿ ಪ್ರಗತಿಯಾಯಿತು. ಇಂಥ ಸಂದರ್ಭದಲ್ಲಿ ಜನಿಸಿ ಪಂಡಿತಪ್ಪ ಚಿಕ್ಕೋಡಿಯವರು ಶಿಕ್ಷಣ ಪ್ರೇಮಿಗಳು, ಶಿಕ್ಷಣತಜ್ಞರೂ ಆಗಿ ಉತ್ತರಕರ್ನಾಟಕದ ಶಿಕ್ಷಣಕ್ಷೇತ್ರದಲ್ಲಿ ಗಣನೀಯ ಸಾಧನೆ

ಮಾಡಿದರು. ಹೀಗಾಗಿ ಪಂಡಿತಪ್ಪನವರು ತಮ್ಮ ಸ್ನೇಹಿತರೊಡಗೂಡಿ ಸ್ಥಾಪಿಸಿದ ಕೆ.ಎಲ್.ಇ.ಸಂಸ್ಥೆಯು ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ತಲೆಯೆತ್ತಿ ನಿಂತ ಹೆಮ್ಮೆಯ ಸಂಸ್ಥೆಯಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿಸಿದ ಕೀರ್ತಿ ಪಂಡಿತಪ್ಪ ಚಿಕ್ಕೋಡಿಯವರದು. ೧೯೩೭ರಲ್ಲಿ ಜರುಗಿದ ೨೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ 'ಕನ್ನಡದ ಕಣ್ವ' ಬಿ.ಎಂ.ಶ್ರೀಯವರು ಪಂಡಿತಪ್ಪನವರನ್ನು ಕುರಿತು ಹೀಗೆ ಬರೆಯುತ್ತಾರೆ. "---ಮರಾಠಿಮಯವಾಗಿದ್ದ ಜಮಖಂಡಿಯಲ್ಲಿ ಕನ್ನಡ ವಾತಾವರಣ ಬೆಳೆಯಲು ಬಹಳ ಅನುಕೂಲವಾಯಿತು. ಬೆಳಗಾವಿ ಜಿಲ್ಲೆಯ ಮರಾಠಿ ಪ್ರದೇಶದಲ್ಲಿ ಅನೇಕ ಕನ್ನಡ ಶಾಲೆಗಳ ಬೆಳವಣಿಗೆಗೆ ಕಾರಣವಾದಂತೆ, ಸಾಂಗಲಿ, ಜಮಖಂಡಿ, ಮಿರಜ ಸಂಸ್ಥಾನಗಳಲ್ಲಿಯೂ ಕನ್ನಡದ ಪ್ರಯತ್ನ ಕೇಳಿ ಆನಂದವಾಗಿದೆ."[೧೩೫]

೪.೩. ಶ್ರೀ ರಾಮಪ್ಪ:

೪.೩.೧. ಸಾಮಾಜಿಕ:

೪.೩.೧.೧. ನೇಕಾರರ ದೇವರಾದುದು:

ಸದಾ ದುಡಿಮೆಯಲ್ಲಿ ತೊಡಗಿಸಿಕೊಂಡ ಇವರು, ಒಬ್ಬ ವಿಜ್ಞಾನಿಯ ಹಾಗೆ ಕೆಲಸ ಮಾಡಿದರು. ಸಂಶೋಧನೆಯಲ್ಲಿಯೇ ಇಡೀ ಜೀವನ ಕಳೆದರು. ನೇಯುವುದನ್ನು ಒಂದು ಕಲೆಯನ್ನಾಗಿ ಮಾಡಿದರು. ರಬಕವಿ-ಬನಹಟ್ಟಿಯಲ್ಲಿ ಕೇವಲ ೧೫-೨೦ ಕೈಮಗ್ಗಗಳಿದ್ದು, ಸೀರೆಯ ಉತ್ಪಾದನೆ ತುಂಬಾ ಕಡಿಮೆಯಿತ್ತು. ಮಹಾರಾಷ್ಟ್ರಕ್ಕೆ ರವಾನೆಯಾಗುತ್ತಿದ್ದ ಸೀರೆಗಳನ್ನು ಹೆಚ್ಚು ಉತ್ಪಾದಿಸಬೇಕೆಬುಂದು ರಾಮಪ್ಪನವರ ಮಹಾದಾಶೆಯಾಯಿತು. ಇವರ ಹಿಂದಿನ ತಲೆಮಾರಿನವರು ಸೀರೆಯನ್ನು ನೇಯುವಾಗ ಕೈಯಿಂದ ಲಾಳವನ್ನು ಹಾಕಿ ನೇಯುತ್ತಿದ್ದರು. ರಾಮಪ್ಪನವರು ಶಟಲ್‌ಲಾಳಿಗಳ ಮಗ್ಗ ಸ್ಥಾಪಿಸಿದರು. ಸ್ವಯಂಚಾಲಿ (ಅಟೋಮ್ಯಾಟಿಕ್) ಮಗ್ಗಗಳನ್ನು ತಂದು ಹಾಕಿದರು. ಪಾವರ್‌ಲೂಮ್ ಹಾಕಿದರು. ಹೊಸ ಹೊಸ ಉಪಕರಣಗಳ ಬಗ್ಗೆ ಮನಸ್ಸು ಮಾಡಿದರಲ್ಲದೆ, ಸ್ವತಃ ತಾವೇ ರಚಿಸಲು ಪ್ರಯತ್ನಿಸಿದರು. ಜಪಾನೀ ಮಗ್ಗಗಳನ್ನು ತಂದು ಹಾಕಿದರು. ೧೯೨೨ರಲ್ಲಿ ಸೊಲ್ಲಾಪುರದಿಂದ ಮಾರವಾಡಿ ಬಡಿಗರನ್ನು ಕರೆಸಿ ಅವರಿಂದ ಸಾಗವಾನಿ ಕಟ್ಟಿಗೆಯ ಶಟಲ್ ಮತ್ತು ನಾಲ್ಕು ನಕ್ಷೆಗಳನ್ನು ಮಾಡಿಸಿದರು. ರಾಮಪ್ಪನವರು ಸೀರೆಯಲ್ಲಿ ವೈವಿಧ್ಯತೆಯನ್ನು ತರಲು ಆಶಿಸಿದರು. ಹೀಗಾಗಿ ೮ ಕೋಲಿನ ದಿಂಡಿನ ಗಾಡ, ೧೦ ಕೋಲಿನ ದಿಂಡಿನ ಗಾಡಗಳನ್ನು ಗೋಟು ಮತ್ತು ಚಿಕ್ಕಿ ಫರಾಸಪೇಟಕ್ಕಾಗಿ, ೧೨ ಕೋಲಿನ ದಿಂಡಿನ ಗಾಡಗಳನ್ನು ಮೇಲಬುಗುಡಿ ಮತ್ತು ನಾರಾಯಣಪೇಟ ನಕ್ಷೆಗಾಗಿ ಸ್ವತಃ ತಾವೇ ತಯಾರಿಸಿದರು.

೧೯೩೯ರಲ್ಲಿ ತಮಿಳುನಾಡಿನಿಂದ ಮುತ್ತುರಾಜನೆಂಬವರನ್ನು ರಬಕವಿಗೆ ಕರೆಸಿದರು. ಅವರಿಂದ ಸೀರೆಗೆ ಚುಂಗಿ(ಗಂಟು)ಕಟ್ಟಿ 'ಬುಟ್ಟಾ' ಮತ್ತು ಸೀರೆಯ ಸೆರಗಿನಲ್ಲಿ ನಕ್ಷೆ ತೆಗೆಯಲು ರಬಕವಿ-ಹುಲ್ಯಾಳದ ಜನರಿಗೆ ತರಬೇತಿ ಕೊಡಿಸಿದರು. ಬರೀ ಬಿಳಿ, ಕರಿ ಬಣ್ಣಗಳಿಗೆ ಬದಲಾಗಿ ಸೀರೆಗಳಿಗೆ ನಾನಾ ತರದ

ಬಣ್ಣಗಳನ್ನು ಕೂಡಿಸುವ ಕಲೆಯನ್ನು ಸ್ವತಃ ರಾಮಪ್ಪನವರು ಕಂಡುಕೊಂಡರು. ಶ್ರೀ ಮಡಿವಾಳಪ್ಪ ಪಟ್ಟಣ ಮತ್ತು ಶ್ರೀ ಭೋಜಪ್ಪ ದುರಡಿಯವರ ಜೊತೆ ಸೇರಿಕೊಂಡು ಸೀರೆಗೆ ಹಾಕುವ ಬಣ್ಣವನ್ನು ಶೋಧಿಸಿದರು. ಕಿರಮಂಜ ಮತ್ತು ಕೆಂಪು ಬಣ್ಣಗಳಿಗೆ ರಾಡಿಬಣ್ಣ ಎಂದು ಕರೆಯುತ್ತಾರೆ. ರಾಮಪ್ಪನವರು ಈ ರಾಡಿಬಣ್ಣವನ್ನು ಕುಸಿಬಿಎಣ್ಣೆಯಲ್ಲಿ ತೋಯಿಸಿ Nepthol ಬಣ್ಣ ತಯಾರಿಸುವ ಕಲೆಯನ್ನು ಸಂಶೋಧಿಸಿದರು. ಊರಿನಲ್ಲಿ ಸಾಬೋಜಿ ಮತ್ತು ಕೊಕ್ಕಳಕಿ ಕಾರ್ಖಾನೆಗಳು ಮಾತ್ರ ಇದ್ದವು. ರಾಮಪ್ಪನವರ ಚಾಕಚಕ್ಯತೆ, ವ್ಯವಹಾರ ಬುದ್ದಿಯಿಂದ ಜಮಖಂಡಿ ಸಂಸ್ಥಾನದಲ್ಲಿ ಸುಮಾರು ೩೫೦ ಮಗ್ಗಗಳು ಹುಟ್ಟಿಕೊಂಡವು. ಇಂದು ದೇಶದ್ಯಾಂತ ಬನಹಟ್ಟಿ ಸೀರೆಗಳು ಪ್ರಸಿದ್ಧಿ ಹೊಂದಿವೆ. ಈ ಪ್ರಖ್ಯಾತಿಯ ಹಿಂದೆ ರಾಮಪ್ಪನವರ ಕೈವಾಡ ಇದೆಯೆಂಬುದನ್ನು ಮರೆಯಬಾರದು. ಸಮಾಜದಲ್ಲಿ ನೇಕಾರರ ಸ್ಥಿತಿಯನ್ನು ಅರಿತ ರಾಮಪ್ಪನವರು ನೇಕಾರಿಕೆಯನ್ನು ಉತ್ತಮಪಡಿಸಿದರೆ ಅವರ ಬಡತನವನ್ನು ನಿವಾರಿಸಬಹುದು ಎಂದು ಮನಗಂಡರು. ಅದಕ್ಕಾಗಿ ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳಲಿಲ್ಲ. ಮುಂಬಯಿಯಿಂದ ಕಚ್ಚಾ ಮಾಲನ್ನು ತರಿಸುತ್ತಿದ್ದರು. ಅದಕ್ಕಾಗಿ ಸ್ವತಃ ಅಂಗಡಿಯನ್ನು ತೆರೆದರು. ಬಡನೇಕಾರರು ಒಂದೊಂದೇ ಸೀರೆಯನ್ನು ನೇಯ್ದು ಕೊಡುತ್ತಿದ್ದರಿಂದ, ಅವರಿಗೆ ಉತ್ಪನ್ನವೇ ಇರಲಿಲ್ಲ. ಅರೆಹೊಟ್ಟೆಯ ಗಂಜಿಯೇ ಅವರ ಆಧಾರವಾಗಿತ್ತು. ಒಮ್ಮೊಮ್ಮೆ ಉಪವಾಸವೂ ಸಹಜವಾಗಿತ್ತು.

ಸೀರೆ ಅಂಗಡಿಯನ್ನು ತೆರೆದ ರಾಮಪ್ಪನವರು ನೇಕಾರರಿಗೆ ಕಚ್ಚಾ ಮಾಲನ್ನು ಕೊಟ್ಟು, ಅದರಿಂದ ನೇಯ್ದ ಸೀರೆಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಿದರು. ಕೈಮಗ್ಗ ನೇಕಾರರಿಗೆ ನೂಲು, ಚಮಕ ಮತ್ತು ಮಜೂರಿ(ಸಂಬಳ) ಕೊಟ್ಟು ಸೀರೆ ನೇಯಿಸಿಕೊಳ್ಳುವ ಪದ್ಧತಿಗೆ ಜೋಡಣಿ(ಮುಂಗಡ) ಕೊಡುವುದು ಎನ್ನುತ್ತಾರೆ. ರಾಮಪ್ಪನವರು ಒಟ್ಟು ೧೦ ಸೀರೆಯ ಕಚ್ಚಾ ಪದಾರ್ಥಗಳನ್ನು ಕೊಟ್ಟು ೮ ಸೀರೆಯನ್ನು ತೆಗೆದುಕೊಂಡು ಉಳಿದ ೨ ಸೀರೆಗಳ ಹಣವನ್ನು ನೇಕಾರರಿಗೆ ಕೊಡುತ್ತಿದ್ದರು. ಹೀಗಾಗಿ ನೇಕಾರರು ಸಹಜವಾಗಿ ತಮ್ಮ ಆರ್ಥಿಕ ಸುಧಾರಣೆ ಕಂಡರಲ್ಲದೆ, ನೆಮ್ಮದಿಯ ಬದುಕನ್ನು ಸಾಗಿಸಹತ್ತಿದರು. ರಾಮಪ್ಪನವರು ನೂಲು-ಮಸರಾಯಿ-ಚಮಕ-ರೇಶ್ಮಿ ಮುಂತಾದವುಗಳ ಖರೀದಿ ಮಾಡಲು ತೊಡಗಿದಾಗ ಮುಂಬಯಿ ಪೇಟೆಯಲ್ಲಿ ರಾಮಪ್ಪನವರು ಪ್ರಸಿದ್ಧರಾದರು. ಮುಂಬಯಿಯಿಂದ ಕುಡಚಿ ಸ್ಟೇಶನಕ್ಕೆ ಬಂದ ಮಾಲನ್ನು ಅಲ್ಲಿಂದ ಚಕ್ಕಡಿಗಳ ಮೂಲಕ ತರುತ್ತಿದ್ದರು. ದಿನಕಳೆದಂತೆ ರಾಮಪ್ಪನವರ ಕುಶಾಗ್ರಮತಿ, ಉದಾರತೆ, ವ್ಯಾಪಾರಿದೃಷ್ಟಿಯಿಂದ ಮಗ್ಗಗಳು ತೀವ್ರಗತಿಯಲ್ಲಿ ಹೆಚ್ಚಾಗತೊಡಗಿದವು. ಕೇವಲ ರಬಕವಿ-ಬನಹಟ್ಟಿಗಳಲ್ಲದೆ, ಸುತ್ತಮುತ್ತಲಿನ ಗ್ರಾಮದಲ್ಲಿರುವ ನೇಕಾರರು ರಾಮಪ್ಪನವರನ್ನು ಹುಡುಕಿ ಬರುವಂತಾಯಿತು. ಸಮೀಪದ ರಾಮಪುರ, ಹೊಸೂರ, ಚಿಮ್ಮಡ, ಮಹಾಲಿಂಗಪುರ, ಹುಲ್ಯಾಳ, ಸಾವಲಗಿ, ಜಗದಾಳ, ಮುಂತಾದ ಊರುಗಳಿಂದ ಬಂದ ನೇಕಾರರು ರಾಮಪ್ಪನವರಿಂದ ಕಚ್ಚಾಮಾಲನ್ನು ತೆಗೆದುಕೊಂಡು ಹೋಗಿ ಸೀರೆ ನೇಯ್ದುಕೊಟ್ಟು, ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಂಡರು.

ದಿನದಿಂದ ದಿನಕ್ಕೆ ಮಗ್ಗಗಳು ಹೆಚ್ಚಾಗಿ ಸೀರೆಯ ಉತ್ಪಾದನೆ ಅತ್ಯಧಿಕವಾಯಿತು. ನೇಯ್ದ ಸೀರೆಗಳು ರಾಮಪ್ಪನವರ ಪರಿಶ್ರಮದಿಂದ ಕೊಲ್ಲಾಪುರ, ಕಾಗಲ, ಮಿರಜ, ಇಚಲಕರಂಜಿ ಮುಂತಾದ ಪಟ್ಟಣಗಳಿಗೆ ರವಾನೆಯಾಗಲಾರಂಭಿಸಿದವು. ಬೆಳಗಾವಿ, ಧಾರವಾಡ, ಹುಬ್ಬಳ್ಳಿ ನಗರಗಳ ವ್ಯಾಪಾರಸ್ಥರು ಇವರ ಸೀರೆಗಳಿಗೆ ಮನಸೋತು ಇವರನ್ನು ಹುಡುಕಿಕೊಂಡು ಬರಹತ್ತಿದರು. ಅಂದಿನ ಕಾಲದಲ್ಲಿ ದಿನಕ್ಕೆ ೨೦೦ ಸೀರೆಗಳು ಹಳ್ಳಿಗಳಿಂದ ರಬಕವಿಗೆ ಬಂದು, ೨೦೦-೩೦೦ ಸೀರೆಗಳು ಪರ ಊರಿಗೆ ಹೋಗುತ್ತಿದ್ದವು. ಇದರಿಂದ ಇನ್ನಷ್ಟು ಉತ್ತೇಜನಗೊಂಡ ರಾಮಪ್ಪನವರು ಹುಲ್ಯಾಳ ಮತ್ತು ಮಹಾಲಿಂಗಪುರಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿದರು. ಆ ವೇಳೆಯಲ್ಲಿ ಹುಲ್ಯಾಳ ಗ್ರಾಮವು ಬರದಿಂದ ಕಂಗೆಟ್ಟು ಇಡೀ ಊರಿಗೆ ಊರೇ ಗುಳೆ ಹೊರಟಿತ್ತು. ರಾಮಪ್ಪನವರು ಹುಲ್ಯಾಳ ಗ್ರಾಮದಿಂದ ಗುಳೆ ಹೊರಟ ಜನರನ್ನು ತಡೆದು ನಿಲ್ಲಿಸಿ ಅವರಿಗೆ ಆರ್ಥಿಕ ಭದ್ರತೆಯ ಭರವಸೆ ಕೊಟ್ಟರು. ತಮಿಳುನಾಡಿನಿಂದ ಒಬ್ಬ ಉತ್ತಮ ಬಡಿಗನನ್ನು ಕರೆಸಿ, ಮನೆಮನೆಗೊಂದರಂತೆ ಮಗ್ಗಗಳನ್ನು ಹಾಕಿಕೊಟ್ಟರು. ಹುಲ್ಯಾಳ ಗ್ರಾಮವೊಂದರಿಂದಲೇ ಸುಮಾರು ೧೦೦ ಸೀರೆಗಳು ಉತ್ಪಾದನೆಯಾಗುತ್ತಿದ್ದವು. ಅಂದು ರಾಮಪ್ಪನವರು ಹುಲ್ಯಾಳ ಗ್ರಾಮದ ಜನತೆಯ ಸಂಕಷ್ಟಗಳಿಗೆ ಸ್ಪಂದಿಸದೆ ಇದ್ದರೆ ಇಂದು ಹುಲ್ಯಾಳ ಗ್ರಾಮದಲ್ಲಿ ಕೇಳಿ ಬರುತ್ತಿರುವ ಮಗ್ಗದ ಸದ್ದುಗಳು ಕೇಳುತ್ತಲೇ ಇರಲಿಲ್ಲ. ಬರೀ ಒಂದು ಗ್ರಾಮವನ್ನು ಉಳಿಸಿದ್ದು ಮಾತ್ರವಲ್ಲ, ಅಲ್ಲಿಯ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿದ ಕೀರ್ತಿ ಕೂಡ ರಾಮಪ್ಪನವರದು. ಹೀಗಾಗಿ ಯುಗಾದಿಯ ಹೊಸ ವರ್ಷದಲ್ಲಿ ಆಚರಿಸುವ ಗೌರಿಜಾತ್ರೆಯಲ್ಲಿ ಅಲ್ಲಿಯ ಜನತೆ ರಾಮಪ್ಪನವರನ್ನು ಸ್ಮರಿಸುತ್ತಾರೆ.

೪.೩.೧.೨. ರಾಗಿಬರ:

೧೯೩೧ರ ಸುಮಾರಿಗೆ ಭೀಕರ ಬರಗಾಲ ಬಿತ್ತು. ಜನ ಆಹಾರವಿಲ್ಲದೆ ಹಾಹಾಕಾರದಿಂದ ಗೋಳಿಟ್ಟರು. ಹಸಿವಿನಿಂದ ಕಂಗಾಲಾದ ರಬಕವಿ ಜನತೆ ದೇವರ ಮೊರೆ ಹೋಗಲಿಲ್ಲ. ತಮ್ಮ ಜೀವಂತ ದೇವರು ರಾಮಪ್ಪನವರು ನಮ್ಮನ್ನು ಕಾಪಾಡಬಹುದು ಎಂಬ ಆಶಾ ಕಂಗಳಿಂದ ಗುಂಪುಗುಂಪಾಗಿ ರಾಮಪ್ಪನವರ ಹತ್ತಿರ ಬಂದು ಕೈಜೋಡಿಸಿ ನಿಂತರು. ರಾಮಪ್ಪನವರು ಬಂದ ಜನರನ್ನು ನೋಡಿ 'ತಮಗೇಕೆ ಉಸಾಬರಿ' ಎಂದು ಸುಮ್ಮನೆ ಕುಳಿತುಕೊಳ್ಳಬಹುದಿತ್ತು. ಅಥವಾ ತಮ್ಮಲ್ಲಿರುವುದನ್ನು ಕೊಟ್ಟು ಆಮೇಲೆ ಕೈಯೆತ್ತಿ ಬಿಡಬಹುದಾಗಿತ್ತು. ಆದರೆ ಕರುಣೆಯೇ ಮೂರ್ತಿವೆತ್ತಂಥ ರಾಮಪ್ಪ ತನ್ನ ಆಳುಗಳನ್ನು ಕಳುಹಿಸಿ ಶಹರದ ಸುತ್ತ ಮುತ್ತಣ ಗ್ರಾಮಗಳಿಂದ, ಸಿಕ್ಕ ಸಿಕ್ಕ ಕಡೆಯಿಂದ ರಾಗಿ ತರಸಿ ಬಡವರಿಗೆ ಹಂಚಲು ತೊಡಗಿದರು. ಬರಗಾಲ ಹೋಗುವ ತನಕ ರಾಮಪ್ಪನವರ ಮನೆಯಿಂದ ಬಡವರು ರಾಗಿಯನ್ನು ತಂದು ಹೊಟ್ಟೆ ತುಂಬಿಸಿಕೊಳ್ಳುವುದು ರೂಢಿಯಾಗಿತ್ತು. ಇದನ್ನು ಉಂಡ ಬಡವರು ಇವತ್ತಿಗೂ ನೆನೆಸಿಕೊಂಡು ಕಣ್ಣೀರು ತರುತ್ತಾರೆ.

೪.೩.೧.೩. ಬಾವಿ ತೋಡಿಸಿದ್ದು:

ರಬಕವಿಯಲ್ಲಿ ನೀರಿನ ಹಾಹಾಕಾರ ಹಿಂದಿನಿಂದಲೂ ಇತ್ತು. 'ಹೆಸರಿಗೆ ರಬಕವಿ, ಮೊಸರಿಗೆ ನೀರಿಲ್ಲಾ' ಎಂಬ ಮಾತು ಅದನ್ನು ಸ್ಪಷ್ಟಪಡಿಸುತ್ತದೆ. ರಾಮಪ್ಪನವರು ನೀರಿನ ಕೊರತೆಯನ್ನು ಹಿಂಗಿಸಲು ದೊಡ್ಡದಾದ, ವ್ಯವಸ್ಥಿತವಾದ ಬಾವಿ ತೋಡಿಸಬೇಕೆಂದು ನಿರ್ಧಾರ ಮಾಡಿದರು. ರಬಕವಿಯಲ್ಲಿ ಮಹಾಲಿಂಗಪುರ ನಾಕಾದ ಹತ್ತಿರ ವಿಶಾಲವಾದ ಜಾಗೆಯನ್ನು ಖರೀದಿ ಮಾಡಿದ್ದರು. ಆ ಜಾಗೆಯಲ್ಲಿ ಬಾವಿ ತೋಡಿಸಲು ಪ್ರಾರಂಭಿಸಿದರು. ಯಾವುದಕ್ಕೂ ಹಿಂದೆ ಮುಂದೆ ನೋಡದೆ, ಖರ್ಚಿಗೆ ಹೆದರದೆ, ಜಿಪುಣತನವನ್ನು ಎಳ್ಳಷ್ಟು ತೋರದೆ ಕೆಲಸ ಪ್ರಾರಂಭಿಸಿದರು. ವಿಶಾಲವಾದ, ವ್ಯವಸ್ಥಿತವಾದ ಭಾವಿಯನ್ನು ತೋಡಿಸಿ ಜನರಿಗೆ ನೀರು ತರಲು ಅನುಕೂಲವಾಗುವ ಹಾಗೆ ಸುಸಜ್ಜಿತವಾದ ಕಲ್ಲಿನ ಮೆಟ್ಟಿಲನ್ನು ಕಟ್ಟಿಸಿದರು. ಬಾವಿಗೆ ಬಂದವರು ದೇವರಿಗೆ ನಮಸ್ಕರಿಗೆ ಹೋಗುವಂತೆ, ಕುಳಿತುಕೊಳ್ಳಲು ಅನುಕೂಲವಾಗುವಂತೆ ಬಾವಿಯ ಪಕ್ಕದಲ್ಲಿ 'ಶಟ್ಟೆವ್ವನ ಗುಡಿ'ಯನ್ನು ಕಟ್ಟಿಸಿದರು. ಆದರೆ ಇಷ್ಟೆಲ್ಲಾ ಮಾಡಿದರೂ ದುರದೃಷ್ಟವೆಂಬಂತೆ ಬಾವಿಯಲ್ಲಿ ಕುಡಿಯಲಾಗದ ಸವಳು ನೀರು ಬಿತ್ತು. ಹೀಗಾಗಿ ಜನತೆಗೆ ಪ್ರಯೋಜನವಾಗಲಿಲ್ಲ. ಇಂದಿಗೂ ಬಾವಿಯ ಮೇಲೆ 'ರಾ.ಲ. ಚಿಕ್ಕೋಡಿ' ಎಂದು ಕೆತ್ತಿದ ಹೆಸರನ್ನು ಕಾಣಬಹುದಾಗಿದೆ. ಆದರೆ ಆ ಕಲ್ಲು ಇಂದು ಮಣ್ಣಿನಲ್ಲಿ ಹೂತು ಹೋಗುವಂತಾಗಿದೆ. ಬಾವಿಯು ಊರ ಹೊಲಸನ್ನು ತಂದು ಹಾಕುವ ದೊಡ್ಡಿಯಾಗಿದೆ. ರಾಮಪ್ಪನವರ ಜಾಗೆಯಲ್ಲಿ ಮನೆಗಳನ್ನು ಹಾಕಿಸಿಕೊಂಡಿದ್ದಾರೆ. ಎಲ್ಲಿ ಅವರ ಹೆಸರು ಹೇಳಿದರೆ, ಗುಣಗಾನ ಮಾಡಿದರೆ ತಮ್ಮ ಮನೆಯನ್ನು ಬಿಟ್ಟು ಕೊಡಬೇಕಾಗುತ್ತೇನೋ ಎಂಬಂತೆ ಹೇಳಲು ಹಿಂಜರಿಯುತ್ತಾರೆ.

೪.೩.೧.೪. ಪ್ಲೇಗ್ ಬಂದಾಗ ಸಹಾಯ:

ಒಮ್ಮೆ ಪ್ಲೇಗ್ ಹಾವಳಿಯಿಂದಾಗಿ ಊರಲ್ಲಿ ಹೆಣಗಳ ರಾಶಿಯೇ ಬೀಳಹತ್ತಿತ್ತು. ಜನ ಸಾವು ಬದುಕಿನ ಜೊತೆ ಹೋರಾಡಲಾರಂಭಿಸಿದರು. ಪ್ಲೇಗ್ ಬಂದಾಗ ಊರು ಬಿಡುವುದು ಅನಿವಾರ್ಯವಾಗಿತ್ತು. ಊರ ಹೊರಗೆ, ಗುಡ್ಡದ ಮೇಲೆ ಗುಡಿಸಲು ಹಾಕಿಕೊಂಡು ಇರಬೇಕಾದ ಪರಿಸ್ಥಿತಿ ಬಂತು. ಜನ ಹೌಹಾರಿ ನಿಂತಾಗ ರಾಮಪ್ಪನವರು ಧೈರ್ಯಹೇಳಿ ಗುಡ್ಡದ ಮೇಲೆ ಇರಲು ಜನರಿಗೆ ವ್ಯವಸ್ಥೆ ಮಾಡಿದರು. ಸೊಲ್ಲಾಪುರ, ಮುಂಬಯಿಗಳಿಂದ ತಾಡಪತ್ರಿಗಳನ್ನು ತರಿಸಿ ಜನರಿಗೆ ಬಿಡಾರ ಹೂಡಿ ಕೊಟ್ಟರು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕೆಲವರಿಗೆ ಪತ್ರೆಗಳನ್ನು ಕೊಟ್ಟರು. ಆದರೆ ಪ್ಲೇಗ್ ಹೋದ ನಂತರ ಪತ್ರೆ ಹಾಕಿಕೊಂಡವರು ಒಬ್ಬರೂ ಮರಳಿ ಕೊಡಲಿಲ್ಲ. ಅದನ್ನು ರಾಮಪ್ಪನವರು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಬೊಗಸೆ ಕೈಗಳಿಂದ ದಾನಮಾಡಿದ ರಾಮಪ್ಪನವರು ತಮ್ಮ ಕೊನೆಗಾಲದಲ್ಲಿ ಎಂತಹ ಕಷ್ಟ ಪರಿಸ್ಥಿತಿ ಬಂದರೂ ತಾವು ಮಾತ್ರ ಎಂದೂ ಕೈವೊಡ್ಡಲಿಲ್ಲ.

೪.೩.೨. ಧಾರ್ಮಿಕ:

ರಾಮಪ್ಪನವರು ತಮ್ಮ ಇಡೀ ಜೀವಮಾನದುದ್ದಕ್ಕೂ ಧರ್ಮಪರ ಕಾರ್ಯಗಳನ್ನು ಮಾಡುತ್ತ ಬಂದಿದ್ದರು. ಧಾರ್ಮಿಕ ಸಭೆ-ಸಮಾರಂಭಗಳಲ್ಲಿ ಭಾಗವಹಿಸುವುದು, ಧಾರ್ಮಿಕ ಕಾರ್ಯಗಳಿಗೆ ಧಾರ್ಮಿಕ ಪತ್ರಿಕೆಗಳಿಗೆ ಸಹಾಯ ಮುಂತಾದ ಕೆಲಸಗಳನ್ನು ಮಾಡುತ್ತಲೇ ಇದ್ದರು.

೪.೩.೨.೧. ಹುಲ್ಯಾಳ ಶಂಭುಲಿಂಗೇಶ್ವರ ದೇವಸ್ಥಾನ ಕಟ್ಟಿಸಿದ್ದು:

ಹುಲ್ಯಾಳದಲ್ಲಿ ಮಗ್ಗಗಳನ್ನು ಸ್ಥಾಪಿಸಿದ ರಾಮಪ್ಪನವರ ವ್ಯವಹಾರ ಚೆನ್ನಾಗಿ ನಡೆಯುತ್ತಿತ್ತು. ಅಲ್ಲಿಯ ಶಂಭುಲಿಂಗೇಶ್ವರಸ್ವಾಮಿಗಳು ಹುಲ್ಯಾಳದಲ್ಲಿ ಮಠ ಕಟ್ಟಿಕೊಳ್ಳಲು ನಿರ್ಧರಿಸಿದ್ದರು. ಆಗ ಹುಲ್ಯಾಳದ ಕೆಲ ಮುಖಂಡರ ಜೊತೆಗೂಡಿ ರಾಮಪ್ಪನವರನ್ನು ಭೇಟಿಯಾಗಿ ತಮ್ಮ ಆಶೆಯನ್ನು ತೋಡಿಕೊಂಡರು. ಅವರ ಆಶೆಯನ್ನು ಪೂರೈಸಲು ಸಿದ್ಧರಾದ ರಾಮಪ್ಪನವರು ಹುಲ್ಯಾಳ ಗ್ರಾಮದ ಎದುರಿಗೆ ದೂರದ ಪ್ರಶಾಂತ ಜಾಗೆಯಲ್ಲಿ ಗುಡಿಕಟ್ಟಲು ತೊಡಗಿದರು. ರಾಮಪ್ಪನವರು ಇದ್ದ ಕಲ್ಲುಗಳಿಂದ ಗುಡಿ ಕಟ್ಟಿಸಲಿಲ್ಲ. ಕಟ್ಟಿಸಬೇಕೆನ್ನುವ ಒತ್ತಾಯದಿಂದ ಕಟ್ಟಿಸಲಿಲ್ಲ. ತಮ್ಮ ತಮ್ಮನ ಮಗನಾದ ಮಹಾಲಿಂಗಪ್ಪನನ್ನು ಮುಂಬಯಿಯಲ್ಲಿ ಇಟ್ಟಿದ್ದರು. ಅವರ ಮೂಲಕ ಸಂಗಮವರಿ ಕಲ್ಲುಗಳನ್ನು ತರಿಸಿ ಭವ್ಯವಾದ ಗುಡಿಯನ್ನು ಕಟ್ಟಿಸಿದರು. ಅಂದಿನ ಕಾಲಕ್ಕೆ ಸುಮಾರು ೮೦,೦೦೦ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸಿದ ಗುಡಿ ಸುತ್ತಮುತ್ತ ಅಂತಹ ಗುಡಿಯೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಪ್ರಸಿದ್ಧಿ ಪಡೆದಿದೆ.

೪.೩.೪.ಶೈಕ್ಷಣಿಕ:

ರಾಮಪ್ಪನವರು ತಾವು ಹೆಚ್ಚಿಗೆ ಶಿಕ್ಷಣ ಪಡೆಯದಿದ್ದರೂ ಬಡಮಕ್ಕಳ ಓದಿಗೆ ತಮ್ಮಿಂದಾದ ಧನಸಹಾಯವನ್ನು ನೀಡುತ್ತಿದ್ದರು. ಹುಬ್ಬಳ್ಳಿಯ ಮುಂಡಗನೂರು ಎಂಬ ವಿದ್ಯಾರ್ಥಿಯು ವಿದೇಶಕ್ಕೆ ಹೋಗಲು ಧನಸಹಾಯ ಮಾಡಿದ್ದನ್ನು ಗುಗ್ಗಳಿಯವರು ವಿದೇಶಕ್ಕೆ ಹೋಗುವ ಸಂದರ್ಭದಲ್ಲಿ ಸಹಾಯ ಮಾಡಿದ್ದನ್ನು ರಬಕವಿ ಮತ್ತು ಹುಲ್ಯಾಳದ ಜನತೆ ನೆನಪಿಸಿಕೊಳ್ಳುತ್ತಾರೆ.

ತಮ್ಮಣ್ಣಪ್ಪನವರು ಹೈಸ್ಕೂಲ್ ಸ್ಥಾಪಿಸಲು ಹಣದ ಅವಶ್ಯಕತೆಗಾಗಿ ರಾಮಪ್ಪನವರಿಗೆ ಮನೆ ಮಾರಲು ಯೋಚಿಸಿದರು. ರಾಮಪ್ಪನವರು ಆ ಮನೆಗೆ ಅಂದಿನ ಸಂದರ್ಭದಲ್ಲಿ ೪,೦೦೦ರೂಪಾಯಿ ಹೆಚ್ಚು ಎನಿಸುತ್ತಿತ್ತು. ಆದರೂ ಹಣ ಸದ್ವಿನಿಯೋಗವಾಗುವುದರಿಂದ ರಾಮಪ್ಪನವರು ಹಿಂದೆಮುಂದೆ ನೋಡದೆ ಅಷ್ಟು ದುಡ್ಡನ್ನು ತಮ್ಮಣ್ಣಪ್ಪನವರಿಗೆ ನೀಡಿದರು.

ರಬಕವಿಯ ಪಟ್ಟಣ ಶಾಲೆಯ ಮಕ್ಕಳಿಗೆ ಆಟದ ಮೈದಾನ ಇರಲಿಲ್ಲ. ಅದನ್ನು ರಾಮಪ್ಪನವರಿಗೆ ಶಾಲೆಯವರು ಹೇಳುತ್ತಲೇ ತಡಮಾಡದೆ ಶ್ರೀ ಅರಕೇರಿಯವರ ಬರಡು ನೆಲವನ್ನು ಖರೀದಿಸಿ, ಶಾಲೆಯ ಹೆಸರಿಗೆ ಬರೆದು ಕೊಟ್ಟರು. ಇಂದು ರಬಕವಿಯ ಬಸ್ ನಿಲ್ದಾಣದ ಎದುರಿರುವ ಆಟದ ಮೈದಾನದಲ್ಲಿ ರಾಮಪ್ಪ ಚಿಕ್ಕೋಡಿ ಫಲಕವನ್ನು ಕಾಣುತ್ತೇವೆ.

ಕೊನೆ ಟಿಪ್ಪಣಿ:

೧. ದೇವರ ದಾಸಿಮಯ್ಯ ಪಂಥದ ಪ್ರಕಟಣೆ, ದಿನಾಂಕ:೨೭-೫-೧೯೨೯

೨. ಚಿಕ್ಕೋಡಿ ತಮ್ಮಣ್ಣಪ್ಪ; ದು.ನಿಂ.ಬೆಳಗಲಿ ಮತ್ತು ಬನಹಟ್ಟಿಯ ಹಿರಿಯರು

೩. ಶ್ರೀ ಮಲ್ಲಪ್ಪ ಹಳ್ಯಾಳ, ಬನಹಟ್ಟಿ ಇವರು ಹೇಳಿದ ಮಾಹಿತಿ

೪. ಅಥಣಿ ಶ್ರೀ ಶಿವಯೋಗಿಗಳವರ ಕೃಪೆಯಿಂದ ಸ್ಥಾಪಿತವಾದ ಶಿವಾದ್ವೈತ ಸಿದ್ಧಾಂತ ಪ್ರಚಾರಕ ಸಂಘದ ರಿಪೋರ್ಟು; ಎಚ್.ಎಸ್. ಶಿವಲಿಂಗಶಾಸ್ತ್ರಿ, ಧಾರವಾಡ, ಧರ್ಮತರಂಗಿಣಿ ಮುದ್ರಾಲಯ

೫. ಮುರುಗೆಯ್ಯನವರು ಬಾಗೋಜಿಮಠ; ಎಸ್. ಎಮ್. ಅಂಗಡಿ. ಪುಟ-೩೩-೩೪
೬. ಚಿಕ್ಕೋಡಿ ತಮ್ಮಣ್ಣಪ್ಪನವರು; ದು.ನಿಂ.ಬೆಳಗಲಿ ಪುಟ-೨೯ ಮತ್ತು ೩೦ ಬನಹಟ್ಟಿಯ ಹಿರಿಯರು
೭. ಅದೇ
೮. ಶ್ರೀ ಶಿವಯೋಗಮಂದಿರದ 'ಬೆಳಗು' ಸುವರ್ಣ ಮಹೋತ್ಸವದ ಸ್ಮಾರಕ ಗ್ರಂಥ. ಪುಟ-೬೪
೯. ಅದೇ ಪುಟ-೧೨
೧೦. ಅದೇ ವೀರಶೈವ ಮಹಾಸಭೆಯ ಜನ್ಮದಾತ;ಶ್ರೀ ಹರ್ಡೇಕರ ಮಂಜಪ್ಪನವರು, ಪುಟ-೨೪
೧೧. ಅದೇ ಪುಟ-೨೪
೧೨. ೧೯೦೪ರಲ್ಲಿ ನಡೆದ ಧಾರವಾಡದಲ್ಲಿ ನಡೆದ ಪ್ರಥಮ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆಯ ವರದಿ
೧೩. ಅದೇ
೧೪. ೧೯೦೮ರಲ್ಲಿ ನಡೆದ ಬಾಗಲಕೋಟೆಯಲ್ಲಿ ನಡೆದ ನಾಲ್ಕನೆಯ ವೀರಶೈವ ಮಹಾಸಭೆಯ ವರದಿ..
೧೫. ಅದೇ
೧೬. ತಮ್ಮಣ್ಣಪ್ಪನವರು ಚಿಕ್ಕೋಡಿ; ಡಾ.ಜೆ.ಎಸ್.ಕುಳ್ಳಿ. ಪುಟ-೨೩
೧೭. ೧೯೧೨ರಲ್ಲಿ ನಡೆದ ಬೆಳಗಾವಿ ಜಿಲ್ಲೆಯ ನಿಪ್ಪಾಣಿ ಗ್ರಾಮದಲ್ಲಿ ನೆರೆದ ೭ನೆ ಶ್ರೀಮದ್ವೀರಶೈವ ಮಹಾಸಭೆಯ ವರದಿ. ಪುಟ೧೩೬.
೧೮. ೧೯೦೯ರಲ್ಲಿ ಬಳ್ಳಾರಿಯಲ್ಲಿ ಜರುಗಿದ ಶ್ರೀಮದ್ವೀರಶೈವ ಮಹಾಸಭೆಯ ವರದಿ.
೧೯. ಮೈಸೂರು ಸ್ಟಾರ್ ಪತ್ರಿಕೆ, ೧೯೧೧. ಪುಟ-೬
೨೦. ಅದೇ. ಪುಟ-೭
೨೧. ಅದೇ
೨೨. ಅದೇ ಪುಟ-೭
೨೩. ೧೯೧೨ರಲ್ಲಿ ನಿಪ್ಪಾಣಿಯಲ್ಲಿ ಜರುಗಿದ ವೀರಶೈವ ಮಹಾಸಭೆಯ ವರದಿ.
೨೪. ೧೯೧೭ರಲ್ಲಿ ದಾವಣಗೇರಿಯಲ್ಲಿ ನಡೆದ ಎಂಟನೆಯ ಶ್ರೀ ಮದ್ವೀರಶೈವ ಮಹಾಸಭೆಯ ವರದಿ.
೨೫. ಮೈಸೂರು ಸ್ಟಾರ್ ಪತ್ರಿಕೆ, ೧೯೨೧ ಜೂನ್ ೧೨ ಭಾನುವಾರ
೨೬. ದಿ ಜಮಖಂಡಿ ಸ್ಟೇಟ್; ಡಾ.ಡಿ.ಆರ್.ನಿಡೋಣಿ ಪುಟ-೨೧೫-೨೧೬
೨೭. ಚಿಕ್ಕೋಡಿ ತಮ್ಮಣ್ಣಪ್ಪನವರು; ದು.ನಿಂ.ಬೆ, ಪುಟ-೨೬ ಮತ್ತು ೨೭
೨೮. ಕರ್ನಾಟಕ ಏಕೀಕರಣ ಇತಿಹಾಸ; ಡಾ.ಎಚ್.ಎಸ್.ಗೋಪಾಲರಾವ್, ಪುಟ-೭೪-೭೫
೨೯. 'ಕನ್ನಡದ ಹುಲಿ' ಚಿಕ್ಕೋಡಿ ತಮ್ಮಣ್ಣಪ್ಪ;ಎರಡು ಪ್ರಸಂಗಗಳು; ದು.ನಿಂ.ಬೆ;ಕುರುಕ್ಷೇತ್ರ ಪತ್ರಿಕೆ, ದಿ:೨೮-೧೦-೧೯೮೭, ಪುಟ-೫
೩೦. ತಮ್ಮಣ್ಣಪ್ಪನವರು ಚಿಕ್ಕೋಡಿ; ಡಾ.ಜೆ.ಎಸ್.ಕುಳ್ಳಿ, ಪುಟ-೩೬
೩೧. ಶ್ರೀ ಮಲ್ಲಪ್ಪ ಹಳ್ಯಾಳ ಬನಹಟ್ಟಿ ಇವರಿಂದ ಪಡೆದ ಮಾಹಿತಿ
೩೨. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ರಜಿಸ್ಟಾರ್
೩೩. ನಿಪ್ಪಾಣಿಯಲ್ಲಿ ಜರುಗಿದ ಅಖಿಲ ಭಾರತ ಮದ್ವೀರಶೈವ ಮಹಾಸಭೆಯ ವರದಿ; ಪುಟ-೩೩
೩೪. ಪತ್ರ ವ್ಯವಹಾರವು; ಮೈಸೂರು ಸ್ಟಾರ್ ಪತ್ರಿಕೆ; ೧೯೧೨, ಜನವರಿ ೧, ಪುಟ-೭
೩೫. ಚಿಕ್ಕೋಡಿ ತಮ್ಮಣ್ಣಪ್ಪನವರು; ದು.ನಿಂ.ಬೆ, ಪುಟ-೨೦
೩೬. ಮುರುಗೆಯ್ಯನವರು ಬಾಗೋಜಿಮಠ; ಎಸ್ ಎಸ್ ಅಂಗಡಿ, ಪುಟ-೭-೮
೩೭. ಅದೇ
೩೮. ಅದೇ
೩೯. ಚಿಕ್ಕೋಡಿ ತಮ್ಮಣ್ಣಪ್ಪನವರು; ದು.ನಿಂ.ಬೆ, ಪುಟ-೧೪
೪೦. ಅದೇ
೪೧. ಜನತಾ ಶಿಕ್ಷಣ ಸಂಘದ ವರದಿ

೪೨. ಬನಹಟ್ಟಿ ವಿಲೀನಗೊಂಡ ದಕ್ಷಿಣ ಸಂಸ್ಥಾನಗಳ ನೇಕಾರ ಮತ್ತು ನೇಕಾರ ಸಹಕಾರ ಸಂಸ್ಥೆಗಳ ಪರಿಷತ್ತು, ಬನಹಟ್ಟಿ. ದಿ:೧೯-೧-೧೯೪೯ ಅಧ್ಯಕ್ಷೀಯ ಭಾಷಣ.

೪೩. Appreciation Of Panditappa's Public Works; Local Fund Examinar

೪೪. Ibid

೪೫. ಪಂಡಿತಪ್ಪ ಚಿಕ್ಕೋಡಿಯವರ ಮುಂಗೈ ಜೋರು, ಔದ್ಯೋಗಿಕ ಮಂಡಳದ ಹಣೆಬರಹ;
ಜನಜೀವಾಳ; ದಿ.೧೬-೧೦-೫೦

೪೬. ಅದೇ

೪೭. ಅದೇ

೪೮. Appreciation Of Panditappa's Public Works;

೪೯. ಕೇಸರಿ ಪತ್ರಿಕೆ; ೧೨-೫-೧೯೨೫, ಪುಟ-೯

೫೦. Appreciation Of Panditappa's Public Works;

೫೧. ಶ್ರೀ ಎಂ.ಬಿ.ಕಲ್ಯಾಣಶೆಟ್ಟಿ, ಅಧ್ಯಕ್ಷರು, ನೀರಾವರಿ ಸಮಿತಿ, ಗೋಕಾಕ, ನಂ. ೧೯, ೨೭-೦೨- ೧೯೩೬, Appreciation Of Panditappa's Public Works;

೫೨. ಅದೇ ದಿ:೨೯-೨-೧೯೩೬

೫೩. ಮುಂಬಯಿ ಸರಕಾರಿ ಗೆಜೆಟ್ ಪಾನು ೧೯೫೮, ತಾ॥೨ ಸೆ, ೧೯೩೧, ಹೋಮ್
ಡಿಪಾರ್ಟ್‌ಮೆಂಟ್ ಪ್ರಕಟಣೆ, ನಂ.ಎಸ್.ಡೀ ೩೦೫೪ ದಿ:೩೧-೮-೧೯೩೧
(ಆಧಾರ: Appreciation Of Panditappa's Works)

೫೪. ಬಾರ್ಡೋಲಿ ಆಂದೋಲನ; ಕೇಸರಿ ಪತ್ರಿಕೆ; ದಿ:೧೦-೪-೧೯೨೮

೫೫. ಬಾರ್ಡೋಲಿ ಅಭಿನಂದನ; ಕೇಸರಿ ಪತ್ರಿಕೆ;ದಿ:೨೧-೮-೧೯೨೮

೫೬. ವಿಭಾಕರ ಪತ್ರಿಕೆ; ಫೆಬ್ರುವರಿ ಜನವರಿ ೨೭, ೧೯೨೨

೫೭. ಗ್ರಾಮ ಪಂಚಾಯತ ಕಾಯದಾ; ಶ್ರೀ ಚಿಕ್ಕೋಡಿ ಯಾಂಚೀ ಭಿನ್ನ ಮತಪತ್ರಿಕಾ;ದಿ:೨-೩-೧೯೩೬

೫೮. ಜಿ.ವ್ಹಿ.ಮೊಕಾಶಿಯವರು ಹೊರಡಿಸಿದ ಜಾಹೀರ ಪತ್ರಿಕೆ; ದಿ-೧೩-೮-೧೯೩೩

೫೯. Non Brahmin Youth Conference, Bombay; date-20-8-1933

೬೦. ಮೈಸೂರು ಡಿ॥ ಮತ್ತು ಕೊಳ್ಳೇಗಾಲದ ತಾಲೂಕು ವೀರಶೈವ ಮಹಾಸಭೆಯು, ದಿ:೧೬-೯-
೧೯೩೪

೬೧. First Session of the Sangali State Veershaiv Confernce;Presidential
Speech; Mr.P.R.Chikodi, d:26-9-1936

೬೨. ರಾಷ್ಟ್ರಧರ್ಮದ್ರಷ್ಟಾರ;ಗ.ಸ.ಹಾಲಪ್ಪ, ಪುಟ-೩೦

೬೩. ಶಿ.ಶಿ.ಬಸವನಾಳರ ಜೀವನ ಮತ್ತು ಸಾಧನೆಗಳು; ಡಾ.ಮಹೇಶ ಚಿಂತಾಮಣಿ, ಪುಟ-೨೦೭

೬೪. ಹುಬ್ಬಳ್ಳಿಯಲ್ಲಿ ನೆರೆದ ವೀರಶೈವ ತರುಣ ಸಮ್ಮೇಲನ; ಮೈಸೂರು ಸ್ಟಾರ್ ಪತ್ರಿಕೆ; ದಿ:೨೨-೫-
೧೯೨೧, ಪುಟ-೩

೬೫. ಬಳ್ಳಾರಿ ಮೊದಲನೆಯ ಪ್ರಾಂತೀಕ ವೀರಶೈವ ತರುಣ ಸಮ್ಮೇಲನ

೬೬. ಅದೇ

೬೭. ಬಾಳೆಹಳ್ಳಿ ಪಟ್ಟಾಭಿಷೇಕ; ಶ್ರೀ ಜಗದ್ಗುರು ಜಯದೇವ ದಿಗ್ವಿಜಯ; ಡಾ.ಕಣಕುಪ್ಪಿ ಕೊಟ್ಟೂರು ಬಸವಪ್ಪ ಪುಟ-೨೦೧-೨೦೨

೬೮. ಅದೇ

೬೯. ನವಕರ್ನಾಟಕ ಪತ್ರಿಕೆ; ದಿ:೭ನೆಯ ಜೂನ ೧೯೩೪

೭೦. ಜಯದೇವ–ದಿಗ್ವಿಜಯ:ಡಾ.ಕಣಕುಪ್ಪಿ ಕೊಟ್ಟೂರು ಬಸವಪ್ಪ. ಪುಟ–೧೦೩–೧೦೪

೭೧. ವ್ಯಾಸನ ತೋಳಿನ ಪ್ರಕರಣ; ಜಯ–ದಿಗ್ವಿಜಯ;ಡಾ.ಕಣಕಪ್ಪ ಕೊಟ್ಟೂರು. ಪುಟ–೧೦೩ & ೧೦೪

* ನಂದಿಧ್ವಜಕ್ಕೆ ಕಟ್ಟಿದ ವ್ಯಾಸನ ತೋಳು:ನಂದಿಕೋಲಿನ ಹತ್ತು ಜಂಗುಗಳೇ ಶಿವಪುರಾಣಗಳು. ಜಂಗುಮಧ್ಯದಲ್ಲಿರುವ ೮ ಕೊಳಪಿಗಳೇ ಪಿಷ್ಣು ಪುರಾಣಗಳು. ಅಂತೂ ೧೮ ಪುರಾಣಗಳು. ನಂದಿಪಟಕ್ಕೆ ದಂಡೀ ಹಿಡಿದು ಹಚ್ಚಿದ ಕೆಂಪು ಗಾಲಿಗಳು ವ್ಯಾಸನ ನಾಲಿಗೆಗಳು–ಕತ್ತರಿಸಿ ಹಚ್ಚಿದ ಗುರುತು ಹೇಳುತ್ತವೆ. ನಂದಿಧ್ವಜಕ್ಕೆ ಹತ್ತು ಜಂಗುಗಳನ್ನು ಹಾಗೂ ೮ ಕೊಳವಿಗಳನ್ನು ಕಟ್ಟಲಿಕ್ಕೆ ಬೇಕು.

೭೨. ನವಕರ್ನಾಟಕ ಪತ್ರಿಕೆ, ದಿ:೭ನೆಯ ಜೂನ ೧೯೩೪

೭೩. ಶಿವಾನುಭವ ಪತ್ರಿಕೆ;

೭೪. ಸರ್ ಫ್ರೆಡರಿಕ್‌ರ ಪತ್ರ;

೭೫. ಸಾಂಗಲಿ ಪ್ರಜಾಪರಿಷದ್ ೬ನೆಯ ಅಧಿವೇಶನ; ಕೇಸರಿ ಪತ್ರಿಕೆ, ದಿ:೧೦–೪–೧೯೨೮

೭೬. ಅದೇ, ಕೇಸರಿ ಪತ್ರಿಕೆ, ದಿ:೧೧–೪–೧೯೨೮

೭೭. ಬಿಜಾಪುರ ಜಿಲ್ಲೆಯ ಗೆಝೆಟಿಯರ್; ಪುಟ–೨೭೫, ೧೯೯೯

೭೮. ಚಿಕ್ಕೋಡಿ ಪಂಡಿತಪ್ಪನವರು;ದು.ನಿಂ.ಬೆಳಗಲಿ, ಪುಟ–

೭೯. ರಾಮದುರ್ಗ ಸಂಸ್ಥಾನದ ಪತ್ರಗಳು;

೮೦. ಸಂಸತ್ತಿನಲ್ಲಿ ಮಾಡಿದ ಠರಾವುಗಳು;

೮೧. ದಾಂಡೇಲಿ ಕಿರಾವತ್ ರೇಲ್ವೆ, ದಿ–೨–೩–೧೯೨೨

೮೨. Ibid

೮೩. Oral answers

೮೪. Oral answers date-18-10-1927

೮೫. Budget date- 28-2-1928

೮೬. Contribution for Compulsory Education;date- 6th Aug 1928

೮೭. Oral answers ; date-6-8-1928

೮೮. Industries; date-10-3-1928

೮೯. Bombay University Bill; date-30-09-1927

೯೦. Grant-in-aid to Bobay Scouts Association; date-11-3-1927

೯೧. Indian Statutory Commession Committee; date-2-8-1928

೯೨. Oral answers; date-27-07-1929

೯೩. Medical Insepection of School-going Students; date-27-7-1929

೯೪. Deccan Irrigation Works; date-6-8-1931

೯೫. Local Board Act Amendment Bill; date-21-2-1935

೯೬. Tobacco Act Amendment Bill; 28-2-1935

೯೭. ಎಂ.ಆರ್. ಸಾಖರೆ:ಎಂ.ಎಸ್.ಸುಂಕಾಪುರ. ಪುಟ–೧೩

೯೮. ಪಂಡಿತಪ್ಪನವರು ಚಿಕ್ಕೋಡಿ:ದು.ನಿಂ.ಬೆಳಗಲಿ, ೧೯೮೦, ಪುಟ–೯

೯೯. ಕೆ.ಎಲ್.ಇ.ಸೊಸೈಟಿ;, ಸಂ.೧. ಪ್ರಸಾರಾಂಗ, ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಬೆಳಗಾಪ, ೨೦೦೨. ಪುಟ–೩೮

೧೦೦. ಅದೇ ಪುಟ–೩೫

೧೦೧. ಅದೇ ಪುಟ–೩೫

೧೦೨. ಅದೇ ಪುಟ–೩೬

೧೦೩. ಅದೇ ಪುಟ-೩೬-೩೭

೧೦೪. ಶಿ.ಶಿ.ಬಸವನಾಳರ ಜೀವನ ಮತ್ತು ಸಾಧನೆ; ಡಾ.ಮಹೇಶ ಚಿಂತಾಮಣಿ. ೧೯೯೭. ಪುಟ-೭೧

೧೦೫. ಪಂಡಿತಪ್ಪನವರು ಚಿಕ್ಕೋಡಿ:ದು.ನಿಂ.ಬೆಳಗಲಿ. ೧೯೮೦. ಪುಟ-೧೦

೧೦೬. ಅದೇ ಪುಟ-೧೩-೧೪

೧೦೭. ಅದೇ ಪುಟ-೬೪

೧೦೮. ಪರಿಷ್ಪತ್ರಿಕೆ-ಜುಲೈ ೧೯೨೫, ಸಂ.೧೦.ಸಂ.೨.ಪುಟ-೭೮-೭೯

೧೦೯. ಕೆ.ಎಲ್.ಸೊಸೈಟಿ. ಸಂ.೧

೧೧೦. ಅದೇ

೧೧೧. ಪಂಡಿತಪ್ಪನವರು ಚಿಕ್ಕೋಡಿ:ದು.ನಿಂ.ಬೆಳಗಲಿ, ,೧೯೮೦, ಪುಟ-೧೧

೧೧೨. ಕರ್ನಾಟಕ ಲಿಂಗಾಯತ ಏಜ್ಯುಕೇಶನ್ ಕಾನ್ಫರನ್ಸ್ ವರದಿ.

೧೧೩. ಬಿ.ಎಂ.ಕಂಕಣವಾಡಿ ಆಯುರ್ವೇದ ಆಸ್ಪತ್ರೆ;ಕೆಎಲ್.ಇ.ಸೊಸೈಟಿ ಸ್ಮರಣ ಸಂಚಿಕೆ, ಪುಟ-

೧೧೪. ಆಯುರ್ವೇದ ಆಸ್ಪತ್ರೆಯ ಪ್ರಾಚಾರ್ಯರಾಗಿದ್ದ ದಿ.ಎ.ಬಿ.ಗದಗ ಅವರ ಕೈಬರಹದ ಪ್ರತಿ

೧೧೫. Appreciations Of Shri P.R.Chikodi's Public Work: (a) The Times of India., in his issue of Mondeay, January 11, 1926, page 12, says:- "The Belguam District Local Board, under the able presidentship of Mr.P.R.Chikodi, seems to have done a tremendous amount of work in the last three years. The Board is so anxious to spread primary education throughout the district that, not waiting for the general enforcement of the Primary Education Act, it has secured sanction to start 150 schools (primary) in this district. It is a matter of pride indeed for the Belguam District that there is not a single district in the Presidency Which has secured such sanction to start so many schools at one stroke. The opening of all schools is over only this week. So now there is not a single village which has 500 or more as population, which has no primary school."

೧೧೬. (b) The Bombay Chronicle, in its issue of Tuesday, January 12, 1936, page 6 says: "District Local Boards in this Presidency will do well to emulate the enterprise of Belgaum which has taken a very courageous and commandable step in its attempt to reduce illiteracy in the district by the simulataneous opening of 150primary schools. This addition to the number of primary schools, the District already maintains, will mean that not a single village with a population of over 500 inhabitants will be left without a school.........Mr. P.R.Chikodi, the President of the Board has rendered the Board's educational venture still more interesting by obtaining sanction from Government for vocational training through a scheme of agricultural classes for the primary schools children."

೧೧೭. "ಶೇತಕಿ ವಿದ್ಯೆಯು'; ವ್ಹಿ.ಸಿ.ಪಾವಟೆ, ದೇವಿಹೊಸುರ; ಪ್ರಬೋಧ ಪತ್ರಿಕೆ;

೧೧೮. "The following remarks entered in the Visitors' Book of the Agricultrural Bias School at Kongnolli in the Belguam District by Mr.Burns, Director of Agriculture, Bombay Presidency, admirably testify to the excellent work done by some of the schools. The Agricultural Bias Class work is excellent. The garden is well developed. The crops grown are also in splendid condition. This school is undoubtedly doing the kind of work a village school should do and the Head Master should be congratulated on his enthusiasm and results."

೧೧೯. There were manual training classes attached to some primary schools in the Belguam District, but for

reasons not known, they had not been working at all. Mr.Chikodi brought this fact to the notice of the Director of Public Instruction and had the classes revived and put into full working order. The special inspection of these classes every year was also intronced by obtaining the services of an Inspector from the Government.

During his first regime as President of the District Local Board, it was Mr. Chikodi who with the sanction of the Government introduced the scheme of starting every year five agricultural bias schools in the Belgaum District.

೧೨೦. "I am directed to convey to you the cordial acknowledgements of Government for your valuable services and the very ernest and through discharge of your duties and responsibilities as member of the Retrenchment Committee

೧೨೧. The Government of Bombay have expressed their appreciation of Mr.Chikodi's services to the Belgaum District Local Board by specially mentioning his name in their Annual Reviews for the years 1925 and 1926, respectively in their Resolution No.P-52,G.D., dated 18th September 1925, para 44, and in their Resolution No.32, G.D.,dated 22nd November 1926, para 16.

೧೨೨. In conclusion Gentlemen, I would like to congratulate you no the efficient manner in which your Board is administered. I should also like to mention here the fact that in Mr.Chikodi you have an excellent President. I know him long ago. I came into closer tonch with him during the last six or seven months as a Member of the Retrenchment Committee over the deliberation of which I had the honour to preside. In him I discovered an excellent colleague fully posted up with the facts of the past Government Budgets as well as recent finance and a very compentent one also. Under his guidance your Board would make great progress. He deserves well indeed of the community and of Government for the public services he has rendered."

೧೨೩. "In conclusion, I would repeat the tribute I paid last year to the retiring presidents-particularly Mr.P.R.Chikodi-who have worked conscientiously and whole-heartedly for their Board and who are leaving behind them a tradition worthy of emulation by their successors in office."(Commissioner, S.D.'s Report on the administration of Local Boards in the Southern Division for 1924-25)

೧೨೪. I have heard much of the efficient work performed by your Board under your late Chairman, Mr.P.R.Chikodi, and I am sure I could not give you, Sir, any beteer praise than to say that I have every confidence that you will maintain the same high reputation for efficiency of administration"

೧೨೫. Appriciation of Panditappa's Public Works

೧೨೬. ಒತ್ತಾಯದ ಪ್ರಾಥಮಿಕ ಶಿಕ್ಷಣ; ವಿಭಾಕರ ಪತ್ರಿಕೆ; ಅದೆ

೧೨೭. ಅದೇ

೧೨೮. ಬೆಳಗಾವಿ ಜಿಲ್ಲೆಯ ಶಿಕ್ಷಕರ ಗ್ಯಾಝೆಟ ಡಿಸೆಂಬರ್ ೧೮,೧೯,೨೦ ೧೯೩೦

೧೨೯. 'ಜನತಾ ಶಿಕ್ಷಣ ನಡೆದು ಬಂದ ದಾರಿ' ;ತ್ಯಾಗಜೀವಿ; ಜನತಾ ಶಿಕ್ಷಣ ಸಂಘದ ಸ್ಮರಣಸಂಚಿಕೆ ಪುಟ-೧೫

೧೩೦. ಅದೇ ಪುಟ-೧೫

೧೩೧. ಅದೇ

೧೩೨. 'ಜನತಾ ಶಿಕ್ಷಣ ನಡೆದು ಬಂದ ದಾರಿ'; ತ್ಯಾಗಜೀವಿ; ಜನತಾ ಶಿಕ್ಷಣ ಸಂಘದ ಸ್ಮರಣಸಂಚಿಕೆ ಪುಟ-೧೫

೧೩೩. ಜನತಾ ಶಿಕ್ಷಣ ಸಂಘದ ಮೀಟಿಂಗ್ ರಜಿಸ್ಟಾರ್, ೧೫-೧೧-೧೯೪೧

೧೩೪. ಅದೇ ೫ನೇ ತರಾವು

ಅಧ್ಯಾಯ ಐದು:
ಕನ್ನಡ ನಾಡಿಗೆ ಚಿಕ್ಕೋಡಿ ಕುಟುಂಬದ ಕೊಡುಗೆ:

೫.೧. ಕರ್ನಾಟಕ ಏಕೀಕರಣ

೫.೨. ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕನ್ನಡ ಸಾಹಿತ್ಯ ಪರಿಷತ್ತು

೫.೩. ಸಾಹಿತ್ಯ ರಚನೆ

೫.೪. ಪತ್ರಿಕೋದ್ಯಮ

೫.೫. ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿಯವರನ್ನು ರೂಪಿಸಿದ್ದು

ಅಧ್ಯಾಯ ಐದು

ನಾಡು ನುಡಿಗೆ ಚಿಕ್ಕೋಡಿ ಕುಟುಂಬದ ಕೊಡುಗೆ:

೫.೧. ಕರ್ನಾಟಕ ಏಕೀಕರಣ:

ಭಾರತ ಸ್ವಾತಂತ್ರ್ಯಸಂಗ್ರಾಮದ ತೃತೀಯ ಹಂತದಲ್ಲಿ ಭಾಷಾವಾರು ಪ್ರಾಂತರಚನೆಯ ಚಳುವಳಿ ಪ್ರಾರಂಭವಾದದ್ದು ಒಂದು ವಿಶೇಷ. ಅದಕ್ಕಿಂತ ಮೊದಲು ಜನತೆಗೆ ಈ ಚಳುವಳಿಯ ಬಗ್ಗೆ ಕಲ್ಪನೆ ಇರಲಿಲ್ಲ. ಈ ಚಳುವಳಿಗೆ ಪ್ರೇರಕರಾದವರು ಸ್ವತಃ ಬ್ರಿಟಿಷ್ ಆಡಳಿತಗಾರರೇ ಆಗಿದ್ದರು. ಭಾರತದ ಆಯಾ ಪ್ರಾಂತದ ಜನರ ಭಾಷೆ, ರೀತಿ, ನೀತಿ ಮುಂತಾದವುಗಳನ್ನು ಆಧರಿಸಿ ರಾಜ್ಯವಿಂಗಡಣೆ ಮಾಡಿದರೆ ಆಡಳಿತ ಸುಗಮವಾಗುವುದು ಎಂದು ಅವರು ಭಾವಿಸಿದ್ದರು. ಇದು ಅಂದಿನ ಮುತ್ಸದ್ದಿಗಳ ಗಮನ ಸೆಳೆದು, ಈ ಪ್ರಕ್ರಿಯೆಗೆ ಚಾಲನೆ ದೊರಕಿತು. ಕರ್ನಾಟಕದಲ್ಲಿಯೂ ನಮ್ಮ ಮುಖಂಡರು ಈ ಚಳುವಳಿಗೆ ಬೆಂಬಲ ನೀಡಿದರು.

೧೯ನೆಯ ಶತಮಾನದಲ್ಲಿ ಕರ್ನಾಟಕವು ೨೦ ಆಡಳಿತಗಳಲ್ಲಿ ವಿಭಜಿಸಲ್ಪಟ್ಟಿತ್ತು. ತುಂಡರಿಸಲ್ಪಟ್ಟ ಕರ್ನಾಟಕದ ಜನತೆಯ ಉದ್ಧಾರವಾಗಬೇಕಾದರೆ ತಾವೆಲ್ಲ ಒಂದೇ ಆಡಳಿತದಲ್ಲಿ ಸೇರುವುದು ಅತ್ಯವಶ್ಯ ಎಂಬುದನ್ನು ಕನ್ನಡಿಗರು ಮನಗಂಡರು. ಇದು ಕರ್ನಾಟಕ ಏಕೀಕರಣ ಚಳುವಳಿಗೆ ಪ್ರೇರಕವಾಯಿತು. ವಿಶೇಷವೆಂದರೆ, ಈ ಅವಧಿಯಲ್ಲಿ ಕರ್ನಾಟಕ ಏಕೀಕರಣಕ್ಕೆ ವೇದಿಕೆಗಳಾಗಿ ಧಾರವಾಡದ 'ಕರ್ನಾಟಕ ವಿದ್ಯಾವರ್ಧಕ ಸಂಘ', ಬೆಂಗಳೂರಿನ 'ಕನ್ನಡ ಸಾಹಿತ್ಯ ಪರಿಷತ್ತು' ಮತ್ತು 'ಕರ್ನಾಟಕ ಸಭೆ'ಗಳು ಅಸ್ತಿತ್ವಕ್ಕೆ ಬಂದವು. ಇವು ಏಕೀಕರಣದ ಅವಶ್ಯಕತೆಯನ್ನು ಕರ್ನಾಟಕದ ಮೂಲೆಮೂಲೆಗೂ ಹರಡಿ ಚಳುವಳಿಯು ಯಶಸ್ವಿಯಾಗುವಂತೆ ಮಾಡುವಲ್ಲಿ ಸತತ ಪರಿಶ್ರಮಗೈದವು. ಈ ಸಂದರ್ಭದಲ್ಲಿ ಶ್ರೀ ತಮ್ಮಣ್ಣಪ್ಪ ಮತ್ತು ಪಂಡಿತಪ್ಪ ಚಿಕ್ಕೋಡಿಯವರು ಕರ್ನಾಟಕದ ನಾನಾ ಸಂಘಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸೇವೆ ಸಲ್ಲಿಸುತ್ತಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮಣ್ಣಪ್ಪನವರು ಮಂದಗಾಮಿಗಳು. ಸುಭಾಶ್‌ಚಂದ್ರ ಭೋಸ್‌ರ ನೇತೃತ್ವದಿಂದ ಯುವಕರಲ್ಲಿ ಸೆಲೆಯೊಡೆದ ಕ್ರಾಂತಿ ಬೇರೆ ರೂಪವನ್ನೇ ಪಡೆಯಿತು. ಶ್ರೀ ಕಲಕಂಬ ಮಾಸ್ತರರು, ಶ್ರೀ ಭಾಸ್ಕರರಾವ ಘೋರ್ಪಡೆ, ಶ್ರೀ ಸೋಪನ್ನಪ್ಪ ಘೋರ್ಪಡೆ ಮುಂತಾದವರು ಕ್ರಾಂತಿ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದಂದಿನಿಂದ ಬನಹಟ್ಟಿ ಪ್ರದೇಶದಲ್ಲಿ ಅದರ ಗತಿಯೇ ಬೇರೆಯಾಯಿತು.[೧] ಈಗ ಬನಹಟ್ಟಿಯಲ್ಲಿ ಯುವಕರು ದೂರವಾಣಿ ತಂತಿಗಳನ್ನು ಕತ್ತರಿಸಿದಾಗ, ತಮ್ಮಣ್ಣಪ್ಪನವರು ಅವರ ಬೆನ್ನು ತಟ್ಟಿ ಕಳಿಸಿದ್ದನ್ನು ಶ್ರೀ ಸೋಪನ್ನಪ್ಪ ಘೋರ್ಪಡೆ ನೆನಸಿಕೊಂಡಿದ್ದರು. ಜಮಖಂಡಿ ಸಂಸ್ಥಾನಿಕರಾದ ಪಟವರ್ಧನ ಮಹಾರಾಜರಿಗೆ ಬೇಕಾಗಿದ್ದ ಮರಾಠಿ ಭಾಷೆಯ ವಿಷಯಕ್ಕೆ ಬಂದಾಗ ತಮ್ಮಣ್ಣಪ್ಪನವರು ಎಂದೂ ಸಹಿಸಿಕೊಳ್ಳಲಿಲ್ಲ.

ಕರ್ನಾಟಕ ಏಕೀಕರಣ ಚಳುವಳಿ ತೀವ್ರಗೊಂಡ ಸ್ಥಿತಿಯಲ್ಲಿ ಬನಹಟ್ಟಿಯ ಯುವಕರು ರಾತ್ರೋರಾತ್ರಿ ಮರಾಠಿ ಫಲಕಗಳಿಗೆ ಡಾಂಬರು ಹಚ್ಚಿ ಬಂದಾಗ ತಮ್ಮಣ್ಣಪ್ಪನವರು ಬೆನ್ನು ಚಪ್ಪರಿಸಿದ್ದರು. ಬನಹಟ್ಟಿಯ ಬಂಟರಾದ ಶ್ರೀ ಕಲಕಂಬ ಮಾಸ್ತರರು, ಶ್ರೀ ಭಾಸ್ಕರಪ್ಪ ಘೋರ್ಪಡೆ, ಶ್ರೀ ಸೋಪನ್ನಪ್ಪ ಘೋರ್ಪಡೆ, ಶ್ರೀ ಅಯ್ಯಪ್ಪ ಬಾಗಲಕೋಟ ಮುಂತಾದವರು ಸೇಂದಿ ಬನಕ್ಕೆ ಬೆಂಕಿ ಇಟ್ಟಾಗ ಮೆಚ್ಚಿಕೊಂಡಿದ್ದರು. ತಮ್ಮ ವಿಚಾರಗಳು ಈಡೇರುತ್ತಿರುವಾಗ ಸಂಸ್ಥಾನದಲ್ಲಿ ಚಳುವಳಿಯ ಅಗತ್ಯವಿಲ್ಲ ಎನ್ನುತ್ತಿದ್ದ ತಮ್ಮಣ್ಣಪ್ಪನವರು ಉಗ್ರವಾದಿ ದೇಶಭಕ್ತರ ಕ್ರಾಂತಿಯನ್ನು ಕಂಡು ಭಲೇ ಎನ್ನುತ್ತಿದ್ದರಂತೆ.[೨] ತಮ್ಮಣ್ಣಪ್ಪನವರು ಮರಾಠಿ ಸಂಸ್ಥಾನಿಕರ ಆಸ್ಥಾನದಲ್ಲಿದ್ದುಕೊಂಡೇ ಕನ್ನಡಪರ ಹೋರಾಡಿದರಲ್ಲದೆ, ಇಡೀ ಉತ್ತರಕರ್ನಾಟಕದ ಜನತೆಯಲ್ಲಿ ಕನ್ನಡ ಜಾಗೃತಿ ಮೂಡಿಸುವಲ್ಲಿ ಅವಿಶ್ರಾಂತ ಪರಿಶ್ರಮಿಸಿದರು. ತರುಣರಾದ ಪಂಡಿತಪ್ಪನವರು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಧುಮುಕಿದರಲ್ಲದೆ ಬಳ್ಳಾರಿಯಲ್ಲಿ ನಡೆದ ಎರಡನೆಯ ಏಕೀಕರಣ ಪ್ರಾಂತೀಯ ಚಳುವಳಿಯ ನಿಯೋಜಿತ ಅಧ್ಯಕ್ಷರಾಗಿದ್ದರು. ತಮ್ಮಣ್ಣಪ್ಪನವರ ಪ್ರಭಾವದಿಂದಾಗಿಯೇ ಚನಮಲ್ಲಪ್ಪ ಅಬಕಾರರು ಕರ್ನಾಟಕ ಏಕೀಕರಣದಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು. ಕನ್ನಡಕ್ಕಾಗಿ ದುಡಿದರು, ಕನ್ನಡಕ್ಕಾಗಿ ತನು–ಮನ–ಧನಗಳನ್ನು ಅರ್ಪಿಸಿದರು. ಪ್ರಾಂತೀಯ ಮಟ್ಟದಲ್ಲಿ ಈ ಏಕೀಕರಣದ ಚಳುವಳಿ ಪ್ರಾರಂಭಗೊಂಡಾಗ ಜಮಖಂಡಿಸಂಸ್ಥಾನ ವಿಭಾಗದಿಂದ ಪ್ರಾಂತೀಯ ಮಟ್ಟದ ನಾಯಕರಾಗಿ ಕಾರ್ಯನಿರ್ವಹಿಸಿದರು. ಇದಕ್ಕೆಲ್ಲ ತಮ್ಮಣ್ಣಪ್ಪಜ್ಜನ ಪ್ರೇರಣೆ ಎಂದು ಅವರ ಮಕ್ಕಳು ನೆನಪಿಸಿಕೊಳ್ಳುತ್ತಾರೆ.

೧೯೧೫ರಲ್ಲಿ ಲೋಕಮಾನ್ಯ ತಿಲಕರ ಪ್ರೇರಣೆಯಿಂದ ಪುಣೆಯಲ್ಲಿ ಮುಂಬಯಿ ಪ್ರಾಂತೀಯ ರಾಷ್ಟ್ರೀಯ ಪರಿಷತ್ತು ಸೇರಿತ್ತು. ಅದರ ಅಧ್ಯಕ್ಷರಾದ ಬ್ಯಾರಿಸ್ಟರ್ ಬ್ಯಾಪಿಷ್ಟಾ ಅವರು ಭಾಷಾನ್ವಯ ಪ್ರಾಂತೀಕರಣ ತತ್ವವನ್ನು ಎತ್ತಿಹಿಡಿದರು.[೩] ಈ ವೇಳೆಯಲ್ಲಿ ಉತ್ತರ ಕರ್ನಾಟಕದಿಂದ ಉನ್ನತ ವ್ಯಾಸಂಗಕ್ಕೆಂದು ಪುಣೆಗೆ ತೆರಳಿದ ವಿದ್ಯಾರ್ಥಿಗಳಲ್ಲಿ ಈ ವಿದ್ಯಮಾನಗಳಿಂದ ಸಾಕಷ್ಟು ಜಾಗೃತಿವುಂಟಾಯಿತು. ಪಂಡಿತಪ್ಪ ಚಿಕ್ಕೋಡಿ, ಎಂ.ಆರ್. ಸಾಖರೆ, ಎಚ್.ಎಫ್. ಕಟ್ಟೀಮನಿ, ಬಿ.ಬಿ. ಮಮದಾಪೂರ, ವಿ.ವಿ.ಪಾಟೀಲ ಮೊದಲಾದ ಸ್ನೇಹಿತರು ಕಾನೂನುವಿದ್ಯೆ ಕಲಿಯಲೆಂದು ಮುಂಬಯಿಯ ವೀರಶೈವಾಶ್ರಮದಲ್ಲಿ ನೆಲೆಸಿದ್ದರು. ಆ ಸಂದರ್ಭದಲ್ಲಿ ದೇಶದ ವಿದ್ಯಮಾನಗಳು ಈ ತರುಣ ಪದವೀಧರರ ಚಿಂತನೆಯ ವಿಷಯಗಳಾಗಿದ್ದವು. ಅದರಲ್ಲೂ ಮುಖ್ಯವಾಗಿ ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಅರಿತ ಈ ವಿದ್ಯಾವಂತ ಪದವೀಧರರು ಕರ್ನಾಟಕ ಒಂದುಗೂಡಬೇಕಾದರೆ ಕನ್ನಡಿಗರಲ್ಲಿ ಜಾಗೃತಿವುಂಟಾಗಬೇಕು. ಆ ಜಾಗೃತಿ ಕೇವಲ ಶಿಕ್ಷಣ ಕೊಡುವುದರಿಂದ ಮಾತ್ರ ಸಾಧ್ಯ ಎಂದು ತಿಳಿದಿದ್ದರು.

ಅದೇ ವೇಳೆಯಲ್ಲಿ ದ್ವಿತೀಯ ಮಹಾಯುದ್ಧ ಪ್ರಾರಂಭಗೊಂಡಿತ್ತು. ಮತ್ತು ಭಾರತದಲ್ಲಿ "ಹೋಂರೂಲ್" (ಸ್ವರಾಜ್ಯ) ಚಳುವಳಿ ತೀವ್ರಗತಿಯಿಂದ ತಿಲಕ ಮತ್ತು ಆ್ಯನಿಬೆಸೆಂಟರಿಂದ ನಡೆದಿತ್ತು. ಇದಕ್ಕಾಗಿಯೇ ಇಂಗ್ಲೆಂಡಿನಿಂದ ಭಾರತ ಮಂತ್ರಿ "ಮಾಂಟೆಗೋ" ಸಾಹೇಬರು ಜನರ ಮನೋಗತವನ್ನು

ತಿಳಿಯಲು ಭಾರತಕ್ಕೆ ಬಂದರು. ಈ ದೇಶದ ಮುಖ್ಯ ಪಟ್ಟಣಗಳಿಗೆ ಭೇಟಿಕೊಟ್ಟ ಅವರು ರಾಜಕಾರಣಿಗಳಿಂದಲೂ ಸಾರ್ವಜನಿಕ ಸಂಸ್ಥೆಗಳಿಂದಲೂ ಮನವಿಗಳನ್ನು ಸ್ವೀಕರಿಸಿ, ಆ ಮೂಲಕ ಭಾರತದ ಜನತೆಯ ಆಶೋತ್ತರಗಳನ್ನು ತಿಳಿದರು. ಅದೇ ವೇಳೆಗೆ ದಾವಣಗೆರಿಯಲ್ಲಿ ಅಖಿಲ ಭಾರತ ಶ್ರೀಮದ್ವೀರಶೈವ ಮಹಾಸಭೆ(೧೯೧೭)ಯಲ್ಲಿ ಲಿಂಗಾಯತ ಆಶೋತ್ತರಗಳ ಬಗ್ಗೆ ಠರಾವುಗಳನ್ನು ಮಾಡಿ, ಲಿಂಗಾಯತರ ಪರವಾಗಿ ಅರಟಾಳ ರುದ್ರಗೌಡರ ಮುಖಂಡತ್ವದಲ್ಲಿ ಮೆಣಸಿನಕಾಯಿ ಶಾಂತವೀರಪ್ಪ, ಚಿಕ್ಕೋಡಿ ಪಂಡಿತಪ್ಪ, ಕಂಬಳಿ ಸಿದ್ದಪ್ಪ ಮೊದಲಾದ ರಾಯಭಾರಿಗಳು ಹೋಗಿದ್ದರು.[೪] ಇದು ಕರ್ನಾಟಕದ ಜನತೆಗೆ ಹೆಮ್ಮೆಯ ವಿಷಯವಾಗಿತ್ತು. ರಾಷ್ಟ್ರಮಟ್ಟದಲ್ಲಿ ಚುರುಕುಗೊಂಡ ಈ ರಾಜ್ಯ ಘಟನಾ ಸಮಿತಿಗೆ ಸ್ಪಂದಿಸಿ ಕೈಜೋಡಿಸಿದ ಕೀರ್ತಿ ಲಿಂಗಾಯತರದು. ಹೀಗಾಗಿ ಪದವೀಧರ ಸಪ್ತರ್ಷಿಗಳು ನೇರವಾಗಿ ಕರ್ನಾಟಕದ ಹೃದಯಭಾಗವೆನಿಸಿದ ಬೆಳಗಾವಿಗೆ ಬಂದು, ಶಿಕ್ಷಣಸಂಸ್ಥೆಯನ್ನು ತೆರೆಯಲು ಮನಸ್ಸು ಮಾಡಿದರು. ಈ ಪ್ರಕ್ರಿಯೆಯ ಮುಖಂಡರು ಪಂಡಿತಪ್ಪ ಚಿಕ್ಕೋಡಿಯವರು.

೧೯೨೦ರಲ್ಲಿ ಧಾರವಾಡದಲ್ಲಿ 'ಕರ್ನಾಟಕ ರಾಜಕೀಯ ಪರಿಷತ್ತಿನ' ಮೊಟ್ಟಮೊದಲ ಅಧಿವೇಶನವು ನಡೆಯಿತು. ಶ್ರೀ ಬ್ಯಾಹಟ್ಟಿ ಸುಬ್ಬರಾಯರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು; ಮೈಸೂರಿನ ದಿವಾನರಾದ ಶ್ರೀ ವ್ಹಿ.ಪಿ. ಮಾಧವರಾಯರು, ಈ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಕನ್ನಡ ಭಾಷೆಯನ್ನಾಡುವ ಎಲ್ಲ ಪ್ರದೇಶಗಳೂ ಒಂದೇ ಆಡಳಿತದಲ್ಲಿರತಕ್ಕದ್ದೆನ್ನುವುದೇ ಪರಿಷತ್ತಿನ ಮುಖ್ಯ ಬೇಡಿಕೆಯಾಗಿತ್ತು. ಈ ಪರಿಷತ್ತಿಗೆ ಕರ್ನಾಟಕದ ಎಲ್ಲ ಭಾಗಗಳಿಂದ ನೂರಾರು ಪ್ರತಿನಿಧಿಗಳು ಬಂದಿದ್ದರು. ಕಡಪಾ ರಾಘವೇಂದ್ರರಾವ ಮುಂತಾದವರೇ ಈ ಎಲ್ಲದಕ್ಕೂ ಸೂತ್ರಧಾರಿಗಳಾಗಿದ್ದರು.[೫]

ಧಾರವಾಡದ ಈ ಏಕೀಕರಣ ಸಮ್ಮೇಲನವು ಕರ್ನಾಟಕದ ತುಂಬೆಲ್ಲ ಶೀಘ್ರಗತಿಯಿಂದ ಪಸರಿಸಿ ಜಾಗೃತಿಯುಂಟು ಮಾಡಿತು. ನವಚೈತನ್ಯದಿಂದ ಸ್ವಾತಂತ್ರ್ಯಸಂಗ್ರಾಮದಲ್ಲಿ ಮುಂದಡಿಯಿಡುತ್ತಿದ್ದ ಕಾಂಗ್ರೆಸ್ ಸಂಸ್ಥೆಯ ಘಟನೆಯಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ ಸ್ಥಾನವು ದೊರೆಯಬೇಕೆಂಬ ಉದ್ದೇಶದಿಂದ ಮುಖಂಡರು ಪ್ರಯತ್ನವನ್ನು ನಡೆಸಿದರು. ಮತ್ತು ಎಲ್ಲ ಕಡೆಗೂ ಸಂಚರಿಸಿ ನಾಗಪುರ ಕಾಂಗ್ರೆಸ್ ಅಧಿವೇಶನಕ್ಕೆ ತಂಡ ತಂಡವಾಗಿ ಬರಲು ಕರ್ನಾಟಕಸ್ಥರಿಗೆ ಕರೆಕೊಟ್ಟರು.[೬]

ನಾಗಪುರದ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾತ್ಮಾಗಾಂಧೀಜಿಯವರು ಭಾಷಾನ್ವಯ ಪ್ರಾಂತರಚನೆಯ ಬೆಂಬಲಿಗರೆಂದು ತಿಳಿದುದರಿಂದ ಜನ ತಂಡೋಪತಂಡವಾಗಿ ಹುರುಪಿನಿಂದ ಕರ್ನಾಟಕದ ಕಡಪಾ ರಾಘವೇಂದ್ರರಾವರ ಮುಂದಾಳತ್ವದಲ್ಲಿ ಸಾಗಿದರು.[೭] ಕರ್ನಾಟಕ ಏಕೀಕರಣ ಗುರಿಯು ಕೇವಲ ಕಾಂಗ್ರೆಸ್ ಪಕ್ಷದವರದಷ್ಟೇ ಇರಲಿಲ್ಲ; ಕಾಂಗ್ರೆಸ್ಸೇತರರಿಗೂ ಇದು ಇಷ್ಟವಾಗಿತ್ತು. ಅಂಥವರಿಗೂ ಆಸ್ಪದವಿರಬೇಕೆಂಬ ಭಾವನೆಯಿಂದ ೧೯೨೪ರಲ್ಲಿ ಧಾರವಾಡದ ಕಡಪಾ ರಾಘವೇಂದ್ರರಾಯರ ಪ್ರಯತ್ನದ ಫಲವಾಗಿ "ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು" ಬೆಳಗಾವಿಯಲ್ಲಿ ಸೇರಿತು. "ಕರ್ನಾಟಕ ಏಕೀಕರಣ ಸಂಘ" ೨೫-೧೨-೧೯೨೪ರಲ್ಲಿ ಸ್ಥಾಪನೆಯಾಯಿತು.

೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಕರ್ನಾಟಕ ಏಕೀಕರಣ ಸಭೆಯು ರಾಜಕೀಯ ಬೆಂಬಲ ಪಡೆಯಿತು. ಮುಂದೆ ಅದು ತೀವ್ರಗತಿಯಲ್ಲಿ ತನ್ನ ಕಾರ್ಯವನ್ನು ವಿಸ್ತರಿಸಿತು. ಬೆಳಗಾವಿಯ ಕಾಂಗ್ರೆಸ್ ಅಧಿವೇಶನದ ಸಮಯದಲ್ಲೇ ಏಕೀಕರಣ ಪರಿಷತ್ತಿನ ಮೊದಲ ಸಭೆಯು ಸಿದ್ದಪ್ಪ ಕಂಬಳಿ ಅವರ ಅಧ್ಯಕ್ಷತೆಯಲ್ಲಿ ನಡೆದು, ಕರ್ನಾಟಕ ಏಕೀಕರಣದ ಹೋರಾಟಕ್ಕೆ ನಿಶ್ಚಿತ ಸ್ವರೂಪದ ಚಾಲನೆ ದೊರೆಯಿತು. ಮೇ ೧೯೨೬ರಲ್ಲಿ ಬಳ್ಳಾರಿಯಲ್ಲಿ ನಡೆದ ಏಕೀಕರಣ ಪರಿಷತ್ತಿನ ನಿಯೋಜಿತ ಅಧ್ಯಕ್ಷತೆಯನ್ನು ಶ್ರೀ ಪಂಡಿತಪ್ಪ ರಾಯಪ್ಪ ಚಿಕ್ಕೋಡಿ ಅವರು ವಹಿಸಿದ್ದರು. ಆಗ ಶ್ರೀ ಕೆ.ಗುರುರಾಜರಾಯರು ಸ್ವಾಗತಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು.[೮]

ಮದ್ರಾಸ್ ಇಲಾಖೆಗೆ ಒಳಪಟ್ಟ ಬಳ್ಳಾರಿಯಲ್ಲಿ ಮೇಲೆ ಹೇಳಿದ ಎರಡನೆಯ ಕರ್ನಾಟಕ ಏಕೀಕರಣ ಪ್ರಾಂತೀಯ ಪರಿಷತ್ತು ೧೯-೫-೧೯೨೬ರಲ್ಲಿ ಜರುಗಿತು. ಈ ಕಾರ್ಯಕ್ರಮದ ವರದಿಯು ಅಂದಿನ ಪ್ರಸಿದ್ಧ ಪತ್ರಿಕೆಯಾದ ಲೋಕಮಾನ್ಯ ತಿಲಕರ 'ಕೇಸರಿ'ಯಲ್ಲಿ ಪ್ರಕಟವಾಗಿತ್ತು. ಈ ಅಧಿವೇಶನದಲ್ಲಿ ಕರ್ನಾಟಕದ ಪ್ರಸಿದ್ಧ ರಾಜಕೀಯ ಧುರೀಣರಾದ ಶ್ರೀ ಗಂಗಾಧರರಾವ ದೇಶಪಾಂಡೆ, ಶ್ರೀ ಶ್ರೀನಿವಾಸರಾವ ಕೌಜಲಗಿ ಶ್ರೀ ಸಿದ್ದಪ್ಪ ಕಂಬಳಿ, ಧಾರವಾಡದ ಶ್ರೀ ಜೋಗ, ಶ್ರೀ ಕಬ್ಬೂರ, ಶ್ರೀ ಮುದವೇಡಕರ, ಏಕೀಕರಣ ನಿಯೋಜಿತ ಪರಿಷತ್ತಿನ ಅಧ್ಯಕ್ಷರಾದ ಚಿಕ್ಕೋಡಿ ಪಂಡಿತಪ್ಪನವರು ಮುಂತಾದವರು ಉಪಸ್ಥಿತರಿದ್ದರು. ಅಧಿವೇಶನದ ಅಧ್ಯಕ್ಷತೆಯನ್ನು ಶ್ರೀನಿವಾಸ ಅಯ್ಯಂಗಾರ್ ಅವರು ವಹಿಸಿದ್ದರು. ಮದ್ರಾಸ್ ಮಹಾನಗರಪಾಲಿಕೆಯ ಅಧ್ಯಕ್ಷ ಸ್ವಾಮಿ ವೆಂಕಟಾಚಲಂ ಚೆಟ್ಟಿ ಮತ್ತು ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

ಪಂಡಿತಪ್ಪನವರು ಏಕೀಕರಣ ಪರಿಷತ್ತಿನ ಅಧ್ಯಕ್ಷರಾಗಿ ತಮ್ಮ ಭಾಷಣದಲ್ಲಿ "ರಾಜಕೀಯ ಧುರೀಣರ ಮತಭೇದಗಳು ಏನೇ ಇದ್ದರೂ ಏಕೀಕರಣದ ಸಂದರ್ಭದಲ್ಲಿ ಅವರು ಮಾಡಿದ ಕೈಂಕರ್ಯ ಬಹಳ ಮಹತ್ವದ್ದು. ಮಹಾತ್ಮಾಗಾಂಧಿ ಮತ್ತು ಲೋಕಮಾನ್ಯ ತಿಲಕರು ರಾಷ್ಟ್ರದ ಉನ್ನತಿಗಾಗಿ ತಮ್ಮ ಆಯುಷ್ಯವನ್ನೇ ತೇಯ್ದ ಪ್ರಸಂಗವನ್ನು ಎಂದೂ ಮರೆಯುವುದಿಲ್ಲ. ಪ್ರಾಂತೀಯ ಭಾಷಾ ಚಳುವಳಿಯ ಎರಡನೆಯ ಹಂತದ ಸುಧಾರಣೆಗಳು ಕನ್ನಡಿಗರಿಗೆ ದೊರೆತು ಕರ್ನಾಟಕ ಒಂದುಗೂಡಬೇಕು. ಆ ಹಿನ್ನೆಲೆಯಲ್ಲಿ ಈ ಅಧಿವೇಶನ ಕರ್ನಾಟಕ ಏಕೀಕರಣ ಹೋರಾಟಕ್ಕೆ ತಳಪಾಯವಾಗಬೇಕು ಎಂದು ಹೇಳಿದರು. ಪಂಡಿತಪ್ಪ ಚಿಕ್ಕೋಡಿಯವರು ಭಾಷಣದಲ್ಲಿ ಪ್ರಥಮ ಬಾರಿಗೆ ಬಾಲಗಂಗಾಧರ ತಿಲಕರಿಗೆ 'ಲೋಕಮಾನ್ಯ' ಎಂದು ಕರೆದಿದ್ದಕ್ಕೆ ಅಲ್ಲಿ ಸೇರಿದ್ದ ಜನತೆ ಹರ್ಷೋದ್ಗಾರದಿಂದ ಕರತಾಡನಗೈದರು. ಏಕೆಂದರೆ ಚಿಕ್ಕೋಡಿಯವರು ತಿಲಕರನ್ನು 'ಬಾಳಪ್ಪ' ಎಂದು ಯಾವಾಗಲೂ ಸಂಬೋಧಿಸಿದ್ದುಂಟು.[೯]

ಪಂಡಿತಪ್ಪ ಚಿಕ್ಕೋಡಿಯವರು ತಿಲಕ ಮತ್ತು ಮಹಾತ್ಮಾ ಗಾಂಧೀಜಿಯವರ ಎಲ್ಲಾ ವಿಚಾರಗಳನ್ನು ಒಪ್ಪುತ್ತಿರಲಿಲ್ಲ. ಖಂಡಿತವಾದಿಯಾಗಿದ್ದ ಪಂಡಿತಪ್ಪನವರು ಇವರೀರ್ವರ ಕೆಲವು ವಿಚಾರಗಳನ್ನು ಒಪ್ಪದೇ ತಮ್ಮ 'ವಿಭಾಕರ' ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು.

ಬಳ್ಳಾರಿಯಲ್ಲಿ ಜರುಗಿದ ಏಕೀಕರಣದ ಎರಡನೆಯ ಅಧಿವೇಶನದ ಅಧ್ಯಕ್ಷ ಶ್ರೀನಿವಾಸ ಅಯ್ಯಂಗಾರ ಅವರ ಭಾಷಣದ ನಂತರ ಕೆಲವು ಠರಾವುಗಳು ಪಾಸುಗೊಂಡವು. ಅವುಗಳೆಂದರೆ,

೧) ಕರ್ನಾಟಕ ಏಕೀಕರಣ ಸಮಿತಿಯನ್ನು (ಘಟನೆಯನ್ನು) ತಯಾರು ಮಾಡುವುದು.

೨) ಈ ವರ್ಷದಿಂದ ಅಂದರೆ ೧೯೨೬ರಿಂದ ೫೦೦೦ ಜನ ಹೊಸ ಸದಸ್ಯರನ್ನು ನೇಮಿಸಿಕೊಳ್ಳುವುದು.

೩) ೫೦೦೦ ರೂ. ದೇಣಿಗೆ ಸಂಗ್ರಹಿಸುವುದು.

೪) ಕನ್ನಡ ಸ್ಥಳವಾದ ಬಳ್ಳಾರಿಯನ್ನು ಆಂಧ್ರ ವಿಶ್ವವಿದ್ಯಾಲಯದವರು ತಮ್ಮ ಜಿಲ್ಲೆಯಲ್ಲಿ ತೆಗೆದುಕೊಂಡಿರುವುದನ್ನು ವಿರೋಧಿಸುವುದು.

೫) ಗಡಿನಾಡ ಜನತೆಯ ಕನ್ನಡ ಭಾಷೆಯ ಜಾಗೃತಿಗಾಗಿ ಒಂದು ಸಮಿತಿಯನ್ನು ನೇಮಿಸುವುದು.

೬) ಪ್ರಾಂತೀಯ ಮಟ್ಟದಿಂದಲೇ ಕರ್ನಾಟಕ ಏಕೀಕರಣ ಚಳುವಳಿಗೆ ಚಾಲನೆ ನೀಡುವಂತೆ ಮಾಡುವುದು.

ಕರ್ನಾಟಕ ಪ್ರಾಂತೀಯ ಪರಿಷತ್ತಿನ ೫ನೆಯ ಅಧಿವೇಶನದಲ್ಲಿ ನಿಶ್ಚಯಿಸಿದಂತೆ ಕರ್ನಾಟಕವನ್ನು ಒಂದುಗೂಡಿಸುವುದಕ್ಕಾಗಿ ಕರ್ನಾಟಕದ ಪ್ರತಿನಿಧಿಗಳು ಸರ್ವಪಕ್ಷ ಪರಿಷತ್ತಿನಲ್ಲಿ ಭಾಗವಹಿಸಿದ್ದರು. ಆ ಪ್ರತಿನಿಧಿಗಳಲ್ಲಿ ಪಂಡಿತಪ್ಪ ಚಿಕ್ಕೋಡಿಯವರು ಒಬ್ಬರು.[೧೦]

ಮುಂಬಯಿಯಲ್ಲಿ ಜರುಗಿದ ಸರ್ವಪಕ್ಷ ಪರಿಷತ್ತಿನ ಸಭೆಯಲ್ಲಿ ಭಾರತದ ರಾಜ್ಯಘಟನೆಯಲ್ಲಿ ಸೂಕ್ತ ಸುಧಾರಣೆಗಳನ್ನು ಮಾಡಬೇಕೆಂಬ ಸಂಯುಕ್ತ ಬೇಡಿಕೆಯನ್ನಿಡಲಾಯಿತು. ಅದಕ್ಕಾಗಿ ಸರಕಾರದಿಂದ ಒಂದು ಸಮಿತಿ ನೇಮಕಗೊಂಡಿತು. ಈ ರಾಜ್ಯ ಘಟನಾ ಸಮಿತಿಯು "ನೆಹರು ಸಮಿತಿ"ಯೆಂದು ಮುಂದೆ ಪ್ರಸಿದ್ಧವಾಯಿತು.

ಈ ನೆಹರು ಸಮಿತಿಯು ೬-೬-೧೯೨೮ರಿಂದ ಅಲಹಾಬಾದಿನಲ್ಲಿ ತನ್ನ ಕಾರ್ಯವನ್ನು ಮುಂದುವರೆಸಿತು. ಈ ಮುಂಚೆಯೇ ಕರ್ನಾಟಕ ಏಕೀಕರಣದ ಪ್ರಶ್ನೆಯನ್ನು ದೆಹಲಿಯಲ್ಲಿ ೧೨-೨-೧೯೨೮ ನೆಯ ದಿನ ಸೇರಿದ ಸರ್ವಪಕ್ಷ ಪರಿಷತ್ತಿನ ಮುಂದಿಡಲಾಗಿತ್ತು. ಆಗ ಕರ್ನಾಟಕದ ಪರವಾಗಿ ಶ್ರೀ ಹೊಸಕೊಪ್ಪ ಕೃಷ್ಣರಾಯರು ಹೋಗಿದ್ದರು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಕೌಜಲಗಿ ಶ್ರೀನಿವಾಸರಾಯರು ಮತ್ತು ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾದ ಚಿಕ್ಕೋಡಿ ಪಂಡಿತ ರಾಯಪ್ಪ ಎಂ.ಎಲ್.ಸಿ. ಅವರು ಅಂಕಿತ ಹಾಕಿದ ಏಕೀಕರಣ ಪತ್ರಿಕೆಯೊಂದನ್ನು ಅಚ್ಚು ಹಾಕಿಸಿ, ಅಲ್ಲಿ ಹಂಚಲಾಯಿತು. ಅದರಲ್ಲಿಯ ಅಂಕಿಸಂಖ್ಯೆ ಮೊದಲಾದವು ತಲೆದೂಗುವಂತಿದ್ದವು. ಶ್ರೀ ಹೊಸಕೊಪ್ಪ ಕೃಷ್ಣರಾಯರು ಪತ್ರಿಕೆಯಲ್ಲಿಯ ಅಂಶಗಳನ್ನು ಸಕಲರಿಗೂ ವಿವರಿಸಿ ವಿಷಯವನ್ನು ಬಿಂಬಿಸಿದರು.[೧೧]

೧೯೨೮ ಮೇ ೧೯ರಂದು ನೇಮಕಗೊಂಡ ನೆಹರು ಸಮಿತಿಯು ಆ ಸಂದರ್ಭದಲ್ಲಿ ಪ್ರಮುಖ ನೇತಾರರುಗಳಾಗಿದ್ದ ಡಾ.ಅನ್ಸಾರಿ, ಪಂಡಿತ ಮದನಮೋಹನ ಮಾಳವೀಯ, ಮೌಲಾನಾ ಅಬ್ದುಲ್

ಕಲಮ್ ಆಜಾದ್, ಸಿ.ವೈ. ಚಿಂತಾಮಣಿ, ಡಾ.ಕಿಚ್‌ಲ್ಯೂ ಮುಂತಾದವರ ಸಲಹೆ ಸೂಚನೆಗಳನ್ನು ಪಡೆದು ಸುಮಾರು ೨೫ ಬಾರಿ ಸಭೆ ಸೇರಿ ನಂತರ ಸಿದ್ಧಪಡಿಸಿದ ತನ್ನ ವರದಿಯನ್ನು ಬಿಡುಗಡೆ ಮಾಡಿತು. ಈ ವರದಿಯು ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರದೆ ಇಡೀ ಭಾರತದಲ್ಲಿ ಭಾಷಾವಾರು ಪ್ರಾಂತರಚನೆಯ ಅಗತ್ಯತೆಯನ್ನು ಪ್ರಸ್ತಾಪಿಸಿತು.

ಕಾಂಗ್ರೆಸ್ ಸಂಸ್ಥೆಯು ಸ್ವಾತಂತ್ರ್ಯ ಮತ್ತು ಸ್ವರಾಜ್ಯಗಳಿಗಾಗಿ ರಾಷ್ಟ್ರೀಯ ಚಳುವಳಿಯನ್ನು ಪ್ರಧಾನ ಮಾಡಿಕೊಂಡಿತ್ತು. ಜನರ ಭಾವನೆಗಳನ್ನು ಅಭಿವ್ಯಕ್ತಿಗೊಳಿಸುತ್ತಿದ್ದ ಕೆಲವು ಹಿರಿಯರ ಮತ್ತು ಗಣ್ಯರ ವಿಚಾರಗಳು ಭಾಷಾವಾರು ಪ್ರಾಂತರಚನೆ ಮತ್ತು ಆ ಮೂಲಕ ಕರ್ನಾಟಕ ಏಕೀಕರಣಕ್ಕೆ ಶ್ರಮಿಸುತ್ತಿದ್ದರೂ, ಸಂವಿಧಾನಾತ್ಮಕವಾಗಿ ಕಾರ್ಯ ನಿರ್ವಹಿಸುತ್ತಿದ್ದ ಕೇಂದ್ರ ಪ್ರಾಂತ್ಯ ಶಾಸನಸಭೆಗಳು ಈ ಬಗ್ಗೆ ದಿವ್ಯ ನಿರ್ಲಕ್ಷ್ಯದಿಂದಲೇ ಇದ್ದವು.

ಜನತೆಯ ಅಭಿಪ್ರಾಯ ಪ್ರೋತ್ಸಾಹಕವಾಗಿಲ್ಲ ಎಂಬ ಕಾರಣಕ್ಕಾಗಿ ಮುಂಬಯಿ ಸರ್ಕಾರವು ಕರ್ನಾಟಕ ರಚನೆಗೆ ಒಪ್ಪದಾಗಿತ್ತು. ೧೯೨೬ರ ಜುಲೈ ೧೨ನೆಯ ತಾರೀಖಿನ ಸರ್ಕಾರಿ ಪತ್ರವೊಂದು ದಕ್ಷಿಣಭಾಗದ ಕಮೀಷನ್‌ರಿಂದ ಕನ್ನಡ ಜನತೆಯು ಏಕೀಕರಣಕ್ಕೆ ಬೆಂಬಲ ನೀಡುತ್ತಿರುವುದೇ? ಎಂದು ತಿಳಿಯಲು ಬಯಸಿತು. ಕಮಿಷನರ್ ಉತ್ತರದ ಪ್ರಕಾರ ಏಕೀಕರಣಕ್ಕೆ ಕನ್ನಡಿಗರ ಬೆಂಬಲವಿರಲಿಲ್ಲ. ಇಂತಹ ಅಪ್ರಾಮಾಣಿಕ ನಡವಳಿಕೆಯ ಸರ್ಕಾರ ಏಕೀಕರಣವನ್ನು ಸಾಧಿಸಲು ಸಾಧ್ಯವೇ ಇರಲಿಲ್ಲ. ೧೯೨೦ರಲ್ಲಿ ರಾವ್‌ಬಹಾದ್ದೂರ ಎಸ್.ಟಿ. ಕಂಬಳಿಯವರು ಮುಂಬಯಿಯ ವಿಧಾನಪರಿಷತ್ತಿನಲ್ಲಿ ಕೇಳಿದ 'ಕರ್ನಾಟಕದ ಏಕೀಕರಣದ ಬಗ್ಗೆ ಸರ್ಕಾರಕ್ಕೆ ಏನು ತಿಳಿದಿದೆ? ಎಂಬ ಪ್ರಶ್ನೆಗೆ ಸರ್ಕಾರವು ೧೯೨೬ರಲ್ಲಿ ಸಿದ್ಧಪಡಿಸಿದ್ದ ಏಕೀಕರಣಕ್ಕೆ ಕನ್ನಡಿಗರ ಬೆಂಬಲವಿಲ್ಲ ಎಂಬ ಉತ್ತರವನ್ನು ನೀಡಿತು.[೧೨]

೧೯೨೦ರಲ್ಲಿ ಕರ್ನಾಟಕದ ಬಹುತೇಕ ಎಲ್ಲಾ ವರ್ಗ, ಮತ, ಧರ್ಮಗಳನ್ನು ಪ್ರತಿನಿಧಿಸುವ, ಏಕೀಕರಣದ ಪರವಾಗಿ ಆಸಕ್ತರಾಗಿರುವ ೩೪ ಜನ ನಾಯಕರು ಏಕೀಕರಣವನ್ನು ಬೆಂಬಲಿಸುವವರ ಸಹಿಯನ್ನು ಪಡೆದು ಸಾರ್ವತ್ರಿಕ ಮನವಿಯನ್ನು ಸಲ್ಲಿಸುವಲ್ಲಿ ಯಶಸ್ವಿಯಾದರು. ಏಕೀಕರಣವನ್ನು ಕುರಿತಂತೆ ಅವರೇ ವಿವಿಧ ಕ್ಷೇತ್ರಗಳಲ್ಲಿ ಆಸಕ್ತರಾದ ೨೦೦ ಜನ ಪ್ರಮುಖರಿಗೆ ಕಳುಹಿಸಿದ ಪ್ರಶ್ನಾವಳಿಗೆ ೧೨೫ಜನ ಉತ್ತರಿಸಿದರು. ಅವುಗಳಲ್ಲಿ ಕೇವಲ ಒಬ್ಬರ ಉತ್ತರ ಮಾತ್ರ ಏಕೀಕರಣವನ್ನು ಬೆಂಬಲಿಸುವಂತಿರಲಿಲ್ಲ.[೧೩] ಸರ್ಕಾರಕ್ಕೆ ಸಾರ್ವತ್ರಿಕ ಮನವಿಯನ್ನು ಸಲ್ಲಿಸಿದ ೩೪ ಜನ ಗಣ್ಯರಲ್ಲಿ ಶ್ರೀ ಪಂಡಿತಪ್ಪ ಚಿಕ್ಕೋಡಿಯವರೇ ಮೊದಲಿಗರಾಗಿದ್ದರು. ಇನ್ನುಳಿದವರೆಂದರೆ ಶ್ರೀ ಎಸ್.ಟಿ.ಕಂಬಳಿ, ವಿ.ಎನ್. ಜೋಗ, ಶ್ರೀ ಎ.ರಂಗನಾಥ, ಮೊದಲಿಯಾರ್, ಪಿ.ಜಿ.ಹಳಕಟ್ಟಿ ಮುಂತಾದ ರಾಜಕೀಯ ಗಣ್ಯರು ಮತ್ತು ಜಿಲ್ಲಾ ಲೋಕಲ್ ಬೋರ್ಡ ಅಧ್ಯಕ್ಷರು ಇದ್ದರು. ರಾಜಕೀಯ ಸಂಸ್ಥೆಯು ಏಕೀಕರಣದ ಸಲುವಾಗಿ ಆಸಕ್ತಿ ವಹಿಸಿದಾಗ ಶಾಸನ ಸಭೆ, ಶಾಸನ ವಿಧಾಯಕ ಸಭೆಗಳ ಸದಸ್ಯರು, ಪುರಸಭೆ, ಜಿಲ್ಲಾಬೋರ್ಡ ಇತ್ಯಾದಿಗಳ ಪ್ರಮುಖರು ಮುಂಚೂಣಿಯಲ್ಲಿರುವುದು ಅನಿವಾರ್ಯವಾಗಿತ್ತು. ಏಕೀಕರಣಕ್ಕೆ ರಾಜಕೀಯ

ಶಕ್ತಿಯ ಬೆಂಬಲ ಅತ್ಯವಶ್ಯ ಎಂಬ ಕಾರಣದಿಂದ ಈ ಇಳಿಜನ ಧುರಿಣರು ಮುಂಬಯಿ ಪ್ರಾಂತ್ಯ, ಮದ್ರಾಸ್ ಪ್ರಾಂತ್ಯ ಹಾಗೂ ಕೊಡಗು ಭಾಗಗಳನ್ನು ಪ್ರತಿನಿಧಿಸುವವರಾಗಿದ್ದರು.

ಘಟನಾ ಸಮಿತಿಯ ಸದಸ್ಯರಾಗಿ, ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾಗಿದ್ದ ಪಂಡಿತಪ್ಪ ಚಿಕ್ಕೋಡಿಯವರು ಬಳ್ಳಾರಿಯಲ್ಲಿ ನಡೆದ ಕರ್ನಾಟಕ ಏಕೀಕರಣ ಪರಿಷತ್ತಿನ ಎರಡನೆಯ ಅಧಿವೇಶನದ ನಿಯೋಜಿತ ಅಧ್ಯಕ್ಷರಾಗಿ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿದ್ದರು. ಅಲಹಾಬಾದಿನಲ್ಲಿ ಸೇರಿದ ಸರ್ವಪಕ್ಷ ಪರಿಷತ್ತಿನಲ್ಲಿ ಕರ್ನಾಟಕ ಏಕೀಕರಣದ ವಿಷಯವಾಗಿ ಕರಪತ್ರ ಹಂಚಿದರು. ಏಕೀಕರಣದ ಬಗ್ಗೆ ಕನ್ನಡಿಗರಲ್ಲಿ ಜಾಗೃತಿಯನ್ನುಂಟು ಮಾಡಿದರು. ಮುಂಬಯಿ ಪ್ರಾಂತ್ಯದ ಶಾಸನಸಭೆಯ ಸದಸ್ಯರಾಗಿ ಸರಕಾರಕ್ಕೆ ಕರ್ನಾಟಕ ಏಕೀಕರಣದ ಅವಶ್ಯಕತೆಯ ಬಗ್ಗೆ ಮನವಿ ಸಲ್ಲಿಸಿದ್ದರು. ಕರ್ನಾಟಕ ಏಕೀಕರಣದ ಕನಸನ್ನು ಕಂಡು, ಅದಕ್ಕಾಗಿ ತಮ್ಮನ್ನು ತಾವೇ ಸಮರ್ಪಿಸಿಕೊಂಡ ಪಂಡಿತಪ್ಪನವರು ಇಂದು ಕನ್ನಡಿಗರಿಗೆ ಅಪರಿಚಿತರಾಗುವ ಪರಿಸ್ಥಿತಿ ಬಂದೊದಗಿದೆ. ಸುವರ್ಣಕರ್ನಾಟಕ ಮಾಲೆಯ ಅಡಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು ಪ್ರಕಟಿಸಿದ 'ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು' ಗ್ರಂಥದಲ್ಲಿ ಪಂಡಿತಪ್ಪನವರ ಬಗ್ಗೆ ಯಾವ ಉಲ್ಲೇಖವೂ ಇಲ್ಲದಿರುವುದು ಅಚ್ಚರಿಯೆನಿಸುತ್ತದೆ. ರಂಗನಾಥ ದಿವಾಕರ ಅವರ 'ಕರ್ನಾಟಕ ಏಕೀಕರಣ ಕತೆ' ಮತ್ತು ಡಾ. ಎಚ್. ಎಸ್. ಗೋಪಾಲರಾವ್ ಅವರ 'ಕರ್ನಾಟಕ ಏಕೀಕರಣ ಇತಿಹಾಸ'ವನ್ನು ಆಧರಿಸಿ ಈ ಗ್ರಂಥವನ್ನು ರಚಿಸಿದೆ. ಇವೆರಡೂ ಪುಸ್ತಕಗಳಲ್ಲಿ ಪಂಡಿತಪ್ಪನವರ ಉಲ್ಲೇಖ ಬಂದಿದೆ. ಡಾ.ಎಚ್.ಎಸ್.ಗೋಪಾಲರಾವ್‌ರ ಕರ್ನಾಟಕ ಇತಿಹಾಸ ಪುಸ್ತಕದಲ್ಲಿ ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರುಗಳ ಭಾವಚಿತ್ರಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಚಿಕ್ಕೋಡಿ ಪಂಡಿತಪ್ಪನವರ ಭಾವಚಿತ್ರವನ್ನು ಸೇರಿಸಬೇಕಾಗಿತ್ತು. ಆದರೆ ಕರ್ನಾಟಕ ಏಕೀಕರಣ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಪಡೆಯಬೇಕಾಗಿದ್ದ ಪಂಡಿತಪ್ಪನವರನ್ನು ನೇಪಥ್ಯಕ್ಕೆ ಸರಿಯುವಂತೆ ಮಾಡಿದ್ದು ಖೇದಕರವೆಂದೇ ಹೇಳಬೇಕು.

ದೆಹಲಿಯಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆ ಭರದಿಂದ ನಡೆದಂತೆ, ಈ ಕಡೆ ಹರಿದುಹಂಚಿಹೋಗಿದ್ದ ಕರ್ನಾಟಕವನ್ನು ಒಂದುಗೂಡಿಸಲು ಅಲ್ಲಲ್ಲಿ ಸಮಿತಿಗಳನ್ನು ಮಾಡಿದ್ದರು. ಶ್ರೀ ಎಸ್.ನಿಜಲಿಂಗಪ್ಪನವರು ಅಖಿಲ ಕರ್ನಾಟಕ ಏಕೀಕರಣ ಮಹಾಸಮಿತಿಯ ಅಧ್ಯಕ್ಷರಾಗಿದ್ದರು. ಜೊತೆಗೆ ಶ್ರೀ ಬಿ.ಎನ್. ಮುನವಳ್ಳಿಯವರ ನೇತೃತ್ವದಲ್ಲಿ ಗಡಿನಾಡು ಮತ್ತು ಉತ್ತರಕರ್ನಾಟಕ ಕನ್ನಡ ಪ್ರಚಾರ ಸಮಿತಿ ಅಸ್ತಿತ್ವದಲ್ಲಿ ಬಂದಿತು. ರಬಕವಿಯಲ್ಲಿರುವ ಈ ಪ್ರಾಂತೀಯ ಸಮಿತಿಯ ಕಾರ್ಯಾಧ್ಯಕ್ಷರಾಗಿ ಶ್ರೀ ಚ.ಚ.ಅಬಕಾರ, ಸದಸ್ಯರಾಗಿ ಶ್ರೀ ರಾಮಪ್ಪ ಲ. ಚಿಕ್ಕೋಡಿ, ಶ್ರೀ ಗು.ರೇ ಬಾಮರಿ, ಶ್ರೀ ಸಿ.ಗಿ.ಸಾಬೋಜಿ, ಶ್ರೀ ಸ.ಮ.ಸಣಕಲ್ಲ, ಶ್ರೀ ತಿ.ವೀ.ಅರಬಳ್ಳಿಯವರು ಕೆಲಸ ನಿರ್ವಹಿಸಿದರು. ಇವರೆಲ್ಲ ಏಕೀಕರಣ ಸಮಿತಿಯ ಕಛೇರಿಯಿಂದ ಮುಖ್ಯ ಕಛೇರಿಗೆ ಆಗಾಗ ಧನಸಹಾಯ ಮಾಡಬೇಕಾಗುತ್ತಿತ್ತು. ಅಂತಹ

ಸಂದರ್ಭದಲ್ಲಿ ಚಿಕ್ಕೋಡಿ ರಾಮಪ್ಪನವರು ಎಂದೂ ಹಿಂದೆಮುಂದೆ ನೋಡದೇ ಧನಸಹಾಯ ಮಾಡಿದರು.

೫.೨. ಕರ್ನಾಟಕ ವಿದ್ಯಾವರ್ಧಕ ಸಂಘ:

ಕನ್ನಡನಾಡು ಅನ್ಯಭಾಷೆ, ಅನ್ಯಸಂಸ್ಕೃತಿಗಳ ಭಾರದಿಂದ ನಲುಗಿಹೋದ ಸಂದರ್ಭದಲ್ಲಿ ಬ್ರಿಟಿಷ್ ಅಧಿಕಾರಿಗಳಾದ ಎಲಿಯಟ್, ಫ್ಲೀಟ್, ರಸೆಲ್‌ರ ಜೊತೆಗೆ ಡೆಪ್ಯುಟಿ ಚೆನ್ನಬಸಪ್ಪನವರಂತಹ ದೇಶಿ ಅಧಿಕಾರಿಗಳ ಸತತ ಪರಿಶ್ರಮದಿಂದ ಕನ್ನಡ ಭಾಷೆ ಪುನಃಶ್ಚೇತನ ಪಡೆಯಿತು. ಅವರು ಮಾಡಿದ ಕನ್ನಡದ ಕೈಂಕರ್ಯದ ಕೆಲಸಗಳು ಮುಂದಿನ ಹಲವಾರು ಕನ್ನಡಿಗರಿಗೆ ಪ್ರೇರಣೆಯಾದವು. ಇದೇ ಸಂದರ್ಭದಲ್ಲಿ ಕನ್ನಡ ಮುಖಂಡರಾದ ಶ್ರೀ ರಾ.ಹ.ದೇಶಪಾಂಡೆ, ಶ್ರೀ ಹೊನ್ನಾಪುರಮಠ ಮೊದಲಾದವರು ಕನ್ನಡವನ್ನು ಉಳಿಸುವ ಪ್ರಯತ್ನದಲ್ಲಿ ಒಂದು ಸಾರ್ವಜನಿಕ ಸಂಸ್ಥೆಯ ಅವಶ್ಯಕತೆಯನ್ನು ಮನಗಂಡರು. ಅವರೆಲ್ಲರ ಪ್ರಯತ್ನದ ಫಲವಾಗಿ ಅಸ್ತಿತ್ವಗೊಂಡ ಸಂಸ್ಥೆಯೇ 'ಕರ್ನಾಟಕ ವಿದ್ಯಾವರ್ಧಕ ಸಂಘ'. ಧಾರವಾಡ, ಬೆಳಗಾವಿ ಪ್ರದೇಶಗಳಿಂದ ಪುಣೆ, ಮುಂಬಯಿ ನಗರಗಳಿಗೆ ವಿದ್ಯಾಭ್ಯಾಸಕ್ಕೆ ಹೋದ ಬಹುತೇಕ ಕನ್ನಡಿಗರು ಮರಾಠಿ ಜನರ ಅವಹೇಳನ, ಅಪಹಾಸ್ಯಗಳಿಂದ ನೋವನ್ನು ಅನುಭವಿಸುತ್ತಿದ್ದರು.[೧೪] ಈ ಪರಿಸ್ಥಿತಿ ಇಡೀ ಕರ್ನಾಟಕದ ವ್ಯಾಪ್ತಿಗೆ ವಿಸ್ತರಿಸಲ್ಪಟ್ಟಿತು. ಈ ಅನ್ಯಾಯ, ದೌರ್ಜನ್ಯವನ್ನು ಕಂಡ ಮುಖಂಡರು ೧೮೮೭ರಿಂದಲೇ ಕನ್ನಡಭಾಷೆಯ ದೀನಸ್ಥಿತಿಯನ್ನು ದೂರ ಮಾಡಲು ಒಂದು ಸಂಘವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದರು. ಅದರ ಫಲವಾಗಿ ಹಲವಾರು ಮುಖಂಡರ ಪ್ರಯತ್ನದಿಂದ ೧೮೯೦ರ ವೇಳೆಗೆ ಹಣ ಸಂಗ್ರಹವಾಯಿತು. ಧಾರವಾಡದ ಸುತ್ತಮುತ್ತಲೂ ಕನ್ನಡಭಾಷೆಗೆ ಹೊಸ ಚೇತನ ನೀಡಿದ ರಾ.ಹ.ದೇಶಪಾಂಡೆಯವರ ಜೊತೆಜೊತೆಗೆ ಶಾಮರಾವ ವಿಠ್ಠಲ ಕೈಕಿಣಿ, ವೆಂಕಟ ರಂಗೋ ಕಟ್ಟಿ, ಗುರುಸಿದ್ದಪ್ಪ ಗಿಲಗಂಚಿ, ಶ್ರೀನಿವಾಸರಾವ್, ರಾಮರಾವ್ ದೇಸಾಯಿ, ಶಾಂತವೀರಪ್ಪ ಮೆಣಸಿನಕಾಯಿ, ಶೇಷಗಿರಿರಾವ್ ಕೊಪ್ಪೀಕರ, ಗುರಾಚಾರ್ಯ ಮೊರಬ, ಧೋಂಡೋ ನರಸಿಂಹ ಮುಳಬಾಗಲ, ಶ್ರೀನಿವಾಸರಾವ್ ವಕೀಲ, ಗಂಗಾಧರ ಮಡಿವಾಳೇಶ್ವರ ತುರಮರಿ, ವಿರೂಪಾಕ್ಷಪ್ಪ ಹೂಲಿ, ಶಿವನಪ್ಪ ದೇಸಾಯಿ ಮುಂತಾದ ಗಣ್ಯರು ಶ್ರಮಿಸಿದರು.[೧೫] ಈ ಎಲ್ಲ ಮುಖಂಡರ ಜೊತೆ ತಮ್ಮಣ್ಣಪ್ಪನವರು ಕೂಡ ಸಹಕರಿಸಿ ದುಡಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆ ಮತ್ತು ಅದರ ಕಾರ್ಯಚಟುವಟಿಕೆಗಳು ಕನ್ನಡದ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿದ್ದವು. ಕನ್ನಡದ ಯಾವ ಕಾರ್ಯವೇ ಇರಲಿ, ಎಲ್ಲದರಲ್ಲೂ ಕ್ರಿಯಾಶೀಲರಾಗಿ ಕೆಲಸ ಮಾಡುವುದು ತಮ್ಮಣ್ಣಪ್ಪನವರ ಸ್ವಭಾವವೇ ಆಗಿತ್ತು.[೧೬] ತಮ್ಮಣ್ಣಪ್ಪನವರು ಕರ್ನಾಟಕ ವಿದ್ಯಾವರ್ಧಕ ಸಂಘದ ಅಭಿಮಾನಿಗಳಲ್ಲಿ ಒಬ್ಬರು ಹಾಗೂ ಆಜೀವ ಸದಸ್ಯರೂ ಆಗಿದ್ದರು. ಅಲ್ಲದೆ ಈ ಸಂಘದ ವ್ಯವಸ್ಥಾಪಕ ಸಭೆಯ ಸದಸ್ಯರಾದ ಅವರು ತಮ್ಮ ಭಾಗದ ಸಂಸ್ಥಾನಗಳಲ್ಲಿ ಕನ್ನಡದ ಬೆಳವಣಿಗೆಗಾಗಿ ಪ್ರಯತ್ನಿಸಿದರು.[೧೭]

ಕನ್ನಡದಲ್ಲಿ ಹಲವಾರು ಕೃತಿಗಳನ್ನು ಪ್ರಕಟಿಸಿದ ಕೀರ್ತಿ ವಿದ್ಯಾವರ್ಧಕ ಸಂಘದ್ದು. ಈ ಸಂಘವು ಪ್ರಕಟಪಡಿಸಿದ ಎಲ್ಲ ಪುಸ್ತಕಗಳನ್ನು ತಮ್ಮಣ್ಣಪ್ಪನವರು ತರಿಸಿಕೊಂಡು ಓದುತ್ತಿದ್ದರು. ತಮ್ಮಣ್ಣಪ್ಪನವರು ತಮ್ಮ ಮರಣಾನಂತರ ಲಿಂಗರಾಜ ಮಹಾವಿದ್ಯಾಲಯಕ್ಕೆ ದಾನಮಾಡಿದ ಅನೇಕ ಕೃತಿಗಳಲ್ಲಿ ವಿದ್ಯಾವರ್ಧಕ ಸಂಘವು ಪ್ರಕಟಿಸಿದ ಪುಸ್ತಕಗಳಿವೆ. ಆ ಪುಸ್ತಕಗಳ ಒಳಪುಟದಲ್ಲಿ ತ.ಸ.ಚಿಕ್ಕೋಡಿ ಎಂದು ಬರೆಯುವುದರ ಜೊತೆಗೆ ದಿನಾಂಕ, ತಿಂಗಳು ಮತ್ತು ವರ್ಷವನ್ನು ಕಡ್ಡಾಯವಾಗಿ ದಾಖಲಿಸಿದ್ದಾರೆ. ಇದು ತಮ್ಮಣ್ಣಪ್ಪನವರ ವೈಶಿಷ್ಟ್ಯ.

ಅಂದಿನ ಪರಿಸ್ಥಿತಿಯಲ್ಲಿ ಅಸ್ತಿತ್ವಕ್ಕೆ ಬಂದ ವಿದ್ಯಾವರ್ಧಕ ಸಂಘ ಎಂದೂ ಕೈಕಟ್ಟಿ ಕೂಡಲಿಲ್ಲ. ಕನ್ನಡಿಗರಿಗೆ ಕನ್ನಡವನ್ನು ಪರಿಚಯಿಸುವ ನಿಟ್ಟಿನಲ್ಲಿ ತನ್ನ ಇತಿಮಿತಿಯಲ್ಲಿ ಹತ್ತು ಹಲವಾರು ಯೋಜನೆಗಳನ್ನು ಹಾಕಿಕೊಂಡಿತ್ತು. ಸಂಘದ ಕಾರ್ಯಕಾರಿ ಮಂಡಳಿಯವರು ಕನ್ನಡದಲ್ಲಿ ಮಾತಾಡಿದವರಿಗೆ, ಕನ್ನಡದಲ್ಲಿ ಪ್ರಬಂಧ ಬರೆಯುವವರಿಗೆ, ಕನ್ನಡ ಹಾಡು ಹೇಳುವವರಿಗೆ ಬಹುಮಾನಗಳನ್ನು ಕೊಡುವ ಮೂಲಕ ಪ್ರೋತ್ಸಾಹ ನೀಡಿದರು. ಮುಂದೆ ಈ ಕಾರ್ಯ ವಿವಿಧಭಾಗಗಳಲ್ಲಿ ಪಸರಿಸಲಾರಂಭಿಸಿತು. ಸಂಘದ ಶ್ರೇಯೋಭಿವೃದ್ಧಿಗೆ ಸದಾ ಹಾರೈಸುತ್ತಿದ್ದ ತಮ್ಮಣ್ಣಪ್ಪನವರು ತಮ್ಮ ಕ್ಷೇತ್ರವಾದ ಬನಹಟ್ಟಿಯಲ್ಲಿ ಕನ್ನಡ ನಾಡು-ನುಡಿ-ಸಂಸ್ಕೃತಿಯ ಅಭಿವೃದ್ಧಿಗಾಗಿ ವಿದ್ಯಾವರ್ಧಕ ಸಂಘವು ಮಾಡುವ ಕೆಲಸಗಳನ್ನು ಮಾಡುತ್ತಿದ್ದರು. ಧಾರವಾಡದ ಸಂಘದ ಸದಸ್ಯನಾಗಿದ್ದು ಅಷ್ಟು ಕೆಲಸವನ್ನು ಮಾಡಿಮುಗಿಸಿಬಿಟ್ಟರೆ ಸಾಕು ಎನ್ನುವ ಜಾಯಮಾನ ತಮ್ಮಣ್ಣಪ್ಪನವರದಲ್ಲ. ಸಂಘದ ಶಕ್ತಿಯಾಗಿ ತಮ್ಮ ಕ್ಷೇತ್ರವನ್ನು ಉದ್ಧರಿಸಬೇಕಾದದ್ದು ತನ್ನ ಕರ್ತವ್ಯವೆಂದು ನಂಬಿದ್ದರು. ಹೀಗಾಗಿ ಹಬ್ಬ ಹರಿದಿನಗಳ ನೆಪ ಮಾಡಿಕೊಂಡು ಯುವಕರ ಗುಂಪು ಕಟ್ಟಿಕೊಂಡು ನಾಟಕ ಆಡುವುದು, ಬಯಲಾಟಗಳನ್ನು ಆಡುವುದು, ಲಾವಣಿ ಹಾಡಿಸುವುದು, ಹಾಡು ರಚಿಸುವುದು, ಕನ್ನಡದ ಶ್ರೇಯಸ್ಸಿಗಾಗಿ ದುಡಿಯುತ್ತಿರುವ ಸಾಹಿತಿಗಳನ್ನು ಕರೆಸಿ ಅವರಿಂದ ಕನ್ನಡಪರ ಭಾಷಣಗಳನ್ನು ಮಾಡಿಸುವುದು ತಮ್ಮಣ್ಣಪ್ಪನವರ ಕಾರ್ಯವೈಖರಿಯಾಗಿತ್ತು.

೧೯-೪-೧೮೯೫ರಂದು ಸಂಘದ ವ್ಯವಸ್ಥಾಪಕರ ಸಭೆಯು 'ವಾಗ್ಭೂಷಣ' ಎಂಬ ಮಾಸಪತ್ರಿಕೆಯನ್ನು ಪ್ರಕಟಿಸಲು ತೀರ್ಮಾನಿಸಿ, ಆ ಪ್ರಕಾರ ೧೮೯೬ರ ನವೆಂಬರ್ ತಿಂಗಳಿನಲ್ಲಿ ಮೊದಲ ಸಂಚಿಕೆಯನ್ನು ಪ್ರಕಟಿಸಿತು. ೧೯೨೪ರ ವರೆಗೆ 'ವಾಗ್ಭೂಷಣ' ಪತ್ರಿಕೆ ಚೆನ್ನಾಗಿಯೇ ನಡೆದು ಬಂದಿತು. ಇದು ಕನ್ನಡಿಗರ ವಿಚಾರ ವಿನಿಮಯದ ಪ್ರಮುಖ ಮಾಧ್ಯಮವಾಗಿತ್ತು. 'ವಾಗ್ಭೂಷಣ' ಬರಹಗಾರರ ಬಳಗದಲ್ಲಿ ಗಳಗನಾಥ, ಮುದವೇಡಕರ ಕೃಷ್ಣರಾವ್, ಗದಿಗೆಯ್ಯ ಹುಚ್ಚಯ್ಯ ಹೊನ್ನಾಪುರಮಠ, ಮ.ಪ್ರ.ಪೂಜಾರ್, ಫ.ಗು.ಹಳಕಟ್ಟಿ, ಸಿದ್ಧಾಂತಿ ಶಿವಶಂಕರಶಾಸ್ತ್ರಿ, ಬಿ.ವೆಂಕಟಚಾರ್ಯ ಅವರ ಜೊತೆಗೆ ಸಂಘದ ಬೆಳವಣಿಗೆಗೆ ಶ್ರಮಿಸಿದ ಎಲ್ಲ ಗಣ್ಯರು ಇದ್ದರು.[೧೮] ತಮ್ಮಣ್ಣಪ್ಪನವರು 'ವಾಗ್ಭೂಷಣ' ಪತ್ರಿಕೆಯ ಬಗ್ಗೆ ಅಪಾರ ಗೌರವಾದರಗಳನ್ನು ಇಟ್ಟುಕೊಂಡಿದ್ದರು. ಆ ಪತ್ರಿಕೆಯಲ್ಲಿಯ ವಿಷಯಗಳನ್ನು ಬನಹಟ್ಟಿಯ ಜನತೆಯ ಮುಂದೆ ಹೇಳುತ್ತಿದ್ದುದನ್ನು ಅಲ್ಲಿನ ಜನ ಈಗಲೂ ಜ್ಞಾಪಿಸಿಕೊಳ್ಳುತ್ತಾರೆ. ೧೯೨೪ರಲ್ಲಿ

'ವಾಗ್ಭೂಷಣ' ಪತ್ರಿಕೆಯು ಆರ್ಥಿಕ ಅಡಚಣೆಯ ಕಾರಣದಿಂದ ನಿಂತುಹೋದಾಗ ತಮ್ಮಣ್ಣಪ್ಪನವರು ಮಮ್ಮಲ ಮರುಗಿದರು. ಈ ವಿಷಯವಾಗಿ ತಮ್ಮ ಅಳಿಯ ಹಳಕಟ್ಟಿಯವರಲ್ಲಿ ದುಗುಡವನ್ನು ತೋಡಿಕೊಂಡರು. ಕನ್ನಡಿಗರ ನಿರಭಿಮಾನವನ್ನು ಹಳಿದರು. ಕನ್ನಡ ಪತ್ರಿಕೆಗಳನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವೆಂದೇ ಅವರು ಭಾವಿಸಿದ್ದರು.

ಈ ಸಂಘವು ಮಾಡಿದ ಮಹತ್ವದ ಇನ್ನೊಂದು ಕೆಲಸವೆಂದರೆ ಪುಣೆಯಲ್ಲಿ ೧೮೯೬ರ ನವೆಂಬರ್೨೩–೨೫ರ ವರೆಗೆ ಇನ್ಸ್‌ಪೆಕ್ಟರುಗಳ ಸಭೆ ಸೇರುವುದಿತ್ತು. ಈ ಸಂದರ್ಭದಲ್ಲಿ ಸಂಘವು 'ಕನ್ನಡ ಶಾಲೆಗಳಲ್ಲಿ ಬಾಳಬೋಧ ಅಕ್ಷರಗಳನ್ನು ಮರಾಠಿ ಭಾಷೆಯಲ್ಲಿ ಕಲಿಸುವ ಅವಶ್ಯಕತೆ ಇಲ್ಲ' ಎಂಬ ಠರಾವನ್ನು ಕಳಿಸಬೇಕೆಂದು ನಿರ್ಧರಿಸಲಾಯಿತು. ಏಕೆಂದರೆ ರಸೆಲ್ ಅವರು ಕನ್ನಡಕ್ಕೆ ಅಗ್ರಸ್ಥಾನ ಇರಬೇಕೆಂದು ಮಾಡಿದ್ದ ವ್ಯವಸ್ಥೆಯನ್ನು ನಂತರ ಬಂದ ಅಧಿಕಾರಿಗಳು ಕೈಬಿಟ್ಟು ಹೊಸದಾಗಿ ತಂದ ಹಳೆಯ ಸ್ಥಿತಿಯನ್ನು ಸಂಘ ವಿರೋಧಿಸಿತು.[೧೯] ಈ ನಿಟ್ಟಿನಲ್ಲಿ ಸತತ ಪ್ರಯತ್ನ ಮಾಡಿದ ಸದಸ್ಯರುಗಳಲ್ಲಿ ತಮ್ಮಣ್ಣಪ್ಪನವರೂ ಒಬ್ಬರು.

ಸಂಘದ ಸದಸ್ಯರು ಉತ್ತರ ಕರ್ನಾಟಕಕ್ಕೆ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂದು ಬಲತ್ತರವಾದ ಆಶೆಯನ್ನು ಹೊಂದಿದ್ದರು. ಈ ಮಾತನ್ನು ತಮ್ಮಣ್ಣಪ್ಪನವರೂ ಹೇಳುತ್ತಿದ್ದುದನ್ನು ತಮ್ಮ ತಂದೆಯವರು ಹೇಳುತ್ತಿದ್ದರೆಂದು ಪ್ರೊ. ಜಯವಂತ ಕಾಡದೇವರ ಅವರು ಜ್ಞಾಪಿಸಿಕೊಳ್ಳುತ್ತಾರೆ.

ತಮ್ಮಣ್ಣಪ್ಪನವರು 'ಕರ್ನಾಟಕ ವಿದ್ಯಾವರ್ಧಕ ಸಂಘ'ದ ಜೊತೆ ಹೊಂದಿದ್ದ ನಿಕಟ ಸಂಪರ್ಕವನ್ನು ಬನಹಟ್ಟಿಯ ಜನತೆ ಈಗಲೂ ನೆನಪಿಸಿಕೊಳ್ಳುತ್ತಾರೆ. ಬನಹಟ್ಟಿಯ ಇಂದಿನ ಹಿರಿಯರು ತಮ್ಮ ತಂದೆಯವರಿಂದ ಕೇಳಿದ ಎಷ್ಟೋ ವಿಷಯಗಳಲ್ಲಿ ತಮ್ಮಣ್ಣಪ್ಪನವರು ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕ್ರಮಗಳ ನಿಮಿತ್ಯವಾಗಿ ಆಗಾಗ ಧಾರವಾಡಕ್ಕೆ ಹೋಗುತ್ತಿದ್ದುದೂ ಒಂದೆಂದು ಹೇಳುತ್ತಾರೆ. ಅಷ್ಟೇಅಲ್ಲ, ಇಂತಹ ಘಟನೆಗಳನ್ನು ನೆನಪು ಮಾಡಿಕೊಳ್ಳುವುದು ಬನಹಟ್ಟಿಯ ಜನತೆಗೆ ಒಂದು ಹೆಮ್ಮೆಯ ಸಂಗತಿಯಾಗಿತ್ತು.[೨೦]

೫.೩. ಕನ್ನಡ ಸಾಹಿತ್ಯ ಪರಿಷತ್ತು:

೧೮೯೦ರಲ್ಲಿ ಸ್ಥಾಪಿತವಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಲೇಖಕರನ್ನು ಬೆಳೆಸಿದುದಲ್ಲದೆ, ಅಖಿಲ ಕರ್ನಾಟಕ ಮಟ್ಟದ ಗ್ರಂಥಕರ್ತರ ಸಮ್ಮೇಳನಗಳನ್ನು ನಡೆಸಲಾರಂಭಿಸಿತು. ಮೊದಲ ಮತ್ತು ಎರಡನೆಯ ಸಮ್ಮೇಳನಗಳು ಧಾರವಾಡದಲ್ಲಿ ಜರುಗಿದವು. ಗ್ರಂಥಕರ್ತರ ಮೂರನೆಯ ಸಮ್ಮೇಳನವಾದರೂ ಬೆಂಗಳೂರಿನಲ್ಲಿ ನಡೆಯಬೇಕೆಂದು ಧಾರವಾಡದ ಹಲವಾರು ವಿದ್ವಾಂಸರು, ಆಸಕ್ತರು ಪ್ರಯತ್ನಿಸಿದರು. ಈ ಪ್ರಯತ್ನ ಒಂದುಗೂಡಿ ಕನ್ನಡಿಗರಿಗೆ 'ಸಾಹಿತ್ಯ ಪರಿಷತ್ತಿ'ನ ಅವಶ್ಯಕತೆ ಇದೆ ಎಂಬುದನ್ನು ತಿಳಿಯಲು ಕಾರಣವಾಯಿತು. ಮುಂದೆ ಕನ್ನಡನಾಡಿನ ಕೇಂದ್ರವೆನಿಸಿದ ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿದ್ದ ಎಂ.ವಿಶ್ವೇಶ್ವರಯ್ಯನವರು ಕನ್ನಡ ಭಾಷಿಕರ ಸಮಗ್ರ ಅಭಿವೃದ್ಧಿಯ ಕನಸನ್ನು ಕಂಡ ಆ ನಿಟ್ಟಿನಲ್ಲಿ ಪ್ರಯತ್ನಿಸುವಲ್ಲಿ ಸ್ಥಾಪನೆಗೊಂಡ ಸಂಸ್ಥೆಯೇ 'ಕನ್ನಡ ಸಾಹಿತ್ಯ ಪರಿಷತ್ತು.'

ಈ ಸಂಸ್ಥೆಯ ಬೆಳವಣಿಗೆಯಲ್ಲಿ ಪಂಡಿತರು, ಪಾಮರರು, ಮಂತ್ರಿಗಳು, ಸಾಮಾನ್ಯರು, ಶ್ರೀಮಂತರು, ಮಹಿಳೆಯರು, ಕಡುಬಡವರು ಎಲ್ಲರೂ ತೊಡಗಿದರು. ಆ ಕಾರಣವಾಗಿ ನಮ್ಮ ತಾಯಿನುಡಿ ಬೆಳೆಯಿತು.[೨೧] ತಮ್ಮಣ್ಣಪ್ಪನವರು ಈ ಸಂಸ್ಥೆಯೊಂದಿಗೆ ಗಾಢ ಸಂಬಂಧವನ್ನು ಹೊಂದಿದ್ದರು.

ಬನಹಟ್ಟಿಯ ಜನತೆ ಇಂದಿಗೂ ತಮ್ಮಣ್ಣಪ್ಪನವರನ್ನು ಗುರುತಿಸುವುದು ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ. ಕನ್ನಡ ಸಾಹಿತ್ಯ ಪರಿಷತ್ತು ಎಂದರೆ ತಮ್ಮಣ್ಣಪ್ಪನವರ ಜೀವನಾಡಿಯೇ ಆಗಿತ್ತು. '೧೯೧೫ ಮೇ ೫ನೆಯ ತಾರೀಖಿನಂದು ಕನ್ನಡ ಸಾಹಿತ್ಯ ಪರಿಷತ್ತು ವಿಧಿವತ್ತಾಗಿ ಸ್ಥಾಪಿತವಾದಾಗ, ತಮಣ್ಣಪ್ಪನವರು ಅದರ ಪ್ರಥಮ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿದ್ದರು.[೨೨] ಜೀವಿತಾವಧಿಯವರೆಗೂ ಅವರು ಆ ಸದಸ್ಯತ್ವವನ್ನು ಉಳಿಸಿಕೊಂಡಿದ್ದರು. ಪ್ರತಿವರ್ಷ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ತಪ್ಪದೇ ಹಾಜರಾಗುತ್ತಿದ್ದರು. ತಮ್ಮ ಠರಾವುಗಳನ್ನು ಸಮ್ಮೇಳನಾಧ್ಯಕ್ಷರ ಮುಂದಿಟ್ಟು ಅವುಗಳನ್ನು ಪಾಸು ಮಾಡಿಸುತ್ತಿದ್ದರು. ಕೆಲವೊಮ್ಮೆ ಕನ್ನಡಪರ ಭಾಷಣಗಳನ್ನು ಮಾಡಿ ಪ್ರೇಕ್ಷಕರ ಗಮನ ಸೆಳೆಯುತ್ತಿದ್ದರು.

ಮೊದಲನೆಯ ಕನ್ನಡ ಸಾಹಿತ್ಯ ಸಮ್ಮೇಳನವು ೧೯೧೫ ಮೇ ತಿಂಗಳ ೩ನೆಯ ತಾರೀಖಿನ ಅಪರಾಹ್ನ ೩ಗಂಟೆಗೆ ಬೆಂಗಳೂರಿನ ಗೌವರ್ನಮೆಂಟ್ ಹೈಸ್ಕೂಲಿನ ವಿಶಾಲವಾದ ಹಜಾರದಲ್ಲಿ ವಿಜೃಂಭಣೆಯಿಂದ ಜರುಗಿತು. "ಕರ್ನಾಟಕದ ನಾನಾ ಪ್ರಾಂತಗಳ ಪ್ರಮುಖರು ವಿದ್ವಾಂಸರು ಮತ್ತು ಪ್ರತಿನಿಧಿಗಳು ಸಮ್ಮೇಳನಕ್ಕೆ ದಯಮಾಡಿಸಿದ್ದರು. ಸಮ್ಮೇಳನದ ಮೂರನೆಯ ದಿನ ಪರಿಷತ್ತಿನ ರಚನಾಕ್ರಮವು ಮತ್ತು ನಿಬಂಧನೆಗಳು ಜಿಜ್ಞಾಸೆಪೂರ್ವಕವಾಗಿ ತೀರ್ಮಾನವಾದ ನಂತರ, ಮತಪತ್ರಗಳ ಬಳಕೆ ಮೂಲಕ ಕಾರ್ಯಕಾರಿ ಸಮಿತಿ ಆಯ್ಕೆಗೆ ಚುನಾವಣೆ ನಡೆಯಿತು. ಆಯ್ಕೆಯಾದ ಕಾರ್ಯಕಾರಿ ಸಮಿತಿಯಲ್ಲಿ ಅಧ್ಯಕ್ಷರಾಗಿ ರಾಜಮಂತ್ರ ಪ್ರವೀಣ ಎಚ್.ವಿ.ನಂಜುಂಡಯ್ಯನವರು, ಉಪಾಧ್ಯಕ್ಷರಾಗಿ ರಾವ್‌ಬಹದ್ದೂರ್ ಎಂ. ಶಾಮರಾಯರು, ಕೋಶಾಧ್ಯಕ್ಷರಾಗಿ ಡಾಕ್ಟರ್ ಪಿ.ಎಸ್.ಅಚ್ಯುತರಾವ್, ಕಾರ್ಯದರ್ಶಿಯಾಗಿ ಬಿ.ಕೃಷ್ಣಪ್ಪ ಅವರು ಆಯ್ಕೆಗೊಂಡರು. ಮೈಸೂರು ಸಂಸ್ಥಾನದಿಂದ ೧೨ಜನ, ಬೊಂಬಾಯಿ ಅಧಿಪತ್ಯದಿಂದ ೮ಜನ, ಮದರಾಸು ಅಧಿಪತ್ಯದಿಂದ ೫ಜನ, ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಂದ ಇಬ್ಬರು, ಹೈದರಾಬಾದ ಕರ್ನಾಟಕ ಸಂಸ್ಥಾನದಿಂದ ಇಬ್ಬರು ಮತ್ತು ಕೊಡಗು ಪ್ರಾಂತದಿಂದ ಒಬ್ಬರಂತೆ ಒಟ್ಟು ೩೦ಜನ ಪ್ರತಿನಿಧಿಗಳು ಕನ್ನಡ ಕೆಲಸಕ್ಕಾಗಿ ಆಯ್ಕೆಯಾದರು. ಅವರಲ್ಲಿ ತಮ್ಮಣ್ಣಪ್ಪ ಚಿಕ್ಕೋಡಿಯವರು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಂದ ಆಯ್ಕೆಯಾದರಲ್ಲದೆ, ಸಾಹಿತ್ಯ ಪರಿಷತ್ತಿನಲ್ಲಿ ಒಂದು ವಿಶಿಷ್ಟವಾದ ಸ್ಥಾನವನ್ನು ಗಳಿಸಿಕೊಂಡಿದ್ದರು.

ಈ ಸಮ್ಮೇಳನದಲ್ಲಿ ತಮ್ಮಣ್ಣಪ್ಪನವರು ಎರಡು ಠರಾವುಗಳನ್ನು ಅಧ್ಯಕ್ಷರಾದ ಶ್ರೀ ಎಚ್.ವಿ.ನಂಜುಂಡಯ್ಯನವರ ಮುಂದೆ ಇಟ್ಟರು. ವಿಶೇಷವೆಂದರೆ ಆ ಎರಡು ಠರಾವುಗಳು ಅಧ್ಯಕ್ಷರಿಂದ ಪಾಸಾಗಿ ಬಂದವು. ಅವು:

"ಕನ್ನಡವೇ ಮಾತೃಭಾಷೆಯಾಗಿರುವ ಮಕ್ಕಳು ಕೆಲವು ಕನ್ನಡ ನಾಡು ಸಂಸ್ಥಾನಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕನ್ನಡ ಮೂಲಕವಾಗದೆ ಬೇರೊಂದು ಭಾಷೆಯ ಮೂಲಕ ಹೊಂದುತ್ತಿರುವದು ಅನುಚಿತವಾಗಿರುವದರಿಂದ, ಕನ್ನಡನಾಡಿನ ಸರಕಾರಗಳು ಕನ್ನಡದಲ್ಲಿಯೇ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಾಠಶಾಲೆಗಳಲ್ಲಿ ನಡೆಯಿಸಬೇಕೆಂದು ಪ್ರಾರ್ಥಿಸಲ್ಪಡಬೇಕು"

"ಬೊಂಬಾಯಿ, ಮದರಾಸು, ಹೈದರಾಬಾದು ಮತ್ತು ಕೊಡಗು ಪ್ರಾಂತ್ಯಗಳಲ್ಲಿ ಕೋರ್ಟು ಕಚೇರಿಗಳಲ್ಲಿ ಕನ್ನಡವು ರಾಜಕೀಯ ಭಾಷೆಯಾಗಿಲ್ಲದಿರುವುದರಿಂದ ಕನ್ನಡವೇ ಮಾತೃಭಾಷೆಯಾಗಿರುವ ಜನರಿಗೆ ಬಹಳ ಅನಾನುಕೂಲವಾಗಿರುವದರಿಂದ ಇವುಗಳನ್ನು ನಿವಾರಣೆ ಮಾಡುವುದಕ್ಕಾಗಿ ಸಾಧ್ಯವಾಗುವ ಮಟ್ಟಿಗೆ ಕನ್ನಡವೇ ಕನ್ನಡನಾಡುಗಳ ಕೋರ್ಟು ಕಚೇರಿಗಳಲ್ಲಿ ರಾಜಕೀಯ ಭಾಷೆಯಾಗುವಂತೆ ಅನುಗ್ರಹಿಸಿ ಏರ್ಪಾಡುಗಳನ್ನು ಮಾಡಬೇಕೆಂದು ಸರಕಾರಗಳನ್ನು ಈ ಸಮ್ಮೇಳನವು ಬೇಡಿಕೊಳ್ಳಬೇಕು."[೨೩] ಈ ಎರಡು ವಿಷಯಗಳನ್ನು ಗಮನಿಸಿದಾಗ ರಾಜಕೀಯ ಭಾಷೆಗಿಂತ ಮಾತೃಭಾಷೆಗೆ ಆದ್ಯತೆ ಕೊಡಬೇಕೆಂಬ ತಮ್ಮಣ್ಣಪ್ಪನವರ ವಿಚಾರ ಸ್ಪಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ಅವರು ಸಾಹಿತ್ಯ ಸಮ್ಮೇಳನಗಳು ಪ್ರಾರಂಭವಾದಾಗಿನಿಂದ ಸತತ ಪ್ರಯತ್ನ ಪಡುತ್ತಲೇ ಇದ್ದರು.

ಧಾರವಾಡದಲ್ಲಿ ೧೯೧೮ರಲ್ಲಿ ಜರುಗಿದ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮಣ್ಣಪ್ಪನವರು "ದೇಶಿಯ ಸಂಸ್ಥಾನಗಳೊಳಗಿನ ಕನ್ನಡ ಭಾಷೆಯ ಸ್ಥಿತಿಯು" ಎಂಬ ವಿಷಯದ ಮೇಲೆ ಪ್ರಬಂಧವನ್ನು ಪ್ರಸ್ತುತ ಪಡಿಸಿದರು. ಇಡಿ ಪ್ರಬಂಧದುದ್ದಕ್ಕೂ ಹರಿದು ಹಂಚಿಹೋಗಿರುವ ಕನ್ನಡನಾಡು, ಸಂಸ್ಥಾನಿಕರ ಮನೋಧರ್ಮ ಮತ್ತು ಅದಕ್ಕೆ ಪರಿಹಾರಗಳು ಇವುಗಳನ್ನು ಕುರಿತ ಚಿಂತನೆ ಹರಿದುಬಂದಿದೆ. ತಮ್ಮಣ್ಣಪ್ಪನವರ ಪ್ರಕಾರ ಪ್ರಜೆಗಳು ರಾಜರಿಂದ ಬಹಳಷ್ಟು ಸಂಗತಿಗಳನ್ನು ಬಯಸುತ್ತಿದ್ದರೂ ಅವುಗಳಲ್ಲಿ ಭಾಷಾವಿಷಯಕವಾದ ಎರಡು ಸಂಗತಿಗಳು ಮುಖ್ಯವಾಗಿವೆ. ಒಂದು, ಪ್ರಜೆಗಳ ಮಾತೃಭಾಷೆಯೇ 'ರಾಜಕೀಯ ಭಾಷೆಯಾಗಿರುವುದು'. ಇನ್ನೊಂದು "ಪ್ರಜೆಗಳಿಗೆ ಅವರ ಮಾತೃಭಾಷೆಯೊಳಗೇ ಎಲ್ಲ ಶಿಕ್ಷಣವು ದೊರೆಯಬೇಕೆಂಬುದು."[೨೪] ಆದರೆ ಕನ್ನಡನಾಡಿನ ಸ್ಥಿತಿ ಸಂಸ್ಥಾನಿಕರ ಕೈಯಲ್ಲಿ ಸಿಕ್ಕು ತುಂಬಾ ಶೋಚನೀಯವಾಗಿತ್ತು. ತಮ್ಮಣ್ಣಪ್ಪನವರು ಇದನ್ನು ಅಂಕಿ ಅಂಶಗಳಿಂದ ನಿಖರವಾಗಿ ಮಂಡಿಸುತ್ತಾರೆ. ಕನ್ನಡನಾಡಿನ ಪ್ರದೇಶಗಳು, ಅವುಗಳ ಒಟ್ಟು ಜನಸಂಖ್ಯೆ ಮತ್ತು ಅದರಲ್ಲಿ ಕನ್ನಡ ಮಾತನಾಡುವ ಜನರ ಸಂಖ್ಯೆ ಇವುಗಳನ್ನು ಎದುರಿಗಿಟ್ಟುಕೊಂಡು, ಸಂಸ್ಥಾನಿಕರ ಕೈಯಲ್ಲಿ ಕನ್ನಡಿಗರು ಒಂದು ಕಡೆ ಉರ್ದು, ಇನ್ನೊಂದು ಕಡೆ ತೆಲಗು, ಮಗದೊಂದು ಕಡೆ ಮರಾಠಿ ಹೀಗೆ ಸಿಕ್ಕು ಒದ್ದಾಡುತ್ತಿರುವದನ್ನು ತೀವ್ರವಾಗಿ ಖಂಡಿಸಿದರು. ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಕನ್ನಡಭಾಷೆಯು ಕನ್ನಡಿಗರ ಪಾಲಿಗೆ ಇಲ್ಲದಂತಾಗಿದೆ. ಸ್ವಭಾಷಾ ಮಹಿಮೆಯನ್ನು ಅರಿಯದ ಕನ್ನಡಿಗರು ಪರಭಾಷಾಮೋಹಕ್ಕೆ ಒಳಗಾಗಿ, ಅವುಗಳ ಬಹಿರಾಡಂಬರಕ್ಕೆ ಮರುಳಾಗಿ, ಸ್ವಭಾಷಾಂತರ್ಗತ ಜ್ಞಾನಸಂಗ್ರಹವನ್ನು ತುಚ್ಛೀಕರಿಸಿ ಮಾತೃದ್ರೋಹ ಎಸಗುತ್ತಿರುವುದನ್ನು ತಮ್ಮಣ್ಣಪ್ಪನವರು ವಿರೋಧಿಸಿದರಲ್ಲದೆ, ಅದನ್ನು ವಿದ್ವತ್ತಪೂರ್ಣವಾಗಿ ಈ ಸಮ್ಮೇಳನದಲ್ಲಿ ಮಂಡಿಸಿದರು.

೧೯೨೧ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಏಳನೆಯ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ತಮ್ಮಣ್ಣಪ್ಪನವರು ಜಮಖಂಡಿ ಸಂಸ್ಥಾನವು ಕನ್ನಡಭಾಷೆಯ ಮೂಲಕ ಶಿಕ್ಷಣವನ್ನು ಕೊಡಬೇಕು. ಜೊತೆಗೆ ರಾಮದುರ್ಗ, ಮುಧೋಳ ಮುಂತಾದ ಸಂಸ್ಥಾನಗಳ ಕೋರ್ಟು ಕಚೇರಿಗಳ ವ್ಯವಹಾರಗಳೂ ಪಾಠಶಾಲೆಗಳಲ್ಲಿಯ ಶಿಕ್ಷಣವೂ ಕನ್ನಡಭಾಷೆಯಲ್ಲಿಯೇ ನಡೆಯಬೇಕೆಂಬ ವಿಷಯವನ್ನು ಠರಾವಿನ ಮೂಲಕ ಅಧ್ಯಕ್ಷರ ಮುಂದಿಟ್ಟರು. ಅದರಂತೆ 'ಜಮಖಂಡಿ ಸಂಸ್ಥಾನಾಧಿಪತಿಗಳು ಅವರ ರಾಜ್ಯದಲ್ಲಿ ಕನ್ನಡಭಾಷೆಯ ಶಿಕ್ಷಣವನ್ನು ಪ್ರಾರಂಭಿಸಿರುವ ವಿಷಯಕವಾಗಿ ಸಮ್ಮೇಳನದಲ್ಲಿ ಅವರಿಗೆ ಅಭಿನಂದನೆಗಳನ್ನು ಸಮರ್ಪಿಸಲಾಯಿತು.'[೨೫]

ಒಂಬತ್ತನೆಯ ಕನ್ನಡ ಸಾಹಿತ್ಯಸಮ್ಮೇಳನವು ೧೯೨೩ರಲ್ಲಿ ವಿಜಾಪುರದಲ್ಲಿ ಜರುಗಿತು. ಶ್ರೀ ಸಿದ್ಧಾಂತ ಶಿವಶಂಕರ ಶಾಸ್ತ್ರಿಯವರು ಅಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ತಮ್ಮಣ್ಣಪ್ಪನವರು ಮಾತನಾಡುತ್ತ "ಕನ್ನಡಿಗರ ಏಳಿಗೆಗೆ ಆಧಾರಭೂತವಾದ ಕನ್ನಡದ ಪರಿಸ್ಥಿತಿಯನ್ನು ತಿದ್ದುವ ಕಾರ್ಯವು ಒಂಬತ್ತು ವರ್ಷಗಳಿಂದ ನಡೆಯುತ್ತಿದೆ. ಕನ್ನಡ ದೇಶದ ಉದ್ಧಾರಕ್ಕೆ ವಿಜಾಪುರ ಪ್ರಾಂತದವರು ಬಹುಕಾಲದಿಂದ ಪ್ರಯತ್ನ ಪಡುತ್ತಿರುವರು. ಆದರೆ ಈ ಪ್ರಯತ್ನವು ಸಾಲದು. ಕನ್ನಡಕ್ಕೆ ಮುಖ್ಯಸ್ಥಾನವಾದ ಈ ಪ್ರಾಂತ್ಯದಲ್ಲಿ ಮರಾಠಿಯು ಮುಖ್ಯಭಾಷೆಯಾಗಿರುವುದು. ಆದುದರಿಂದಲೇ ಇಲ್ಲಿ ಕನ್ನಡಕ್ಕೆ ತಕ್ಕಷ್ಟು ಪ್ರೋತ್ಸಾಹವು ದೊರೆತಿಲ್ಲ. ಕನ್ನಡ ಭಾಷೆಯಲ್ಲಿ ಮಹಾರಾಷ್ಟ್ರ ಭಾಷೆಯಲ್ಲಿರುವಷ್ಟು ಗ್ರಂಥಗಳಿಲ್ಲ; ಇರುವ ಗ್ರಂಥಗಳನ್ನು ನೋಡುವವರಿಲ್ಲ. ಮ॥ರಾ॥ನರಸಿಂಹಾಚಾರ್ಯರು ಬರೆದಿರುವ ಅಮೂಲ್ಯವಾದ 'ಕನ್ನಡ ಕವಿಚರಿತೆ'ಯು ಈ ಪ್ರಾಂತದಲ್ಲಿ ತಕ್ಕಷ್ಟು ಪ್ರಚಾರಕ್ಕೆ ಬಂದಿರುವಂತೆ ತೋರುವುದಿಲ್ಲ. ಕಾರಣ ಮೈಸೂರಿನವರಿಂದಲೇ ಅದಕ್ಕೆ ಪರಿಣಾಮವಾಗಬೇಕೆಂದು, ಮ॥ರಾ॥ಶಿವಶಂಕರಶಾಸ್ತ್ರಿಗಳವರು ಕನ್ನಡ ಪಂಡಿತರಲ್ಲಿ ಶ್ರೇಷ್ಠರಾಗಿದ್ದು; ಅವರು ಇಪ್ಪತ್ತು ವರ್ಷಗಳ ಹಿಂದೆ ಬರೆದಿರುವ 'ನಳೋಪಾಖ್ಯಾನ'ದ ಪ್ರಥಮ ಭಾಗವನೋದಿದರೆ ಮನಃಖೇದವೆಲ್ಲವೂ ಹೋಗುವಂತಿದೆ. ಅಂತಹ ಮಹನೀಯರು ಈ ಸಮ್ಮೇಳನದ ಅಗ್ರಸ್ಥಾನಾಧಿಪತ್ಯಕ್ಕೆ ದೊರೆತುದು ನಮ್ಮ ಪುಣ್ಯೋದಯವೆಂದು ಹೇಳಿದರು.[೨೬]

ಈ ಸೂಚನೆಯು ಎಲ್ಲರಿಂದಲೂ ಮಾನ್ಯವಾಗಿ ಮ॥ರಾ॥ಶಿವಶಂಕರಶಾಸ್ತ್ರಿಗಳವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ತಮ್ಮ ಭಾಷಣ ಮಾಡಿದರು. ಹೀಗೆ ಸಾಹಿತ್ಯ ಸಮ್ಮೇಲನಗಳಲ್ಲಿ ತಮ್ಮಣ್ಣಪ್ಪನವರು ನೀಡಿದ ಸೂಚನೆಯನ್ನು ಸಾಕಷ್ಟು ಗಣ್ಯಮಹನೀಯರು ಒಪ್ಪಿಕೊಳ್ಳುತಿದ್ದರೆಂದರೆ, ತಮ್ಮಣ್ಣಪ್ಪನವರ ವ್ಯಕ್ತಿತ್ವದ ಅಗಾಧತೆಯನ್ನು ನಾವು ಗುರುತಿಸಬೇಕು. ಮರಾಠಿಯಲ್ಲಿ ಶಿಕ್ಷಣ ಪಡೆದು, ಸ್ವಪರಿಶ್ರಮದಿಂದ ಕನ್ನಡ ಕಲಿತು, ಕೇವಲ ಮುಲ್ಕಿ ಪರೀಕ್ಷೆಯನ್ನು ಪಾಸುಮಾಡಿದ ಒಬ್ಬ ವ್ಯಕ್ತಿ, ಹೇಗೆ ತನ್ನ ಅಂತಃಸತ್ವದಿಂದ ಕನ್ನಡನಾಡಿನಲ್ಲಿ ಗುರುತಿಸಿಕೊಂಡಿದ್ದ ಎಂಬುದನ್ನು ನೆನೆದರೆ ಆಶ್ಚರ್ಯವಾಗುತ್ತದೆ.

ತಮ್ಮಣ್ಣಪ್ಪನವರು ನೀಡಿದ ಠರಾವುಗಳನ್ನು ವಿಜಾಪುರ ಸಾಹಿತ್ಯ ಸಮ್ಮೇಳನವು ಎತ್ತಿ ಹಿಡಿಯಿತು. ಅವು:

೧. ಕೊಲ್ಲಾಪುರ, ಸಾಂಗ್ಲಿ, ಮಿರಜ, ಕುರಂದವಾಡ, ಜತ್ತ, ಅಕ್ಕಲಕೋಟೆ ಈ ಸಂಸ್ಥಾನಗಳಲ್ಲಿ ಕನ್ನಡ ಮಾತನಾಡುವ ಪ್ರಜೆಗಳಿಗೆ ಶಿಕ್ಷಣವೂ ನ್ಯಾಯದಾನವೂ ಕನ್ನಡಭಾಷೆಯಲ್ಲಿ ದೊರೆಯದೆ ಮರಾಠಿ ಭಾಷೆಯಲ್ಲಿ ಕೊಡಲ್ಪಡುತ್ತಿದೆ. ಇದರಿಂದ ಕನ್ನಡಿಗರಿಗೆ ಬೌದ್ಧಿಕ ಹಾನಿಯಾಗುವುದಲ್ಲದೆ ಅವರು ಅನ್ಯಾಯವನ್ನು ಹೊಂದಬೇಕಾಗುತ್ತದೆ. ಆದುದರಿಂದ ಮೇಲ್ಕಂಡ ಸಂಸ್ಥಾನಗಳೊಳಗಿನ ಕನ್ನಡ ಪ್ರಜೆಗಳಿಗೆ ಕನ್ನಡ ಭಾಷೆಯಲ್ಲಿಯೇ ಶಿಕ್ಷಣವನ್ನು ಕೊಡಬೇಕೆಂದೂ ಕನ್ನಡಭಾಷೆಯಲ್ಲಿಯೇ ಸರಕಾರಿ ದಫ್ತರವನ್ನು ಇಡಬೇಕೆಂದೂ ಆಯಾ ಸರಕಾರದವರಿಗೆ ಈ ಸಭೆಯು ಬಿನ್ನವಿಸುತ್ತದೆ.

೨. ಸೊಂಡೂರು, ಜಮಖಂಡಿ, ಮುಧೋಳ ಮತ್ತು ರಾಮದುರ್ಗ ಈ ನಾಲ್ಕು ಸಂಸ್ಥಾನಗಳ ಪ್ರಜೆಗಳು ಸಂಪೂರ್ಣವಾಗಿ ಕನ್ನಡಿಗರಾಗಿರುವುದರಿಂದ ಅಲ್ಲಿ ಶಿಕ್ಷಣವನ್ನು ಕನ್ನಡದಲ್ಲಿಯೇ ಕೊಡಬೇಕೆಂದೂ ಸರಕಾರಿ ದಫ್ತರವನ್ನು ಕನ್ನಡದಲ್ಲಿಯೇ ಇಡಬೇಕೆಂದೂ ಆಯಾ ಸರಕಾರದವರಿಗೆ ಈ ಸಭೆಯು ಬಿನ್ನವಿಸುತ್ತದೆ.

೩. ಕರ್ಣಾಟಕ ಸಾಹಿತ್ಯ ಪರಿಷತ್ತಿನ ಮೇಲ್ಕಂಡ ಬಿನ್ನಹಕ್ಕೆ ಆಯಾ ಸಂಸ್ಥಾನಗಳಿಂದ ಸದುತ್ತರ ಬಾರದಿದ್ದರೆ ಅವರ ಮೇಲ್ವಿಚಾರಕರ ಕಡೆಗೆ ಪರಿಷತ್ತಿನವರು ಬರೆದು ನ್ಯಾಯವನ್ನು ಬೇಡಬೇಕೆಂದು ಈ ಸಭೆಯು ಬಿನ್ನವಿಸುತ್ತದೆ.

೪. ಹೈದರಾಬಾದು ಸಂಸ್ಥಾನಗಳಲ್ಲಿ ಕನ್ನಡ ಮಾತನಾಡುವ ಪ್ರದೇಶಗಳಲ್ಲಿರುವ ಪ್ರತಿಯೊಂದು ಗ್ರಾಮದ ಲೆಖ್ಖಪತ್ರಗಳು ಮರಾಠಿಯಲ್ಲಿರುವುದನ್ನು ಬದಲಾಯಿಸಿ ದೇಶಭಾಷೆಯಾದ ಕನ್ನಡದಲ್ಲಿಯೇ ಇರುವಂತೆ ಏರ್ಪಾಡು ಮಾಡಬೇಕೆಂದೂ, ಆ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣವು ಕನ್ನಡದಲ್ಲಿಯೇ ಕೊಡಲ್ಪಡಬೇಕೆಂದು ನಿಜಾಂ ಸರ್ಕಾರಕ್ಕೆ ಕರ್ಣಾಟಕ ಸಾಹಿತ್ಯ ಪರಿಷತ್ತು ವಿನಂತಿ ಮಾಡಿಕೊಳ್ಳತಕ್ಕದ್ದು.[೨೭]

ತಮ್ಮಣ್ಣಪ್ಪನವರ ವಾಸಸ್ಥಾನ ಬನಹಟ್ಟಿ, ಇದು ಅತ್ಯಂತ ಚಿಕ್ಕ ಊರು. ಆದರೆ ಅವರ ಕಾರ್ಯಕ್ಷೇತ್ರ ಅತ್ಯಂತ ವಿಶಾಲವಾದದ್ದು. ಸಂಸ್ಥಾನಿಕರ ಕೈಯಲ್ಲಿ ಸಿಕ್ಕು ನಲುಗಿಹೋದ ಕನ್ನಡಭಾಷೆಗೆ ಜೀವಕಳೆಯನ್ನು ತುಂಬಲು ಎಲ್ಲೆಲ್ಲಿ ಕನ್ನಡ ಮಾತೃಭಾಷೆ ಇದೆಯೊ, ಅಲ್ಲೆಲ್ಲ ತಮ್ಮಣ್ಣಪ್ಪನವರು ಸಂಚರಿಸಿ ಸಾಕಷ್ಟು ಪ್ರಯತ್ನ ಪಡುತ್ತಲೇ ಇದ್ದರು.

೧೯೨೫ರಲ್ಲಿ ಬೆಳಗಾವಿಯಲ್ಲಿ ನಡೆದ ೧೧ನೆಯ ಕನ್ನಡ ಸಾಹಿತ್ಯಸಮ್ಮೇಲನದಲ್ಲಿ ಸಮ್ಮೇಳನದ ಅಧ್ಯಕ್ಷರಾಗಿ ಶ್ರೀ ಬೆನಗಲ್ ರಾಮರಾಯರು ನೇಮಕಗೊಂಡರೆ, ಸ್ವಾಗತಾಧ್ಯಕ್ಷರಾಗಿ ತಮ್ಮಣ್ಣಪ್ಪ ಚಿಕ್ಕೋಡಿಯವರು ಜವಾಬ್ದಾರಿಯನ್ನು ಹೊತ್ತುಕೊಂಡರು. ಸ್ವಾಗತಾಧ್ಯಕ್ಷರಾಗಿ ಮಾಡಿದ ಭಾಷಣದುದ್ದಕ್ಕೂ ತಮ್ಮಣ್ಣಪ್ಪನವರು ಕನ್ನಡ ನಾಡು ನುಡಿ ಸಂಸ್ಕೃತಿಯ ಬಗ್ಗೆ ಮಾಡಿದ ಚಿಂತನೆಯನ್ನು ಕಾಣುತ್ತೇವೆ. ಆ ಭಾಷಣದ ಕೆಲವು ವಿಷಯಗಳನ್ನು ಹೀಗೆ ಸಂಗ್ರಹಿಸಬಹುದು. ೧.ಪದವೀಧರರು ತಾವು ಯಾವುದೊಂದು ಉದ್ಯೋಗವನ್ನು ಉದರ ನಿರ್ವಾಹಾರ್ಥವಾಗಿ ಮಾಡುವುದು, ಕನ್ನಡ ಶಾಯ್ಣುಡಿಯನ್ನು ಮರೆಯದೆ ತಮಗೆ ಇಷ್ಟವಿದ್ದ ವಿಶಿಷ್ಟ ವಿಷಯದ ವ್ಯಾಸಂಗಮಾಡಿ, ಕಾವ್ಯವನ್ನು ಕನ್ನಡದಲ್ಲಿ ಸುಲಭ ಭಾಷೆಯಲ್ಲಿ ಬರೆದು ಕನ್ನಡಿಗರ ಏಳಿಗೆಗೆ ಕೈಹಚ್ಚಬೇಕು. ಮತ್ತು ಸಾಧ್ಯವಿದ್ದಮಟ್ಟಿಗೆ

ಕನ್ನಡಗ್ರಂಥಗಳಿಗೆ ಆಶ್ರಯವನ್ನು ಕೊಡಬೇಕು. ೨.ಪ್ರಾಥಮಿಕ ಶಿಕ್ಷಣವನ್ನು ಕೊಡುವ ಶಿಕ್ಷಕರು ತಮ್ಮ ಶಾಲೆಯ ಶಿಕ್ಷಕರ ಹಾಗೂ ಪ್ರೌಢವಿದ್ಯಾರ್ಥಿಗಳ ಕಡೆಯಿಂದ ಅವರ ಶಕ್ತಿಯಂತೆ ತಿಂಗಳಿಗೆ ಚಂದಾಹಣವನ್ನು ಎತ್ತಿ ಅದರೊಳಗಿಂದ ಉತ್ತಮವಾದ ವರ್ತಮಾನಪತ್ರಗಳನ್ನೂ, ಮಾಸಿಕ ಪುಸ್ತಕಗಳನ್ನೂ, ಸುಬೋಧ ಪುಸ್ತಕಗಳನ್ನೂ ತರಿಸಿ, ವಿದ್ಯಾರ್ಥಿಗಳಿಗೆ ಓದಲಿಕ್ಕೆ ಕೊಟ್ಟು, ಅವರಲ್ಲಿ ಓದುವ ಸವಿಯನ್ನು ಹುಟ್ಟಿಸಬೇಕು. ೩.ಸರಕಾರದವರು ಮೆಟ್ರಿಕ್ಯುಲೇಷನ್, ಬಿ.ಎ. ಮತ್ತು ಎಂ.ಎ. ಪರೀಕ್ಷೆಯ ಅಭ್ಯಾಸದಲ್ಲಿ ಕನ್ನಡವನ್ನು ಸೇರಿಸಿದ್ದಾರೆ. ಇದರಂತೆ ಕಾಲೇಜಿನೊಳಗಿನ ಫಸ್ಟ್ ಇಯರ್ಸ್ ಎಗ್ಜಾಮಿನೇಷನ್ ಮತ್ತು ಇಂಟರಮೀಡಿಯೇಟ್ ಪರೀಕ್ಷೆಗಳಲ್ಲಿ ಕನ್ನಡನುಡಿಯನ್ನು ಸೇರಿಸಬೇಕು. ಇದರಿಂದ ಕನ್ನಡನುಡಿಯಲ್ಲಿ ಗ್ರ್ಯಾಜುಯೇಟರಾಗಿ ಕನ್ನಡ ವಾಙ್ಮಯಾಭಿವೃದ್ಧಿಗೆ ಸಹಾಯವಾಗುವುದು. ೪.ಸಂಸ್ಥಾನಿಕರು ತಮ್ಮ ಕನ್ನಡಪ್ರಜೆಗಳಿಗೆ ಕನ್ನಡದಲ್ಲಿ ಶಿಕ್ಷಣವನ್ನು ಕೊಟ್ಟು ಕನ್ನಡವನ್ನು ರಾಜಕೀಯಭಾಷೆಯಾಗಿ ಮಾಡಬೇಕು. ೫. ಕನ್ನಡ ಕೋಶವೊಂದನ್ನು ಆದಷ್ಟು ಬೇಗ ಬರೆಯಿಸಬೇಕು.[೨೮]

ಇದಲ್ಲದೆ ಕೆಲವು ಠರಾವುಗಳನ್ನು ಕೂಡ ಅವರು ಮಂಡಿಸಿದರು. ಅವುಗಳಲ್ಲಿ ೧. ಕರ್ನಾಟಕದಲ್ಲಿ ವಿಶೇಷವಾಗಿ ಬೆಳಗಾವಿ, ವಿಜಾಪುರ ಜಿಲ್ಲೆಗಳಲ್ಲಿ ಜನರ ಮಾತೃಭಾಷೆಯು ಕನ್ನಡವಾಗಿದೆ. ಆದರೆ ಬೆಳಗಾವಿ ತಾಲೂಕಿನ ತೀರ ಸ್ವಲ್ಪ ಭಾಗವನ್ನು ಬಿಟ್ಟು ಇಡೀ ಜಿಲ್ಲೆಯ ಕನ್ನಡ ಶಾಲೆಗಳಲ್ಲಿ ಶಿಕ್ಷಣ ಹಾಗೂ ವರ್ತಕರು ತಮ್ಮ ಲೆಕ್ಕಪತ್ರಗಳನ್ನು ದಸ್ತಾವೇಜಗಳನ್ನು ಮರಾಠಿಯಲ್ಲಿಯೇ ಇಡುವ ರೂಢಿ ಇದೆ. ಇದು ಈ ಸಮ್ಮೇಲನಕ್ಕೆ ವಿಷಾದಕರವೆನಿಸಿದೆ. ಹೀಗಾಗಿ ಶಿಕ್ಷಣ ಮತ್ತು ಲೆಕ್ಕಪತ್ರಗಳನ್ನು ಕನ್ನಡದಲ್ಲಿಯೇ ಇಡಬೇಕೆಂದು ಈ ಸಭೆಯು ಆಗ್ರಹಪೂರ್ವಕ ವಿನಂತಿಯನ್ನು ಮಾಡಿಕೊಳ್ಳುತ್ತದೆ.

೨. ಕರ್ಣಾಟಕ ರಾಷ್ಟ್ರಗೀತೆಯೊಂದನ್ನು ನಿರ್ಧರಿಸಿ ಅದನ್ನು ಅಖಿಲ ಕರ್ನಾಟಕದ ಎಲ್ಲ ಪಾಠಶಾಲೆಗಳಲ್ಲಿ ವಾಡಿಕೆಗೆ ತರುವ ಬಗ್ಗೆ ಈ ಸಮ್ಮೇಳನವು ಕೆಳಗೆ ಕಂಡ ಸದಸ್ಯರನ್ನೊಳಗೊಂಡ ಒಂದು ಮಂಡಳಿಯನ್ನು ಏರ್ಪಡಿಸುತ್ತದೆ. ಆ ಸಮಿತಿಯಲ್ಲಿ ಬಿ.ಎಂ.ಶ್ರೀ., ಮಾಸ್ತಿ ಮುಂತಾದ ಗಣ್ಯರೊಂದಿಗೆ ತಮ್ಮಣ್ಣಪ್ಪನವರ ಹೆಸರು ಇದ್ದುದು ವಿಶೇಷವೆಂದೇ ಹೇಳಬೇಕು.

೩. ಮುಧೋಳ, ಜತ್ತ, ಅಕ್ಕಲಕೋಟೆ, ಸೊಂಡೂರು ಸಂಸ್ಥಾನಗಳೊಳಗಿನ ಪ್ರಜೆಗಳು ಕನ್ನಡ ಭಾಷೆಯವರಾಗಿದ್ದು, ಪ್ರಾಥಮಿಕ ಶಿಕ್ಷಣವನ್ನು ಅವರಿಗೆ ಕನ್ನಡ ಭಾಷೆಯಲ್ಲಿ ಕೊಡದೆ ಮರಾಠಿ ಭಾಷೆಯಲ್ಲಿ ಕೊಡುವುದರಿಂದ ಪ್ರಜೆಗಳಿಗೆ ಶಿಕ್ಷಣದ ಲಾಭ ದೊರೆಯುವುದಿಲ್ಲ. ಮತ್ತು ರಾಜಕೀಯ ಸರಕಾರಿ ದಫ್ತರವನ್ನು, ಕನ್ನಡಭಾಷೆಯಲ್ಲಿಡದೆ ಮರಾಠಿಯಲ್ಲಿಟ್ಟಿರುವುದರಿಂದ ಬಹಳ ತೊಂದರೆಗಳು ಸಂಭವಿಸುತ್ತವೆ. ಆದುದರಿಂದ ಆ ಸಂಸ್ಥಾನಗಳ ಕನ್ನಡ ಪ್ರಜೆಗಳಿಗೆ ಶಿಕ್ಷಣವನ್ನು ಕನ್ನಡದಲ್ಲಿಯೇ ಕೊಡಬೇಕೆಂದೂ, ರಾಜಕೀಯ ದರ್ಬಾರಿ ದಫ್ತರವನ್ನು ಕನ್ನಡದಲ್ಲಿಯೇ ಇರಿಸಬೇಕೆಂದೂ ತಮ್ಮಣ್ಣಪ್ಪನವರು ಸಮ್ಮೇಳನದ ಮೂಲಕ ಆ ಸರ್ಕಾರಗಳಿಗೆ ವಿನಂತಿಪೂರ್ವಕವಾಗಿ ಸೂಚಿಸಿದರು. ಈ ಸೂಚನೆಯನ್ನು ನಾರಾಯಣ ಶ್ರೀನಿವಾಸರಾಜ ಪುರೋಹಿತರು ಅನುಮೋದಿಸಿದರು.[೨೯]

೧೯೨೮ರಲ್ಲಿ ಕಲಬುರ್ಗಿಯಲ್ಲಿ ನಡೆದ ೧೪ನೆಯ ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷರು 'ಕನ್ನಡದ ಕಣ್ವ'ರಾದ ಬಿ.ಎಂ.ಶ್ರೀಯವರು. ತಮ್ಮಣ್ಣಪ್ಪನವರು ಈ ಸಾಹಿತ್ಯ ಸಮ್ಮೇಳನದಲ್ಲಿ ಎರಡು ಮಹತ್ವದ ಠರಾವುಗಳನ್ನು ಮಂಡಿಸಿದರು. ಅವುಗಳೆಂದರೆ

೧. "ಕಲಬುರ್ಗಿ ಮತ್ತು ಬೀದರ ಜಿಲ್ಲೆಗಳಲ್ಲಿಯ ವರ್ತಕರೂ ಸಾರ್ವಜನಿಕ ಸಂಸ್ಥೆಗಳೂ ಕನ್ನಡ ಭಾಷೆಗೆ ಪ್ರಾಧಾನ್ಯವನ್ನು ಕೊಡಬೇಕೆಂದೂ, ಲೆಖ್ಖಪತ್ರ ಮುಂತಾದವುಗಳನ್ನು ಕನ್ನಡದಲ್ಲಿಯೇ ಇಡಬೇಕೆಂದೂ ಈ ಸಮ್ಮೇಲನವು ಅವರುಗಳನ್ನು ಪ್ರಾರ್ಥಿಸುತ್ತದೆ."[೩೦] ಕಲಬುರ್ಗಿ ಮತ್ತು ಬೀದರ ಈ ಪ್ರದೇಶಗಳ ರಾಜ್ಯಭಾಷೆ ಉರ್ದುವಾಗಿತ್ತು. ಕನ್ನಡ ಮಾತೃಭಾಷೆಯನ್ನು ಹೊಂದಿರುವ ಅಸಂಖ್ಯಾತ ಕನ್ನಡಿಗರಿರುವಾಗ ಉರ್ದುವಿಗೆ ಪ್ರಾಧಾನ್ಯ ನೀಡುವುದನ್ನು ತಮ್ಮಣ್ಣಪ್ಪನವರು ವಿರೋಧಿಸುತ್ತಾರೆ. ಅಷ್ಟೇ ಅಲ್ಲ ಇದನ್ನು ಸಮ್ಮೇಳನದ ಮೂಲಕ ಗಮನಕ್ಕೆ ತಂದು, ಸಮ್ಮೇಳನಾಧ್ಯಕ್ಷರಿಂದ ಠರಾವು ಪಾಸು ಮಾಡಿಸಿದರು.

೨. "ಜಮಖಂಡಿ ಸಂಸ್ಥಾನದ ಅಧಿಪತಿಗಳು ತಮ್ಮ ಸಂಸ್ಥಾನದಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸಿದುದಕ್ಕೋಸ್ಕರ ಈ ಸಮ್ಮೇಲನವು ಆ ಅಧಿಪತಿಗಳನ್ನು ಅಭಿನಂದಿಸುತ್ತದೆ."[೩೧] ಈ ಮಾತು ತಮ್ಮಣ್ಣಪ್ಪನವರು ದಣಿವರಿಯದೇ ಮಾಡಿದ ನಿಸ್ವಾರ್ಥ ಸೇವೆಯ ಫಲ. ಮರಾಠಿಯ ದಬ್ಬಾಳಿಕೆಯನ್ನು ಖಂಡಿಸಿ, ಕನ್ನಡ ನುಡಿಗಾಗಿ ಹಗಲು-ಇರುಳೆನ್ನದೆ ದುಡಿದ ತಮ್ಮಣ್ಣಪ್ಪನವರ ಪರಿಶ್ರಮ ಸಾರ್ಥಕವಾಯಿತು.

೧೯೨೯ರಲ್ಲಿ ಬೆಳಗಾವಿಯಲ್ಲಿ ಜರುಗಿದ ೧೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮಣ್ಣಪ್ಪನವರು ಮಾಡಿದ ಠರಾವುಗಳಿಂದ ಸಮ್ಮೇಳನವು ನಿರ್ಣಯ ೧೧, ೧೨ ಮತ್ತು ೧೩ರಲ್ಲಿ ಮಹತ್ವದ ತೀರ್ಪುಗಳನ್ನು ನೀಡಿತು. ಅವುಗಳೆಂದರೆ, ಜಮಖಂಡಿ ಸಂಸ್ಥಾನದಲ್ಲಿ ಕನ್ನಡ ಶಾಲೆಗಳು ಸಾಕಷ್ಟು ಇಲ್ಲದಿರುವುದರಿಂದ, ಇನ್ನಷ್ಟು ಹೆಚ್ಚಿಸಬೇಕು. ಈ ಸಂಸ್ಥಾನದಲ್ಲಿ ಈಗಿರುವ ಕನ್ನಡ ಶಾಲೆಗಳನ್ನು ತೆಗೆದುಹಾಕಬೇಕೆಂಬ ಘೋಷಣೆ ನಡೆದಿದೆ. ಅದರಿಂದ ಅಲ್ಲಿರುವ ಪ್ರಜೆಗಳಿಗೆ ಅಂಜಿಕೆಯುಂಟಾಗಿದೆ. ಪ್ರಜೆಗಳ ಅಂಜಿಕೆಯನ್ನು ದೂರಮಾಡಬೇಕೆಂದು ಈ ಸಮ್ಮೇಳನ ಅವರಿಗೆ ವಿಜ್ಞಾಪಿಸುತ್ತದೆ."[೩೨] ತಮ್ಮಣ್ಣಪ್ಪನವರು ಮರಾಠಿ ಸಂಸ್ಥಾನಿಕರ ಮನವೊಲಿಸಿ ಕನ್ನಡ ಶಾಲೆಗಳನ್ನು ತೆರೆದು ಎಂದೂ ಕೈಕಟ್ಟಿ ಕುಳಿತುಕೊಳ್ಳಲಿಲ್ಲ. ತಮ್ಮ ಕೆಲಸ ಮುಗಿಯಿತು ಎಂದುಕೊಳ್ಳಲಿಲ್ಲ. ಇನ್ನೂ ತಮ್ಮಿಂದ ಆಗಬೇಕಾದ ಕೆಲಸ ಸಾಕಷ್ಟಿದೆಯೆಂದೇ ಅವರು ಭಾವಿಸಿದ್ದರು. ಅದಕ್ಕಾಗಿ ತಮ್ಮ ಕಾರ್ಯಕ್ಷೇತ್ರವನ್ನು ಹೆಚ್ಚಿಸಿಕೊಳ್ಳುತ್ತ ನಡೆದರು.

"ಉತ್ತರಕರ್ನಾಟಕದಲ್ಲಿರುವ ಕೊಲ್ಲಾಪುರ, ರಾಮದುರ್ಗ, ಮೀರಜ(ಜೂನಿಯರ್ ಮತ್ತು ಸೀನಿಯರ್), ಸಾಂಗಲಿ, ಕುರಂದವಾಡ (ಜೂನಿಯರ್ ಮತ್ತು ಸೀನಿಯರ್), ಔಂಧ, ಅಕ್ಕಲಕೋಟೆ, ಜತ್ತ, ಮುಧೋಳ, ಜಮಖಂಡಿ ಮುಂತಾದ ಸಂಸ್ಥಾನಗಳಲ್ಲಿಯ ಕನ್ನಡ ಭಾಗಗಳ ಪ್ರಜೆಗಳ ಅನುಕೂಲಕ್ಕೋಸ್ಕರ ಕನ್ನಡ ಶಾಲೆಗಳನ್ನು ಸ್ಥಾಪಿಸಬೇಕೆಂದು ಕೋರ್ಟು ಕಚೇರಿಗಳಲ್ಲಿ ಕನ್ನಡ ಭಾಷೆಗೆ ಅವಕಾಶ ಕೊಡಬೇಕೆಂದೂ ಈ ಸಮ್ಮೇಳನ ವಿಜ್ಞಾಪಿಸುತ್ತದೆ." ಈ ಎರಡೂ ವಿಷಯಗಳನ್ನು ಸಮ್ಮೇಳನವು

ಪರಾಮರ್ಶಿಸಿ ನಿರ್ಣಯ ೧೯೩೮ರಲ್ಲಿ ಆಯಾ ಸಂಸ್ಥಾನಗಳಿಗೆ ಹೋಗಿ ಮೇಲಿನ ವಿಷಯಗಳನ್ನು ಕಾರ್ಯರೂಪಕ್ಕೆ ತರಲು ಒಂದು ಸಮಿತಿಯನ್ನು ನೇಮಿಸಿತು. ಆ ಸಮಿತಿಯಲ್ಲಿ ದಿವಾನ್ ಬಹದ್ದೂರ ಮ॥ರಾ॥ಶ್ರೀನಿವಾಸರಾವ್ ರೊದ್ದ, ರಾವ್‌ಸಾಹೇಬ ಪಿ.ಜಿ.ಹಳಕಟ್ಟಿ, ಶ್ರೀ ಹನುಮಂತರಾವ್ ಕೌಜಲಗಿ, ಮುದವೇಡಕರ್ ಕೃಷ್ಣರಾಯರು ಮತ್ತು ಶ್ರೀ ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿಯವರು ಇದ್ದರು.[೩೩] ಇಂತಹ ಜವಾಬ್ದಾರಿಯುತ ಕಾರ್ಯವನ್ನು ಕನ್ನಡದ ಶ್ರೇಷ್ಠ ಮಹನೀಯರುಗಳ ಜೊತೆಗೆ ತಮ್ಮಣ್ಣಪ್ಪನವರು ಮಾಡಿದ್ದು ಬಹಳ ಹೆಮ್ಮೆಯ ವಿಷಯ. ಅಷ್ಟೇ ಅಲ್ಲ, ಪ್ರಾರಂಭದಿಂದಲೇ ರಾಮದುರ್ಗ, ಮುಧೋಳ, ಕೊಲ್ಲಾಪುರ, ಸಾಂಗ್ಲಿ, ಮಿರಜ ಸಂಸ್ಥಾನಗಳಲ್ಲಿ ಕನ್ನಡ ಭಾಷೆ ಮತ್ತು ಶಾಲೆಗಳಿಗಾಗಿ ಒತ್ತಾಯಿಸುತ್ತ ಬಂದವರು ಅವರು.

ತಮ್ಮಣ್ಣಪ್ಪನವರು ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರಾಗಿದ್ದರು. ಅಲ್ಲದೆ ಅನೇಕ ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿದ್ದರು. ಅವರ ಪ್ರಭಾವ ಅಬಕಾರ ಚೆನಮಲ್ಲಪ್ಪನವರ ಮೇಲೆ ಆಯಿತು. ಆ ಪರಿಣಾಮದಿಂದ ಅವರು ತಮ್ಮ ಜೀವಿತದ ಕೊನೆಯುಸಿರಿನ ವರೆಗೂ ಸಾಹಿತ್ಯ ಸಮ್ಮೇಳನ ಸಮೀಪವಿರಲಿ, ದೂರವಿರಲಿ ಬುತ್ತಿ ಮಾಡಿಕೊಂಡು ಹೋಗಿ ಭಾಗವಹಿಸಿ ಬರುತ್ತಿದ್ದರು. ಚನಮಲ್ಲಪ್ಪನವರು ದುಡ್ಡಿನ ಅನಾನುಕೂಲತೆಯಾದಾಗ, ಮನೆಯಲ್ಲಿರುವ ಬಂಗಾರದ ಒಡವೆಗಳನ್ನು ಮಾರಿ ಸಮ್ಮೇಳನಕ್ಕೆ ಹೋಗಿ ಬರುತಿದ್ದರು. ಅಂದರೆ ಬಂಗಾರಕ್ಕಿಂತ ಅವರಿಗೆ ಸಾಹಿತ್ಯ ಸಮ್ಮೇಳನವೇ ಮುಖ್ಯವಾಗಿತ್ತು ಎಂಬುದು ಅರ್ಥವಾಗುತ್ತದೆ. ತಮ್ಮಣ್ಣಪ್ಪನವರಾಗಲಿ, ಚನಮಲ್ಲಪ್ಪನವರಾಗಲಿ ಎಂದಿಗೂ ಯಾವುದನ್ನು ಅಪೇಕ್ಷೆ ಮಾಡಲಿಲ್ಲ. ತಮ್ಮ ಸ್ವಂತ ದುಡ್ಡಿನಿಂದಲೇ ದೂರ ದೂರದ ಊರುಗಳಿಗೆ ಹೋಗಿಬಂದರು.[೩೪]

ಕನ್ನಡ ನಾಡು ನುಡಿ ಸಂಸ್ಕೃತಿಗಾಗಿ ತಮ್ಮಣ್ಣಪ್ಪನವರು ಅನೇಕ ಸಂಘಸಂಸ್ಥೆಗಳನ್ನು ಕಟ್ಟಿ ಬೆಳಸಿದಂತೆ ಚನಮಲ್ಲಪ್ಪನವರು 'ಗೆಳೆಯರ ಬಳಗ' ಸಂಘ ಕಟ್ಟಿದರು. ಈ ಗೆಳೆಯರ ಬಳಗವೂ ತಮ್ಮಣ್ಣಪ್ಪನವರಂತೆ ಹಿರಿಯ ಸಾಹಿತಿಗಳನ್ನು ಕರೆಸಿ ಭಾಷಣ ಮಾಡಿಸುತ್ತಿದ್ದಿತು. 'ಗೆಳೆಯರ ಬಳಗ'ದಿಂದ ಬೆಳೆದ ಸೃಜನಶೀಲ ಸಾಹಿತಿಗಳೆಂದರೆ ದಿ.ದು.ನಿಂ.ಬೆಳಗಲಿ ದಿ.ಡಾ.ಸ.ಜ. ನಾಗಲೋಟಿಮಠ, ದಿ.ಡಾ.ಜಯವಂತ ಕುಳ್ಳಿ ಮತ್ತು ಶ್ರೀ ಜಯವಂತ ಕಾಡದೇವರ ಅವರು. ಚನಮಲ್ಲಪ್ಪರ ಪ್ರೇರಣೆಯಿಂದ ಗೆಳೆಯರ ಬಳಗದ ಸದಸ್ಯರಾದ ಶ್ರೀ ಭಾಸ್ಕರಪ್ಪ ಘೋರ್ಪಡೆ, ದಿ.ಸೋಪನ್ನಪ್ಪ ಘೋರ್ಪಡೆ, ಶ್ರೀ ಚನ್ನಮಲ್ಲಪ್ಪ ಬಾವಲತ್ತಿಯವರು ಕರ್ನಾಟಕ ಏಕೀಕರಣದ ಹೋರಾಟಗಾರರಾದರು. ಜೊತೆಗೆ ಪ್ರತಿವರ್ಷವೂ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದ್ದರು. ಇಂತಹ ಸಾಂಸ್ಕೃತಿಕ ಪ್ರಜ್ಞೆಗೆ ಮೂಲಪ್ರೇರಣೆ ತಮ್ಮಣ್ಣಪ್ಪನವರದೇ ಎಂಬುದು ಶ್ರೀ ಜಯವಂತ ಕಾಡದೇವರ ಅವರ ಸ್ಪಷ್ಟ ಅಭಿಪ್ರಾಯವಾಗಿದೆ.

ತಮ್ಮಣ್ಣಪ್ಪನವರು ಕನ್ನಡ ಹೋರಾಟಗಾರರಾಗಿ ಕನ್ನಡ ಸಾಹಿತ್ಯಪರಿಷತ್ತನ್ನು ಅಷ್ಟೇ ಸಮರ್ಪಕವಾಗಿ ಬಳಸಿಕೊಂಡರು. ಪ್ರತಿ ಸಮ್ಮೇಳನದಲ್ಲಿಯೂ ಅವರದೇ ಆದ ವಿಷಯಗಳು,

ಠರಾವುಗಳು ವಿಶೇಷವಾಗಿರುತ್ತಿದ್ದವು. ಅಂತೆಯೇ ಆಗಿನ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿದ್ದ ಬೆಳ್ಳಾವೆ ವೆಂಕಟನಾರಾಯಣಪ್ಪನವರು 'ಕನ್ನಡಕ್ಕೆ ತಮ್ಮ, ಅಣ್ಣ, ಅಪ್ಪ, ಅವರೇ(ತಮ್ಮಣ್ಣಪ್ಪನವರು) ಆಗಿದ್ದರು ಎಂದು ಅಭಿಮಾನದಿಂದ ಹೇಳುತ್ತಿದ್ದರಂತೆ!'[೩೫] ೧೯೩೭ರಲ್ಲಿ ಜಮಖಂಡಿಯಲ್ಲಿ ನಡೆದ ೨೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಬೆಳ್ಳಾವೆ ವೆಂಕಟನಾರಾಣಪ್ಪನವರು "ಕನ್ನಡ ಭಾಷಾಪ್ರೇಮವುಳ್ಳವರೂ ನನ್ನ ಮಿತ್ರರೂ ಆಗಿದ್ದ ರಬಕವಿಯ ಶ್ರೀ ತಮ್ಮಪ್ಪ ಸತ್ಯಪ್ಪ ಚಿಕ್ಕೋಡಿಯವರು ಈ ಸಂಸ್ಥಾನಗಳ ವಿಷಯವಾಗಿ ಪ್ರತಿವರ್ಷವೂ ಸಾಹಿತ್ಯ ಸಮ್ಮೇಳನದಲ್ಲಿ ತರುತ್ತಿದ್ದ ಠರಾವುಗಳಿಗೆ ಮೊದಲ ಮಾನ್ಯತೆಕೊಟ್ಟು ಕನ್ನಡದಲ್ಲಿ ವಿಶ್ವಾಸ ತೋರಿದವರು ನಮ್ಮ ಜಮಖಂಡಿಯ ದೊರೆಗಳು. ಈಗಿನ ಮಹನೀಯರೂ ತಮ್ಮ ಮಾತೃಭಾಷೆಯಾದ ಮಹಾರಾಷ್ಟ್ರದಲ್ಲೆಷ್ಟೊ ಅಷ್ಟೇ ಮಮತೆಯನ್ನು ಕನ್ನಡದಲ್ಲಿಯೂ ಇಟ್ಟುಕೊಂಡಿರುವರೆಂದು ನಂಬುತ್ತೇನೆ"[೩೬] ಎಂದು ಅಭಿಮಾನಪರ ಮಾತುಗಳನ್ನು ಹೇಳಿದುದನ್ನು ನೋಡಿದರೆ ತಮ್ಮಣ್ಣಪ್ಪನವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಎಂತಹ ಹಿರಿಯ ಸ್ಥಾನಮಾನ ಲಭ್ಯವಾಗಿದ್ದವು ಎಂಬುದು ಅರ್ಥವಾಗುತ್ತದೆ.

ತಮ್ಮಣ್ಣಪ್ಪನವರು ತಮ್ಮ ಜೀವಿತಾವಧಿಯಲ್ಲಿಯೇ ತಮ್ಮ ಕುಟುಂಬದವರಾದ ಅಣ್ಣ ರಾಯಪ್ಪ, ರಾಯಪ್ಪನ ಮಗ ಶ್ರೀ ಪಂಡಿತಪ್ಪ, ಅಳಿಯ ಶ್ರೀ ಹಳಕಟ್ಟಿ, ಇನ್ನೋರ್ವ ಅಳಿಯ ಚೆನ್ನಮಲ್ಲಪ್ಪ ಅಬಕಾರ ಮತ್ತು ರಾಮಪ್ಪ ಚಿಕ್ಕೋಡಿಯವರನ್ನು ಸಾಹಿತ್ಯ ಪರಿಷತ್ತಿನ ಕಾರ್ಯಗಳಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳುವಂತೆ ಮಾಡಿದ್ದರು. ಹೀಗೆ ತಮ್ಮ ಜೀವಿತಾವಧಿಯ ವರೆಗೂ ಕನ್ನಡ ಸಾಹಿತ್ಯ ಪರಿಷತ್ತಿನ ಜೊತೆಗೆ ನಿಕಟ ಸಂಬಂಧವನ್ನಿಟ್ಟುಕೊಂಡ ಕಾರಣ, 'ಪರಿಷತ್ಪತ್ರಿಕೆ'ಯು ಅವರ ನಿಧನದ ಸುದ್ಧಿಯನ್ನು ಪ್ರಕಟಿಸಿ ಕೃತಜ್ಞತೆಯನ್ನು ಸಲ್ಲಿಸಿತು. ಮುಂದೆ ತಮ್ಮಣ್ಣಪ್ಪನವರ ಭಾವಚಿತ್ರವು ೩೦-೬-೧೯೪೦ನೇ ದಿನ ಬೆಂಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ರಜತ ಮಹೋತ್ಸವಕಾಲದಲ್ಲಿ ಪರಿಷನ್ಮಂದಿರದಲ್ಲಿ ಅಲಂಕೃತವಾದುದು ಒಂದು ಯೋಗಾಯೋಗವೆನ್ನಬೇಕು.[೩೭] ಆ ಮೂಲಕ ಕನ್ನಡ ಸಾಹಿತ್ಯ ಪರಿಷತ್ತು ತಮ್ಮಣ್ಣಪ್ಪನವರ ಮೇರುವ್ಯಕ್ತಿತ್ವಕ್ಕೆ ತನ್ನ ಕೃತಜ್ಞತೆಯನ್ನು ಸೂಚಿಸಿತು.

ಇದೇರೀತಿ ಸಾಹಿತ್ಯ ಸಮ್ಮೇಳನಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಅಣ್ಣನ ಮಗ ಪಂಡಿತಪ್ಪನವರ ಪರಿಶ್ರಮದ ಫಲವಾಗಿ ಬೆಳಗಾವಿಯಲ್ಲಿ ೧೧ನೆಯ(೧೯೨೫ ಜುಲೈ) ಮತ್ತು ರಬಕವಿಯಲ್ಲಿ ೨೨ನೆಯ (೧೯೩೭) ಸಾಹಿತ್ಯ ಸಮ್ಮೇಳನಗಳು ಜರುಗಿದವು. ಈ ಎರಡೂ ಸಾಹಿತ್ಯ ಸಮ್ಮೇಲನಗಳ ಸಂಪೂರ್ಣ ಜವಾಬ್ದಾರಿಯನ್ನು ಪಂಡಿತಪ್ಪನವರು ವಹಿಸಿಕೊಂಡಿದ್ದರು. ಬೆಳಗಾವಿಯಲ್ಲಿ ಶ್ರೀ ಬೆನಗಲ್ ರಾಮರಾಯರನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ಮತ್ತು ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿಯವರನ್ನು ಸ್ವಾಗತಾಧ್ಯಕ್ಷರನ್ನಾಗಿ ಮಾಡಿ ಅವರನ್ನು ಗೌರವಿಸಿದರು. ಬೆಳಗಾವಿ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮಣ್ಣಪ್ಪನವರು ಕನ್ನಡ ನಾಡು-ನುಡಿ-ಸಂಸ್ಕೃತಿಯ ಬಗ್ಗೆ ಅಭೂತಪೂರ್ವವಾದ ಭಾಷಣಮಾಡಿ ಪ್ರೇಕ್ಷಕರ ಮನಸೂರೆಗೊಂಡರು.

ಬೆಳಗಾವಿ ಸಾಹಿತ್ಯಸಮ್ಮೇಳನವು ಅನೇಕ ವೈಶಿಷ್ಟ್ಯಗಳಿಂದ ಕೂಡಿದ್ದುದನ್ನು ಜನತೆ ಇಂದಿಗೂ ನೆನಪಿಸಿಕೊಳ್ಳುತ್ತದೆ. ತಮ್ಮ ನೆಲದವರೇ ಆದ ಶ್ರೀ ತಮ್ಮಣ್ಣಪ್ಪ ಮತ್ತು ಪಂಡಿತಪ್ಪ ಇವರೀರ್ವರೂ ಬೆಳಗಾವಿ ಸಾಹಿತ್ಯಸಮ್ಮೇಳನದಲ್ಲಿ ಪ್ರಧಾನ ಪಾತ್ರವಹಿಸಿದ್ದನ್ನು ಕಣ್ಣಾರೆ ನೋಡಲು ರಬಕವಿ-ಬನಹಟ್ಟಿ-ಜಮಖಂಡಿಗಳಿಂದ ಜನ ಹುಚ್ಚೆದ್ದು ಬಂದಿದ್ದರು. ಅವರೀರ್ವರ ಸೇವಾಕೈಂಕರ್ಯವನ್ನು ನೋಡಿ ಧನ್ಯರಾದ ಜನರಿಗೆ ಹೃದಯ ತುಂಬಿ ಬಂದಿತು. ತಾವು ಚಿಕ್ಕವರಾಗಿದ್ದಾಗ ಪ್ರತಿಯೊಬ್ಬ ಹಿರಿಯರು ಹೀಗೆ ನೆನಸಿಕೊಂಡು ಹೆಮ್ಮೆ ಪಡುತ್ತಿದ್ದುದನ್ನು ಅಲ್ಲಿನ ಜನ ಹೇಳುತ್ತಾರೆ.[೩೮]

ಸಮ್ಮೇಳನದ ದಿನ ಮೆ॥ಶ್ರೀನಿವಾಸರಾವ್ ಕೌಜಲಗಿ, ಪಂಡಿತ ರಾಯಪ್ಪ ಚಿಕ್ಕೋಡಿ, ಗಂಗಾಧರರಾವ ದೇಶಪಾಂಡೆ ಮುಂತಾದವರು ಅಧ್ಯಕ್ಷರನ್ನು ಸ್ಫೂರ್ತಿದಾಯಕವಾದ ಭಾಷಣಗಳಿಂದ ಅಭಿನಂದಿಸಿದರು.

ಕನ್ನಡದ ಜಿಲ್ಲೆಗಳಿಗೆ ಒಂದು ವಿಶ್ವವಿದ್ಯಾಲಯವು ಅವಶ್ಯಕವೆಂದು ಈ ಸಮ್ಮೇಳನ ಅಭಿಪ್ರಾಯ ಪಟ್ಟು, ಈ ವಿಷಯವನ್ನು ಸರಕಾರಕ್ಕೆ ತಿಳಿಸಿತು. ಅಷ್ಟೇ ಅಲ್ಲ, ಅದಕ್ಕಾಗಿ ಒಂದು ಉಪಸಮಿತಿಯನ್ನು ನಿಯಮಿಸಿ ವಿಶ್ವವಿದ್ಯಾಲಯ ಸ್ಥಾಪನೆಯ ವಿಚಾರದಲ್ಲಿ ಎಲ್ಲ ವಿಷಯಗಳನ್ನು ಆರು ತಿಂಗಳು ಕಾಲದೊಳಗೆ ಕ.ಸಾ.ಪ.ನ ಕಾರ್ಯಸ್ಥಾನಕ್ಕೆ ತಿಳಿಸಬೇಕೆಂದೂ ನಿರ್ಣಯಿಸಿತು.

ಆ ಉಪಸಮಿತಿಯ ಸದಸ್ಯರಲ್ಲಿ ಶ್ರೀಯುತರಾದ ಡಾ. ವೈ.ಜಿ. ನಾಡಗೀರ, ಡಿ.ವಿ.ಬೆಳವಿ, ವಿ.ಬಿ.ಜೋಶಿ, ಪಂಡಿತ ರಾಯಪ್ಪ ಚಿಕ್ಕೋಡಿ, ಎಸ್.ಟಿ.ಕಂಬಳಿ, ಬಿ.ರಾಮರಾವ್, ಡಾ.ಯು.ರಾಮರಾವ್, ಬಿ.ಸೀತಾರಾಮರಾವ್, ಪಿ.ಶಿವರಾವ್, ಬಳ್ಳಾರಿ ಕರ್ಪೂರ ಶ್ರೀನಿವಾಸರಾವ್, ಪಿ.ಜಿ. ಹಳಕಟ್ಟಿ, ಕ.ಸಾ.ಪ. ಕಾರ್ಯದರ್ಶಿ, ಎಂ.ಆರ್.ಸಾಖರೆ. ಮೊದಲಾದ ಪ್ರಮುಖರಿದ್ದುದಾಗಿ ತಿಳಿಯುತ್ತದೆ.[೩೯]

ಇನ್ನೊಂದು ಮಹತ್ವದ ವಿಷಯವೆಂದರೆ ಇಲ್ಲಿಯವರೆಗೆ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ "ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ" ಎಂದು ಕರೆದಿರಲಿಲ್ಲ. ಆದರೂ ಪಂಡಿತಪ್ಪನವರು ಅದನ್ನು ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಎಂದು ಕರೆದುದು ಅವರ ದೂರದರ್ಶಿತ್ವಕ್ಕೆ ಸಾಕ್ಷಿಯಾಗಿದೆ.[೪೦] ತಮ್ಮಣ್ಣಪ್ಪನವರ ಜೀವಿತಾವಧಿಯಲ್ಲಿ ಅವರ ಕ್ಷೇತ್ರದಲ್ಲಿ ಸಾಹಿತ್ಯ ಸಮ್ಮೇಳನಗಳು ಜರುಗಲಿಲ್ಲ. ಮುಂದೆ ಪಂಡಿತಪ್ಪನವರು ತಮ್ಮ ಚಿಕ್ಕಪ್ಪನ ಮೇಲಿನ ಗೌರವಾದರಗಳಿಂದ ಜಮಖಂಡಿಯಲ್ಲಿ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಾಗಿ ನೆರವೇರಿಸಿದರು. ಸ್ವಾಗತಾಧ್ಯಕ್ಷರಾಗಿ ಇಡೀ ಕಾರ್ಯಕ್ರಮವು ಯಶಸ್ವಿಯಾಗಿ ಜರುಗುವಂತೆ ನೋಡಿಕೊಂಡರು. ಪಂಡಿತಪ್ಪನವರ ಕಾರ್ಯವನ್ನು ಮೆಚ್ಚಿ ಖ್ಯಾತ ಸಾಹಿತಿಗಳಾದ ಡಿ.ವ್ಹಿ.ಜಿ.ಯವರು ಪತ್ರದ ಮೂಲಕ ಹೀಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

"ನಿಮ್ಮ ಹಿತವಾದ ಸಾನಿಧ್ಯದಲ್ಲಿ, ನೀವು ಕಾರ್ಯ ನಿರ್ವಹಿಸುವ ರೀತಿಯನ್ನು ಅತೀ ಸಮೀಪದಲ್ಲಿ ನೋಡಿದೆ. ಸಾರ್ವಜನಿಕ ಜೀವನದಲ್ಲಿ ಈ ರೀತಿ ನೀವು ಕಾರ್ಯನಿರ್ವಹಿಸುವ ಕಲೆಯು ನನಗೆ ಶಿಕ್ಷಣಪ್ರದವಾಗಿ ಕಂಡು ಬಂದಿತು. ನಿಮ್ಮ ಪ್ರಭಾವ, ಚಾಣಾಕ್ಷ ಹಾಗೂ ದಕ್ಷ ನಿರ್ವಹಣೆ ಮತ್ತು ನಿಮ್ಮ ಸಹನೆ, ಜನರಿಂದ ಕಾರ್ಯ ತೆಗೆದುಕೊಳ್ಳುವ ರೀತಿ ಮೆಚ್ಚತಕ್ಕವುಗಳು. ಬೇರೆಯವರು

ಸಮ್ಮೇಲನವನ್ನು ಮಾಡಿದ ರೀತಿಗಿಂತ ನೀವು ಯಶಸ್ವಿಯಾಗಿ ಮಾಡಿದಿರಿ. ನಿಮ್ಮ ಕಾರ್ಯಕುಶಲತೆಯನ್ನು ಜಮಖಂಡಿಯಲ್ಲಿ ಇನ್ನೂ ಅನೇಕರು ಮೆಚ್ಚಿಕೊಂಡಿದ್ದಾರೆಂದು ನಾನು ನಂಬಿದ್ದೇನೆ. ನೀವೆಲ್ಲ ಸೇರಿ ಸಮ್ಮೇಲನವನ್ನು ಯಶಸ್ವಿಯಾಗಿ ಮಾಡಿದ ಬಗೆಗೆ ನನ್ನ ಅತ್ಯಂತ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಆ ಮಧುರವಾದ ಸ್ಮರಣೆಯನ್ನು ಮತ್ತು ಕೃತಜ್ಞತೆಯನ್ನು ಸದಾ ಕಾಲ ಕಾಯ್ದುಕೊಂಡು ಹೋಗುತ್ತೇನೆ".[೪೧]

ಪಂಡಿತಪ್ಪನವರ ಸಂಘಟಿತ ಕಾರ್ಯನಿರ್ವಹಣೆಯನ್ನು ಎಷ್ಟು ಸಮರ್ಥರಾಗಿ ನಿಭಾಯಿಸಬಲ್ಲರು ಎಂಬುದಕ್ಕೆ ಈ ಒಂದು ಪತ್ರ ಸಾಕು. ಅವರನ್ನು ಕಂಡ ಎಷ್ಟೋ ಜನರು ಅವರಲ್ಲಿ ಗುರುತಿಸುವುದು ಈ ಕಾರ್ಯತತ್ಪರತೆಯನ್ನೇ.

ಚಿಕ್ಕೋಡಿ ರಾಮಪ್ಪನವರು ಕೂಡ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಅನನ್ಯ ಸಂಬಂಧವನ್ನಿಟ್ಟುಕೊಂಡು ಬಂದಿದ್ದರು. ಪರಿಷತ್ಪತ್ರಿಕೆಯ ಚಂದಾದಾರರಾಗಿದ್ದರು. ಅಲ್ಲದೆ ಪರಿಷತ್ತಿನಿಂದ ಪ್ರಕಟಗೊಂಡ ಎಲ್ಲ ಪುಸ್ತಕಗಳನ್ನು ಕೊಂಡುಕೊಂಡಿದ್ದರು. ೪೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ ರಬಕವಿಯಲ್ಲಿ ಜರುಗಲು ರಾಮಪ್ಪನವರು ಕಾರಣೀಭೂತರಾದರಲ್ಲದೆ, ಸ್ವತಃ ಸ್ವಾಗತಾಧ್ಯಕ್ಷರಾಗಿ ಸಮರ್ಪಕವಾಗಿ ಕಾರ್ಯನೆರವೇರಿಸಿದರು. ಈ ಸಾಹಿತ್ಯ ಸಮ್ಮೇಳನಕ್ಕೆ ಎಲ್ಲರೂ ಸೇರಿ ದೇಣಿಗೆ ಕೂಡಿಸಲು ಪ್ರಾರಂಭಿಸಿದರು. ನಂತರ ರಾಮಪ್ಪನವರಿಗೆ 'ನೀನು ದೇಣಿಗೆ ಕೊಡುವುದಿಲ್ಲವೇ?' ಎಂದು ಪ್ರಶ್ನಿಸಿದಾಗ ಸಮ್ಮೇಳನಕ್ಕೆ ಊಟ ಉಪಚಾರಗಳಿಗೆ ಸಾಕಷ್ಟು ಖರ್ಚು ಮಾಡಿ, ಬಳಿಕವೂ ಕೊರತೆಯೆನಿಸಿದ ಹಣವನ್ನು ನಾನು ಭರಿಸುತ್ತೇನೆ ಎಂದರಂತೆ. ಇಂದಿಗೂ ರಬಕವಿ ಸಾಹಿತ್ಯ ಸಮ್ಮೇಳನದ ವೈಭವವನ್ನು ಕಣ್ಣಿಗೆ ಕಟ್ಟುವಂತೆ ರಬಕವಿ-ಬನಹಟ್ಟಿ ಮತ್ತು ಹುಲ್ಯಾಳದ ಜನತೆ ಹೇಳುತ್ತಾರೆ.[೪೨] ಇವರು ಸಾಹಿತ್ಯ ಸಮ್ಮೇಳನಗಳು ಎಲ್ಲಿಯೇ ನಡೆದರೂ ರಾಮಪ್ಪನವರು ತಪ್ಪದೇ ಹಾಜರಿರುತ್ತಿದ್ದರು. ಹೆಚ್ಚು ಶಿಕ್ಷಣ ಪಡೆಯದಿದ್ದರೂ ಸಾಹಿತ್ಯದ ಬಗ್ಗೆ ಆಸ್ಥೆ ಹೊಂದಿದ್ದರು.

೫.೪. ಸಾಹಿತ್ಯ ರಚನೆ:

ಕವಿ ತಮ್ಮಣ್ಣಪ್ಪನವರು:

ತಮ್ಮಣ್ಣಪ್ಪನವರು ಸ್ವತಃ ಕವಿಗಳಾಗಿದ್ದರಲ್ಲದೆ, ಅವುಗಳಿಗೆ ದಾಟಿ ಹಚ್ಚಿ ಹಾಡುತ್ತಿದ್ದರು. ಸಮಯ, ಸಂದರ್ಭಗಳಿಗೆ ತಕ್ಕಂತೆ ಹಾಡುಗಳನ್ನು ರಚಿಸಿ ಹಾಡುವುದು ಅವರಿಗೆ ಕರಗತವಾಗಿತ್ತು. 'ರಾಮಲಿಂಗಸುತ' ಎಂಬ ಕಾವ್ಯನಾಮದಿಂದ ಹಲವಾರು ಕವನಗಳನ್ನು ಬರೆದಿದ್ದಾರೆ. ಆದರೆ ಅವರ ಕವಿತೆಗಳು ಸಂಕಲನ ರೂಪದಲ್ಲಿ ಪ್ರಕಟವಾಗಿಲ್ಲ. 'ರಾಮಲಿಂಗ' ಚಿಕ್ಕೋಡಿ ಮನೆತನದ ದೇವರು. ಕೊಲ್ಹಾಪುರದಿಂದ ಸು. ೫ ಕಿ.ಮಿ. ದೂರದಲ್ಲಿ ಹಾತಕಲ್ಲಂಗಡಿ ಎಂಬ ಚಿಕ್ಕ ಊರಿನ ಗುಡ್ಡದ ಮೇಲೆ ರಾಮಲಿಂಗನ ದೇವಸ್ಥಾನವಿದೆ. ದೊಡ್ಡ ಗವಿಯೊಳಗೆ ಲಿಂಗದ ಮೇಲೆ ಸದಾ ನೀರು ಬಸಿಯುತ್ತಿರುತ್ತದೆ. ಇವತ್ತಿಗೂ ಚಿಕ್ಕೋಡಿ ಕುಟುಂಬದವರು ರಾಮಲಿಂಗನ ದೇವಸ್ಥಾನಕ್ಕೆ ನಡೆದುಕೊಳ್ಳುತ್ತಾರೆ. ಬಹುಶ: ತಮ್ಮಣ್ಣಪ್ಪನವರು ತಮ್ಮ ಮನೆತನದ ದೇವರನ್ನು ತಮ್ಮ ಕಾವ್ಯಾಂಕಿತವಾಗಿಟ್ಟುಕೊಂಡಿರಬಹುದು.

ಹೋಳಿಹುಣ್ಣಿವೆ, ಸಭೆಸಮಾರಂಭಗಳಲ್ಲಿ ಅವರು ಹಾಡು ರಚಿಸಿ ಹಾಡುತ್ತಿದ್ದನ್ನು ಬನಹಟ್ಟಿಯ ಹಿರಿಯರು ಜ್ಞಾಪಿಸಿಕೊಳ್ಳುತ್ತಾರೆ.[೩೨] ತಮ್ಮಣ್ಣಪ್ಪನವರು ಕನ್ನಡ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿ ಹೊಂದಿರುವ ಕಾರಣ ಅದೇ ವಿಷಯವನ್ನು ಕುರಿತು ಸಾಹಿತ್ಯ ಸಮ್ಮೇಳನಗಳಲ್ಲಿ ಕವನ ಬರೆದು, ತಾವೇ ಹಾಡಿ ಪ್ರೇಕ್ಷಕರ ಗಮನ ಸೆಳಯುತ್ತಿದ್ದರು. ವಿಜಾಪುರದಲ್ಲಿ ಜರುಗಿದ ಕರ್ಣಾಟಕ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮಣ್ಣಪ್ಪನವರು ರಚಿಸಿ ಹಾಡಿದ ಕವಿತೆಯಿದು.

ದಾಟಿ: ಸ್ವಾಮಿ ಸರ್ವೋತ್ತಮಳೇ ಸಕಲ ಜನಕಧಾರೆ

ಆವ ಪಾತಕವ ಮಾಡಿಹವೆಂದು ಪುಟ್ಟಿದೆವೊ। ನಾವೀ ಮಹಾರಾಷ್ಟ್ರ ಸಂಸ್ಥಾನಗಳಲಿ॥
ಏವೇಳ್ವೆನ್ಯೆ ಮಹಾರಾಷ್ಟ್ರ ಭಾಷೆಯ ಬಲುಮೆ। ತಾವಿಲ್ಲ ಕನ್ನಡಕೆ ಸಂಸ್ಥಾನಗಳಲಿ॥೧॥
ಮನೆಯಲ್ಲಿ ಕನ್ನಡವನಾಡುವೆವು ಪಗಲಿರುಳು। ಜನಪದ ಭಾಷೆ ಕನ್ನಡವೇ ಇರಲು॥
ಜನಪರು ಮರಾಠಿಯೊಳ್ ರಾಜ್ಯಕಾರ್ಯವ ನಡಿಸಿ। ಅನುಗ್ಗೈಯುವರಿದನು ಪರಿಹರಿಪುದೆಂತೂ॥೨॥
ಅಳಿದುದೆಮ್ಮಯ ಮೇಲ್ಮೆ ಪೋದಿತ್ತು ಗೌರವಂ। ಮುಳುಗಿರುವೆ ಅಜ್ಞಾನತಿ ಮಿರಾಬ್ಧಿಯಲಿ
ಇಳೆಯಲ್ಲಿ ಮೇಲಾದ ಕರ್ಣಾಟ ಸಂಸ್ಕೃತಿಗೆ। ಅಲಸದಿಂದೆರವಾಗಿ ಕೆಟ್ಟೆವೈ ಮಿಗಿಲು ॥೩॥
ಸೆರೆಯಲ್ಲಿ ಬಿದ್ದಿಹಳು ಕರ್ಣಾಟ ಭಾಷಾಂಬೆ। ಪರಭಾಷೆಯಿ ರಾಜರಾಡಳಿತೆಯಲ್ಲಿ॥
ತೆರೆದ ಕಣ್ಣುಗಳನ್ನು ಸ್ವಾಭಿಮಾನದೊಳವಳ। ಸೆರೆಯನ್ನು ತೊಲಗಿಸಿರಿ ಸತ್ಪುತ್ರರಾಗಿ ॥೪॥
ನೆರೆದುದೀ ಕರ್ಣಾಟ ಸಾಹಿತ್ಯ ಪರಿಷತ್ತು। ತರಲು ಕನ್ನಡ ನಾಡಿಗೆ ಸುಸ್ಥಿತಿಯನಿನ್ನು
ಹರಿಸಿ ಹತಭಾಗ್ಯ ಕನ್ನಡದ ಕೀಳಿರವನ್ನು ಮರೆಯಿಸಿರಿ ತದ್ಧವನೀ ಭೂಮಿಯಲ್ಲಿ ॥೫॥
ಆಲಸವೇತಕ್ಕಿನ್ನು ನೀವವಳ ಸತ್ಸುತರು। ಮಲಗುವದು ವಿಹಿತವೇ ನಿಶ್ಚಿಂತೆಯಿಂದ॥
ತಳೆದೀರ್ಷೆಯಂ ಸತತ ಯತ್ನಿಸಿರಿ ಮನಮುಟ್ಟಿ। ಗಳಿಲನೇ ಸುಫಲವೀವನು ರಾಮಲಿಂಗ[೪೪]

ವಿಶೇಷವೆಂದರೆ ಈ ಹಾಡು ಕನ್ನಡ ಸಾಹಿತ್ಯಪರಿಷತ್ತಿನ 'ಪರಿಷತ್ಪತ್ರಿಕೆ'ಯಲ್ಲಿ ಪ್ರಕಟವಾಯಿತು. ಉತ್ತರಕರ್ಣಾಟಕದ ಮಾತೃಭಾಷೆ ಕನ್ನಡ. ಇದನ್ನು ಆಳುವ ಸಂಸ್ಥಾನಿಕರ ಮಾತೃಭಾಷೆ ಮರಾಠಿ. ಹೀಗಾಗಿ ಜನಭಾಷೆಗಿಂತ ರಾಜಭಾಷೆಯೇ ಕರ್ಣಾಟಕದಲ್ಲಿ ಪ್ರಚಲಿತವಾಗಿ ಕನ್ನಡಿಗರು ತಮ್ಮ ಭಾಷೆಯನ್ನೇ ಮರೆಯುವಂತಾಗಿತ್ತು. ಕನ್ನಡಭಾಷೆಯ ಜಾಗೃತಿಗೆ ಹುಟ್ಟಿದ ಕನ್ನಡ ಸಾಹಿತ್ಯಪರಿಷತ್ತಿನ ಸಮ್ಮೇಳನದಲ್ಲಿ ಕನ್ನಡಿಗರ ಸ್ವಾಭಿಮಾನ ಕೆರಳಿಸುವ ಭಾಷಣಗಳು, ಹಾಡುಗಳು ಇರುತ್ತಿದ್ದವು. ತಮ್ಮಣ್ಣಪ್ಪನವರು ಈ ಸಮ್ಮೇಳನಗಳಲ್ಲಿ ಉತ್ತಮ ಭಾಷಣಕಾರರಾಗಿಯೂ ಒಳ್ಳೆಯ ಹಾಡುಗಾರಾಗಿಯೂ ಪ್ರೇಕ್ಷಕರ ಗಮನ ಸೆಳೆಯುತ್ತಿದ್ದರು. ಈ ಕವನದುದ್ದಕ್ಕೂ ಕನ್ನಡ ನಾಡಿನ ದುಃಸ್ಥಿತಿ, ಕನ್ನಡಿಗರ ನಿರಭಿಮಾನವನ್ನು ಹೇಳುವುದರ ಜೊತೆಗೆ ಸ್ವಾಭಿಮಾನಿಗಳಾಗಲು ಕವನದ ಮೂಲಕ ತಮ್ಮಣ್ಣಪ್ಪನವರು ಕನ್ನಡಿಗರಿಗೆ ಕರೆ ನೀಡಿದ್ದಾರೆ.

೧೯೨೫ರಲ್ಲಿ ಬೆಳಗಾವಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷರಾದ ತಮ್ಮಣ್ಣಪ್ಪವರು ತಮ್ಮ ಭಾಷಣದುದ್ದಕ್ಕೂ ಕನ್ನಡ ನಾಡು-ನುಡಿ-ಸಂಸ್ಕೃತಿಯ ಬಗ್ಗೆ ಮಾತನಾಡಿದರು. ಭಾಷಣದ ಕೊನೆಯಲ್ಲಿ ತಮ್ಮ ಸ್ವರಚಿತ ಕವನವನ್ನು ಪ್ರಸ್ತುತ ಪಡಿಸಿದರು.

ಜಯಮಕ್ಕೆ ಜಯಮಕ್ಕೆ ಸಿರಿಗನ್ನಡಕ್ಕೆ।
ಲಯವಾಗಿ ಬಂದೆಡರು ಸುಖಗೊಡಲು ಲೋಕಕೆ ॥ಪ॥
ತುಂಗವಿಕ್ರಮದಿಂದೆ ಜಸವಡೆದ ಚಾಲುಕ್ಯ।
ಗಂಗ ಪಲ್ಲವ ರಟ್ಟ ವಿಜಯನಗರಂ॥
ಭಂಗವಿರದಿರುವ ಮೈಸೂರು ಮೊದಲಾದ ರಾ।
ಜ್ಯಂಗಳೊಳ್ ಪೆಸರಾಂತ ತಾಯನುಡಿಗೆ ॥೧॥
ಮುನ್ನ ಕವಿಚಕ್ರವರ್ತ್ಯಾದಿ ಬಿರುದುಗಳನು।
ಗನ್ನ ನೃಪ ಸಾಮ್ರಾಟರಿಂದೆ ಪಡೆದಾ।
ರನ್ನ ಪೊನ್ನರು ಷಡಕ್ಷರಿಯು ಲಕ್ಷ್ಮೀಶಾದಿ॥
ಚೆನ್ನ ವರಕವಿಗಳಂ ಪಡೆದ ತಾಯಿ ॥೨॥
ತನ್ನನೋಲೈಪ ನಿಜಭಕ್ತರಿಗೆ ಸವಿನುಡಿಯೊ।
ಉನ್ನತಾತ್ಮಾನುಭವ ಜ್ಞಾನವನು॥
ಚೆನ್ನಾಗಿ ಬೋಧಿಸುತೆ ಬಗೆಯನ್ನು ರಂಜಿಸುತೆ।
ಸತ್ಯಶರಣರ ನುಡಿಯ ಮರ್ಮವಂ ತಿಳಿಸುತ್ತೆ।
ಸ್ತುತ್ಯದಾಸರ ಬೋಧಸುಧೆಯ ಕುಡಿಸಿ।
ನಿತ್ಯಸುಖವನ್ನೀವ ಶ್ರೀ ರಾಮಲಿಂಗನೊಳ್।
ಚಿತ್ತ ಲಯಗೊಳಿಪ ಕನ್ನಡವೆಣ್ಣಿಗೆ ॥೪॥[೪೫]

ಈ ಕವನದುದ್ದಕ್ಕೂ ಕನ್ನಡ ನಾಡಿನ ಪರಂಪರೆ, ಹಿರಿಮೆ ಸಾಹಿತ್ಯ, ಸಂಸ್ಕೃತಿಯನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ಗತವೈಭವವನ್ನು ಮೆಲುಕು ಹಾಕುತ್ತ ಕವಿಗಳನ್ನು, ಶರಣರನ್ನು, ದಾಸರನ್ನು ಸ್ಮರಿಸಿದ್ದಾರೆ. ಕನ್ನಡ ನಾಡಿನ ಶ್ರೀಮಂತಿಕೆಗೆ ಯಾವುದೇ ಧಕ್ಕೆ, ಎಡರು-ತೊಡರುಗಳು ಬರದೇ ಇರಲಿ ಎಂದು ಹಾರೈಸಿದ್ದಾರೆ.

ತಮ್ಮಣ್ಣಪ್ಪನವರಿಗೂ ಮತ್ತು ಜಮಖಂಡಿಯ ಸಂಸ್ಥಾನಿಕರಾದ ಶಂಕರರಾವ ಪಟವರ್ಧನ ಅವರಿಗೂ ಒಳ್ಳೆಯ ಸ್ನೇಹಸಂಬಂಧವಿತ್ತು. ಆ ಸ್ನೇಹವನ್ನು ಬಳಸಿಕೊಂಡು ತಮ್ಮಣ್ಣಪ್ಪನವರು ಮರಾಠಿ ಶಾಲೆಗಳನ್ನು ಕನ್ನಡ ಶಾಲೆಗಳನ್ನಾಗಿ ಪರಿವರ್ತಿಸಿದರು. ಅಲ್ಲದೆ ಬನಹಟ್ಟಿಯಲ್ಲಿ ಆಂಗ್ಲೋ ಫಸ್ಟ್‌ಗ್ರೇಡ್ ಶಾಲೆಯನ್ನು ತೆರೆಯಲು ಅನುಮತಿ ನೀಡಿದಾಗ ಶಂಕರರಾವ ಪಟವರ್ಧನ ಬನಹಟ್ಟಿ ನಗರಸಭೆಯವರು

ಅವರಿಗೆ ಮಾನಪತ್ರವನ್ನು ಕೊಡುವ ಸಂದರ್ಭದಲ್ಲಿ ತಮ್ಮಣ್ಣಪ್ಪನವರು ಅವರನ್ನು ಕುರಿತು ಈ ಕವನಗಳನ್ನು ರಚಿಸಿದರು.

೧ನೇ ಪದ

ರಾಗ-ಭೂಪ ತ್ರಿತಾಲ

ಸ್ವಾಗತವನ್ನನು-ರಾಗದಿ ಮಾಳ್ಪೆವು
ಬಾಗಿ ನೃಪಾಂಘ್ರಿಗೆ ॥ಪ॥
ಬೇಡಲು ಫರ್ಸ್ಟ್‌ಗ್ರೇಡ ಶಾಲೆಯಂ॥
ಕೂಡಲೆ ಕೊಟ್ಟೀ। ನಾಡಿನ ದೊರೆಯಂ ॥೧॥
ಈ ದಿನಮಿಂಗ್ಲೀಷ-ದೈದನೆ ತರಗತಿ
ಯೋದಿನುಪಕ್ರಮ-ಕೈದಿದ ನೃಪನಂ ॥೨॥
ಶ್ರೀ ಶಂಕರ ಧರಣೀಶಗೆ ದೀರ್ಘಾ
ಯುಸ್ಸಂತತಿ ಕುಡಲೀಶ್ವರನೆನ್ಮತಂ[೬೬] ॥೩॥

ತಮ್ಮಣ್ಣಪ್ಪನವರಿಗಿದ್ದ ಸಂಗೀತದ ಅರಿವನ್ನು ಈ ಹಾಡು ಸೂಚಿಸುತ್ತದೆ. ರಾಗತಾಳಗಳನ್ನು ಆಧರಿಸಿ ಪದ ಬರೆಯುವ ಮತ್ತು ಹಾಡುವ ಹವ್ಯಾಸ ಅವರಿಗಿದ್ದದ್ದು ತಿಳಿಯುತ್ತದೆ. ಈ ಮಾನಪತ್ರದಲ್ಲಿಯ ೨ ಮತ್ತು ೩ನೆಯ ಪದಗಳು ಜನಪರ ಕಾಳಜಿಯನ್ನು ಹೊಂದಿರುವ, ವಿದ್ಯಾಸಂಸ್ಥೆಗಳನ್ನು ತೆರೆಯುವಲ್ಲಿ ಸಹಾಯಮಾಡುತ್ತಿರುವ ಶಂಕರರಾವ ಪಟವರ್ಧನರಿಗೆ ಶುಭಹಾರೈಸುವ ವಿಷಯವನ್ನೊಳಗೊಂಡಿವೆ. ಇವುಗಳನ್ನು ಮರಾಠಿ ಹಾಡುಗಳ ದಾಟಿಯಲ್ಲಿ ಬರೆದಿದ್ದಾರೆ.

೨ನೇ ಪದ (ದಾಟಿ)- ರಜನಿನಾಥ ಹಾ ನಭೀ ಉಗವಾಲಾ॥
ರಾಜವಥೀ ಜಣು ದೀಪಚಿ ಗಮಲಾ॥(ದೇವಲಕೃತ ಮೃಚ್ಛಕಟಿಕ.)

ಧನ್ಯ ನೃಪಂ ಶ್ರೀ ಶಂಕರರಾವಂ॥
ಪುಣ್ಯಶೀಲನೆಂದೆನಿಸಿ ಬಾಳುವಂ॥ಪ॥
ಉಚಿತವಾಗಿ ವಿದ್ಯಾ ಶಿಕ್ಷಣಮಂ॥
ಅಚಲ ಸುನೀತಿಯ ಭೂಪಚಂದ್ರಮಂ॥
ಸುಚರಿತ ಚಂದ್ರಿಕೆ-ಯಿಂ ನಲವೀವಂ ॥೧॥
ಮಕ್ಕಳಂತೆ ಪ್ರಜೆಗಳನು ನೋಡುತಂ॥
ಅಕ್ಕರೆಯಿಂದವರನ್ನು ಪೊರೆಯುತಂ॥
ಪೊಕ್ಕು ಪ್ರಜಾ ಮಾ__ನಸದಿ ರಮಿಸುತಂ॥
ಚಕ್ಕಂದದದೆ ನೃಪಹಂಸ-ನಲೆಯುವಂ ॥೨॥

ಪಟವರ್ಧನ ಕುಲ-ಭೂಷಣನೀತಂ॥
ಪಟು ನಿರ್ಮಲಮತಿ। ಪಕ್ಷವಿರಹಿತಂ॥
ಚಟುಲ ರಾಮಲಿಂ-ಗಾಂಘ್ರಿವಿನೀತಂ॥
ಸ್ಫುಟೌದಾರ್ಯದಿಂ। ಧರೆಯೊಳು ಮೆರೆವಂ[೪೭] ॥೩॥

ಸಂಸ್ಥಾನಿಕರು ತಮ್ಮ ಆಡಳಿತಭಾಷೆಯಾದ ಮರಾಠಿಯನ್ನೇ ಕಲಿಯಬೇಕೆಂಬ ಹಟದಿಂದ ಕನ್ನಡವನ್ನು ಉಪೇಕ್ಷಿಸುತ್ತಿದ್ದರು. ಜಮಖಂಡಿಯ ಪಟವರ್ಧನ ಮಹಾರಾಜ ಮಾತ್ರ ಇದಕ್ಕೆ ಹೊರತಾಗಿದ್ದರು. ಪ್ರಜೆಗಳ ಮನಸ್ಸನ್ನು ಅರಿತು, ಕನ್ನಡ ಶಿಕ್ಷಣ ಕೊಡುವಲ್ಲಿ ಮುಂದಾದರು. ಇಂತಹ ರಾಜರು ನಮ್ಮ ನಾಡಿನಲ್ಲಿ ಇದ್ದರು ಎನ್ನುವ ದಾಖಲಾತಿಗಾಗಿ ತಮ್ಮಣ್ಣಪ್ಪನವರು ಈ ಪದ್ಯಗಳನ್ನು ಬರೆದರು.

೩ನೇಪದ (ಸಾಂವಳಾ ವರ ಬರಾ ಗೌರವಧೂಲಾ॥
ನೇಮ ಹಾ ದೇವದಿಕೀ ಹಾಚ ಪರಿಪಾಹಿಲಾ॥ಧೃ॥
(ದೇವಲಕೃತ ಸಂಗೀತ ಶಾರದಾ)
ಜಯವಿರಲಿ ಸಂತತಂ ಭೂಪರತ್ನಾ॥
ನಯನೀತಿಧರ್ಮದಿಂ ನಡೆ ಲೋಕಭರಣಾ ॥ಪ॥
ಜನಿಸಿ ವಿಖ್ಯಾತ ಪಟ-ವರ್ಧನ ಕುಲಾಬ್ಧಿಯಲಿ॥
ವಿನುತ ಸಿಂಹಾಸನವನೇರಿರುವೆ ನೀನು॥
ಜನರ ಮನವೊಲಿವಂತೆ ರಾಜ್ಯವನ್ನಾಳುತ್ತೆ॥
ಘನಕೀರ್ತಿವಧುವನ್ನು ವರಿಸು ಸುಗುಣಾ ॥೧॥
ಪ್ರಗತಿಧೋರಣೆಯನ್ನು ಕೈಕೊಂಡು ಪ್ರಜೆಗಳಿಗೆ॥
ಪಗಲಿರುಳು ಸುಖಶಾಂತಿಯನ್ನು ಕೊಟ್ಟು॥
ಮಿಗಿಲು ಸನ್ಮಾನಗಳನೊಂದಿ ಸಮ್ರಾಟರಿಂ॥
ಸೊಗದಿಂದೆ ಬಾಳಯ್ಯ ಭೂಮಿರಮಣಾ ॥೨॥
ಮಹಿತ ಯುವರಾಜನುಂ ಚಾರುನೃಪದುಹಿತೆಯುಂ॥
ಮಹಿಷಿ ಲೀಲಾವತೀದೇವಿ ಸಹಿತಂ॥
ಬಹುಳ ದೀರ್ಘಾಯುರಾರೋಗ್ಯ ಸಂತತಿಯನ್ನು ॥
ಮಹಿಪನೇ ನಿನಗೀಗೆ ರಾಮಲಿಂಗಂ[೪೮] ॥೩॥

ಪ್ರಜಾರಕ್ಷಕನಾದ ಪಟವರ್ಧನ ಮಹಾರಾಜರಿಗೆ ಬನಹಟ್ಟಿಯ ಜನತೆಯ ಪರವಾಗಿ ತಮ್ಮಣ್ಣಪ್ಪನವರು ಪದ್ಯದ ಮೂಲಕ ಹಾರೈಸಿದ್ದಾರೆ. ಈ ಮೂರು ಪದ್ಯಗಳನ್ನು ಬರೆದು ಜೂನ ೩೦, ೧೯೨೭ರಂದು ಪ್ರಕಟಿಸಿದ ತಮ್ಮಣ್ಣಪ್ಪನವರು ಒಂದು ರೀತಿಯಲ್ಲಿ ಸಂಸ್ಥಾನಿಕರ ಔದಾರ್ಯವನ್ನು

ದಾಖಲಿಸಿದ್ದಾರೆ. ಪಟವರ್ಧನರ ಸಹಾಯ ಸಹಕಾರಗಳಿಂದ ಆರಂಭಿಸಿದ ಶಿಕ್ಷಣ ಸಂಸ್ಥೆಗಳು ಬೆಳೆದು ಸಾಕಷ್ಟು ಪ್ರಗತಿಪರ ಹಂತದಲ್ಲಿದ್ದರೆ, ತಮ್ಮಣ್ಣಪ್ಪನವರು ಕೃತಜ್ಞಾಪರವಾಗಿ ಪಟವರ್ಧನರಿಗೆ ಕಾಣಿಕೆಯಾಗಿ ನೀಡಿದ ಹಾಡುಗಳು ಇಂದಿಗೂ ಜೀವಂತವಾಗಿವೆ.

೧೯೦೪ರಲ್ಲಿ ಬಾಗಲಕೋಟೆಯಲ್ಲಿ ಜರುಗಿದ ನಾಲ್ಕನೆಯ ಶ್ರೀಮದ್ವೀರಶೈವ ಮಹಾಸಭೆಯಲ್ಲಿ 'ಲಿಂಗಾಯತ ಧರ್ಮದವರಿಗೆ ಧರ್ಮಗ್ರಂಥದ ಅವಶ್ಯಕತೆ'ಯನ್ನು ಕುರಿತು ಭಾಷಣ ಮಾಡಿದರು. ಆ ಸಂದರ್ಭದಲ್ಲಿ ತಮ್ಮಣ್ಣಪ್ಪನವರು ತಾವು ರಚಿಸಿದ ಕಂದಪದ್ಯವನ್ನು ಓದಿದರು.

ಇತಿಹಾಸಂ ಪೂರ್ವಜರಂ।
ಸ್ಮೃತಿಗೊಳಿಪುದು ತೋರ್ಪುದುನ್ನತಿಯ ನಿಜಪಥವಂ॥
ಹಿತಗೈವುದೆಲ್ಲ ಬಗೆಯಿಂ।
ದಿತಿಹಾಸಂ ಮೃತರ ದೇಹ ಸಂಜೀವವನಲ್ಕೆ॥[೪೯]

ಈ ಪದ್ಯದಲ್ಲಿಯೇ ತಮ್ಮಣ್ಣಪ್ಪನವರು ಮಾಡಿದ ಸುದೀರ್ಘ ಭಾಷಣದ ಸಾರಾಂಶವನ್ನು ತಿಳಿಯಬಹುದು. ಕೇವಲ ಮುಲ್ಕಿ ಪರೀಕ್ಷೆ ಪಾಸಾದ ತಮ್ಮಣ್ಣಪ್ಪನವರು ಛಂದಸ್ಸಿನ ಬಗ್ಗೆಯೂ ಗಾಢಜ್ಞಾನ ಹೊಂದಿರುವುದು ನಿಜಕ್ಕೂ ಆಶ್ಚರ್ಯಕರ.

ಅಳಿಯ ಫ.ಗು.ಹಳಕಟ್ಟಿಯವರು ತಮ್ಮಣ್ಣಪ್ಪನವರ ಮಹದಾಶೆಯಂತೆ ಮೊದಲು 'ಶಿವಾನುಭವ' ಪತ್ರಿಕೆಯನ್ನು, ನಂತರ ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರಗಳನ್ನು ಪರಿಚಯಿಸಲು 'ನವಕರ್ನಾಟಕ' ಎಂಬ ಪತ್ರಿಕೆಯನ್ನು ಹೊರತಂದರು. 'ನವಕರ್ನಾಟಕ' ಪತ್ರಿಕೆ ಹೊರಬಂದಾಗ ಅದರ ಉದ್ದೇಶವನ್ನು ತಮ್ಮಣ್ಣಪ್ಪನವರು ಒಂದು ಪದ್ಯದಲ್ಲಿ ಹೀಗೆ ಹೇಳಿದ್ದಾರೆ.

ಬುವಿಯೊಳ್ ವೈಭವದಿಂದೆ ಮುನ್ನ ಮೆರೆದೀ ತಾಯ್ನಾಡು ಕರ್ನಾಟಕಂ
ತವೆ ಹೀನಸ್ಥಿತಿಯನ್ನು ತಾಳ್ದುದು ತದುದ್ಧಾರಾರ್ಥಕಾಲೋಚಿತಂ
ವಿವಿಧ ಜ್ಞಾನವಿಕಾಸ ಸಂಸ್ಕೃತಿ ಕಲಾ ಸಂವರ್ಧನೆಗೈಯಲೀ
'ನವಕರ್ನಾಟಕ' ಜನ್ಮವೆತ್ತಿಹುದು ತಾಯ್ನಾಡೇಳ್ಗೆಯುದ್ದೇಶದಿಂ॥ [೫೦]

ಅನ್ಯಭಾಷೆ, ಅನ್ಯಸಂಸ್ಕೃತಿಯ ದಾಳಿಗೆ ತುತ್ತಾಗಿ ನಲುಗಿದ ಕರ್ನಾಟಕದ ದುಸ್ಥಿತಿಯನ್ನು ನೀಗಿಸಿ ಹೊಸತನ್ನು ತರಬೇಕೆಂದು ಪತ್ರಿಕೆ ಪ್ರಕಟಿಸುತ್ತಿರುವುದು ತಮ್ಮಣ್ಣಪ್ಪನವರಿಗೆ ಬಹು ಹೆಮ್ಮೆಯ ವಿಷಯವಾಗಿತ್ತು. ಇದರ ದ್ಯೋತಕವಾಗಿ ಬರೆದ ಕವನವನ್ನು ಹಳಕಟ್ಟಿಯವರು ಪ್ರಕಟಿಸಿದ್ದಾರೆ. ತಮ್ಮಣ್ಣಪ್ಪನವರು ಇದೇ ರೀತಿ ಅವರು ಕಟ್ಟಿದ ನೂರಾರು ಪದ್ಯಗಳು ಇತಿಹಾಸದ ಪುಟಗಳಲ್ಲಿ ದಾಖಲೆಯಾಗದೆ ನಾಶವಾಗಿ ಹೋಗಿವೆ.

ನಾಟಕಕಾರ ತಮ್ಮಣ್ಣಪ್ಪನವರು:

ತಮ್ಮಣ್ಣಪ್ಪನವರು ಸ್ವತಃ ನಟ, ನಾಟಕಕಾರರು ಆಗಿದ್ದರು. ಅವರು ಒಟ್ಟು ಆರು ನಾಟಕಗಳನ್ನು ಬರೆದಿರುವ ಉಲ್ಲೇಖ ನಮಗೆ ದೊರೆಯುತ್ತದೆ. ಅವುಗಳೆಂದರೆ 'ಉಷಾ ಪರಿಣಯ', 'ಪ್ರಮೀಳಾ

ಸ್ವಯಂವರ', 'ಗಿರಿಜಾ ಸ್ವಯಂವರ' 'ಭೀಮಸೇನ', 'ಶಾರದಾ' ಮತ್ತು ಜಿ.ಶಿವಮೂರ್ತಿಶಾಸ್ತ್ರಿಗಳು ಗುರುತಿಸಿದ 'ಬಾಣಾಸುರ'.[೫೧] 'ಹರಿಶ್ಚಂದ್ರ' ಪ್ರಕಟಿತ ನಾಟಕ'[೫೨] ಎಂದು ಪ್ರೊ.ಮಲ್ಲಿಕಾರ್ಜುನ ಹುಲಗಬಾಳಿ ಅವರು ಹೇಳಿದ ವಿಷಯ ನಿರಾಧಾರವಾದುದು. ಇದು ಎಲ್ಲಿಯೂ ಉಲ್ಲೇಖವಾಗಿಲ್ಲ. ಇವುಗಳಲ್ಲಿ ನಮಗೆ ದೊರೆತಿರುವುದು ಪ್ರಕಟಗೊಂಡ 'ಉಷಾಪರಿಣಯ' ನಾಟಕ ಮಾತ್ರ.

'ಉಷಾ ಪರಿಣಯ'ವು ಕೇವಲ ೮೭ ಪುಟದ ಚಿಕ್ಕ ಗಾತ್ರದ ನಾಟಕ. ಬೆಂಗಳೂರಿನ ವಿಚಾರದರ್ಪಣ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿತವಾಗಿ ೧೮೮೩ರಲ್ಲಿ ಪ್ರಕಟವಾಯಿತು. ತಮ್ಮಣ್ಣಪ್ಪನವರು ಆ ವೇಳೆಯಲ್ಲಿ ಸಾಂಗಲಿ ಸಂಸ್ಥಾನದ ರಬಕವಿಯ ಎರಡನೆಯ ನಂಬರ ಶಾಲೆಯ ಉಪಶಿಕ್ಷಕರಾಗಿದ್ದರು. ಆಗ ಅವರ ವಯಸ್ಸು ಕೇವಲ ಇಪ್ಪತ್ತೊಂದು. ಈ ನಾಟಕವನ್ನು ತಮ್ಮಣ್ಣಪ್ಪನವರು ಕರ್ನಾಟಕ ಭಾಷಾಭಿಮಾನಿಗಳಾದ ಮಿತ್ರವರ್ಯ ವೆಂಕಟೇಶ ಬಾಳಾಜಿ ಆನಿಖಿಂಡಿ ಮರ್ಚಂಟ, ರಬಕವಿ ಇವರಿಗೆ ಆದರಪೂರ್ವಕವಾಗಿ ಸಮರ್ಪಿಸಿದ್ದಾರೆ. ಜಮಖಂಡಿಯ ಪಟವರ್ಧನರ ಸಂಸ್ಥಾನದಲ್ಲಿ ತಮ್ಮಣ್ಣಪ್ಪನವರು ಮತ್ತು ಆನಿಖಿಂಡಿಯವರಿಗೆ ವಿಶೇಷ ಸ್ಥಾನವಿತ್ತು. 'ಅವರು ಬರೆದು ಪ್ರಕಟಿಸಿದ 'ಉಷಾ ಪರಿಣಯ' ನಾಟಕ ಕನ್ನಡದ ಪ್ರಕಟಿತ ಮೊದಲ ನಾಟಕವೆಂದು ಗುರುತಿಸಿಲಾಗಿದೆ.[೫೩]

ತಮ್ಮಣ್ಣಪ್ಪನವರು 'ಉಷಾಪರಿಣಯ' ನಾಟಕದ ಪ್ರಸ್ತಾವನೆಯಲ್ಲಿ ನಾಟಕ ರಚನೆಯ ಉದ್ದೇಶವನ್ನು ಕುರಿತು ಹೀಗೆ ಪ್ರಸ್ತಾಪಿಸುತ್ತಾರೆ. "ಯಾವುದೊಂದು ಭಾಷೆಯು ಪೂರ್ಣರೀತಿಯಿಂದ ಸುಧಾರಿಸಬೇಕಾದರೆ, ಆ ಭಾಷೆಯಲ್ಲಿ ಅನೇಕ ವಿಷಯಗಳ ಗ್ರಂಥ ಸಮೃದ್ಧಿಯಾಗುವದು ಉಚಿತವಿರುತ್ತದೆ." ಇದರಿಂದ ತಮ್ಮಣ್ಣಪ್ಪನವರ ಪ್ರಕಾರ ಕನ್ನಡಭಾಷೆ ಸಂವರ್ಧಿಸಬೇಕಾದರೆ ಎಲ್ಲ ಕ್ಷೇತ್ರಗಳಲ್ಲಿಯೂ ಕನ್ನಡಭಾಷಾ ಕೃತಿಗಳು ಹೊರಬರಬೇಕು. ಕೃತಿಗಳು ಕನ್ನಡ ಜನತೆಗೆ ಲಭ್ಯವಾದಷ್ಟೂ ಕನ್ನಡ ಜನತೆಗೆ ತಮ್ಮ ಭಾಷೆಯ ಬಗ್ಗೆ ಪ್ರೌಢಿಮೆ ಬೆಳೆಯುತ್ತ ಹೋಗುತ್ತದೆ. ಅನ್ಯಭಾಷೆಯ ಸಂಸರ್ಗದಲ್ಲಿ ಇರುವ ಕನ್ನಡಿಗನಿಗೆ ತನ್ನ ಭಾಷೆಯ ಶಕ್ತಿಯ ಅರಿವಿನ ಅಗತ್ಯತೆ ಅವಶ್ಯ ಎಂಬ ಧೋರಣೆ ತಮ್ಮಣ್ಣಪ್ಪನವರದಾಗಿದೆ.

ಕನ್ನಡಭಾಷೆಯಲ್ಲಿ ಸಾಹಿತ್ಯಕೃಷಿಯು ಬಹುಕುಂಠಿತವಾದುದರಿಂದ, ಜನರಿಗೆ ಕಾದಂಬರಿ, ನಾಟಕಗಳಂಥ ಮನೋರಂಜಕ ಗ್ರಂಥಗಳು ದೊರೆಯುತ್ತಿಲ್ಲ. ಇಂಥ ಪುಸ್ತಕಗಳನ್ನು ಕೊಟ್ಟರೆ ಜನರ ಮನಸ್ಸು ಆಕರ್ಷಿತವಾಗಿ, ಅವರು ಸಹಜ ಸಾಹಿತ್ಯಪ್ರಿಯರಾಗುತ್ತಾರೆ. ಹೀಗೆ ಮಾಡದೆ ನೇರವಾಗಿ ಶಾಸ್ತ್ರೀಯ ಗ್ರಂಥಗಳನ್ನು ಕೊಟ್ಟರೆ, ಅವುಗಳ ತಲೆಬುಡ ಅರ್ಥವಾಗದ್ದರಿಂದ, ಆ ಗ್ರಂಥಗಳು ಅಪ್ರಿಯವಾಗುವವು. ಇದರಿಂದ ಕರ್ಣಾಟಕ ಭಾಷಾಭಿವೃದ್ಧಿ ವರ್ಧಿಸುವುದಿಲ್ಲ. ಪ್ರಸ್ತುತ ಸಮಾಜಕ್ಕೆ ಪದ್ಯ ಸಾಹಿತ್ಯಕ್ಕಿಂತ ಗದ್ಯಗ್ರಂಥಗಳನ್ನು ರಚಿಸುವುದು ಸೂಕ್ತ' ಎಂದು ಸೂಚಿಸಿದ್ದಾರೆ.

ಈ ನಾಟಕದ ಕಥಾವಸ್ತು ದ್ವಾಪಾರಯುಗದಲ್ಲಿ ಶೋಣಿತವೆಂಬ ನಗರದೊಳಗೆ ಬಾಣಾಸುರನೆಂಬ ದೈತ್ಯೇಂದ್ರನು ಸಾರ್ವಭೌಮತ್ವದಿಂದ ಆಳುತ್ತಿದ್ದನು. ಆತನಿಗೆ 'ಉಷೆಯೆಂಬ ಅತಿ ಸದ್ಗುಣಿಯಾದ, ಸುಂದರಿಯಾದ ಕನ್ಯಾಮಣಿಯಿದ್ದಳು. ಅವಳಿಗೆ ಪಾರ್ವತಿದೇವಿಯು "ವೈಶಾಖಶುದ್ಧ

ದ್ವಾದಶಿಯ ದಿವಸ ಸ್ವಪ್ನದಲ್ಲಿ ನಿನ್ನನ್ನು ಯಾವ ಪುರುಷನು ಉಪಭೋಗಿಸುವನೋ, ಆತನೇ ನಿನ್ನ ಕಾಂತನು" ಹೀಗೆ ವರವನ್ನು ಕೊಟ್ಟಳು. ಇತ್ತ ಬಾಣಾಸುರನಾದರೂ ಭುಜಭಾರದಿಂದ ಮದೋನ್ಮತ್ತನಾಗಲು, ಶ್ರೀಶಂಕರನು "ನಿನ್ನ ಧ್ವಜಸ್ತಂಭದ ಮೇಲಿನ ಮಯೂರವು ಭೂತಲಕ್ಕೆ ಪತನ ಹೊಂದಿದ ಮೇಲೆ ಭುಜಭಾರವೆಲ್ಲ ಹರಣವಾಗುವುದು" ಎಂದು ವರವನ್ನು ಕೊಟ್ಟನು. ಅನಂತರ ಪಾರ್ವತಿದೇವಿಯು ಕೊಟ್ಟ ವರದಂತೆ ಉಷೆಯ ಸ್ವಪ್ನದಲ್ಲಿ ಅನಿರುದ್ಧನು ಬಂದು ಭೋಗ ಕೊಟ್ಟು ಹೋದನು. ಆ ಬಳಿಕ ಉಷೆಯು ತನ್ನ ಸಖಿಯಾದ ಚಿತ್ರಲೇಖೆಯ ಕಡೆಯಿಂದ ಅನಿರುದ್ಧನನ್ನು ತನ್ನ ಮಂದಿರಕ್ಕೆ ಕರೆಯಿಸಿ, ವಿಲಾಸೋಪಭೋಗದಲ್ಲಿರಲು ಗರ್ಭವತಿಯಾದಳು. ಈ ವೃತ್ತಾಂತವು ಬಾಣನಿಗೆ ಶ್ರುತವಾಗಿ ಆತನು ಅನಿರುದ್ಧನನ್ನು ಕಾರಾಗೃಹದಲ್ಲಿ ಇಟ್ಟನು. ಇತ್ತ ನಾರದನು ಕೃಷ್ಣನಿಗೆ ಅನಿರುದ್ಧನ ವಾರ್ತೆಯನ್ನು ತಿಳಿಸಲಾಗಿ ಅವನು ತನ್ನ ಯಾದವ ದಳಯುಕ್ತನಾಗಿ ಶೋಣಿತಪುಟಭೇದನಕ್ಕೆ ಬಂದು, ಸುದರ್ಶನದಿಂದ ಬಾಣಾಸುರನಲ್ಲಿ ಎರಡೇ ಭುಜಗಳನ್ನಿಟ್ಟು ಮಿಕ್ಕಾದ ಭುಜಗಳನ್ನು ಖಂಡಿಸಿದನು. ಅಷ್ಟರಲ್ಲಿ ಶಂಕರನು ಕೃಷ್ಣನಿಗೆ ಅವನು ಪ್ರಹ್ಲಾದನಿಗೆ ಕೊಟ್ಟ ವರದ ಸ್ಮರಣವನ್ನು ಕೊಡಲಾಗಿ ಯುದ್ಧ ಸಮಾಪ್ತಿಯಾಯಿತು. ತದನಂತರ ಸಾಂಬನ ಹೇಳುವಿಕೆಯಿಂದ ಅನಿರುದ್ಧ ಮತ್ತು ಉಷೆ ಇವರ ಲಗ್ನ ನೆರವೇರಿದ ಬಳಿಕ ಶಂಕರನೂ ಕೃಷ್ಣನೂ ತಮ್ಮ ದಳಯುಕ್ತರಾಗಿ ಸ್ವಸ್ಥಾನಕ್ಕೆ ತೆರಳಿದರು. ಇದು 'ಉಷಾಪರಿಣಯ' ನಾಟಕದ ಒಟ್ಟು ಕಥಾವಸ್ತು.

ಪ್ರಾರಂಭದಲ್ಲಿ ವಿದೂಷಕ ಮತ್ತು ಸೂತ್ರಧಾರರು ವೇದಿಕೆಯ ಮೇಲೆ ಬಂದು ನಾಟಕದ ವಸ್ತು ಮತ್ತು ಕರ್ತೃವಿನ ಬಗ್ಗೆ ಹೇಳುತ್ತಾರೆ. 'ವಿದೂಷಕನ ಬಾಯಿಯಿಂದ 'ಪ್ರಮೀಲಾ ಸ್ವಯಂವರ' ಅಥವಾ 'ಸ್ತ್ರೀವಿಜಯ' ನಾಟಕದ ಉಲ್ಲೇಖ ಬರುತ್ತದೆ. ಇದರಿಂದ ತಮ್ಮಣ್ಣಪ್ಪನವರ 'ಉಷಾಪರಿಣಯ' ನಾಟಕವು ಎರಡನೆಯದಾಗುತ್ತದೆ. ನಾಟಕದಲ್ಲಿಯ ಭಾಷೆಯು ಹೊಸಗನ್ನಡದ ಪ್ರಾರಂಭದ ಭಾಷೆಗೆ ಮಾದರಿಯಾಗಿದೆ. ಆಯಾ ಪಾತ್ರಗಳು ಸನ್ನಿವೇಶಕ್ಕೆ ತಕ್ಕಂತೆ ಸಂಭಾಷಣೆ ನಡೆಸಿವೆ. ಗದ್ಯಪ್ರಧಾನವಾದ ಈ ನಾಟಕದಲ್ಲಿ ತಮ್ಮಣ್ಣಪ್ಪನವರ ಕವಿಹೃದಯ ಮನಬಿಚ್ಚಿ ಹಾಡಿದೆ. ನಾಟಕದುದ್ದಕ್ಕೂ ಸನ್ನವೇಶಕ್ಕೆ ತಕ್ಕಂತೆ ಸುಮಾರು ೨೫ ಚಿಕ್ಕಚಿಕ್ಕ ಪದ್ಯಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವೊಂದು ದಾಟಿ ಹಚ್ಚಿ ಹಾಡುವ ಪದ್ಯಗಳು. ಇನ್ನು ಕೆಲವು ಶಾರ್ದೂಲವಿಕ್ರಿಡಿತ, ಭಾಮಿನಿಷಟ್ಪದಿಗಳಲ್ಲಿವೆ. ಪುರಾಣಕತೆಯನ್ನಾಧರಿಸಿ ಬರೆದ ನಾಟಕ ಓದುಗನಿಗೆ ಮನಮುಟ್ಟುವಂತೆ ಹೇಳುವ ಪ್ರಯತ್ನ ನಡೆದಿದೆಯಾದರೂ ಭಾಷೆ ಗಾಂಭಿರ್ಯದಿಂದ ಕೂಡಿದೆ. ಅಲ್ಲಲ್ಲಿ ನವುರಾದ ಹಾಸ್ಯವೂ ತುಂಬಿದೆ.

ಹೊಸಗನ್ನಡ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಬಂದ ತಮ್ಮಣ್ಣಪ್ಪನವರ ಕೃತಿಗಳಿಗೆ ತುಂಬ ಮಹತ್ವವುಂಟು.[೫೪] ಇವರು ಸ್ವತಃ ನಾಟಕಗಳನ್ನು ಬರೆಯುತ್ತಿದ್ದರಲ್ಲದೆ, ನಾಟಕ ಕಲೆಗೆ ಪ್ರೋತ್ಸಾಹ ನೀಡುತ್ತಿದ್ದರು. ಹಬ್ಬಹರಿದಿನ, ಸಭೆ, ಸಮಾರಂಭಗಳಲ್ಲಿ ಯುವಕರನ್ನು ಹುರಿದುಂಬಿಸಿ ಅವರಿಂದ ನಾಟಕವನ್ನು ಆಡಿಸುತ್ತಿದ್ದರು. ನಾಟಕದ ಬಗ್ಗೆ ಸಾಕಷ್ಟು ಜ್ಞಾನ ಹೊಂದಿರುವ ತಮ್ಮಣ್ಣಪ್ಪನವರು ಸ್ವತಃ ನಿರ್ದೇಶಕರಾಗಿರುತ್ತಿದ್ದರು.[೫೫] ಹೀಗಾಗಿ ಮರಾಠಿ ರಂಗಭೂಮಿಯ ದಬ್ಬಾಳಿಕೆಯಿಂದ ನಾಟಕರಂಗವನ್ನು

ಪುನುರುಜ್ಜೀವಿಸಲು ಅವರು ಸಾಕಷ್ಟು ಕಾರ್ಯಮಾಡಿದ್ದಾರೆ. ಅದಕ್ಕಾಗಿಯೇ ಅ.ನ.ಕೃ ಅವರು "ಕನ್ನಡ ನಾಟಕ ಕಲೆಯನ್ನೂ ಉಳಿಸಿದ ಕೀರ್ತಿ ಕೈ.ವಾ.ತಮ್ಮಣ್ಣಪ್ಪ ಚಿಕ್ಕೋಡಿಯವರಿಗೆ ಸೇರಬೇಕು"[೨೬] ಎಂದು ಹೇಳಿದ್ದಾರೆ. ಇದನ್ನೆಲ್ಲ ನೋಡಿದರೆ ಸಾಹಿತ್ಯಚರಿತ್ರೆಯಲ್ಲಿ ಇವರ ನಾಟಕಗಳಿಗೆ ತುಂಬ ಮಹತ್ವದ ಸ್ಥಾನವಿದೆ. ಹೊಸಗನ್ನಡ ಸಾಹಿತ್ಯಕ್ಕೆ ತಮ್ಮದೇ ಕೊಡುಗೆಯನ್ನು ನೀಡಿದ ತಮ್ಮಣ್ಣಪ್ಪನವರ ಕೃತಿಗಳನ್ನು ಉಳಿಸಿಕೊಳ್ಳುವುದು ಕನ್ನಡಿಗರಿಗೆ ಸಾಧ್ಯವಾಗಲಿಲ್ಲ ಎಂಬುದು ನಮ್ಮ ದುರಾದೃಷ್ಟವೆಂದೇ ಹೇಳಬೇಕು. ಕನ್ನಡಿಗರು ಅಭಿಮಾನದಿಂದ 'ಕನ್ನಡದ ಹುಲಿ', 'ಗಡಿನಾಡಿನಲ್ಲಿ ಕನ್ನಡದ ಕಿಡಿಯನ್ನು ಹೊತ್ತಿಸಿದ ಕನ್ನಡದ ಪುಣ್ಯಪುರುಷ' ಎಂದೆಲ್ಲ ಹಾಡಿ ಹರಸಿದರು. ಆದರೆ ಅವರ ಉಳಿದ ನಾಟಕಗಳನ್ನು ಉಳಿಸಿಕೊಳ್ಳುವುದು ಹೋಗಲಿ, ಹುಡುಕುವುದೂ ನಮ್ಮಿಂದ ಸಾಧ್ಯವಾಗಲಿಲ್ಲ. ಅವು ಅಪ್ರಕಟಿತ ಎಂದು ಸೂಚಿಸಿ ಕೈಚೆಲ್ಲಿ ಕುಳಿತುಬಿಟ್ಟಿದ್ದೇವೆ.

ಪಂಡಿತಪ್ಪ:

ಬೀರೂರು ಮಹಾಸಭೆ ಲೇಖನ:

ಒಂಬತ್ತನೆ ವೀರಶೈವ ಮಹಾಸಭೆಯು ಕ್ರಿ.ಶ.೧೯೧೮ರಲ್ಲಿ ನಡೆಯಬೇಕಿತ್ತು. ಆದರೆ ದೇಶದಲ್ಲಿ ಇನ್‌ಪ್ಲೂಯೆನ್‌ಜಾ ರೋಗವು ಹರಡಿ ಸಾವಿರಾರು ಜನರನ್ನು ಬಲಿ ತೆಗೆದುಕೊಂಡ ಕಾರಣ ೧೯೧೮ರಲ್ಲಿ ನಡೆಯಬೇಕಾದ ಮಹಾಸಭೆಯು ೧೯೧೯ನೆಯ ಡಿಸೆಂಬರ್ ೧೯ನೆಯ ತಾರೀಖಿನಂದು ನಡೆಯಬೇಕೆಂದು ನಿರ್ಧಾರವಾಯಿತು.

ದೇಶದಲ್ಲಿ ಅಂತಹ ಭಯಂಕರ ರೋಗದಿಂದ ವಿಲಕ್ಷಣ ಪರಿಸ್ಥಿತಿ ಉಂಟಾಗಿದ್ದರೂ ಕಾಂಗ್ರೆಸ್ ಅಧಿವೇಶನ ಎರಡು ಸರ್ತಿ ಸೇರಿತ್ತು. ಲಿಂಗಾಯತ ಸಮಾಜಾಭಿವೃದ್ಧಿಯ ಬಗ್ಗೆ ಸಮರ್ಥ ಮುಖಂಡರು ಪ್ರಯತ್ನಿಸಿದ್ದರೆ ಬಹುಶಃ ೧೯೧೮ರಲ್ಲಿ ಜರುಗಬೇಕಿದ್ದ ಮಹಾಸಭೆ ನಿಲ್ಲುತ್ತಿರಲಿಲ್ಲ.

"ಬೀರೂರು ಮಹಾಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು" ಎಂಬುದು ಪಂಡಿತಪ್ಪನವರು ತಮ್ಮ 'ವಿಭಾಕರ ಪತ್ರಿಕೆ'(ಆಂಗ್ಲೋ ವರ್ನಾಕ್ಯುಲರ್)ಯಲ್ಲಿ ಪ್ರಕಟಿಸಲು ಸಿದ್ಧಪಡಿಸಿದ ಲೇಖನ. ನನಗೆ ಲಭ್ಯವಾದ ಹಸ್ತಪ್ರತಿರೂಪದ ಈ ಲೇಖನದಲ್ಲಿ ಪಂಡಿತಪ್ಪನವರು ಲಿಂಗಾಯತ ಸಮಾಜದ ಹೊಣೆಗಾರಿಕೆಯ ಬಗ್ಗೆ ಎಚ್ಚರಿಸಿದ್ದಾರೆ. ಕೆಲವು ಲಿಂಗಾಯತ ತರುಣ ಪದವೀಧರರು ಸರಕಾರಿ ನೌಕರಿಯನ್ನು ಅಪೇಕ್ಷೆ ಪಡದೆ, ಐಹಿಕ ಸುಖಭೋಗಗಳಲ್ಲಿ ತೊಡಗದೆ ಸಮಾಜ ಸೇವೆಯನ್ನು ಮಾಡುತ್ತಿರುವರು. ಸ್ವಲ್ಪವೂ ವಿಶ್ರಾಂತಿಯನ್ನು ತೆಗೆದುಕೊಳ್ಳದೆ ಊರೂರು ತಿರುಗಿ ದೇಣಿಗೆಯನ್ನು ಕೂಡಿಸಿ ಶಿಕ್ಷಣಸಂಸ್ಥೆಗಳನ್ನು ಹುಟ್ಟು ಹಾಕಬೇಕೆಂದು ಉತ್ಸುಕತೆಯನ್ನು ತೋರುತ್ತಿದ್ದಾರೆ. ಆದರೆ ಕೆಲವರು ಇಂಥವರಿಗೆ ಧನಸಹಾಯ ಮತ್ತು ಪ್ರೋತ್ಸಾಹವನ್ನು ಕೊಡದೆ, ಅನಾವಶ್ಯಕವಾಗಿ ದುಂದುವೆಚ್ಚ ಮಾಡುತ್ತಿದ್ದಾರೆ. ಅವರಲ್ಲಿ ಕೆಲವರು ರಥೋತ್ಸವ ಮೆರೆಯಿಸಲಿಕ್ಕೆ, ವೇಶ್ಯಾಂಗನೆಯರಿಗೆ, ಚಿತ್ರವಿಚಿತ್ರವಾದ ವೇಷಗಳಿಗೆ ಅನೇಕ ರೀತಿಯಿಂದ ಸಾಕಷ್ಟು ದುಡ್ಡು ಖರ್ಚು ಮಾಡುತ್ತಿದ್ದಾರೆ. ಈ ರೀತಿಯಿಂದ

ಅನಾವಶ್ಯಕವಾಗಿ ದುಡ್ಡು ಸೋರಿಹೋಗುತ್ತಿರುವುದನ್ನು ಕಂಡು ಪಂಡಿತಪ್ಪನವರು ಮಮ್ಮಲ ಮರುಗಿದ್ದಾರೆ.[೫೭](ಅನುಬಂಧ-೩-೭)

೫.೫. ಪತ್ರಿಕೋದ್ಯಮ:

ವಿಭಾಕರ ಪತ್ರಿಕೆ:

ಚಿಕ್ಕೋಡಿ ಕುಟುಂಬದ ರಾಯಪ್ಪ, ತಮ್ಮಣ್ಣಪ್ಪ, ಪಂಡಿತಪ್ಪ, ರಾಮಪ್ಪ ಇವರುಗಳು ವಾಚನಾಭಿರುಚಿಯುಳ್ಳವರು. ಅದರಲ್ಲೂ ದಿನಪತ್ರಿಕೆಗಳ ಮೇಲಂತೂ ಅಪ್ಪಟ ಪ್ರೇಮ. ಅಂದು ಪ್ರಕಟವಾಗುತ್ತಿದ್ದ ಎಲ್ಲ ಪತ್ರಿಕೆಗಳನ್ನು ತರಿಸಿ ಓದುವ ಹವ್ಯಾಸವನ್ನು ಇಟ್ಟುಕೊಂಡಿದ್ದರು. ಪತ್ರಿಕೆಗಳನ್ನು ಓದುವ ಹುಚ್ಚು ಹಚ್ಚಿಸಿದವರೆ ಚಿಕ್ಕೋಡಿ ಕುಟುಂಬದವರು ಎಂದು ಬನಹಟ್ಟಿಯ ಹಿರಿಯರು ಇಂದಿಗೂ ಜ್ಞಾಪಿಸಿಕೊಳ್ಳುತ್ತಾರೆ.

ಕರ್ನಾಟಕ ಏಕೀಕರಣ ಹೋರಾಟದ ಸಂದರ್ಭದಲ್ಲಿ ಕನ್ನಡಿಗರಲ್ಲಿ ಜನಜಾಗೃತಿಯನ್ನುಂಟು ಮಾಡುವುದು ಪತ್ರಿಕೆಗಳ ಉದ್ದೇಶವಾಗಿತ್ತು. ೧೯೧೬ರಲ್ಲಿ ಗಿಲಗಂಚಿ ಅರಟಾಳ ಹೈಸ್ಕೂಲ್‌ನ್ನು ಸ್ಥಾಪಿಸಿ, ಕೈಬಾಯಿ ಸುಟ್ಟುಕೊಂಡು ಅರೆಹೊಟ್ಟೆ ಪರಿಸ್ಥಿತಿ ಇದ್ದಾಗಲೂ, ಪಂಡಿತಪ್ಪನವರು ಸುಮ್ಮನೆ ಕೂಡ್ರಲಿಲ್ಲ. ೧೯೨೦ ಅವರಿಗೆ ಕಷ್ಟದ ಕಾಲ. ಆದರೂ 'ವಿಭಾಕರ' ಪತ್ರಿಕೆಯನ್ನು ಅವರು ಹೊರತಂದರು. ಪತ್ರಿಕೆಯ ನೋಂದಣಿ ಸಂಖ್ಯೆ ಬಿ.೧೩೬೪. ಪ್ರತಿ ಸೋಮವಾರ ಪ್ರಕಟವಾಗುತ್ತಿದ್ದ ಆಂಗ್ಲೋ-ವರ್ನಾಕ್ಯುಲರ್ ಪತ್ರಿಕೆ ಅದು. ಆಗ ಇದರ ವಾರ್ಷಿಕ ಚಂದಾ ಹಣ ಕೇವಲ ಮೂರು ರೂಪಾಯಿಗಳು ಮಾತ್ರ.

ವಿಭಾಕರ ಆಂಗ್ಲೋ-ಕನ್ನಡ ವಾರಪತ್ರಿಕೆಯಾಗಿದ್ದು ರಾಜಕೀಯ, ನೈತಿಕ, ಸಾಮಾಜಿಕ, ಶಿಕ್ಷಣದ ವಿಷಯಗಳು ನಿರ್ಭೀತಿಯಿಂದ ವಿವೇಚಿಸುತ್ತದೆ. ಕರ್ನಾಟಕದಲ್ಲಿದ್ದ ಎಲ್ಲ ವರ್ತಮಾನ ಪತ್ರಗಳಲ್ಲಿ ಉತ್ತಮವೆಂದು ಹೇಳಬಹುದು ಎಂದು ಅಂದಿನ ಪ್ರಸಿದ್ಧ ಪತ್ರಿಕೆಯಾದ 'ಪ್ರಬೋಧ'ದಲ್ಲಿ ಇದರ ಜಾಹಿರಾತು ಪ್ರಕಟವಾಗುತ್ತಿತ್ತು.

ಪ್ರಬೋಧ ಪತ್ರಿಕೆಯು ಆಗ ಜನಮನ್ನಣೆಯನ್ನು ಗಳಿಸಿದ ಪ್ರಸಿದ್ಧ ಪತ್ರಿಕೆಯಾಗಿತ್ತು. ವೀರಶೈವ ತರುಣಸಂಘದಿಂದ ಪ್ರಕಟವಾಗುವ ಅದಕ್ಕೆ ಪಂಡಿತಪ್ಪನವರ ಸ್ನೇಹಿತವರ್ಗದವರೇ ಸಂಪಾದಕರಾಗಿದ್ದುದು ವಿಶೇಷವಾಗಿತ್ತು. ಹೀಗಾಗಿ ಪ್ರಬೋಧ ಪತ್ರಿಕೆಯ ಹಿಂಭಾಗದಲ್ಲಿ ವಿಭಾಕರ ಪತ್ರಿಕೆಯ ಕುರಿತು ಜಾಹಿರಾತು ಇರುತ್ತಿತ್ತು. ಬೆಳಗಾವಿಯಲ್ಲಿ ಪಂಡಿತಪ್ಪ ರಾಯಪ್ಪ ಚಿಕ್ಕೋಡಿ ಇವರು ತಮ್ಮ ವಿಭಾಕರ ಮುದ್ರಾಣಾಲಯದಲ್ಲಿ ಮುದ್ರಿಸಿದರು ಮತ್ತು ಎಚ್.ಎಫ್. ಕಟ್ಟೀಮನಿ ಇವರು ಬೆಳಗಾವಿಯೊಳಗೆ ಪ್ರಬೋಧ ಆಫೀಸಿನಲ್ಲಿ ಪ್ರಕಟಿಸಿದರು ಎಂಬ ಪ್ರಕಟಣೆಯು ವಿಭಾಕರ ಪತ್ರಿಕೆ ನಿಂತು ಹೋಗುವ ತನಕವೂ ಅಂದರೆ ಎಂಟು ವರ್ಷಗಳ ತನಕವೂ ಇತ್ತು.

ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದ ಈ ಪತ್ರಿಕೆಯು ಜನಸಾಮಾನ್ಯರಿಗೆ ಆದಷ್ಟು ಪ್ರಯೋಜನವನ್ನು ನೀಡಲಿ ಎಂಬುದು ಪಂಡಿತಪ್ಪನವರ ಸ್ನೇಹಿತರ ಸದಾಶಯವೂ ಇದ್ದ ಕಾರಣ, ಅದಕ್ಕೆ ಪ್ರೋತ್ಸಾಹವನ್ನು ನೀಡಿದ್ದರು. ಆದರೆ ಪಂಡಿತಪ್ಪನವರ ಬಿಡುವಿಲ್ಲದ ಸಾರ್ವಜನಿಕ

ಕಾರ್ರ್ಯಗಳ ಮಧ್ಯ ಈ ಪತ್ರಿಕೆಯನ್ನು ಉಳಿಸಿಕೊಳ್ಳುವುದು ಆಗಲಿಲ್ಲ. ಹಾಗೂ ಹೀಗೂ ಕುಂಟುತ್ತ ಸಾಗಿ ೧೯೨೮ರ ಹೊತ್ತಿಗೆ ಸಂಪೂರ್ಣ ನಿಂತುಹೋಯಿತು.

ಈ ವಿಭಾಕರ ಪತ್ರಿಕೆಯ ಕಚೇರಿಯು ಬೆಳಗಾವಿಯ ಮಾಳೀಗಲ್ಲಿಯ ೨೫೫೫ ನಂಬರಿನ ಮನೆಯಲ್ಲಿದ್ದು, ಅದರ ಮ್ಯಾನೇಜರರು ಗಂಗಾಧರರಾವ್ ಹಿಡಕಲ್ಲ ಎಂಬುವವರಿದ್ದರು. ಆದರೆ ಸದ್ಯಕ್ಕೆ ಮಾಳೀಗಲ್ಲಿಯಲ್ಲಿ ಈ ಮನೆತನದವರು ಯಾರೂ ಇಲ್ಲ. ಜೊತೆಗೆ "ವಿಭಾಕರ ಪತ್ರಿಕೆಯು ವಿಭಾಕರ ಪ್ರೆಸ್‌ನಲ್ಲಿ ಶ್ರೀ ಗುರುಸಿದ್ದಯ್ಯ ಪರ್ವತಯ್ಯ ಪಾಟೀಲ ಇವರಿಂದ ಮುದ್ರಿತವಾಯಿತು" ಎಂಬ ಉಲ್ಲೇಖ ಇದ್ದು, ಈ ಮನೆತನದವರೂ ಇಂದು ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ವಿಭಾಕರ ಪತ್ರಿಕೆಯು ಒಟ್ಟು ೮ ಪುಟಗಳನ್ನು ಹೊಂದಿದ್ದು, ಒಂದೂವರೆ ಪುಟಗಳು ಆಂಗ್ಲ ವಿಷಯವನ್ನು ಒಳಗೊಂಡಿರುತ್ತಿತ್ತು. ಇದು ಇಂಗ್ಲಿಷ್ ಪತ್ರಿಕೆಗಳಿಂದ ತೆಗೆದುಕೊಂಡ ವಿಷಯವಾಗಿರುತ್ತಿತ್ತು. ಎರಡನೆಯ ಪುಟದ 'ಸಂಪಾದಕೀಯ' ವಿಭಾಗದಲ್ಲಿ ಪಂಡಿತಪ್ಪನವರು ಬರೆಯುತ್ತಿದ್ದರು. ಈ ವಿಭಾಗದಲ್ಲಿ ಅಂದಿನ ಸಮಾಜದ ವಿಚಾರಗಳನ್ನು ಸ್ಪಷ್ಟವಾಗಿ ದಾಖಲಿಸುತ್ತಿದ್ದರು. ತಮಗೆ ಸರಿ ಎನ್ನಿಸಿದಲ್ಲಿ ಅಂದಿನ ಪ್ರಖ್ಯಾತ ಮುಖಂಡರುಗಳಾದ ಮಹಾತ್ಮಾ ಗಾಂಧೀಜಿ, ತಿಲಕರನ್ನು ವಿರೋಧಿಸಿ ಬರೆದು ಸಮಾಜದ ಗಣ್ಯರ ವಿರೋಧವನ್ನು ಕಟ್ಟಿಕೊಂಡರು.

'ವಿಭಾಕರ' ಪತ್ರಿಕೆಯ ೨ ಮತ್ತು ೪ನೆಯ ಪುಟದ ಎಡಭಾಗದ ಮೂಲೆಯಲ್ಲಿ "ಹಿಂದುಳಿದೆಮ್ಮ ಸರ್ವಸುಜನಾವಳಿ ಮುಂದ್ವರಿವಗ್ರ ಲೇಖದಿಂ। ಬಂಧುರ ಧಾರ್ಮಿಕಾರ್ಥಿಕ ಸಮಾಜ ಹಿತಾತ್ಮಕ ರಾಜಕೀಯ ಮೇಣ್। ಸುಂದರ ಶಿಲ್ಪ ಶಿಕ್ಷಣ ಕಲಾಕೃಷಿವರ್ಧಕ ಲೇಖ ಮಾಲೆಯಿಂ! ಕುಂದಿನಿತಿಲ್ಲದೈದೆ ಬೆಳಗುತ್ತಿಹುದೀ ವಿಲಸತ್ ವಿಭಾಕರಂ॥೧॥" ಎಂಬ ಪದ್ಯವನ್ನು ಪ್ರಕಟಪಡಿಸುತ್ತಿದ್ದುದು ವಿಶೇಷವಾಗಿದೆ.

ಇದು ತಮ್ಮಣ್ಣಪ್ಪನವರು ಬರೆದ ಪದ್ಯವೆ? ಎನ್ನಿಸುತ್ತದೆ. ಏಕೆಂದರೆ ಈ ಹಿಂದೆ ನೋಡಿದ ತಮ್ಮಣ್ಣಪ್ಪನವರ ಪದ್ಯಗಳು ಇದೇ ಮಾದರಿಯಲ್ಲಿದ್ದುದು ಒಂದು ಕಾರಣವಾದರೆ, ಪತ್ರಿಕಾಪ್ರೇಮಿಗಳಾದ ತಮ್ಮಣ್ಣಪ್ಪನವರು ಲಿಂಗಾಯತ ಯುವಕರು ಪತ್ರಿಕೆ ಹೊರಡಿಸಬೇಕು ಎಂದು ಆಶೆ ಪಡುತ್ತಿದ್ದರು. ಹೀಗಾಗಿ ಹಳಕಟ್ಟಿಯವರಿಂದ 'ನವಕರ್ನಾಟಕ' ಪತ್ರಿಕೆಯು ಪ್ರಾರಂಭಗೊಂಡಾಗ ಅದರ ಉದ್ದೇಶವನ್ನು ಕುರಿತು ಪ್ರಥಮ ಸಂಚಿಕೆಯಲ್ಲಿಯೇ ಕವನ ಬರೆದರು. ಹೀಗಾಗಿ ಹಳಕಟ್ಟಿಯವರ ಪತ್ರಿಕೆಗಳಿಗೆ ಮುಂಚೆಯೇ ಪ್ರಕಟಗೊಂಡ ಈ ವಿಭಾಕರ ಪತ್ರಿಕೆಯನ್ನು ಕುರಿತು ತಮ್ಮಣ್ಣಪ್ಪನವರು ಈ ಪದ್ಯವನ್ನು ಬರೆದಿರಬೇಕು. ಹಳಕಟ್ಟಿಯುವರ ಪತ್ರಿಕೆಗಳಿಗೆ ತಮ್ಮಣ್ಣಪ್ಪನವರೇ ಕಾರಣೀಭೂತವಾದಂತೆ, ವಿಭಾಕರ ಪತ್ರಿಕೆಗೂ ಅವರೇ ಕಾರಣರು ಎಂದು ನಿಸ್ಸಂಶಯವಾಗಿ ಹೇಳಬಹುದು.

ದುರ್ದೈವದ ಸಂಗತಿಯೆಂದರೆ 'ವಿಭಾಕರ' ಪತ್ರಿಕೆಯ ಪತ್ರಿಕೆಯ ಒಂದು ಬಿಡಿ ಪ್ರತಿಯೂ ಬೆಳಗಾವಿಯಲ್ಲಿ ದೊರೆಯುತ್ತಿಲ್ಲ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ 'ಶಾಂತೇಶ ಗ್ರಂಥಾಲಯ'ದಲ್ಲಿ ಕೇವಲ ಒಂದು ಬಿಡಿ ಪ್ರತಿ ನನಗೆ ಲಭ್ಯವಾಯಿತು. ಈ ಪ್ರತಿಯು ದೊರೆಯದಿದ್ದರೆ ಈ ಪತ್ರಿಕೆಯ ಕುರಿತು ಏನನ್ನೂ ಹೇಳಲು ಆಗುತ್ತಿರಲಿಲ್ಲ.

೫.೬. ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿಯವರನ್ನು ರೂಪಿಸಿದ್ದು:

ಜಗತ್ತಿನ ಅತ್ಯದ್ಭುತಗಳಲ್ಲಿ ಒಂದಾದ ವಿಜಾಪುರದ ಐತಿಹಾಸಿಕ ಗೋಲಗುಮ್ಮಟವು ಸ್ಥಾವರ ಸ್ವರೂಪಿಯಾದರೆ, ಅದೇ ವಿಜಾಪುರದ ವಚನಗುಮ್ಮಟ ಡಾ.ಫ.ಗು.ಹಳಕಟ್ಟಿಯವರು ಜಂಗಮಸ್ವರೂಪಿಗಳು. ಭವ್ಯ ಗೋಲಗುಮ್ಮಟವನ್ನು ಕಟ್ಟಿಸಿದ ಕೀರ್ತಿ ಆದಿಲ್‌ಶಾಹಿದಾದರೆ, ಶರಣ ಸಂಸ್ಕೃತಿಯ ವಚನಗುಮ್ಮಟವನ್ನು ಪ್ರಕಟಿಸಿದ ಕೀರ್ತಿ ಹಳಕಟ್ಟಿಯವರದಾದರೂ ಅವರನ್ನು ರೂಪಿಸಿದ ಶಿಲ್ಪಿ ತಮ್ಮಣ್ಣಪ್ಪನವರೆಂದು ಡಾ.ಜೆ.ಎಸ್.ಕುಳ್ಳಿಯವರು ಪ್ರತಿಪಾದಿಸಿದ್ದಾರೆ. ಈ ನಿಟ್ಟಿನಲ್ಲಿ ತಮ್ಮಣ್ಣಪ್ಪ ಮತ್ತು ಹಳಕಟ್ಟಿಯವರ ಪತ್ರಗಳು ಅವರವರ ಸಂಬಂಧದ ವಾಸ್ತವ ಚಿತ್ರಣ ನೀಡುತ್ತವೆ. ಫಕೀರಪ್ಪನವರು ಬರಗಾಲದ ತವರೂರಾದ ವಿಜಾಪುರಕ್ಕೆ ಬಂದು ಸಂಘಸಂಸ್ಥೆಗಳನ್ನು ನಿರ್ಮಿಸಿ, ಸಮಾಜಮುಖಿಯಾಗಿ ಬೆಳೆದುದರ ಹಿಂದೆ ಬೆನ್ನೆಲುಬಾಗಿದ್ದವರು ಚಿಕ್ಕೋಡಿ ತಮ್ಮಣ್ಣಪ್ಪನವರೆಂಬುದು ಸ್ಪಷ್ಟ. ಫಕೀರಪ್ಪನವರ ಜೀವನ ನಿರ್ಧಾರಗಳು ತಮ್ಮಣ್ಣಪ್ಪನವರಿಂದಲೇ ನಿರ್ಧರಿತವಾಗಬೇಕೆಂದು ತಂದೆ ಗುರುಬಸಪ್ಪ ಹಳಕಟ್ಟಿಯವರೇ ನಂಬಿಕೊಂಡು, ತಮ್ಮಣ್ಣಪ್ಪನವರ ಮೇಲೆ ಅವಲಂಬಿತರಾಗಿದ್ದುದು ಪತ್ರಗಳ ಆಧಾರಗಳಿಂದ ತಿಳಿದುಬರುತ್ತದೆ.

ಆರ್ಥಿಕ ಸಹಾಯ:

ಫಕೀರಪ್ಪನವರು ೧೯೧೬ ರಲ್ಲಿ ಹೈಸ್ಕೂಲ್ ಶಿಕ್ಷಣವನ್ನು ಧಾರವಾಡದಲ್ಲಿ ಮುಗಿಸಿ, ಮುಂದೆ ಕಲಿಯಬೇಕೆನ್ನುವ ಹಂಬಲ ಹೊಂದಿದ್ದರು. ಆದರೆ ಆಗ ಧಾರವಾಡದಲ್ಲಿ ಕಾಲೇಜು ಇರಲಿಲ್ಲ. ಆಗಿನ ಸಂದರ್ಭದಲ್ಲಿ ಉತ್ತರ ಕರ್ನಾಟಕದ ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣ ಪಡೆಯಲು ಪುಣೆ, ಮುಂಬಯಿ ನಗರಗಳಿಗೆ ಹೋಗುತ್ತಿದ್ದರು. ಫಕೀರಪ್ಪನವರು ತಮ್ಮ ಕಾಲೇಜು ಶಿಕ್ಷಣಕ್ಕೆ ಮುಂಬಯಿಯ ಸೇಂಟ್ ಝೇವಿಯರ್ ಕಾಲೇಜ ಸೇರಿದರು. ಆ ಹೊತ್ತಿಗಾಗಲೇ ಅಂದರೆ ದಿನಾಂಕ ೭-೨-೧೯೧೬ರಲ್ಲಿ ಫಕೀರಪ್ಪನವರು ತಮ್ಮಣ್ಣಪ್ಪ ಚಿಕ್ಕೋಡಿಯವರ ಜೇಷ್ಠಪುತ್ರಿ ಭಾಗೀರಥಿಯೊಂದಿಗೆ ವಿವಾಹವಾಗಿದ್ದರು. ಆಗ ಫಕೀರಪ್ಪನವರ ವಯಸ್ಸು ಕೇವಲ ಹದಿನಾರು.

ದೂರದ ಮುಂಬಯಿಯಲ್ಲಿ ಓದುತ್ತಿರುವ ತಮ್ಮ ಅಳಿಯ ಫಕೀರಪ್ಪನವರ ಖರ್ಚನ್ನು ತಮ್ಮಣ್ಣಪ್ಪನವರು ಹೊತ್ತುಕೊಂಡರು. ತಮ್ಮಣ್ಣಪ್ಪನವರು ನೀಡಿದ ಧನಸಹಾಯದಿಂದಲೇ ಹಳಕಟ್ಟಿಯವರ ಶಿಕ್ಷಣ ಮುಂದುವರಿಯಿತೆಂದು ಫಕೀರಪ್ಪನವರನ್ನು ಕಂಡ ಬನಹಟ್ಟಿಯ ಪ್ರತಿಯೊಬ್ಬ ಹಿರಿಯರೂ ಒಪ್ಪಿಕೊಳ್ಳುತ್ತಾರೆ. ಹಳಕಟ್ಟಿಯವರ ಮನೆತನ ಆರ್ಥಿಕವಾಗಿ ಸುಭದ್ರವಾಗಿಲ್ಲದುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಸ್ವತಃ ಪ್ರೊ.ಸ.ಸ.ಮಾಳವಾಡ ಅವರೇ 'ಗುರುಬಸಪ್ಪನವರದು ಬಡತನದ ಮನೆತನ. ಆದರೆ ಅವರು ವಿದ್ಯೆ, ಸಾಹಿತ್ಯ, ಸಂಸ್ಕೃತಿಗಳ ಪ್ರೇಮಿಗಳಾಗಿದ್ದರು. ಆ ಬಳುವಳಿ ಡಾ.ಹಳಕಟ್ಟಿಯವರಲ್ಲಿ ಕಂಡು ಬಂದಿತು'[೫೮] ಎಂದಿರುವುದನ್ನು ಇಲ್ಲಿ ಗಮನಿಸಬಹುದು. ಸ್ವತಃ ಗುರುಬಸಪ್ಪನವರೇ ತಮ್ಮ ಮಗನಿಗೆ ಧನಸಹಾಯ ಮಾಡಿದ್ದನ್ನು ಕೃತಜ್ಞತೆಯಿಂದ ಪತ್ರಮುಖೇನ ತಿಳಿಸಿದಾಗ, ತಮ್ಮಣ್ಣಪ್ಪನವರು ಹೆತ್ತವರಾದ ಅವರಷ್ಟೇ ತಮಗೂ ಹೊಣೆಯಿದೆ. ಅದು ತಮ್ಮ ಕರ್ತವ್ಯವೂ ಆಗಿದೆ ಎಂದು ತಿಳಿಸಿದ್ದನ್ನು

ನೋಡಿದರೆ, ಹೆಣ್ಣುಕೊಟ್ಟ ಮಾವ ತಮ್ಮಣ್ಣಪ್ಪನವರು ತಂದೆಯ ಸ್ಥಾನದಲ್ಲಿ ನಿಂತು ಧನಸಹಾಯ ಮಾಡಿದುದರಿಂದ ಫಕೀರಪ್ಪನವರಿಗೆ ಶಿಕ್ಷಣ ದೊರೆಯಿತು ಎಂದು ಖಂಡಿತವಾಗಿ ಹೇಳಬಹುದು.

ವಿದ್ಯಾಭ್ಯಾಸ ಮುಗಿಸಿಬಂದ ಫಕೀರಪ್ಪನವರು ವಕೀಲಿವೃತ್ತಿಯನ್ನು ಎಲ್ಲಿ ಕೈಗೊಳ್ಳಬೇಕೆಂಬ ವಿಚಾರದಲ್ಲಿದ್ದಾಗ ಗುರುಬಸಪ್ಪನವರು ತಮ್ಮ ಮಗ ತಮ್ಮ ಬಳಿಯಲ್ಲಿಯೇ ಇರಲಿ ಎಂದು ಹೇಳಬಹುದಾಗಿತ್ತು. ಆದರೆ ಈ ವಿಷಯದಲ್ಲಿ ತಮ್ಮಣ್ಣಪ್ಪನವರ ಸಲಹೆಯೇ ಬಹಳ ಮುಖ್ಯವೆಂದು ಗುರುಬಸಪ್ಪನವರು ಅರಿತಿದ್ದರು. ತಮ್ಮಣ್ಣಪ್ಪನವರ ಸಲಹೆಯಂತೆ ಸಮೃದ್ಧವಾಗಿರುವ ಧಾರವಾಡನ್ನು ಬಿಟ್ಟು ಬರಗಾಲದ ತವರೂರಾದ ವಿಜಾಪುರಕ್ಕೆ ಹಳಕಟ್ಟಿಯವರನ್ನು ಕಳಿಸುತ್ತಾರೆ. ಅಳಿಯ ಕಷ್ಟಪಟ್ಟು ದುಡಿಯುವುದರ ಜೊತೆಗೆ ಆರ್ಥಿಕ ಅನುಕೂಲತೆ ಹೊಂದಬೇಕು. ಜೊತೆಗೆ ಬರಗಾಲದ ಜಿಲ್ಲೆ ವಿಜಾಪುರವನ್ನು ಪ್ರಗತಿಪಥದಲ್ಲಿ ಕೊಂಡೊಯ್ಯಬೇಕು ಎನ್ನುವ ವಿಚಾರ ಅವರದಾಗಿತ್ತು. ತಮ್ಮಣ್ಣಪ್ಪನವರು ಅಳಿಯನನ್ನು ವಿಜಾಪುರಕ್ಕೆ ಕಳುಹಿಸಿ, ಅವನು ಪಡುವ ಕಷ್ಟಗಳನ್ನೆಲ್ಲ ನೋಡುತ್ತ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಹಳಕಟ್ಟಿಯವರು ವಕೀಲಿವೃತ್ತಿಯನ್ನು ಕೈಗೊಂಡು ತಮ್ಮನ್ನು ಸಾಹಿತ್ಯಿಕ ಮತ್ತು ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಆದರೆ ಆರ್ಥಿಕ ಅಭದ್ರತೆಯಿಂದ ಅವರು ಮುಕ್ತರಾಗಲೇ ಇಲ್ಲ. ಹೀಗಾಗಿ ಸರಕಾರಿ ನೌಕರಿಯನ್ನು ಹಿಡಿಯುವ ವಿಚಾರಮಾಡಿ ಮಾವನವರ ಸಲಹೆಯನ್ನು ಕೇಳಿದಾಗ ತಮ್ಮಣ್ಣಪ್ಪನವರು "ನಿಮಗೆ ಉತ್ಪನ್ನ ಕಡಿಮೆಯಾದ ಪಕ್ಷದಲ್ಲಿ ಸೌ॥ಭಾಗೀರಥಿಯ ಇಸ್ಟೇಟಿನ ವ್ಯವಹಾರದಲ್ಲಿ ಆದ ಲಾಭದ ಸಹಾಯವು ಸಹಜವಾಗಿ ಸಿಗುತ್ತದೆ"[೫೯] ಎಂದು ಆರ್ಥಿಕ ಭದ್ರತೆಯ ಆಶ್ವಾಸನೆ ಕೊಡುತ್ತಾರೆ.

ವಚನವಾಙ್ಮಯ ಸಂಶೋಧನೆ ಮತ್ತು ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿದ ಹಳಕಟ್ಟಿಯವರಿಗೆ ಸರಿಯಾದ ಆದಾಯವಿರಲಿಲ್ಲ. ಕೆಲವು ಸಲ ತಮ್ಮ ಕುಟುಂಬವನ್ನು ಸಲುಹಲು ಕೂಡ ತೊಂದರೆ ಅನುಭವಿಸಿದುದು ತಿಳಿದುಬರುತ್ತದೆ. ಅವರು ಹೆಸರಿಗೆ ತಕ್ಕ ಹಾಗೆ ಫಕೀರನಾಗಿ ಬಾಳಿದರು. ವಾಸಕ್ಕೆ ಸ್ವಂತ ಮನೆಯಿಲ್ಲದೆ, ಓಣಿಯಿಂದ ಓಣಿಗೆ ಬಾಡಿಗೆ ಮನೆಯನ್ನು ಬದಲಾಯಿಸುತ್ತ ಜೀವನ ಕಳೆದರು. ಸಾಹಿತಿ ಸಿಂಪಿ ಲಿಂಗಣ್ಣನವರು "ಡಾ.ಹಳಕಟ್ಟಿಯವರು ಕೊನೆಯ ವರೆಗೂ ಬಾಡಿಗೆ ಮನೆಯಲ್ಲಿಯೇ ಇರಬೇಕಾಯಿತು. ಕೊನೆಯಲ್ಲಿ ಮಾತ್ರ ಬಾಡಿಗೆಯಿಲ್ಲದ ಮನೆ ಸಿಕ್ಕಿತು"[೬೦] ಎಂದು ಹೇಳಿದರೆ, ರಬಕವಿ–ಬನಹಟ್ಟಿಯ ಕವಿ ಈಶ್ವರ ಸಣಕಲ್ಲ ಅವರು "ಏನೂ ಏನೂ ಇಲ್ಲದ ಘನ ಫಕೀರಾ, ಸೂರೆಗೈದೆಯೊ ಜಗಕೆ ವಚನ ಭಾಂಡಾರಾ"[೬೧] ಎಂದು ಹಾಡಿದರು. ಪ್ರೊ.ಸ.ಸ.ಮಾಳವಾಡ ಅವರು "ಹಳಕಟ್ಟಿಯವರು ಬಡತನದ ಬಾಳನ್ನೇ ಕೊನೆಯ ವರೆಗೆ ಬಾಳಿದರು. ಶಿವಾನುಭವ ಪತ್ರಿಕೆಯ ಆರ್ಥಿಕ ಸ್ಥಿತಿ ಚೆನ್ನಾಗಿರಲಿಲ್ಲ. ಆದರೂ ಜಿಗುಟುತನದಿಂದ, ನಿಷ್ಠೆಯಿಂದ ಆ ಪತ್ರಿಕೆಯನ್ನು ಮುಂದುವರೆಸಿದರು."[೬೨] ಎಂದಿದ್ದಾರೆ. ಹಳಕಟ್ಟಿಯವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವಡಾಕ್ಟರೇಟ್ ಪದವಿಯನ್ನು ಪಡೆಯಲು ಹೋಗುವಾಗಲೂ ಹರಿದ ಅಂಗಿ, ಕೋಟನ್ನು ಹಾಕಿಕೊಂಡು ಹೋಗಿದ್ದರೆಂಬುದು ಅವರ ಆರ್ಥಿಕ ದುಸ್ಥಿತಿಗೆ ಸಾಕ್ಷಿಯಾಗಿದೆ.

ತಮ್ಮಣ್ಣಪ್ಪನವರು ತಮ್ಮ ಜೀವಿತಾವಧಿಯಲ್ಲಿಯೇ ತಮ್ಮ ಹೆಣ್ಣುಮಕ್ಕಳಿಗೆ ಕೊಡುವಷ್ಟನ್ನು ಕೊಟ್ಟಿದ್ದರು. ಫ.ಗು.ಹಳಕಟ್ಟಿಯವರ ಜೀವನಕ್ಕೆ ಆದಾಯವಾಗಲಿ ಎಂಬ ಮುಂದಾಲೋಚನೆಯಿಂದ ಬನಹಟ್ಟಿಯಲ್ಲಿ ತಾವು ಗಳಿಸಿರುವ ಆಸ್ತಿಯಲ್ಲಿ ಬಜಾರದಲ್ಲಿರುವ ಅಂಗಡಿಯನ್ನು ಮಗಳಾದ ಭಾಗೀರಥಿಯ ಹೆಸರಿನಲ್ಲಿ ಬರೆದರು. ಅದನ್ನು ಬಾಡಿಗೆ ಕೊಟ್ಟು, ಬಂದ ಹಣವನ್ನು ತಲುಪಿಸುವ ವ್ಯವಸ್ಥೆಯನ್ನು ಇನ್ನೋರ್ವ ಅಳಿಯನಾದ ಚ.ಚ.ಅಬಕಾರ ಅವರಿಗೆ ವಹಿಸಿಕೊಟ್ಟರು. ಆ ಜವಾಬ್ದಾರಿಯನ್ನು ಅಬಕಾರ ಅವರು ಹಳಕಟ್ಟಿಯವರ ಜೀವಿತಾವಧಿಯ ವರೆಗೂ ನಡೆಸಿಕೊಂಡು ಬಂದರೆಂಬುದನ್ನು ಹಿರಿಯರಾದ ಶ್ರೀ ರಾಮಲಿಂಗಪ್ಪ ಬಾಗಲಕೋಟ ಅವರು ಹೇಳುತ್ತಾರೆ. ಈಗಲೂ ಆ ಅಂಗಡಿ ಹಳಕಟ್ಟಿಯವರ ಹೆಸರಿನಲ್ಲಿಯೇ ಇದೆ. ಈ ವ್ಯವಹಾರ ನಡೆದಿತ್ತು ಎನ್ನವುದಕ್ಕೆ ಹಳಕಟ್ಟಿಯವರು ಚ.ಚ.ಅಬಕಾರ ಅವರಿಗೆ ಬರೆದ ಪತ್ರಗಳು ದಾಖಲೆಗಳಾಗಿವೆ.(ಪತ್ರದ ಅನುಬಂಧ-೩-೧)

ಬಡತನದ ಪರಿಸ್ಥಿತಿ ನೀಗಿಸಿಕೊಳ್ಳಲು ಹಳಕಟ್ಟಿಯವರು ವಿಜಾಪುರವನ್ನು ಬಿಟ್ಟು ಧಾರವಾಡಕ್ಕೆ ಹೋಗಲು ನಿರ್ಧರಿಸಿದಾಗ ತಮ್ಮಣ್ಣಪ್ಪನವರು ಅಳಿಯನಿಗೆ ಕೇವಲ ಬಾಯಿಮಾತಿನ ಉಪಚಾರ ಮಾಡಲಿಲ್ಲ. ಅಳಿಯ ವಿಜಾಪುರವನ್ನು ಬಿಟ್ಟು ಹೋಗಬಾರದೆಂದು ಕಳಕಳಿಯಿಂದ ವಿನಂತಿಸಿದರು. "ತಾವು ಹಣದ ಸಂಬಂಧದಿಂದ ಬರೆದದ್ದು ತಿಳಿಯಿತು. ಸಂಕ್ಷೇಪದಲ್ಲಿ ನಾನು ತಿಳಿಸುವುದೆನೆಂದರೆ ನಿಮಗೆ ವರ್ಷಕ್ಕೆ ಐದುನೂರು(೫೦೦) ರೂ. ನಿಶ್ಚಯವಾಗಿ ಉತ್ಪನ್ನವಾಗುವಂತೆ ನಾನು ಮಾಡಬಹುದೆಂದು ವಚನ ಕೊಡುತ್ತೇನೆ."[೬೩] ಹೀಗೆ ತಮ್ಮಣ್ಣಪ್ಪನವರು ಬದುಕಿಗೆ ಅನಿವಾರ್ಯವಾದ ಹಣವನ್ನು ಅಳಿಯನಿಗೆ ಸದಾಕಾಲ ನೀಡುತ್ತಿದ್ದರು ಎನ್ನವುದು ಸ್ಪಷ್ಟವಾಗುತ್ತದೆ.

ತಮ್ಮಣ್ಣಪ್ಪನವರು ಮಮತಾಮಯಿ, ಸ್ನೇಹಿ, ಮಾರ್ಗದರ್ಶಿ:

ಹಳಕಟ್ಟಿಯವರು ಬಾಲ್ಯದಿಂದಲೂ ಪ್ರತಿಭಾವಂತ ವಿದ್ಯಾರ್ಥಿಯೇ ಆಗಿದ್ದರು. ಹೀಗಾಗಿ ಮಗನ ವಿದ್ಯಾಭ್ಯಾಸ ಸರಾಗವಾಗಿ ನಡೆದದ್ದನ್ನು ಕಂಡು ಗುರುಬಸಪ್ಪನವರು ಸಂತಸಪಟ್ಟರು. ಆದರೆ ತಮ್ಮಣ್ಣಪ್ಪನವರ ಮಗಳು ಭಾಗೀರಥಿಯನ್ನು ಫ.ಗು.ಹಳಕಟ್ಟಿಯವರು ಮದುವೆಯಾದಾಗಿನಿಂದ ಗುರುಬಸಪ್ಪನವರು ತಮ್ಮ ಮಗನ ಯೋಗಕ್ಷೇಮವನ್ನು ತಾವೊಬ್ಬರೇ ನೋಡಿಕೊಳ್ಳದೆ ಮಾವನವರಾದ ತಮ್ಮಣ್ಣಪ್ಪನವರ ಮೇಲೆಯೂ ಹೊರಿಸಿದರು. ಮಗನ ಪ್ರತಿಯೊಂದು ವಿಷಯವನ್ನು ತಮ್ಮಣ್ಣಪ್ಪನವರಿಗೆ ಪತ್ರದ ಮೂಲಕ ತಿಳಿಸುತ್ತಿದ್ದರು. ಮುಂಬಯಿಯ ಸೇಂಟ್ ಝೇವಿಯರ್ ಕಾಲೇಜಿಗೆ ಫಕೀರಪ್ಪನವರು ಸೇರಿದ ಮೇಲೆ ಗುರುಬಸಪ್ಪ ಮತ್ತು ತಮ್ಮಣ್ಣಪ್ಪನವರಿಗೆ ಕಾಳಜಿ ಹೆಚ್ಚಾಯಿತು. ಗುರುಬಸಪ್ಪನವರಿಗೆ ಮಗನ ಬಗ್ಗೆ ವಾತ್ಸಲ್ಯ ಇದ್ದರೆ, ತಮ್ಮಣ್ಣಪ್ಪನವರು ಹಳಕಟ್ಟಿಯವರಿಗೆ ಮಮತಾಮಯಿ, ಸ್ನೇಹಿ, ಮಾರ್ಗದರ್ಶಿಯೇ ಆಗಿದ್ದರು. ಪತ್ರಮುಖೇನ ಅಳಿಯನಿಗೆ ಕಾಳಜಿಯನ್ನು ವ್ಯಕ್ತಪಡಿಸುವುದರ ಜೊತೆಗೆ, ಅವನ ಭವಿಷ್ಯದ ಬಗ್ಗೆ ಸಲಹೆ-ಸೂಚನೆಗಳನ್ನು ಕೊಡುತ್ತಿದ್ದರು. ಇದರಲ್ಲಿ ಮಾವನೆಂಬ ಅಹಂ ಎಂದೂ ಕಾಣುವುದಿಲ್ಲ. ಪುಣೆಯ 'ಫ್ರೆಂಡ್ಸ್ ಅಸೋಸಿಯೇಶನ್'ದ ಮುಖಾಂತರವಾಗಿ ಆಗುತ್ತಿರುವ ಎಲ್ಲ

ವ್ಯಾಖ್ಯಾನಗಳಿಗೆ ಹೋಗಬೇಕು ಎಂದು ತಮ್ಮಣ್ಣಪ್ಪನವರು ಹಳಕಟ್ಟಿಯವರಿಗೆ ಸಲಹೆ ನೀಡುವಲ್ಲಿ, ಅಳಿಯ ಓದುವುದರ ಜೊತೆಗೆ ಬೌದ್ಧಿಕವಾಗಿ ಬೆಳೆಯುತ್ತ ದೃಷ್ಟಿಕೋನವನ್ನು ಹರಿಸಬೇಕು ಎಂಬುದಾಗಿತ್ತು.

ಬಿ.ಎ. ಪರೀಕ್ಷೆ ಫೇಲಾದ ಫಕೀರಪ್ಪನವರು ಮನಸ್ಸಿಗೆ ಬೇಸರವಾಗಿ ತಂದೆಗೆ ಪತ್ರ ಬರೆದಾಗ, ಗುರುಬಸಪ್ಪನವರು ತಾವೇ ಸಮಾಧಾನ ಮಾಡಬಹುದಿತ್ತು. ಆದರೆ ಸ್ವತಃ ಗುರುಬಸಪ್ಪನವರೇ ತಮ್ಮಣ್ಣಪ್ಪನವರ ಮೂಲಕ ಹೇಳಿಸುವುದೇ ಸೂಕ್ತ ಎನ್ನಿಸಿ, ಅವರಿಂದ ಪತ್ರ ಬರೆಯಿಸುತ್ತಾರೆ. ಆಗ ತಮ್ಮಣ್ಣಪ್ಪನವರು ಗುರುಬಸಪ್ಪನವರಿಗೆ ಸಮಾಧಾನದ ಮಾತುಗಳನ್ನೂ ಹೇಳುವುದರ ಜೊತೆಗೆ, ಫಕೀರಪ್ಪನವರಿಗೆ ಧೈರ್ಯ, ಸ್ಫೂರ್ತಿಯ ಮಾತುಗಳನ್ನೂ ಹೇಳುತ್ತಾರೆ. ತಮ್ಮಣ್ಣಪ್ಪನವರ ಪ್ರಕಾರ ಫೇಲು ಎಂಬುದು ಇನ್ನೂ ಹೆಚ್ಚಿನ ಓದುವಿಕೆ ಜ್ಞಾನವನ್ನು ಹೆಚ್ಚಿಸುವುದು, ಜೊತೆಗೆ 'ಮರಳಿ ಯತ್ನವ ಮಾಡು' ಎಂಬ ತತ್ವದಲ್ಲಿ ನಂಬಿಕೆ ಇರುವಂಥದ್ದು. ಹಳಕಟ್ಟಿಯವರ ಜೀವನದ ಪ್ರತಿಯೊಂದು ನಿರ್ಧಾರವನ್ನು ತಮ್ಮಣ್ಣಪ್ಪನವರೇ ನಿರ್ಧರಿಸುತ್ತಿದ್ದರು. ಶಿಕ್ಷಣ, ನೌಕರಿ, ಸಮಾಜಕಾರ್ಯ ಪ್ರತಿಯೊಂದು ವಿಷಯದಲ್ಲೂ ತಮ್ಮಣ್ಣಪ್ಪನವರ ಸಲಹೆಯೇ ಮುಖ್ಯವಾಗಿ ಇರುತ್ತಿತ್ತು. ಇದಕ್ಕೆ ಹಳಕಟ್ಟಿಯವರು ವಿಜಾಪುರವನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡಿದ್ದೇ ಒಂದು ಒಳ್ಳೆಯ ಉದಾಹರಣೆ. ವಕೀಲಿ ಉದ್ಯೋಗದ ಸಲುವಾಗಿ ಬೆಳಗಾವಿಗೆ ಎರಡು ಸಲ ವಲಸೆ ಹೋಗಿ ಮತ್ತೆ ತಿರುಗಿ ವಿಜಾಪುರಕ್ಕೆ ಬಂದದ್ದರಲ್ಲಿ ತಮ್ಮಣ್ಣಪ್ಪನವರ ಮಹತ್ವಾಕಾಂಕ್ಷೆ ಎದ್ದು ಕಾಣುತ್ತದೆ.

ಸಾಹಿತ್ಯಿಕ ಪ್ರೇರಣೆ:

ವಚನವಾಙ್ಮಯದ ತಾಡೋಲೆ ಕಟ್ಟುಗಳ ಪರಿಚಯ ಫಕೀರಪ್ಪನವರಿಗೆ ಮೊದಲು ಆದುದು ಅವರ ಮಾವನವರ ಗ್ರಾಮ ರಬಕವಿ-ಬನಹಟ್ಟಿಯಿಂದಲೇ ಹೇಳಬಹುದು. ಸ್ವತಃ ಫಕೀರಪ್ಪನವರೇ ಇದನ್ನು ಶಿವಾನುಭವ ಪತ್ರಿಕೆಯ ೨೫ವರ್ಷಗಳ ವರದಿಯಲ್ಲಿ ಬರೆದ 'ರಬಕವಿ-ಬನಹಟ್ಟಿಗಳಲ್ಲಿ ನನ್ನ ಸಂಶೋಧನೆಗಳು' ಎಂಬ ಲೇಖನದಲ್ಲಿ ಹೀಗೆ ಉಲ್ಲೇಖಿಸುತ್ತಾರೆ. "೧೯೦೧ ಮತ್ತು ೧೯೦೨ ಈ ೨ವರ್ಷಗಳಲ್ಲಿ ಧಾರವಾಡದಲ್ಲಿ ಪ್ಲೇಗ್ ಬೇನೆಯು ಬಹು ತೀವ್ರ ಸ್ಥಿತಿಯಲ್ಲಿ ಇದ್ದುದರಿಂದ ನಾನು ಆಗ ಕೆಲವು ಕಾಲ ಜಮಖಂಡಿ ಸಂಸ್ಥಾನದಲ್ಲಿರುವ ಬನಹಟ್ಟಿ ಗ್ರಾಮದಲ್ಲಿ ನನ್ನ ಮಾವಂದಿರಾದ ಕೈ.ವಾ.ತಮ್ಮಣ್ಣಪ್ಪ ಚಿಕ್ಕೋಡಿ ಇವರಲ್ಲಿ ಹೋಗಿ ಉಳಿಯಬೇಕಾಯಿತು. ಇದೇ ಕಾಲಕ್ಕೆ ಈಗಿನ ನಿವೃತ್ತ ನ್ಯಾಯಾಧೀಶರಾದ ಶ್ರೀಯುತ ವೀರಭದ್ರಪ್ಪ ಹಾಲಭಾವಿ ಇವರು ರಬಕವಿಯಲ್ಲಿಯ ತಮ್ಮ ಆಪ್ತರ ಕಡೆ ಬರುತ್ತಿದ್ದರು. ನಾವು ಉಭಯತರು ಕಾಲೇಜಿನಲ್ಲಿ ಕೇವಲ ಮಿತ್ರತ್ವದಿಂದ ಇರುತ್ತಿದ್ದು ಇಲ್ಲಿಯಾದರೂ ಕೂಡಿಯೇ ಕಳೆಯುತ್ತಿದ್ದೆವು. ಶ್ರೀಯುತ ವೀರಭದ್ರಪ್ಪನವರು ಜಮಖಂಡಿ ಸಂಸ್ಥಾನದಲ್ಲಿರುವ ಗೋಠೆ ಎಂಬ ಗ್ರಾಮದಲ್ಲಿ ತಮ್ಮ ಬಂಧುಗಳ ಮನೆಯಲ್ಲಿ ಕೆಲವು ಪುರಾತನ ಗ್ರಂಥಗಳಿದ್ದು ಅವುಗಳನ್ನು ಅವರು ನನಗೆ ರಬಕವಿಗೆ ತಂದು ತೋರಿಸಿದರು. ಅವುಗಳಲ್ಲಿ 'ಪ್ರಭುಲಿಂಗಲೀಲೆ' ಮತ್ತು 'ಗಣಭಾಷ್ಯ ರತ್ನಮಾಲೆ' ಎಂಬ ಗ್ರಂಥಗಳಿದ್ದು ಅವುಗಳನ್ನು ನಾನೇ ಓದಿ ಕೆಲವು ಟಿಪ್ಪಣಿಗಳನ್ನು ಮಾಡಿಕೊಂಡೆ."೬೪ ಬಳಿಕ

ಹಳಕಟ್ಟಿಯವರು ವಚನ ಸಾಹಿತ್ಯಶೋಧದಲ್ಲಿ ಆಳವಾಗಿ ಇಳಿಯಲು ತಮ್ಮಣ್ಣಪ್ಪನವರು ನಿರಂತರ ಪ್ರೇರಣೆ ನೀಡಿದರೆಂದು ಇವರಿಬ್ಬರ ಪತ್ರೋತ್ತರಗಳಿಂದ ಸ್ಪಷ್ಟವಾಗುತ್ತದೆ.

ಹಳಕಟ್ಟಿಯವರ ಜೀವನವನ್ನು-ಸಾಹಿತ್ಯಿಕ ಜೀವನವನ್ನು ರೂಪಿಸಿದವರು ತಮ್ಮಣ್ಣಪ್ಪನವರೆ ಎಂದು ನಿರ್ಧಾರಾತ್ಮಕವಾಗಿ ಹೇಳಲು ಬನಹಟ್ಟಿಯಲ್ಲಿ ಜರುಗಿದ ಅಖಿಲಭಾರತ ಪ್ರಾರ್ಥನಾಯೋಗ ಮಂಡಳಗಳ ದ್ವಿತೀಯ ಸಮ್ಮೇಲನದ ಸ್ವಾಗತಾಧ್ಯಕ್ಷರಾದ ಶ್ರೀ ದೇ.ಗಿ.ಭದ್ರನವರ ಅವರು ತಮ್ಮ ಭಾಷಣದಲ್ಲಿ "ಹಳೆಯ ಎಷ್ಟೋ ತಾಡವಾಲೆ ವಚನ ಗ್ರಂಥಗಳನ್ನು ಶೋಧಿಸಿ ಅವುಗಳನ್ನು ಪ್ರಚಾರಕ್ಕೆ ತಂದು ಪ್ರಸಿದ್ಧಿಸಿ ವಚನಗಳ ಸಾಕ್ಷತ್ಕಾರ ಮಾಡಿಸಲಿಕ್ಕೆ ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳಿಂದ ದರ್ಶನ ಸ್ಪರ್ಶನ ಮಾಡಿಸಿದ ರಾ॥ಬ॥ಫ.ಗು.ಹಳಕಟ್ಟಿ ವಿಜಾಪುರ, ಅವರು ವಚನಪಿತಾಮಹರೆಂದೆನಿಸಲಿಕ್ಕೆ ಮತ್ತು ಪ್ರಾರಂಭದಲ್ಲಿ ಇವರಿಗೆ ಪ್ರೋತ್ಸಾಹಿಸಿದವರಲ್ಲಿ ಕೈ. ತಮ್ಮಣ್ಣಪ್ಪನವರೇ ಕಾರಣರು"[೬೫] ಎಂದು ಹೇಳಿದುದು ಸಾಕ್ಷಿಯಾಗಿದೆ. ಈ ಎಲ್ಲ ವಿಚಾರಗಳಿಂದ ಸ್ವತಃ ಸಾಹಿತ್ಯಾಸಕ್ತರಾಗಿದ್ದ ತಮ್ಮಣ್ಣಪ್ಪನವರು ತಮ್ಮ ಅಳಿಯ ಹಳಕಟ್ಟಿಯವರ ವಿದ್ವತ್ತನ್ನು ಅರಿತಿದುದೇ ಕಾರಣವೆಂಬುದು ಸ್ಪಷ್ಟವಾಗುತ್ತದೆ.

ಧಾರ್ಮಿಕ ಪ್ರೇರಣೆ:

ತಮ್ಮಣ್ಣಪ್ಪನವರಿಗೆ ಲಿಂಗಾಯತ ಧರ್ಮದ ಬಗ್ಗೆ ಅಪಾರ ಕಾಳಜಿ. ಲಿಂಗಾಯತ ಧರ್ಮವನ್ನು ಸರಿಯಾಗಿ ಅರ್ಥಮಾಡಿಕೊಂಡು ಸಮಾಜವನ್ನು ಮುನ್ನಡೆಸಿಕೊಂಡು ಹೋಗಬೇಕು. ಅದಕ್ಕಾಗಿ ಫಕೀರಪ್ಪನಂತಹ ಯುವಕರಿಂದ ಸಾಧ್ಯ ಎಂಬುದನ್ನು ಅಳಿಯನಿಗೆ ತಿಳಿಸಿ ಹೇಳುತ್ತಿದ್ದರು. "ವೀರಶೈವ ಧರ್ಮದ ಉತ್ಪತ್ತಿ ಅದರ ಬೆಳವಣಿಗೆ, ಅದರಲ್ಲಿ ಆಗುತ್ತ ಬಂದಿರುವ ಸ್ಥಿತ್ಯಂತರಗಳು ಮತ್ತು ವೀರಶೈವರಾಗಿ ನಮ್ಮ ದೇಶಕ್ಕೆ ಮಾಡಿದ ಮತ್ತು ಮಾಡುವ ಕಾರ್ಯಗಳೇನು? ಯುವಕರಾದಂಥವರು ವೀರಶೈವ ಧರ್ಮದ ಇತಿಹಾಸವನ್ನು ಸಂಶೋಧನ ಮಾಡಿ ಸಮಾಜಕ್ಕೆ ನೀಡಿ ಕೃತಾರ್ಥರಾಗಬೇಕು. ಅದು ಯುವಶಕ್ತಿಯಿಂದ ಮಾತ್ರ ಸಾಧ್ಯ[೬೬] ಎಂದು ಪ್ರೋತ್ಸಾಹಿಸುತ್ತಿದ್ದರು. ಹಳಕಟ್ಟಿಯವರು ಧರ್ಮನಿಷ್ಠರಾಗಿ ತಮ್ಮ ಸುತ್ತಲಿನ ಪರಿಸರವನ್ನು ಅದೇ ನಿಟ್ಟಿನಲ್ಲಿ ತೆಗೆದುಕೊಂಡು ಹೋಗಬೇಕು; ಧರ್ಮದ ಸತ್ಯಾಸತ್ಯಗಳನ್ನು ಚೆನ್ನಾಗಿ ತಿಳಿದುಕೊಂಡು ಸಮಾಜಕ್ಕೆ ತಿಳಿಸಿಬೇಕೆಂಬುದೇ ತಮ್ಮಣ್ಣಪ್ಪನವರ ಸದಾಶಯವಾಗಿತ್ತು. ಮಾವನ ಆಸೆಯನ್ನು ಪೂರೈಸಲು ಸಿದ್ಧರಾದ ಹಳಕಟ್ಟಿಯವರಿಗೆ ಧರ್ಮದ ಬಗ್ಗೆ ತಪ್ಪುತಿಳುವಳಿಕೆಯ ಗ್ರಹಿಕೆಯನ್ನು ಇಟ್ಟುಕೊಂಡು ಹೊರಟ ಸಮಾಜದ ಧರ್ಮಗುರುಗಳು, ಗಣ್ಯರು, ವಿದ್ಯಾವಂತರು ಜನಸಾಮಾನ್ಯರು ಮೊದಲಾದವರನ್ನು ತಿದ್ದುವ ಕೆಲಸ ಮಾಡಬೇಕಾಯಿತು. "ವೀರಶೈವ ಧರ್ಮದ ನಿಜಸ್ಥಿತಿ ಯಾವುದೆಂಬುದನ್ನು ಕಂಡುಹಿಡಿಯುವುದೇ ನನ್ನ ಮುಖ್ಯ ಧ್ಯೇಯವಾಯಿತು"[೬೭] ಎಂಬ ಹೇಳಿಕೆಯಲ್ಲಿ ತಮ್ಮಣ್ಣಪ್ಪನವರ ಪತ್ರದ ಉದ್ದೇಶವನ್ನೇ ಕಾಣುತ್ತೇವೆ. "ಉಳಿದ ಯಾವುದೇ ಕ್ಷೇತ್ರಗಳಿಗಿಂತ ವೀರಶೈವ ವಾಙ್ಮಯದ ಪರಿಶೋಧನೆಯೇ ಹಳಕಟ್ಟಿಯವರ ಬದುಕಿನ, ಬಾಳಿನ ತಪಸ್ಸಾಗಿತ್ತು. ವಚನಶಾಸ್ತ್ರದ ತಳಹದಿಯ ಮೇಲೆ ಉದಾತ್ತ, ನಿರ್ಮಲವಾದ ಲಿಂಗಾಯತ ಸಮಾಜವನ್ನು

ಕಟ್ಟಬೇಕು ಎಂಬುದೇ ಅವರ ಆ ತಪಸ್ಸಿನ ಹಿಂದಿನ ಗುರಿಯಾಗಿತ್ತು. ಅದಕ್ಕಾಗಿ ಯಾವ ತ್ಯಾಗಮಾಡಲೂ ಅವರ ಸಾಧಕ ಮನಸ್ಸು ಸಿದ್ಧವಾಗಿತ್ತು.[೧೮]

ಹಳಕಟ್ಟಿಯವರು ತಮ್ಮಣ್ಣಪ್ಪನವರ ನಿರ್ದೇಶನದ ಮೇರೆಗೆ ಜಿಲ್ಹಾ ಕಮೀಟಿ, ತಾಲೂಕಿಗೊಂದು ಕಮೀಟಿ, ನಂತರ ಗ್ರಾಮಕ್ಕೊಂದರಂತೆ ಸುಶಿಕ್ಷಿತರನ್ನೊಳಗೊಂಡ ಸ್ಥಾನಿಕ ಕಮೀಟಿಯನ್ನು ಸ್ಥಾಪಿಸಿದರೆ ಲಿಂಗಾಯತ ಸಮಾಜದ ಉನ್ನತಿಗಾಗಿ ಏನಾದರೂ ಸಾಧ್ಯವಾಗುತ್ತದೆ ಎಂದು ನಂಬಿದ್ದರು. ಆ ದಿಶೆಯಲ್ಲಿ ಅವರು ಜಿಲ್ಹಾ ಕಮೀಟಿಯನ್ನು ಸ್ಥಾಪಿಸಿದ ಮೇಲೆ, ಬೋರ್ಡಿಂಗ ಒಂದನ್ನು ಸ್ಥಾಪಿಸುವಂತೆಯೂ, ಅದಕ್ಕಾಗಿ ಬೇರೆ ನಿಧಿಯನ್ನು ಕೂಡಿಸುವಂತೆಯೂ ಬರೆದರು.[೧೯] ಲಿಂಗಾಯತ ಧರ್ಮದ ಕಾಳಜಿಯನ್ನಿಟ್ಟುಕೊಂಡ ತಮ್ಮಣ್ಣಪ್ಪನವರು ತಮ್ಮ ಅಳಿಯನಿಂದ ಸಮಾಜದ ಪ್ರಗತಿ ಸಾಧ್ಯ ಎಂದು ಅರಿತಿದ್ದರು. "ಭರತ ಖಂಡದಲ್ಲಿ ನಮ್ಮ ಧರ್ಮದ ಮಹತ್ವವು ಬೆಳೆಯಬೇಕಾದರೆ ಲೌಕಿಕ ವಿದ್ಯೆಯ ಅಗತ್ಯ ಬಹಳವಿರುತ್ತದೆ. ಇದಕ್ಕೆ ಧರ್ಮಗುರುಗಳ ಸಹಾನುಭೂತಿ ದೊರೆತರೆ ನಮ್ಮ ಪ್ರಗತಿಯು ಬೇಗನೆ ಆಗುವುದು. ಆದರೆ ಲೌಕಿಕದ ಕಡೆಗೆ ದುರ್ಲಕ್ಷ್ಯ ಮಾಡಿ ಧರ್ಮಗುರುಗಳ ಹೇಳಿಕೆಯಂತೆ ನಡೆದರೆ ನಾವು ಎಂದೂ ಮುಂದೆ ಹೋಗಲಾರೆವು."[೨೦] ತಮ್ಮಣ್ಣಪ್ಪನವರ ಪ್ರಗತಿಪರವಾದ ಇಂತಹ ವಿಚಾರಗಳು ಹಳಕಟ್ಟಿಯವರ ಜೀವನಕ್ಕೆ ಆದರ್ಶಮಯವಾದವು.

ಸಂಘ–ಸಂಸ್ಥೆಗಳ ಅಸ್ತಿತ್ವಕ್ಕೆ ಪ್ರೇರಣೆ:

ಫ.ಗು.ಹಳಕಟ್ಟಿಯವರ ವಕೀಲಿವೃತ್ತಿಯ ಜೊತೆಗೆ ನಡೆಸುತ್ತಿರುವ 'ವಚನವಾಙ್ಮಯ', ಸಂಶೋಧನೆಯ ಕಾರ್ಯ ತಮ್ಮಣ್ಣಪ್ಪನವರಿಗೆ ತೃಪ್ತಿ ತಂದಿತ್ತು. ಇದರ ಜೊತೆಗೆ ಸಮಾಜದಲ್ಲಿ ಸಂಘ–ಸಂಸ್ಥೆಗಳು, ಶಿಕ್ಷಣಸಂಸ್ಥೆಗಳು ಹಳಕಟ್ಟಿಯವರಿಂದ ಸ್ಥಾಪಿತವಾಗಲಿ ಎಂದು ಕನಸು ಕಂಡರು. ಆದರೆ ವಚನವಾಙ್ಮಯ ಸಂಶೋಧನೆಯಲ್ಲಿ ತೊಡಗಿದ ಹಳಕಟ್ಟಿಯವರಿಗೆ ತಮ್ಮ ಕುಟುಂಬ ಆರ್ಥಿಕ ಪರಿಸ್ಥಿತಿಯಿಂದ ಹದಗೆಡುತ್ತಿರುವುದನ್ನು ಕಂಡು ತಾವು ಸರಕಾರಿ ನೌಕರಿಯಲ್ಲಿ ತೊಡಗಬೇಕು ಎಂದು ವಿಚಾರ ಮಾಡಿದರು. ಆದರೆ ಒಮ್ಮೆಲೆ ತಾವೊಬ್ಬರೆ ನಿರ್ಧಾರ ತೆಗೆದುಕೊಳ್ಳಲಿಲ್ಲ. ತಮ್ಮ ಮಾವನವರಾದ ತಮ್ಮಣ್ಣಪ್ಪನವರಿಗೆ ಪತ್ರದ ಮೂಲಕ ಅಭಿಪ್ರಾಯವನ್ನು ಕೇಳಿದಾಗ ತಮ್ಮಣ್ಣಪ್ಪನವರು ಅಳಿಯನಿಗೆ "ನೀವು ಮುನುಸುಫ ಹುದ್ದೆಯನ್ನು ಸ್ವೀಕರಿಸಿ ಸಾಂಪತ್ತಿಕ ಸ್ಥಿತಿ ಸುಧಾರಿಸಿದ ಮೇಲೆಯಾದರೂ ಸಮಾಜಸೇವೆಯನ್ನು ಮಾಡಲೇಬೇಕು."[೨೧] ಬಹುಶಃ ಹೀಗೆ ಬರೆಯುವಾಗ ತಮ್ಮಣ್ಣಪ್ಪನವರ ಮನಸ್ಸಿಗೆ ನೋವಾಗಿರಬೇಕು. ಅಳಿಯ ಸಂಪೂರ್ಣವಾಗಿ ಸಮಾಜಸೇವೆಯಲ್ಲಿಯೇ ತೊಡಗಬೇಕು ಎಂಬ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡ ತಮ್ಮಣ್ಣಪ್ಪನವರು ಹಿಡಿದ ಪಟ್ಟು ಬಿಡಲಿಲ್ಲ. ಎಲ್ಲಿ ಅಳಿಯ ನೌಕರಿ ಸೇರಿ ಸ್ವಾರ್ಥಿಯಾಗಿ ಬಿಡುತ್ತಾನೊ ಎಂಬ ದುಗುಡದಿಂದ ಹಳಕಟ್ಟಿಯವರಿಗೆ ಸಮಾಜಸೇವೆಯ ಅವಶ್ಯಕತೆಯ ಬಗ್ಗೆ ಮೇಲಿಂದ ಮೇಲೆ ತಿಳಿಸಿ ಹೇಳಿ, ಮನಃಪರಿವರ್ತನೆ ಮಾಡಿದರು. ಹಳಕಟ್ಟಿಯವರು ೧೯೧೦ರಲ್ಲಿ 'ವಿಜಾಪುರ ಲಿಂಗಾಯತ ಅಭಿವೃದ್ಧಿ ಶಿಕ್ಷಣಸಂಸ್ಥೆ'ಯನ್ನು ಸ್ಥಾಪಿಸಿದರು. ಈ ಸಂಸ್ಥೆಯಿಂದ ೧೯೧೮ರಲ್ಲಿ 'ಸಿದ್ದೇಶ್ವರ ಪ್ರೌಢಶಾಲೆ' ಸ್ಥಾಪನೆಯಾಯಿತು. ತಮ್ಮಣ್ಣಪ್ಪನವರು ಅಳಿಯನ ಈ

ಕಾರ್ಯದಿಂದ ಸ್ವತಃ ಪ್ರೇರೆಪಿತಗೊಂಡರು. ಮುಂದುವರೆದು ಕರ್ನಾಟಕ ದೇಶದ ಇತಿಹಾಸ, ಲಿಂಗಾಯತ ಧರ್ಮ ಮತ್ತು ಅದರ ಇತಿಹಾಸ ಕನ್ನಡ ಭಾಷಾವಿಷಯಗಳ ಬಗ್ಗೆ ಶೋಧ ನಡೆಸಲು ಬಯಸಿದರು.[೨೨]

ತಮ್ಮಣ್ಣಪ್ಪನವರ ಪ್ರೇರಣೆ, ಪ್ರೋತ್ಸಾಹದಿಂದ ವಿಜಾಪುರದಲ್ಲಿ ಸಂಘಸಂಸ್ಥೆಗಳನ್ನು ಹುಟ್ಟುಹಾಕಿದ ಹಳಕಟ್ಟಿಯವರು ಮತ್ತೆ ಅವರ ಮನಸ್ಸು ಉದ್ಯೋಗದ ಕಡೆ ವಾಲತೊಡಗಿತು. ಇದನ್ನರಿತ ತಮ್ಮಣ್ಣಪ್ಪನವರು ಅಳಿಯನಿಗೆ ಸ್ಫೂರ್ತಿ ತುಂಬಲು ಪ್ರಯತ್ನಿಸಿದರು. "ತಮ್ಮ ಅಗತ್ಯವು ಇನ್ನು ಇಲ್ಲವೆಂದು ಬರೆದಿರುತ್ತೀರಿ. ಆದರೆ ಇನ್ನು ಮುಂದೆಯೇ ತಮ್ಮದೇ ಕೆಲಸವಿರುತ್ತದೆ. ತಮ್ಮ ವಿಚಾರದಿಂದಲೇ ಅಲ್ಲಿ ಸುಧಾರಣೆ ನಡೆದಿದೆ. ಮೂಲಯೋಜಕರ ಸಾನಿಧ್ಯವು ಸಂಸ್ಥೆಗಳಿಗೆ ಸದಾ ಇರಬೇಕಾಗುತ್ತದೆ. ನೀವು ಉತ್ಪನ್ನ ಮಾಡಿದ ಸಂಸ್ಥೆಗಳು ಅಲ್ಲಿ ಇನ್ನೂ ಬೇರೂರಿಲ್ಲ. ನಿಮ್ಮ ಹೈಸ್ಕೂಲು ಬೆಳೆದು ಮುಂದೆ ಕಾಲೇಜು ಆಗಲಿಕ್ಕೇ ಬೇಕು. ಇದನ್ನು ನೇರವೇರಿಸಬೇಕಾದರೆ ವಿಜಾಪುರದಲ್ಲಿ ನಿಮ್ಮ ಹೊರತು ಯಾರೂ ಸಮರ್ಥರಿಲ್ಲ."[೨೩] ಅಳಿಯನಿಂದ ವಿಜಾಪುರ ಬೆಳೆದು ಸಮೃದ್ಧಿ ಹೊಂದಬೇಕೆಂಬುದೇ ತಮ್ಮಣ್ಣಪ್ಪನವರ ಗುರಿಯಾಗಿತ್ತು. ಆದರೆ ಹಳಕಟ್ಟಿಯವರ ಮನಸ್ಸು ಇನ್ನೂ ಚಾಂಚಲ್ಯವಾಗಿತ್ತು. ಜೊತೆಗೆ ಕುಟುಂಬದ ಜವಾಬ್ದಾರಿಯನ್ನು ಕಡೆಗಣಿಸುತ್ತಿರುವೆ ಎಂಬ ಅಪರಾಧಿ ಪ್ರಜ್ಞೆ ಅವರಿಗೆ ಕಾಡುತ್ತಿರಬೇಕು. ಹೀಗಾಗಿ ಒಮ್ಮೊಮ್ಮೆ ಅವರು ಸಾಮಾನ್ಯರಂತೆ ತಾವು ಜೀವನದಲ್ಲಿ ಏನೂ ಆಸ್ತಿಯನ್ನು ಗಳಿಸಲಿಲ್ಲ ಎಂದು ಮಾವನವರ ಮುಂದೆ ಮಾತಾಡಿದ್ದುಂಟು. ಬೇರೆಯವರ ತರಹ ಮಾವನಾಗಿದ್ದರೆ ತನ್ನ ಅಳಿಯ ವಕೀಲನಾಗಿ ಸಾಕಷ್ಟು ದುಡ್ಡು, ಸಂಪತ್ತು ಗಳಿಸಿ ತಮ್ಮ ಮಗಳನ್ನು ಚೆನ್ನಾಗಿಟ್ಟುಕೊಂಡರೆ ಸಾಕು ಎಂದು ಭಾವಿಸುತ್ತಿದ್ದರು. ಆದರೆ ತಮ್ಮಣ್ಣಪ್ಪನವರು "ತಾವು ಮಾಡುತ್ತಿರುವ ಸಾರ್ವಜನಿಕ ಕಾರ್ಯದ ದೆಸೆಯಿಂದ ದ್ರವ್ಯದೃಷ್ಟಿಯಿಂದ ಹಾನಿಯಾಯಿತೆಂದು ಬರೆದಿದ್ದೀರಿ. ಆಗಿರಬಹುದು. ಆದರೆ ತಮ್ಮಿಂದ ವಿಜಾಪುರ ಜಿಲ್ಲೆಯ ಲಿಂಗಾಯತರ ಹಿತವೂ ಬಹಳವಾಗಿದೆ. ದಂಧೆಯ ಮೇಲೆಯೇ ತಮ್ಮ ಎಲ್ಲ ಮನಸ್ಸನ್ನು ಹಾಕಿದ್ದರೆ ಅಲ್ಲಿಯ ಲಿಂಗಾಯತರು ಇನ್ನೂ ಅವನತಿಯಲ್ಲಿಯೇ ಕೊಳೆಯುತ್ತಿದ್ದರು. ಕೇವಲ ದ್ರವ್ಯದೃಷ್ಟಿಯಿಂದ ಬಾಳುವೆ ಮಾಡುವುದು ಎಂದಿಗೂ ಸಮರ್ಥನೀಯವಾಗಲಾರದು. ಸಮಾಜದ ಹಿತದ ಕಡೆಗೆ ಲಕ್ಷ್ಯವನ್ನು ಕೊಟ್ಟವರೇ ತಮ್ಮ ಜನ್ಮವನ್ನು ಸಾರ್ಥಕ ಮಾಡಿಕೊಂಡರೆಂದು ತಿಳಿಯಬೇಕು."[೨೪] ಎಂದು ಬರೆಯುವಲ್ಲಿ ಹಳಕಟ್ಟಿಯವರ ಅವಶ್ಯಕತೆ ಸಮಾಜಕ್ಕೆ ಎಷ್ಟು ಅನಿವಾರ್ಯವಾಗಿದ್ದಿತ್ತೆಂಬುದು ಸ್ವತಃ ಹಳಕಟ್ಟಿಯವರಿಗೆ ತಿಳಿದಿತ್ತೊ ಇಲ್ಲವೊ, ತಮ್ಮಣ್ಣಪ್ಪನವರಿಗೆ ಮಾತ್ರ ಖಂಡಿತ ಗೊತ್ತಿತ್ತು.

ತಮ್ಮಣ್ಣಪ್ಪನವರು ಹಳಕಟ್ಟಿಯವರನ್ನು ಸಂಪೂರ್ಣವಾಗಿ ಸಮಾಜಮುಖಿಯಾಗಿ ಮಾಡಲು ಪಣತೊಟ್ಟು ನಿಂತರೂ, ಹಳಕಟ್ಟಿಯವರ ಮನಸ್ಸು ಆ ನಿಟ್ಟಿನಲ್ಲಿ ಸಂಕಲ್ಪ ತೊಡಲು ಸಾಧ್ಯವಾಗಲೇ ಇಲ್ಲ. ಅವರು ತಮ್ಮ ಆರ್ಥಿಕ ತೊಂದರೆಗಳಿಗಾಗಿ ವಿಜಾಪುರವನ್ನು ಬಿಟ್ಟು ಧಾರವಾಡ ಅಥವಾ ಬೆಳಗಾವಿಗೆ ಹೋಗಲೇಬೇಕೆಂಬ ನಿರ್ಧಾರ ಮಾಡಿದ್ದರು. ಅದನ್ನು ತಮ್ಮ ಪತ್ರದಲ್ಲಿ "ಅಲ್ಲಿಗೆ (ಧಾರವಾಡಕ್ಕೆ) ಹೋದ ಬಳಿಕ ನನ್ನ ದಂಧೆಯ ಹೊರತು ಯಾವ ಕಾರ್ಯಕ್ಕೂ ಮನಸ್ಸು ಹಾಕಬಾರದೆಂದು ನಿಶ್ಚಯಿಸಿದ್ದೇನೆ.

ಆದರೆ ಈ ತರದ ಕಾರ್ಯಗಳಿಂದ ನನ್ನ ಕೆಲಸಕ್ಕೆ ಅಡಚಣಿ ಬರುವಂತಿದ್ದರೆ ಇವುಗಳನ್ನು (ಲಿಂಗಾಯತ ಧರ್ಮಶೋಧವನ್ನು) ಸಂಪೂರ್ಣವಾಗಿ ಬಿಟ್ಟು ಬಿಡುವೆನು"[೨೦] ಎಂದು ತಮ್ಮ ಅಳಲನ್ನು ತೋಡಿಕೊಂಡಿದ್ದು ನೋಡಿದರೆ ಹಳಕಟ್ಟಿಯವರು ಎಂಥ ತೊಂದರೆಯಲ್ಲಿದ್ದರು ಎಂಬುದು ಎಂಥವರಿಗಾದರೂ ಅರ್ಥವಾಗುತ್ತದೆ. ಸೋತು ಕುಗ್ಗಿ ಹೋದ ಅಳಿಯನಿಗೆ ತಮ್ಮಣ್ಣಪ್ಪನವರು 'ಬರಿ ಸ್ವಸ್ಥ ಜೀವನವೇ ಮನಷ್ಯನ ಉದ್ದೇಶವಲ್ಲ. ಅಂತಹ ಅಭಿಪ್ರಾಯವಿದ್ದರೆ ದೊರೆತ ಶಿಕ್ಷಣವು ಬೋರ್ಗಲ್ಲ ಮೇಲೆ ಮಳೆಯಾದಂತೆ'[೨೧] ಎಂದು ಹೇಳುತ್ತಾರೆ. ವಿಜಾಪುರದಂಥ ಹಿಂದುಳಿದ ಜಿಲ್ಲೆಯಲ್ಲಿದ್ದು ಅದನ್ನು ಪ್ರಗತಿಪಥದೆಡೆಗೆ ಫಕೀರಪ್ಪನವರು ಒಯ್ಯಬೇಕೆಂಬುದು ತಮ್ಮಣ್ಣಪ್ಪನವರ ಅಭಿಲಾಷೆಯಾಗಿತ್ತು. ಜನಹಿತಕಾರ್ಯವನ್ನು ಮಾಡುವ ಸಂದರ್ಭದಲ್ಲಿ ಎಂತಹ ಮಹಾಪುರುಷನಿಗಾದರೂ ವಿಪತ್ತುಗಳು ಬಂದು ಹೋಗುತ್ತವೆ. ಸಾರ್ವಜನಿಕ ಹಿತವನ್ನು ಮಾಡುತ್ತಿರುವ ಸಂದರ್ಭದಲ್ಲಿ ಬಂದ ವಿಪತ್ತುಗಳಿಗೆ ಹೆದರಿ ಸ್ವೀಕೃತ ಕಾರ್ಯಗಳನ್ನು ಬಿಡುವುದು ಸರಿಯಲ್ಲವೆಂದು ಅಳಿಯನಿಗೆ ತಿಳಿಸಿ ಹೇಳಿದರು. ಆದರೂ ಫಕೀರಪ್ಪನವರು ಈ ವೇಳೆಯಲ್ಲಿ ಬಹಳ ತೊಳಲಾಟಕ್ಕೆ ಬಿದ್ದಿದ್ದು ನಮಗೆ ಕಂಡುಬರುತ್ತದೆ. ಈ ಹೊಯ್ದಾಟದಿಂದಾಗಿ ೧೯೨೧ರಲ್ಲಿ ಮತ್ತೆ ಬೆಳಗಾವಿಗೆ ಹೋಗಿ ವಕೀಲಿವೃತ್ತಿ ನಡೆಸಿದರು. ಹಳಕಟ್ಟಿಯವರ ಪ್ರಾಮಾಣಿಕತೆ, ಶ್ರದ್ಧೆ, ಶಿಸ್ತು ಮೆಚ್ಚಿಕೊಂಡು ೧೯೨೩ರಲ್ಲಿ ಅವರನ್ನು ಸರಕಾರವು 'ಪಬ್ಲಿಕ್ ಪ್ರಾಸಿಕ್ಯುಟರ್' ಮತ್ತು 'ಗವರ್ನ್‌ಮೆಂಟ್ ಪ್ಲೀಡರ್' ಎಂದು ನೇಮಿಸಿತು. ಫಕೀರಪ್ಪನವರು ಮನಸ್ಸು ಮಾಡಿ ವಕೀಲಿವೃತ್ತಿಯನ್ನು ಮುಂದುವರೆಸಿಕೊಂಡು ಹೋಗಿದ್ದರೆ ಅಪಾರ ಸಂಪತ್ತು, ಆಸ್ತಿ ಗಳಿಸಿ ಹಾಯಾಗಿ ಇರಬಹುದಾಗಿತ್ತು. ಜೊತೆಗೆ ಒಬ್ಬ ಶ್ರೇಷ್ಠ ವಕೀಲನಾಗಬಹುದಿತ್ತು. ಅವರು ಬೆಳಗಾವಿಯಲ್ಲಿದ್ದರೂ ವಿಜಾಪುರದಲ್ಲಿ ಮಾಡುವ ಕಾರ್ಯಗಳ ಬಗ್ಗೆ ಸದಾ ಕೊರಗುತ್ತಲೇ ಇರಬೇಕು. ಮತ್ತೆ ಅಳಿಯನನ್ನು ವಿಜಾಪುರಕ್ಕೆ ಕರೆತರುವ ತನಕ ತಮ್ಮಣ್ಣಪ್ಪನವರಿಗೆ ಸಮಾಧಾನವೇ ಇರಲಿಕ್ಕಿಲ್ಲ. ಹೀಗಾಗಿ ಹಳಕಟ್ಟಿಯವರು ಸರಕಾರಿ ವೃತ್ತಿಯಿಂದ ನಿವೃತ್ತಿ ತೆಗೆದುಕೊಂಡು ವಚನವಾಙ್ಮಯದ ಸಮಗ್ರ ಸಂಶೋಧನೆ, ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಚಿಂತನೆ, ಸಾರ್ವಜನಿಕ ಕಾರ್ಯಗಳ ನಿರ್ವಹಣೆಗಳ ಕಡೆಗೆ ಸಂಪೂರ್ಣ ಗಮನ ಹರಿಸಿದರು. "ಇಂದು ವಿಜಾಪುರದ ಸಾರ್ವಜನಿಕ ಜೀವನದಲ್ಲಿ ಫಸಲು ಕಂಡುಬರುತ್ತಿದ್ದರೆ ಅದರ ಕೃಷಿಗೆ ಹಳಕಟ್ಟಿಯವರು ಕಾರಣವೆಂದು ಹೇಳಬೇಕಾಗುತ್ತದೆ."[೨೨]

ಹಳಕಟ್ಟಿಯವರು ತಮ್ಮ ಮಾವನವರಿಂದ ಎಷ್ಟು ಪ್ರೇರೆಪಿತರಾಗಿದ್ದರೆಂದರೆ ಅವರು ಕನ್ನಡ ನಾಡು–ನುಡಿಗೆ ಯಾವ ರೀತಿ ಹೋರಾಟ ನಡೆಸಿದ್ದರೊ, ಅದೇರೀತಿ ತಾವೂ ವಿಜಾಪುರದಲ್ಲಿ ಹೋರಾಟ ನಡೆಸಿದರು. ತಮ್ಮಣ್ಣಪ್ಪನವರಂತೆ ಹಳಕಟ್ಟಿಯವರು ಅಂಗಡಿ–ಅಂಗಡಿಗಳಿಗೆ ಹೋಗಿ ಕನ್ನಡದಲ್ಲಿ ಲೆಖ್ಖ ಬರೆದಿಡಲು ಪ್ರೋತ್ಸಾಹಿಸುತ್ತಿದ್ದರು. ಮನೆಮನೆಗೆ ಹೋಗಿ ಮಕ್ಕಳಿಗೆ ಕನ್ನಡದಲ್ಲಿ ಶಿಕ್ಷಣ ಕೊಡಿಸುವಂತೆ ತಿಳಿಸಿಹೇಳುತ್ತಿದ್ದರು. ಯಾವ ರೀತಿ ತಮ್ಮಣ್ಣಪ್ಪನವರು ಮರಾಠಿಯ ಕೈಗೊಂಬೆಯಾಗಿದ್ದ ಕನ್ನಡಿಗರನ್ನು ಎಚ್ಚರಿಸಿದರೊ ಅದೇರೀತಿ ಹಳಕಟ್ಟಿಯವರು ಎಚ್ಚರಿಸಿದರು. ಜೊತೆಗೆ ಸಂಸ್ಥಾನಿಕರ ಕಪಿಮುಷ್ಟಿಯಲ್ಲಿ ಸಿಕ್ಕು ಮರಾಠಿ ಶಿಕ್ಷಣವನ್ನು ಪಡೆಯುತ್ತಿದ್ದ ಕನ್ನಡಿಗರಿಗೆ ಮಾತೃಭಾಷೆಯಲ್ಲಿ ಶಿಕ್ಷಣಕೊಡಿಸಲು ಸತತ

ಪ್ರಯತ್ನಪಟ್ಟರು. ವಿಜಾಪುರಕ್ಕೆ ಬಂದು ನೆಲಸಿದ ಹಳಕಟ್ಟಿಯವರು ತಮ್ಮಣ್ಣಪ್ಪನವರ ಅಭಿಲಾಷೆಯಂತೆ ಶಿಕ್ಷಣಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸತೊಡಗಿದರು. ಅವರ ಕೈಂಕರ್ಯವನ್ನು "ವಿಜಾಪುರದ ಸಾರ್ವಜನಿಕ ಜೀವನವನ್ನು ಹಳಕಟ್ಟಿಯವರು ಪ್ರವೇಶಿಸಿದಾಗ ಆ ನಗರ ಮರಾಠಿಮಯವಾಗಿತ್ತು. ೧೯೬೪ರಲ್ಲಿ ಅವರು ತೀರಿಕೊಂಡಾಗ(ಜೂನ,೨೯) ಅಲ್ಲಿ ಕನ್ನಡ ತಲೆ ಎತ್ತಿತ್ತು. ಈ ಬದಲಾವಣೆಯ ಕೇಂದ್ರಶಕ್ತಿಯೇ ಹಳಕಟ್ಟಿಯವರು ಎಂದರೆ ತಪ್ಪಾಗಲಾರದು. ಒಂದೇ ಒಂದು ಉದಾಹರಣೆ ಇದಕ್ಕೆ ಸಾಕು. ಹಳಕಟ್ಟಿಯವರು ವಿಜಾಪುರ ನಗರಸಭೆಯ ಶಾಲಾಮಂಡಲದಲ್ಲಿ ಸುಮಾರು ಐದು ವರ್ಷ ಅಧ್ಯಕ್ಷರಾಗಿದ್ದರು. ಅವರ ಅವಧಿಯ ಆರಂಭದಲ್ಲಿ ಅಲ್ಲಿ ಮೂರು ಕನ್ನಡ ಗಂಡು ಮಕ್ಕಳ ಶಾಲೆಗಳೂ, ಆರು ಮರಾಠಿ ಗಂಡುಮಕ್ಕಳ ಶಾಲೆಗಳೂ ಇದ್ದವು. ಹಳಕಟ್ಟಿಯವರ ಅವಧಿ ಮುಗಿಯುವ ಹೊತ್ತಿಗೆ ಮೂರು ಕನ್ನಡ ಹೆಣ್ಣುಮಕ್ಕಳ ಶಾಲೆಗಳೂ, ಏಳು ಕನ್ನಡ ಗಂಡುಮಕ್ಕಳ ಶಾಲೆಗಳೂ ಆದವು! ಇಂಥ ಸಾಮಾಜಿಕ ಕೆಲಸಗಳು ನಡೆದಾಗಲೇ ಕನ್ನಡ ಬದುಕುತ್ತದೆ. ಎಂದಿಗಿಂತ ಇಂದು ಕರ್ನಾಟಕದಲ್ಲಿ ಊರಿಗೆ ಒಬ್ಬ ಹಳಕಟ್ಟಿ ಬೇಕಾಗಿದ್ದಾರೆ."[೨೮] ಸಮಾಜದ ಈ ಶೀಘ್ರ ಬೆಳವಣಿಗೆಗೆ ಕಾರಣರಾದ ಹಳಕಟ್ಟಿಯವರಿಗೆ ಮೂಲಪ್ರೇರಣೆ ಎಂದರೆ ತಮ್ಮಣ್ಣಪ್ಪನವರೇ. ಈ ನಿಟ್ಟಿನಲ್ಲಿ ವಿಜಾಪುರದ ಜನತೆ ಹಳಕಟ್ಟಿಯವರಿಗೆ ಸದಾ ಕೃತಜ್ಞರಾಗಿರಬೇಕು. ಏಕೆಂದರೆ ಹಳಕಟ್ಟಿಯವರು ಹುಟ್ಟಿದ್ದು ಧಾರವಾಡ, ಕಲಿತದ್ದು ವಕೀಲಿ ವೃತ್ತಿ. ಅದು ಪುಣೆ ಮತ್ತು ಮುಂಬಯಿಯಂತಹ ಮಹಾನಗರಗಳಲ್ಲಿ. ಆ ವೇಳೆಗೆ ಅವರನ್ನು ಕೈಬೀಸಿ ಕರೆದದ್ದು ಕೆ.ಎಲ್.ಇ. ಸಂಸ್ಥೆಯನ್ನು ಕಟ್ಟಿದ ಯುವಕರ, ಬೆಳಗಾವಿ. ಅಂತಹ ಅನುಕೂಲತೆಯನ್ನು ಒದಗಿಸುವ ಬೆಳಗಾವಿ ನಗರವನ್ನು ಬಿಟ್ಟು ಬರಗಾಲದ ವಿಜಾಪುರವನ್ನು ಇಡೀ ದೇಶದ ಜನತೆ ಕಣ್ಣೆತ್ತಿ ನೋಡುವ ಹಾಗೆ ಮಾಡಲು ಬರಬೇಕೆಂದರೆ ಇದು ವಿಜಾಪುರ ಜನತೆಯ ಸುದೈವವೇ ಸರಿ.

ಪಂಡಿತಪ್ಪನವರೂ ಸಂಬಂಧದಲ್ಲಿ ತಮ್ಮ ಚಿಕ್ಕಪ್ಪನ ಅಳಿಯನಾದ ಹಳಕಟ್ಟಿಯವರ ಬಗ್ಗೆ ಅಪಾರ ಪ್ರೇಮವನ್ನು ಹೊಂದಿದ್ದರು. ವಕೀಲಿವಿದ್ಯೆಯನ್ನು ಮುಗಿಸಿದ ಹಳಕಟ್ಟಿಯವರು ಉಪಜೀವನಕ್ಕಾಗಿ ಬೆಳಗಾವಿಗೆ ಬಂದರು. ಪಂಡಿತಪ್ಪನವರು ಹಳಕಟ್ಟಿಯವರನ್ನು ಪ್ರೀತಿಯಿಂದ ಕಂಡು ಅವರಿಗೆ ಸಾಕಷ್ಟು ಅನುಕೂಲ ಮಾಡಿಕೊಟ್ಟರು. ಹಳಕಟ್ಟಿಯವರ ಮಲತಾಯಿ ಬೆಳಗಾವಿಯ ಭೋಜ ಮನೆತನದವಳು. ಪಂಡಿತಪ್ಪನವರ ಹೆಂಡತಿ ಗೌರಮ್ಮ ಕೂಡ ಅದೇ ಭೋಜ ಮನೆತನದವಳು. ಹೀಗಾಗಿ ಭೋಜ ಅವರ ಮನೆಯಲ್ಲಿದ್ದ ತಾಡೋಲೆ ಕಟ್ಟುಗಳನ್ನು ಹಳಕಟ್ಟಿಯವರಿಗೆ ಒದಗಿಸಲು ಪಂಡಿತಪ್ಪನವರು ಸಹಾಯ ಮಾಡಿದರು. ಮುಂದೆ ತಮ್ಮಣ್ಣಪ್ಪನವರ ಆಸೆಯಂತೆ ಹಳಕಟ್ಟಿಯವರು ಬರಗಾಲದ ವಿಜಾಪುರವನ್ನು ಕಾರ್ಯಕ್ಷೇತ್ರ ಮಾಡಿಕೊಂಡರು. ಅದನ್ನು ಎಲ್ಲ ಕ್ಷೇತ್ರಗಳಲ್ಲಿಯೂ ಸುಧಾರಣೆಗೆ ತಂದು ಸಂಪದ್ಭರಿತವಾಗಿ ಮಾಡಿ, ತಾವು ಬರಿಗೈಯಾದಾಗ ನಿರಾಶೆಯಿಂದ ಮತ್ತೆ ೧೯೨೦ರ ಸುಮಾರಿಗೆ ಬೆಳಗಾವಿಗೆ ಬಂದರು. ಆಗಲೂ ಕೂಡ ಪಂಡಿತಪ್ಪನವರು ಅವರಿಗೆ ಬದುಕಿನ ಭರವಸೆಗಳನ್ನು ಒದಗಿಸಿದರು. ತಮ್ಮ ಪತ್ರಿಕೆ 'ವಿಭಾಕರ'ದ ಮೂಲಕ ಅವರಿಗೆ ಪ್ರಚಾರವನ್ನು ಒದಗಿಸಿದರು. ಹಳಕಟ್ಟಿಯವರ ಅರವತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರಿಗೆ ದೇಣಿಗೆ ಕೊಡಲು ಸಾಮಾಜಿಕರು ನಿರ್ಧರಿಸಿದ್ದರು. ಆ

ಸಂದರ್ಭದಲ್ಲಿ ಬೆಳಗಾವಿಯಲ್ಲಿ ಇದರ ಮುಖಂಡತ್ವವನ್ನು ಪಂಡಿತಪ್ಪನವರು ವಹಿಸಿಕೊಂಡರಲ್ಲದೆ, ದೇಣಿಗೆ ಕೊಟ್ಟವರ ಹೆಸರುಗಳನ್ನು ಬೆಳಗಾವಿಯ ಕನ್ನಡ ವಾರಪತ್ರಿಕೆ 'ಜನಜೀವಾಳ'ದಲ್ಲಿ ಪ್ರಕಟಸುವ ಜವಾಬ್ದಾರಿಯನ್ನು ಹೊತ್ತಿದ್ದರು.

ರಾಮಪ್ಪನವರು ಕೂಡ ಹಳಕಟ್ಟಿಯವರ ಬಗ್ಗೆ ಅಷ್ಟೇ ಪ್ರೀತಿಯನ್ನು ಹೊಂದಿದ್ದರು. ಒಂದೇ ಓರಗೆಯವರಾದ ಇವರದು ಒಂದು ರೀತಿ ಸ್ನೇಹಸಂಬಂಧ. ಬನಹಟ್ಟಿಗೆ ತಮ್ಮ ಮಾವನನ್ನು ನೋಡಲು ಮತ್ತು ಜನತಾ ಶಿಕ್ಷಣಸಂಘದ ಕೆಲಸ ಮಾಡಲು ಬಂದಾಗಲೊಮ್ಮೆ ರಬಕವಿಗೆ ಬಂದು ರಾಮಪ್ಪನವರನ್ನು ಕಂಡು, ಒಂದು ತಾಸು ಅವರ ಮನೆಯ ಕಟ್ಟೆಯ ಮೇಲೆ ಕುಳಿತು ಮಾತನಾಡಿ ಹೋಗುತ್ತಿದ್ದುದನ್ನು ಇಂದಿಗೂ ರಬಕವಿಯ ಜನ ನೆನಪಿಸಿಕೊಳ್ಳುತ್ತಾರೆ. ಹಳಕಟ್ಟಿಯವರ ಪತ್ರಿಕೆಗಳನ್ನು ರಬಕವಿಯಲ್ಲಿ ಕಡ್ಡಾಯವಾಗಿ ತರಿಸಿಕೊಳ್ಳುವವರೆಂದರೆ ರಾಮಪ್ಪನವರು. ದಾನಶೂರರಾದ ಇವರು ಎಷ್ಟೋ ಸಲ ಹಳಕಟ್ಟಿಯವರಿಗೆ ಧನಸಹಾಯವನ್ನು ಕೂಡ ಮಾಡಿದ್ದಾರೆ.

ತಮ್ಮಣ್ಣಪ್ಪನವರು ಸಮಾಜದ ಅಭಿವೃದ್ಧಿಗಾಗಿ ಅಸ್ತಿತ್ವಕ್ಕೆ ಬಂದ ಸಂಘಸಂಸ್ಥೆಗಳಲ್ಲಿ ಭಾಗವಹಿಸಿ ಹೇಗೆ ಸೇವೆ ಸಲ್ಲಿಸಿದರೊ, ಅದೇ ರೀತಿ ತಮ್ಮಣ್ಣಪ್ಪನವರಿಗಿಂತ ಒಂದು ಹೆಜ್ಜೆ ಮುಂದೆ ಇಡುವಂತೆ ಹಳಕಟ್ಟಿಯವರು ಮಾಡಿದರು. ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆ, ವೀರಶೈವ ತರುಣ ಸಮ್ಮೇಲನ, ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಏಕೀಕರಣ ಸಂಘ ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ಮಾವನವರ ಜೊತೆಯಲ್ಲಿ ದುಡಿದು ಸ್ಥಾವರವಾಗಿದ್ದ ಸಮಾಜವನ್ನು ಜಂಗಮ ಮಾಡಿದ ಶ್ರೇಯಸ್ಸು ಹಳಕಟ್ಟಿಯವರದು. ಅಳಿಯನ ಮೇಲೆ ಇಟ್ಟ ಅಗಾಧ ಭರವಸೆಯನ್ನು ಹಳಕಟ್ಟಿಯವರು ಎಂದೂ ಹುಸಿಮಾಡಲಿಲ್ಲ.

ಹಳಕಟ್ಟಿಯವರ ವಚನವಾಙ್ಮಯ ಸಂಶೋಧನೆ, ವಿಜಾಪುರದಲ್ಲಿ ಕಟ್ಟಿದ ಬಿ.ಎಲ್.ಡಿ.ಇ.ಸಂಸ್ಥೆ, ಸಾರ್ವಜನಿಕ ಸಂಸ್ಥೆಗಳು, ಧಾರ್ಮಿಕ ಸಭೆ ಸಮಾರಂಭಗಳು ಇವೆಲ್ಲವುಗಳ ಹಿಂದೆ ತಮ್ಮಣ್ಣಪ್ಪನವರೇ ಸ್ಫೂರ್ತಿಯ ಸೆಲೆಯಾಗಿದ್ದರು. ಎಷ್ಟೋವೇಳೆ ಹಳಕಟ್ಟಿಯವರು ಆರ್ಥಿಕ ಅನನುಕೂಲತೆಯಿಂದ ಕುಗ್ಗಿಹೋಗಿದ್ದರು. ಅಂತಹ ವೇಳೆಯಲ್ಲಿ ಧೈರ್ಯಹೇಳಿ, ಬೆನ್ನುತಟ್ಟಿ ಪ್ರೋತ್ಸಾಹಿಸಿದವರು ತಮ್ಮಣ್ಣಪ್ಪನವರು. ಲಿಂಗಾಯತ ಸಮಾಜದ ಪ್ರಗತಿಗಾಗಿಯೇ ಹುಟ್ಟಿಬಂದವರು ಹಳಕಟ್ಟಿಯವರು ಎಂದು ತಮ್ಮಣ್ಣಪ್ಪನವರು ಬಾಲ್ಯದಿಂದಲೇ ಗುರುತಿಸಿದ್ದರು. ಹೀಗಾಗಿ ಹಳಕಟ್ಟಿಯವರನ್ನು ಸದಾ ತಮ್ಮ ಕಣ್ಣುರೆಪ್ಪೆಯಲ್ಲಿಯೇ ಜೋಪಾನ ಮಾಡಿದ ತಮ್ಮಣ್ಣಪ್ಪನವರ ಬಗ್ಗೆ ಜೆ.ಎಸ್.ಕುಳ್ಳಿ ಅವರು "ಹಳಕಟ್ಟಿಯವರು ಎಲ್ಲಿಯೇ ಹುಟ್ಟಿರಲಿ, ವಚನಪಿತಾಮಹ ಮಾತ್ರ ತಮ್ಮಣ್ಣಪ್ಪನವರ ಸಂಕಲ್ಪಗರ್ಭದಿಂದ ಹುಟ್ಟಿದರೆನ್ನುವುದು ಅತಿ ಸ್ಪಷ್ಟ. ತಮ್ಮಣ್ಣಪ್ಪನವರು ವೈವಿಧ್ಯಮಯ ಸಾಮಾಜಿಕ ಕೃತಿಗಳಲ್ಲಿ ವಚನಪಿತಾಮಹರನ್ನು ಕರ್ನಾಟಕಕ್ಕೆ ಕೊಟ್ಟಿದ್ದು ಅತಿ ಮಹತ್ವದ ಕೃತಿ ಎನ್ನಬಹುದು."ಎಂದಿದ್ದಾರೆ.[೭೮] ಡು.ಸಿಂ.ಬೆಳಗಲಿಯವರು "ತಮ್ಮಣ್ಣಪ್ಪನವರು ಹಳಕಟ್ಟಿಯವರಿಗೆ ಹೆಣ್ಣು ಕೊಟ್ಟ ಮಾವನಷ್ಟೇ ಅಲ್ಲ, ಅವರು ಅಳಿಯನ ಹಿತಚಿಂತಕರೂ, ಮಾರ್ಗದರ್ಶಿಗಳೂ, ಸ್ನೇಹಿತರೂ, ಅವರ ವ್ಯಕ್ತಿತ್ವದ ರೂವಾರಿಗಳೂ

ಆಗಿದ್ದರು."[೮೦] ಒಂದು ಹದವಾದ ಶಿಲೆ ಒಬ್ಬ ಶ್ರೇಷ್ಠ ಕಲಾವಿದನ ಕೈಯಲ್ಲಿ ಸಿಕ್ಕರೆ ಅವನು ಸುಂದರ, ಜಗತ್ಪ್ರಸಿದ್ಧ ಮೂರ್ತಿಯನ್ನು ಕಡೆದು ನಿಲ್ಲಿಸಿ ಎಲೆ ಮರೆಯ ಕಾಯಿಯಂತೆ ತೃಪ್ತನಾಗಿ ಇದ್ದು ಬಿಡುವಂತೆ, ತಮ್ಮಣ್ಣಪ್ಪನವರು ಹಳಕಟ್ಟಿಯವರಂಥ ಶ್ರೇಷ್ಠ ಕಣ್ಮಣಿಯನ್ನು ರೂಪಿಸಿ ತೃಪ್ತರಾದರು. ತಮ್ಮಣ್ಣಪ್ಪನವರು ಸಮಸ್ತ ಆಸ್ತಿಯನ್ನು ಮಾರಿ ದಾನಮಾಡಿದ ಹಣವನ್ನು ಹೈಸ್ಕೂಲ್ ಸ್ಥಾಪನೆಯ ಸಲುವಾಗಿ ಉಯಿಲು ಬರೆದು ಅದಕ್ಕೆ ಅವರ ಅಣ್ಣನ ಮಗನಾದ ಪಂಡಿತಪ್ಪ ಚಿಕ್ಕೋಡಿ ಮತ್ತು ಅಳಿಯನಾದ ಹಳಕಟ್ಟಿಯವರನ್ನು ಟ್ರಸ್ಟಿಗಳನ್ನಾಗಿ ನೇಮಿಸಿ ಅವರಿಗೆ ಜವಾಬ್ದಾರಿ ಹೊರೆಸಿದರು. ಬನಹಟ್ಟಿಯ ಜನ ಮಾವನ ತರುವಾಯ ಅಳಿಯನನ್ನು ಅಷ್ಟೇ ಪ್ರೀತಿಯಿಂದ ನೋಡಿಕೊಂಡರು. ತಮ್ಮಣ್ಣಪ್ಪನವರು ಸ್ಥಾಪಿಸಿದ 'ಜನತಾಶಿಕ್ಷಣ ಸಂಘ'ದ ಎರಡನೆಯ ಕಾರ್ಯಾಧ್ಯಕ್ಷರಾಗಿ (೨೧-೭-೪೯ರಿಂದ ೨೮-೪-೬೨) ನೇಮಕಗೊಂಡ ಹಳಕಟ್ಟಿಯವರು, ಸಂಘದ ಪ್ರಗತಿಗೆ ಬಹುಶ್ರದ್ಧೆಯಿಂದ ದುಡಿದರು. ಹಳಕಟ್ಟಿಯವರು ತಮ್ಮ ಜೀವಿತಾವಧಿಯ ವರೆಗೂ ತಮ್ಮಣ್ಣಪ್ಪನವರ ಪುಣ್ಯತಿಥಿಗೆ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ಹೋಗುತ್ತಿದ್ದುದನ್ನು ಬನಹಟ್ಟಿಯ ಹಿರಿಯರು ಜ್ಞಾಪಿಸಿಕೊಳ್ಳುತ್ತಾರೆ.[೮೧] ಈ ವಿಷಯವನ್ನು ಎಸ್.ಆರ್.ಎ. ಹೈಸ್ಕೂಲಿನ ಹೆಡ್‌ಮಾಸ್ತರರು ವರದಿಯ ರೂಪದಲ್ಲಿ ಶಿವಾನುಭವ ಪತ್ರಿಕೆಯಲ್ಲಿ ಬರೆದು ಕಳಿಸುತ್ತಿದ್ದರು. ಅದನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು.[೮೨] ಅಲ್ಲದೆ ಶ್ರೀ ಚನ್ನಮಲ್ಲಪ್ಪ ಅಬಕಾರರವರು ಕೂಡ ತಮ್ಮ ವೈಯಕ್ತಿಕ ದಿನಚರಿ ಪುಸ್ತಕಗಳಲ್ಲಿ ಹಳಕಟ್ಟಿಯವರು ತಮ್ಮಣ್ಣಪ್ಪನವರ ಪುಣ್ಯತಿಥಿಗೆ ಬಂದು ಹೋಗುವ ವಿಚಾರಗಳನ್ನು ಬರೆದಿದ್ದಾರೆ.[೮೩] ಮಾವ ಮತ್ತು ಅಳಿಯನ ವಾತ್ಸಲ್ಯಕ್ಕೆ ಮನಸೋತ ಬನಹಟ್ಟಿಯ ಜನತಾ ಶಿಕ್ಷಣ ಸಂಘದವರು ಇವರೀರ್ವರ ಕಂಚಿನ ಮುತ್ಥಳಿಗಳನ್ನು ಪ್ರತಿಷ್ಠಾಪಿಸಿ ಕೃತಜ್ಞತೆ ಸಲ್ಲಿಸಿದ್ದಾರೆ. ಸಂಘದ ಆವರಣದೊಳಗೆ ಬಂದಂಥವರು ಇವರೀರ್ವರನ್ನು ಪರಿಚಯಿಸಿಕೊಳ್ಳದೆ ಹೋಗಲಾರರು. ಅಲ್ಲದೆ ಜನತಾ ಶಿಕ್ಷಣಸಂಘದ ಒಂದು ಹೈಸ್ಕೂಲಿಗೆ ಡಾ.ಫ.ಗು.ಹಳಕಟ್ಟಿಯವರ ಹೆಸರನ್ನು ಇಟ್ಟು ಗೌರವ ತೋರಿಸಿದ್ದಾರೆ.

ಕೊನೆ ಟಿಪ್ಪಣಿ:

೧. 'ಕಲಕಂಬ ಮಾಸ್ತರ'; ಸ್ವಾತಂತ್ರ್ಯ ಸಂಗ್ರಾಮದ ಬನಹಟ್ಟಿಯ ಬಂಟರು; ಶ್ರೀ ಅಪ್ಪಣ್ಣಪ್ಪ ರಾಮಪ್ಪ ಜಂಬಗಿ; ಪುಟ-೫.

೨. 'ಕಲಕಂಬ ಮಾಸ್ತರ'; ಸ್ವಾತಂತ್ರ್ಯ ಸಂಗ್ರಾಮದ ಬನಹಟ್ಟಿಯ ಬಂಟರು; ಶ್ರೀ ಅಪ್ಪಣ್ಣಪ್ಪ ರಾಮಪ್ಪ ಜಂಬಗಿ; ಪುಟ-೫

೩. ಕರ್ನಾಟಕ ಏಕೀಕರಣದ ಕಥೆ; ರಂಗನಾಥ ದಿವಾಕರ, ಪುಟ-೨೩

೪. ಜಯ-ದಿಗ್ವಿಜಯ

೫. ಕರ್ನಾಟಕ ಏಕೀಕರಣದ ಕಥೆ; ರಂಗನಾಥ ದಿವಾಕರ, ಪುಟ-೨೫-೨೬

೬. ಅದೇ ಪುಟ-೨೮

೭. ಕರ್ನಾಟಕ ಏಕೀಕರಣದ ಇತಿಹಾಸ; ಡಾ.ಎಚ್.ಎಸ್.ಗೋಪಾಲರಾವ್, ಪುಟ-೮೧

೮. ಕೇಸರಿ ಪತ್ರಿಕೆ; ದಿ: ೫-೧೯೨೬

೯. ಅದೇ

೧೦. ಕರ್ನಾಟಕ ಏಕೀಕರಣದ ಕಥೆ; ರಂಗನಾಥ ದಿವಾಕರ, ಪುಟ-೩೫

೧೧. ಅದೇ ಪುಟ-೩೭-೩೮

೧೨. ಕರ್ನಾಟಕ ಏಕೀಕರಣದ ಇತಿಹಾಸ; ಡಾ.ಎಚ್.ಎಸ್.ಗೋಪಾಲರಾವ್, ಪುಟ-ಪುಟ-೮೯-೯೦

೧೩. ಅದೇ ಪುಟ–೯೧–೯೨

೧೪. ಕರ್ನಾಟಕ ಏಕೀಕರಣ ಇತಿಹಾಸ; ಡಾ. ಎಚ್.ಎಸ್.ಗೋಪಾಲರಾವ್. ಪುಟ–೬೫

೧೫. ಅದೇ ಪುಟ

೧೬. ತಮ್ಮಣ್ಣಪ್ಪನವರು ಚಿಕ್ಕೋಡಿ; ಡಾ.ಜೆ.ಎಸ್.ಕುಳ್ಳಿ, ಗದುಗಿನ ತೋಂಟದಾರ್ಯ ಮಠ. ಪುಟ–೩೩

೧೭. ಚಿಕ್ಕೋಡಿ ತಮ್ಮಣ್ಣಪ್ಪನವರು; ದು.ನಿಂ.ಬೆಳಗಲಿ, ಐಬಿಎಚ್ ಪ್ರಕಾಶನ, ಬೆಂಗಳೂರು. ಪುಟ–೨೨

೧೮. ಕರ್ನಾಟಕ ಏಕೀಕರಣ ಇತಿಹಾಸ; ಡಾ. ಎಚ್.ಎಸ್.ಗೋಪಾಲರಾವ್, ಪುಟ–೬೭–೬೮

೧೯. ಕರ್ನಾಟಕ ವಿದ್ಯಾವರ್ಧಕ ಸಂಘ. ಧಾರವಾಡ, 'ಕನ್ನಡದ ಗುಡಿ,'ಕ.ವಿಸಂ. ಲೇ.ಕೃಷ್ಣಶ್ರೀಪಾದ ದೇಶಪಾಂಡೆ, ಶ್ರೀಹರಿ ಪ್ರಕಾಶನ, 'ಭಾರತಿ', ನವೋದಯನಗರ, ಧಾರವಾಡ, ಪುಟ–೧, ಅನುಬಂಧ;ಇ.

೨೦. ಬನಹಟ್ಟಿಯ ಹಿರಿಯರು

೨೧. ಪರಿಷತ್ತಿನ ಸಂದೇಶ; ಕನ್ನಡದ ದಾರಿ; ಅ.ನ.ಕೃ. ಪ್ರಗತಿಶೀಲ ಲೇಖಕರ ಸಂಘ, ಬೆಂಗಳೂರು, ಪುಟ–೨

೨೨. ತಮ್ಮಣ್ಣಪ್ಪನವರು ಚಿಕ್ಕೋಡಿ; ಡಾ.ಜೆ.ಎಸ್.ಕುಳ್ಳಿ, ಪುಟ–೩೩–೩೪

೨೩. ಕರ್ನಾಟಕ ಸಾಹಿತ್ಯ ಪರಿಷತ್ತಿನ ವೃತ್ತಾಂತ, 'ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಸಂ೧, ಏಪ್ರಿಲ್ ೧೯೧೬ ಪುಟ–೭೩

೨೪. 'ದೇಶಿಯ ಸಂಸ್ಥಾನಗಳಲ್ಲಿ ಕನ್ನಡದ ಸ್ಥಿತಿಯು'; ಧಾರವಾಡದಲ್ಲಿ ನಡೆದ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮಣ್ಣಪ್ಪನವರು ಮಾಡಿದ ಭಾಷಣ(ತಮ್ಮಣ್ಣಪ್ಪನವರ ಸ್ವಹಸ್ತಾಕ್ಷರ)

೨೫. ೧೯೨೧ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಏಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ವರದಿ

೨೬. ೧೯೨೩ರಲ್ಲಿ ವಿಜಾಪುರದಲ್ಲಿ ನಡೆದ ಒಂಬತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ವರದಿ

೨೭. ಅದೇ

೨೮. ೧೯೨೫ರಲ್ಲಿ ಬೆಳಗಾವಿಯಲ್ಲಿ ನಡೆದ ೧೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ವರದಿ. ಸಂ.೧೦ ಸಂ೨, ಕ್ರೋಧನ ಸಂವತ್ಸರ, ಜುಲೈ ೧೯೨೫.

೨೯. ಅದೇ

೩೦. ೧೯೨೮ರಲ್ಲಿ ಗುಲ್ಬರ್ಗದಲ್ಲಿ ನಡೆದ ೧೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ

೩೧. ಅದೇ

೩೨. ೧೯೨೯ರಲ್ಲಿ ಬೆಳಗಾವಿಯಲ್ಲಿ ನಡೆದ ೧೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ; ೧೯೩೦ ಶುಕ್ಲ ಸಂವತ್ಸರದ ವರದಿ

೩೩. ಅದೇ

೩೪. ಶ್ರೀಮತಿ ಅನ್ನಪೂರ್ಣ ಬಾಣಕಾರ ಅವರ ಹೇಳಿಕೆ

೩೫. ಮರೆಯಲಾಗದ ಅಬಕಾರ ಚೆನ್ನಮಲ್ಲಪ್ಪನವರು; ತ್ಯಾಗಜೀವಿ; ತಮ್ಮಣ್ಣಪ್ಪನವರ ಸ್ಮರಣ ಸಂಚಿಕೆ ಪುಟ–೨೬.

೩೬. ೨೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣ; ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು ಸಂಪುಟ–೨ ಕನ್ನಡ ಸಾಹಿತ್ಯ ಪರಿಷತ್ತು

೩೭. ವೀರಶೈವ ಮಹಾಪುರುಷರು; ಲೇ.ಬಿ.ಶಿವಮೂರ್ತಿಶಾಸ್ತ್ರೀಗಳು; ಶರಣ ಸಾಹಿತ್ಯ ಪತ್ರಿಕೆ, ಬೆಂಗಳೂರು, ೧೯೫೩

೩೮. ಶ್ರೀಯುತರಾದ ರಾಮಲಿಂಗಪ್ಪ ಬಾಗಲಕೋಟ, ಮಲ್ಲಪ್ಪ ಹಳ್ಯಾಳ ಮತ್ತು ಶಿವಲಿಂಗಪ್ಪ ಹತ್ತಿ ಅವರ ಹೇಳಿಕೆ

೩೯. ಪರಿಷತ್ಪತ್ರಿಕೆ; ವಿಜಾಪೂರ ಸಾಹಿತ್ಯ ಸಮ್ಮೇಳನದ ವರದಿ

೪೦. ಕೆ.ಎಲ್.ಸೊಸೈಟಿ; ಸಂ–೧, ಪುಟ–೨೫೨

೪೧. Appreciations Of Panditappa's Public Works

೪೨. ರಬಕವಿ–ಬನಹಟ್ಟಿ ಮತ್ತು ಹುಲ್ಯಾಳದ ಸಮಸ್ತ ಹಿರಿಯರು

೪೩. ಶ್ರೀಯುತರಾದ ರಾಮಲಿಂಗಪ್ಪ ಬಾಗಲಕೋಟ, ಮಲ್ಲಪ್ಪ ಹಳ್ಯಾಳ ಮತ್ತು ಶಿವಲಿಂಗಪ್ಪ ಹತ್ತಿ ಅವರ ಹೇಳಿಕೆ

೪೪. ತಮ್ಮಪ್ಪಾ ಸತ್ಯಪ್ಪಾ ಚಿಕ್ಕೋಡಿ ಇವರು ರಚಿಸಿ ಹಾಡಿದ ಪದ; ಪರಿಷತ್ಪತ್ರಿಕೆ; ಸಂ.೯. ಸಂ.೪ ಜನವರಿ ೧೯೨೫. ರುಧಿರೋದ್ಗಾರಿ ಸಂವತ್ಸರದ ವರದಿ; ಪುಟ–೨೨ರ ನಂತರ

೪೫. ತಮ್ಮಣ್ಣಪ್ಪನವರ ಕವನ

೪೬. ಮಾನಪತ್ರ; ಜಮಖಂಡಿ ಸರಕಾರ ಅವರು ಬನಹಟ್ಟಿಯಲ್ಲಿ ಫಸ್ಟ್‌ಗ್ರೇಡ್ ಎ.ವ್ಹಿ.ಸ್ಕೂಲನ್ನು ತೆರೆಯುವ ಸಂದರ್ಭದಲ್ಲಿ ಕೊಟ್ಟ ಮಾನಪತ್ರ. ೩೦-೬-೧೯೨೭

೪೭. ಅದೇ

೪೮. ಅದೇ

೪೯. ೧೯೦೪ರಲ್ಲಿ ಬಾಗಲಕೋಟೆಯಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯಲ್ಲಿ ಮಾಡಿದ ಭಾಷಣ; ತಮ್ಮಣ್ಣಪ್ಪನವರ ಸ್ವಹಸ್ತಾಕ್ಷರ

೫೦. 'ನವಕರ್ನಾಟಕ'; ವಚನ ಪಿತಾಮಹ;ಡಾ.ಫ.ಗು.ಹಳಕಟ್ಟಿಯವರ ಸ್ಮಾರಕ ಗ್ರಂಥ. ಪುಟ-೧೭೬

೫೧. ತಮ್ಮಣ್ಣಪ್ಪನವರು ಚಿಕ್ಕೋಡಿ; ಡಾ.ಜೆ.ಎಸ್.ಕುಳ್ಳಿ, ಗದುಗಿನ ತೋಂಟದಾರ್ಯ ಮಠ. ಪುಟ-೩೭

೫೨. ಬನಹಟ್ಟಿಯ ಬರಹಗಾರರು; ಲೇ.ಮಲ್ಲಿಕಾರ್ಜುನ ಹುಲಗಬಾಳಿ, ತ್ಯಾಗಜೀವಿ; ತಮ್ಮಣ್ಣಪ್ಪನವರ ಸ್ಮರಣ ಸಂಚಿಕೆ, ಪುಟ-೫೨

೫೩. 'ತಮ್ಮಣ್ಣಪ್ಪ ಚಿಕ್ಕೋಡಿ'; ಹೊಸಗನ್ನಡ ಸಾಹಿತ್ಯದ ಅರುಣೋದಯದ ಕಾಲ; ರಾ.ಯ. ಧಾರವಾಡಕರ

೫೪. ಅದೇ

೫೫. ಸಂಸ್ಕೃತಿಯ ವಿಶ್ವರೂಪ; ಅ.ನ.ಕೃ. ಪುಟ-೭೧

೫೬. ಪಂಡಿತಪ್ಪನವರ ಸ್ವಹಸ್ತಾಕ್ಷರವುಳ್ಳ ಲೇಖನ

೫೭. ವಿಭಾಕರ ಪತ್ರಿಕೆ; ಫೆಬ್ರುವರಿ ಜನೆವರಿ ೨೭, ೧೯೨೨

೫೮. ಫ.ಗು.ಹಳಕಟ್ಟಿ; ಜೀವನ ಪರಿಚಯ; ಪ್ರೊ.ಸ.ಸ.ಮಾಳವಾಡ; 'ಮಣಿಹ', ಪುಟ-೬

೫೯. ತಮ್ಮಣ್ಣಪ್ಪನವರು ಫಕೀರಪ್ಪನವರಿಗೆ ಬರೆದ ಪತ್ರ; ಮಾರ್ಚ್ ೧೯೦೮

೬೦. ಕರ್ನಾಟಕದ ಮ್ಯಾಕ್ಸಮುಲ್ಲರ್; ಲೇ.ಸಿಂಪಿ ಲಿಂಗಣ್ಣ. ವಚನಪಿತಾಮಹ; ಹಳಕಟ್ಟಿ ಸ್ಮಾರಕ ಗ್ರಂಥ- ೧೯೬೮, ಪುಟ-೬೬

೬೧. 'ಘನಫಕೀರಾ!' ಕವಿ ಈಶ್ವರ ಸಣಕಲ್ಲ; ವಚನ ಪಿತಾಮಹ; ಹಳಕಟ್ಟಿ ಸ್ಮಾರಕ ಸಂಪುಟ, ಪುಟ- ೫೨೨-೫೨೩

೬೨. ಫ.ಗು.ಹಳಕಟ್ಟಿ; ಜೀವನ ಪರಿಚಯ; ಪ್ರೊ.ಸ.ಸ.ಮಾಳವಾಡ; 'ಮಣಿಹ', ಪುಟ-೯

೬೩. ತಮ್ಮಣ್ಣಪ್ಪನವರು ಫಕೀರಪ್ಪನವರಿಗೆ ಬರೆದ ಪತ್ರ; ಮಾರ್ಚ್ ೧೯೦೮

೬೪. ಶಿವಾನುಭವ ಪತ್ರಿಕೆಯ ೨೫ ವರ್ಷಗಳ ವರದಿಯು; ಪುಟ-೪೧೯. 'ರಬಕವಿ-ಬನಹಟ್ಟಿಗಳಲ್ಲಿ ನನ್ನ ಸಂಶೋಧನೆಗಳು', ಶಿವಾನುಭವ, ೧೯೫೧ ಸಂ. ೨೫, ಸಂಚಿಕೆ-೧೨

೬೫. ಬನಹಟ್ಟಿಯಲ್ಲಿ ನೆರೆದ ಅಖಿಲಭಾರತ ಪ್ರಾರ್ಥನಾಯೋಗ ಮಂಡಳಗಳ ದ್ವಿತೀಯ ಸಮ್ಮೇಳನದ ವರದಿ, ೧೧-೨-೧೯೬೦

೬೬. ತಮ್ಮಣ್ಣಪ್ಪನವರು ಗುರುಬಸಪ್ಪನವರಿಗೆ ಬರೆದ ಪತ್ರ; ಡಿಸೆಂಬರ್ ೧೯೦೧

೬೭. ಸ್ಫುಟ ವಿಚಾರಗಳು; ಫ.ಗು.ಹಳಕಟ್ಟಿ, ಶಿವಾನುಭವ, ಸಂ.೨೯, ಸಂ.೫. ಪುಟ-೨೪೯

೬೮. ವಚನಗುಮ್ಮಟ-ಡಾ.ಎಂ.ಬಿ.ಪಾಟೀಲ. (ಆಧಾರ.ಪ್ರೊ.ಟಿ.ಎಂ.ಪಂಡಿತ. ಸಾಧಕರೇಣ್ಯ

೬೯. ಫ.ಗು.ಹಳಕಟ್ಟಿ, ಸಂಯುಕ್ತ ಕರ್ನಾಟಕ-ದಿ.೩೦-೬-೧೯೯೧

೭೦. ತಮ್ಮಣ್ಣಪ್ಪನವರು ಚಿಕ್ಕೋಡಿ; ಡಾ.ಜೆ.ಎಸ್.ಕುಳ್ಳಿ, ಪುಟ-೫೩

೭೧. ತಮ್ಮಣ್ಣಪ್ಪನವರು ಹಳಕಟ್ಟಿಯವರಿಗೆ ಬರೆದ ಪತ್ರ; ಅಕ್ಟೋಬರ್ ೧೯೧೧

೭೨. ಅದೇ

೭೩. ಹಳಕಟ್ಟಿಯವರು ತಮ್ಮಣ್ಣಪ್ಪನವರಿಗೆ ಬರೆದ ಪತ್ರ; ಫೆಬ್ರುವರಿ ೧೯೧೬

೭೪. ತಮ್ಮಣ್ಣಪ್ಪನವರು ಹಳಕಟ್ಟಿಯವರಿಗೆ ಬರೆದ ಪತ್ರ; ಮಾರ್ಚ್ ೧೯೧೯

೭೫. ತಮ್ಮಣ್ಣಪ್ಪನವರು ಹಳಕಟ್ಟಿಯವರಿಗೆ ಬರೆದ ಉದ್ಬೋಧಕ ಪತ್ರ; ದಿ:೪-೧೧-೧೯೧೯

೭೬. ಅದೇ

೭೭. ತಮ್ಮಣ್ಣಪ್ಪನವರು ಹಳಕಟ್ಟಿಯವರಿಗೆ ಬರೆದ ಪತ್ರ; ಮಾರ್ಚ್ ೧೯೧೯

೭೮. ಕರ್ನಾಟಕದ ಮ್ಯಾಕ್ಸಮುಲ್ಲರ್; ಲೇ.ಸಿಂಪಿ ಲಿಂಗಣ್ಣ. ವಚನಪಿತಾಮಹ; ಹಳಕಟ್ಟಿ ಸ್ಮಾರಕ ಗ್ರಂಥ. ಪುಟ-೬೬

೭೯. 'ಹಳಕಟ್ಟಿ ಒಂದು ಶತಮಾನ'; ಡಾ.ಹಾ.ಮಾ.ನಾಯಕ; ಪ್ರಜಾಮತ; ಸಂ.೫೦. ಸಂ.೪೫. ಪುಟ- ೧೭. ದಿ:೬-೭-೧೯೮೦. ಆಧಾರ:ವಚನಗುಮ್ಮಟ; ಡಾ.ಎಂ.ಬಿ.ಪಾಟೀಲ

೮೦. ವಚನ ಪಿತಾಮಹನನ್ನು ರೂಪಿಸಿದ ಶಿಲ್ಪಿ. ಡಾ.ಜೆ.ಎಸ್ ಕುಳ್ಳಿ. ಕರ್ಣಾಟಕ ಭಾರತಿ. ಸಂ.೨. ಸಂ೨. ಪುಟ–೧೪೬. ೧೯೭೧

೮೧. ಬೆಳಕು ಬಿತ್ತಿದವರು; ದು. ನಿಂ. ಬೆಳಗಲಿ–೧೯೯೩, ಪುಟ–೬

೮೨. ಶ್ರೀ ರಾಮಲಿಂಗಪ್ಪ ಬಾಗಲಕೋಟ ಅವರ ಹೇಳಿಕೆ

೮೩. ಕೈ.ವಾ.ತಮ್ಮಣ್ಣಪ್ಪ ಚಿಕ್ಕೋಡಿ ಅವರ ಪುಣ್ಯದಿನದ ಸಂಕ್ಷಿಪ್ತ ವರದಿ; ಹೆಡ್‌ಮಾಸ್ತರ ಎಸ್.ಆರ್.ಎ. ಹಾಯಸ್ಕೂಲ ಬನಹಟ್ಟಿ; ಶಿವಾನುಭವ ಪತ್ರಿಕೆ; ಸಂ–೩೨, ಸಂ.೧ ಜನವರಿ, ಫೆಬ್ರುವರಿ ೧೯೫೮, ಪುಟ–೬೫–೬೬

೮೪. ಚ.ಚ.ಅಬಕಾರ ಅವರ ವೈಯಕ್ತಿಕ ದಿನಚರಿಗಳು ೧೯೫೮, ೧೯೬೦

ಅಧ್ಯಾಯ ೬

ಸಮಾರೋಪ

ಅಧ್ಯಾಯ ೬

ಸಮಾರೋಪ

ತನ್ನ ಸಮಕಾಲೀನ ಪರಿಸರದ ಕೂಸಾಗಿರುವ ಮನುಷ್ಯ ಆ ಪರಿಸರಕ್ಕೆ ಪ್ರತಿಸ್ಪಂದಿಸುತ್ತಾನೆ. ಅಲ್ಲದೆ ಸಮಾಜಮುಖಿಯಾಗುವ ಚಿಂತನೆಗಳನ್ನು ಮಾಡುತ್ತಿರುತ್ತಾನೆ. ಸದಾಕಾಲ ಸಮಾಜದ ಪ್ರಗತಿಯ ಬಗ್ಗೆ ದುಡಿಯುತ್ತಿರುತ್ತಾನೆ. ಇದನ್ನು ತಮ್ಮ ಕುಟುಂಬಕ್ಕಿಂತ ಸಮಾಜವೇ ಮುಖ್ಯವೆಂದು ತಿಳಿದ ಕೆಲವೇ ಜನ ಮಾತ್ರ ಆಚರಿಸುತ್ತಾರೆ. ಅಂಥವರಲ್ಲಿ ಚಿಕ್ಕೋಡಿ ಶ್ರೀ ತಮ್ಮಣ್ಣಪ್ಪ, ಶ್ರೀ ಪಂಡಿತಪ್ಪ ಮತ್ತು ಶ್ರೀ ರಾಮಪ್ಪನವರು ಮುಖ್ಯರಾಗುತ್ತಾರೆ. ಇಡೀ ತಮ್ಮ ಜೀವನವನ್ನು ಸಮಾಜೋಭಿವೃದ್ಧಿಯಲ್ಲಿ ತೇಯ್ದ ಇವರು ಎಂದೂ ತಮ್ಮ ಹೆಸರು, ಪ್ರತಿಷ್ಠೆ, ಪುರಸ್ಕಾರಗಳಿಗೆ ಮನಸೋಲಲಿಲ್ಲ. ತಮಗಾಗಿ ಸಂಪತ್ತು, ಆಸ್ತಿಯನ್ನು ಉಳಿಸಿಕೊಳ್ಳಲಿಲ್ಲ. ತಮ್ಮ ಸ್ವಂತ ಮಕ್ಕಳ ಭವಿಷ್ಯವೇ ಮುಖ್ಯವೆಂದವರಲ್ಲ. ಕನ್ನಡ ನಾಡಿನ ಹೀನಾಯ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಮನನೊಂದು ಅದರ ಭವಿಷ್ಯತ್ತಿಗಾಗಿ ಶ್ರಮಿಸಿದರು. ಅನಿವಾರ್ಯವಾಗಿ ಮರಾಠಿಯನ್ನು ಕಲಿಯುವ ದುರ್ದೆಸೆ ಬಂದರೂ, ಅಭಿಮಾನದಿಂದ ಕನ್ನಡವನ್ನು ಕಲಿತ ತಮ್ಮಣ್ಣಪ್ಪನವರು ಕನ್ನಡಾಭಿಮಾನದಿಂದ ಕೊಲ್ಲಾಪುರ ಸಂಸ್ಥಾನವನ್ನೇ ತೊರೆದು ಬಂದರು. ಮಿಣಚಿಯಿಂದ ಚಿಕ್ಕೋಡಿಗೆ, ಚಿಕ್ಕೋಡಿಯಿಂದ ರಬಕವಿಗೆ ಬಂದ ಈ ಕುಟುಂಬದ ಮಹನೀಯರುಗಳಿಗೆ ಅಲ್ಲಿನ ಕನ್ನಡದ ಪರಿಸ್ಥಿತಿಯೂ ಕೂಡ ಅಷ್ಟೊಂದು ಸರಿಯಾಗಿರಲಿಲ್ಲ ಎಂಬುದು ಸ್ಪಷ್ಟವಾಯಿತು. ಹೀಗಾಗಿ ತಮ್ಮಣ್ಣಪ್ಪನವರು ಸ್ವಪರಿಶ್ರಮದಿಂದ ಕನ್ನಡ ಮುಲ್ಕಿ ಪರೀಕ್ಷೆಯನ್ನು ಪಾಸುಮಾಡಿ, ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತ, ಮುಂದೆ ತಮ್ಮ ಸರ್ವಸ್ವವನ್ನೇ ಸಮಾಜಕ್ಕೆ ಧಾರೆಯೆರೆದು ಕನ್ನಡದ ಕೈಂಕರ್ಯ ಕೈಕೊಂಡರು. ಅಲ್ಲದೆ ತಮ್ಮ ಕುಟುಂಬವರ್ಗದವರಾದ ಶ್ರೀ ಪಂಡಿತಪ್ಪನವರನ್ನು ಬೆಳಗಾವಿಯಲ್ಲಿ, ಡಾ.ಫ.ಗು.ಹಳಕಟ್ಟಿಯವರನ್ನು ವಿಜಾಪುರದಲ್ಲಿ ಮತ್ತು ರಾಮಪ್ಪನವರನ್ನು ರಬಕವಿಯಲ್ಲಿ ತಮ್ಮತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡು, ಕನ್ನಡನಾಡಿಗೆ ಸೇವೆ ಸಲ್ಲಿಸಲು ಪ್ರೇರೆಪಿಸಿದರು. ಹಲವಾರು ಸಾಧನೆಗಳನ್ನು ಮಾಡಿದ ಈ ಮಹನೀಯರುಗಳು ಕನ್ನಡ ನಾಡಿನಲ್ಲೇ ಅಲಕ್ಷಿತರಾಗಿರುವುದು ದುರ್ದೈವದ ಸಂಗತಿ. ಮುಂದಿನ ಜನಾಂಗವು ಈ ಮಹನೀಯರ ಘನ ಸಾಧನೆಯನ್ನು ಮರೆಯುವ ಮೊದಲೆ ಪರಿಚಯಿಸಿಕೊಳ್ಳಬೇಕಾಗಿದೆ. ನಿರಂತರವಾಗಿ ಸ್ಮರಿಸಬೇಕಾಗಿದೆ.

ಈ ಕುಟುಂಬದ ಸದಸ್ಯರು ಅಂದಿನ ಸಮಾಜದಲ್ಲಿ ಇರುವ ಮೌಢ್ಯತೆ, ಅಂಧಕಾರಗಳನ್ನು ತೊಡೆದು ಹಾಕಲು ತಾವಿದ್ದ ಪರಿಸರದಲ್ಲಿ ಸಂಘ-ಸಂಸ್ಥೆಗಳನ್ನು ಹುಟ್ಟುಹಾಕಿದರು. ಅಲ್ಲದೆ ಬಸವಾದಿ ಶರಣರ ತತ್ವಗಳಿಗೆ ಮನಸೋತ ಇವರು ಸಮಾಜದಲ್ಲಿರುವ ಭೇದಗಳನ್ನು ತೊಡೆದು ಹಾಕಲು ಯತ್ನಿಸಿದರು. ನೇಕಾರರ ಬವಣೆಗಳನ್ನು ಕಣ್ಣಾರೆ ಕಂಡ ಈ ಮೂವರು ಅವರ ಸಂಕಷ್ಟಗಳನ್ನು ಪರಿಹರಿಸಿದರು. ಇಂದು ರಬಕವಿ-ಬನಹಟ್ಟಿ ಸೀರೆಗಳ ನೇಕಾರಿಕೆ ಉದ್ಯಮ ರಾಷ್ಟ್ರೀಯ ಮಟ್ಟದಲ್ಲಿ ಇಷ್ಟೊಂದು ಪ್ರಗತಿಪಥದಲ್ಲಿ ಸಾಗುವುದಕ್ಕೆ ಇವರುಗಳ ಸತತ ಪರಿಶ್ರಮವೇ ಕಾರಣವೆಂದು ನಿಶ್ಚಿತವಾಗಿ

ಹೇಳಬಹುದು. ಇಲ್ಲದಿದ್ದರೆ ಇಂದು ಗುಳೇದಗುಡ್ಡದ ಪ್ರಸಿದ್ಧ ಖಣದ ನೇಯ್ಗೆ ನಶಿಸಿ ಹೋಗಿ, ಅಲ್ಲಿಯ ಜನರೆಲ್ಲ ದೊಡ್ಡ ಊರುಗಳಿಗೆ ಗುಳೆ ಹೋದಂತೆ, ಜಮಖಂಡಿ ಸಮೀಪದ ಹುಲ್ಯಾಳ ಗ್ರಾಮದ ಸ್ಥಿತಿಯೂ ಆಗುತ್ತಿತ್ತು. ನೇಕಾರರಿಗೆ ಮಗ್ಗಗಳನ್ನು ಹಾಕಿಕೊಟ್ಟು ಅವರ ಸಂಕಷ್ಟಗಳನ್ನು ರಾಮಪ್ಪನವರು ಬಗೆಹರಿಸಿದರೆ, ಅಖಿಲಭಾರತ ನೇಕಾರ ಸಮಿತಿಯ ಅಧ್ಯಕ್ಷರಾಗಿ ಪಂಡಿತಪ್ಪನವರು ಸಾಕಷ್ಟು ಒಳ್ಳೆಯ ಯೋಜನೆಗಳನ್ನು ಹಾಕಿ, ಅವುಗಳನ್ನು ಕಾರ್ಯರೂಪಕ್ಕೆ ತಂದರು. ಇದನ್ನೆಲ್ಲ ಈ ಪ್ರಬಂಧದಲ್ಲಿ ಗುರುತಿಸಿದೆ.

೧೯ನೆಯ ಶತಮಾನದ ಕೊನೆಯಲ್ಲಿ ಧರ್ಮದ ಮೂಲಕವಾಗಿ ನಡೆಯುತ್ತಿದ್ದ ಅನ್ಯಾಯ, ಅಮಾನವೀಯ ಕೃತ್ಯಗಳು ಸಮಾಜದ ಸುವ್ಯವಸ್ಥೆಗೆ ಧಕ್ಕೆ ತಂದಿದ್ದವು. ಇಂತಹ ಸಂದರ್ಭದಲ್ಲಿ ಅನೇಕ ಧರ್ಮಸುಧಾರಕರು ಹುಟ್ಟಿ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿದರು. ಅವುಗಳ ಮೂಲಕ ಸಮಾಜದಲ್ಲಿ ಸುಧಾರಣೆಗಳನ್ನು ತಂದರು. ಧರ್ಮದ ಹೆಸರಿನಲ್ಲಿ ನಡೆಯುವ ಅನ್ಯಾಯಗಳನ್ನು ಖಂಡಿಸಿದರು. ಇಂತಹ ವಿಚಾರಗಳಿಂದ ಪ್ರೇರೆಪಿತರಾದ ಚಿಕ್ಕೋಡಿ ಕುಟುಂಬವು ಅನೇಕ ಸಂಘ-ಸಂಸ್ಥೆಗಳ ಮೂಲಕ ಸಮಾಜೋ-ಧಾರ್ಮಿಕ ಕಾರ್ಯಗಳಲ್ಲಿ ತೊಡಗಿತು. ಬನಹಟ್ಟಿಯ 'ಪ್ರಾರ್ಥನಾ ಸಮಾಜ'ದಿಂದ ಹಿಡಿದು 'ಶ್ರೀಮದ್ವೀರಶೈವ ಮಹಾಸಭೆ'ಯ ವರೆಗೆ ಇವರ ಪಾತ್ರ ಹಿರಿದಾದುದು. ಇಂಥ ಸಂಸ್ಥೆಗಳು ಪ್ರಾರಂಭವಾದಾಗಿನಿಂದ ಇವರು ಆಜೀವ ಸದಸ್ಯರಾಗಿ, ಸಂಸ್ಥೆಯ ಬೆಳವಣಿಗೆಗೆ ಸದಾ ಶ್ರಮಿಸಿದ್ದಾರೆ.

ಗೋವಿಂದ ರಾನಡೆಯವರ ಶಿಷ್ಯರಾಗಿದ್ದ ತಮ್ಮಣ್ಣಪ್ಪನವರು ಹಲವು ಸಂಘ-ಸಂಸ್ಥೆಗಳ ಮೂಲಕ ರಾಜಕೀಯ ಚಟುವಟಿಕೆಗಳಿಗೆ ಚಾಲನೆ ನೀಡಿದರು. ಅಖಿಲಭಾರತ ಕಾಂಗ್ರೆಸ್ ಸ್ಥಾಪನೆಯಾದಾಗಿನಿಂದ ತಮ್ಮಣ್ಣಪ್ಪನವರು ಅದರ ಪ್ರಭಾವಕ್ಕೆ ಒಳಗಾಗಿದ್ದರು. ನಂತರದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸ್ಥಾಪನೆಯಾದಾಗ ಅದರ ಸಕ್ರಿಯ ಸದಸ್ಯರಾದರು. ಪಂಡಿತಪ್ಪನವರು ಕೂಡ ಇದಕ್ಕೆ ಹೊರತಾಗಿರಲಿಲ್ಲ. ಜಮಖಂಡಿ ಸಂಸ್ಥಾನದಲ್ಲಿ ಪ್ರಭಾವಿ ವ್ಯಕ್ತಿಯಾಗಿ ಗುರುತಿಸಿಕೊಂಡವರು ಶ್ರೀ ತಮ್ಮಣ್ಣಪ್ಪ ಮತ್ತು ಶ್ರೀ ಪಂಡಿತಪ್ಪನವರು. ಇವರೀರ್ವರೂ ಸಂಸ್ಥಾನದ ರಾಜರುಗಳ ಪ್ರೀತಿ-ವಿಶ್ವಾಸಗಳನ್ನು ಗಳಿಸಿಕೊಂಡಿದ್ದರಲ್ಲದೆ, ಸಂಸ್ಥಾನದ ಮೂಲಕವಾಗಿಯೇ ಅನೇಕ ಜನಹಿತ ಕಾರ್ಯಗಳನ್ನು ಮಾಡಿದ್ದು ವಿಶೇಷವಾಗಿದೆ. ಪಂಡಿತಪ್ಪನವರು ಮುಂಬಯಿ ಪ್ರಾಂತ್ಯದಲ್ಲಿ ೧೪ ವರ್ಷಗಳ ಕಾಲ ಲೆಜಿಸ್ಲೇಟಿವ್ ಕೌನ್ಸಿಲ್ಲರಾಗಿ ಸಾಕಷ್ಟು ಕೆಲಸ ಮಾಡಿದರು.

ಧಾರವಾಡದ 'ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ'ಯಲ್ಲಿ ಇವರೀರ್ವರು ತೊಡಗಿಕೊಂಡರು. ಶಿಕ್ಷಣಪ್ರೇಮಿಗಳಾದ ಇವರು ತಮ್ಮ ಜೀವನದುದ್ದಕ್ಕೂ ಶಿಕ್ಷಣದ ಪ್ರಗತಿಗಾಗಿ ಶ್ರಮಿಸಿದರು. ಬನಹಟ್ಟಿಯ ಎ.ವ್ಹಿ. ಸ್ಕೂಲ್ ಸ್ಥಾಪನೆಗಳ ಜೊತೆ ಹೈಸ್ಕೂಲ್ ಮತ್ತು ಜಮಖಂಡಿ ಸಂಸ್ಥಾನದಲ್ಲಿಯ ಕನ್ನಡ ಶಾಲೆಗಳ ಅಸ್ತಿತ್ವಕ್ಕೆ ತಮ್ಮಣ್ಣಪ್ಪನವರು ಕಾರಣರಾದರು. ಈ ಕುಟುಂಬದ ಶ್ರೀ ಪಂಡಿತಪ್ಪನವರು ಬೆಳಗಾವಿಯ 'ಕೆ.ಎಲ್.ಇ.ಸಂಸ್ಥೆ', ಬೆಳಗಾವಿ ಜಿಲ್ಲೆಯ ಪ್ರಾಥಮಿಕ ಶಿಕ್ಷಣ, ಒಕ್ಕಲುತನ ಮತ್ತು ಕೈಗಾರಿಕೆ ಶಾಲೆಗಳು ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಅಹರ್ನಿಶಿ ಶ್ರಮಿಸಿದವರು. ಇವರು ಬೆಳಗಾವಿ ಜಿಲ್ಲೆಯ ಸ್ಕೂಲ್ ಬೋರ್ಡ್ ಅಧ್ಯಕ್ಷರಾಗಿ ಸಾಕಷ್ಟು ಶಾಲೆಗಳನ್ನು ಸ್ಥಾಪಿಸಿದರು.

ಚಿಕ್ಕೋಡಿ ಕುಟುಂಬದವರು ಕನ್ನಡ ನಾಡು-ನುಡಿ-ಸಂಸ್ಕೃತಿಗೆ ತಮ್ಮದೇ ಆದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಕನ್ನಡಾಭಿಮಾನಿಗಳಾದ ತಮ್ಮಣ್ಣಪ್ಪನವರು ಕರ್ನಾಟಕ ಏಕೀಕರಣದ ಚಳುವಳಿಯನ್ನು ಸಾಕಷ್ಟು ಬೆಂಬಲಿಸಿದರು. ಯುವಕರ ಉತ್ಸಾಹದ ಕಾರ್ಯಗಳಿಗೆ ಬೆನ್ನು ತಟ್ಟುತ್ತಿದ್ದರು. ಕರ್ನಾಟಕ ಒಂದುಗೂಡುವುದು ಅವಶ್ಯವಿದೆಯೆಂಬುದನ್ನು ನಾಡಿನ ಜನತೆಯೊಂದಿಗೆ ಬನಹಟ್ಟಿಯ ಜನತೆಗೂ ತಿಳಿಸಿದರು. ಪಂಡಿತಪ್ಪನವರು ಏಕೀಕರಣ ಸಂಘದ ಅಧ್ಯಕ್ಷರಾಗಿದ್ದರು. ಬಳ್ಳಾರಿಯಲ್ಲಿ ಜರುಗಿದ ಕರ್ನಾಟಕ ಏಕೀಕರಣ ಪರಿಷತ್ತಿನ ಎರಡನೆಯ ಅಧಿವೇಶನದ ನಿಯೋಜಿತ ಅಧ್ಯಕ್ಷರಾಗಿದ್ದರು. ಪರಿಷತ್ತಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ರಾಮಪ್ಪನವರು ಜಿನರಾಜ ಹೆಗಡೆಯವರ ನೇತೃತ್ವದಲ್ಲಿ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದ್ದರು. ಈ ಚಳುವಳಿಗೆ ಈ ಮಹನೀಯರು ತಮ್ಮ ತನು-ಮನ-ಧನಗಳನ್ನು ಅರ್ಪಿಸಿದ್ದರು.

ಕನ್ನಡ ನಾಡು-ನುಡಿಯನ್ನು ಉಳಿಸಲೆಂದೇ ಅಸ್ತಿತ್ವಕ್ಕೆ ಬಂದ ಸಂಸ್ಥೆಗಳೆಂದರೆ 'ಕರ್ನಾಟಕ ವಿದ್ಯಾವರ್ಧಕ ಸಂಘ' ಮತ್ತು 'ಕನ್ನಡ ಸಾಹಿತ್ಯ ಪರಿಷತ್ತು'. ಈ ಎರಡೂ ಸಂಸ್ಥೆಗಳಲ್ಲಿ ಈ ಕುಟುಂಬದ ಪಾತ್ರವಿದೆ. ತಮ್ಮಣ್ಣಪ್ಪನವರು ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆಗೊಂಡಾಗಿನಿಂದ ಅದರ ಆಜೀವ ಸದಸ್ಯರಾಗಿದ್ದರು. ಪಂಡಿತಪ್ಪನವರು ಈ ಸಂಘದ ಬೆಳವಣಿಗೆಗೆ ದೇಣಿಗೆಯನ್ನು ಒದಗಿಸುವಲ್ಲಿ ಸಹಾಯ ಸಹಕರಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದಾಗಿನಿಂದಲೂ ಉತ್ತರ ಕರ್ನಾಟಕದ ಆಯ್ಕೆಗೊಂಡ ಪ್ರತಿನಿಧಿಗಳಲ್ಲಿ ತಮ್ಮಣ್ಣಪ್ಪನವರಾದರೆ, ಮುಂಬಯಿ ಪ್ರಾಂತ್ಯದಿಂದ ಆಯ್ಕೆಗೊಂಡರು ಪಂಡಿತಪ್ಪನವರು. ತಮ್ಮ ಜೀವಿತಾವಧಿಯ ವರೆಗೂ ಸಾಹಿತ್ಯ ಸಮ್ಮೇಳನಗಳಿಗೆ ತಪ್ಪದೇ ಹಾಜರಾಗುತ್ತಿದ್ದ ತಮ್ಮಣ್ಣಪ್ಪನವರು ತರುತ್ತಿದ್ದ ಠರಾವುಗಳಿಗೆ ಬಹಳ ಮಹತ್ವವಿರುತ್ತಿತ್ತು. ಇವರ ಪ್ರಬಂಧ ಮತ್ತು ಭಾಷಣಗಳು ಕೂಡ ಅಷ್ಟೇ ವಿಶೇಷವಾಗಿರುತ್ತಿದ್ದವು. ಪಂಡಿತಪ್ಪನವರು ಬೆಳಗಾವಿ ಮತ್ತು ಜಮಖಂಡಿ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ಜರುಗಿಸಿದರು. ರಾಮಪ್ಪನವರು ಪರಿಷತ್ತಿನ ಆಜೀವ ಸದಸ್ಯರಾಗಿ ರಬಕವಿ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿ ಬಹು ವಿಜೃಂಭಣೆಯಿಂದ ಸಮ್ಮೇಳನವನ್ನು ನೆರವೇರಿಸಿದರು. ಈ ಸಾಹಿತ್ಯ ಸಮ್ಮೇಳನದ ಖರ್ಚು-ವೆಚ್ಚದ ಹೆಚ್ಚಿನ ಭಾರವನ್ನು ಇವರೇ ವಹಿಸಿಕೊಂಡಿದ್ದರು.

ತಮ್ಮಣ್ಣಪ್ಪ ಮತ್ತು ಪಂಡಿತಪ್ಪ ಇವರೀರ್ವರು ಕನ್ನಡ ಸಾಹಿತ್ಯಲೋಕಕ್ಕೆ ನೀಡಿದ ಕಾಣಿಕೆ ಗಮನಾರ್ಹವಾಗಿದೆ. ತಮ್ಮಣ್ಣಪ್ಪನವರು ಸ್ವತಃ ಕವಿಗಳು, ನಾಟಕಕಾರರು, ಲಾವಣಿಗಳನ್ನು ಕಟ್ಟಿ ಹಾಡಿದವರು, ಆಶುಕವಿಗಳು. ಕವಿಗಳಾಗಿ ಅವರು ಬರೆದ ಕೆಲವು ಕವನಗಳು ದೊರಕಿವೆ. ಆರು ನಾಟಕಗಳನ್ನು ಬರೆದ ಉಲ್ಲೇಖ ನಮಗೆ ದೊರೆಯುತ್ತದೆ. ಅವುಗಳಲ್ಲಿ ಕೇವಲ 'ಉಷಾ ಪರಿಣಯ' ಎಂಬ ಪ್ರಕಟಿತ ನಾಟಕ ಮಾತ್ರ ಸದ್ಯ ದೊರತಿದೆ. ಪಂಡಿತಪ್ಪನವರು ಪ್ರಕಾಂಡ ಪಂಡಿತರು, ವಿಶಿಷ್ಟ ಬರಹಗಾರರು. ತಮ್ಮ 'ಏಭಾಕರ' ಪತ್ರಿಕೆಯಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ಆದರೆ ಅವು ಯಾವವೂ ನಮಗೆ ಇಂದು ದೊರಕುತ್ತಿಲ್ಲ. ಪತ್ರಿಕೋದ್ಯಮ ವಿಭಾಗದಲ್ಲಿ ತಮ್ಮಣ್ಣಪ್ಪನವರು

ಹಳಕಟ್ಟಿಯವರಿಗೆ 'ಶಿವಾನುಭಾವ' ಮತ್ತು 'ನವಕರ್ನಾಟಕ' ಪತ್ರಿಕೆಗಳನ್ನು ಪ್ರಾರಂಭಿಸಲು ಕಾರಣೀಭೂತರಾದರು. ಪಂಡಿತಪ್ಪನವರು ಬೆಳಗಾವಿಯಲ್ಲಿ ೧೯೨೦ರಲ್ಲಿ 'ವಿಭಾಕರ' ಪತ್ರಿಕೆ ಪ್ರಾರಂಭಿಸಿದ್ದರು. ರಾಜಕೀಯ, ಸಾಮಾಜಿಕ ಮತ್ತು ಶೈಕ್ಷಣಿಕ ವಿಚಾರಗಳನ್ನು ತಿಳಿಸುವುದು ಈ ಪತ್ರಿಕೆಯ ಉದ್ದೇಶವಾಗಿತ್ತು.

ಚಿಕ್ಕೋಡಿ ಕುಟುಂಬದವರು ಕನ್ನಡನಾಡಿಗೆ ನೀಡಿದ ಮಹತ್ವದ ಕಾಣಿಕೆಯೆಂದರೆ 'ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿಯವರನ್ನು ರೂಪಿಸಿದ್ದು.' ವಿಶ್ವಸಾಹಿತ್ಯಕ್ಕೆ ಕೊಡಮಾಡಿದ ಕನ್ನಡದ ಕಾಣಿಕೆ ವಚನಸಾಹಿತ್ಯ. ಅದರ ಸಂಗ್ರಹ, ಸಂಶೋಧನೆ, ಸಂಪಾದನೆ ಮತ್ತು ಪ್ರಚಾರ ಮಾಡಿದವರು ಹಳಕಟ್ಟಿಯವರು. ಅವರಿಗೆ ಸಹಾಯ ಮಾಡಿದವರು ಹೆಣ್ಣು ಕೊಟ್ಟ ಮಾವಂದಿರಾದ ತಮ್ಮಣ್ಣಪ್ಪನವರು. ಪಂಡಿತಪ್ಪನವರು ಬೆಳಗಾವಿಯಲ್ಲಿ ತಾಡೋಲೆ ಕಟ್ಟುಗಳನ್ನು ಸಂಗ್ರಹಿಸುವಲ್ಲಿ, ಕೌಟುಂಬಿಕ ವ್ಯವಹಾರಗಳಲ್ಲಿ ನೆರವಾದರೆ, ರಾಮಪ್ಪನವರು ಆರ್ಥಿಕ ಸಹಾಯಮಾಡಿದರು.

ಈ ಎಲ್ಲ ವಿಷಯಗಳು ಈ ಮಹಾಪ್ರಬಂಧದಲ್ಲಿ ಚರ್ಚಿತಗೊಂಡಿವೆ. ಆದರೆ ಇದೇ ಅಂತ್ಯವಲ್ಲ. ವಿಷಯವೇ ದೊರಕದ ನಿರ್ವಾತ ಸ್ಥಿತಿಯಲ್ಲಿ ಇಷ್ಟು ವಿಷಯಗಳನ್ನು ದೊರಕಿಸಿಕೊಂಡು ಈ ಮಹಾಪ್ರಬಂಧ ಆ ಕುಟುಂಬದ ಮೇಲೆ ಬೆಳಕು ಚೆಲ್ಲಿದೆ. ಆ ಕುಟುಂಬದ ಮೂರು ಜನರ ಜೀವನ ಮತ್ತು ಸಾಧನೆಗಳನ್ನಿಟ್ಟುಕೊಂಡು ಈ ಮಹಾಪ್ರಬಂಧವು ರೂಪಿತವಾಗಿದೆ. ಆದರೂ ಆಗಬೇಕಾದ ಕೆಲಸ ಇನ್ನೂ ಅಂಥ ಕೆಲವು ಸಾಧ್ಯತೆಗಳನ್ನು ಇಲ್ಲಿ ಪಟ್ಟಿ ಮಾಡಬಹುದಾಗಿದೆ.

- ಶ್ರೀ ತಮ್ಮಣ್ಣಪ್ಪನವರ ಮತ್ತು ಪಂಡಿತಪ್ಪನವರ ಕುರಿತಾಗಿ ಸ್ವತಂತ್ರ ಮಹಾಪ್ರಬಂಧಗಳನ್ನು ರಚಿಸಬಹುದಾಗಿದೆ.
- ತಮ್ಮಣ್ಣಪ್ಪನವರ ಅಪ್ರಕಟಿತ ನಾಟಕ ಮತ್ತು ಕವಿತೆಗಳನ್ನು ಹುಡುಕಬೇಕಾಗಿದೆ.
- ತಮ್ಮಣ್ಣಪ್ಪನವರು ಮತ್ತು ಪಂಡಿತಪ್ಪನವರು ಬಳಸಿದ ವಸ್ತುಗಳನ್ನು ಸಂಗ್ರಹಾಲಯದಲ್ಲಿ ಇಡುವ ದೃಷ್ಟಿಯಿಂದ ಸಂಗ್ರಹಿಸಬೇಕಾಗಿದೆ
- ತಮ್ಮಣ್ಣಪ್ಪ ಮತ್ತು ಪಂಡಿತಪ್ಪನವರ ಕೈಬರಹಗಳನ್ನು ಹೊಂದಿರುವ ಸಾಹಿತ್ಯವನ್ನು ಕೂಡ ರಕ್ಷಿಸುವುದು ಅಷ್ಟೇ ಅವಶ್ಯವಾಗಿದೆ.
- ಪಂಡಿತಪ್ಪನವರು ಮಾಡಿದ ಕೆಲಸಗಳು ಹಲವಾರು. ಅವುಗಳೆಲ್ಲವು ನಿಖರವಾಗಿ ವಿಷಯಾನುಸಾರವಾಗಿ ದಾಖಲೆಗೊಳಿಸಬೇಕಾಗಿದೆ.
- ಪಂಡಿತಪ್ಪನವರು ಮುಂಬಯಿ ಲೆಜಿಸ್ಲೇಟಿವ್ ಕೌನ್ಸಿಲರಾಗಿ ಮಾಡಿದ ಕೆಲಸಗಳನ್ನು ಪ್ರತ್ಯೇಕವಾಗಿ ನಮೂದಿಸಬೇಕಾಗಿದೆ.
- ಪಂಡಿತಪ್ಪನವರ 'ವಿಭಾಕರ ಪತ್ರಿಕೆ'ಯ ಪ್ರತಿಗಳನ್ನು ಹುಡುಕುವ ಜವಾಬ್ದಾರಿ ಸಂಶೋಧಕನಿಗಿದೆ.

- ತಮ್ಮಣ್ಣಪ್ಪ ಮತ್ತು ಪಂಡಿತಪ್ಪನವರು ಸಂಸ್ಥಾನಗಳಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದವರು. ಅಲ್ಲಿ ಇವರೀರ್ವರ ಕುರಿತಾಗಿ ಇರುವ ದಾಖಲೆಗಳನ್ನು ಹುಡುಕಿ ಕಾಯ್ದಿಡಬೇಕಾಗಿದೆ.
- ರಾಮಪ್ಪನವರ ಯಾವುದೇ ವಸ್ತುಗಳಾಗಲಿ. ವಿಷಯಗಳಾಗಲಿ ದಾಖಲೆಯಾಗಿ ಸಿಗುವುದಿಲ್ಲ. ಸಂಶೋಧಕ ಈ ನಿಟ್ಟಿನಲ್ಲಿ ಆಲೋಚಿಸಬೇಕಾಗಿದೆ.

* * * * *

ಅನುಬಂಧ:

೧. ಚಿಕ್ಕೋಡಿ ಕುಟುಂಬದ ಪ್ರಮುಖ ಘಟನಾವಳಿಗಳು

೨. ಅಪರೂಪದ ಛಾಯಾಚಿತ್ರಗಳು

೩. ಹಸ್ತಾಕ್ಷರಗಳು ಪತ್ರಗಳು–ಮಾನಪತ್ರ

೪. ಸಂದರ್ಶಕರ ವಿವರ

೫. ಪರಾಮರ್ಶನ ಗ್ರಂಥಗಳು

೧. ಚಿಕ್ಕೋಡಿ ಕುಟುಂಬದವರ ಮಹತ್ವದ ಘಟನಾವಳಿಗಳು

ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ

೧. ೦೨-೦೯-೧೮೬೨ ಶ್ರೀ ತಮ್ಮಣ್ಣಪ್ಪನವರ ಜನನ

೨. ೧೪-೧೧-೧೯೩೩ ಶ್ರೀ ತಮ್ಮಣ್ಣಪ್ಪನವರು ಮೃತ್ಯುಪತ್ರ ಬರೆಸಿದ್ದು

೩. ೦೬-೧೨-೧೯೩೩ ಶ್ರೀ ತಮ್ಮಣ್ಣಪ್ಪನವರ ಮರಣ

೪. ೨೭-೦೫-೧೯೨೭ ಶ್ರೀ ದೇವರ ದಾಸಿಮಯ್ಯನ ಪುರಾಣೋತ್ಸವ ಮತ್ತು ನೇಕಾರ ಮುಖಂಡರ ಸಮ್ಮೇಲನ

೫. ೧೭-೦೫-೧೯೨೭ ಬನಹಟ್ಟಿಯ ಶಿವಾದ್ವೈತ ಸಿದ್ಧಾಂತ ಪ್ರಚಾರಕ ಸಂಘದ ಸ್ಥಾಪನೆ

೬. ೧೯೨೮ ತಮ್ಮಣ್ಣಪ್ಪನವರಿಂದ ಬಸವ ಜಯಂತಿಯ ಆಚರಣೆ

೭. ೧೯೦೩ ಧಾರವಾಡದಲ್ಲಿ ರಾಜಕೀಯ ಪ್ರಾಂತೀಕ ಪರಿಷತ್ತಿನಲ್ಲಿ ಭಾಗವಹಿಸಿದ್ದು

೮. ೧೩-೦೫-೧೯೦೪ ಧಾರವಾಡದಲ್ಲಿ ನಡೆದ ಪ್ರಥಮ ಅಖಿಲಭಾರತ ಶ್ರೀಮದ್ವೀರಶೈವ ಸಮ್ಮೇಳನದಲ್ಲಿ ಭಾಷಣ ಮಾಡಿದ್ದು

೯. ೧೯೦೮ ಬಾಗಲಕೋಟದಲ್ಲಿ ನಡೆದ ಅಖಿಲಭಾರತ ಶ್ರೀಮದ್ವೀರಶೈವ ಸಮ್ಮೇಳನದಲ್ಲಿ ಭಾಷಣ ಮಾಡಿದ್ದು

೧೦. ೧೯೦೯ ಬಳ್ಳಾರಿಯಲ್ಲಿ ಜರುಗಿದ ಅಖಿಲಭಾರತ ಶ್ರೀಮದ್ವೀರಶೈವ ಸಮ್ಮೇಳನದಲ್ಲಿ ಭಾಷಣ ಮಾಡಿದ್ದು

೧೧. ೧೯೧೧ ವಿಜಾಪುರದಲ್ಲಿ ನಡೆದ ೬ನೆಯ ಅಖಿಲಭಾರತ ಶ್ರೀಮದ್ವೀರಶೈವ ಸಮ್ಮೇಳನದಲ್ಲಿ ಭಾಷಣ ಮಾಡಿದ್ದು

೧೨. ೧೯೧೨ ನಿಪ್ಪಾಣಿಯಲ್ಲಿ ನಡೆದ ೭ನೆಯ ಅಖಿಲಭಾರತ ಶ್ರೀಮದ್ವೀರಶೈವ ಸಮ್ಮೇಳನದಲ್ಲಿ ಭಾಷಣ ಮಾಡಿದ್ದು

೧೩. ೧೯೧೭ ದಾವಣಗೆರಿಯಲ್ಲಿ ನಡೆದ ೮ನೆಯ ಅಖಿಲಭಾರತ ಶ್ರೀಮದ್ವೀರಶೈವ ಸಮ್ಮೇಳನದಲ್ಲಿ ಭಾಷಣ ಮಾಡಿದ್ದು

೧೪. ೨೨-೫-೨೧ ಹುಬ್ಬಳ್ಳಿಯಲ್ಲಿ ನಡೆದ ವೀರಶೈವ ತರುಣ ಸಮ್ಮೇಳನದಲ್ಲಿ ಶ್ರೀ ತಮ್ಮಣ್ಣಪ್ಪ ಮತ್ತು ಶ್ರೀ ಪಂಡಿತಪ್ಪನವರು ಭಾಗವಹಿಸಿದ್ದು

೧೫. ೧೯೧೫ ಮುಂಬಯಿಯಲ್ಲಿ ೩೧ನೆಯ ಕಾಂಗ್ರೆಸ್ ಮಹಾಅಧಿವೇಶನದ ಭಾಗವಹಿಸಿದ್ದು

೧೬. ೧೯೨೮ ಕಲ್ಕತ್ತೆಯಲ್ಲಿ ಜರುಗಿದ ೪೪ನೆಯ ಕಾಂಗ್ರೆಸ್ ಮಹಾಅಧಿವೇಶನದಲ್ಲಿ ಭಾಗವಹಿಸಿದ್ದು

೧೭. ೧೯೧೬ ಕರ್ನಾಟಕ ಸಭೆಯಲ್ಲಿ ಸದಸ್ಯರಾಗಿದ್ದು

೧೮. ಜೂನ ೧೯೨೭ ದಿ ಜಮಖಂಡಿ ಸ್ಟೇಟ್ ಪ್ರಜಾಪರಿಷದ್‌ನ ಪ್ರಭಾವಿ ಸದಸ್ಯರಾಗಿದ್ದು

೧೯. ೧೯೨೭ ಜಮಖಂಡಿಯಲ್ಲಿ ನಡೆದ ಮೊದಲನೆಯ ಪ್ರಜಾಪರಿಷದ್ ಸಭೆಯ ಸ್ವಾಗತ ಸಮಿತಿಯ ಸದಸ್ಯರಾಗಿ ಕಾರ್ಯವೆಸಗಿದ್ದು

೨೦. ೧೮-೧೨-೨೭ ಮುಂಬಯಿಯ 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸಾಯಟಿಯ ಹಾಲಿನಲ್ಲಿ ಕನ್ನಡಪರ ನಿರ್ಣಯಗಳನ್ನು ಮಂಡಿಸಿದ್ದು

೨೧. ೧೯೨೩ ಬನಹಟ್ಟಿಯಲ್ಲಿ ಆಂಗ್ಲೋ-ವರ್ನಾಕ್ಯುಲರ್ ಶಾಲೆಯನ್ನು ಸ್ಥಾಪಿಸಿದ್ದು

೨೨. ೧೯೨೭ ಫಸ್ಟ್‌ಗ್ರೇಡ್ ಶಾಲೆಯನ್ನಾಗಿ ಎತ್ತರಿಸಿದ್ದು

೨೩. ૩೦-೬-೧೯೨೭ ಶ್ರೀ ಶಂಕರರಾವ ಅಪ್ಪಾಸಾಹೇಬರಿಗೆ ಮಾನಪತ್ರ ಸಲ್ಲಿಸಿದ್ದು

೨೪. ೫-೫-೧೯೧೫ ಧಾರವಾಡದಲ್ಲಿ ಜರುಗಿದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಮಾಡಿದ ಭಾಷಣ

೨೫. ೧೯೨೧ ಚಿಕ್ಕಮಗಳೂರಿನಲ್ಲಿ ನಡೆದ ಏಳನೆಯ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಮಾಡಿದ ಭಾಷಣ

೨೬. ೧೯೨೩ ವಿಜಾಪುರದಲ್ಲಿ ನಡೆದ ಒಂಬತ್ತನೆ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಮಾಡಿದ ಭಾಷಣ

೨೭. ೧೯೨೫ ಬೆಳಗಾವಿಯ ನಡೆದ ಕನ್ನಡ ಸಾಹಿತ್ಯ ಸಮ್ಮೇಲನದ ಸ್ವಾಗತಾಧ್ಯಕ್ಷರಾಗಿದ್ದು

೨೮. ೧೯೨೮ ಕಲಬುರ್ಗಿಯಲ್ಲಿ ನಡೆದ ಹದಿನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಮಾಡಿದ ಭಾಷಣ

೨೯. ೧೯೨೯ ಬೆಳಗಾವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಠರಾವುಗಳನ್ನು ಮಂಡಿಸಿದ್ದು

ಶ್ರೀ ಪಂಡಿತಪ್ಪ ಚಿಕ್ಕೋಡಿ:

೧. ೦೪-೦೨-೧೮೮೪ ಶ್ರೀ ಪಂಡಿತಪ್ಪನವರ ಜನನ

೨. ೧೯೧೬ ಒಡನಾಡಿಗಳ ಜೊತೆಗೆ ಬೆಳಗಾವಿಯಲ್ಲಿ ಗಿಲಗಂಚಿ-ಅರಟಾಳ ಶಾಲೆಯ ಆರಂಭಿಸಿದ್ದು

೩. ೧೯೨೩ ಮಹಿಳಾ ವಿದ್ಯಾಲಯದ ಸ್ಥಾಪನೆ

೪. ೧೩, ೧೪ ೧೯೨೯ ಬನಹಟ್ಟಿಯಲ್ಲಿ ಎರಡನೆಯ ಪ್ರಜಾಪರಿಷದ್ ಸಭೆಯ ಅಧ್ಯಕ್ಷರು

೫. ೧೯೩೭ ಬನಹಟ್ಟಿಯಲ್ಲಿ ಜರುಗಿದ ಮುಂಬಯಿ ಪ್ರಾಂತ್ಯದ ಅಧ್ಯಕ್ಷರು

೬. ೧೯೪೯ ಬನಹಟ್ಟಿಯಲ್ಲಿ ಜರುಗಿದ ವಿಲೀನಗೊಂಡ ದಕ್ಷಿಣ ಸಂಸ್ಥಾನಗಳ ನೇಕಾರ ಸಂಘಗಳ ಪರಿಷತ್ತಿನ ಅಧ್ಯಕ್ಷರು

೭. ೧೯೪೧ ಬೆಳಗಾವಿ ಕೈಮಗ್ಗ ಉದ್ಯಮ ಮಂಡಲಿಯ ಸದಸ್ಯರು

೮. ೧೯೪೫ ಬೆಳಗಾವಿ ಜಿಲ್ಲಾ ಔದ್ಯೋಗಿಕ ಸಹಕಾರಿ ಮಂಡಳಿಯ ನಿರ್ದೇಶಕ ಸಮಿತಿಯ ಅಧ್ಯಕ್ಷರಾಗಿ ನೇಮಕ

೯. ೨೫-೧೦-೧೯೫೨ ಅಖಿಲಭಾರತ ಕೈಮಗ್ಗ ಮಂಡಲದ ಸದಸ್ಯರಾಗಿದ್ದು

೧೦. ೧೯೩೫ ಸಾಂಗಲಿ ಸಂಸ್ಥಾನ ರೈತ ಅಸೆಂಬ್ಲಿಯ ಸದಸ್ಯರಾಗಿದ್ದು

೧೧. ೧೯೪೩ ಮಿರಜ(ಕಿರಿಯ)ಸಂಸ್ಥಾನ ರೈತ ಅಸೆಂಬ್ಲಿಯ ಸದಸ್ಯರಾಗಿದ್ದು

೧೨. ಕ್ರಿ.ಶ.೧೯೩೪ ಬೈಲಹೊಂಗಲದಲ್ಲಿ ನೆರೆದ ಸಂಪಗಾಂವ ತಾಲ್ಲೂಕ ರೈತ ಸಮ್ಮೇಲನದ ಅಧ್ಯಕ್ಷರಾಗಿದ್ದು

೧೩. ೧೯೨೪ ಅಖಿಲಭಾರತ ಗೋ ಸಮ್ಮೇಳನದ ಸ್ವಾಗತಾಧ್ಯಕ್ಷ

೧೪. ೧೯೨೮ ಬಾರ್ಡೋಲಿ ಚಳುವಳಿಯಲ್ಲಿ ಮುಖಂಡರಾಗಿ ಭಾಗವಹಿಸಿದ್ದು

೧೫. ೨೦-೦೮-೧೯೩೩ ಮುಂಬಯಿಯಲ್ಲಿ ಬ್ರಾಹ್ಮಣೇತರ ಯುವಪರಿಷತ್ತಿನ ಅಧ್ಯಕ್ಷರಾಗಿದ್ದು

೧೬. ೧೬-೧೧-೧೯೩೪ ಮೈಸೂರು ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನಲ್ಲಿ ನಡೆದ ವೀರಶೈವ ಮಹಾಸಭೆಯ ಅಧ್ಯಕ್ಷರು

೧೭. ೨೬-೦೯-೧೯೩೬ ಸಾಂಗಲಿ ಸಂಸ್ಥಾನದ ವೀರಶೈವ ಮಹಾಸಭೆಯ ಪ್ರಥಮ ಅಧಿವೇಶನದ ಅಧ್ಯಕ್ಷರು

೧೮.ಮಾರ್ಚ೭,೮ ೧೯೨೮ ತೇರದಾಳದಲ್ಲಿ ನಡೆದ ಸಾಂಗಲಿ ಪ್ರಜಾಪರಿಷದ್ ಆರನೆಯ ಅಧಿವೇಶನದ ಅಧ್ಯಕ್ಷರಾಗಿದ್ದು

೧೯. ೧೯೨೨ ಮತ್ತು ೧೯೨೯-೩೩ ಡಿ.ಎಲ್.ಬಿ.ಯ ಅಧ್ಯಕ್ಷರಾಗಿದ್ದು

೨೦. ೧-೧೧-೧೯೪೩ ಲಿಂಗರಾಜ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಸದಸ್ಯರಾಗಿದ್ದುದು

೨೧. ೧೯೪೦-೪೮ ಕರ್ನಾಟಕ ಆಯುರ್ವೇದ ವಿದ್ಯಾಪೀಠದ ಅಧ್ಯಕ್ಷರಾಗಿದ್ದು

೨೨. ೧೯೨೨ ಒಕ್ಕಲುತನದ ಶಾಲೆಗಳನ್ನು ಪ್ರಾರಂಭಿಸಿದ್ದು

೨೩. ಬೆಳಗಾವಿ ಜಿಲ್ಲಾ ಸ್ಕೂಲ್ ಬೋರ್ಡ್ ಸ್ಥಾಪನೆಯಾದಾಗಿನಿಂದ ಪ್ರಥಮ ಅಧ್ಯಕ್ಷರು

೨೪.೧೩-೧೨-೧೯೩೦ ಬೆಳಗಾವಿ ಜಿಲ್ಲಾ ಶಿಕ್ಷಕರ ಸಮ್ಮೇಲನದ ಅಧ್ಯಕ್ಷರಾಗಿ ಭಾಷಣ ಮಾಡಿದ್ದು

೨೫. ೧೯೩೬-೪೪ ಜನತಾ ಶಿಕ್ಷಣ ಸಂಘದ ಅಧ್ಯಕ್ಷರಾಗಿದ್ದು

೨೬. ೧೯-೫-೧೯೨೬ ಬಳ್ಳಾರಿಯಲ್ಲಿ ನಡೆದ ಎರಡನೆಯ ಏಕೀಕರಣ ಪರಿಷತ್ತಿನ ನಿಯೋಜಿತ ಅಧ್ಯಕ್ಷರಾಗಿದ್ದು

೨೭. ೧೨-೦೨-೧೯೨೮ ಅಲಹಾಬಾದಿನಲ್ಲಿ ಜರುಗಿದ ಸರ್ವಪಕ್ಷ ಸಭೆಯಲ್ಲಿ ಭಾಗವಹಿಸಿದ್ದು

೨೮. ೧೯೩೭ ಜಮಖಂಡಿಯಲ್ಲಿ ನಡೆದ ೨೨ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಸ್ವಾಗತಾಧ್ಯಕ್ಷರಾಗಿದ್ದು

೨೯. ೧೯೨೦ ವಿಭಾಕರ ಪತ್ರಿಕೆ ಪ್ರಾರಂಭಿಸಿದ್ದು

೩೦. ೦೮-೦೧-೧೯೬೧ ಪಂಡಿತಪ್ಪನವರ ಮರಣ

ಶ್ರೀ ರಾಮಪ್ಪ ಚಿಕ್ಕೋಡಿ:

೧. ೧೯೨೨ ಸೊಲ್ಲಾಪುರದಿಂದ ಮಾರವಾಡಿ ಬಡಿಗರನ್ನು ಕರೆಸಿ ಹೊಸತರದ ಕೈಮಗ್ಗಗಳನ್ನು ತಯಾರಿಸಿದ್ದು

೨. ೧೯೩೫ ತಮಿಳುನಾಡಿನಿಂದ ಶ್ರೀ ಮುತ್ತುರಾಜನೆಂಬ ನೇಕಾರನನ್ನು ಕರೆಸಿ ರಬಕವಿಯ ಜನತೆಗೆ ತರಬೇತಿ ಕೊಡಿಸಿದ್ದು

೩. ೧೯೪೪ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಲನದ ಸ್ವಾಗತಾಧ್ಯಕ್ಷರಾಗಿದ್ದು

೪. ೧೯೫೪ ರಾಮಪ್ಪನವರ ಮರಣ



ಮುಂಬಯಿ ಗವ್ವರ್ನರ್ ಫ್ರೆಡ್ರಿಕ್ ಸೈಕ್ಸ್ ರಬಕವಿಗೆ ಭೇಟಿ ನೀಡಿದಾಗ (ಎಡದಿಂದ ಮೊದಲನೆಯವರು ಶ್ರೀ ಪಂಡಿತಪ್ಪ ಚಿಕ್ಕೋಡಿ)



ನಾಡಹಬ್ಬದ ಆಚರಣೆ: ಕುರ್ಚಿಯಲ್ಲಿ ಕುಳಿತವರು 2.ಶ್ರೀ ಮಂಗಳವೇಡೆ ಶ್ರೀನಿವಾಸರಾಯರು 3.ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ 2.ಶ್ರೀ ಜಂಗೀನ ಮುರಿಗೆಯ್ಯನವರು



ಬನಹಟ್ಟಿಯ ಎಸ್.ಆರ್.ಎ.ಪ್ರೌಢಶಾಲೆಗೆ ಮನ್ನಣೆಯನ್ನು ಕೊಡಲು ಬಂದಾಗ
ಎಡದಿಂದ ನಾಲ್ಕನೆಯವರು ಶ್ರೀ ಪಂಡಿತಪ್ಪ ಚಿಕ್ಕೋಡಿ



ಪಂಡಿತಪ್ಪ ಚಿಕ್ಕೋಡಿಯವರ ಕುಟುಂಬದ ಸದಸ್ಯರು



ಶ್ರೀ ಎಸ್.ಎಸ್.ಕಾರಜಿನ್ನಿ, ಶ್ರೀ ಸಿ.ಸಿ.ಅಬಕಾರ, ಶ್ರೀ ಪಂಡಿತಪ್ಪ ಚಿಕ್ಕೋಡಿ

೧೮-೪-೧೯೫೭ ರಂದು ಕೇಂದ್ರ ವಾಣಿಜ್ಯ ಮಂತ್ರಿ
ಮಾನ್ಯ ಡಿ. ಪಿ. ಕರಮರಕರ ಭೆಟ್ಟಿ



ಬಲದಿಂದ ಎಡಕ್ಕೆ:—ವೈ.ಎಸ್. ವ್ಹಿ. ಬಸ್ತವಾಡ, ಡಾ. ಎಚ್. ಆರ್. ತೇರಗುಂಡಿ. ಮಾನ್ಯ ಡಿ. ಪಿ. ಕರಮರಕರ, ಶ್ರೀಯುತ ಶಿವನಗೌಡಾ ಪಾಟೀಲ, (ಜಿಲ್ಹಾ ಕಾಂಗ್ರೇಸ ಕಮೀಟ ಅಧ್ಯಕ್ಷ), ಶ್ರೀ. ಪಿ. ಆರ್. ಚಿಕ್ಕೋಡಿ, ವೈ. ಎ. ವ್ಹಿ. ಗದಗ,



ಪಂಡಿತಪ್ಪನವರು ರಬಕವಿಗೆ ಗಣ್ಯರನ್ನು ಕರೆದುಕೊಂಡು ಬಂದಿದ್ದು



ಜನತಾ ಶಿಕ್ಷಣ ಸಂಘದಲ್ಲಿರುವ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ
ಮತ್ತು ಡಾ॥ ಫ.ಗು.ಹಳಕಟ್ಟಿಯವರ ಕಂಚಿನ ಪ್ರತಿಮೆಗಳು




ಜನತಾ ಶಿಕ್ಷಣ ಸಂಘದ ಆವರಣದಲ್ಲಿರುವ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿಯವರ ಪ್ರತಿಮೆ



ಜನತಾ ಶಿಕ್ಷಣ ಸಂಘದಲ್ಲಿರುವ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ ಮತ್ತು ಡಾ|| ಫ.ಗು.ಹಳಕಟ್ಟಿಯವರ ಕಂಚಿನ ಪ್ರತಿಮೆಗಳು



ತಮ್ಮಣ್ಣಪ್ಪನವರು ರಬಕವಿಯ ಶಂಕರಲಿಂಗನ ಗುಡಿಯಲ್ಲಿ ನೇಟ್ಟಿವ್ ಲೈಬ್ರರಿ ಸ್ಥಾಪಿಸಿದ್ದು



ತಮ್ಮಣ್ಣಪ್ಪನವರು ಬನಹಟ್ಟಿಯಲ್ಲಿ ವಾಸಿಸಿದ್ದ ಮನೆ



ಜನತಾ ಶಿಕ್ಷಣ ಸಂಘದ ಆವರಣದಲ್ಲಿರುವ ತಮ್ಮಣ್ಣಪ್ಪ ಚಿಕ್ಕೋಡಿಯವರ ಸಮಾಧಿ



ಜಮಖಂಡಿ ಸಮೀಪದಲ್ಲಿರುವ ಹುಲ್ಯಾಳ ಗ್ರಾಮದಲ್ಲಿ ರಾಮಪ್ಪನವರು ಕಟ್ಟಿಸಿರುವ
ಶ್ರೀ ಶಂಭುಲಿಂಗೇಶ್ವರ ದೇವಸ್ಥಾನ



ಶ್ರೀ ರಾಮಪ್ಪ ಚಿಕ್ಕೋಡಿಯವರು ರಬಕವಿಯ ಮಹಾಲಿಂಗಪುರ ನಾಕೆಯ ಹತ್ತಿರ ಕಟ್ಟಿಸಿದ ಬಾವಿ



ರಾಮಪ್ಪನವರು ಕಟ್ಟಿಸಿದ ಶ್ರೀ ಶೆಟ್ಟೆವ್ವ ದೇವಿ ಗುಡಿ

೩. ಹಳಕಟ್ಟಿಯವರು ಚನ್ನಮಲ್ಲಪ್ಪನವರಿಗೆ ಬರೆದ ಪತ್ರ

೩–೧

Rao-Saheb,
P. G. Halkatti, B. A. LL. B.
Pleader, BIJAPUR.

Date ೧೩-೩-೪೦

[illegible]

[illegible]

[illegible]

[illegible]

೩.೨.ತಮ್ಮಣ್ಣಪ್ಪನವರು ಪಂಡಿತಪ್ಪನವರಿಗೆ ಬರೆದ ಪತ್ರ

ಶ್ರೀ

ಬನಹಟ್ಟಿ ತಾ. ೨|೧೧|೩೧

ಚಿ. ಪಂಡಿತಪ್ಪನವರಿಗೆ

ಅನೇಕಾಶೀರ್ವಾದಗಳು.— ನಿಮ್ಮ ಅಕ್ಟೋಬರ ೩೧ ತಾರೀಖಿನ ಪತ್ರವು ಮುಟ್ಟಿತು. ಪಾಪಟಿನೆ ಹತ್ತುವಾಗ ಎಡಗಾಲಿಗೆ ನೋವು ಆಗಿ ಆಪರೇಶನ ಮಾಡಿಸಿಕೊಳ್ಳ ಬೇಕಾದ ಸಂಗತಿಯು ತಿಳಿದು, ಮನುಷ್ಯನಮೇಲೆ ಯಾವಾಗ ಎಂತಹ ಕಠಿಣ ಪ್ರಸಂಗ ಒದಗೀ ತೆಂಬದರ ಬಗ್ಗೆ ನನ್ನ ಮನಸ್ಸಿನಲ್ಲಿ ಭಯಂಕರ ವಿಚಾರಗಳು ಹುಟ್ಟಿದವು. ನನ್ನ ಮತ್ತು ಅಣ್ಣಂದಿರ ಬಾಳುವೆಯು ನಿಮ್ಮೊಬ್ಬರ ಕಡೆಗೇ ಯಾವಾಗಲೂ ಇರುತ್ತಿದ್ದು, ನಿಮ್ಮಂತಹ ಕರ್ತವ್ಯಶೀಲರ ಜನ್ಮವು ನಮ್ಮಂತಹ ಬಡವರ ವಂಶದಲ್ಲಿ ಆಗಿರುವದನ್ನು ಕುರಿತು ಈಶ್ವರನನ್ನು ಎಡಬಿಡದೆ ನಿಮ್ಮ ಕಲ್ಯಾಣಕ್ಕಾಗಿ ಬೇಡಿಕೊಳ್ಳುತ್ತಿದ್ದೇನೆ. ನಾನು ಗುರುಕೃಪೆಯಿಂದ ಸಾರ್ವ ಜನಿಕವೆನ್ನಲಿಕ್ಕೆ ಬಾಂದಿದ್ದರೂ ಸಾರ್ವಜನಿಕ ಕಾರ್ಯದಂತೆ ಭಾಸವಾಗುವ ಕೆಲಸಗಳನ್ನು ಇಡೀಜನ್ಮದಲ್ಲಿ ಮಾಡಿದರೂ ತಾವುಬುಧ್ಯಾ ಸ್ವೀಕರಿಸಿದ ಬಡತನದಲ್ಲಿ ಸಹ ಮಹತ್ವದ ಕಾರ್ಯ ವನ್ನು ವಿಚಾರಿಸಿನೋಡಲು ಅಪೂರ್ವವಾದ ಆನಂದವಾಗುತ್ತದೆ. ನಮ್ಮ ಉತ್ಪತ್ತಿಯು ಎಂತಹ ಬಡತನದ ಕುಟುಂಬದಲ್ಲಿ ಆಗಿದ್ದರೂ ''ಮಿಣಚಿ'' (ಸಂ.–ಕೊಲ್ಹಾಪೂರ) ಗೌಡರ ವಂಶದಲ್ಲಿ ನಮ್ಮ ಜನ್ಮವಾಗಿರುವದರಿಂದ, ಸ್ವಾಭಾವಿಕವಾಗಿ ನಿನ್ನ ಮುತ್ತಂದಿರ ಮತ್ತು ನನ್ನ ತಂದೆಯ ಆಕಾಂಕ್ಷೆಗಳು ಬಹಳ ಮಹತ್ವವುಳ್ಳವಾಗಿದ್ದವು. ಅವರು ಲಲಿತಕಲೆಯಲ್ಲಿಯೂ ಕೈಗಾರಿಕೆ ಕೆಲಸದಲ್ಲಿಯೂ ಮೇಲ್ಮೆಯನ್ನು ಪಡೆದಿದ್ದಾರೆ. ಅವರ ಮನಸ್ಸು ಬಹಳದೊಡ್ಡದಿತ್ತು. ಬಡತನದಲ್ಲಿಯೂ ಉದಾರ ಸ್ವಭಾವವು ಮಿಂಚುತ್ತಿತ್ತು. ಅವರಿಗೆ ತಮ್ಮ ಮನೆತನದ ಬಗ್ಗೆ ಹೇಳಲಾರದಷ್ಟು ಅಭಿಮಾನವೂ ಗೌರವವೂ ಇತ್ತು. ಆವೆಲ್ಲ ಗುಣಗಳು ನಿಮ್ಮಲ್ಲಿ ಮೂಡಿರುವ ದನ್ನು ನೋಡಿ ನನಗೆ ಆನಂದಾಶ್ರುಗಳು ಬರುತ್ತವೆ. ನಿನ್ನ ತಂದೆಯೂ ನಾನೂ ನಮ್ಮ ಸಮಾಜದ ಉನ್ನತಿಗಾಗಿ ನಮ್ಮ ಅಲ್ಪ ಸಾಮರ್ಥ್ಯಕ್ಕೆ ಮೀರಿ ಕೆಲಸ ಮಾಡಿದೆವು. ನೀನು ನಮ್ಮ ಹೇತುವಿನ ಗುಡಿಗೆ ಕಳಸವನ್ನು ಇಟ್ಟಿರುತ್ತೀ. ನಿನ್ನ ಸಂಗತಿಗರು ವೈಭವದಶಿಖರದಲ್ಲಿ ಏರಿದ್ದರೂ ನೀನು ಬಡತನಕ್ಕೆ ಹೇಸದೇ ಅದೇ ನಮ್ಮ ಅಭ್ಯುದಯಕ್ಕೆ ಕಾರಣವಾಗಿರುವದರಿಂದ ಅದನ್ನು ಶ್ಲಾಘಿಸಬೇಕಾಗಿದೆ. ಹೀಗೆ ನಾನು ಮನಸ್ಸಿನ ಕಲ್ಪನಾ ಅಥವಾ ಭಾವನಾ ತರಂಗದಲ್ಲಿ ಮಗ್ನ ನಾಗಿರುತ್ತಿದ್ದು ಹೋದವರುಷದಲ್ಲಿಯೂ ಈಗ ಪ್ರಕೃತ ಕಾಲದಲ್ಲಿಯೂ ನಿನ್ನ ಜೀವದ ಮೇಲಿನ ಪ್ರಸಂಗಗಳು ಬಂದುದನ್ನು ನೋಡಿ ನಮ್ಮ ಮನಸ್ಸು ಎಷ್ಟು ದುಃಖಮಯವಾಗಬಹುದೆಂಬ ಬಗ್ಗೆ ದೇವರಿಗೆ ಮಾತ್ರ ಅರಿಕೆ. ಈ ಎರಡೂ ಪ್ರಸಂಗಗಳಲ್ಲಿಯೂ ದೇವರು ನಿಮಗೆ ಗುಣ ಕೊಟ್ಟಿದ್ದು ನಮ್ಮ ಮೇಲಿನ ಆತನ ಅಮೋಘ ಕೃಪೆಯಿಂದು ನಂಬಿದ್ದೇನೆ. ನಿನ್ನ ಮೇಲೆ ನಮ್ಮ ಭಾರ. ನಿನಗೆ ಏನಾದರೂ ಸಂಕಟವು ಒದಗಿದರೆ ಹುಚ್ಚನಂತೆ ಆಗುತ್ತದೆ. ಆದುದರಿಂದ ಆರೋಗ್ಯದ ವಿಷಯದಲ್ಲಿ ನೀನು ಜಾಗ್ರತೆಯಾಗಿರು. ದೇವರು ಸತ್ಕಾರ್ಯಮಾಡುವಾಗ ಬೇಕಾದಂತಹ ಗಂಡಾಂತರ ಬರಲಿ, ಇದಕ್ಕೆ ನಾನು ಹೆದರುವದಿಲ್ಲ. ನಿನ್ನಲ್ಲಿಯೂ ಆಗುಣವು ಒಡಮೂಡಿರುತ್ತದೆ. ತಾ. ೨೯|೧೦|೩೧ ದ ಜ್ಞಾನಪ್ರಕಾಶದಲ್ಲಿ ನಿಮಗೆ ಅನಾರೋಗ್ಯವಾದ ಬಗ್ಗೆ

೩.೩. ತಮ್ಮಣ್ಣಪ್ಪನವರು ಬರೆದ ಮೃತ್ಯುಪತ್ರ

ನಾನು ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿ ವಸ್ತಿ
ಬನಹಟ್ಟಿ ಸಂಸ್ಥಾನ ಜಮಖಂಡಿ ಜಾತ ಲಿಂಗಾಯತ
ವಯಸ್ಸು ೭೪ ಬರೆದಿರುವ ಮೃತ್ಯುಪತ್ರವೇನಂದರೆ-

ನನಗ ಇತ್ತ್ಯ ವೃದ್ಧಾಪಕಾಲವಾಗಿದೆ ನಂನ್ನ ಪ್ರಕೃತಿಯು ಸ್ವಸ್ಥವಿಲ್ಲ ಆದ್ದರಿಂದ ನನ್ನ ಮನಸ್ಸಿನ ಬರುಳ ಇರುವ ಕೋರಿಕೆಯು ಪೂರ್ತಿ ಸುವದಕ್ಕಾಗಿ ಕೆಳಗಿನ ಯೋಜನೆಯನ್ನು ಮಾಡಿರುತ್ತೇನೆ

೧. ಬನಹಟ್ಟಿ ಊರಲ್ಲಿ ಸರ್ಕಾರ ಪ್ರೈಸ್ಕೂಲ (ಪ್ರಾಥಮಿಕ) ಸ್ಕೂಲವಿದೆ. ಇದು ಹಾಯಸ್ಕೂಲವಾಗಬೇಕೆಂದು ನನ್ನ ಪೂರ್ಣ ಮನಸ್ಸಿನ ಕೋರಿಕೆ ಇದ್ದಕ್ಕಾಗಿ ನಾನು ನನ್ನ ಸ್ಥಾವರ ಆಸ್ತಿಯೊಳಗಿನ ರವಿಕರವಿಯಲ್ಲಿ ಇರುವ ಮನೆಯನ್ನು ಮಾರಿ ಬಂದ ನಾಲ್ಕು ಸಾವಿರ (೪೦೦೦) ರೂಪಾಯಿಗಳನ್ನು ಈ ಹಾಯಸ್ಕೂಲದ ಕಾರ್ಯಕ್ಕಾಗಿ ಸಮರ್ಪಿಸಿರುತ್ತೇನೆ.

ಬನಹಟ್ಟಿ ಗ್ರಾಮಸ್ಥರು ನಂಮ್ಮ ಪ್ರಜಾಹಿತದಕ್ಷರಾದ (ಶ್ರೀ)ಮಂತ ಸರಕಾರ ಶಂಕರರಾವ ಪಟವರ್ಧನ ಮಹಾರಾಜರನ್ನು ಕಂಡು ಅವರಿಗೆ ಪ್ರಾರ್ಥನೆ ಕೊಡು ಅವರು ಹಾಯಸ್ಕೂಲ ಮಾಡುವಂತೆ ಬೇಡಿಕೊಳ್ಳಬೇಕು.

ಮತ್ತು (ಶ್ರೀ)ಮಂತರು ಅತಿ ದಯಾಳುತನದಿಂದ ನಡೆದ ಉಪಕಾರಗಳನ್ನು ಲಕ್ಷ್ಯದಲ್ಲಿ ತಂದು ಈ ಹಾಯಸ್ಕೂಲ ದಲ್ಲಿ ಬೇಡಿದ ವರ್ಗಣಿಯನ್ನು ಕೂಡಿಸಿ ಸರಕಾರಕ್ಕೆ ಕೊಡಬೇಕು.

ಮ್ಯುನಿಸಿಪಾಲಿಟಿಯವರು ಕೂಡಾ ಈ ಅತ್ಯಾವಶ್ಯಕವಾದ ಕಾರ್ಯಕ್ಕೆ ತಂಮ್ಮ ಶಕ್ತ್ಯಾನುಸಾರವಾದ ವಾರ್ಷಿಕ ದೇಣಿಗೆಯನ್ನು ಕೊಡಬೇಕು.

೩.೪. ಕವಿ ಈಶ್ವರ ಸಣಕಲ್ಲ ಅವರಿಗೆ ಪಂಡಿತಪ್ಪನವರು ಬರೆದ ಪತ್ರ

Panditapa Rayapa Chikodi.

Belgaum.


ಬೆಳಗಾಂ.

೫ ನೇ ಡಿಸೆಂಬರ ೧೯೩೩.

ಶ್ರೀಯುತ ಈಶ್ವರಸ್ವಾಮಿ ಸಣಕಲ್ಲ ಮು. ರಬಕವಿ

ಇವರಿಗೆ ನಮಸ್ಕಾರಗಳು. ಸಾ ಸಾ

ಬರೆದ ತಾ. ೬-೧೧-೧೯೩೩ [illegible] "ನಿಟ್ಟುಸಿರು" ಎಂಬ [illegible]


Pandtappa R. Chikodi, M.L.A.
Belgaum.

Shri M. S. Munnolli has been known to me since a long time. He comes of respectable family and his conduct and character have been good. He is an intelligent and active young man and deserves to be encouraged. I have much pleasure in recommending him for suitable post under the Government.

R Chikodi

Belgaum.
22 April 1951

೩.೬. ಗೋಮಾಂತಕರು ಪಂಡಿತಪ್ಪನವರಿಗೆ ನೀಡಿದ ಮಾನಪತ್ರ

॥ श्री ॥

सन्मान्य श्री. पंडितप्पा रायाप्पा चिकोडी, बी. ए., एम्. एल्. सी.,
बेळगांव,
यांचे सेवेशीं—

गोमन्तकनिवासीयांच्या मनांत आपल्याविषयीं जो आदरभाव वसत आहे तो प्रगट करण्याचा सुप्रसंग आज लाभत आहे याबद्दल आम्हांस फार समाधान होत आहे.

शिक्षण संपवल्यापासून आजवरच्या आपल्या जीवनक्रमाचें अवलोकन केलें तर एका आदर्श लोकसेवकाचें चित्र त्यांत स्पष्ट दिसून येतें.

जनतेच्या उत्कर्षाचें अत्यंत प्रभावी साधन म्हणजे शिक्षण हें जाणून आपण गिलगिंची अर्टाळ हायस्कुलच्या उभारणीस आपला यशस्वी हातभार लावला. आणि आज त्याच हायस्कुलचें प्रगत रूप जें "लिंगराज" कॉलेज तें मूर्त स्वरूपास येण्यासही आपले श्रम पुष्कळच कारणीभूत झाले आहेत. बेळगांव जिल्हा लोकल बोर्डाचे सतत आठ वर्षे आपण अध्यक्ष होतां, यावरून आपली लोकप्रियता दिसून येतेच. पण तिच्याहीपेक्षां आपणास अधिक भूषणभूत होऊन रहाणारी गोष्ट म्हणजे आपल्या कारकिर्दीत, आपण शंभरांहून नवीन प्राथमिक शाळा काढल्या व पांचशेंच्यावर लोकसंख्या असणारें एकही खेडें प्राथमिक शाळेविना रहू दिलेलें नाहीं, ही होय. स्कुल बोर्डाचे चेअरमन असल्यावेळीं सर्व प्राथमिक शिक्षण आपण मोफत केलें ही गोष्ट तर अनन्यसामान्य अशीच आहे. सक्तीच्या प्राथमिक शिक्षणासंबंधीं विचार करण्यासाठीं मुंबई सरकारनें जी कमिटी नेमली होती तिचे एक सभासद या नात्यानें, कमिटीच्या रिपोर्टास भिन्न मतपत्रिका लिहून खेडेगांवांत प्राथमिक शिक्षण सक्तीचें करण्याबद्दल आपण जें जोरदार प्रतिपादन केलें तेंही आपल्या शिक्षणप्रसारप्रियतेचें उत्तम निदर्शक होय. "विजयकर" या कानडी व इंग्रजी साप्ताहिकाच्या द्वारें आपण केलेलें लोकशिक्षणाचें कार्यही स्मरणीय ठरल्याशिवाय रहाणार नाहीं.

लोकल बोर्डाच्या अध्यक्षस्थानावर असतांना आपण अस्पृष्टांना विहिरी खुल्या केल्या व नोकऱ्याही दिल्या आणि स्कूल बोर्डाचे अध्यक्ष असतांना त्यांना अनेक स्कॉलरशिपा देवविल्या, यावरून आपली समाजसुधारणाविषयक दृष्टि किती व्यापक आहे तें चांगलें दिसून येतें. खालसा मुलखांतल्या प्रजेच्या हिताबद्दल जसे आपण झटतां तसेच संस्थानी प्रजेच्या उत्कर्षाची काळजीही आपण वाहातां; आणि हें आपलें कार्य संस्थानी प्रजेसही कसें रुजू आहे तें सांगली व जमखंडी येथील प्रजापरिषदांचीं अध्यक्षस्थानें जीं आपल्यास लाभलीं त्यावरून कळून येतें.

महाराज, सतत दहा वर्षे मुंबई कौन्सिलचे आपण बेळगांव जिल्ह्याच्या वतीचे लोकनियुक्त सभासद आहात यावरून आपलें तेथील कार्य कसें लोकमान्य आहे तें निराळें सांगण्याचें कारणच उरत नाहीं. जमीनविभागणीचें व शेतमालदुरुस्तीचें अशीं दोन बिलें मुंबई सरकारनें कायदेकौन्सिलांत सादर केल्यावेळीं, त्यांचें लोकहानिकारक उग्र रूप पाहून तीं हाणून पाडण्याकरितां सभा, व्याख्यानें, अर्ज वगैरेंच्या द्वारें जी फार मोठी कामगिरी आपण केली, आणि मुंबई सरकारास सदर बिलें मागें घेणे भाग पडलें, तिच्यामुळें प्रजेचें प्रेम तर आपल्यावर बसलेंच; पण सरकारच्या लक्षांत आपल्या चळवळीची न्याय्यता आल्याशिवाय राहिली नाहीं. मुंबई सरकारनें नेमलेल्या कारकसर कमिट्या, शिक्षण कमिट्या, बँकिंग चौकशी कमिटी, डिप्रेस्ट क्लास अँड आब्-ओरिजिनल ट्राइब्स् कमिटी वगैरे कमिट्यांत आणि कौन्सिलच्या सभासदांनीं निवडावयाच्या फायनॅन्स व पब्लिक ॲकाउन्टस् कमिट्यात सभासद म्हणून जें कार्य आपण केलें तें भरीव स्वरूपाचेंच असलें पाहिजे आणि हिंदुस्थान सरकारच्या रेल्वे ॲडव्हायसरी बोर्डावर लोकनियुक्त सभासद म्हणून आज दहा वर्षे पर्यंत जी आपली निवड होत आहे ती त्याचेंच द्योतक मानली पाहिजे.

अशा प्रकारें, राजा व प्रजा या दोघांसही प्रिय असणाऱ्या दुर्लभ कार्यकर्त्याबद्दल कोणाच्या मनांत आदर वसणार नाहीं? आणि तो व्यक्त करण्याचा प्रसंग आला असतां साधेल त्या मार्गें साधून घ्यावा असें कोणास वाटणार नाहीं?

शेवटीं, लोकहिताचीं कामें अधिकाधिक करीत रहाण्यासाठीं, आणि गोमंतकीयांवर आपली [illegible] आपली कृपादृष्टि ठेवण्यासाठीं, परमेश्वरानें आपणास उदंड आयुरारोग्य द्यावें अशी प्रार्थना करून आपला निरोप घेतों.

मडगांव, ता. २९-१-३४ इ.

विष्णु रामचंद्र नायक	पुरुषोत्तम श्रीनिवास सुकेरकर	जयराम जगन्नाथ शेट कातकर
दत्तात्रय व्यंकटेश पै	नागेश वासुदेव सडेकर	नरसिंह दामोदर नायक
आत्माराम शंभु पै पाणंदीकर	शंकर जयवंत कारापुरकर	बाळकृष्ण वामन सांवर्डेकर
ब्रह्मानंद सदाशिव म्हापसेकर	यशवंत विष्णु पै रायतुरकर	कृष्ण राम हेगडे
माधव वामन नागझरकर	शंकरराव मुंडकूर	भाऊराव भगवंतराव दलाल
नारायण विठ्ठल लोटलीकर	दत्ता गिरी कोर	गोविंद रामनाथ कोरे
शंभु शेट म्हापसेकर	पांडुरंग गोपाळ विर्जिनकर	कृष्ण वासुदेव पै फोंडेकर
अब्दुल रहिमान हाजीवली कासम	शेख अब्दुल कादर	महमद हासम
आदम तय्यब	नाथालाल लल्लुभाई नागजी	चंदीराम रूपचंद
जव्हेरभाई रामजी	ईश्वराप्पा महालिंगप्पा मुंगरवाडी	ईश्वराप्पा ब. गाडवी
लिंगप्पा चनबसप्पा मास्तिहोळीमठ	दुंडपा ईश्वराप्पा गाडवी	गुरुपादप्पा वागवाडी
गुरुलिंगाप्पा शि. पालकर.		

೩.೭. ಕೆ.ಎಲ್.ಇ. ಸೊಸೈಟಿಯಲ್ಲಿ ಮಾಡಿದ ಸೇವೆಯ ಒಂದು ನೋಟ


Abstract of the pay of the Life Members &c of the Gilganchi Artal High School, Belgaum for the Month of March 1917.

Serial No.	Items	Amount Rs	As	Ps	Remarks
1.	Pay of the 6 Life-members @ Rs 35/- each	210	-	-	
2.	Pay of the paid Servants of the High School one Rs 25/- and two Rs 20/- each	65	-	-	
3.	2 Peons and 1 Bhangi	15	-	-	Mali absent the whole of the month
4.	Contingency	4	-	-	
5.	Mr Ashtekar's Bill	5	8	6	for Paper pen ink &c supplied to the School
6.	Printer's Bill for the Examination-Paper-Printing	27	9	6	
	A special amount sanctioned for writing letters to the Guardians	6	-	-	To communicate Examination results of the students
7.	Rent of the building	45	-	-	
	Total Amount	378	2	-	

[illegible] 1917 [illegible]

[illegible signature]
for the Secretary K L E

೩.೮. ಪಂಡಿತಪ್ಪನವರು ವಿಭಾಕರ ಪತ್ರಿಕೆಗೆ ಬರೆದ ಲೇಖನ



೪. ಸಂದರ್ಶಕರ ವಿವರ

ಸಂದರ್ಶಕರ ಹೆಸರು	ವಯಸ್ಸು	ಊರು
೧. ಶ್ರೀ ಮ.ನಿ.ಪ್ರ. ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳು, ತೋಂಟದಾರ್ಯ ಮಠ,	೬೫	ಗದಗ
೨. ಶ್ರೀ ಬಸವರಾಜ ಸ್ವಾಮೀಜಿಗಳು	೬೦	ಗುಳೇದಗುಡ್ಡ
೩. ಡಾ. ಪಾಟೀಲ ಪುಟ್ಟಪ್ಪ	೮೬	ಹುಬ್ಬಳ್ಳಿ
೩. ಶ್ರೀ ರಾಮಲಿಂಗಪ್ಪ ಬಾಗಲಕೋಟ	೮೬	ಬನಹಟ್ಟಿ
೪. ಶ್ರೀ ಸೋಪನ್ನಪ್ಪ ಘೋರ್ಪಡೆ	೮೮	ಬನಹಟ್ಟಿ
೫. ಶ್ರೀ ಶಿವಲಿಂಗಪ್ಪ ಹತ್ತಿ	೮೬	ಬನಹಟ್ಟಿ
೬. ಶ್ರೀ ಮಲ್ಲಪ್ಪ ಹಳ್ಯಾಳ	೮೬	ಬನಹಟ್ಟಿ
೭. ಶ್ರೀ ಬಸಲಿಂಗಪ್ಪ ಶೆಟ್ಟರ	೮೬	ಬನಹಟ್ಟಿ
೮. ಶ್ರೀಮತಿ ಅನ್ನಪೂರ್ಣ ಬಾಣಕಾರ	೮೭	ಬನಹಟ್ಟಿ
೯. ಪ್ರೊ. ಜಯವಂತ ಕಾಡದೇವರ	೬೪	ಬನಹಟ್ಟಿ
೧೦. ಶ್ರೀ ರಾಮಲಿಂಗಪ್ಪ ಚಿಕ್ಕೋಡಿ	೮೭	ರಬಕವಿ
೧೧. ಶ್ರೀಮತಿ ಸುಮಂಗಲಾ ಕುದುರಿ	೭೬	ಬೆಳಗಾವಿ
೧೨. ಶ್ರೀ ತಮ್ಮಣ್ಣಪ್ಪ ಅಬಕಾರ	೫೬	ಬನಹಟ್ಟಿ
೧೩. ಶ್ರೀ ಶಿವಲಿಂಗಪ್ಪ ಚನಪಣ್ಣವರ	೭೦	ಹುಲ್ಯಾಳ
೧೪. ಶ್ರೀ ಶಿವಬಸಪ್ಪ ಕತ್ತೆವಾಡಿ	೭೦	ಹುಲ್ಯಾಳ
೧೫. ಶ್ರೀ ಮಲ್ಲಪ್ಪ ಜುಲುಪಿ	೭೦	ಹುಲ್ಯಾಳ

೫. ಪರಾಮರ್ಶನ ಗ್ರಂಥಗಳು

೧. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ;(ಸಂ)ಗ.ಸ.ಹಾಲಪ್ಪ, ಹರ್ಡೇಕರ ಮಂಜಪ್ಪ ಸ್ಮಾರಕ ಗ್ರಂಥಮಾಲೆ, ಧಾರವಾಡ, ೧೯೬೬

೨. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂ.೨(ಸಂ) ಡಾ.ಎಂ.ಎಂ.ಕಲಬುರ್ಗಿ ಡಾ.ಮಲ್ಲಿಕಾರ್ಜುನ ಮೇತ್ರಿ, ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ, ೧೯೮೬

೩. ಅರಟಾಳ ರುದ್ರಗೌಡರ ಚರಿತ್ರೆ; ಬಸವಯ್ಯ ಹೀರೆಮಠ(ಕಂಬಿ), ಪ್ರಸರಾಂಗ, ಕೆ.ಎಲ್.ಇ.ಸೊಸಾಯಟಿ, ಬೆಳಗಾವಿ ೨೦೦೨

೪. ಅರಟಾಳ ರುದ್ರಗೌಡರು; ಅಂಗಡಿ ಎಸ್.ಎಂ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೭೬, ೨೦೦೫.

೫. ಕರ್ನಾಟಕತ್ವದ ವಿಕಾಸ; ಆಲೂರು ವೆಂಕಟರಾಯ, ನವಜೀವನ ಗ್ರಂಥ ಭಂಡಾರ, ಧಾರವಾಡ,೧೯೫೭.

೬. ಕರ್ನಾಟಕ ಗತವೈಭವ; ಆಲೂರು ವೆಂಕಟರಾಯ, ನವಜೀವನ ಗ್ರಂಥ ಭಂಡಾರ, ಧಾರವಾಡ, ೧೯೧೭(೧೯೭೮).

೭. ನನ್ನ ಜೀವನ ಸ್ಮೃತಿಗಳು, ಆಲೂರು ವೆಂಕಟರಾಯ, ನವಜೀವನ ಗ್ರಂಥ ಭಂಡಾರ, ಧಾರವಾಡ, ೧೯೭೪.

೮. ಮಧುರಚೆನ್ನರ ಜೀವನ ಮತ್ತು ಸಾಧನೆ; ಕಾಪಸೆ ಜಿ.ಎಸ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬.

೯. ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳ; ಕಾಪಸೆ ಜಿ.ಎಸ್, ಭಾರತ–ಭಾರತಿ ಪುಸ್ತಕ ಸಂಪದ, ಬೆಂ–೧೯.

೧೦. ಕನ್ನಡವನ್ನು ಕಟ್ಟುವ ಕೆಲಸ; ನಾಯಕ ಹಾ.ಮಾ.ನಾ, ಐ.ಬಿ.ಎಚ್ ಪ್ರಕಾಶನ, ಬೆಂ, ೧೯೮೭

೧೧. ಆಂಗ್ಲರ ಆಡಳಿತದಲ್ಲಿ ಕನ್ನಡ; ಬಣಕಾರ ಮಹಾದೇವ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂ, ೧೯೮೬.

೧೨. ಡೆಪ್ಯುಟಿ ಚೆನ್ನಬಸಪ್ಪ; ಮಾಳವಾಡ ಸ.ಸ, ಇಂಡಿಯಾ ಬುಕ್ ಹೌಸ್, ಬೆಂ, ೧೯೭೪

೧೩. ಡೆಪ್ಯುಟಿ ಚೆನ್ನಬಸಪ್ಪನವರು; ಮ.ಗು.ಹಂದ್ರಾಳ, ವೀರಶೈವ ಅಧ್ಯಯನ ಸಂಸ್ಥೆ, ಗದಗ,೧೯೮೦

೧೪. ಕನ್ನಡದ ದೀಪ; ಡೆಪ್ಯುಟಿ ಚೆನ್ನಬಸಪ್ಪನವರ ಶತಮಾನೋತ್ಸವ ಸಮಿತಿ, ಧಾರವಾಡ, ೧೯೮೭.

೧೫. ಹೊಸಗನ್ನಡ ಅರಣೋದಯ; ಹಾವನೂರು ಶ್ರೀನಿವಾಸ, ಕ.ಅ.ಸಂಸ್ಥೆ ಮೈಸೂರು,ವಿ.ವಿ ೧೯೭೪

೧೬. ಡೆಪ್ಯುಟಿ ಚೆನ್ನಬಸಪ್ಪನವರ ಜೀವನ ಮತ್ತು ಸಾಧನೆ; ಡಾ.ಬಾಳಣ್ಣ ಸೀಗಿಹಳ್ಳಿ, ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ,೧೯೯೩

೧೩. ಡೆಪ್ಯುಟಿ ಚೆನ್ನಬಸಪ್ಪ; ಸಾಂಗಲಿ ವೆಂಕಟೇಶ್, ಭಾರತ-ಭಾರತಿ ಪುಸ್ತಕ ಸಂಪದ, ಬೆಂ, ೧೯೭೫.

೧೪. ಹೊಸಗನ್ನಡದ ಪುಣ್ಯಪುರುಷರು; ಸಾಂಗಲಿ ವೆಂಕಟೇಶ್, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೯.

೧೪. ಕರ್ನಾಟಕ ಪರಂಪರೆ (ಸಂ.೨); ಮೈಸೂರು ರಾಜ್ಯಸರ್ಕಾರ, ಮೈಸೂರು, ೧೯೭೦.

೧೫. ಶಿ.ಚೆ.ನಂದಿಮಠರು; ಒಡೆಯರ ಸದಾಶಿವ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೭.

೧೬. ಮಾರ್ಗ ಸಂ.೧; ಡಾ. ಕಲಬುರ್ಗಿ ಎಂ.ಎಂ, ನರೇಶ್ ಆಂಡ್ ಕಂಪನಿ, ಬೆಂ, ೧೯೮೮.

೧೭. ತಮ್ಮಣ್ಣಪ್ಪನವರು ಚಿಕ್ಕೋಡಿ; ಡಾ. ಕುಳ್ಳಿ ಜಯವಂತ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೦,೧೯೮೩.

೧೮. ಚಿಕ್ಕೋಡಿ ಪಂಡಿತಪ್ಪನವರು;ಬೆಳಗಲಿ ದು.ನಿಂ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೦.

೧೯. ಡಿ.ಸಿ.ಪಾವಟೆಯವರು; ಬಿ.ಸಿ.ಜವಳಿ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೨೦೦೦

೨೦. ಜಂಗೀನ ಮುರುಗಯ್ಯನವರು; ಸುಲೋಚನಾದೇವಿ ಆರಾಧ್ಯ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೧

೨೧. ಕಲಕಂಬ ಮಾಸ್ತರರು; ಜಯವಂತ ಕಾಡದೇವರ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೪.

೨೨. ಗಿಲಗಂಚಿ ಗುರುಸಿದ್ಧಪ್ಪನವರು;ಕಣಗಲಿ ಮ.ಈ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೪

೨೩. ರಾಜಾ ಲಖಮಗೌಡರು; ಘೀವಾರಿ ಎಸ್.ಜಿ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೦

೨೪. ಬಿ.ಬಿ.ಮಮದಾಪುರ; ತುರುಮರಿ ಬ.ಗಂ,ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೨

೨೫. ಸರ್ ಸಾಹೇಬರು; ಪಾಟೀಲ ಪುಟ್ಟಪ್ಪ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೨

೨೬. ಎಚ್.ಎಫ್.ಕಟ್ಟೀಮನಿ; ಡಾ.ಎಸ್.ಆರ್.ಗುಂಜಾಳ,ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ, ೧೯೭೯,೨೦೦೮

೨೭. ಕನ್ನಡದ ದಾರಿ; ಅ.ನ.ಕೃ, ಪ್ರಗತಿಶೀಲ ಲೇಖಕರ ಸಂಘ, ಬೆಂ, ೧೯೪೬.

೩೦. ಕನ್ನಡದ ದಾರಿ ಅ.ನ.ಕೃ, ಪ್ರಗತಿಶೀಲ ಲೇಖಕರ ಸಂಘ, ಬೆಂ, ೧೯೪೬

೩೧. ಕನ್ನಡಿಗನ ಸರ್ವಸ್ವ ಅಥವಾ ಸಂಯುಕ್ತ ಕರ್ನಾಟಕ ಪ್ರಾಂತ; ಆರ್.ಬಿ.ಕುಲಕರ್ಣಿ, ಶಾಂತವೀರ ಮುದ್ರಣಾಲಯ, ಬೆಳಗಾವಿ

೩೨. ಹತ್ತೊಂಬತ್ತನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ;ಮುತ್ತಣ್ಣ ಐ.ಮಾ, ಮೈಸೂರು, ೧೯೬೯.

೩೩. ಎಸ್.ಎಸ್.ಬಸವನಾಳರು. ಗುಂಜೆಟ್ಟಿ ಬಿ.ವಿ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೨, ೧೯೮೩

೩೪. ದಿನಕರ ದೇಸಾಯಿ;ಬದುಕು-ಬರಹ; ಶೆಟ್ಟಿ ಶ್ರೀಪಾದ

೩೫. ಕರ್ನಾಟಕ ಏಕೀಕರಣದ ಕಥೆ; ರಂ.ರಾ.ದಿವಾಕರ, ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆ, ಹುಬ್ಬಳ್ಳಿ, ೧೯೫೬.

೩೬. ಕನ್ನಡದ ಗುಡಿ; ಕೃಷ್ಣ ಶ್ರೀ ದೇಶಪಾಂಡೆ, ಕರ್ನಾಟಕ ವಿದ್ಯಾವರ್ಧಕ ಸಂಘ, ೧೯೯೪.

೩೭. ಬಿ.ಎಸ್.ಹಂಚಿನಾಳ; ಡಾ.ಕಲಬುರ್ಗಿ.ಜಿ.ಎಸ್, ವೀರಶೈವ ಅಧ್ಯಯನ ಸಂಸ್ಥೆ, ಗದಗ,

೩೮. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ; ಸಂ.ಡಾ.ಎಂ.ಎಂ.ಕಲಬುರ್ಗಿ

೩೯. ಪ್ರೊ.ಕೆ.ಜಿ.ಕುಂದಣಗಾರ ಒಂದು ಅಧ್ಯಯನ; ಡಾ.ಸದಾನಂದ ಬಿಳ್ಳೂರ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ, ೨೦೦೦

೪೦. ಶಿ.ಶಿ.ಬಸವನಾಳರ ಜೀವನ ಮತ್ತು ಸಾಧನೆ; ಡಾ.ಮಹೇಶ ಚಿಂತಾಮಣಿ, ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಬೆಳಗಾವಿ, ೧೯೯೭.

೪೧. ಕರ್ನಾಟಕ ಏಕೀಕರಣ ಇತಿಹಾಸ; ಡಾ.ಎಚ್.ಎಸ್.ಗೋಪಾಲರಾವ್, ನವಕರ್ನಾಟಕ ಪ್ರಕಾಶನ, ೧೯೯೬, ೨೦೦೫.

೪೨. ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನುಭಂಗ ಚಳವಳಿ; ಡಾ.ಜಿ.ಎ.ಬಿರಾದಾರ, ಅಭಿರುಚಿ ಪ್ರಕಾಶನ, ಮೈಸೂರು-೯, ೨೦೧೦.

೪೩. ಹೊಸಗನ್ನಡ ಸಾಹಿತ್ಯದ ಉದಯಕಾಲ;ಧಾರವಾಡಕರ ರಾ.ಯ, ಪ್ರಸಾರಂಗ, ಕ.ವಿವಿ.ಧಾರವಾಡ, ೧೯೭೫.

೪೪. ವಚನಪಿತಾಮಹರನ್ನು ರೂಪಿಸಿದ ಹಳಕಟ್ಟಿ ಗುರುಬಸಪ್ಪನವರು ಹಳಕಟ್ಟಿ ಎಸ್.ಬಿ, ಪ್ರಸನ್ನ ಪ್ರಕಾಶನ, ಧಾರವಾಡ, ೧೯೯೮.

೪೫. ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ; ಬಿ.ಎಸ್.ಗವಿಮಠ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ

೪೬. ಕೆ.ಎಲ್.ಇ. ಸಂಸ್ಥೆ ಸಂ.೧, ಪ್ರಸಾರಂಗ, ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಬೆಳಗಾವಿ.೨೦೦೨.

೪೭. ಕೆ.ಎಲ್.ಇ ಸಂಸ್ಥೆಯ ಯುಗಪುರುಷರು; ಪ್ರಸಾರಂಗ, ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಬೆಳಗಾವಿ.೨೦೦೪.

೪೮. ಕನ್ನಡ ಸಾಹಿತ್ಯ ಪರಿಷತ್ತು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ; ಡಾ.ಎಂ.ಎಲ್.ಶಂಕರಲಿಂಗಪ್ಪ, ಕ. ಸಾ. ಪ. ಬೆಂ, ೨೦೦೮.

೪೯. ಶ್ರೀ ಜಗದ್ಗುರು ಜಯದೇವ ದಿಗ್ವಿಜಯ; ಡಾ. ಕಣಕುಪ್ಪಿ ಕೊಟ್ಟೂರು ಬಸವಪ್ಪ, ಕಣಕುಪ್ಪಿ ಗುರುಪಾದಪ್ಪ ದಾವಣಗೇರಿ, ೧೯೬೬.

೫೦. ಉಷಾಪರಿಣಯ ತಮ್ಮಣ್ಣಪ್ಪನವರು ಚಿಕ್ಕೋಡಿ, ವಿಚಾರದರ್ಪಣ ಮುದ್ರಣಾಲಯ, ಬೆಂ, ೧೮೮೬.

೫೧. ಸ್ವಾತಂತ್ರ್ಯ ಸಂಗ್ರಾಮದ ಬನಹಟ್ಟಿ ಬಂಟರು; ಶ್ರೀ ಅಪ್ಪಣ್ಣಪ್ಪ ರಾಮಪ್ಪ ಜಂಬಗಿ, ಸ್ವಾತಂತ್ರ್ಯ ಸಮರ ಸೇನಾನಿ ಸಂಘ, ಬನಹಟ್ಟಿ, ೧೯೯೨.

೫೨. ಲಿಂಗಾಯತ; ಡಾ.ಎಂ.ಎಂ.ಕಲಬುರ್ಗಿ(ಸಂ), ಶ್ರೀ ವಿಜಯ ಮಹಾಂತ ಸ್ವಾಮಿಗಳ ಅಭಿನಂದನ ಗ್ರಂಥ, ಇಲಕಲ್ಲ, ೨೦೦೮.

೫೩. ಶ್ರೀ ಮದ್ವೀರಶೈವ ಮಹಾಸಭೆಗಳ ವರದಿಗಳು

೫೪. ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು; ಮುಖ್ಯಮಂತ್ರಿ ಚಂದ್ರು(ಸಂ), ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂ, ೨೦೦೮.

೫೫. ದೇಶಿ ಸಂಸ್ಥಾನ; ಸಿದ್ಧವನಹಳ್ಳಿ ಕೃಷ್ಣ ಶರ್ಮ, ಮಿತ್ರ ಸಂಘ, ಬೆಂ, ೧೯೪೩.

೫೬. ವಚನಪಿತಾಮಹರನ್ನು ರೂಪಿಸಿದ ಹಳಕಟ್ಟಿ ಗುರುಬಸಪ್ಪನವರು; ಹಳಕಟ್ಟಿ ಎಸ್.ಬಿ, ಪ್ರ: ಪ್ರಸನ್ನ ಪ್ರಕಾಶನ, ಧಾರವಾಡ, ೧೯೯೮.

ಸಂಸ್ಮರಣ ಗ್ರಂಥ ಮತ್ತು ಸಂಚಿಕೆಗಳು:

೧. ಬೆಳಗು(ಶ್ರೀ ಶಿವಯೋಗಮಂದಿರದ ಸುವರ್ಣ ಮಹೋತ್ಸವ ಸ್ಮಾರಕ ಗ್ರಂಥ;ಉಮಾಪತಿಶಾಸ್ತ್ರಿ,ಜಿ.ಎಂ.(ಸಂ),ಶಿವಯೋಗಮಂದಿರ, ೧೯೬೦.

ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, ೧೯೮೭

೨. ಜಯವಂತ(ಡಾ.ಜೆ.ಎಸ್.ಕುಳ್ಳಿಯವರ ಸಂಸ್ಮರಣ ಗ್ರಂಥ); ಬಿರಾದಾರ ಸಂಗಮೇಶ(ಸಂ), ಗೆಳೆಯರ ಬಳಗ, ತುಂಗಳ, ೧೯೮೨

೩. ವಚನ ಪಿತಾಮಹ(ಲಿಂ.ಡಾ.ಫ.ಗು.ಹಳಕಟ್ಟಿಯವರ ಸ್ಮಾರಕ ಸಂಪುಟ)ಹಂಡಿ ಎಸ್.ಜಿ(ಸಂ), ಸಂಗನಬಸವೇಶ್ವರ ಆರ್ಟ್ಸ್ ಕಾಲೇಜ್, ವಿಜಾಪುರ,೧೯೬೮.

೪. ತ್ಯಾಗಜೀವಿ; (ತಮ್ಮಣ್ಣಪ್ಪ ಚಿಕ್ಕೋಡಿಯವರ ಪುಣ್ಯತಿಥಿಯ ಸ್ವರ್ಣಮಹೋತ್ಸವ ಸ್ಮರಣ ಸಂಚಿಕೆ), ೧೯೮೩.

೫. ಧನಧಾರೆ; ಜಮಖಂಡಿ ಅರ್ಬನ್ ಬ್ಯಾಂಕ್ ಸ್ಮರಣ ಸಂಚಿಕೆ, ಬನಹಟ್ಟಿ

೬. ಶತಮಾನೋತ್ಸವ ಸಂಸ್ಮರಣ ಸಂಚಿಕೆ; ಅಂಗಡಿ ಎಸ್.ಎಂ.(ಸಂ) ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ೧೯೮೭

೭. ಮಣಿಹ (ಡಾ.ಫ.ಗು.ಹಳಕಟ್ಟಿ ಜನ್ಮಶತಮಾನೋತ್ಸವ ಸಂಸ್ಮರಣ ಸಂಪುಟ); ಸೀತಾರಾಮಯ್ಯ ಎಂ.ವಿ(ಸಂ), ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂ,೧೯೮೨.

೮. ಕ.ಸಾ.ಪ. ಬೆಳ್ಳಿಯ ಹಬ್ಬದ ಸವಿನೆನಪು ೨೫ ವರ್ಷಗಳ ಕಾರ್ಯಕಲಾಪದ ವರದಿ, ೧೯೧೫-೧೯೪೧

೯. ಜನತಾ ಶಿಕ್ಷಣ ಸಂಘದ ಜ್ಞಾಪಕ ಪತ್ರ ಮತ್ತು ಕಾನೂನುಗಳು ಬನಹಟ್ಟಿ ೧೯೫೧.

೧೦. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿಯ ವರದಿ(೧೯೩೦-೪೩)

೧೧. ಸಂಪದ ಜನತಾ ಶಿಕ್ಷಣ ಸಂಘದ ವಾರ್ಷಿಕ ಸಂಚಿಕೆ ೨೦೦೪-೦೫.

೧೨. ಲಿಂಗಾಯತ ಅಭಿವೃದ್ಧಿ ಸಂಸ್ಥೆ; ಲಿಂಗಾಯತ ಅಭಿವೃದ್ಧಿ ಸಂಸ್ಥೆ, ಧಾರವಾಡ, ಶತಮಾನೋತ್ಸವ ಸ್ಮರಣ ಸಂಚಿಕೆ, ಧಾರವಾಡ, ೧೯೮೭. .

೧೩. Dimond Jubliee souvenir Karnataka Liberal Education society, Belgaum, 1979.

೧೪. Lingaraj College Miscellany 1935

ಇಂಗ್ಲಿಷ್ ಕೃತಿಗಳು:

1. R.C.Majumdar — An Advanced History Of India, Macmillan And Company Of India Limited, Delhi, 1946.
2. Vidya Dhar Mahajan — 1. Fifth Years Of Modern India, S. Chand and Company, 1970.
   2. Modern India History From 1707 To The Present Day, S. Chand and Company, 2004.
3. A Case for the Unification o Karnataka
4. Dr. Nidoni — The Jamakhandi State

ಪತ್ರಿಕೆಗಳು:

೧. ಕೇಸರಿ(ಪುಣೆ)

೨. ಮೈಸೂರು ಸ್ಟಾರ್

೩. ಪರಿಷತ್ಪತ್ರಿಕೆ

೪. ಕನ್ನಡ ನುಡಿ

೫. ಶಿವಾನುಭವ

೬. ನವಕರ್ನಾಟಕ

೭. ವಾಗ್ಭೂಷಣ

೮. ಜನಜೀವಾಳ

೯. ಕರ್ನಾಟಕ ಭಾರತಿ

೧೦. ಪ್ರಬೋಧ

೧೧. ಲಿಂಗರಾಜ ವಿದ್ಯಾಲಯ ಪತ್ರಿಕೆ

೧೨. ಜಯಕರ್ನಾಟಕ

೧೩.ವಿಭಾಕರ(ಒಂದೇ ಪ್ರತಿ)